# 58ನೇ
# ವಾರ್ಷಿಕ ವರದಿ
# 2023-24

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಬೆಂಗಳೂರು

## ಪರಿವಿಡಿ



| | ಪುಟ ಸಂಖ್ಯೆ |
|---|---|
| ಸೂಚನೆ | 03 |
| ಸಂಸ್ಥೆಯ ಕುರಿತು | 05 |
| ನಿರ್ದೇಶಕರ ವರದಿ | 06 |
| ನಿರ್ದೇಶಕರುಗಳ ವರದಿಗೆ ಅನುಬಂಧ | 16 |
| ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆ (ಫಾರಂ ಎಓಸಿ-1) | 17 |
| ಹತ್ತು ವರ್ಷಗಳ ಸಾಧನೆ | 23 |
| 31ನೇ ಮಾರ್ಚ್ 2024ಕ್ಕೆ ಮುಕ್ತಾಯಗೊಂಡ ವರ್ಷದ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನ್ವಯದ ಸ್ವತಂತ್ರ ಲೆಕ್ಕ ಪತ್ರಗಳು | 27 |
| 31ನೇ ಮಾರ್ಚ್ 2024ಕ್ಕೆ ಮುಕ್ತಾಯಗೊಂಡ ವರ್ಷದ ಕ್ರೋಢೀಕೃತ ಲೆಕ್ಕಪತ್ರಗಳು | 125 |

MSIL

## ನಿರ್ದೇಶಕರ ಮಂಡಳಿ

| | |
|---|---|
| ಶ್ರೀ ಸಿ.ಪುಟ್ಟರಂಗಶೆಟ್ಟಿ, ಎಂಎಲ್.ಎ | ಅಧ್ಯಕ್ಷರು |
| ಶ್ರೀ ಮನೋಜ್‌ಕುಮಾರ್, ಭಾ.ಅ.ಸೇ | ವ್ಯವಸ್ಥಾಪಕ ನಿರ್ದೇಶಕರು |
| ಡಾ. ಜೆ. ರವಿಶಂಕರ್, ಭಾ.ಆ.ಸೇ | ನಿರ್ದೇಶಕರು |
| ಶ್ರೀಮತಿ ಗುಂಜನ್ ಕೃಷ್ಣ, ಭಾ.ಆ.ಸೇ | ನಿರ್ದೇಶಕರು |
| ಶ್ರೀಮತಿ ಖುಷ್‌ಬೂ ಜಿ.ಚೌಧರಿ, ಭಾ.ಆ.ಸೇ | ನಿರ್ದೇಶಕರು |
| ಶ್ರೀ ಮಹೊಮದ್ ಇಕ್ರಮುಲ್ಲ ಷರೀಷ್, ಭಾ.ಆ.ಸೇ | ನಿರ್ದೇಶಕರು |
| ಶ್ರೀ ಆರ್.ರಮೇಶ್ | ನಿರ್ದೇಶಕರು |

| | |
|---|---|
| ಶ್ರೀ ಕೆ.ಆರ್.ಅವಿನಾಶ್, ಕೆಎ ಅಂಡ್ ಎಎಸ್ | ಮುಖ್ಯ ಹಣಕಾಸು ಅಧಿಕಾರಿ |
| ಶ್ರೀಮತಿ ಶ್ರೀದೇವಿ ಬಿ.ಎನ್. | ಕಂಪನಿ ಕಾರ್ಯದರ್ಶಿ |

ನೋಂದಾಯಿತ ಕಛೇರಿ : ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ , ಬೆಂಗಳೂರು – 560 052.

ಶಾಖಾ ಕಛೇರಿಗಳು : ಬೆಂಗಳೂರು, ಮೈಸೂರು, ದಾವಣಗೆರೆ, ಹುಬ್ಬಳ್ಳಿ, ಕಲಬುರಗಿ, ಮಂಗಳೂರು, ಬೆಳಗಾವಿ, ಮುಂಬಯಿ, ನವದೆಹಲಿ

ಮಾರಾಟ ಕಛೇರಿಗಳು / ಘಟಕಗಳು :

● ವಿಜಯಪುರ ● ದಾವಣಗೆರೆ ● ಕಲಬುರಗಿ ● ಹಾಸನ ● ಹುಬ್ಬಳ್ಳಿ ● ಮಂಗಳೂರು ● ಮೈಸೂರು
● ಭಿವಂಡಿ ● ಕಾನ್ಪುರ ● ಘಜ಼ಿಯಾಬಾದ್ ● ಜೈಪುರ್

ಬ್ಯಾಂಕರ್‌ಗಳು : ಬ್ಯಾಂಕ್ ಆಫ್ ಬರೋಡಾ, ಕೆನರಾ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಹೆಚ್‌ಡಿಎಫ್‌ಸಿ ಬ್ಯಾಂಕ್

ಲೆಕ್ಕಪರಿಶೋಧಕರು : **ಮೆ|| ಸೊರಬ್ ಎಸ್.ಇಂಜಿನಿಯರ್ ಅಂಡ್ ಕೋ**, ಚಾರ್ಟರ್ಡ್ ಅಕೌಂಟೆಂಟ್ಸ್

**MSIL**

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

**ಎಂಎಸ್ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಂ ರಸ್ತೆ,**
**ಬೆಂಗಳೂರು - 560 052.**
**CIN: U85110KA1966SGC001612**

## ಸೂಚನೆ

ಈ ಮೂಲಕ **ಸೂಚಿಸುವುದೇನೆಂದರೆ,** ಅಲ್ಪಕಾಲಿನ ಸೂಚನೆ ಮೇರೆಗೆ ಈ ಕೆಳಕಂಡ ಕಲಾಪಗಳನ್ನು ನಡೆಸಲು ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರ ಐವತ್ತ ಎಂಟನೇ ವಾರ್ಷಿಕ ಮಹಾಸಭೆಯನ್ನು ದಿನಾಂಕ:30ನೇ ಸೆಪ್ಟೆಂಬರ್, 2024ರ ಸೋಮವಾರ ಸಂಜೆ 4.30 ಗಂಟೆಗೆ ನೋಂದಾಯಿತ ಕಚೇರಿ ಎಂಎಸ್ಐಎಲ್ ಹೌಸ್, ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052 ಇಲ್ಲಿ ನಡೆಸಲಾಗುವುದು.

### ಸಾಮಾನ್ಯ ಕಲಾಪಗಳು:

**ಐಟಂ ಸಂ.1 - ಹಣಕಾಸಿನ ಹೇಳಿಕೆಗಳ ಅಳವಡಿಕೆ:**

ದಿನಾಂಕ:31ನೇ ಮಾರ್ಚ್ 2024ರಂದು ಕೊನೆಗೊಂಡ ವರ್ಷದ ಕಂಪನಿಯ ಹಣಕಾಸಿನ ಹೇಳಿಕೆಗಳು (ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಸೇರಿದಂತೆ) ಮತ್ತು ನಿರ್ದೇಶಕರ ಮಂಡಳಿಯ ವರದಿಗಳು ಹಾಗೂ ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಜೊತೆಗೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(6)ರ ಅನ್ವಯ ಭಾರತದ ಮಹಾಲೆಕ್ಕಪರಿಶೋಧಕರಿಂದ ಬಂದಿರುವ ಟೀಕೆ ಟಿಪ್ಪಣಿಗಳನ್ನು ಪರಿಗಣಿಸುವುದು ಮತ್ತು ಅಳವಡಿಸಿಕೊಳ್ಳುವುದು.

**ಐಟಂ ಸಂ: 2 - ಈಕ್ವಟಿ ಷೇರುಗಳ ಮೇಲೆ ಲಾಭಾಂಶ ಘೋಷಣೆ:**

ದಿನಾಂಕ:31ನೇ ಮಾರ್ಚ್, 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷಕ್ಕೆ ಈಕ್ವಿಟಿ ಷೇರು ಒಂದಕ್ಕೆ ರೂ.72.91ರ ಲಾಭಾಂಶ ಘೋಷಣೆ ಮಾಡುವುದು.

**ಐಟಂ ಸಂ:3** - ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು (ಸಿ ಅಂಡ್ ಎಜಿಐ) ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರಿಗೆ ದಿನಾಂಕ:31ನೇ ಮಾರ್ಚ್ 2025ಕ್ಕೆ ಕೊನೆಗೊಳ್ಳುವ ವರ್ಷಕ್ಕೆ ಪಾವತಿ ಮಾಡಬೇಕಿರುವ ಸಂಭಾವನೆ ನಿಗದಿಯನ್ನು ಪರಿಗಣಿಸುವುದು ಮತ್ತು ಕೆಳಕಂಡ ನಿರ್ಣಯವನ್ನು ಸೂಕ್ತವೆಂದು ಕಂಡುಬಂದರೆ ಮಾರ್ಪಾಡು(ಗಳು) ಇಲ್ಲದೆ ಅಥವಾ ಮಾರ್ಪಾಡು(ಗಳ) ಜೊತೆಗೆ ಸಾಮಾನ್ಯ ನಿರ್ಣಯವಾಗಿ ಅಂಗೀಕರಿಸುವುದು:-

''ನಿರ್ಣಯಿಸುವುದೇನೆಂದರೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 139(5)ರ ಉಪಬಂಧಗಳ ಅನ್ವಯ, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಹಣಕಾಸಿನ ವರ್ಷ 2024-2025ಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ಮೆ|| ಫಿಲಿಪೋಸ್ ಅಂಡ್ ಕಂಪನಿ, (ಬಿಎ0008) ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು ವಾರ್ಷಿಕ ಮಹಾಸಭೆ (ಎಜಿಎಂ) ಸಮಾಪ್ತಿಯಾದ ಸಮಯದಿಂದ ಮುಂದಿನ ಎಜಿಎಂ ಮುಕ್ತಾಯವಾಗುವ ಸಮಯದವರೆಗೆ ಅಧಿಕಾರ ಹೊಂದಿರುವಂತೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವುದನ್ನು ಈ ಮೂಲಕ ಗಮನಿಸಲಾಗಿದೆ ಮತ್ತು ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರ ಸಂಭಾವನೆ ನಿಗದಿ ಮಾಡಲು ಕಂಪನಿಯ ನಿರ್ದೇಶಕರ ಮಂಡಳಿಗೆ ಅಧಿಕಾರ ನೀಡಲಾಗಿದೆ''.

**ಮಂಡಳಿಯ ಆದೇಶಾನುಸಾರ**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/-**
**ಶ್ರೀದೇವಿ. ಬಿ.ಎಸ್.**
**ಕಂಪನಿ ಕಾರ್ಯದರ್ಶಿ**

**ಸ್ಥಳ : ಬೆಂಗಳೂರು**
**ದಿನಾಂಕ :25.09.2024**

# ಸೂಚನೆ

1. ವಾರ್ಷಿಕ ಮಹಾಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಅರ್ಹರಾದ ಸದಸ್ಯನು ಆತನ ಬದಲಾಗಿ ಸಭೆಗೆ ಹಾಜರಾಗಲು ಮತ್ತು ಮತ ಹಾಕಲು ಪ್ರಾಕ್ಸಿ ಒಬ್ಬರನ್ನು ನೇಮಕ ಮಾಡಲು ಅರ್ಹರಾಗಿರುವರು ಮತ್ತು ಪ್ರಾಕ್ಸಿಯು ಕಂಪನಿಯ ಸದಸ್ಯರಾಗಿರಬೇಕಿಲ್ಲ. ಇದರೊಡನೆ ಲಗತ್ತಿಸಿರುವ ಪ್ರಾಕ್ಸಿ ಫಾರಂ ಅನ್ನು ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗಿಂತ ಕಡಿಮೆಯಿಲ್ಲದ ಅವಧಿ ಒಳಗೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸತಕ್ಕದ್ದು.

2. ಸಭೆಗೆ ಹಾಜರಾಗಲು ತಮ್ಮ ಅಧಿಕಾರ ನೀಡಿದ ಪ್ರತಿನಿಧಿಗಳನ್ನು ಕಳುಹಿಸಲು ಅಪೇಕ್ಷಿಸಿರುವ ಕಾರ್ಪೋರೇಟ್ ಸದಸ್ಯರು, ಅವರ ಪರವಾಗಿ ಸಭೆಗೆ ಹಾಜರಾಗಲು ಮತ್ತು ಮತಹಾಕಲು ಅವರ ಪ್ರತಿನಿಧಿಗೆ ಅಧಿಕಾರ ನೀಡಿ ಕಂಪನಿಯ ಮಂಡಳಿ ಮಾಡಿರುವ ನಿರ್ಣಯದ ದೃಢೀಕೃತ ಪ್ರತಿ ಒಂದನ್ನು ಕಳುಹಿಸಬೇಕಾಗಿ ಕೋರಲಾಗಿದೆ.

3. ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ಕಂಪನಿಗಳ ಕಾಯ್ದೆ, 2013ರ ಪ್ರಕರಣ 139 (5)ರ ಅನ್ವಯ 2024-25ರ ವರ್ಷಕ್ಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡಿದ್ದಾರೆ.

4. ಕಂಪನಿಗಳ ಕಾಯ್ದೆ, 2013ರ ಪ್ರಕರಣ 170ರ ಅನ್ವಯ ನಿರ್ದೇಶಕರು ಮತ್ತು ಪ್ರಮುಖ ಆಡಳಿತ ಸಿಬ್ಬಂದಿಯ ಮತ್ತು ಅವರು ಹೊಂದಿರುವ ಷೇರುಗಳ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡಲಾಗಿದೆ. ಅದು ಎಜಿಎಂನಲ್ಲಿ ಸದಸ್ಯರುಗಳ ಪರಿಶೀಲನೆಗೆ ಲಭ್ಯವಿರುವುದು.

5. ಅಲ್ಪಕಾಲಿಕ ಸೂಚನೆಗೆ ಎಲ್ಲಾ ಷೇರುದಾರರುಗಳ ಅನುಮತಿ ಪಡೆಯಲಾಗಿದೆ.

6. ಸದಸ್ಯರು/ಪ್ರಾಕ್ಸಿಗಳು/ಅಧಿಕಾರ ಹೊಂದಿದ ಪ್ರತಿನಿಧಿಗಳು ಸಭೆಗೆ ಹಾಜರಾಗಲು ಇಲ್ಲಿ ಲಗತ್ತಿಸಿರುವ ಹಾಜರಾತಿ ಚೀಟಿಯನ್ನು ಕ್ರಮವಾಗಿ ಭರ್ತಿ ಮಾಡಿ ತರತಕ್ಕದ್ದು.

**ಮಂಡಳಿಯ ಆದೇಶಾನುಸಾರ**
**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಪರವಾಗಿ**
**ಸಹಿ/-**
**ಶ್ರೀದೇವಿ. ಬಿ.ಎನ್.**
**ಕಂಪನಿ ಕಾರ್ಯದರ್ಶಿ**

**ದಿನಾಂಕ :25.09.2024**
**ಸ್ಥಳ : ಬೆಂಗಳೂರು**

## ಸಂಸ್ಥೆಯ ಕುರಿತು

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಇದು ಎಂಎಸ್‌ಐಎಲ್ ಎಂದೇ ಜನಪ್ರಿಯವಾಗಿದೆ. ಈ ಕಂಪನಿಯು ಒಂದು ಮಾರುಕಟ್ಟೆ ಸಂಸ್ಥೆಯಾಗಿ ತನ್ನ ಛಾಪನ್ನು ಮೂಡಿಸಿದೆ. ಕರ್ನಾಟಕದ ಮಾರುಕಟ್ಟೆ ಅವಶ್ಯಕತೆಗಳನ್ನು ಈಡೇರಿಸುವುದಕ್ಕಾಗಿ 1966ರಲ್ಲಿ ಸ್ಥಾಪನೆಯಾಗಿದೆ. ಈ ಕಂಪನಿಯು ಸ್ಥಾಪನೆಯಾದ ದಿನದಿಂದಲೂ ಬಲಯುತವಾಗಿ ಬೆಳೆದಿದೆ. ರಾಷ್ಟ್ರೀಯ ಮಟ್ಟದಲ್ಲಿ ಕಂಪನಿಯು ತನ್ನ ಅಸ್ತಿತ್ವವನ್ನು ಮೂಡಿಸುವುದಲ್ಲದೇ, ಅಂತರರಾಷ್ಟ್ರೀಯವಾಗಿಯೂ ಹೆಸರು ಮಾಡಿರುವ ಕ್ರಿಯಾಶೀಲ ಮಾರುಕಟ್ಟೆ ಶಕ್ತಿಯಾಗಿ ರೂಪುಗೊಳ್ಳಲು ಕಂಪನಿಯು ಚಿಂತನೆಯ ಪಥದಲ್ಲಿ ಸಾಗಿದೆ.

ವ್ಯವಹಾರ ಚಾತುರ್ಯತೆ, ವ್ಯಾಪಾರದ ಅನುಭವ, ಆಡಳಿತ ಪರಿಣಾಮಕತೆ ಮತ್ತು ವಿಶ್ವಾಸಾರ್ಹತೆ ಇವು ಸದರಿ ಮಾರುಕಟ್ಟೆ ದಿಗ್ಗಜ ಕಂಪನಿಯ ಕೆಲವು ವೈಶಿಷ್ಟ್ಯ ಗುರುತುಗಳಾಗಿವೆ. ನವೀನ ಮಾರುಕಟ್ಟೆ ಉಪಾಯಗಳ ಮೂಲಕ ವೈವಿಧ್ಯ ಶ್ರೇಣಿಯ ಉತ್ಪನ್ನಗಳು ಮತ್ತು ಸೇವೆಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಇದರ ಸಾಮರ್ಥ್ಯವು, ತನ್ನ ಯಶಸ್ಸಿನ ಗುಟ್ಟಾಗಿದೆ. ಯಾವುದೇ ವ್ಯವಹಾರವಾದರೂ ಅದರ ಪ್ರಮುಖ ಪ್ರವರ್ತಕರು ಜನರು ಎಂಬುದನ್ನು ಮನಗಂಡಿರುವ ಎಂಎಸ್‌ಐಎಲ್ ತನ್ನ ಆಲೋಚನಾ ಪರಿಧಿಯಲ್ಲಿ ಹಾಗೂ ಆಡಳಿತದ ಸ್ವರೂಪದಲ್ಲಿ ಉದಾರ ಮನೋಭಾವನೆಯನ್ನು ಬೆಳೆಸಿಕೊಂಡಿದೆ.

ಇದರಿಂದಾಗಿ ಮತ್ತು ನವೀನ ಕಾರ್ಯಶೈಲಿಯಿಂದ ಹೊಸದಾಗಿ ಎದುರಾಗುವ ಸವಾಲುಗಳನ್ನು ಎದುರಿಸಲು ಸಹಕಾರಿಯಾಗಿದೆ. ಇದಲ್ಲದೆ ಬದಲಾಗುತ್ತಿರುವ ಅಭಿರುಚಿಗಳು ಮತ್ತು ಮೌಲ್ಯಗಳಿಗೆ ಅನುರೂಪವಾಗಿ ಸದಾ ತನ್ನ ನಡೆಯನ್ನು ರೂಪಿಸಿಕೊಂಡು ಸ್ಥಿರವಾಗಿ ನೆಲೆ ನಿಂತಿದೆ.

ಎಂಎಸ್‌ಐಎಲ್ ಕಂಪನಿಯು ಬಹು ವಿಭಾಗೀಯ ಮಾರುಕಟ್ಟೆ ಸಂಸ್ಥೆಯಾಗಿರುವುದು. ಪ್ರಸ್ತುತದಲ್ಲಿ ಕಂಪನಿಯ ಪ್ರಮುಖ ವ್ಯವಹಾರವು ಕರ್ನಾಟಕ ರಾಜ್ಯದಲ್ಲಿ ಚಿಲ್ಲರೆ ಮದ್ಯ ಮಾರಾಟ ಕಾರ್ಯಾಚರಣೆಗಳು, ಚಿಟ್‌ಫಂಡ್ ವ್ಯವಹಾರ ಮತ್ತು ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿಯಾಗಿದೆ. ಕಂಪನಿಯು ಕರ್ನಾಟಕ ರಾಜ್ಯದ ಪ್ರಮುಖ ಜಿಲ್ಲಾ ಕೇಂದ್ರಗಳಲ್ಲಿ ಶಾಖೆಗಳ ಕಾರ್ಯಜಾಲ ಬಂಧವನ್ನು ಹೊಂದಿದೆ ಮತ್ತು ಕರ್ನಾಟಕದ ಹೊರಗೆ ನವದೆಹಲಿ ಮತ್ತು ಮುಂಬಯಿಯಲ್ಲೂ ಎರಡು ಶಾಖೆಗಳನ್ನು ಹೊಂದಿದೆ. ಕಂಪನಿಯು ಹಿಂದಿನ ವರ್ಷದಲ್ಲಿ ರೂ.317978.33 ಲಕ್ಷಗಳ ವಹಿವಾಟು ಹೊಂದಿದ್ದರೆ, ಪ್ರಸಕ್ತ ವರ್ಷದ ಅವಧಿಯಲ್ಲಿ ರೂ.376935.19 ಲಕ್ಷಗಳ ವಹಿವಾಟು ನಡೆಸಿದೆ. ಇದರಿಂದ 19% ಪ್ರಗತಿ ಕಂಡು ಬಂದಂತಾಗಿದೆ.

**ವಿಭಾಗಾವಾರು ವಹಿವಾಟು ಈ ಕೆಳಕಂಡಂತಿರುವುದು:-** **(ರೂ.ಲಕ್ಷಗಳಲ್ಲಿ)**

| ಕ್ರ.ಸಂ. | ವಿಭಾಗಗಳು | 2023-24 | 2022-23 | ಪ್ರಗತಿಯ % |
|---|---|---|---|---|
| 1 | ಪಾನೀಯಗಳು | 318708.98 | 266072.84 | 20 |
| 2 | ಚಿಟ್‌ಫಂಡ್ | 41049.66 | 36367.61 | 13 |
| 3 | ಕಾಗದ ಮತ್ತು ಲೇಖನ ಸಾಮಗ್ರಿ | 14339.28 | 9984.71 | 44 |
| 4 | ಗ್ರಾಹಕ / ಕೈಗಾರಿಕಾ ಉತ್ಪನ್ನಗಳು | 830.85 | 2647.32 | - |
| 5 | ಟೂರ್ಸ್ ಅಂಡ್ ಟ್ರಾವಲ್ಸ್ | 549.79 | 1464.10 | - |
| 6 | ಫಾರ್ಮಸಿ | 1456.63 | 1441.75 | - |
| | **ಒಟ್ಟು** | **376935.19** | **317978.33** | **19** |

## ನಿರ್ದೇಶಕರ ವರದಿ

ಸದಸ್ಯರಿಗೆ,

ನಿಮ್ಮ ಕಂಪನಿಯ ಹಣಕಾಸು, ವ್ಯವಹಾರ ಮತ್ತು ಕಾರ್ಯಾಚರಣೆಗಳ ಮುಖ್ಯಾಂಶಗಳನ್ನು ಒಳಗೊಂಡ 58ನೇ ವಾರ್ಷಿಕ ವರದಿಯನ್ನು ಮಂಡಿಸಲು ನಿಮ್ಮ ನಿರ್ದೇಶಕರು ಹರ್ಷಿಸಿರುವರು. ಹಾಗೂ ಇದರಲ್ಲಿ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ಐಎನ್‌ಡಿ ಎಎಸ್ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನುಪಾಲನೆಯೊಡನೆ ಸಿದ್ಧಪಡಿಸಿರುವ ಕಂಪನಿಯ ಲೆಕ್ಕಪರಿಶೋಧಿತ ಹಣಕಾಸಿನ ಹೇಳಿಕೆಗಳು (ಸ್ವತಂತ್ರ ಮತ್ತು ಕ್ರೋಢೀಕೃತ) ಸಹ ಸೇರಿರುವುದು.

**1.ಹಣಕಾಸಿನ ಕಾರ್ಯಕ್ಷಮತೆಯ ಮುಖ್ಯಾಂಶಗಳು:**

(ರೂ. ಲಕ್ಷಗಳಲ್ಲಿ)

| ವಿವರ | ಸ್ವತಂತ್ರ | | ಕ್ರೋಢೀಕೃತ | |
|---|---|---|---|---|
| | 31ನೇ ಮಾರ್ಚ್ 2024 | 31ನೇ ಮಾರ್ಚ್ 2023 | 31ನೇ ಮಾರ್ಚ್ 2024 | 31ನೇ ಮಾರ್ಚ್ 2023 |
| ಕಾರ್ಯಾಚರಣೆಗಳಿಂದ ಬಂದ ಆದಾಯ | 337796.08 | 282531.70 | 376424.14 | 340421.62 |
| ಇತರೆ ಆದಾಯ | 3764.12 | 3061.84 | 4113.29 | 3433.99 |
| **ಒಟ್ಟು ಆದಾಯ** | **341560.20** | **285593.54** | **380537.43** | **343855.61** |
| ಬಳಸಿರುವ ಸಾಮಗ್ರಿಗಳ ವೆಚ್ಚ | 2936.80 | 1766.99 | 2853.94 | 1742.54 |
| ವ್ಯಾಪಾರದ ದಾಸ್ತಾನಿನ ಖರೀದಿ | 301230.30 | 252556.61 | 303883.87 | 265845.06 |
| ಸೇವೆಗಳ ವೆಚ್ಚ | | | 31861.48 | 40344.44 |
| ಸಿದ್ಧಪಡಿಸಿದ ಸರಕುಗಳು ಮತ್ತು ವ್ಯಾಪಾರದ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು | -979.41 | -523.75 | -197.25 | -1100.41 |
| ನೌಕರರ ಸೌಲಭ್ಯಗಳ ಖರ್ಚು | 2003.83 | 1860.32 | 2485.08 | 2419.31 |
| ಹಣಕಾಸಿನ ವೆಚ್ಚ | 238.52 | 179.92 | 239.43 | 180.00 |
| ಸವಕಳಿ ಮತ್ತು ಅಮಾರ್ಟೈಜೇಷನ್ ಖರ್ಚುಗಳು | 1946.94 | 1834.44 | 2017.62 | 1904.75 |
| ಇತರೆ ಖರ್ಚುಗಳು | 20881.28 | 19839.73 | 22135.09 | 21314.73 |
| ಸಹವರ್ತಿ ಸಂಸ್ಥೆಯ ನಿವ್ವಳ ಲಾಭದ ಗ್ರೂಪ್ ಷೇರು | | | -5.66 | -14.28 |
| **ಒಟ್ಟು ವೆಚ್ಚಗಳು** | **328258.26** | **277514.26** | **365284.92** | **33266.47** |
| **ಸ್ಥಗಿತಗೊಂಡ ಕಾರ್ಯಾಚರಣೆಗಳ ಮುನ್ನ ಲಾಭ/(ನಷ್ಟ)** | **13301.94** | **8079.28** | **15252.51** | **11190.91** |
| **ಸ್ಥಗಿತಗೊಂಡ ಕಾರ್ಯಾಚರಣೆ ಲಾಭ/(ನಷ್ಟ)** | 5.32 | -2.82 | 3.98 | -2.11 |
| **ತೆರಿಗೆಗೆ ಮುನ್ನ ಲಾಭ** | **13307.26** | **8076.46** | **15256.49** | **11188.80** |
| ತೆರಿಗೆ ಖರ್ಚುಗಳು | 2920.90 | 1989.28 | 3721.69 | 2763.66 |
| ವರ್ಷದ ಲಾಭ | 10386.36 | 6087.18 | 11534.80 | 8425.14 |
| ಇತರೆ ಸಮಗ್ರ ಆದಾಯ | 889.82 | 5.69 | 892.71 | 12.18 |
| **ವರ್ಷದ ಒಟ್ಟು ಸಮಗ್ರ ಆದಾಯ** | **11276.18** | **6092.87** | **12427.51** | **8412.96** |
| ಷೇರು ಒಂದರ ಗಳಿಕೆ (ಮೂಲ) | 243.04 | 142.44 | 269.92 | 197.15 |
| ಷೇರು ಒಂದರ ಗಳಿಕೆ (ದ್ರವೀಕೃತ) | 243.04 | 142.44 | 269.92 | 197.15 |

ಕಂಪನಿಯ ವಿವಿಧ ವಿಭಾಗಗಳ ಮಾರಾಟದ ಕಾರ್ಯಕ್ಷಮತೆಯನ್ನು ಈ ಕೆಳಗೆ ನಿರೂಪಿಸಿದೆ.

(ರೂ. ಲಕ್ಷಗಳಲ್ಲಿ)

| ಕ್ರ. ಸಂ. | ವಿಭಾಗಗಳು | 2023-24 | 2022-23 | ಬೆಳವಣಿಗೆ % |
|---|---|---|---|---|
| 01 | ಪಾನೀಯ | 318708.98 | 266072.84 | 20% |
| 02 | ಚಿಟ್ ಫಂಡ್ | 41049.66 | 36367.61 | 13% |
| 03 | ಕಾಗದ ಮತ್ತು ಲೇಖನ ಸಾಮಗ್ರಿ | 14339.28 | 9984.71 | 44% |
| 04 | ಗ್ರಾಹಕ / ಕೈಗಾರಿಕಾ ಉತ್ಪನ್ನ | 830.85 | 2647.32 | 69% |
| 05 | ಟೂರ್ಸ್ ಅಂಡ್ ಟ್ರಾವೆಲ್ಸ್ | 549.79 | 1464.10 | 62% |
| 06 | ಫಾರ್ಮಸಿ | 1456.63 | 1441.75 | 1% |
| | **ಒಟ್ಟು** | **376935.19** | **317978.33** | **19%** |

**2. ಕಂಪನಿಯ ವ್ಯವಹಾರಗಳು ಮತ್ತು ಭವಿಷ್ಯದ ಮುನ್ನೋಟದ ವಿವರ:**

(i) **ಪಾನೀಯ ವಿಭಾಗ:** 2009ರ ವರ್ಷದಲ್ಲಿ 463 ಸಿಎಲ್-11(ಸಿ) ಚಿಲ್ಲರೆ ಮದ್ಯ ಮಾರಾಟ ಮಳಿಗೆಗಳನ್ನು ತೆರೆಯುವ ಜವಾಬ್ದಾರಿಯನ್ನು

ಕರ್ನಾಟಕ ಸರ್ಕಾರ ಎಂಎಸ್‌ಐಎಲ್‌ಗೆ ವಹಿಸಿತ್ತು. ಇದರ ಜೊತೆಗೆ ಕರ್ನಾಟಕ ಸರ್ಕಾರವು 2016ರಲ್ಲಿ ಕರ್ನಾಟಕದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು ಎಂಎಸ್‌ಐಎಲ್‌ಗೆ ಮತ್ತೊಂದು 900 ಸಿಎಲ್-11(ಸಿ) ಪರವಾನಗಿ ಮಂಜೂರು ಮಾಡಿದೆ. ಈ ದಿಸೆಯಲ್ಲಿ ವಿಭಾಗವು ಕರ್ನಾಟಕದಾದ್ಯಂತ ಮಂಜೂರಾದ ಮದ್ಯದ ಚಿಲ್ಲರೆ ಮಾರಾಟ ಮಳಿಗೆಗಳನ್ನು ತೆರೆಯಲು ಅಬಕಾರಿ ಇಲಾಖೆ ಸಹಕಾರದೊಡನೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಂಡಿದೆ.

ಸದರಿ ವಿಭಾಗವು ದಿನಾಂಕ 31ನೇ ಮಾರ್ಚ್ 2024ರಂದು ಇದ್ದಂತೆ 463 ಕೋಟಾದ ಅಡಿಯಲ್ಲಿ 447 ಮತ್ತು 900 ಕೋಟಾದ ಅಡಿಯಲ್ಲಿ 653 ಪರವಾನಗಿಗಳನ್ನು ಪಡೆದಿದೆ. ಕರ್ನಾಟಕದಾದ್ಯಂತ ಒಟ್ಟಾರೆ 1046 ಮಾರಾಟ ಮಳಿಗೆಗಳು ಕಾರ್ಯಾಚರಣೆಯಾಗುತ್ತಿವೆ. ಎಂಎಸ್‌ಐಎಲ್‌ನ ಮದ್ಯ ಚಿಲ್ಲರೆ ಮಾರಾಟ ಮಳಿಗೆಗಳು ರಾಜ್ಯದ ಎಲ್ಲಾ ಕಡೆಗಳಲ್ಲೂ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಹರಡಿಕೊಂಡಿದ್ದು, ಮೊಹರಾದ ಬಾಟೆಲ್‌ಗಳಲ್ಲಿ ಎಂಆರ್‌ಪಿಗೆ ಗುಣಮಟ್ಟದ ಮದ್ಯದ ಮಾರಾಟದ ಬಗ್ಗೆ ಸಾರ್ವಜನಿಕರಿಂದ ಅಭೂತಪೂರ್ವ ಸ್ಪಂದನೆ ದೊರತಿದೆ.

ಪಾನೀಯ ವಿಭಾಗವು ಹಿಂದಿನ ವರ್ಷದಲ್ಲಿನ ರೂ.266073.00 ಕೋಟಿಗಳ ವಹಿವಾಟು ನಡೆಸಿರುವುದಕ್ಕೆ ಹೋಲಿಸಿದರೆ 2023-24ನೇ ಹಣಕಾಸು ವರ್ಷದಲ್ಲಿ ಅಂದಾಜು ಮಾಡಿದ ರೂ.3000 ಕೋಟಿ ವಹಿವಾಟಿಗೆ ಬದಲಾಗಿ ರೂ.3187 ಕೋಟಿ ವಹಿವಾಟನ್ನು ಸಾಧಿಸಿದೆ. ವಿಭಾಗವು ಮುಂದಿನ ದಿನಗಳಲ್ಲಿ 463 ಮತ್ತು 900 ಹಂಚಿಕೆಯಾಗಿರುವ ಕೋಟಾದ ಅಡಿಯಲ್ಲಿ ಉಳಿಕೆ ಮಾರಾಟ ಮಳಿಗೆಗಳನ್ನು ಆದಷ್ಟು ಬೇಗ ತೆರೆಯಲು ಸತತ ಪರಿಶ್ರಮ ಮತ್ತು ಪ್ರಯತ್ನ ನಡೆಸುತ್ತಿದೆ.

(ii) **ಚಿಟ್ ಫಂಡ್ಸ್ ವಿಭಾಗ:** ಈ ವಿಭಾಗವು ಹಿಂದಿನ ವರ್ಷ 2022-23ರಲ್ಲಿ ರೂ.36367.61 ಲಕ್ಷಗಳ ವಹಿವಾಟು ನಡೆಸಿದ್ದರೆ, ಈ ವರ್ಷ 2023-24ರಲ್ಲಿ ರೂ.41049.66 ಲಕ್ಷಗಳ ವಹಿವಾಟನ್ನು ನಡೆಸಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ವಹಿವಾಟಿನಲ್ಲಿ ಸುಮಾರು ರೂ.4682.05 ಲಕ್ಷ ಮಹತ್ತರ ಹೆಚ್ಚಳ ಉಂಟಾಗಿದೆ. ಪ್ರಸಕ್ತ ಅವಧಿಯಲ್ಲಿ 12.87% ಹೆಚ್ಚಳವಾಗಿದೆ.

ಚಿಟ್‌ಫಂಡ್ ವಿಭಾಗವು ಅದರ ವ್ಯವಹಾರ ಪ್ರಾರಂಭದ ಸಮಯದಿಂದ ಲಾಭದ ಜೊತೆಗೆ ಯಶಸ್ವಿಯಾಗಿ ಮುಂದುವರಿಯುತ್ತಿದೆ ಮತ್ತು ಕರ್ನಾಟಕದ ಪ್ರತಿಯೊಂದು ಜಿಲ್ಲೆ, ಪ್ರಮುಖ ಪಟ್ಟಣಗಳು ಮತ್ತು ತಾಲ್ಲೂಕುಗಳಲ್ಲಿ ಹೊಸ ಶಾಖೆಗಳನ್ನು ತೆರೆಯುವ ಮೂಲಕ ಚಿಟ್‌ಫಂಡ್ ವ್ಯವಹಾರವನ್ನು ಅಭಿವೃದ್ಧಿ ಮಾಡಲು ಮಹತ್ವಾಕಾಂಕ್ಷೆಯ ಕ್ರಿಯಾ ಯೋಜನೆ ಒಂದನ್ನು ಹೊಂದಿದೆ. ಪೂರ್ವಭಾವಿ ಕ್ರಮವಾಗಿ, ಕಂಪನಿಯು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಖಾಯಂ ಸಿಬ್ಬಂದಿ ನೇಮಕ ಮಾಡಲು ಕ್ರಮ ಕೈಗೊಂಡಿದೆ.

ಹೊಸ ಬಳಕೆದಾರ ಸ್ನೇಹಿ ಮತ್ತು ಅತ್ಯಾಧುನಿಕ ತಂತ್ರಜ್ಞಾನ ತಂತ್ರಾಂಶ ಅಳವಡಿಕೆ ಕಾರ್ಯ ಪ್ರಕ್ರಿಯೆಯಲ್ಲಿದೆ ವ್ಯವಹಾರವನ್ನು ಗರಿಷ್ಠ ಪ್ರಮಾಣದಲ್ಲಿ ಸಾಧಿಸಲು ಮತ್ತು ನೂತನ ವ್ಯವಹಾರ ಪ್ರವರ್ಧನೆ ಕ್ರಿಯೆಯನ್ನು 2024ರ ವರ್ಷ ಪೂರ್ಣಗೊಳ್ಳುವ ಮುನ್ನ ಅಳವಡಿಸಲಾಗುವುದು.

(iii) **ಕಾಗದ ಮತ್ತು ಲೇಖನ ಸಾಮಗ್ರಿ ವಿಭಾಗ:** ಕಾಗದ ಮತ್ತು ಲೇಖನ ಸಾಮಗ್ರಿ ವಿಭಾಗವು ರೂ.11000.00 ಲಕ್ಷಗಳ ನಿಗದಿಪಡಿಸಿದ ವಹಿವಾಟಿಗೆ ಎದುರಾಗಿ ಪರಾಮರ್ಶನೆಯಲ್ಲಿನ ವರ್ಷದ ಅವಧಿಯಲ್ಲಿ ರೂ.14339.28 ಲಕ್ಷಗಳ ವಹಿವಾಟನ್ನು ಸಾಧಿಸಿದೆ. ಈ ವಿಭಾಗವು ಹಿಂದಿನ ಹಣಕಾಸಿನ ವರ್ಷದ ಸಾಧನೆಗಿಂತ ಸುಮಾರು 43% ವ್ಯವಹಾರ ಪ್ರಗತಿಯನ್ನು ದಾಖಲಿಸಿದೆ.

ನಮ್ಮ ಉತ್ಪನ್ನಗಳನ್ನು ಪ್ರತಿನಿಧಿಸುವ ಕ್ಷೇತ್ರದಲ್ಲಿ ಕೇವಲ ಕನಿಷ್ಠ ಸಂಖ್ಯೆಯ ಮಾನವ ಸಂಪನ್ಮೂಲ ಸೇವೆಯ ಕೆಲಸಗಾರರು ಕಾರ್ಯನಿರ್ವಹಿಸುತ್ತಿದ್ದು, ವ್ಯವಹಾರ ಸಹವರ್ತಿಗಳು ಸೃಜಿಸಿದ ಸರ್ಕಾರದ ಆದೇಶಗಳ ಮೇಲೆ ವಿಭಾಗವು ಅವಲಂಬಿತವಾಗಿದೆ. ಈ ಎಲ್ಲಾ ತೊಂದರೆಗಳಿದ್ದಾಗ್ಯೂ ಸಹ ವಿಭಾಗವು ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಗಣನೀಯ ವ್ಯವಹಾರ ಪ್ರಗತಿ ಸಾಧಿಸಿದೆ. ಖಾಸಗಿ ಮಾರುಕಟ್ಟೆ ಒಳಪಡಿಸಿಕೊಳ್ಳಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಇದರಿಂದ ಮುಂಬರುವ ವರ್ಷಗಳಲ್ಲಿ ಫಲಿತಾಂಶ ದೊರೆಯುವ ನಿರೀಕ್ಷೆಯಿದೆ. ಉತ್ಪನ್ನ ಶ್ರೇಣಿ ಬಲವರ್ಧನೆಗೆ ಯೋಜನೆಗಳನ್ನು ಸಹ ಮಾಡಲಾಗಿದೆ ಮತ್ತು ಸಾಂಪ್ರದಾಯಿಕ ಮತ್ತು ತಂತ್ರಜ್ಞಾನ ಆಧಾರಿತ ಪ್ರವರ್ಧನಾ ವಿಧಾನಗಳ ಮೂಲಕ ಆಕ್ರಮಣಕಾರಿಯಾಗಿ ಉತ್ಪನ್ನಗಳ ಪ್ರವರ್ಧನೆ ಕಾರ್ಯವನ್ನು ಕೈಗೊಳ್ಳಲಾಗಿದೆ.

(iv) **ಗ್ರಾಹಕ ಮತ್ತು ಕೈಗಾರಿಕಾ ಉತ್ಪನ್ನಗಳ ವಿಭಾಗ:**

- ಪ್ರತಿಷ್ಠಿತ ಒಂದು ಮೆಗಾ ವ್ಯಾಟ್ ಸೌರ ವಿದ್ಯುತ್ ಯೋಜನೆ ಇದರ ಮೌಲ್ಯ ರೂ.8.77 ಕೋಟಿ. ಈ ಕಾರ್ಯವು ಪೂರ್ಣಗೊಳ್ಳುವ ಹಂತದಲ್ಲಿದೆ ಮತ್ತು ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿರುವುದು.
- 633 ಹಾಸ್ಟೆಲ್‌ಗಳಲ್ಲಿ ವಿವಿಧ ಸೋಲಾರ್ ಉತ್ಪನ್ನಗಳ ಸ್ಥಾಪನೆಗಾಗಿ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಿಂದ (ಕೆಆರ್‌ಇಐಎಸ್) ವಿಚಾರಣೆ ಬಂದಿದೆ. ಯೋಜನೆಯ ವೆಚ್ಚ ಸರಿಸುಮಾರು ರೂ.200 ಕೋಟಿ ಆಗಬಹುದೆಂದು ನಿರೀಕ್ಷಿಸಲಾಗಿದೆ.
- ಸೋಲಾರ್ 4(ಜಿ) ವಿನಾಯ್ತಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಕರ್ನಾಟಕ ಸರ್ಕಾರದಿಂದ ಧನಾತ್ಮಕ ಪ್ರತಿಕ್ರಿಯೆ ಪಡೆಯುವ ನಿರೀಕ್ಷೆಯಿದೆ.
- ಎಂಜಿನ್ ಆಯಿಲ್, ಎಳ್ಳೆಣ್ಣೆ ಮತ್ತು ಹರಳೆಣ್ಣೆ ವ್ಯವಹಾರವನ್ನು ಪ್ರಸ್ತುತ ನಡೆಸುತ್ತಿದ್ದು, ಇದರಿಂದ ತಿಂಗಳಿಗೆ ಸುಮಾರು ರೂ.45 ಲಕ್ಷ

ವ್ಯವಹಾರ ನಡೆಯುತ್ತಿದೆ. ಈ ವ್ಯವಹಾರವನ್ನು ತಿಂಗಳಿಗೆ ರೂ.75 ಲಕ್ಷಗಳಿಗೆ ಹೆಚ್ಚಿಸಲು ವಿಭಾಗವು ಯೋಜನೆ ಮಾಡಿದೆ.

- ಕೆಎಂಎಫ್ ಉತ್ಪನ್ನಗಳಾದ ತುಪ್ಪ ಮತ್ತು ಹಾಲಿನ ಪುಡಿಯನ್ನು ದೆಹಲಿ, ಮುಂಬಯಿ ಮತ್ತು ಚೆನ್ನೈ ಶಾಖೆಗಳಲ್ಲಿ ವಿತರಣೆ ಮಾಡುತ್ತಿದೆ. ಇದರಿಂದ ವಾರ್ಷಿಕ ಸುಮಾರು ರೂ.50 ಕೋಟಿ ವ್ಯವಹಾರ ನಡೆಯುವ ನಿರೀಕ್ಷೆಯಿದೆ.

(v) **ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗ:** ಎಂಎಸ್ಐಎಲ್ ಟೂರ್ಸ್ ಅಂಡ್ ಟ್ರಾವೆಲ್ಸ್ ವಿಭಾಗವು ಐಎಟಿಎ ಪ್ರಮಾಣೀಕೃತ ಟ್ರಾವೆಲ್ ಏಜೆನ್ಸಿಯಾಗಿದೆ (ಐಎಟಿಎ ನಂ.1435229). ಇದು ಸುಮಾರು 20 ವರ್ಷಗಳಿಂದ ಕಾರ್ಯಾಚರಣೆ ಮಾಡುತ್ತಿದೆ. ವಿಭಾಗವು ಸರ್ಕಾರದ ಇಲಾಖೆಗಳು, ಸರ್ಕಾರದ ಹಿರಿಯ ಅಧಿಕಾರಿಗಳು, ಗಣ್ಯರು, ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿಗಳು ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು ಇತ್ಯಾದಿಯವರಿಗೆ ವಿಮಾನ ಪ್ರಯಾಣ ಟಿಕೆಟ್ ಬುಕ್ ಮಾಡುವ ಕಾರ್ಯವನ್ನು ಮುಂದುವರಿಸುತ್ತಿದೆ. ಮುಂದುವರಿದು ಈ ವಿಭಾಗವು ಹಲವಾರು ವರ್ಷಗಳಿಂದ ಸಾಂಸ್ಥಿಕ ಅಧ್ಯಯನ ಪ್ರವಾಸಗಳನ್ನು (ರಾಜ್ಯ ಮತ್ತು ಕೇಂದ್ರ ಸರ್ಕಾರದ ಇಲಾಖೆಗಳು) ಏರ್ಪಡಿಸುತ್ತಿದೆ. ಈ ಕಾರ್ಯಾಚರಣೆಯನ್ನು ದೇಶದಾದ್ಯಂತ ಮತ್ತು ಸಾಗರೋತ್ತರ ಪ್ರವಾಸಿ ತಾಣಗಳಿಗೆ ವಿಸ್ತರಣೆ ಮಾಡಲು ಆಡಳಿತವು ಕ್ರಮ ಕೈಗೊಂಡಿದೆ. ಕಂಪನಿಯ ಪ್ರಮುಖ ಉತ್ಪನ್ನವಾಗಿರುವುದರಿಂದ ವಿಭಾಗದ ಚಟುವಟಿಕೆಗಳನ್ನು ರಾಜ್ಯದಾದ್ಯಂತ ಸ್ಥಾಪಿಸುವ ಉದ್ದೇಶದ ಅಡಿಯಲ್ಲಿ ಕಂಪನಿಗೆ ವಹಿವಾಟು ಮತ್ತು ಲಾಭಗಳನ್ನು ಹೆಚ್ಚಳ ಮಾಡುವ ಪ್ರವರ್ಧನಾಕಾರಿ ಚಟುವಟಿಕೆಗಳ ಮೂಲಕ ನಮ್ಮ ಆಫರ್‌ಗಳ ಸಂದೇಶ ತಿಳಿಸುವ ಮುಖಾಂತರ ಇದುವರೆಗೂ ಒಳಪಡದಿರುವ ವಿಭಾಗಗಳಿಗೆ ವಿಶೇಷ ಆಫ್‌ಲೈನ್ ಪ್ಯಾಕೇಜ್ ಅನುಕೂಲ ವಿಸ್ತರಿಸಲು ಆಡಳಿತವು ಯೋಜನೆ ಮಾಡಿದೆ.

(vi) **ಫಾರ್ಮ ವಿಭಾಗ:** ಫಾರ್ಮ ವಿಭಾಗವು 2022-23ರ ಅವಧಿಯಲ್ಲಿ ರೂ.1568.09 ಲಕ್ಷಗಳ ವಹಿವಾಟು ನಡೆಸಿದ್ದರೆ, 2023-24ರ ಅವಧಿಯಲ್ಲಿ ರೂ.1627.97 ಲಕ್ಷಗಳ ವಹಿವಾಟು ಸಾಧಿಸಿದೆ. ಈ ವಿಭಾಗವು ಕರ್ನಾಟಕದಾದ್ಯಂತ ಇರುವ ಸರ್ಕಾರದ ತಾಲ್ಲೂಕು/ಜಿಲ್ಲಾ ಆಸ್ಪತ್ರೆಗಳಲ್ಲಿ ಪ್ರಧಾನ ಮಂತ್ರಿ ಭಾರತೀಯ ಜನೌಷಧಿ ಕೇಂದ್ರದ ಅಡಿಯಲ್ಲಿ 88 ಮಾರಾಟ ಮಳಿಗೆಗಳನ್ನು ಪ್ರಾರಂಭಿಸಿದೆ. ಪ್ರಕ್ರಿಯೆಯಲ್ಲಿರುವ ಸಿಐಎಂಎಫ್ ಬೋಧನಾ ಆಸ್ಪತ್ರೆ, ಚಾಮರಾಜನಗರ ಇಲ್ಲಿ ಹೊಸ ಮಾರಾಟ ಮಳಿಗೆ ತೆರೆಯಲು ಪಿಎಂಬಿಐ ಅನುಮೋದನೆ ಪಡೆಯಲಾಗಿದೆ. ಜಿಎಸ್‌ಟಿ ಸೇರ್ಪಡೆಯ ಉನ್ನತೀಕರಿಸಿದ ತಂತ್ರಾಂಶವನ್ನು ಸರಾಗವಾಗಿ ಬಿಲ್ಲಿಂಗ್ ಮಾಡಲು ಸಕಾಲಿಕಗೊಳಿಸಿದೆ.

(vii) **ಮರಳು ವಿಭಾಗ:** ನೈಸರ್ಗಿಕ ನದಿ ಮರಳಿನ ಆಮದು ಮತ್ತು ವ್ಯಾಪಾರದ ವ್ಯವಹಾರದಲ್ಲಿ ಕಂಪನಿಯು 2017-18ರಿಂದ 2019-20ರ ಅವಧಿಯಲ್ಲಿ 14,759 ಎಂ ಟಿಗಳ ಮರಳನ್ನು ಮಾರಾಟ ಮಾಡಿದ್ದು ಒಟ್ಟಾರೆ ರೂ.381.66 ಲಕ್ಷಗಳ ವಹಿವಾಟು ಸಾಧಿಸಿದೆ. ಆದರೆ ಕೋವಿಡ್ ಸಾಂಕ್ರಾಮಿಕ ಬಿಕ್ಕಟ್ಟಿನಿಂದ ಕೃಷ್ಣಪಟ್ಟಂ ಪೋರ್ಟ್ ಕಂಪನಿ ಲಿ.(ಎ.ಪಿ.) ಇಲ್ಲಿಂದ ಬೆಂಗಳೂರಿಗೆ ಆಮದಾದ ಮರಳಿನ ಅಂತರರಾಜ್ಯ ಸಾಗಣೆಯನ್ನು 2020-21ರ ವರ್ಷದಲ್ಲಿ ನಿರ್ಬಂಧಿಸಲಾಗಿತ್ತು. ಮುಂದುವರಿದು ನಿರ್ಮಾಣ ಉದ್ಯಮದಲ್ಲಿ ಆರ್ಥಿಕ ನಿಧಾನಗತಿಯ ಕಾರಣ ಆಮದಾದ ಮರಳಿನ ಮಾರಾಟದ ಗುರಿಯನ್ನು ಸಾಧಿಸಲಾಗಿಲ್ಲ. ಹಾಗಾಗಿ ಅಧಿಕೃತ ಸಿ ಅಂಡ್ ಎಫ್ ಡಿಸ್ಟ್ರಿಬ್ಯೂಷನ್ ಏಜೆಂಟ್ ಮತ್ತು ಮಾರಾಟಗಾರರು ಯಾವುದೇ ಪಾವತಿ ಮಾಡಿರುವುದಿಲ್ಲ ಮತ್ತು 2020-21 ರ ಅವಧಿಯಲ್ಲಿ ಬಂದರಿನಿಂದ ಮರಳನ್ನು ತೆಗೆದುಕೊಂಡಿರುವುದಿಲ್ಲ.

ಈ ಮಧ್ಯೆ ಪೊಸಿಡನ್ ಎಫ್‌ಜಡ್‌ಇ ಕಂಪನಿಯನ್ನು ಪೊಸಿಡನ್ ಎಫ್‌ಜಡ್‌ಸಿ ಸ್ವಾಧೀನಪಡಿಸಿಕೊಂಡಿದೆ ಮತ್ತು ಸದರಿಯವರ ನಡುವೆ ಒಪ್ಪಂದ ಇನ್ನೂ ಆಗಬೇಕಿದೆ. ದಿನಾಂಕ:24.03.2023ರ ಬಿಒಡಿ ನಿರ್ಣಯದ ಅನ್ವಯ ಒಪ್ಪಂದ ಪತ್ರದ ನವೀಕರಣಕ್ಕೆ ಅನುಕೂಲ ಮಾಡಿಕೊಡಬೇಕೆಂದು ಸೂಚಿಸಿ ದಿನಾಂಕ:26.03.2023ರ ಅಂತಿಮ ಜ್ಞಾಪನ ಸೂಚನೆಯನ್ನು ಮೆ|| ಒಷನ್ ಏಜೆನ್ಸಿಗೆ ನೀಡಲಾಗಿತ್ತು. ಆದರೆ ಸದರಿ ಸೂಚನೆಗಳು 'ಪಡೆದುಕೊಳ್ಳುತ್ತಿಲ್ಲ' ದರಿಂದ ಹಿಂದಕ್ಕೆ ಬಂದಿವೆ. ಮುಂದುವರಿದು, ದಿನಾಂಕ:27.06.2024ರ 340ನೇ ಬಿಒಡಿ ಸಭೆಯಲ್ಲಿ ಕೈಗೊಂಡ ನಿರ್ಧಾರದ ಅನ್ವಯ ಎಂಎಸ್ಐಎಲ್ ಮೇಲೆ ತಿಳಿಸಿರುವ ಸರಬರಾಜುದಾರರು ಮತ್ತು ಅವರ ಒಕ್ಕೂಟ ಕಂಪನಿಗಳ ಜೊತೆ ಮಾಡಿಕೊಂಡಿರುವ ಸಂಬಂಧಪಟ್ಟ ಎಲ್ಲಾ ಒಪ್ಪಂದಗಳು ಮತ್ತು ಮರಳಿನ ದಾಸ್ತಾನನ್ನು ಎಲ್ಲಿ ಹೇಗಿದೆಯೋ ಹಾಗಿನ ಆಧಾರದ ಮೇಲೆ ಹರಾಜಿನ ಪ್ರಕ್ರಿಯೆ ಮೂಲಕ ವಿಲೇವಾರಿ ಮಾಡಲು ಕಾನೂನಿನ ನಿರ್ಬಂಧ ವಿಧಿಸಿರುವ ಮರಳಿನ ದಾಸ್ತಾನಿಗೆ ಸಂಬಂಧಿಸಿದ ಇತರೆ ಅನ್ವಯವಾಗುವ ಒಪ್ಪಂದಗಳ ಕಾನೂನು ವಿಚಾರಗಳಿಗೆ ಸಂಬಂಧಿಸಿದಂತೆ ಕರ್ನಾಟಕದ ಅಡ್ವೋಕೇಟ್ ಜನರಲ್ ಇವರಿಂದ ಅಭಿಪ್ರಾಯ ಪಡೆಯಲು ಕ್ರಮ ಕೈಗೊಳ್ಳಲಾಗಿದೆ.

ದಿನಾಂಕ:17.08.2024ರಂದು ನಡೆದ 341ನೇ ಮಂಡಳಿ ಸಭೆಯಲ್ಲಿ ಮರಳಿತ ವಿಭಾಗಕ್ಕೆ ಸಂಬಂಧಿಸಿದ ಮುಂದುವರಿದ ವಿಚಾರಗಳ ಬಗ್ಗೆ ಪರಾಮರ್ಶೆ ಮಾಡಲಾಯಿತು. ಚರ್ಚೆ ನಡೆಸಿದ ನಂತರ, 'ಕರ್ನಾಟಕದ ಹೊರಗಡೆ ಇರುವ ಅಂದರೆ ಕೃಷ್ಣಪಟ್ಟಂ ಬಂದರಿನಲ್ಲಿರುವ ಮರಳಿನ ದಾಸ್ತಾನನ್ನು ವಿಲೇವಾರಿ ಮಾಡಲು ಕರ್ನಾಟಕ ಸರ್ಕಾರದ ಅನುಮೋದನೆಗೆ ಒಳಪಟ್ಟು ಕೃಷ್ಣಪಟ್ಟಂ ಬಂದರಿನಲ್ಲಿ ದಾಸ್ತಾನು ಮಾಡಿರುವ ಸಂಪೂರ್ಣ ಆಮದಾದ ನದಿ ಮರಳನ್ನು 'ಎಲ್ಲಿ ಹೇಗಿದೆಯೊ ಹಾಗಿನ ಆಧಾರದ' ಮೇಲೆ ವಿಲೇವಾರಿ ಮಾಡಲು ಮಂಡಳಿಯ ಒಪ್ಪಿಗೆಯನ್ನು ಈ ಮೂಲಕ ನೀಡಲಾಗಿದೆ' ಎಂಬುದಾಗಿ ಮಂಡಳಿ ನಿರ್ಣಯಿಸಿದೆ.

ಮಂಡಳಿಯ ಅನುಮೋದನೆಯಂತೆ ನಮ್ಮ ಪತ್ರದ ದಿನಾಂಕ: 03.03.2024ರ ಅನ್ವಯ ಪ್ರಧಾನ ಕಾರ್ಯದರ್ಶಿ (ಸಿ ಅಂಡ್ ಐ) ಇವರ ಮೂಲಕ ಮರಳನ್ನು 'ಎಲ್ಲಿ ಹೇಗಿದೆಯೋ ಹಾಗಿನ ಆಧಾರದ ಮೇಲೆ' ವಿಲೇವಾರಿ ಮಾಡಲು ಸರ್ಕಾರದ ಅನುಮೋದನೆಯಂತೆ

ಪಡೆಯಲು ಕ್ರಮ ವಹಿಸಲಾಗಿದೆ. ಅನುಮೋದನೆ ಪಡೆದ ಮೇಲೆ ವಿಲೇವಾರಿ ಪ್ರಕ್ರಿಯೆ ನಡೆಸಲಾಗುವುದು.

**3. ಸಹಾಯಕ ಕಂಪನಿಗಳು:**

ದಿನಾಂಕ:31ನೇ ಮಾರ್ಚ್ 2024 ರಂದು ಇದ್ದಂತೆ, ನಿಮ್ಮ ಕಂಪನಿಯು ಎರಡು ಸಹಾಯಕ ಕಂಪನಿಗಳನ್ನು ಅಂದರೆ ಮೆ|| ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಶನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಮತ್ತು ಮೆ|| ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ ಅನ್ನು ಹೊಂದಿದೆ. ಸಹಾಯಕ ಕಂಪನಿಗಳ ಸಂಬಂಧ ಕಂಪನಿಗಳ ಕಾಯ್ದೆ 2013ರ ಪ್ರಕರಣ 129(3) ರ ಅನ್ವಯ ವಿವರಣೆಯನ್ನು ಫಾರಂ ಎಒಸಿ-1ರಲ್ಲಿ ಅನುಬಂಧ-1 ಆಗಿ ಲಗತ್ತಿಸಿದೆ. ಶಾಸನಬದ್ಧ ಲೆಕ್ಕಪರಿಶೋಧಕರು ಕ್ರಮವಾಗಿ ಲೆಕ್ಕಪರಿಶೋಧನೆ ಮಾಡಿರುವ ನಿಮ್ಮ ಕಂಪನಿಯ ಕ್ರೋಡೀಕೃತ ಲೆಕ್ಕಪತ್ರಗಳನ್ನು ಸದರಿ ವರದಿಯ ಭಾಗವಾಗಿ ಮಂಡನೆ ಮಾಡಿದೆ.

**4. ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆ ಇರುವುದೇ:**

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆಯಿರುವುದಿಲ್ಲ.

**5. ಲಾಭಾಂಶ**

ಮುಂಬರುವ ವಾರ್ಷಿಕ ಮಹಾಸಭೆಯಲ್ಲಿ ಸದಸ್ಯರುಗಳಿಂದ ಅನುಮೋದನೆಯಾದಲ್ಲಿ ಆರ್ಥಿಕ ವರ್ಷ 2023-24ರ ಅವಧಿ ಯಲ್ಲಿ ಕರ್ನಾಟಕ ಸರ್ಕಾರ ಮತ್ತು ಕೆಎಸ್ಐಐಡಿಸಿಗೆ ಪಾವತಿ ಮಾಡಬೇಕಾಗಿರುವ ರೂ.31,15,90,768/- ರ ಮೊತ್ತದ ಮೇಲೆ ತೆರಿಗೆ ನಂತರ ಕಂಪನಿಯ ಲಾಭದ 30% ರಂತೆ ಅಂದರೆ ಈಕ್ವಿಟಿ ಷೇರು ಒಂದಕ್ಕೆ ರೂ.72.91 ರಂತೆ ಲಾಭಾಂಶ ಘೋಷಿಸಲು ಕಂಪನಿ ಉದ್ದೇಶಿಸಿದೆ.

**6. ಮೀಸಲು ನಿಧಿ**

ಹಣಕಾಸಿನ ವರ್ಷ 2023-24ಕ್ಕೆ ಮತ್ತು ಹಿಂದಿನ ವರ್ಷದಲ್ಲಿ ಕಂಪನಿಯು ಇರಿಸಿರುವ ಮೀಸಲು ನಿಧಿಯು ಕೆಳಕಂಡಂತಿರುವುದು:

**(ರೂ. ಲಕ್ಷಗಳಲ್ಲಿ)**

| ವಿವರಗಳು | 2023-24 | 2022-23 |
|---|---|---|
| ಸಾಮಾನ್ಯ ಮೀಸಲು ನಿಧಿ | 19125.69 | 19125.69 |
| ಚಿಟ್‌ಫಂಡ್ ಮೀಸಲು ನಿಧಿ | 1103.35 | 928.21 |
| ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿನ ಹೆಚ್ಚುವರಿ ನಿಧಿ | 38936.14 | 30551.92 |

**ಕಂಪನಿಗಳ ಕಾಯ್ದೆ, 2013ರ ಪ್ರಕರಣ 174(3)(1)ರ ಅನ್ವಯ ಮೀಸಲು ನಿಧಿಗಳ ವರ್ಗಾವಣೆ:**

ಕಂಪನಿಯು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿ ಸಾಮಾನ್ಯ ಮೀಸಲು ನಿಧಿ ಲೆಕ್ಕಕ್ಕೆ ಯಾವುದೇ ಮೊತ್ತವನ್ನು ವರ್ಗಾವಣೆ ಮಾಡಿರುವುದಿಲ್ಲ.

**ಯಾವುದೇ ಇದ್ದಲ್ಲಿ ಹಣಕಾಸಿನ ಹೇಳಿಕೆಗಳ ದಿನಾಂಕದ ನಂತರ ನಡೆದಿರುವ ಘಟನಾವಳಿಗಳು:**

ಕಂಪನಿಯ ವ್ಯವಹಾರದ ಸ್ವರೂಪದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

**7. ಷೇರು ಬಂಡವಾಳ**

ಕಂಪನಿಯ ಷೇರು ಬಂಡವಾಳದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**8. ಪ್ರಕರಣ 186ರ ಅನ್ವಯದ ಸಾಲಗಳು, ಗ್ಯಾರಂಟಿಗಳು ಅಥವಾ ಹೂಡಿಕೆಗಳ ವಿವರಗಳು:**

ಪ್ರಕರಣ 100ರ ಅಡಿಯಲ್ಲಿನ ಸಾಲಗಳು ಗ್ಯಾರಂಟಿಗಳು ಅಥವಾ ಹೂಡಿಕೆಗಳ ವಿವರಗಳು-ಸದರಿ ವರ್ಷದಲ್ಲಿ ಕಂಪನಿಯ ಹೆಸರಿನಲ್ಲಿ ಯಾವುದೇ ಸಾಲ ಬಾಕಿಯಿರುವುದಿಲ್ಲ. ವರದಿಯಲ್ಲಿನ ವರ್ಷದಲ್ಲಿ ಇದನ್ನು -ಇಲ್ಲ- ಎಂಬುದಾಗಿ ತಿಳಿಸಬಹುದಾಗಿದೆ. ಯಾವುದೇ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆಗಳಿಂದ ಪಡೆದಿರುವ, ಕಂಪನಿಯ ಹೆಸರಿನಲ್ಲಿರುವ ಯಾವುದೇ ಸಾಲ ಬಾಕಿಯಿರುವುದಿಲ್ಲ. ಆದ್ದರಿಂದಾಗಿ ಒಂದು ಬಾರಿಯ ಇತ್ಯರ್ಥ (ಒಟಿಎಸ್) ಅನ್ವಯಿಸುವಿಕೆಯು ಉದ್ಭವವಾಗುವುದಿಲ್ಲ. ಮುಂದುವರೆದು, ಇನ್‌ಸಾಲ್ವೆನ್ಸಿ ಮತ್ತು ಬ್ಯಾಂಕ್ರಪ್ಸಿ ಕೋಡ್ (ಐಬಿಸಿ) ಅಡಿಯಲ್ಲಿ ಕಂಪನಿಯ ಹೆಸರಿನಲ್ಲಿ ಯಾವುದೇ ಕ್ರಮಾವಳಿಗಳು ಬಾಕಿಯಿರುವುದಿಲ್ಲ.

**9. ನೌಕರರ ವಿವರಗಳು**

ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮಗಳು 5(2) ಮತ್ತು 5(3)ರ ಉಪಬಂಧಗಳನ್ನು ಓದಿಕೊಂಡಂತೆ ಪ್ರಕರಣ 197ರ ಅನ್ವಯ ನಿಗದಿಪಡಿಸಿರುವ ಮಿತಿಗೂ ಹೆಚ್ಚಿನ ಸಂಭಾವನೆ ಪಡೆಯುತ್ತಿರುವ ಯಾವುದೇ ನೌಕರರು ಇರುವುದಿಲ್ಲ.

**10. ನಿರ್ದೇಶಕರು ಮತ್ತು ಪ್ರಮುಖ ವ್ಯವಸ್ಥಾಪಕ ಸಿಬ್ಬಂದಿ:**

ಕರ್ನಾಟಕ ಸರ್ಕಾರದ ನಿರ್ದೇಶನಗಳ ಅನ್ವಯ 2022-23ರ ಹಣಕಾಸಿನ ವರ್ಷದ ಅವಧಿಯಲ್ಲಿ ಕಂಪನಿಯ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿ ಕೆಳಕಂಡ ಬದಲಾವಣೆಗಳನ್ನು ಮಾಡಲಾಗಿದೆ.

| ಕ್ರ. ಸಂ | ನಿರ್ದೇಶಕರ ಹೆಸರು | ಡಿಐಎನ್ | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|---|
| 1 | ಶ್ರೀ ಎಚ್. ಹಾಲಪ್ಪ | 02321290 | 27.07.2020 | 12.04.2023 |
| 2 | ಶ್ರೀ ಎಂ.ಬಿ ಪಾಟೀಲ್ | 02558869 | 13.06.2023 | 26.01.2024 |
| 3 | ಶ್ರೀ ಸಿ.ಪುಟ್ಟರಂಗಶೆಟ್ಟಿ | 07745825 | 26.01.2024 | |
| 4 | ಶ್ರೀ ವಿಕಾಶ್‌ಕುಮಾರ್ ವಿಕಾಶ್, ಐಪಿಎಸ್ | 08122455 | 31.03.2021 | 03.07.2023 |

| | | | | |
|---|---|---|---|---|
| 5 | ಶ್ರೀ ಮನೋಜ್‌ಕುಮಾರ್, ಐ.ಎಫ್.ಎಸ್ | 09379177 | 03.07.2023 | |
| 6 | ಡಾ.ಜೆ.ರವಿಶಂಕರ್, ಐಎಎಸ್ | 07662542 | 03.08.2021 | |
| 7 | ಶ್ರೀಮತಿ ಗುಂಜನ್‌ಕೃಷ್ಣ, ಐಎಎಸ್ | 08184500 | 28.08.2018 | |
| 8 | ಡಾ.ಎಂ.ಆರ್.ರವಿ, ಐಎಎಸ್ | 08254276 | 05.02.2022 | 23.11.2023 |
| 9 | ಡಾ.ಬಿ.ಸಿ.ಸತೀಶ, ಐಎಎಸ್ | 08379733 | 23.11.2023 | |
| 10 | ಶ್ರೀ ನಿತೀಶ್ ಕೆ, ಐಎಎಸ್ | 08890701 | 07.05.2022 | |
| 11 | ಶ್ರೀ ಆರ್.ರಮೇಶ್ | 06820058 | 06.03.2018 | |
| 12 | ಶ್ರೀ ವೆಂಕಟೇಶ್ ನಾಯ್ಡು | 08980109 | 02.12.2020 | 22.05.2023 |
| 13 | ಶ್ರೀ ಸಿ.ಚನ್ನದೇವರು | 08601746 | 19.10.2019 | 22.05.2023 |
| 14 | ಶ್ರೀ ಶಿವಾಜಿ ಶಿವರಾಯ್ ಡೊಲ್ಲಿನ್ | 08759087 | 10.06.2020 | 22.05.2023 |
| 15 | ಶ್ರೀ ಅಂದಪ್ಪ ಜವಳಿ | 08745350 | 22.05.2020 | 22.05.2023 |
| 16 | ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ | 08744799 | 21.05.2020 | 22.05.2023 |
| 17 | ಡಾ. ಆರ್.ಡಿ. ಸತೀಶ್ | 08745322 | 22.05.2020 | 22.05.2023 |
| 18 | ಶ್ರೀ ನಿಂಗಪ್ಪ | 08744756 | 21.05.2020 | 22.05.2023 |
| 19 | ಶ್ರೀ ಶಶಿಧರ್ ಬಿ.ಹೊನ್ನಣ್ಣವರ್ | 10048176 | 30.01.2023 | 22.05.2023 |

ಶ್ರೀ ಎಚ್. ಹಾಲಪ್ಪ, ಶ್ರೀ ಎಂ.ಬಿ.ಪಾಟೀಲ್, ಶ್ರೀ ವಿಕಾಶ್‌ಕುಮಾರ್ ವಿಕಾಶ್ ಐಎಎಸ್, ಡಾ. ಎಂ.ಆರ್. ರವಿ, ಐಎಎಸ್, ಮತ್ತು ಶ್ರೀ ವೆಂಕಟೇಶ್ ನಾಯ್ಡು, ಶ್ರೀ ಸಿ.ಚನ್ನದೇವರು, ಶ್ರೀ ಶಿವಾಜಿ ಶಿವರಾಯ್ ಡೊಲ್ಲಿನ್, ಶ್ರೀ ಅಂದಪ್ಪ ಜವಳಿ, ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ, ಡಾ.ಆರ್.ಸಿ. ಸತೀಶ್, ಶ್ರೀ ನಿಂಗಪ್ಪ, ಶ್ರೀ ಶಶಿಧರ್ ಬಿ.ಹೊನ್ನಣ್ಣವರ್ ನಿರ್ದೇಶಕರು ಇವರುಗಳು ಕಂಪನಿಯ ನಿರ್ದೇಶಕರ ಮಂಡಳಿಯಲ್ಲಿ ನಿರ್ದೇಶಕರಾಗಿದ್ದ ಅವಧಿಯಲ್ಲಿ ನೀಡಿದ ಅತ್ಯುತ್ತಮ ಕೊಡುಗೆಯನ್ನು ಸ್ಮರಿಸಿ ಮಂಡಳಿಯು ಅವರಿಗೆ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸುತ್ತದೆ.

ಅಧಿಸೂಚನೆ ಸಂ.ಸಿಐ02ಸಿಎಂಐ 2024(ಇ) ದಿನಾಂಕ:12.01.2024ರ ಅನ್ವಯ ಡಾ.ಜೆ.ರವಿಶಂಕರ್, ಐಎಎಸ್ ಮತ್ತು ಶ್ರೀ ಆರ್. ರಮೇಶ್ ಇವರ ಪದನಾಮಗಳನ್ನು ಸ್ವತಂತ್ರ ನಿರ್ದೇಶಕರಿಂದ ಕಂಪನಿಯ ಮಂಡಳಿಯ ನಿರ್ದೇಶಕರನ್ನಾಗಿ ಬದಲಾವಣೆ ಮಾಡಿದೆ.

ವರದಿಯ ದಿನಾಂಕದಂದು ಇರುವ ನಿರ್ದೇಶಕರುಗಳ ವಿವರವು ಕೆಳಕಂಡಂತಿರುವುದು:

| ನಿರ್ದೇಶಕರ ಹೆಸರು | |
|---|---|
| 1. ಶ್ರೀ ಸಿ.ಪುಟ್ಟರಂಗ ಶೆಟ್ಟಿ, ಸನ್ಮಾನ್ಯ ಶಾಸಕರು | ಅಧ್ಯಕ್ಷರು |
| 2. ಶ್ರೀ ಮನೋಜ್ ಕುಮಾರ್, ಐಎಫ್‌ಎಸ್ | ವ್ಯವಸ್ಥಾಪಕ ನಿರ್ದೇಶಕರು |
| 3. ಡಾ.ಜೆ.ರವಿಶಂಕರ್, ಐಎಎಸ್ | ನಿರ್ದೇಶಕರು |
| 4. ಶ್ರೀಮತಿ ಗುಂಜನ್‌ಕೃಷ್ಣ, ಐಎಎಸ್ | ನಿರ್ದೇಶಕರು |
| 5. ಶ್ರೀಮತಿ ಖುಷ್‌ಬೂ ಜಿ.ಚೌಧರಿ, ಐಎಎಸ್ | ನಿರ್ದೇಶಕರು |
| 6. ಶ್ರೀ ಮಹೊಮದ್ ಇಕ್ರಮುಲ್ಲ ಷರೀಫ್, ಐಎಎಸ್ | ನಿರ್ದೇಶಕರು |
| 7. ಶ್ರೀ ಆರ್. ರಮೇಶ್ | ನಿರ್ದೇಶಕರು |

ಹಣಕಾಸಿನ ವರ್ಷ 2023-24ರ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ನಿಬಂಧನೆಗಳ ಅನ್ವಯ ಕೆಳಕಂಡವರು ಕಂಪನಿಯ ಪ್ರಮುಖ ಆಡಳಿತ ಸಿಬ್ಬಂದಿಗಳಾಗಿರುವವರು:

| ಕ್ರ. ಸಂ. | ಪ್ರಮುಖ ಆಡಳಿತ ಸಿಬ್ಬಂದಿ ಹೆಸರು | ನೇಮಕಾತಿ ದಿನಾಂಕ | ಸಮಾಪ್ತಿ ದಿನಾಂಕ |
|---|---|---|---|
| 1 | ಶ್ರೀ ವಿಕಾಶ್‌ಕುಮಾರ್ ವಿಕಾಶ್, ಐಪಿಎಸ್ ವ್ಯವಸ್ಥಾಪಕ ನಿರ್ದೇಶಕರು | 31.03.2021 | 03.07.2023 |
| 2 | ಶ್ರೀ ಮನೋಜ್‌ಕುಮಾರ್ ಐಎಫ್‌ಎಸ್, ವ್ಯವಸ್ಥಾಪಕ ನಿರ್ದೇಶಕರು | 03.07.2023 | - |
| 3 | ಶ್ರೀ ಎ.ಎಂ. ಚಂದ್ರಪ್ಪ, ಮುಖ್ಯ ಹಣಕಾಸು ಅಧಿಕಾರಿ | 14.12.2021 | 30.11.2023 |
| 4 | ಶ್ರೀ ಕೆ.ಆರ್.ಅವಿನಾಶ್, ಕೆಎ ಅಂಡ್ ಎಎಸ್, ಮುಖ್ಯ ಹಣಕಾಸು ಅಧಿಕಾರಿ | 01.12.2023 | - |
| 5 | ಶ್ರೀಮತಿ ಶ್ರೀದೇವಿ ಬಿ.ಎನ್ ಕಂಪನಿ ಕಾರ್ಯದರ್ಶಿ | 18.09.2013 | - |

**ಮಂಡಳಿಯ ಲೆಕ್ಕ ಪರಿಶೋಧನಾ ಸಮಿತಿಯ ಸಂಯೋಜನೆ:**

| 31ನೇ ಮಾರ್ಚ್ 2024 ರಂದು ಇದ್ದಂತೆ | |
|---|---|
| 1. ಡಾ.ಬಿ.ಸಿ.ಸತೀಶ, ಐಎಎಸ್ | ಅಧ್ಯಕ್ಷರು |
| 2. ಡಾ. ಜೆ.ರವಿಶಂಖರ್, ಐಪಿಎಸ್ | ಸದಸ್ಯರು |
| 3. ಶ್ರೀ ಸತೀಶ್ ಕೆ. ಐಎಎಸ್ | ಸದಸ್ಯರು |
| 4. ಶ್ರೀ ಆರ್. ರಮೇಶ್ | ಸದಸ್ಯರು |

| ವರದಿಯ ದಿನಾಂಕದಂದು ಇದ್ದಂತೆ | |
|---|---|
| 1. ಶ್ರೀಮತಿ ಖುಷ್‌ಬೂ ಜಿ.ಚೌಧರಿ, ಎಎಎಸ್ | ಅಧ್ಯಕ್ಷರು |
| 2, ಡಾ.ಜೆ.ರವಿಶಂಕರ್, ಐಎಎಸ್ | ಸದಸ್ಯರು |
| 3. ಮೊಹಮದ್ ಇಕ್ರಮುಲ್ಲ ಷರೀಫ್, ಐಎಎಸ್ | ಸದಸ್ಯರು |
| 4. ಶ್ರೀ ಆರ್. ರಮೇಶ್ | ಸದಸ್ಯರು |

**ಮಂಡಳಿಯ ಲೆಕ್ಕ ಪರಿಶೋಧನಾ ಸಮಿತಿಯ ಸಂಯೋಜನೆ:**

| 31ನೇ ಮಾರ್ಚ್ 2024 ರಂದು ಇದ್ದಂತೆ | |
|---|---|
| 1. ಶ್ರೀ ಮನೋಜ್‌ಕುಮಾರ್, ಐಎಫ್‌ಎಸ್ | ಅಧ್ಯಕ್ಷರು |
| 2. ಡಾ. ಸತೀಶ ಜಿ.ಸಿ., ಐಎಎಸ್ | ಸದಸ್ಯರು |

| | |
|---|---|
| 3. ಶ್ರೀ ಸತೀಶ ಕೆ. ಐಎಎಸ್ | ಸದಸ್ಯರು |
| 4. ಶ್ರೀ ಆರ್. ರಮೇಶ್ | ಸದಸ್ಯರು |

| ವರದಿಯ ದಿನಾಂಕದಂದು ಇದ್ದಂತೆ | |
|---|---|
| 1. ಶ್ರೀ ಮನೋಜ್ ಕುಮಾರ್, ಐಎಫ್ಎಸ್ | ಅಧ್ಯಕ್ಷರು |
| 1. ಶ್ರೀಮತಿ ಖುಷ್‌ಬೂ ಜಿ.ಚೌಧರಿ, ಎಎಎಸ್ | ಸದಸ್ಯರು |
| 3. ಮೊಹಮದ್ ಇಕ್ರಮುಲ್ಲ ಷರೀಫ್, ಐಎಎಸ್ | ಸದಸ್ಯರು |
| 4. ಶ್ರೀ ಆರ್. ರಮೇಶ್ | ಸದಸ್ಯರು |

## 11. ಸಭೆಗಳು :

ವಿಭಾಗೀಯ ಮುಖ್ಯಸ್ಥರುಗಳಿಂದ ಬಂದ ಮನವಿಯ ಆಧಾರದ ಮೇಲೆ, ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಗೆ ಒಳಪಟ್ಟು ಮತ್ತು ಶಾಸನಬದ್ಧವಾಗಿ ಅಗತ್ಯವಾಗಿರುವಂತೆ ಕಾರ್ಯಸೂಚಿ ವಿಷಯಗಳ ಆಧಾರದ ಮೇಲೆ ಕಂಪನಿ ಕಾರ್ಯದರ್ಶಿಯು ವ್ಯವಸ್ಥಾಪಕ ನಿರ್ದೇಶಕರೊಡನೆ ಸಮಾಲೋಚಿಸಿ/ಅವರ ಒಪ್ಪಿಗೆ ಪಡೆದು ವಿವರಣಾತ್ಮಕ ಟಿಪ್ಪಣಿಗಳ ಜೊತೆಗೆ ಪ್ರತಿ ಸಭೆಯ ಕಾರ್ಯಸೂಚಿಯನ್ನು ಸಿದ್ಧಪಡಿಸಿರುವರು. ಮತ್ತು , ಅದನ್ನು ಮುಂಚಿತವಾಗಿ ಮಂಡಳಿಯು ನಿರ್ದೇಶಕರುಗಳಿಗೆ ವಿತರಿಸುವರು. 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಈ ಕೆಳಕಂಡ ದಿನಾಂಕಗಳಂದು ಐದು ಮಂಡಳಿ ಸಭೆಗಳು, ನಾಲ್ಕು ಲೆಕ್ಕಪರಿಶೋಧನಾ ಉಪ ಸಮಿತಿ ಸಭೆಗಳು ಮತ್ತು ಒಂದು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆಯನ್ನು ನಡೆಸಲಾಗಿದೆ.

| ಕ್ರ. ಸಂ. | ಮಂಡಳಿ ಸಭೆ ನಡೆದ ದಿನಾಂಕಗಳು | ಕ್ರ. ಸಂ. | ಲೆಕ್ಕಪರಿಶೋಧನಾ ಉಪ ಸಮಿತಿ ಸಭೆ ನಡೆದ ದಿನಾಂಕಗಳು |
|---|---|---|---|
| 1 | 20ನೇ ಜುಲೈ , 2023 | 1 | 19ನೇ ಜುಲೈ , 2023 |
| 2 | 15ನೇ ನವೆಂಬರ್, 2023 | 2 | 29ನೇ ನವೆಂಬರ್, 2023 |
| 3 | 29ನೇ ನವೆಂಬರ್ 2023 | 3 | 05ನೇ ಜನವರಿ, 2024 |
| 4 | 25ನೇ ಜನವರಿ, 2024 | 4 | 06ನೇ ಮಾರ್ಚ್, 2024 |
| 5 | 07ನೇ ಮಾರ್ಚ್, 2024 | | |

| ಕ್ರ. ಸಂ. | ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಸಮಿತಿ ಸಭೆ ನಡೆದ ದಿನಾಂಕ |
|---|---|
| 1 | 25ನೇ ಜನವರಿ, 2024 |

### ಹಣಕಾಸಿನ ವರ್ಷ 2023-24ರ ಅವಧಿಯಲ್ಲಿ ನಡೆದ ಮಂಡಳಿ ಸಭೆಗೆ ನಿರ್ದೇಶಕರ ಹಾಜರಾತಿ ವಿವರ

| ಕ್ರ. ಸಂ. | ನಿರ್ದೇಶಕರ ಹೆಸರು | ನಡೆದ ಮಂಡಳಿ ಸಭೆಗಳ ಸಂಖ್ಯೆ | |
|---|---|---|---|
| | | ನಡೆದದ್ದು | ಹಾಜರಾತಿ |
| 1. | ಶ್ರೀ ಎಚ್. ಹಾಲಪ್ಪ | 0 | 0 |
| 2. | ಶ್ರೀ ಎಂ.ಬಿ. ಪಾಟೀಲ್ | 4 | 3 |
| 3. | ಶ್ರೀ ಸಿ.ಪುಟ್ಟರಂಗ ಶೆಟ್ಟಿ | 1 | 1 |
| 4. | ಶ್ರೀ ವಿಕಾಶ್‌ಕುಮಾರ್ ವಿಕಾಶ್, ಐಪಿಎಸ್ | 0 | 0 |
| 5. | ಶ್ರೀ ಮನೋಜ್‌ಕುಮಾರ್, ಐಎಫ್ಎಸ್ | 5 | 5 |
| 6. | ಡಾ. ಜೆ.ರವಿಶಂಕರ್, ಐಎಎಸ್ | 5 | 2 |
| 7. | ಶ್ರೀಮತಿ ಗುಂಜನ್ ಕೃಷ್ಣ, ಐಎಎಸ್ | 5 | 2 |
| 8. | ಡಾ.ಎಂ.ಆರ್.ರವಿ, ಐಎಎಸ್ | 2 | 1 |
| 9. | ಡಾ.ಬಿ.ಸಿ.ಸತೀಶ್, ಐಎಎಸ್ | 3 | 2 |
| 10. | ಶ್ರೀ ನಿತೀಶ್ ಕೆ. ಐಎಎಸ್ | 5 | 2 |
| 11. | ಶ್ರೀ ಆರ್. ರಮೇಶ್ | 5 | 4 |
| 12 | ಶ್ರೀ ವೆಂಕಟೇಶ್ ನಾಯ್ಡು | 0 | 0 |
| 13 | ಶ್ರೀ ಸಿ.ಚನ್ನದೇವರು | 0 | 0 |
| 14 | ಶ್ರೀ ಶಿವಾಜಿ ಶಿವರಾಯ್ ಡೊಲ್ಲಿನ್ | 0 | 0 |
| 15 | ಶ್ರೀ ಅಂದಪ್ಪ ಜವಳಿ | 0 | 0 |
| 16 | ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ | 0 | 0 |
| 17 | ಡಾ. ಆರ್.ಡಿ. ಸತೀಶ್ | 0 | 0 |
| 18 | ಶ್ರೀ ನಿಂಗಪ್ಪ | 0 | 0 |
| 19 | ಶ್ರೀ ಶಶಿಧರ್ ಬಿ ಹೊನ್ನಣ್ಣವರ್ | 0 | 0 |

1. ಶ್ರೀ ಎಚ್. ಹಾಲಪ್ಪ ಇವರ ನಿರ್ದೇಶಕರ ಮತ್ತು ಅಧ್ಯಕ್ಷರ ಸ್ಥಾನವು 12ನೇ ಏಪ್ರಿಲ್, 2023ರಿಂದ ಸಮಾಪ್ತಿಗೊಂಡಿದೆ.
2. ಶ್ರೀ ಎಂ.ಬಿ. ಪಾಟೀಲ್, ಇವರು 13.06.2023ರಂದು ನಿರ್ದೇಶಕರು ಮತ್ತು ಅಧ್ಯಕ್ಷರಾಗಿ ನೇಮಕವಾಗಿರುವರು ಮತ್ತು 26.01.2024ರಿಂದ ಅನ್ವಯವಾಗುವಂತೆ ನಿರ್ದೇಶಕರು ಮತ್ತು ಅಧ್ಯಕ್ಷರ ಸ್ಥಾನವು ಸಮಾಪ್ತಿಯಾಗಿರುವುದು.
3. ಶ್ರೀ ಸಿ.ಪುಟ್ಟರಂಗ ಶೆಟ್ಟಿ ಇವರು 26.01.2024ರಂದು ನಿರ್ದೇಶಕರು ಮತ್ತು ಅಧ್ಯಕ್ಷರಾಗಿ ನೇಮಕವಾಗಿದ್ದಾರೆ.
4. ಶ್ರೀ ವಿಕಾಶ್‌ಕುಮಾರ್ ವಿಕಾಶ್, ಐಪಿಎಸ್ ಇವರು 03.07.2023ರಿಂದ ಅನ್ವಯವಾಗುವಂತೆ ವ್ಯವಸ್ಥಾಪಕ ನಿರ್ದೇಶಕರ ಸ್ಥಾನವು ಸಮಾಪ್ತಿಯಾಗಿದೆ.
5. ಶ್ರೀ ಮನೋಜ್‌ಕುಮಾರ್, ಐಎಫ್ಎಸ್. ಇವರು 03.07.2023ರಿಂದ ಅನ್ವಯವಾಗುವಂತೆ ವ್ಯವಸ್ಥಾಪಕ ನಿರ್ದೇಶಕರಾಗಿ ನೇಮಕವಾಗಿದ್ದಾರೆ.
6. ಡಾ. ಎಂ.ಆರ್.ರವಿ, ಐಎಎಸ್ ಇವರ ನಿರ್ದೇಶಕರ ಸ್ಥಾನವು 23.11.2023 ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

7. ಡಾ.ಬಿ.ಸಿ. ಸತೀಶ್, ಐಎಎಸ್ ಇವರು 23.11.2023ರಂದು ನಿರ್ದೇಶಕರಾಗಿ ನೇಮಕವಾಗಿರುವರು.

8. ಶ್ರೀ ವೆಂಕಟೇಶ್ ನಾಯ್ಡು ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

9. ಶ್ರೀ ಸಿ. ಚನ್ನದೇವರು ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

10. ಶ್ರೀ ಶಿವಾಜಿ ಶಿವರಾಯ್ ಡೊಲ್ಲಿನ್ ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

11. ಶ್ರೀ ಅಂದಪ್ಪ ಜವಳಿ ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

12. ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

13. ಡಾ.ಆರ್.ಡಿ. ಸತೀಶ ಇವರು ನಿರ್ದೇಶಕರ ಸ್ಥಾನವು 22.05.2023 ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

14. ಶ್ರೀ ನಿಂಗಪ್ಪ ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಅನ್ವಯವಾಗುವಂತೆ ಸಮಾಪ್ತಿಯಾಗಿದೆ.

15. ಶ್ರೀ ಶಶಿಧರ್ ಬಿ.ಹೊನ್ನಣ್ಣವರ ಇವರ ನಿರ್ದೇಶಕರ ಸ್ಥಾನವು 22.05.2023ರಿಂದ ಸಮಾಪ್ತಿಯಾಗಿದೆ.

## 12. ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧಕರ ವರದಿ

ಕಂಪನಿಯು, ಕಂಪನಿಗಳ ಕಾಯ್ದೆ, 2013ರ ಪ್ರಕರಣ 2(45)ರ ಅನ್ವಯ ಸರ್ಕಾರದ ಕಂಪನಿಯಾಗಿದ್ದು, ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಕಂಪನಿಗಳ ಕಾಯ್ದೆ, 2013ರ ಪ್ರಕರಣ 139(5) ರ ಅನ್ವಯ ಕಂಪನಿಯ ವಾರ್ಷಿಕ ಲೆಕ್ಕ ಪತ್ರಗಳ ಪರಿಶೋಧನೆ ಮಾಡಲು ಶಾಸನಬದ್ಧ ಲೆಕ್ಕಪರಿಶೋಧಕರನ್ನು ನೇಮಕ ಮಾಡುವರು. ಸಿ ಅಂಡ್ ಎಜಿಐ ಇವರು ಮೆ।। ಸೊರಬ್ ಎಸ್.ಇಂಜಿನಿಯರ್ ಅಂಡ್ ಕಂ. (ಬಿಒ0036) ಚಾರ್ಟರ್ಡ್ ಅಕೌಂಟೆಂಟ್ಸ್, ಬೆಂಗಳೂರು ಇವರನ್ನು 2023-24ರ ವರ್ಷಕ್ಕೆ ಶಾಸನಬದ್ಧ ಲೆಕ್ಕಪರಿಶೋಧಕರನ್ನಾಗಿ ನೇಮಕ ಮಾಡಿರುವರು. ಸಿ ಅಂಡ್ ಎಜಿಐ ಇವರು ನೇಮಕ ಮಾಡಿರುವ ಶಾಸನಬದ್ಧ ಲೆಕ್ಕಪರಿಶೋಧಕರ ಹುದ್ದೆಯು ಮುಂದಿನ ವಾರ್ಷಿಕ ಮಹಾಸಭೆ ಮುಕ್ತಾಯವಾಗುವವರೆಗೆ ಇರುವುದು.

ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿ ಆಕ್ಷೇಪಣೆಗಳಿರುವವು. ಶಾಸನಬದ್ಧ ಲೆಕ್ಕಪರಿಶೋಧಕರ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿ ಉತ್ತರಗಳನ್ನು ಈ ವರದಿ ಜೊತೆ ಲಗತ್ತಿಸಿದೆ.

ಕಂಪನಿಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಕಾರ್ಯ ಕೈಗೊಳ್ಳಲು ಕಂಪನಿಯು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು 2014ರ ಅನ್ವಯ ಕಾರ್ಯನಿರತ ಕಂಪನಿ ಸೆಕ್ರೆಟರೀಸ್‌ನ ಸಂಸ್ಥೆಯಾದ ಮೆ।। ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್ ಇವರನ್ನು ನೇಮಕ ಮಾಡಿದೆ. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿಯು ಯಾವುದೇ ಆಕ್ಷೇಪಣೆಗಳು, ಅಭಿಪ್ರಾಯಗಳು, ಅಥವಾ ವ್ಯತಿರಿಕ್ತ ಟೀಕೆಗಳನ್ನು ಒಳಗೊಂಡಿರುವುದಿಲ್ಲ. ಈ ವರದಿಗೆ ಅನುಬಂಧ-III ಆಗಿ ಲಗತ್ತಿಸಿದೆ. ಈ ವರದಿಯು ಸ್ವಯಂ ವಿವರಣಾತ್ಮಕವಾಗಿರುವುದು ಮತ್ತು ಯಾವುದೇ ಹೆಚ್ಚಿನ ಟೀಕೆ ಟಿಪ್ಪಣಿಗಳನ್ನು ಹೊಂದಿರುವುದಿಲ್ಲ.

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಶಾಸನಬದ್ಧ ಲೆಕ್ಕ ಪರಿಶೋಧಕರು ಮತ್ತು ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು ಕಂಪನಿಯಲ್ಲಿ ಅದರ ಅಧಿಕಾರಿಗಳಿಂದ ಅಥವಾ ನೌಕರರುಗಳಿಂದ ಮಾಡಿರುವ ವಂಚನೆಗಳ ಯಾವುದೇ ಪ್ರಕರಣಗಳನ್ನು ಕಂಪನಿಗಳ ಕಾಯ್ದೆ, 2013ರ ಪ್ರಕರಣ 143(12)ರ ಅನ್ವಯ ಲೆಕ್ಕಪರಿಶೋಧನಾ ಸಮಿತಿಗೆ ವರದಿ ಮಾಡಿರುವುದಿಲ್ಲ. ಇವುಗಳ ವಿವರಗಳನ್ನು ವರದಿಯಲ್ಲಿ ತಿಳಿಸಬೇಕಾಗಿತ್ತು .

## 13. ಆಂತರಿಕ ಲೆಕ್ಕಪರಿಶೋಧನೆ ಮತ್ತು ನಿಯಂತ್ರಣಗಳು:

ಕಂಪನಿಯು ಆಂತರಿಕ ಲೆಕ್ಕಪರಿಶೋಧಕರನ್ನು ನೇಮಕ ಮಾಡುವ ಪ್ರಕ್ರಿಯೆಯನ್ನು ಮುಂದುವರಿಸುವುದು. ಆಂತರಿಕ ಲೆಕ್ಕಪರಿಶೋಧಕರ ಕಾರ್ಯವ್ಯಾಪ್ತಿ ಮತ್ತು ಉದ್ದೇಶವು ವ್ಯವಹಾರಗಳ ಲೆಕ್ಕಪರಿಶೋಧನೆ ಮತ್ತು ಪುನರ್ ಅವಲೋಕನವನ್ನು ಒಳಗೊಂಡಿರುವುದು. ಆಂತರಿಕ ಲೆಕ್ಕಪರಿಶೋಧಕರು ತಮ್ಮ ವರದಿಯನ್ನು ಕಂಪನಿಯ ಟಿಪ್ಪಣಿಗಳ ಜೊತೆಗೆ ಕಂಪನಿಗೆ ಸಲ್ಲಿಸುವರು. ಸದರಿ ವರದಿಯನ್ನು ಕಾರ್ಯಾಚರಣೆಗಳ ಸಾಮರ್ಥ್ಯಗಳನ್ನು ಸುಧಾರಿಸಲು ಚಲನಾತ್ಮಕ ಆಧಾರದ ಮೇಲೆ ಲೆಕ್ಕಪರಿಶೋಧನಾ ಸಮಿತಿ ಮುಂದೆ ಇರಿಸಲಾಗುವುದು.

## 14. ಸ್ವತಂತ್ರ ನಿರ್ದೇಶಕರಿಂದ ಘೋಷಣೆ :

ಕಂಪನಿಯು ಪ್ರತಿ ಸ್ವತಂತ್ರ ನಿರ್ದೇಶಕರುಗಳಿಂದ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 149(7)ರ ಅನ್ವಯ ಆತ/ಆಕೆ ಕಂಪನಿಗಳ ಕಾಯ್ದೆ, 2013ರ ಪ್ರಕರಣ 149(6)ರಲ್ಲಿ ತಿಳಿಸಿರುವ ಸ್ವತಂತ್ರದ ಮಾನದಂಡವನ್ನು ಈಡೇರಿಸಿರುವುದಾಗಿ ಅಗತ್ಯ ಘೋಷಣೆಯನ್ನು ಪಡೆದಿದೆ.

## 15. ವಾರ್ಷಿಕ ರಿಟರ್ನ್ಸ್:

ಕಂಪನಿಗಳ (ಆಡಳಿತ ಮತ್ತು ನಿರ್ವಹಣೆ) ನಿಯಮಗಳು, 2014ರ ನಿಯಮ 12 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 92 (3)ರ ಅನ್ವಯ, ಕಾಯ್ದೆಯ ಪ್ರಕರಣ 92(1)ರ ಅನುಸಾರ ಸಿದ್ಧಪಡಿಸಿರುವ ಹಿಂದಿನ ಹಣಕಾಸಿನ ವರ್ಷಗಳ ಕಂಪನಿಯ ವಾರ್ಷಿಕ ರಿಟರ್ನ್ಸ್‌ಗಳ ಪ್ರತಿಗಳನ್ನು ವೆಬ್‌ಸೈಟ್: https://msilonline.com/annual-returns ಇಲ್ಲಿ ಲಭ್ಯವಿರುವವು.

## 16. ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ

ಕಂಪನಿಯು ಹಣಕಾಸಿನ ಹೇಳಿಕೆಗಳ ಸಂಬಂಧ ಸಾಕಷ್ಟು ರೀತಿಯ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಹೊಂದಿರುವುದು. ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಸದರಿ ನಿಯಂತ್ರಣಗಳನ್ನು ಪರೀಕ್ಷಿಸಲಾಗಿದ್ದು, ಅವುಗಳ ಕಾರ್ಯಾಚರಣೆಯಲ್ಲಿ ಯಾವುದೇ ಗಣನೀಯವಾಗಿ ತಿಳಿಸಬಹುದಾದ ವಾಸ್ತವಿಕ ದೌರ್ಬಲ್ಯಗಳಿರುವುದಿಲ್ಲ.

### 17. ಕಂಪನಿಯ ಜಾಗೃತ ವ್ಯವಸ್ಥೆ

ಜಾಗೃತವ್ಯವಸ್ಥೆಗೆಸಂಬಂಧಿಸಿದ ಉಪಬಂಧಗಳು ಕಂಪನಿಗೆ ಅನ್ವಯವಾಗುವುದಿಲ್ಲ.

### 18. ಅಪಾಯ ನಿರ್ವಹಣಾ ನೀತಿ

ಕಂಪನಿಯು ಎಲ್ಲಾ ಕಾರ್ಯಾಚರಣೆ ವಿಭಾಗಗಳ ಆಪತ್ತಿನ ಅಂಶಗಳನ್ನು ಗುರುತಿಸಿದೆ ಮತ್ತು ಪ್ರತಿಯೊಂದು ಆಪತ್ತಿನ ಉಪಶಮನ ಉಪಾಯವನ್ನು ಕಂಡುಕೊಂಡಿದೆ. ಮುಖ್ಯ ಧ್ಯೇಯವು ಸ್ಥಿರತೆಯ ಜೊತೆಗೆ ಸುಸ್ಥಿರ ವ್ಯವಹಾರ ವೃದ್ಧಿಯನ್ನು ಖಾತರಿಪಡಿಸುವುದಾಗಿದೆ ಮತ್ತು ವ್ಯವಹಾರಕ್ಕೆ ಒಳಪಟ್ಟಿರುವ ಅಪಾಯಗಳನ್ನು ವರದಿ ಮಾಡುವಿಕೆ, ಮೌಲ್ಯಮಾಪನ ಮತ್ತು ಪರಿಹರಿಸುವಿಕೆಯಲ್ಲಿ ಸಕಾರಾತ್ಮಕ ಪಾಲ್ಗೊಳ್ಳುವಿಕೆಯನ್ನು ಪ್ರವರ್ಧನೆ ಮಾಡುವುದು.

### 19. ಹಣಕಾಸಿನ ವಿವರಗಳು ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷದ ಕೊನೆ ಮತ್ತು ವರದಿಯ ದಿನಾಂಕದ ನಡುವೆ ಉಂಟಾಗಿರುವ, ಕಂಪನಿಯ ಹಣಕಾಸಿನ ಪರಿಸ್ಥಿತಿಯ ಮೇಲೆ ಪರಿಣಾಮ ಉಂಟು ಮಾಡಬಹುದಾದ ವಾಸ್ತವಿಕ ಬದಲಾವಣೆಗಳು ಮತ್ತು ಬದ್ಧತೆಗಳು

ಸ್ಥಿತಿ ವಿವರಣಾ ಪಟ್ಟಿ ಸಂಬಂಧಪಟ್ಟಿರುವ ಕಂಪನಿಯ ಹಣಕಾಸಿನ ವರ್ಷ ಮುಕ್ತಾಯದ ತರುವಾಯ ಮತ್ತು ತೆರಿಗೆ ಹೊಣೆಗಾರಿಕೆ ಇತ್ಯರ್ಥ, ಪೇಟೆಂಟ್ ಹಕ್ಕುಗಳ ಕಾರ್ಯಾಚರಣೆ, ಹೂಡಿಕೆಗಳ ಮಾರುಕಟ್ಟೆ ಮೌಲ್ಯದಲ್ಲಿ ಸವಕಳಿ ಕಂಪನಿಯಿಂದ ಅಥವಾ ಕಂಪನಿಯ ಮೇಲೆ ಹೂಡಿರುವ ದಾವೆಗಳು, ಬಂಡವಾಳ ಸ್ವತ್ತುಗಳ ಮಾರಾಟ ಅಥವಾ ಖರೀದಿ ಅಥವಾ ಯಾವುದೇ ಆಸ್ತಿಗಳ ನಾಶ ಇತ್ಯಾದಿ ವರದಿಯ ದಿನಾಂಕದಲ್ಲಿ ಯಾವುದೇ ಅಂತಹ ವಾಸ್ತವಿಕ ಬದಲಾವಣೆಗಳಿರುವುದಿಲ್ಲ.

### 20. ಕಂಪನಿಯ ಹಾಲಿ ಪ್ರಗತಿಯ ಸ್ಥಿತಿಗತಿ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮವನ್ನುಂಟು ಮಾಡುವ ದಿಸೆಯಲ್ಲಿ ನಿಯಂತ್ರಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣ ಗಳಿಂದ ಹೊರಡಿಸಿರುವ ಮಹತ್ವಪೂರ್ಣವಾದ ಮತ್ತು ಭೌತಿಕ ಆದೇಶಗಳ ವಿವರಗಳು:

ಚಾಲ್ತಿ ಸಂಸ್ಥೆಯ ಸ್ಥಿತಿಗತಿ ಮೇಲೆ ಮತ್ತು ಕಂಪನಿಯ ಭವಿಷ್ಯದ ಕಾರ್ಯಾಚರಣೆಗಳ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಅಂತಹ ಆದೇಶಗಳನ್ನು ಹೊರಡಿಸಿರುವುದಿಲ್ಲ.

### 21. ಠೇವಣಿಗಳು

ಪರಾಮರ್ಶನೆಯಲ್ಲಿರುವ ವರ್ಷದಲ್ಲಿ ಕಂಪನಿಯು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-v ರಡಿ ಒಳಪಡುವ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸಾರ್ವಜನಿಕರಿಂದ ಅಂಗೀಕರಿಸಿರುವುದಿಲ್ಲ.

### 22. ಸಂಬಂಧಪಟ್ಟ ವ್ಯಕ್ತಿ ವ್ಯವಹಾರಗಳು:

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 188ರ ಉಪಬಂಧಗಳ ಅನುಸಾರ ಕಂಪನಿಯು ಯಾವುದೇ ಗುತ್ತಿಗೆ ಅಥವಾ ವ್ಯವಸ್ಥೆಗಳನ್ನು ಮಾಡಿಕೊಂಡಿರುವುದಿಲ್ಲ.

### 23. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯ (ನಿಯಂತ್ರಣ, ನಿಷೇಧ ಮತ್ತು ಪರಿಹಾರ) ಕಾಯ್ದೆ-2013ರ (ಪಿಒಎಸ್‌ಎಚ್ ಕಾಯ್ದೆ) ಅನ್ವಯ ಘೋಷಣೆ

ಪಿಒಎಸ್‌ಎಚ್ ಕಾಯ್ದೆಯು ಭಾರತದಲ್ಲಿ ಒಂದು ನಿರ್ಣಾಯಕವಾದ ಕಾನೂನಾಗಿರುವುದು. ಲೈಂಗಿಕ ದೌರ್ಜನ್ಯ ತಡೆಗೆ ಸಮರ್ಪಣೆಯಾಗಿದೆ. ಮಹಿಳೆಯರಿಗೆ ಸುರಕ್ಷಿತ ಮತ್ತು ರಕ್ಷಣಾತ್ಮಕ ಕೆಲಸದ ಪರಿಸರದ ಖಾತರಿಪಡಿಸುವುದಕ್ಕಾಗಿ ಇದನ್ನು ಜಾರಿಗೊಳಿಸಿದೆ. ಕೆಲಸದ ಸ್ಥಳದಲ್ಲಿ ದೌರ್ಜನ್ಯ ನಡೆಯದಂತೆ ತಡೆಯಲು ಸಹ ಇದನ್ನು ಜಾರಿಗೊಳಿಸಿದೆ. ನಮ್ಮ ಕಂಪನಿ ಒಳಗೆ ತಂಡದ ಕಾರ್ಯ, ವೈವಿಧ್ಯತೆ ಮತ್ತು ವಿಶ್ವಾಸ ಪ್ರವರ್ಧನೆ ಕಾರ್ಯದಲ್ಲಿ ಪಿಒಎಸ್‌ಎಚ್ ಕಾಯ್ದೆಯು ಮಹತ್ವದ ಪಾತ್ರ ವಹಿಸುವುದು. ಎಂಎಸ್‌ಐಎಲ್‌ನಲ್ಲಿ ಸುರಕ್ಷಿತ ಮತ್ತು ವೃತ್ತಿದಾಯಕ ಕಾರ್ಯ ವ್ಯವಸ್ಥೆ ಕಾಪಾಡಲು ನಾವು ಬದ್ಧರಾಗಿರುವೆವು. ಲಿಂಗ-ನಿರ್ಲಿಂಗ ಲೈಂಗಿಕ ದೌರ್ಜನ್ಯ ತಡೆ ನೀತಿ ನಿರ್ವಹಣೆಯ ಜೊತೆಗೆ ನಾವು ಪಿಒಎಸ್‌ಎಚ್ ಕಾಯ್ದೆಯು ನಿಬಂಧನೆಗಳನ್ನು ನಾವು ಪರಿಪಾಲಿಸುವೆವು. ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದ ದೂರುಗಳನ್ನು ವಿಚಾರಿಸಲು ಮತ್ತು ಪರಿಹರಿಸಲು, ನಾವು ಆಂತರಿಕ ದೂರಿನ ಸಮಿತಿ ಒಂದನ್ನು ರೂಪಿಸಿದ್ದೇವೆ. ಪಿಒಎಸ್‌ಎಚ್ ಕಾಯ್ದೆ ಪ್ರಾರಂಭವಾದಾಗಿನಿಂದ ಎಂಎಸ್‌ಐಎಲ್ ಆಂತರಿಕ ದೂರು ಸಮಿತಿ ಸ್ಥಾಪನೆ ಮಾಡುವುದರೊಡನೆ ಅದನ್ನು ಅನುಸರಿಸುತ್ತಿದೆ. ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯದ ದೂರುಗಳನ್ನು ಸದರಿ ಸಮಿತಿಯು ನ್ಯಾಯಯುತವಾಗಿ ಮತ್ತು ತ್ವರಿತವಾಗಿ ವಿಚಾರಿಸುವುದು. ಈ ಸಮಿತಿಯಲ್ಲಿ ಮಹಿಳೆಯರು ಮತ್ತು ಪುರುಷ ಸದಸ್ಯರು ಇರುವರು. ಸಮಿತಿ ಸದಸ್ಯರಲ್ಲಿ 50%ಗಿಂತ ಹೆಚ್ಚು ಮಹಿಳೆಯರಿರುವರು. ಪಿಒಎಸ್‌ಎಚ್ ಕಾಯ್ದೆ ಅನ್ವಯ ಅಗತ್ಯವಾದಂತೆ ನಾವು ಸಕ್ಷಮ ಅಧಿಕಾರಿಗಳಿಗೆ ವಾರ್ಷಿಕ ವರದಿ ಸಲ್ಲಿಸುವೆವು. ಪಿಒಎಸ್‌ಎಚ್ ಕಾಯ್ದೆಯ ಅನುಸಾರ ಅಗತ್ಯವಾದ ಎಲ್ಲಾ ದಾಖಲೆ ಪತ್ರಗಳನ್ನು ನಾವು ಸಲ್ಲಿಸಿದ್ದೇವೆ.

ಪರಾಮರ್ಶನೆಯಲ್ಲಿರುವ ವರ್ಷದ ಅವಧಿಯಲ್ಲಿ ನಾವು ಯಾವುದೇ ಪಿಒಎಸ್‌ಎಚ್ ದೂರುಗಳನ್ನು ಪಡೆಯುವುದಿಲ್ಲ. ಯಾವುದೇ ದೂರುಗಳಿರದಿದ್ದರೂ ಸಹ, ನಾವು ನಮ್ಮ ಪಿಒಎಸ್‌ಎಚ್ ತಿಳುವಳಿಕೆ ಕಾರ್ಯಕ್ರಮದ ಮೂಲಕ ಪಿಒಎಸ್‌ಎಚ್ ನ ತಿಳುವಳಿಕೆಯನ್ನು ಮೂಡಿಸಿದ್ದೇವೆ.

### 24. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರ ಹರಿವು:

ಸದರಿ ಕಂಪನಿಯಲ್ಲಿನ ಕಾರ್ಯಾಚರಣೆಯ ಎಲ್ಲಾ ಮಟ್ಟಗಳಲ್ಲಿ ಇಂಧನ ಸಂರಕ್ಷಣೆಗೆ ಆದ್ಯತೆ ಗಮನಹರಿಸುವ ಕಾರ್ಯವನ್ನು ಮುಂದುವರಿಸಿಕೊಂಡು ಬರಲಾಗುತ್ತಿದೆ. ಕಂಪನಿಯು ಪ್ರಧಾನವಾಗಿ ವ್ಯಾಪಾರ ವ್ಯವಹಾರದ ಸಂಸ್ಥೆಯಾಗಿದ್ದು, ವಿದ್ಯುತ್ ಅನ್ನು ಕಚೇರಿ ಬಳಕೆಯ ಉದ್ದೇಶಕ್ಕೆ ಮಾತ್ರ ಉಪಯೋಗಿಸಲಾಗುತ್ತದೆ. ಇಂಧನ ಸಂರಕ್ಷಣೆ ಮಾಡುವುದಕ್ಕೆ ಹಾಗೂ ಇಂಧನವನ್ನು ಬಳಸುವ ಪ್ರಕ್ರಿಯೆಯನ್ನು ಗರಿಷ್ಠಗೊಳಿಸಲು ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಇಂಧನ ಸಂರಕ್ಷಣೆ, ತಂತ್ರಜ್ಞಾನ ಅಳವಡಿಕೆ ಮತ್ತು ವಿದೇಶಿ ವಿನಿಮಯ ಗಳಿಕೆ ಮತ್ತು ಹೊರಹರಿವಿಗೆ ಸಂಬಂಧಿಸಿದ ಮಾಹಿತಿಯು ಏನೂ ಇರುವುದಿಲ್ಲ.

**25. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್)**

ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಅನ್ವಯ ಅನ್ವಯವಾಗುವ ಮಾನದಂಡಗಳನ್ನು ಪರಿಪಾಲಿಸುವ ಒಂದು ಕಂಪನಿಯು, ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳ ಸರಾಸರಿ ನಿವ್ವಳ ಲಾಭದ ಕನಿಷ್ಠ 2% ಹಣವನ್ನು ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಚಟುವಟಿಕೆಗಳಿಗೆ ಖರ್ಚು ಮಾಡಬೇಕಾಗುತ್ತದೆ. ಸಿಎಸ್‌ಆರ್ ಚಟುವಟಿಕೆಗಳ ಕ್ಷೇತ್ರಗಳು-ಶಿಕ್ಷಣ ಪ್ರವರ್ಧನೆ ಮತ್ತು ಆರೋಗ್ಯ ರಕ್ಷಣೆ. ಕಂಪನಿಯು ಕಾಯ್ದೆಯ ಪ್ರಕಾರ ಸಿಎಸ್‌ಆರ್ ಸಮಿತಿಯನ್ನು ರಚಿಸಿದೆ. ಇದಕ್ಕೆ ಮೀಸಲಿರಿಸಿರುವ ಹಣವನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-VIIರಲ್ಲಿ ವಿವರಿಸಿರುವ ಈ ಚಟುವಟಿಕೆಗಳಿಗೆ ಬಳಸಲಾಗಿದೆ. ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಕುರಿತಂತೆ ಕಂಪನಿಗಳ ಕಾಯ್ದೆ, 2013 ಪ್ರಕರಣ 135(4)ರ ಪ್ರಕಾರ ಪ್ರಸಕ್ತ ಸಾಲಿನಲ್ಲಿ ಕೈಗೊಂಡ ಚಟುವಟಿಕೆಗಳ ವಿವರಗಳನ್ನು ಅನುಬಂಧ-II ರಲ್ಲಿ ನಮೂದಿಸಿ ಸದರಿ ವರದಿಗೆ ಲಗತ್ತಿಸಿದೆ.

**26. ಮಾನವ ಸಂಪನ್ಮೂಲಗಳು:**

ನಿಮ್ಮ ಕಂಪನಿಯು ತನ್ನ ''ಮಾನವ ಸಂಪನ್ಮೂಲಗಳನ್ನು'' ಅತ್ಯಮೂಲ್ಯವಾದ ಆಸ್ತಿಗಳಲ್ಲಿ ಒಂದು ಎಂಬುದಾಗಿ ಪರಿಗಣಿಸಿದೆ.

ನಿಮ್ಮ ಕಂಪನಿಯು ನೌಕರರುಗಳಿಗೆ ತರಬೇತಿ ನೀಡುವ ಮತ್ತು ಅವರನ್ನು ವಿಕಾಸಗೊಳಿಸುವುದಕ್ಕೆ ಒತ್ತು ನೀಡುವ ಕ್ರಮವನ್ನು ಮುಂದುವರಿಸುತ್ತಿದೆ. 2023-24ರ ಸಾಲಿನಲ್ಲಿ ನೌಕರರ ಕಾರ್ಯದಕ್ಷತೆಯನ್ನು ಹೆಚ್ಚಿಸಲು 9 ನೌಕರರಿಗೆ ತರಬೇತಿ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

2023-24ರ ಅವಧಿಯಲ್ಲಿ (31ನೇ ಮಾರ್ಚ್ 2024ರವರೆಗೆ) ನಿಮ್ಮ ಕಂಪನಿಯಲ್ಲಿ 72 ನೌಕರರಿದ್ದರು. (ಎಕ್ಸಿಕ್ಯುಟಿವ್‌ಗಳು 11, ಅಧಿಕಾರಿಗಳು 28 ಮತ್ತು ಸಿಬ್ಬಂದಿಗಳು 33).

**27. ಯೋಜನೆ/ಎಸ್ಟೇಟ್ ಇಲಾಖೆ:**

ಕಂಪನಿಯಲ್ಲಿನ ಯೋಜನೆ ವಿಭಾಗದ ಪ್ರಮುಖ ಧ್ಯೇಯ ನಿಯತಕಾಲಿಕ ಪರಿಶೀಲನೆ ಮಾಡುವ ಮೂಲಕ ಮತ್ತು ಸ್ವತ್ತುಗಳ ನಿರ್ವಹಣೆ ಮಾಡುವ ಮೂಲಕ ಕಂಪನಿಯ ಎಲ್ಲಾ ಸ್ವತ್ತುಗಳನ್ನು ಉತ್ತಮ ಸ್ಥಿತಿಯಲ್ಲಿರಿಸುವುದು ಮತ್ತು ಬಳಸಲು ಸಿದ್ಧವಾಗಿರುವ ಸ್ಥಿತಿಯಲ್ಲಿರುವಂತೆ ನೋಡಿಕೊಳ್ಳುವುದು ಮತ್ತು ಎಲ್ಲಾ ಸ್ವತ್ತುಗಳ ಮೇಲುಸ್ತುವಾರಿ ನೋಡಿಕೊಳ್ಳುವುದು.

ಆದರೆ ನಿಯಮಿತವಾಗಿ ಆಸ್ತಿ ತೆರಿಗೆ ಪಾವತಿ ಮಾಡುವ ಮೂಲಕ ಮತ್ತು ಅಗತ್ಯವಿದ್ದಾಗ ಬಾಡಿಗೆ/ಗುತ್ತಿಗೆ ಒಪ್ಪಂದ ಪತ್ರಗಳನ್ನು ನವೀಕರಿಸುವ ಮೂಲಕ ಕಂಪನಿಯ ಎಲ್ಲಾ ಅಂಕಿ ಅಂಶಗಳನ್ನು ಸಕಾಲಿಕಗೊಳಿಸುವ ಜವಾಬ್ದಾರಿಯನ್ನು ಸಹ ಯೋಜನಾ ವಿಭಾಗಕ್ಕೆ ವಹಿಸಲಾಗಿದೆ.

ಕಂಪನಿಯ ಸ್ವತ್ತುಗಳನ್ನು ಯೋಜಿತ ರೀತಿಯಲ್ಲಿ ಮೇಲುಸ್ತುವಾರಿ ಮಾಡುವ ಪ್ರಕ್ರಿಯೆಯಲ್ಲಿ ತೊಡಗಿದೆ ಮತ್ತು ಬೆಂಗಳೂರಿನ ಕನ್ನಿಂಗ್ ಹ್ಯಾಂ ರಸ್ತೆಯಲ್ಲಿರುವ ಪ್ರಧಾನ ಕಚೇರಿ ಕಟ್ಟಡದ ದುರಸ್ತಿ ಕೆಲಸಗಳ ಜೊತೆಗೆ ಮಲ್ಲೇಶ್ವರಂನಲ್ಲಿ ಅರೆ ವಾಣಿಜ್ಯ ಕಟ್ಟಡ ನಿರ್ಮಾಣ ಕಾರ್ಯವನ್ನು ಕೈಗೊಂಡಿದೆ.

**28. ನಿರ್ದೇಶಕರ ಹೊಣೆಗಾರಿಕೆ ವಿವರ:**

ತಮ್ಮ ತಿಳುವಳಿಕೆ ಮತ್ತು ನಂಬಿಕೆಯಂತೆ ಮತ್ತು ಅವರು ಪಡೆದುಕೊಂಡಿರುವ ಮಾಹಿತಿ ಮತ್ತು ವಿವರಣೆಯ ಅನುಸಾರ ಕಂಪನಿಗಳ ಕಾಯ್ದೆ, 2013ರ ಪ್ರಕರಣ 134ರ ಉಪ-ಪ್ರಕರಣ (3)ರ ಕಲಂ (ಸಿ) ಅನ್ವಯ ನಿಮ್ಮ ನಿರ್ದೇಶಕರು ಈ ಕೆಳಕಂಡ ವಿವರಗಳನ್ನು ನೀಡುವರು, ಅವುಗಳೆಂದರೆ:-

(ಎ) 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವುದರಲ್ಲಿ ವಾಸ್ತವಿಕ ಕಾರ್ಯಾಚರಣೆಗೆ ಸಂಬಂಧಿಸಿದಂತೆ ಸೂಕ್ತ ವಿವರಣೆಗಳ ಜೊತೆಗೆ ಅನ್ವಯವಾಗುವ ಲೆಕ್ಕಪತ್ರಗಳ ಮಾನದಂಡಗಳನ್ನು ಅನುಸರಿಸಲಾಗಿದೆ;

(ಬಿ) ನಿರ್ದೇಶಕರು ಅಂತಹ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡಿದ್ದು, ಅವುಗಳನ್ನು ನಿರಂತರವಾಗಿ ಅನ್ವಯಿಸಿದ್ದಾರೆ ಮತ್ತು 31ನೇ ಮಾರ್ಚ್ 2024ರಂದು ಇದ್ದಂತೆ ಕಂಪನಿಯ ವ್ಯವಹಾರಗಳ ಸ್ಥಿತಿಗತಿಯ ಬಗ್ಗೆ ಮತ್ತು ಸದರಿ ಅವಧಿಯಲ್ಲಿನ ಕಂಪನಿಯ ಲಾಭ ಮತ್ತು ನಷ್ಟದ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡಲು ಸೂಕ್ತವಾದ ಹಾಗೂ ಯುಕ್ತವಾದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಿರುವರು;

(ಸಿ) ಕಂಪನಿಯ ಆಸ್ತಿಗಳನ್ನು ಸಂರಕ್ಷಿಸಲು ಮತ್ತು ವಂಚನೆ ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು ಸದರಿ ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಲೆಕ್ಕಪತ್ರಗಳ ದಾಖಲೆಗಳ ನಿರ್ವಹಣೆಗೆ ನಿರ್ದೇಶಕರು ಸೂಕ್ತವಾದ ಮತ್ತು ಸಮಗ್ರವಾದ ಮುತುವರ್ಜಿ ವಹಿಸಿದ್ದಾರೆ;

(ಡಿ) ನಿರ್ದೇಶಕರು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದ ವಾರ್ಷಿಕ ಲೆಕ್ಕಪತ್ರವನ್ನು ಪ್ರಗತಿಯಲ್ಲಿರುವ ಸಂಸ್ಥೆಯ ಆಧಾರದ ಮೇಲೆ ಸಿದ್ದಪಡಿಸಿದ್ದಾರೆ; ಮತ್ತು

(ಇ) ಅನ್ವಯವಾಗುವ ಎಲ್ಲಾ ಕಾನೂನುಗಳ ಉಪಬಂಧಗಳನ್ನು ಅನುಸರಿಸಿರುವುದನ್ನು ಖಾತರಿಪಡಿಸಲು ನಿರ್ದೇಶಕರು ಸೂಕ್ತವಾದ ವ್ಯವಸ್ಥೆಯನ್ನು ರೂಪಿಸಿರುವರು ಮತ್ತು ಆ ವ್ಯವಸ್ಥೆಗಳು ಸಾಕಷ್ಟು ಪ್ರಮಾಣದಲ್ಲಿದ್ದು, ಸಮರ್ಥವಾಗಿ ಕಾರ್ಯಾಚರಣೆಯಾಗುತ್ತಿವೆ.

**29. ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ಹಣದ ವರ್ಗಾವಣೆ:**

ನಿಮ್ಮ ಕಂಪನಿಯು ಕಳೆದ ಏಳು ವರ್ಷಗಳ ಅವಧಿಯಲ್ಲಿ ಪಾವತಿಯಾಗದೆ ಅಥವಾ ಕೇಳುವುವವರಿಲ್ಲದೆ ಹಾಗೆಯೇ ಉಳಿದಿರುವ ಯಾವುದೇ ಹಣವನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ, ಹೂಡಿಕೆದಾರರ ಶಿಕ್ಷಣಕ್ಕೆ ಮತ್ತು ರಕ್ಷಣೆ ನಿಧಿಗೆ (ಐಇಪಿಎಫ್) ವರ್ಗಾಯಿಸಬೇಕಾದ ಯಾವುದೇ ನಿಧಿ ಇರುವುದಿಲ್ಲ.

**30. ಕೃತಜ್ಞತೆಗಳು**

ಕಂಪನಿಗೆ ಅಮೂಲ್ಯವಾದ ಮಾರ್ಗದರ್ಶನ, ಸಹಕಾರ ಮತ್ತು ಬೆಂಬಲ ನೀಡಿದ್ದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ, ಅದರಲ್ಲೂ ವಿಶೇಷವಾಗಿ ವಾಣಿಜ್ಯ

ಮತ್ತು ಕೈಗಾರಿಕೆ ಇಲಾಖೆ, ಹಣಕಾಸು ಇಲಾಖೆ, ಮೆ|| ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಮತ್ತು ಅಭಿವೃದ್ಧಿ ನಿಗಮ ನಿಯಮಿತ, ಮುಖ್ಯಸ್ಥರುಗಳು, ಸರಬರಾಜುದಾರರು, ಬ್ಯಾಂಕರುಗಳು, ಗ್ರಾಹಕರುಗಳಿಗೆ ಹಾಗೂ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು, ಪ್ರಧಾನ ಮಹಾಲೇಖಪಾಲರು (ಸಿವಿಲ್ ಮತ್ತು ವಾಣಿಜ್ಯ ಲೆಕ್ಕಪರಿಶೋಧನೆ), ಕರ್ನಾಟಕ ಇವರಿಗೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು, ಸೆಕ್ರೆಟೇರಿಯಲ್ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರಿಗೂ ಹಾಗೂ ಇತರೆ ಉತ್ತರದಾಯಿಗಳಿಗೆ ನಮ್ಮ ನಿರ್ದೇಶಕರು ಕೃತಜ್ಞತಾ ಪೂರ್ವಕ ವಂದನೆಗಳನ್ನು ಸಲ್ಲಿಸುವರು.

ನಿಮ್ಮ ಕಂಪನಿಯ ಎಲ್ಲಾ ಮಟ್ಟದ ನೌಕರರು ಕಂಪನಿಯ ಪ್ರಗತಿಗೆ ಸಲ್ಲಿಸಿರುವ ಕೊಡುಗೆಯನ್ನು ನಿಮ್ಮ ನಿರ್ದೇಶಕರು ಸ್ಮರಿಸುವರು.

**ನಿರ್ದೇಶಕರ ಮಂಡಳಿಯ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ಸಿ.ಪುಟ್ಟರಂಗ ಶೆಟ್ಟಿ)**
**ಅಧ್ಯಕ್ಷರು**

ಸ್ಥಳ : ಬೆಂಗಳೂರು
ದಿನಾಂಕ: 10ನೇ ಸೆಪ್ಟೆಂಬರ್ 2024

| ಅನುಬಂಧ ಪರಿವಿಡಿ | |
|---|---|
| **ಅನುಬಂಧ** | **ವಿವರಗಳು** |
| I | ಸಹಾಯಕ ಕಂಪನಿಗಳ ವಿವರಗಳು–ಎಒಸಿ–1 |
| II | ಸಿಎಸ್‌ಆರ್ ಚಟುವಟಿಕೆಗಳ ಮೇಲಿನ ವಾರ್ಷಿಕ ವರದಿ |
| III | ಎಂಆರ್–3 ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿ |

## ಅನುಬಂಧ-I

## ಫಾರಂ ಎಒಸಿ-1

## ಸಹಾಯಕ ಕಂಪನಿಗಳು/ಸಹವರ್ತಿ ಕಂಪನಿಗಳು/ಸಹಭಾಗಿ ಉದ್ಯಮಗಳ ಹಣಕಾಸು ಹೇಳಿಕೆಗಳ ವೈಶಿಷ್ಟ್ಯತೆಯನ್ನು ಒಳಗೊಂಡ ವಿವರ

### ಭಾಗ ಎ : ಸಹಾಯಕ ಕಂಪನಿಗಳು

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಸಹಾಯಕ ಕಂಪನಿ ಹೆಸರು | ವರದಿ ಅವಧಿ | ವರದಿಯಲ್ಲಿ ಬಳಸಿರುವ ಕರೆನ್ಸಿ | ಷೇರು ಬಂಡವಾಳ (ಆದ್ಯತಾ ಷೇರು ಸೇರಿ) | ಮೀಸಲುಗಳು ಮತ್ತು ಹೆಚ್ಚಳಗಳು | ಒಟ್ಟು ಆಸ್ತಿ | ಒಟ್ಟು ಹೊಣೆಗಾರಿಕೆಗಳು (ಷೇರು ಬಂಡವಾಳ ಮತ್ತು ಮೀಸಲು ಹೊರತುಪಡಿಸಿ) | ಹೂಡಿಕೆಗಳು | ವಹಿವಾಟು | ಇತರೆ ಆದಾಯ | ಒಟ್ಟು ಆದಾಯ | ತೆರಿಗೆಗೆ ಮುಂಚಿನ ಲಾಭ/ ನಷ್ಟ | ತೆರಿಗೆಗಾಗಿ ಮುನ್ನೇರ್ಪಾಡು (ಮುಂದೂಡಿದ ತೆರಿಗೆ ಸೇರಿ) | ತೆರಿಗೆ ನಂತರದ ಲಾಭ/ (ನಷ್ಟ) | ಈಕ್ವಿಟಿ ಷೇರುಗಳ ಮೇಲೆ ಉದ್ದೇಶಿತ ಲಾಭಾಂಶ ಶೇ. | ಈಕ್ವಿಟಿ ಷೇರುಗಳ ಮೇಲೆ ಪ್ರಸ್ತಾಪಿತ ಲಾಭಾಂಶ | ಷೇರುದಾರಿಕೆ ಶೇಕಡವಾರು |
|---|---|---|---|---|---|---|---|---|---|---|---|---|---|---|---|---|---|
| 1 | ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 31.03.2024 | ಭಾರತದ ರೂಪಾಯಿ | 357.25 | 20477.17 | 46405.07 | 25571.65 | - | 38710.92 | 956.81 | 39667.73 | 2550.85 | 788.18 | 1762.81 | - | - | 100% |
| 2 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 31.03.2024 | ಭಾರತದ ರೂಪಾಯಿ | 75.74 | (816.94) | 147.30 | 888.50 | - | - | 6.89 | 6.89 | 32.41 | 13.96 | 18.45 | - | - | 95.10% |

### ಅನುಬಂಧ-II

### ಸಿಎಸ್‌ಆರ್ ಚಟುವಟಿಕೆಗಳ ಬಗ್ಗೆ ವಾರ್ಷಿಕ ವರದಿ

### (ಕಂಪನಿಗಳ ಕಾಯ್ದೆ-2013ರ ಪ್ರಕರಣ 135ರ ಅನ್ವಯ)

**1. ಕಂಪನಿಯ ಸಿಎಸ್‌ಆರ್ ನೀತಿಯ ಸಂಕ್ಷಿಪ್ತ ವಿವರ:** ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಉಪಬಂಧಗಳು ಮತ್ತು ಕಂಪನಿಗಳ (ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ) ನಿಯಮಗಳು 2014ರ ಅನ್ವಯ, ಕಂಪನಿಯು ಸಿಎಸ್‌ಆರ್ ಚಟುವಟಿಕೆಗಳ ಬಗ್ಗೆಗಿನ ನೀತಿಯನ್ನು ರೂಪಿಸಿದೆ. ಕೈಗೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳನ್ನು ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-VII ರ ಅನುಸಾರ ಹಮ್ಮಿಕೊಳ್ಳಲಾಗುವುದು. ಇವು ಸಿಎಸ್‌ಆರ್ ನೀತಿಯಲ್ಲಿ ಕ್ರಮವಾಗಿ ಸೇರ್ಪಡೆಯಾಗಿರುವವು ಮತ್ತು ನಮ್ಮ ಎಲ್ಲಾ ಕಾರ್ಯಕ್ರಮಗಳಿಗೆ ಮಾರ್ಗದರ್ಶಿ ನೀತಿಗಳಾಗಿರುವವು.

**2. ಸಿಎಸ್‌ಆರ್ ಸಮಿತಿಯ ಸಂರಚನೆ**

| ಕ್ರ. ಸಂ | ನಿರ್ದೇಶಕರ ಹೆಸರು | ಪದನಾಮ/ನಿರ್ದೇಶಕತ್ವದ ಸ್ವರೂಪ | ವರ್ಷದ ಅವಧಿಯಲ್ಲಿ ನಡೆಸಿರುವ ಸಿಎಸ್‌ಆರ್ ಸಮಿತಿ ಸಭೆಗಳ ಸಂಖ್ಯೆ | ವರ್ಷದ ಅವಧಿಯಲ್ಲಿ ಹಾಜರಾಗಿದ್ದ ಸಿಎಸ್ ಆರ್ ಸಮಿತಿ ಸಭೆಗಳ ಸಂಖ್ಯೆ |
|---|---|---|---|---|
| 1 | ಶ್ರೀ ಮನೋಜ್‌ಕುಮಾರ್, ಐ.ಎಫ್.ಎಸ್. | ವ್ಯವಸ್ಥಾಪಕ ನಿರ್ದೇಶಕರು | 1 | 1 |
| 2 | ಡಾ. ಬಿ.ಸಿ. ಸತೀಶ್, ಐ.ಎ.ಎಸ್ | ಸದಸ್ಯರು | 1 | 1 |
| 3 | ಶ್ರೀ ಕೆ.ನಿತೀಶ್, ಐ.ಎ.ಎಸ್ | ಸದಸ್ಯರು | 1 | 1 |
| 4 | ಶ್ರೀ ಆರ್.ರಮೇಶ್ | ಸದಸ್ಯರು | 1 | 1 |

3. **ವೆಬ್-ಲಿಂಕ್ (ಎಸ್) ಮಂಡಳಿಯಿಂದ ಅನುಮೋದಿತವಾಗಿರುವ ಸಿಎಸ್‌ಆರ್ ಸಮಿತಿ ಸಂಯೋಜನೆ, ಸಿಎಸ್‌ಆರ್ ನೀತಿ ಮತ್ತು ಸಿಎಸ್‌ಆರ್ ಯೋಜನೆಗಳನ್ನು ಕಂಪನಿಯ ವೆಬ್‌ಸೈಟ್‌ನಲ್ಲಿ ಪ್ರಕಟಪಡಿಸಿದೆ.**

i. ಸಿಎಸ್‌ಆರ್ ಸಮಿತಿ ಸಂಯೋಜನೆ: **https://www.msilonline.com/committee-of-the board**

ii. ಸಿಎಸ್‌ಆರ್ ನೀತಿ: **https://www.msilonline.com/csr-policy**

iii. ಮಂಡಳಿಯು ಅನುಮೋದಿಸಿರುವ ಸಿಎಸ್‌ಆರ್ ಯೋಜನೆಗಳು: **https://www.msilonline.com/csr-contributions**

4. ಅನ್ವಯವಾದಲ್ಲಿ ನಿಯಮ 8ರ ಉಪ ನಿಯಮ (3)ರ ಅನ್ವಯ ನಡೆದಿರುವ ಸಿಎಸ್‌ಆರ್ ಯೋಜನೆಗಳ ಪರಿಣಾಮದ ನಿರ್ಧರಣೆಯ ವೆಬ್-ಲಿಂಕ್ (ಗಳ) ಜೊತೆಗೆ ಕಾರ್ಯನಿರ್ವಾಹಕ ಸಾರಾಂಶ ನೀಡಿ:

ಕಂಪನಿಯು ತಕ್ಷಣದ ಹಿಂದಿನ ಮೂರು ಹಣಕಾಸಿನ ವರ್ಷಗಳಲ್ಲಿ ರೂ.10 ಕೋಟಿ ಅಥವಾ ಅದಕ್ಕೂ ಹೆಚ್ಚಿನ ಸಿಎಸ್‌ಆರ್ ಹೊಣೆಗಾರಿಕೆಯನ್ನು ಹೊಂದಿರದ ಪ್ರಯುಕ್ತ ಸಿಎಸ್‌ಆರ್ ಯೋಜನೆಗಳ ಮೇಲಿನ ಪರಿಣಾಮ ನಿರ್ಧರಣೆಯು ಕಂಪನಿಗೆ ಅನ್ವಯವಾಗುವುದಿಲ್ಲ.

5. (ಎ) ಪ್ರಕರಣ 135ರ ಉಪ-ಪ್ರಕರಣ(5)ರ ಅನ್ವಯ ಕಂಪನಿಯ ಸರಾಸರಿ ನಿವ್ವಳ ಲಾಭ ರೂ.7815.35 ಲಕ್ಷಗಳು.

(ಬಿ) ಪ್ರಕರಣ 135ರ ಉಪ ಪ್ರಕರಣ(5)ರ ಅನ್ವಯ ಕಂಪನಿಯ ಸರಾಸರಿ ನಿವ್ವಳ ಲಾಭದ ಶೇಕಡ ಎರಡರಷ್ಟು: ರೂ.156.31 ಲಕ್ಷಗಳು.

(ಸಿ) ಹಿಂದಿನ ಹಣಕಾಸಿನ ವರ್ಷಗಳಲ್ಲಿನ ಸಿಎಸ್‌ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗಿರುವ ಹೆಚ್ಚುವರಿ: ಇಲ್ಲ

(ಡಿ) ಹಣಕಾಸಿನ ವರ್ಷದಲ್ಲಿ ಯಾವುದೇ ಇದ್ದಲ್ಲಿ ವಜಾ ಮಾಡಬೇಕಾಗಿರುವ ಮೊತ್ತ : ರೂ.10.83 ಲಕ್ಷ

(ಇ) ಹಣಕಾಸಿನ ವರ್ಷದಲ್ಲಿ ಒಟ್ಟು ಸಿಎಸ್‌ಆರ್‌ನ ಹೊಣೆಗಾರಿಕೆ [(ಬಿ)+(ಸಿ)-(ಡಿ)]: ರೂ.145.48 ಲಕ್ಷಗಳು

6. (ಎ) ಸಿಎಸ್‌ಆರ್ ಯೋಜನೆಗಳ ಮೇಲೆ ಖರ್ಚು ಮಾಡಿರುವ ಮೊತ್ತ (ನಡೆಯುತ್ತಿರುವ ಯೋಜನೆ ಮತ್ತು ನಡೆಯುತ್ತಿರುವ ಯೋಜನೆಯ ಹೊರತಾದದು ಸೇರಿದಂತೆ ಎರಡೂ): ರೂ.147.90 ಲಕ್ಷಗಳು

(ಬಿ) ಆಡಳಿತಾತ್ಮಕ ಮೇಲ್ವೆಚ್ಚಗಳಿಗೆ ಖರ್ಚು ಮಾಡಿರುವ ಮೊತ್ತ : ಇಲ್ಲ

(ಸಿ) ಅನ್ವಯವಾದಲ್ಲಿ, ಪರಿಣಾಮ ನಿರ್ಧರಣೆ ಬಗ್ಗೆ ಖರ್ಚು ಮಾಡಿರುವ ಮೊತ್ತ : ಇಲ್ಲ

(ಡಿ) ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ : [(ಎ)+(ಬಿ)+(ಸಿ)]: ರೂ.147.90 ಲಕ್ಷಗಳು

(ಇ) ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಅಥವಾ ಖರ್ಚು ಮಾಡದಿರುವ ಸಿಎಸ್‌ಆರ್ ಮೊತ್ತ :

| ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ (ರೂ.ಗಳಲ್ಲಿ) (ಲಕ್ಷಗಳಲ್ಲಿ) | ಖರ್ಚು ಮಾಡದಿರುವ ಮೊತ್ತ (ರೂ.ಗಳಲ್ಲಿ) ಪ್ರಕರಣ 135ರ ಉಪ ಪ್ರಕರಣ (6)ರನ್ವಯ ಖರ್ಚು ಮಾಡಿರದ ಸಿಎಸ್‌ಆರ್ ಖಾತೆಗೆ ವರ್ಗಾಯಿಸಿರುವ ಒಟ್ಟು ಮೊತ್ತ | | ಪ್ರಕರಣ 135ರ ಉಪ ಪ್ರಕರಣ (5)ರ ದ್ವಿತೀಯ ಉಪಬಂಧದ ಅನ್ವಯ ಪರಿಚ್ಛೇದ-vii ರ ಅನ್ವಯ ನಿರ್ದಿಷ್ಟಪಡಿಸಿರುವ ಯಾವುದೇ ನಿಧಿಗೆ ವರ್ಗಾವಣೆ ಮಾಡಿರುವ ಮೊತ್ತ | | |
|---|---|---|---|---|---|
| | ಮೊತ್ತ | ವರ್ಗಾಯಿಸಿದ ದಿನಾಂಕ | ನಿಧಿಯ ಹೆಸರು | ಮೊತ್ತ | ವರ್ಗಾವಣೆಯ ದಿನಾಂಕ |
| 147.9 | – | – | – | – | – |

ಎಫ್. ಯಾವುದೇ ಇದ್ದಲ್ಲಿ, ಸರಿಹೊಂದಿಸಲು ಇಟ್ಟಿರುವ (Set-off) ಹೆಚ್ಚುವರಿ ಮೊತ್ತ :

| ಕ್ರ.ಸಂ. | ವಿವರಗಳು | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| i | ಪ್ರಕರಣ 135ರ ಉಪ ಪ್ರಕರಣ (5)ರ ಅನ್ವಯ ಕಂಪನಿಯ ಒಟ್ಟಾರೆ ನಿವ್ವಳ ಲಾಭದ ಶೇಕಡ ಎರಡಷ್ಟು | 156.31 |
| ii | ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಒಟ್ಟು ಮೊತ್ತ | 147.90 |
| iii | ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿದ ಹೆಚ್ಚುವರಿ ಮೊತ್ತ [(ii)–(i)] | (8.41) |
| iv | ಯಾವುದೇ ಇದ್ದಲ್ಲಿ, ಹಿಂದಿನ ಹಣಕಾಸಿನ ವರ್ಷಗಳ ಸಿಎಸ್‌ಆರ್ ಯೋಜನೆಗಳು ಅಥವಾ ಕಾರ್ಯಕ್ರಮಗಳು ಅಥವಾ ಚಟುವಟಿಕೆಗಳಿಂದ ಉಂಟಾಗಿರುವ ಹೆಚ್ಚುವರಿ ಮೊತ್ತ | 10.83 |
| v | ಮುಂಬರುವ ಹಣಕಾಸಿನ ವರ್ಷಗಳಿಗೆ ಸರಿಹೊಂದಿಸಲು ದೊರೆಯುವ ಮೊತ್ತ [(iii)–(iv)] | 2.42 |

7. ಹಿಂದಿನ ಮೂರು ಹಣಕಾಸಿನ ವರ್ಷಗಳಲ್ಲಿ ಖರ್ಚು ಮಾಡಿರದ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಮೊತ್ತದ ವಿವರ:

| (1) | (2) | (3) | (4) | (5) | (6) | | (7) |
|---|---|---|---|---|---|---|---|
| ಕ್ರ. ಸಂ. | ಹಿಂದಿನ ಹಣಕಾಸಿನ ವರ್ಷ(ಗಳು) | ಪ್ರಕರಣದ 135ರ ಉಪ ಪ್ರಕರಣ (6) ರ ಅನ್ವಯ ಖರ್ಚು ಮಾಡಿರದ ಸಿಎಸ್‌ಆರ್ ಖಾತೆಗೆ ವರ್ಗಾಯಿಸಿರುವ ಮೊತ್ತ (ರೂ.ಗಳಲ್ಲಿ) | ಪ್ರಕರಣ 135ರ ಉಪ ಪ್ರಕರಣ (6) ರ ಅನ್ವಯ ಖರ್ಚು ಮಾಡಿರದ ಸಿಎಸ್ ಆರ್ ಖಾತೆಯಲ್ಲಿ ಉಳಿದಿರುವ ಮೊತ್ತ (ರೂ.ಗಳಲ್ಲಿ) | ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿರುವ ಮೊತ್ತ (ರೂ.ಗಳಲ್ಲಿ) | ಹಣಕಾಸಿನ ವರ್ಷದಲ್ಲಿ ಖರ್ಚು ಮಾಡಿದ ಮೊತ್ತ (ರೂ.ಗಳಲ್ಲಿ) ಯಾವುದೇ ಇದ್ದಲ್ಲಿ ಪ್ರಕರಣ 135ರ ಉಪ ಪ್ರಕರಣ(5)ರ ದ್ವಿತೀಯ ಉಪಬಂಧದ ಅನ್ವಯ ಪರಿಚ್ಛೇದ (vii) ಅಡಿಯಲ್ಲಿ ನಿರ್ದಿಷ್ಟಪಡಿಸಿರುವಂತೆ ನಿಧಿಗೆ ವರ್ಗಾವಣೆ ಮಾಡಿರುವ ಮೊತ್ತ | | ಮುಂದಿನ ಹಣಕಾಸಿನ ವರ್ಷಗಳಲ್ಲಿ ಖರ್ಚು ಮಾಡಲು ಉಳಿದ ಮೊತ್ತ (ರೂ.ಗಳಲ್ಲಿ) |
| | | | | | ಮೊತ್ತ (ರೂ. ಗಳಲ್ಲಿ) | ವರ್ಗಾವಣೆ ದಿನಾಂಕ | |
| 1 | ಹಣಕಾಸಿನ ವರ್ಷ:1 22-23 | – | – | – | – | – | – |
| 2 | ಹಣಕಾಸಿನ ವರ್ಷ:2 21-22 | – | – | – | – | – | – |
| 3 | ಹಣಕಾಸಿನ ವರ್ಷ:3 20-21 | – | – | – | – | – | – |

8. ಹಣಕಾಸಿನ ವರ್ಷದಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ಮೂಲಕ ಖರ್ಚು ಮಾಡಿದ ಮೊತ್ತದಿಂದ ಯಾವುದೇ ಬಂಡವಾಳ ಆಸ್ತಿಯನ್ನು ಸೃಜಿಸಲಾಗಿರುವುದೇ ಅಥವಾ ಪಡೆಯಲಾಗಿರುವುದೇ: ಇಲ್ಲ

9. ಪ್ರಕರಣ 135ರ ಉಪ ಪ್ರಕರಣ (5)ರ ಅನ್ವಯ ಒಟ್ಟಾರೆ ನಿವ್ವಳ ಲಾಭದ ಶೇಕಡ ಎರಡರಷ್ಟು ಹಣ ಖರ್ಚು ಮಾಡಲು ಕಂಪನಿ ವಿಫಲವಾಗಿದ್ದಲ್ಲಿ ಅದಕ್ಕೆ ಕಾರಣ (ಗಳು) ತಿಳಿಸಿ: ಇಲ್ಲ

ಸಹಿ/-

(ವ್ಯವಸ್ಥಾಪಕ ನಿರ್ದೇಶಕರು ಮತ್ತು ಸಿಎಸ್‌ಆರ್ ಸಮಿತಿ ಅಧ್ಯಕ್ಷರು)

**ಅನುಬಂಧ-III**

**ಫಾರಂ ಸಂಖ್ಯೆ ಎಂಆರ್-3**

**ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿ**

**2024ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ**

**[ಕಂಪನಿಗಳ ಕಾಯ್ದೆ 2013ರ ಸೆಕ್ಷನ್ 204(1) ಮತ್ತು ಕಂಪನಿಗಳ (ಆಡಳಿತ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ರ ನಿಯಮ ಸಂಖ್ಯೆ 9ರ ಅನ್ವಯ)]**

**ಗೆ,**

**ಸದಸ್ಯರು,**

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**ಬೆಂಗಳೂರು**

ನಾವು ಅನ್ವಯಿತ ಶಾಸನಬದ್ಧ ಮುನ್ನೇರ್ಪಾಡುಗಳ ಅನುಸರಣೆಯ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಹಾಗೂ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**, (U85110KA1966SGC001612) ಎಂಎಸ್ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560052 ಇಲ್ಲಿ ತನ್ನ ನೋಂದಾಯಿತ ಕಚೇರಿ ಹೊಂದಿರುವುದು. (ಇನ್ನು ಮುಂದೆ ಕಂಪನಿ ಎಂದು ಕರೆಯಲಾಗುವುದು) ಉತ್ತಮ ಕಾರ್ಪೊರೇಟ್ ಅಭ್ಯಾಸಗಳ ಅನುಸರಣೆಯ ಅನ್ವಯ ಲೆಕ್ಕಪರಿಶೋಧನೆ ಮಾಡಿದ್ದೇವೆ.

ಕಾರ್ಪೊರೇಟ್ ನಡತೆ/ಶಾಸನಬದ್ಧ ಅನುಸರಣೆ ಮೌಲ್ಯಮಾಪನ ಮಾಡಲು ಮತ್ತು ಆ ಬಗ್ಗೆ ನನ್ನ ಅಭಿಪ್ರಾಯ ತಿಳಿಸಲು ನನಗೆ/ನಮಗೆ ಒದಗಿಸಿರುವ ಸೂಕ್ತವಾದ ಆಧಾರದ ಮೇಲೆ ಅಂತಹ ಸ್ವರೂಪದಲ್ಲಿ ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ಮಾಡಲಾಗಿದೆ.

ಕಂಪನಿಯು ಸರ್ಕಾರಿ ಕಂಪನಿಯಾಗಿದ್ದು, ಇದು ಮುಖ್ಯವಾಗಿ ಪಾನೀಯಗಳು, ಕಾಗದ, ಗ್ರಾಹಕ ಉತ್ಪನ್ನಗಳು, ಕೈಗಾರಿಕಾ ಉತ್ಪನ್ನಗಳು, ಆಮದಾದ ಮರಳು ಮತ್ತು ಫಾರ್ಮಾ ಉತ್ಪನ್ನಗಳ ವ್ಯಾಪಾರ ಚಟುವಟಿಕೆಗಳಲ್ಲಿ ತೊಡಗಿರುವುದಲ್ಲದೆ, ಚಿಟ್ ಫಂಡ್ ವ್ಯವಹಾರ ಮತ್ತು ಟೂರ್ಸ್ ಅಂಡ್ ಟ್ರಾವೆಲ್ಸ್ ವ್ಯವಹಾರಗಳನ್ನು ನಡೆಸುತ್ತಿದೆ. ಕಂಪನಿಯ ಆಂತರ್ ನಿಯಮಾವಳಿಯನುಸಾರ, ಕಂಪನಿ ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಹೊರಡಿಸುವ ನಿರ್ದೇಶನಗಳು ಮತ್ತು ಮಾರ್ಗದರ್ಶನಗಳನ್ನು ಸಹ ಪರಿಪಾಲಿಸಬೇಕಾಗುತ್ತದೆ. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಧಿಸೂಚನೆ ನಂ.ಜಿ.ಎಸ್.ಆರ್. 463(ಇ) ದಿನಾಂಕ: 5ನೇ ಜೂನ್ 2015ರ ಅನುಸಾರ ಸರ್ಕಾರದ ಕಂಪನಿಗಳಿಗೆ ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಕೆಲವೊಂದು ಉಪಬಂಧಗಳ ಅನುಸರಣೆಯಿಂದ ವಿನಾಯಿತಿ ನೀಡಿದೆ.

ಕಂಪನಿಯ ಪುಸ್ತಕಗಳು, ಕಾಗದ ಪತ್ರಗಳು, ಮಿನಿಟ್ ಪುಸ್ತಕಗಳು, ಸಲ್ಲಿಸಿರುವ ಫಾರಂಗಳು ಮತ್ತು ರಿಟರ್ನ್‌ಗಳು ಮತ್ತು ಕಂಪನಿ ನಿರ್ವಹಣೆ ಮಾಡಿರುವ ಇತರೆ ದಾಖಲೆಗಳನ್ನು ನಾನು/ನಾವು ಪರಿಶೀಲಿಸಿದ ಆಧಾರದ ಮೇಲೆ ಮತ್ತು ಕಂಪನಿಯಿಂದ, ಇದರ ಅಧಿಕಾರಿಗಳು, ಏಜೆಂಟರು ಮತ್ತು ಅಧಿಕಾರ ಹೊಂದಿದ ಪ್ರತಿನಿಧಿಗಳು, ಸೆಕ್ರೆಟೇರಿಯಲ್ ಲೆಕ್ಕ ಪರಿಶೋಧನೆ ನಡೆಸುವ ಅವಧಿಯಲ್ಲಿ ಒದಗಿಸಿದ ಮಾಹಿತಿ ಮೇರೆಗೆ, ನಾನು/ನಾವು ಈ ಮೂಲಕ ವರದಿ ಮಾಡುವುದೇನೆಂದರೆ, ನನ್ನ/ನಮ್ಮ ಅಭಿಪ್ರಾಯದಲ್ಲಿ, 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷವನ್ನು ಒಳಪಡಿಸಿಕೊಂಡ ಲೆಕ್ಕ ಪರಿಶೋಧನೆ ಅವಧಿಯಲ್ಲಿ ಕಂಪನಿಯು ಈ ಕೆಳಗೆ ಪಟ್ಟಿ ಮಾಡಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತು ಕಂಪನಿಯು ಗಾತ್ರದ ಸ್ವರೂಪದಲ್ಲಿ ಮತ್ತು ಇಲ್ಲಿ ಇನ್ನು ಮುಂದೆ ಮಾಡಿರುವ ವರದಿಗೆ ಒಳಪಟ್ಟು ಸೂಕ್ತವಾದ ಮಂಡಳಿ ಪ್ರಕ್ರಿಯೆಗಳು ಮತ್ತು ಅನುಸರಣೆ ವ್ಯವಸ್ಥೆ ಹೊಂದಿದೆ.

ಈ ಕೆಳಕಂಡ ಉಪಬಂಧಗಳ ಅನುಸಾರ, 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಲ್ಲಿ ಕಂಪನಿ ನಿರ್ವಹಣೆ ಮಾಡಿರುವ ಪುಸ್ತಕಗಳು, ಕಾಗದ ಪತ್ರಗಳು, ಮಿನಿಟ್ ಪುಸ್ತಕಗಳು, ಸಲ್ಲಿಸಿರುವ ಫಾರಂಗಳು ಮತ್ತು ರಿಟರ್ನ್‌ಗಳು ಹಾಗೂ ಇತರೆ ದಾಖಲೆಗಳನ್ನು ನಾನು/ನಾವು ಪರಿಶೀಲನೆ ಮಾಡಿರುವೆವು:

i) ಕಂಪನಿಗಳ ಕಾಯ್ದೆ, 2013 (ಕಾಯ್ದೆ) ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳು,

ii) ಸೆಕ್ಯೂರಿಟೀಸ್ ಕಾಂಟ್ರಾಕ್ಟ್ (ರೆಗ್ಯುಲೇಷನ್)ಕಾಯ್ದೆ, 1956 ('ಎಸ್‌ಸಿಆರ್‌ಎ') ಮತ್ತು ಇದರಡಿ ಮಾಡಿರುವ ನಿಯಮಗಳು, ಇದು ಪಟ್ಟಿಯಾಗಿರದ ಸಾರ್ವಜನಿಕ ಕಂಪನಿಯಾಗಿರುವುದರಿಂದ ಕಂಪನಿಗೆ ಅನ್ವಯವಾಗುವುದಿಲ್ಲ.

iii) ಡಿಪಾಸಿಟರಿ ಕಾಯ್ದೆ, 1996 ಮತ್ತು ಇದರಡಿ ರೂಪಿಸಿರುವ ನಿಬಂಧನೆಗಳು ಮತ್ತು ಬೈಲಾಗಳು ಕಂಪನಿಯ ಈಕ್ವಿಟಿ ಷೇರುಗಳನ್ನು ಪರಾಮರ್ಶನೆಯಲ್ಲಿರುವ ಲೆಕ್ಕಪರಿಶೋಧನೆ ಅವಧಿಯಲ್ಲಿ ಭೌತಿಕ ರೂಪದಲ್ಲಿ ನಿರ್ವಹಣೆ ಮಾಡುತ್ತಿರುವುದರಿಂದ ಇದು ಕಂಪನಿಗೆ ಅನ್ವಯವಾಗುವುದಿಲ್ಲ.

iv) ಯಾವುದೇ ಇದ್ದಲ್ಲಿ ಸಾಗರೋತ್ತರ ನೇರ ಹೂಡಿಕೆ ಮತ್ತು ಹೊರಗಿನ ವಾಣಿಜ್ಯ ಸಾಲಗಳ ಪ್ರಮಾಣದವರೆಗೆ ವಿದೇಶಿ ವಿನಿಮಯ ನಿರ್ವಹಣೆ ಕಾಯ್ದೆ, 1999 ಮತ್ತು ಇದರಡಿ ಮಾಡಿರುವ ನಿಯಮಗಳು ಮತ್ತು ನಿಬಂಧನೆಗಳು.

**ನಾನು/ನಾವು ಈ ಕೆಳಕಂಡವುಗಳ ಅನ್ವಯವಾಗುವ ವಿಧಿಗಳನ್ನು ಅನುಸರಣೆ ಮಾಡಿರುವುದನ್ನು ಸಹ ಪರಿಶೀಲನೆ ಮಾಡಿರುವೆವು:**

ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ಕಂಪನಿಯು ಮೇಲೆ ತಿಳಿಸಿರುವ ಕಾಯ್ದೆಯ ನಿಬಂಧನೆಗಳು, ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳು, ಮಾನದಂಡಗಳು ಇತ್ಯಾದಿಯನ್ನು ಪರಿಪಾಲಿಸಿದೆ.

ನಾವು ಮುಂದುವರಿದು ವರದಿ ಮಾಡುವುದೇನೆಂದರೆ, ಕಂಪನಿಯ ನಿರ್ದೇಶಕರ ಮಂಡಳಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕರಲ್ಲದ

MSIL

ನಿರ್ದೇಶಕರು ಮತ್ತು ಸ್ವತಂತ್ರ ನಿರ್ದೇಶಕರ ಸರಿಯಾದ ಸಮತೋಲನದೊಡನೆ ಕ್ರಮವಾಗಿ ರಚನೆ ಮಾಡಿದೆ. ಪರಾಮರ್ಶನೆಯಲ್ಲಿರುವ ಅವಧಿಯಲ್ಲಿ ನಡೆದಿರುವ ನಿರ್ದೇಶಕರ ಮಂಡಳಿಯ ಸಂಯೋಜನೆಯಲ್ಲಿನ ಬದಲಾವಣೆಗಳನ್ನು , ಕಾಯ್ದೆಯ ನಿಬಂಧನೆಗಳ ಪರಿಪಾಲನೆಯೊಡನೆ ಮಾಡಲಾಗಿದೆ.

ಮಂಡಳಿ ಸಭೆಗಳನ್ನು ನಡೆಸುವಿಕೆಯನ್ನು ನಿಗದಿಪಡಿಸಲು ಸಾಕಷ್ಟು ಪ್ರಮಾಣದ ನೋಟೀಸ್ ಅನ್ನು ಎಲ್ಲಾ ನಿರ್ದೇಶಕರುಗಳಿಗೆ ನೀಡಲಾಗಿದೆ ಮತ್ತು ಕಾರ್ಯಸೂಚಿ ಮತ್ತು ಕಾರ್ಯಸೂಚಿ ಮೇಲಿನ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚಿತವಾಗಿ ಕಳುಹಿಸಲಾಗಿದೆ, ಮತ್ತು ಸಭೆಗೆ ಮುನ್ನ ಕಾರ್ಯಸೂಚಿ ಐಟಂಗಳ ಬಗ್ಗೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆ ಕೇಳಲು ಮತ್ತು ಪಡೆಯಲು ಮತ್ತು ಸಭೆಯಲ್ಲಿ ಅರ್ಥಪೂರ್ಣವಾಗಿ ಭಾಗವಹಿಸಲು ವ್ಯವಸ್ಥೆ ಒಂದು ಇರುವುದು.

ನಡಾವಳಿಗಳ ಭಾಗವಾಗಿ, ವಿರೋಧಿಸುವ ಸದಸ್ಯರುಗಳ ನಿಲುವುಗಳನ್ನು ತೆಗೆದುಕೊಳ್ಳುವ ಮತ್ತು ದಾಖಲು ಮಾಡುವ ಮೂಲಕ ಬಹುಪಾಲು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ.

ಮುಂದುವರಿದು ನಾವು ವರದಿ ಮಾಡುವುದೇನೆಂದರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು ಮತ್ತು ಮಾರ್ಗಸೂಚಿಗಳ ಮೇಲುಸ್ತುವಾರಿ ಮಾಡಲು ಮತ್ತು ಅವುಗಳ ಅನುಪಾಲನೆ ಬಗ್ಗೆ ಖಾತರಿಪಡಿಸಲು ಕಂಪನಿಯ ಗಾತ್ರ ಮತ್ತು ಕಾರ್ಯಾಚರಣೆಗಳ ಅನುಗುಣವಾಗಿ ಕಂಪನಿಯಲ್ಲಿ ಸಾಕಷ್ಟು ವ್ಯವಸ್ಥೆಗಳು ಮತ್ತು ಕ್ರಮಾವಳಿಗಳಿರುವವು.

ನಾವು ಮುಂದುವರಿದು ವರದಿ ಮಾಡುವುದೇನೆಂದರೆ ಕಂಪನಿಯ ಲೆಕ್ಕಪರಿಶೋಧನೆ ಅವಧಿಯಲ್ಲಿ ವಾರ್ಷಿಕ ಮಹಾಸಭೆ ನಡೆಸುವುದರಲ್ಲಿ ವಿಳಂಬವಾಗಿದೆ ಮತ್ತು ಮೇಲೆ ಉಲ್ಲೇಖಿಸಿರುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳು, ಮಾನದಂಡಗಳು ಇತ್ಯಾದಿ ಅನುಸಾರ ಕಂಪನಿಯ ವ್ಯವಹಾರಗಳ ಮೇಲೆ ಪ್ರಮುಖವಾದ ಹೊಣೆಯುಳ್ಳ ಅಂತಹ ಯಾವುದೇ ಘಟನೆಗಳು/ಕ್ರಮಗಳು ನಡೆದಿರುವುದಿಲ್ಲ.

ಸಾಮಾನ್ಯವಾಗಿ ಗಮನಿಸಿರುವುದೇನೆಂದರೆ ಕಂಪನಿಯು ಸರ್ಕಾರದ ಕಂಪನಿಯಾಗಿರುವುದರಿಂದ ಮತ್ತು ಭಾರತದ ಲೆಕ್ಕ ನಿಯಂತ್ರಕರು ಮಹಾ ಲೆಕ್ಕಪರಿಶೋಧಕರಿಂದ ಲೆಕ್ಕಪರಿಶೋಧನೆಗೆ ಒಳಪಟ್ಟಿರುವುದರಿಂದ, ಅಗತ್ಯವಾದ ಎಲ್ಲಾ ದಾಖಲೆ ಪತ್ರಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಿದೆ ಮತ್ತು ವಿವಿಧ ಅನ್ವಯವಾಗುವ ಕಾನೂನುಗಳ ಅನುಪಾಲನೆಗಾಗಿ ವ್ಯವಸ್ಥೆಗಳನ್ನು ಮತ್ತು ಕ್ರಮಾವಳಿಗಳನ್ನು ರೂಪಿಸಲಾಗಿದೆ.

**ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್ ಪರವಾಗಿ,**

**ಸಹಿ/-**

**ಸ್ವಯಂಭು ಕೇದಾರ್‌ನಾಥ್**

**ಕಂಪನಿ ಕಾರ್ಯದರ್ಶಿ**

**ಸಿ.ಪಿ. ನಂ.4422**

**ದಿನಾಂಕ:9ನೇ ಸೆಪ್ಟೆಂಬರ್ 2024**

**ಸ್ಥಳ: ಬೆಂಗಳೂರು**

ಈ ವರದಿಯನ್ನು ಸೆಕ್ರೆಟೇರಿಯಲ್ ಲೆಕ್ಕಪರಿಶೋಧನೆ ವರದಿಗೆ ಲಗತ್ತಿಸಿರುವಂತೆ ಮತ್ತು ವರದಿಯ ಅವಿಭಾಜ್ಯ ಭಾಗವಾಗಿರುವ ನಮ್ಮ ಪತ್ರದ ಜೊತೆ ಓದಿಕೊಳ್ಳುವುದು.

MSIL

## ಅನುಬಂಧ-''ಎ''

ಸದಸ್ಯರುಗಳಿಗೆ,
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್,

ಮಾನ್ಯರೇ,

ಸಮ ದಿನಾಂಕದ ನಮ್ಮ ವರದಿಯನ್ನು ಸದರಿ ಪತ್ರದ ಜೊತೆಗೆ ಓದಿಕೊಳ್ಳುವುದು.

1. ಸೆಕ್ರೆಟೇರಿಯಲ್ ದಾಖಲೆ ನಿರ್ವಹಣೆಯು ಕಂಪನಿ ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಸದರಿ ಸೆಕ್ರೆಟೇರಿಯಲ್ ದಾಖಲೆಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು.

2. ಸೆಕ್ರೆಟೇರಿಯಲ್ ದಾಖಲೆಗಳ ಒಕ್ಕಣೆಗಳ ನಿಖರತೆ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ಸೂಕ್ತವಾದ ಲೆಕ್ಕಪರಿಶೋಧನೆ ಪದ್ಧತಿಗಳು ಮತ್ತು ಕ್ರಮಗಳನ್ನು ನಾವು ಅನುಸರಿಸಿದ್ದೇವೆ. ಸೆಕ್ರೆಟೇರಿಯಲ್ ದಾಖಲೆಗಳಲ್ಲಿ ಸರಿಯಾದ ಅಂಶಗಳು ಬಿಂಬಿತವಾಗಿದೆ ಎಂಬ ಬಗ್ಗೆ ಖಾತರಿಪಡಿಸಿಕೊಳ್ಳಲು ಪರೀಕ್ಷಾರ್ಥ ಆಧಾರದ ಮೇಲೆ ಪರಿಶೀಲನೆ ಮಾಡಲಾಗಿದೆ. ನಾವು ಅನುಸರಿಸಿರುವ ಕ್ರಮಗಳು ಮತ್ತು ಪದ್ಧತಿಗಳು ನಮ್ಮ ಅಭಿಪ್ರಾಯಕ್ಕೆ ಸೂಕ್ತವಾದ ಆಧಾರ ಒದಗಿಸುತ್ತವೆಂದು ನಾವು ನಂಬಿದ್ದೇವೆ.

3. ಆದಾಯ ತೆರಿಗೆ, ಸೀಮಾ ಸುಂಕ ಮತ್ತು ಕಂಪನಿಗೆ ಅನ್ವಯವಾಗುವ ಇತರೆ ಸಂಬಂಧಪಟ್ಟ ಕಾನೂನುಗಳಿಗೆ ಸಂಬಂಧಿಸಿದ ದಾಖಲೆಗಳೂ ಸೇರಿದಂತೆ ಕಂಪನಿಯ ಹಣಕಾಸಿನ ದಾಖಲೆಗಳು ಮತ್ತು ಲೆಕ್ಕದ ಪುಸ್ತಕಗಳು ಸರಿಯಾಗಿರುವಿಕೆ ಮತ್ತು ಸೂಕ್ತತೆಯನ್ನು ನಾವು ಪರಿಶೀಲಿಸಿರುವುದಿಲ್ಲ.

4. ಅಗತ್ಯವಿರುವಡೆಯಲ್ಲಿ ಕಾನೂನುಗಳು, ನಿಯಮಗಳು, ಮತ್ತು ನಿಬಂಧನೆಗಳ ಅನುಸರಣೆ ಬಗ್ಗೆ ಮತ್ತು ಕಾಲಕಾಲಕ್ಕೆ ಅನ್ವಯವಾಗುವಂತೆ ಘಟನಾವಳಿಗಳು ನಡೆದಿರುವ ಬಗ್ಗೆ ಇತ್ಯಾದಿಯ ಅನುಸರಣೆ ಬಗ್ಗೆ ನಾವು ಆಡಳಿತದ ಮನವಿಯನ್ನು ಪಡೆದಿದ್ದೇವೆ. ಕೈಗಾರಿಕಾ ನಿರ್ದಿಷ್ಟ ಕಾನೂನುಗಳ ಅಡಿಯಲ್ಲಿನ ಅನುಸರಣೆಯನ್ನು ಕಂಪನಿ ಒದಗಿಸಿರುವ ಅನ್ವಯವಾಗುವ ಕಾನೂನುಗಳ ಪಟ್ಟಿಯ ಆಧಾರದ ಮೇಲೆ ಪರಿಶೀಲಿಸಲಾಗಿದೆ.

5. ಕಾರ್ಪೋರೇಟ್ ಮತ್ತು ಇತರೆ ಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಗುಣಮಟ್ಟಗಳ ಉಪಬಂಧಗಳನ್ನು ಅನುಸರಿಸುವುದು ಆಡಳಿತ ವರ್ಗದ ಜವಾಬ್ದಾರಿಯಾಗಿರುವುದು. ಪರೀಕ್ಷಾರ್ಥ ಆಧಾರದ ಮೇಲೆ ಕ್ರಮಾನುಸರಣೆಯನ್ನು ಪರಿಶೀಲಿಸುವುದಕ್ಕೆ ಮಾತ್ರ ನಮ್ಮ ಪರೀಕ್ಷೆ ಸೀಮಿತವಾಗಿರುವುದು.

6. ಸೆಕ್ರೆಟೇರಿಯಲ್ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಮುಂದಿನ ಅಸ್ತಿತ್ವದ ಬಗ್ಗೆಯಾಗಲಿ ಅಥವಾ ಕಂಪನಿಯ ವ್ಯವಹಾರಗಳನ್ನು ಆಡಳಿತ ವರ್ಗ ನಡೆಸಿರುವ ಸಾಮರ್ಥ್ಯ ಮತ್ತು ಪರಿಣಾಮದ ಬಗ್ಗೆಯಾಗಲಿ ಭರವಸೆ ನೀಡುವುದಾಗಿರುವುದಿಲ್ಲ.

**ಎಸ್. ಕೇದಾರ್‌ನಾಥ್ ಅಂಡ್ ಅಸೋಸಿಯೇಟ್ಸ್ ಪರವಾಗಿ,**
**ಸಹಿ/-**
**ಸ್ವಯಂಭು ಕೇದಾರ್‌ನಾಥ್**
**ಕಂಪನಿ ಕಾರ್ಯದರ್ಶಿ**
**ಸಿ.ಪಿ. ನಂ.4422**

**ದಿನಾಂಕ:09ನೇ ಸೆಪ್ಟೆಂಬರ್, 2024**
**ಸ್ಥಳ: ಬೆಂಗಳೂರು**

MSIL

## ಹತ್ತು ವರ್ಷಗಳ ಕಾರ್ಯಕ್ಷಮತೆ

### ಹಿಂದಿನ ಹತ್ತು ಹಣಕಾಸಿನ ವರ್ಷಗಳ ಹಣಕಾಸಿನ ಮುಖ್ಯಾಂಶಗಳು

(ರೂ.ಲಕ್ಷಗಳಲ್ಲಿ)

| ವಿವರಗಳು | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|---|---|---|
| ನಿವ್ವಳ ಮೌಲ್ಯ (ಷೇರು ಬಂಡವಾಳ ಮೀಸಲು) | 26814.97 | 30051.70 | 33190.30 | 33503.15 | 34392.26 | 39996.46 | 45228.55 | 51557.40 | 56545.42 | **65993.73** |
| ಪಾವತಿಸಿದ ಬಂಡವಾಳ | 2017.66 | 2017.66 | 2017.66 | 4273.48 | 4273.48 | 4273.48 | 4273.48 | 4273.48 | 4273.48 | **4273.48** |
| ಷೇರು ಅರ್ಜಿ ಹಣ | 2255.82 | 2255.82 | 2255.82 | - | - | - | - | - | - | **-** |
| ಮೀಸಲು ಮತ್ತು ಹೆಚ್ಚಳ | 22541.49 | 25778.22 | 31172.64 | 29229.68 | 31208.48 | 35722.99 | 40955.07 | 47283.92 | 52271.94 | **61720.25** |
| ನಿವ್ವಳ ಸ್ಥಿರಾಸ್ತಿಗಳು | 5624.66 | 5626.25 | 6225.01 | 6974.83 | 7966.36 | 9590.61 | 9687.76 | 9330.15 | 9974.82 | **9798.95** |
| ವಹಿವಾಟು | 146039.32 | 151490.75 | 161407.69 | 178875.91 | 204763.86 | 227065.31 | 276386.99 | 289947.45 | 317978.34 | **376935.20** |
| ತೆರಿಗೆ ಮುಂಚಿನ ಲಾಭ | 6052.27 | 5400.50 | 5699.87 | 1486.84 | 3237.82 | 4246.68 | 6814.70 | 8290.41 | 8084.08 | **14498.16** |
| ಲಾಭಾಂಶ | 10% | 10% | 10% | - | 5% | 5% | 7.50% | 30.00% | 30.00% | **30.00%** |
| ಲಾಭಾಂಶ ಹಣ ಪಾವತಿ | 242.11 | 242.85 | 237.38 | | 257.59 | 213.67 | 320.51 | 1105.19 | 1827.87 | **3115.91** |
| ತೆರಿಗೆ ನಂತರದ ನಿವ್ವಳ ಗಳಿಕೆ ಪ್ರತಿ ಷೇರಿನ ಗಳಿಕೆಗೆ (ರೂ.ಗಳಲ್ಲಿ) | - | - | - | - | - | - | - | - | - | **782.57** |
| ಷೇರು ಒಂದರ ನಿವ್ವಳ ಗಳಿಕೆ (ರೂ.ಗಳಲ್ಲಿ) | - | 600.00 | 200.00 | 540.80 | 205.41 | 152.25 | 92.00 | 121.60 | 90.66 | **147.90** |
| ತೆರಿಗೆ ನಂತರದ ನಿವ್ವಳ ಗಳಿಕೆ ಪ್ರತಿ ಷೇರಿನ ಗಳಿಕೆಗೆ (ರೂ.ಗಳಲ್ಲಿ) | 166.36 | 178.71 | 181.68 | 12.68 | 46.30 | 61.45 | 127.43 | 167.20 | 142.44 | **243.04** |
| ಷೇರು ಒಂದರ ನಿವ್ವಳ ಗಳಿಕೆ (ರೂ.ಗಳಲ್ಲಿ) | 1217.21 | 1377.63 | 1644.99 | 783.98 | 830.28 | 935.92 | 1058.35 | 1206.45 | 1323.17 | **1544.26** |

## ಹಿಂದಿನ ಹತ್ತು ಹಣಕಾಸಿನ ವರ್ಷಗಳ ಸಂಕ್ಷಿಪ್ತ ಲಾಭ ಮತ್ತು ನಷ್ಟದ ಲೆಕ್ಕ

(ರೂ.ಲಕ್ಷಗಳಲ್ಲಿ)

| ವಿವರಗಳು | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|---|---|---|
| ವಹಿವಾಟು | 146039.32 | 151490.75 | 161407.69 | 178875.91 | 204763.86 | 227065.31 | 276386.99 | 289947.45 | 317978.34 | **376935.20** |
| ಒಟ್ಟು ಆದಾಯ | 14919.86 | 15490.81 | 16453.84 | 17952.46 | 20742.63 | 22446.00 | 27099.20 | 28206.30 | 31267.13 | **38589.32** |
| ಮಾರಾಟ ಮತ್ತು ಆಡಳಿತಾತ್ಮಕ ವೆಚ್ಚಗಳು | 8923.90 | 9636.88 | 10433.61 | 15990.08 | 16723.59 | 16658.51 | 17839.76 | 17113.94 | 21105.65 | **21652.82** |
| ಬಡ್ಡಿ | 48.68 | 145.35 | 2.44 | 0.90 | 33.52 | 0.33 | 1.30 | 39.22 | 4.62 | **2.53** |
| ಸವಕಳಿ | 291.01 | 255.39 | 285.21 | 341.85 | 721.80 | 1495.40 | 1725.69 | 1761.90 | 1834.44 | **1946.94** |
| ಮುನ್ನೇರ್ಪಾಡು/ ವಜಾ | 47.72 | 91.36 | 50.60 | 132.79 | 25.90 | 45.08 | 717.74 | 1000.83 | 245.94 | **488.87** |
| **ಒಟ್ಟು** | **9311.31** | **10128.98** | **10771.86** | **16465.62** | **17504.81** | **18199.32** | **20284.49** | **19915.89** | **23190.65** | **24091.16** |
| ತೆರಿಗೆಗೆ ಮುಂಚಿನ ಲಾಭ | 5608.55 | 5361.83 | 5681.98 | 1486.84 | 3237.82 | 4246.68 | 6814.71 | 8290.41 | 8076.48 | **14498.16** |
| ತೆರಿಗೆಗೆ ಮುನ್ನೇರ್ಪಾಡು | 2252.67 | 1923.22 | 1978.80 | 939.77 | 1153.69 | 1096.79 | 2017.85 | 1950.00 | 2055.00 | **3411.94** |
| ಮುಂದೂಡಲಾದ ತೆರಿಗೆ ಸಾಲ | (0.62) | (167.21) | 37.48 | 5.22 | 105.33 | 524.04 | (648.92) | (308.94) | (71.42) | **(189.96)** |
| ತೆರಿಗೆ ನಂತರದ ಲಾಭ | 3356.50 | 3605.82 | 3665.70 | 541.85 | 1978.80 | 2625.85 | 5445.78 | 6649.35 | 6092.90 | **11276.18** |

## ಹಿಂದಿನ ಹತ್ತು ಹಣಕಾಸಿನ ವರ್ಷಗಳ ಸಂಕ್ಷಿಪ್ತ ಸ್ಥಿತಿ ವಿವರಣಾ ಪಟ್ಟಿ

(ರೂ.ಲಕ್ಷಗಳಲ್ಲಿ)

| ವಿವರಗಳು | 2014-15 | 2015-16 | 2016-17 | 2017-18 | 2018-19 | 2019-20 | 2020-21 | 2021-22 | 2022-23 | 2023-24 |
|---|---|---|---|---|---|---|---|---|---|---|
| ಸ್ವಂತ ನಿಧಿಗಳು | | | | | | | | | | |
| ಷೇರು ಬಂಡವಾಳ | 2017.66 | 2017.66 | 2017.66 | 4273.48 | 4273.48 | 4273.48 | 4273.48 | 4273.48 | 4273.48 | **4273.48** |
| ಷೇರು ಅರ್ಜಿ ಹಣ | 2255.82 | 2255.82 | 2255.82 | - | - | - | - | | - | |
| ಮೀಸಲು ಮತ್ತು ಹೆಚ್ಚಳ | 22541.49 | 25778.22 | 31172.64 | 29229.68 | 31208.48 | 35722.99 | 40955.07 | 47283.92 | 52271.94 | 61720.25 |
| ಒಟ್ಟು | **26814.97** | **30051.70** | **35446.12** | **33503.16** | **35481.96** | **39996.47** | **45228.55** | **51557.40** | **56545.42** | **65993.73** |
| ಸಾಲ ನಿಧಿಗಳು | | | | | | | | | | |
| ಅಲ್ಪಾವಧಿ ಸಾಲ-ಬಡ್ಡಿ | 53.88 | 53.88 | 53.88 | 53.88 | 53.88 | 53.88 | 53.88 | 53.88 | 53.88 | - |
| ನಿಧಿಗಳ ಹೂಡಿಕೆ | 53.88 | 53.88 | 53.88 | 53.88 | 53.88 | 53.88 | 53.88 | 53.88 | 53.88 | - |
| ಒಟ್ಟು | **26868.85** | **30105.58** | **35500.00** | **33557.04** | **35535.84** | **40050.35** | **45282.43** | **51611.28** | **56599.30** | **65993.73** |
| ನಿಧಿಗಳ ಉಪಯೋಗ | | | | | | | | | | |
| ಸ್ಥಿರಾಸ್ತಿಗಳು | 5624.66 | 5626.25 | 6225.01 | 6974.83 | 7966.36 | 9590.61 | 9687.76 | 9330.15 | 9974.82 | **9798.96** |
| ಹೂಡಿಕೆಗಳು | 1336.06 | 1336.51 | 3361.36 | 2900.13 | 2998.03 | 3173.12 | 3406.18 | 3021.36 | 3002.35 | **4192.10** |
| ಮುಂದೂಡಿದ ತೆರಿಗೆ ಆಸ್ತಿ (ನಿವ್ವಳ) | 846.62 | 1013.83 | 976.35 | 971.13 | 865.80 | 341.77 | 990.69 | 1299.62 | 1363.43 | **1553.39** |
| ದುಡಿಮೆ ಬಂಡವಾಳ | 19061.51 | 22128.99 | 24937.28 | 22710.95 | 23705.65 | 26944.85 | 31197.80 | 37960.15 | 42258.70 | **50449.28** |
| ಒಟ್ಟು | **26868.85** | **30105.58** | **35500.00** | **33557.04** | **35535.84** | **40050.35** | **45282.43** | **51611.28** | **56599.30** | **65993.73** |

MSIL

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಲೆಕ್ಕಗಳು (ಸ್ವತಂತ್ರ)

# ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ
## ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಮೇಲಿನ ವರದಿ

### ಅರ್ಹತಾ ಅಭಿಪ್ರಾಯ

ನಾವು **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ** (''ಕಂಪನಿ'') 31ನೇ ಮಾರ್ಚ್ 2024ರಂದು ಇದ್ದಂತೆ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಹೇಳಿಕೆ, ಇತರೆ ಸಮಗ್ರ ಆದಾಯ ಸೇರಿದಂತೆ, ನಗದು ಹರಿಯುವಿಕೆಗಳ ಹೇಳಿಕೆ ಮತ್ತು ಈ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ ಮತ್ತು ವಾಸ್ತವಿಕ ಲೆಕ್ಕ ನಿರ್ವಹಣೆ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡ ಸ್ವತಂತ್ರ ಹಣಕಾಸಿನ ಹೇಳಿಕೆಯ ಲೆಕ್ಕಪರಿಶೋಧನೆ ಮಾಡಿದ್ದೇವೆ. (ಇಲ್ಲಿ ಇನ್ನು ಮುಂದೆ ''ಸ್ವತಂತ್ರ ಹಣಕಾಸಿನ ಹೇಳಿಕೆಗಳು'' ಎಂದು ಪ್ರಸ್ತಾಪಿಸಲಾಗುವುದು)

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ, ನಮ್ಮ ವರದಿಯ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ವಿಭಾಗದಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳ ಹೊರತಾಗಿ, ಮೇಲೆ ತಿಳಿಸಿರುವ ಸ್ವತಂತ್ರ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ 2013ರ (''ಕಾಯ್ದೆ'') ಅನ್ವಯ ಅಗತ್ಯವಾದಂತೆ ಸ್ವರೂಪದಲ್ಲಿ ಮಾಹಿತಿಯನ್ನು ನೀಡುವುದು ಮತ್ತು ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳು; 2015 ಅನ್ನು (''ಐಎನ್‌ಡಿ ಎಎಸ್'') ಓದಿಕೊಂಡಂತೆ ಕಾಯ್ದೆಯ ಪ್ರಕರಣ 133 ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ, 31ನೇ ಮಾರ್ಚ್ 2023ರಂದು ಇದ್ದಂತೆ ಕಂಪನಿಯ ವ್ಯವಹಾರದ ಪರಿಸ್ಥಿತಿ ಮತ್ತು ಅದರ ಲಾಭ, ಇತರೆ ಸಮಗ್ರ ಆದಾಯ, ನಗದು ಹರಿಯುವಿಕೆಗಳು ಮತ್ತು ಆ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವುದು.

ಸಮ ದಿನಾಂಕದಂದು ನಿರ್ದೇಶಕರ ಮಂಡಳಿ ಅಳವಡಿಸಿಕೊಂಡಿರುವಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಬೆಂಗಳೂರಿನಲ್ಲಿ ದಿನಾಂಕ: 27ನೇ ಜೂನ2024ರ ಲೆಕ್ಕಪರಿಶೋಧನಾ ವರದಿ ಒಂದನ್ನು (ಮೂಲ ವರದಿ) ನೀಡಿದ್ದೆವು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143 (6)(ಎ) ಅನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಅಭಿಪ್ರಾಯದ ಅನುಸಾರ, ನಾವು ಸದರಿ ಲೆಕ್ಕಪರಿಶೋಧಕಾ ವರದಿಯನ್ನು ಪರಿಷ್ಕರಣೆ ಮಾಡಿದ್ದೇವೆ. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಮೊದಲು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಎಂದಿತ್ತು) ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನ ಅಡಿಯಲ್ಲಿನ ಕಲಂ (ಎಫ್), (ಜಿ) ಹೊರತುಪಡಿಸಿ ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿನ ವರದಿಯಾಗಿರುವ ಅಂಕಿ ಅಂಶಗಳ ಮೇಲೆ ಪರಿಷ್ಕೃತ ವರದಿಯು ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯಗಳನ್ನು ಪರಿಗಣಿಸಲು ಸೂಕ್ತವಾಗಿ ಪರಿಷ್ಕರಣೆ ಮಾಡಿರುವ ಸದರಿ ಲೆಕ್ಕ ಪರಿಶೋಧನಾ ವರದಿಯು ಮೂಲ ವರದಿಯನ್ನು ರದ್ದುಗೊಳಿಸುವುದು.

### ಅರ್ಹತಾ ಅಭಿಪ್ರಾಯಕ್ಕೆ ಆಧಾರ

ಎ. ಕಂಪನಿಯು ರಫ್ತು ವಿಭಾಗದಲ್ಲಿ ಈ ವರ್ಷದ ಅವಧಿಯಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ಮಾಡಿರುವುದಿಲ್ಲ. ಆದರೂ, ಹಿಂದಿನ ವರ್ಷ ಭೌತಿಕ ಪರಿಶೀಲನೆ ನಡೆಸಲಾಗಿದ್ದು, ರೂ.347.87 ಲಕ್ಷಗಳ ಮೊತ್ತದ 16565.002 ಎಂ.ಟಿ. ಮರಳು ಕಡಿಮೆಯಿರುವುದು ಕಂಡು ಬಂದಿದೆ. ಸರಕಿನ ತಪಶೀಲು ಕಡಿಮೆಯಾಗಿರುವುದು ಕಂಡು ಬಂದಿದ್ದರೂ ಕಂಪನಿ ಅದನ್ನು ವಜಾಗೊಳಿಸುವುದನ್ನಾಗಲಿ ಅಥವಾ ಪುಸ್ತಕಗಳಲ್ಲಿ ಈ ಮೊದಲು ಮಾಡಿರುವ ಸಂಬಂಧಪಟ್ಟ ಅವಕಾಶವನ್ನಾಗಲಿ ಹಿಂಪಡೆದಿರುವುದಿಲ್ಲ. ಆದ್ದರಿಂದ ಸರಕಿನ ತಪಶೀಲುಗಳನ್ನು ಮತ್ತು ಸರಕಿನ ತಪಶೀಲುಗಳಿಗೆ ಅವಕಾಶಗಳನ್ನು ಈ ಎರಡನ್ನೂ ರೂ.347.87 ಲಕ್ಷಗಳ ಪ್ರಮಾಣಕ್ಕೆ ಅಧಿಕವಾಗಿ ತಿಳಿಸಿದೆ.

ಬಿ. ಚಿಟ್‌ಫಂಡ್ ವಿಭಾಗದಲ್ಲಿ (i)ಸರಿಯಾದ ಆಂತರಿಕ ನಿಯಂತ್ರಣ ಕ್ರಮಗಳು, (ii) ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳ ಸೃಷ್ಟಿಗೆ ಬೆಂಬಲ; (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆಯಾಗಲಿ ಇಲ್ಲದಿರುವುದರಿಂದ, ಹಣಕಾಸಿನ ಹೇಳಿಕೆಗಳ ಮೇಲೆ ಪರಿಣಾಮ ಉಂಟಾಗಬಹುದಾಗಿರುತ್ತದೆ. ಆದರೆ ಅದನ್ನು ತಿಳಿಯಲು ಸಾಧ್ಯವಿರುವುದಿಲ್ಲ.

ಸಿ. ಐಎನ್‌ಡಿ ಎಎಸ್ 109 ಹಣಕಾಸಿನ ಸಾಧನಗಳ ಅನ್ವಯ ಕಂಪನಿಯು ಚಿಟ್‌ಫಂಡ್ ವಿಭಾಗಕ್ಕೆ ನಿರೀಕ್ಷಿತ ಕ್ರೆಡಿಟ್ ನಷ್ಟದ ಮಾದರಿ (ಇಸಿಎಲ್) ಅನ್ವಯ ರೂ.635.91ಲಕ್ಷಗಳ ದುರ್ಬಲತೆ ನಷ್ಟದ ಅವಕಾಶವನ್ನು ಮಾಡಿದೆ. ಆದರೆ, ''ಸುಸ್ತಿಯ (%) ಸಾಧ್ಯತೆ, ನಷ್ಟ ಅವಕಾಶದ ಸುಸ್ತಿ (%) ಮತ್ತು ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳದ ಆಧಾರದಲ್ಲಿ ಹಣಕಾಸಿನ ಆಸ್ತಿಗಳ ವರ್ಗೀಕರಣದ ಆಧಾರ ಮತ್ತು ತತ್ಪರಿಣಾಮವಾಗಿ 12 ತಿಂಗಳ ಇಸಿಎಲ್ ಮತ್ತು ಜೀವಿತಾವಧಿ ಇಸಿಎಲ್‌ನ ನಿರ್ಧರಣೆ ಸೇರಿದಂತೆ ವಿವಿಧ ಮಾನದಂಡಗಳ ನಿಖರತೆ ಮತ್ತು ಯುಕ್ತತೆಯ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದಿರುವುದರಿಂದ, ಇಸಿಎಲ್ ಅವಕಾಶ ಸಾಕಷ್ಟಿರುವಿಕೆ ಬಗ್ಗೆ ಮೌಲ್ಯಮಾಪನ ಮಾಡಲು ಮತ್ತು ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಿಲ್ಲ.

ಡಿ. ಕಂಪನಿಯು, ಟೂರ್ಸ್ ಅಂಡ್ ಟ್ರಾವಲ್ ವಿಭಾಗದಲ್ಲಿ ನಿಷಿ ಫೋರೆಕ್ಸ್

ಅಂಡ್ ಲೀಷರ್ ಲಿಮಿಟೆಡ್‌ಗೆ ರೂ.169.16ಲಕ್ಷಗಳ ಸಂದೇಹಾಸ್ಪದ ಮುಂಗಡಗಳನ್ನು ಒದಗಿಸಿರುವುದಿಲ್ಲ. ಈ ಸಂದೇಹಾಸ್ಪದ ಮುಂಗಡಕ್ಕೆ ವ್ಯವಸ್ಥೆ ಮಾಡದಿರುವುದರಿಂದ ಆ ಅವಧಿಯ ಲಾಭವನ್ನು ಹೆಚ್ಚಿಗೆಯಾಗಿ ತಿಳಿಸಲು ಮತ್ತು ಸರಬರಾಜುದಾರರಿಗೆ ಮುಂಗಡಗಳನ್ನು ರೂ.119.16ಲಕ್ಷಗಳಷ್ಟು ಹೆಚ್ಚಿಗೆಯಾಗಿ ತಿಳಿಸಲು ಕಾರಣವಾಗಿದೆ.

ಇ. ವಿಳಂಬವಾದ ಪಾವತಿಗಾಗಿ ಎಂಎಸ್‌ಎಂಇ ವ್ಯಾಪಾರದ ಪಾವತಿಗಳ ಮೇಲಿನ ಬಡ್ಡಿ ಹೊಣೆಗಾರಿಕೆಯನ್ನು ಎಂಎಸ್‌ಎಂಇ ಕಾಯ್ದೆ, 2006ರ ಅನ್ವಯ ಪಾವತಿ ಮಾಡಬೇಕಿದೆ. ಆದರೂ, ಎಂಎಸ್‌ಎಂಇ ವೆಂಡರ್‌ಗಳಿಂದ ಕಂಪನಿಗೆ ಯಾವುದೇ ಬಡ್ಡಿ ಕೇಳಿಕೆ ಬಾರದಿರುವುದರಿಂದ ಎಂಎಸ್‌ಎಂಇ ವ್ಯಾಪಾರದ ಸಂಬಂಧ ಮಾಡಬೇಕಾಗಿದ್ದ ಪಾವತಿಯು ವಿಳಂಬವಾದ ಅವಧಿಗೆ ಕಂಪನಿ ಬಡ್ಡಿ ಪಾವತಿ ಮಾಡಿರುವುದಿಲ್ಲ. ಮಾಹಿತಿ ಇಲ್ಲದ ಪ್ರಯುಕ್ತ, ಅಂತಹ ಬಡ್ಡಿ ಮೊತ್ತ ಎಷ್ಟು ಎಂಬುದಾಗಿ ತಿಳಿಸಲು ನಮಗೆ ಸಾಧ್ಯವಿಲ್ಲ.

ಎಫ್. ಹಿಂದಿನ ಹಣಕಾಸಿನ ವರ್ಷದ ಕೊನೆಯವರೆಗೆ ಅಲ್ಪಾವಧಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಲಾಗಿದ್ದವುಗಳನ್ನು ಕಂಪನಿಯು ಈ ವರ್ಷದ ಅವಧಿಯಲ್ಲಿ ಐಎನ್‌ಡಿ ಎಎಸ್ 116ರ ಅನ್ವಯ ದೀರ್ಘಾವಧಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಿದೆ. ಇದರಿಂದ ಬಳಕೆ ಹಕ್ಕಿನ ಆಸ್ತಿಗಳಿಗೆ (ಆರ್‌ಒಯು ಆಸ್ತಿಗಳು) ಸೇರ್ಪಡೆಯಾಗಿದೆ ಮತ್ತು ಗುತ್ತಿಜಗೆ ಹೊಣೆಗಾರಿಕೆ ರೂ.1,011.20 ಲಕ್ಷಗಳಷ್ಟು ಹೆಚ್ಚಾಗಿದೆ, ಆರ್‌ಒಯು ಆಸ್ತಿಗಳ ಸವಕಳಿಯು ರೂ.326.34ಲಕ್ಷಗಳಷ್ಟು ಹೆಚ್ಚಳವಾಗಿದೆ. ಮತ್ತು ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ರೂ.49.18 ಲಕ್ಷಗಳಷ್ಟು ಹೆಚ್ಚಳವಾಗಿದೆ. ಐಎನ್‌ಡಿ ಎಎಸ್-8 ಲೆಕ್ಕ ನಿರ್ವಹಣೆ ನೀತಿಗಳೂ, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿನ ಬದಲಾವಣೆಗಳು, ಮತ್ತು ಬಡ್ಡಿ ಮಾಡಬೇಕಾಗಿದ್ದ ಪ್ರಕಟಣೆ ಅಗತ್ಯತೆಯನ್ನು ಕಂಪನಿ ಅನುಸರಣೆ ಮಾಡಿರುವುದಿಲ್ಲ.

ಜಿ. ಹಣಕಾಸಿನ ಟಿಪ್ಪಣಿ 41(ಡಜಿಜಿಜಿ) ರಲ್ಲಿ ಮಾಡಿರುವ ಪ್ರಕಟಣೆಯಲ್ಲಿ ಕಂಪನಿ ಮಾಡಿರುವ ಲೆಕ್ಕ ನಿರ್ವಹಣೆಯ ಬಗ್ಗೆ ಸಂಪೂರ್ಣ ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ.ಲಿ. (''ಬಾಡಿಗೆದಾರ'') ಇವರಿಂದ ವಸೂಲಾಗಬೇಕಾಗಿರುವುದನ್ನು ಮಾನ್ಯ ಮಾಡಿದೆ. ಆದರೆ ಮಾನ್ಯ ಮಾಡಿರುವುದಿಲ್ಲ. ಇತರೆ ಖರ್ಚುಗಳಿಗೆ ವ್ಯವಸ್ಥೆ, ಮಾಡದೆ, ಇದಕ್ಕೆ ರೂ.245.05 ಲಕ್ಷಗಳ ವ್ಯವಸ್ಥೆ ಒದಗಿಸಿದೆ. ಲಾಭ ಮತ್ತು ನಷ್ಟದ ಲೆಕ್ಕದ ಮೂಲಕ ಮಾರ್ಗ ಅನುಸರಣೆ ಮಾಡದೆ ನಮೂದುಗಳನ್ನು ಮಾಡಿದೆ. ಬರಬೇಕಾಗಿರುವವುಗಳನ್ನು ಕಂಪನಿಯು ಸಂದೇಹಾಸ್ಪದ ಎಂಬುದಾಗಿ ಪರಿಗಣಿಸಿರುವುದರಿಂದ ಹಣಕಾಸಿನ ಲಾಭದ ಮೇಲೆ ಯಾವುದೇ ಪರಿಣಾಮ ಉಂಟಾಗದು.

ಎಚ್. ನೆಸ್ಟ್ ವೆಲ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ (''ಗುತ್ತಿಗೆದಾರ'') ಇವರಿಗೆ ಗುತ್ತಿಗೆಗೆ ನೀಡಿರುವ ಮೈಸೂರಿನಲ್ಲಿನ ಉಗ್ರಾಣದ ಬಾಡಿಗೆ ಸಂಬಂಧ ಗುತ್ತಿಗೆದಾರರ ಜೊತೆ ವಿವಾದ ಉಂಟಾಗಿರುವ ಕಾರಣ ಡಿಸೆಂಬರ್ 2021ರಿಂದ ಮಾರ್ಚ್ 2024ರ ವರೆಗಿನ ಅವಧಿಗೆ ಕಂಪನಿಯು ಬಾಡಿಗೆ ಆದಾಯವನ್ನು ಪರಿಗಣಿಸಿರುವುದಿಲ್ಲ. ಕಂಪನಿಯು ಹಣಕಾಸಿನ ಹೇಳಿಕೆಗಳಲ್ಲಿ ಈ ವಿವಾದದ ಬಗ್ಗೆ ಮತ್ತು ವಿವಾದದಿಂದಾಗಿ ಗುತ್ತಿಗೆದಾರನಿಂದ ವಸೂಲಾಗದೆ ಉಳಿದಿರುವ ಬಾಡಿಗೆ ಮೊತ್ತದ ಬಗ್ಗೆ ಕಂಪನಿ ಸೂಕ್ತವಾದ ಪ್ರಕಟಣೆ ಮಾಡಿರುವುದಿಲ್ಲ. 31ನೇ ಮಾರ್ಚ್, 2024ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಗುತ್ತಿಗೆಯಿಂದ ಬಂದ ಬಾಡಿಗೆ ಆದಾಯ ರೂ.41.73 ಲಕ್ಷಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಿರುವುದಿಲ್ಲ. ಪಡೆಯಬೇಕಾದವು ಸಂದೇಹಾಸ್ಪದವೆಂದು ಕಂಪನಿ ಪರಿಗಣಿಸಿರುವುದರಿಂದ ಹಣಕಾಸಿನ ಲಾಭದ ಮೇಲೆ ಇದರಿಂದ ಯಾವುದೇ ಪರಿಣಾಮ ಉಂಟಾಗದು.

### ಮಹತ್ವದ ವಿಚಾರಗಳು

ಎ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.42(iv)ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ ''ಅಮೂಲ್ಯ ಚಂದದಾರರುಗಳಿಂದ ಬರಬೇಕಾಗಿರುವ ಮೊತ್ತದ'' ಸಂಬಂಧದಲ್ಲಿ ರೂ.31618.08 ಲಕ್ಷಗಳ ಮೊತ್ತವನ್ನು ''ಹಣಕಾಸಿನ ಆಸ್ತಿಗಳ ಅಡಿಯಲ್ಲಿನ ಸಾಲಗಳು'' ಎಂಬುದಾಗಿ ವರ್ಗೀಕರಿಸಿದೆ. ಆಮರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಲಾಗಿದೆ. ರೂ.1196.65 ಲಕ್ಷಗಳ ನಿವ್ವಳ ವಾಹಕ ಮೊತ್ತವನ್ನು ಸಮಂಜಸತೆ ಮಾಡಿರದ ಶಿಲ್ಕುಗಳೆಂಬುದಾಗಿ ತಿಳಿಸಿದೆ. ಹಣಕಾಸಿನ ಹೇಳಿಕೆಗಳ ಮೇಲೆ ಇದರ ಪರಿಣಾಮವೇನೆಂದು ತಿಳಿಯಲು ಸಾಧ್ಯವಿಲ್ಲ.

ಬಿ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.42 (ix) ರ ಬಗ್ಗೆ ನಾವು ಗಮನಸೆಳೆಯುವುದೇನೆಂದರೆ, ಕಂಪನಿಯು ಟೂರ್ಸ್ ಅಂಡ್ ಟ್ರಾವಲ್ಸ್ ಸೇವೆಗಳಿಗೆ ಕಂಪನಿ ಕೆಲವು ಮುಂಗಡಗಳನ್ನು ಪಡೆಯಲಾಗಿದೆ ಎಂದು ತಿಳಿಸಿದೆ. ಕಂಪನಿಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಕರ್ನಾಟಕ ಇದರ ಮತ್ತು ಇದಕ್ಕೆ ಸಂಬಂಧಿಸಿಥದ ಸೇವೆ ಪೂರೈಕೆದಾರರುಗಳ ಲೆಕ್ಕಗಳನ್ನು ಸಮಂಜಸತೆ ಮಾಡಬೇಕು. ಕಂಪನಿಯು ಕಾಗದಗಳ ವಿಭಾಗದಲ್ಲಿ ಆರ್‌ಜಿಯುಎಚ್‌ಎಸ್‌ಗೆ ಸರಬರಾಜುಗಳನ್ನು ಸಹ ಮಾಡಿದೆ. ಕಂಪನಿ ಮತ್ತು ಆರ್‌ಜಿಯುಎಚ್‌ಎಸ್ ಹಾಗೂ ಸಂಬಂಧಪಟ್ಟ ಸೇವೆ ಪೂರೈಕೆದಾರರುಗಳ ನಡುವೆ ವಿವಾದ ಉಂಟಾದುದರಿಂದ, ಆರ್‌ಜಿಯುಎಚ್‌ಎಸ್ ಮತ್ತು ಸೇವೆ ಪೂರೈಕೆದಾರರಿಂದ ಬರಬೇಕಾಗಿರುವುದು ಮತ್ತು ಅವರಿಗೆ ಪಾವತಿ ಮಾಡಬೇಕಾಗಿರುವ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗಿದೆ. ಕಂಪನಿಯು ಈ ಸಂಬಂಧ ರೂ.200 ಲಕ್ಷಗಳ ಮೊತ್ತದ ವಸೂಲಾಗದಿರುವ ಮತ್ತು ಸಂದೇಹಾಸ್ಪದವಾಗಿರುವ ಸಾಲಗಳಿಗೆ ವ್ಯವಸ್ಥೆ ಮಾಡಿದೆ. ಸಮಂಜಸತೆ ವಿವರಣೆಗಳಿಲ್ಲದ ಪ್ರಯುಕ್ತ, ಹಣಕಾಸಿನ ಹೇಳಿಕೆಗಳ ಮೇಲೆ ಇದರಿಂದ ಉಂಟಾಗಬಹುದಾದ ಸಾಧ್ಯನೀಯ ಪರಿಣಾಮವನ್ನು ತಿಳಿಯಲಾಗದು.

ಸಿ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.41(vii) ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ ಸಾರಿಗೆ ಬಗ್ಗೆ ಜಿಎಸ್‌ಟಿ ಆರ್‌ಸಿಎಂ ಲೆಕ್ಕದಲ್ಲಿ ''ಬರಬೇಕಾಗಿರುವ ಮರು ಪಾವತಿ ಹಕ್ಕು''

ರೂ.45.98 ಲಕ್ಷಗಳೆಂದು ತಿಳಿಸಿದೆ. ಆದರೆ ಡಿಸೆಂಬರ್ 2020ರವರೆಗೆ ವಾಸ್ತವಿಕ ಹಕ್ಕು ಕೇಳಿಕೆಯು ರೂ.121.42 ಲಕ್ಷಗಳು ಆಗಿರುವುದು. ವ್ಯತ್ಯಾಸದ ಮೊತ್ತ ರೂ.75.44 ಲಕ್ಷವನ್ನು ಹಿಂದಿನ ವರ್ಷಗಳಲ್ಲಿ ಲಾಭ ಮತ್ತು ನಷ್ಟದ ವಿವರಣೆಗೆ ವಿಧಿಸಿದೆ. ಕಂಪನಿಯು ಹಕ್ಕು ಕೇಳಿಕೆಯನ್ನು ಕೇಂದ್ರ ತೆರಿಗೆಯ ಸಹಾಯಕ ಆಯುಕ್ತರು, ಉತ್ತರ ವಿಭಾಗ-3, ಬೆಂಗಳೂರು ಇವರು ತಿರಸ್ಕರಿಸಿರುವರು. ತರುವಾಯ, ಕಂಪನಿಯು ಸಲ್ಲಿಸಿದ್ದ ಮೇಲ್ಮನವಿಯನ್ನು ಸಹ ಜಿಎಸ್‌ಟಿ ಯ ಹೆಚ್ಚುವರಿ ಆಯುಕ್ತರು, ಮೇಲ್ಮನವಿ-II, ಬೆಂಗಳೂರು ಇವರು ತಿರಸ್ಕರಿಸಿದ್ದಾರೆ. ಮುಂದುವರಿದು ಜನವರಿ 2021 ರಿಂದ ಮಾರ್ಚ್ 2024ರ ವರೆಗಿನ ಅವಧಿಗೆ ಸಾರಿಗೆಯ ಮೇಲಿನ ಜಿಎಸ್‌ಟಿ ಆರ್ ಸಿಎಂ ಹೊಣೆಗಾರಿಕೆಯು ರೂ.319.51 ಲಕ್ಷ ಆಗಿದ್ದು, ಇದನ್ನು ಕಂಪನಿ ಪಾವತಿಸಿರುವುದಿಲ್ಲ. ಕಂಪನಿಯ ಪರವಾಗಿ ತೀರ್ಪು ಬರುವ ಅವಕಾಶಗಳು ಅಧಿಕವಾಗಿರುವುದಾಗಿ ತೀರ್ಪು ಬರುವ ಅವಕಾಶಗಳು ಅಧಿಕವಾಗಿರುವುದಾಗಿ ಕಾನೂನು ಸಲಹೆ ಮಾಡಿರುವುದರಿಂದ ಪಡೆಯಬಹುದಾಗಿರುವ ಮರು ಪಾವತಿ ಹಾಗೂ ಹೆಚ್ಚುವರಿ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ.

ಡಿ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.42(II)ರ ಬಗ್ಗೆ ನಾವು ಗಮನಸೆಳೆಯುವುದೇನೆಂದರೆ, ಪಾವತಿ ಮಾಡಬೇಕಿರುವ ಮತ್ತು ಪಡೆಯಬಹುದಾಗಿರುವ ಬಾಕಿಯಿರುವ ಶಿಲ್ಕುಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯಿರುವುದಾಗಿ ವಿವರಿಸಲಾಗಿದೆ. ಶಿಲ್ಕಿನ ದೃಢೀಕರಣಗಳು ಮತ್ತು ಸಮಂಜಸತೆಗಳಿಲ್ಲದಿರುವುದರಿಂದ, ಇದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಯಲಾಗದು.

ಈ ವಿಚಾರದ ಬಗ್ಗೆ ನಮ್ಮ ಅಭಿಪ್ರಾಯವು ಅನ್ವಯವಾಗದು.

ನಾವು ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯನ್ನು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಗುಣಮಟ್ಟಗಳ (ಎಸ್‌ಎಗಳು) ಅನುಸಾರ ನಡೆಸಿದ್ದೇವೆ. ಸದರಿ ಗುಣಮಟ್ಟಗಳ ಅನ್ವಯದ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ವಿಭಾಗದಲ್ಲಿನ ಲೆಕ್ಕಪರಿಶೋಧಕರ ಜವಾಬ್ದಾರಿಗಳಲ್ಲಿ ಇನ್ನೂ ವಿವರವಾಗಿ ತಿಳಿಸಿದೆ. ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ನೀತಿ ಸಂಹಿತೆ ಅನುಸಾರ ಜೊತೆಗೆ ಕಾಯ್ದೆಯ ಉಪಬಂಧಗಳು ಮತ್ತು ಇದರಡಿಯಲ್ಲಿನ ನಿಯಮಗಳ ಅನ್ವಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆಗಿನ ನಮ್ಮ ಲೆಕ್ಕಪರಿಶೋಧನೆ ಸಂಬಂಧಿಸಿದ ನೈತಿಕ ಅಗತ್ಯತೆಗಳ ಅನುಸಾರ ನಾವು ಸ್ವತಂತ್ರರಾಗಿರುವೆವು, ಮತ್ತು ಸದರಿ ಅಗತ್ಯತೆಗಳು ಮತ್ತು ನೀತಿ ಸಂಹಿತೆ ಅನುಸಾರ ನಾವು ನಮ್ಮ ಇತರೆ ನೈತಿಕ ಜವಾಬ್ದಾರಿಗಳನ್ನು ಈಡೇರಿಸಿದ್ದೇವೆ. ನಾವು ಪಡೆದಿರುವ ಲೆಕ್ಕಪರಿಶೋಧನಾ ಪುರಾವೆಗಳು ನಮ್ಮ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಿರುವುದು ಮತ್ತು ಸೂಕ್ತವಾಗಿರುವುದು.

## ಸ್ವತಂತ್ರ ಹಣಕಾಸು ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿ ಸಿದ್ಧಪಡಿಸಲು ಜವಾಬ್ದಾರರಾಗಿರುವರು. ಇತರೆ ಮಾಹಿತಿಯಲ್ಲಿ ಮಂಡಳಿಯ ವರದಿ, ಮಂಡಳಿಯ ವರದಿಗೆ ಅನುಬಂಧ ಒಳಗೊಂಡಿರುವುದು. ಆದರೆ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಸೇರಿರುವುದಿಲ್ಲ. ಸದರಿ ಲೆಕ್ಕಪರಿಶೋಧಕರ ವರದಿ ದಿನಾಂಕದ ನಂತರ ಮಂಡಳಿಯ ವರದಿಯನ್ನು ನಮಗೆ ದೊರಕಿಸಿಕೊಡುವ ನಿರೀಕ್ಷೆಯಿದೆ.

ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಪಡಿಸಿಕೊಂಡಿರುವುದಿಲ್ಲ. ಆದ್ದರಿಂದಾಗಿ ಇದರ ಮೇಲೆ ನಾವು ಯಾವುದೇ ರೀತಿಯ ಭರವಸೆಯ ನಿರ್ಣಯ ವ್ಯಕ್ತಪಡಿಸುವುದಿಲ್ಲ.

ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಯನ್ನು ಓದುವುದಾಗಿರುತ್ತದೆ. ಹಾಗೆ ಮಾಡುವಾಗ ಇತರೆ ಮಾಹಿತಿಯು ಸ್ವತಂತ್ರ ಹಣಕಾಸಿನ ಹೇಳಿಕೆಗಳಿಗೆ ವಾಸ್ತವಿಕವಾಗಿ ಅಸಂಗತವಾಗಿರುವವೇ ಅಥವಾ ಲೆಕ್ಕ ಪರಿಶೋಧನೆಯಲ್ಲಿ ಪಡೆದಿರುವ ನಮ್ಮ ತಿಳುವಳಿಕೆಯು ಅಸಂಗತವಾಗಿರುವುದೇ ಅಥವಾ ವಾಸ್ತವಿಕವಾಗಿ ತಪ್ಪು ನೀಡಲಾಗಿದೆಯೇ ಎಂಬುದನ್ನು ಪರಿಗಣಿಸುವೆವು.

ನಾವು ಮಾಡಿರುವ ಕೆಲಸದ ಆಧಾರದ ಮೇಲೆ ಸದರಿ ಇತರೆ ಮಾಹಿತಿಯು ವಾಸ್ತವಿಕವಾಗಿ ತಪ್ಪು ಹೇಳಿಕೆಯಿಂದ ಕೂಡಿರುವುದು ಎಂದು ನಾವು ನಿರ್ಣಯಿಸುವೆವು. ಹಾಗೆ ಮಾಡಿದಾಗ ನಾವು ಆ ವಾಸ್ತವಾಂಶವನ್ನು ವರದಿ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ನಾವು ವರದಿ ಮಾಡುವುದು ಏನೂ ಇರುವುದಿಲ್ಲ.

ನಾವು ನಿರ್ದೇಶಕರ ವರದಿ ಓದಿದಾಗ ಅದರಲ್ಲಿ ವಾಸ್ತವಿಕ ತಪ್ಪು ಹೇಳಿಕೆ ಇರುವುದೆಂದು ನಾವು ನಿರ್ಧಾರಕ್ಕೆ ಬಂದಿದ್ದೇ ಆದಲ್ಲಿ, ಆ ವಿಚಾರವನ್ನು ಆಡಳಿತ ಜವಾಬ್ದಾರಿ ಹೊಂದಿರುವವರಿಗೆ ನಾವು ತಿಳಿಸಬೇಕಾಗುತ್ತದೆ.

## ಸ್ವತಂತ್ರ ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಜವಾಬ್ದಾರಿ

ಕಂಪನಿಯ ನಿರ್ದೇಶಕರ ಮಂಡಳಿಯು, ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳೂ ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕನಿರ್ವಹಣೆ ನೀತಿಗಳ ಅನುಸಾರ ಕಂಪನಿಯ ಹಣಕಾಸಿನ ಪರಿಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆ, ಮತ್ತು ನಗದು ಹರಿಯುವಿಕೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಈ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಕಂಪನಿಗಳ ಕಾಯ್ದೆಯ ಪ್ರಕರಣ 134(5)ರಲ್ಲಿ ತಿಳಿಸಿರುವ ವಿಚಾರಗಳಿಗೆ ಜವಾಬ್ದಾರಿಯಾಗಿರುವುದು. ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಮಟ್ಟದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡುವುದು ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಬಳಸುವುದು; ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು

ಅಂದಾಜುಗಳನ್ನು ಮಾಡುವುದು; ಮತ್ತು ವಂಚನೆ ಅಥವಾ ತಪ್ಪಿನಿಂದ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳನ್ನು ಸಿದ್ದಪಡಿಸಲು ಮತ್ತು ನಿರೂಪಿಸಲು ಸೂಕ್ತವಾದ ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿ ಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು.

ನಿರ್ದೇಶಕರುಗಳ ಮಂಡಳಿಯು ಕಂಪನಿಯ ಹಣಕಾಸಿನ ವರದಿಗಾರಿಕೆ ಪ್ರಕ್ರಿಯೆಯನ್ನು ಅವಲೋಕಿಸುವ ಜವಾಬ್ದಾರಿ ಹೊಂದಿರುವರು.

### ಸ್ವತಂತ್ರ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳು

ನಮ್ಮ ಧ್ಯೇಯವು ಸ್ವತಂತ್ರ ಹಣಕಾಸಿನ ಹೇಳಿಕೆಗಳು ಒಟ್ಟಾರೆಯಾಗಿ ವಂಚನೆ ಅಥವಾ ತಪ್ಪಿನಿಂದಾಗಲಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವಂತೆ ಸೂಕ್ತವಾದ ಭರವಸೆ ಪಡೆಯುವುದು, ಮತ್ತು ನಮ್ಮ ಅಭಿಪ್ರಾಯ ಒಳಗೊಂಡ ಲೆಕ್ಕ ಪರಿಶೋಧಕರ ವರದಿ ಒಂದನ್ನು ನೀಡುವುದು ಆಗಿರುತ್ತದೆ. ಸೂಕ್ತವಾದ ಭರವಸೆ ಅಂದರೆ ಉನ್ನತ ಮಟ್ಟದ ಭರವಸೆಯಾಗಿರುವುದು. ಆದರೆ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಲೆಕ್ಕಪರಿಶೋಧನೆಯು ಯಾವಾಗಲೂ ವಾಸ್ತವಿಕ ತಪ್ಪು ಹೇಳಿಕೆಗಳೇನಾದರೂ ಇದ್ದಲ್ಲಿ ಅವುಗಳನ್ನು ಪತ್ತೆ ಹಚ್ಚುವುದೆಂಬ ಬಗ್ಗೆ ಖಾತರಿಯಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು. ಅವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಸದರಿ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಂಡ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವುವು ಎಂಬುದಾಗಿ ಸಕಾರಣವಾಗಿ ನಿರೀಕ್ಷಿಸಲಾಗಿದ್ದಲ್ಲಿ ಅವು ವಾಸ್ತವಿಕವಾದವು ಎಂಬುದಾಗಿ ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆ ಗುಣಮಟ್ಟಗಳ (ಎಸ್‌ಎಗಳ) ಅನುಸಾರದ ಅಂಗವಾಗಿ ನಾವು ಲೆಕ್ಕಪರಿಶೋಧನೆ ಕಾರ್ಯದ ಉದ್ದಕ್ಕೂ ವೃತ್ತಿದಾಯಕ ತೀರ್ಮಾನಗಳನ್ನು ಮಾಡುವೆವು ಮತ್ತು ವೃತ್ತಿದಾಯಕ ಸಂದೇಹವನ್ನು ಅನುಸರಿಸುವೆವು. ಇದಲ್ಲದೆ ನಾವು:

- ವಂಚನೆ ಅಥವಾ ತಪ್ಪಿನ ಪ್ರಯುಕ್ತ ಸ್ವತಂತ್ರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸುವೆವು ಮತ್ತು ನಿರ್ಧರಣೆ ಮಾಡುವೆವು. ಅಂತಹ ಅಪಾಯಗಳನ್ನು ನಿಭಾಯಿಸಲು ಪೂರಕವಾದ ಲೆಕ್ಕ ಪರಿಶೋಧನೆ ಕ್ರಮಾವಳಿಗಳನ್ನು ವಿನ್ಯಾಸ ಮಾಡುವೆವು ಮತ್ತು ಲೆಕ್ಕಪರಿಶೋಧನೆ ಮಾಡುವೆವು ಹಾಗೂ ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸೂಕ್ತವಾದ ಮತ್ತು ಸಾಕಷ್ಟು ಪ್ರಮಾಣದ ಲೆಕ್ಕಪರಿಶೋಧನೆ ಪುರಾವೆ ಪಡೆಯುವೆವು. ವಂಚನೆಯಿಂದ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆಹಚ್ಚದಿರುವ ಅಪಾಯವು, ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ ತೀವ್ರವಾದುದಾಗಿರುತ್ತದೆ. ವಂಚನೆಯು ಒಳಸಂಚು, ನಕಲಿ ಪತ್ರ ಸೃಷ್ಟಿ, ಉದ್ದೇಶಪೂರ್ವಕವಾಗಿಯೇ ಬಿಟ್ಟುಬಿಡುವುದು, ತಪ್ಪು ಪ್ರಾತಿನಿಧ್ಯಗಳನ್ನು ನೀಡುವುದು ಅಥವಾ ಆಂತರಿಕ ನಿಯಂತ್ರಣವನ್ನು ಉಲ್ಲಂಘಿಸುವ ಕೃತ್ಯಗಳನ್ನು ಒಳಗೊಂಡಿರುವುದರಿಂದ ವಂಚನೆಯು ತಪ್ಪಿಗಿಂತ ತೀವ್ರ ಸ್ವರೂಪದ ಅಪಾಯವಾಗಿರುವುದು.
- ಪರಿಸ್ಥಿತಿಗಳಿಗೆ ಸೂಕ್ತವಾಗಿರುವ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ರೂಪಿಸಲು, ಲೆಕ್ಕ ಪರಿಶೋಧನೆಗೆ ಪೂರಕವಾದ ಆಂತರಿಕ ನಿಯಂತ್ರಣದ ಅರ್ಥವಂತಿಕೆ ಒಂದನ್ನು ಪಡೆಯುವೆವು. ಕಾಯ್ದೆಯ ಪ್ರಕರಣ 143(3)(i)ರ ಅನ್ವಯ, ಕಂಪನಿ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದೇ ಮತ್ತು ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿದೆ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಸಹ ನಾವು ಜವಾಬ್ದಾರರಾಗಿರುವೆವು.
- ಆಡಳಿತ ಮಂಡಳಿ ಬಳಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆ ಮತ್ತು ಲೆಕ್ಕನಿರ್ವಹಣೆ ಅಂದಾಜುಗಳ ಯುಕ್ತತೆ ಮತ್ತು ಸಂಬಂಧಪಟ್ಟ ಪ್ರಕಟಣೆಗಳ ಸೂಕ್ತತೆಗಳನ್ನು ಮೌಲ್ಯಮಾಪನ ಮಾಡುವೆವು.
- ಆಡಳಿತ ವರ್ಗವು ಚಲನಶೀಲ ಸಂಸ್ಥೆಯ ಆಧಾರದ ಲೆಕ್ಕನಿರ್ವಹಣೆ ಬಳಕೆಯ ಸೂಕ್ತತೆಗಳ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವುದು ಮತ್ತು, ಪಡೆದುಕೊಂಡ ಲೆಕ್ಕಪರಿಶೋಧನೆ ಪುರಾವೆಯ ಆಧಾರದ ಮೇಲೆ, ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಬಗ್ಗೆ ಗುರುತರವಾದ ಸಂದೇಹ ಸೂಚಿಸುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ತೀರ್ಮಾನಿಸುವೆವು. ವಾಸ್ತವಿಕ ಅನಿಶ್ಚಿತತೆ ಇರುವುದೆಂದು ನಾವು ತೀರ್ಮಾನಿಸಿದ್ದೇ ಆದರೆ, ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಸಂಬಂಧಪಟ್ಟ ಘೋಷಣೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗುತ್ತದೆ; ಅಥವಾ ಅಂತಹ ಘೋಷಣೆಗಳು ಸಾಕಷ್ಟು ಇಲ್ಲದಿದ್ದರೆ, ಆಗ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯ ಮೇಲೆ ಆಧಾರಿತವಾಗಿರುವುದು. ಆದರೂ, ಮುಂದಿನ ದಿನಗಳಲ್ಲಿ ಉಂಟಾಗುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವುದನ್ನು ಸ್ಥಗಿತಗೊಳಿಸಬಹುದಾಗಿರುವುದು.
- ಪ್ರಕಟಣೆಗಳೂ ಸೇರಿದಂತೆ ಒಟ್ಟಾರೆ ನಿರೂಪಣೆ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಸ್ವರೂಪ ಮತ್ತು ವಿಷಯ ಒಕ್ಕಣೆಯನ್ನು ಮೌಲ್ಯಮಾಪನ ಮಾಡುವೆವು. ಮತ್ತು ಸ್ವತಂತ್ರ ಹಣಕಾಸಿನ ಹೇಳಿಕೆಗಳು ಮುಂದೆ ತಿಳಿಸಿರುವ ವ್ಯವಹಾರಗಳು ಮತ್ತು ಘಟನಾವಳಿಗಳನ್ನು ನ್ಯಾಯೋಚಿತ ನಿರೂಪಣೆಯ ರೀತಿಯಲ್ಲಿ ಪ್ರತಿನಿಧಿಸುವುದೇ ಎಂಬುದನ್ನು ಮೌಲ್ಯಮಾಪನ ಮಾಡುವೆವು.

ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾವು ಗುರುತಿಸಿದ, ಆಂತರಿಕ ನಿಯಂತ್ರಣಗಳಲ್ಲಿನ ಯಾವುದೇ ಗಮನಾರ್ಹ ಕೊರತೆಗಳೂ ಸೇರಿದಂತೆ, ಇತರೆ ವಿಚಾರಗಳ ಜೊತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ತರವಾದ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ತಿಳಿಸುವೆವು.

ಸ್ವತಂತ್ರದ ವಿಚಾರವಾಗಿ ಸಂಬಂಧಪಟ್ಟ ನೈತಿಕ ಅಗತ್ಯತೆಗಳನ್ನು ನಾವು ಅನುಸರಿಸಿರುವ ಬಗ್ಗೆ ಹೇಳಿಕೆ ಒಂದನ್ನು ಸಹ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ಒದಗಿಸುವೆವು ಮತ್ತು ಎಲ್ಲಾ ಬಾಂಧವ್ಯಗಳು ಮತ್ತು ನಮ್ಮ ಸ್ವತಂತ್ರದ ಬಗ್ಗೆ ಒಳಪಡುವುದಾಗಿ ಸಕಾರಣವಾಗಿ ಯೋಜಿಸಿರುವ ಮತ್ತು ಅನ್ವಯವಾಗುವ ಸಂದರ್ಭ, ಸಂಬಂಧಿಸಿದ ಸುರಕ್ಷತೆಗಳ ಇತರೆ ವಿಚಾರಗಳನ್ನು ಅವರಿಗೆ ತಿಳಿಸುವೆವು.

### ಇತರೆ ವಿಚಾರಗಳು:

ಕಂಪನಿಯ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಹಣಕಾಸಿನ ಹೇಳಿಕೆಗಳನ್ನು ಮತ್ತೊಬ್ಬ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿದ್ದಾರೆ. ಇವರ ದಿನಾಂಕ: 29ನೇ ಡಿಸೆಂಬರ್ 2023ರ ಪರಿಷ್ಕೃತ ವರದಿಯು ಆ ಹೇಳಿಕೆಗಳ ಬಗ್ಗೆ ಮಾರ್ಪಾಡು ಮಾಡಿದ ಅಭಿಪ್ರಾಯ ತಿಳಿಸಿದ್ದಾರೆ.

ಸದರಿ ವಿಚಾರದ ಸಂಬಂಧ ನಮ್ಮ ಅಭಿಪ್ರಾಯವು ಅನ್ವಯವಾಗುವುದಿಲ್ಲ.

### ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆ ವರದಿ:

1. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ:

ಎ) ನಮ್ಮ ಲೆಕ್ಕಪರಿಶೋಧನೆ ಉದ್ದೇಶಕ್ಕಾಗಿ ಅಗತ್ಯವಾಗಿರುವುದಾಗಿ ನಾವು ತಿಳಿದಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿ ಪಡೆದಿದ್ದೇವೆ.

ಬಿ) ಮೇಲಿನ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ಪ್ಯಾರಾಗ್ರಾಫ್ ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ, ಆ ಲೆಕ್ಕದ ಪುಸ್ತಕಗಳನ್ನು ನಾವು ಪರಿಶೀಲಿಸಿದಾಗ ಕಂಡುಬಂದಿರುವುದೇನೆಂದರೆ ಕಾನೂನಿನ ಅನುಸಾರ ಅಗತ್ಯವಾದಂತೆ ಲೆಕ್ಕಗಳ ಸೂಕ್ತವಾದ ಪುಸ್ತಕಗಳನ್ನು ಇಡಲಾಗಿದೆ.

ಸಿ) ಸದರಿ ವರದಿಯಲ್ಲಿ ತಿಳಿಸಿರುವ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಹೇಳಿಕೆಗಳು, ಇತರೆ ಸಮಗ್ರ ಆದಾಯಗಳು ಸೇರಿದಂತೆ, ನಗದು ಹರಿಯುವಿಕೆ ಹೇಳಿಕೆ ಮತ್ತು ಈಕ್ವಿಟಿಯಲ್ಲಿನ ಬದಲಾವಣೆ ಹೇಳಿಕೆಗಳು ಲೆಕ್ಕದ ಸಂಬಂಧಪಟ್ಟ ಪುಸ್ತಕಗಳ ಅನುಸಾರವಾಗಿರುವುದು.

ಡಿ) ಮೇಲಿನ ''ಅರ್ಹತಾ ಅಭಿಪ್ರಾಯಕ್ಕೆ ಆಧಾರ'' ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ ಮೇಲೆ ತಿಳಿಸಿರುವ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳು ಕಾಯ್ದೆಯ ಪ್ರಕರಣ 133ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿರುವುದು.

ಇ) ಸರ್ಕಾರದ ಕಂಪನಿಯಾಗಿರುವುದರಿಂದ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್.463(ಇ) ದಿನಾಂಕ:05.06.2015ರ ಅನ್ವಯ ನಿರ್ದೇಶಕರ ಅನರ್ಹತೆಯ ಸಂಬಂಧದಲ್ಲಿನ ಕಾಯ್ದೆ 2013ರ ಪ್ರಕರಣ 164(2)ರ ಉಪಬಂಧಗಳು ಅನ್ವಯವಾಗುವುದಿಲ್ಲ.

ಎಫ್) ಕಂಪನಿಯ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿ ಇರುವಿಕೆ ವಿಚಾರದಲ್ಲಿ ಮತ್ತು ಸದರಿ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಬಗ್ಗೆ ತಿಳಿಯಲು 'ಅನುಬಂಧ-II ರಲ್ಲಿನ ನಮ್ಮ ಪ್ರತ್ಯೇಕ ವರದಿ ನೋಡಿ. ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ ಮತ್ತು ಕಾರ್ಯಾಚರಣೆ ಪರಿಣಾಮದ ಬಗ್ಗೆ ನಮ್ಮ ವರದಿಯು ಮಾರ್ಪಾಡು ಮಾಡದಿರುವ ಅಭಿಪ್ರಾಯ ವ್ಯಕ್ತಪಡಿಸುವುದು.

ಜಿ) ಸರ್ಕಾರದ ಕಂಪನಿಯಾಗಿರುವುದರಿಂದ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್.463(ಇ) ದಿನಾಂಕ:05.06.2015ರ ಅನ್ವಯ ಕಾಯ್ದೆಯ ಪ್ರಕರಣ 197 (16) ಆಡಳಿತ ಸಂಭಾವನೆಯ ವಿಚಾರಗಳ ಬಗ್ಗೆ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

ಹೆಚ್) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನ್ವಯದ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಾಗಿರುವ ಇತರೆ ವಿಚಾರಗಳ ಸಂಬಂಧದಲ್ಲಿ, ನಮ್ಮ ಅಭಿಪ್ರಾಯದಂತೆ ಮತ್ತು ನಮಗೆ ತಿಳಿದಿರುವ ಮಾಹಿತಿಯಂತೆ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ ನಾವು ತಿಳಿಸುವುದೇನೆಂದರೆ:

i) ಕಂಪನಿಯು ತನ್ನ ಹಣಕಾಸಿನ ಪರಿಸ್ಥಿತಿ ಮೇಲೆ ಇತ್ಯರ್ಥವಾಗದೆ ಉಳಿದಿರುವ ವ್ಯಾಜ್ಯಗಳು ಉಂಟು ಮಾಡುವ ಪರಿಣಾಮವನ್ನು ಅದರ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿ-40(iii)ರಲ್ಲಿ ತಿಳಿಸಿದೆ.

ii) ಕಂಪನಿಯು ಜನ್ಯ ಗುತ್ತಿಗೆಗಳು ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಇದರಿಂದಾಗಿ ಯಾವುದೇ ವಾಸ್ತವಿಕ ಮುಂಗಾಣ್ಕೆ ನಷ್ಟಗಳಿರುವುದಿಲ್ಲ.

iii) ಕಂಪನಿಯು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣೆ ನಿಧಿಗೆ ವರ್ಗಾಯಿಸಬೇಕಾದ ಯಾವುದೇ ಮೊತ್ತ ಇರುವುದಿಲ್ಲ.

iv) (I) ಲಿಖಿತ ರೂಪದಲ್ಲಿ ದಾಖಲು ಮಾಡುವ ಅಥವಾ ಇದಿಲ್ಲದೆ ಅರ್ಥವಂತಿಕೆಯೊಡನೆ ಮಧ್ಯವರ್ತಿಯು ಯಾವುದೇ ರೀತಿಯಲ್ಲಿ ಗುರುತಿಸಲಾಗಿರುವ ಇತರೆ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಕಂಪನಿಯಿಂದ ಅಥವಾ ಕಂಪನಿಯ ಪರವಾಗಿ (ಅಂತಿಮ ಫಲಾನುಭವಿಗಳು) ನೀಡುವ ಅಥವಾ ಹೂಡಿಕೆ ಮಾಡುವ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ

MSIL

ಖಾತರಿ. ಭದ್ರತೆ ಅಥವಾ ಇಂತಹ ವ್ಯವಸ್ಥೆ ಒದಗಿಸುವ ಕ್ರಮದೊಡನೆ, ವಿದೇಶಿ ಸಂಸ್ಥೆಗಳು ('ಮಧ್ಯವರ್ತಿಗಳು') ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥೆಗಳಿಗೆ ಕಂಪನಿ ಯಾವುದೇ ಹಣವನ್ನು ಮುಂಗಡ ಅಥವಾ ಸಾಲ ಅಥವಾ ಹೂಡಿಕೆ (ಪಡೆದುಕೊಂಡಿರುವ ಹಣದಿಂದ ಅಥವಾ ಷೇರು ಪ್ರೀಮಿಯಂ ಅಥವಾ ಯಾವುದೇ ಇತರೆ ಮೂಲಗಳು ಅಥವಾ ರೂಪದಲ್ಲಿ ಹಣವನ್ನು) ಮಾಡಿಲ್ಲವೆಂದು ತನ್ನ ತಿಳುವಳಿಕೆ ಮತ್ತು ನಂಬಿಕೆಯಾಗಿರುವುದು ಎಂಬುದಾಗಿ ಆಡಳಿತ ಮಂಡಳಿ ತಿಳಿಸಿದೆ.

(2) ಅದರ ತಿಳುವಳಿಕೆ ಮತ್ತು ನಂಬಿಕೆಯಂತೆ ಆಡಳಿತ ಮಂಡಳಿ ತಿಳಿಸಿರುವುದೇನೆಂದರೆ, ಲಿಖಿತ ರೂಪದಲ್ಲಿ ದಾಖಲು ಮಾಡುವ ಅಥವಾ ಇದಿಲ್ಲದೆ ಆರ್ಥವಂತಿಕೆಯೊಡನೆ ವಿದೇಶಿ ಕಂಪನಿಗಳು ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಂದ ('ಹಣ ನೀಡಿಕೆ ವ್ಯಕ್ತಿಗಳು') ಕಂಪನಿ ಯಾವುದೇ ಹಣ ಪಡೆದಿರುವುದಿಲ್ಲ ಮತ್ತು ಕಂಪನಿಯು ಹಣ ನೀಡಿಕೆ ವ್ಯಕ್ತಿಯಿಂದ ಅಥವಾ ಅವರ ಪರವಾಗಿ ('ಅಂತಿಮ ಫಲಾನುಭವಿಗಳು') ಯಾವುದೇ ರೀತಿಯಲ್ಲಿ ಗುರುತಿಸಿರುವ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ಕೊಟ್ಟಿರುವುದಿಲ್ಲ ಅಥವಾ ಹೂಡಿಕೆ ಮಾಡಿರುವುದಿಲ್ಲ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಖಾತರಿ, ಭದ್ರತೆ ಅಥವಾ ಇಂತಹ ಯಾವುದೇ ವ್ಯವಸ್ಥೆಯನ್ನು ಒದಗಿಸಿರುವುದಿಲ್ಲ; ಮತ್ತು

(3) ನಾವು ನಡೆಸಿರುವ ಲೆಕ್ಕಪರಿಶೋಧನೆ ಕ್ರಮಾವಳಿಗಳ ಆಧಾರದ ಮೇಲೆ ಉಪ ಕಲಂಗಳು (i) ಮತ್ತು (ii) ರ ಅಡಿಯಲ್ಲಿನ ನಿರೂಪಣೆಗಳು ಯಾವುದೇ ವಾಸ್ತವಿಕ ತಪ್ಪು ಹೇಳಿಕೆ ಒಳಗೊಂಡಿರುವುದು ಎಂಬುದಾಗಿ ನಾವು ನಂಬುವಂತೆ ಮಾಡುವ ಯಾವುದೇ ಅಂಶಗಳು ನಮ್ಮ ಗಮನಕ್ಕೆ ಬಂದಿರುವುದಿಲ್ಲ.

v) **ಲಾಭಾಂಶ ವಿಚಾರದಲ್ಲಿ :**

ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 123 ಅನುಸಾರ ಕಂಪನಿಯು ಲಾಭಾಂಶ ಘೋಷಣೆ ಮಾಡಿದೆ ಅಥವಾ ಪಾವತಿ ಮಾಡಿದೆ.

vi) ಪರೀಕ್ಷಾರ್ಥ ತಪಾಸಣೆಗಳು ಒಳಗೊಂಡಿರುವ ನಮ್ಮ ಪರಿಶೀಲನೆ ಆಧಾರದ ಮೇಲೆ ತಿಳಿಸುವುದೇನೆಂದರೆ ಕಂಪನಿಯು ತನ್ನ ಲೆಕ್ಕದ ಪುಸ್ತಕಗಳ ನಿರ್ವಹಣೆಗಾಗಿ, ಲೆಕ್ಕಪರಿಶೋಧನೆ ಪ್ರಯೋಗ ವೈಶಿಷ್ಟತೆಗಳನ್ನು ಹೊಂದಿರುವ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ಅನ್ನು ಪಾನೀಯ ವಿಭಾಗದ ಸಂಬಂಧದಲ್ಲಿ ಎಲ್ಲಾ ವ್ಯವಹಾರಗಳನ್ನು ಸಾಫ್ಟ್‌ವೇರ್‌ನಲ್ಲಿ ದಾಖಲಿಸಲು ವರ್ಷ ಪೂರ್ತಿ ಕಾರ್ಯಾಚರಣೆ ಮಾಡುತ್ತಿರುವುದು. ಮುಂದುವರಿದು ತಿಳಿಸುವುದೇನೆಂದರೆ ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ, ಲೆಕ್ಕ ಪರಿಶೋಧನೆ ವೈಶಿಷ್ಟ್ಯತೆಯನ್ನು ದುರುಪಯೋಗ ಮಾಡಿಕೊಳ್ಳುವ ಯಾವುದೇ ವಿಚಾರ ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಇತರೆ ವಿಭಾಗಗಳ ಸಂದರ್ಭದಲ್ಲಿ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ಆಡಿಟ್ ಟ್ರಯಲ್ ಫೀಚರ್ ಹೊಂದಿರುವುದಿಲ್ಲ.

ಕಂಪನಿಗಳ (ಲೆಕ್ಕಗಳು) ನಿಯಮಗಳು, 2014ರ ನಿಯಮ 3(1)ರ ನಿಬಂಧನೆಯು 1ನೇ ಏಪ್ರಿಲ್ 2023 ರಿಂದ ಅನ್ವಯವಾಗುವುದರಿಂದ, ದಾಖಲೆ ಕಾಪಾಡಲು ಶಾಸನಬದ್ಧ ಅಗತ್ಯತೆಗಳ ಅನುಸಾರ ಆಡಿಟ್ ಟ್ರಯಲ್‌ನ ಸಂರಕ್ಷಣೆ ಬಗ್ಗೆ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ II(ಜಿ) ಅನ್ವಯ ವರದಿ ಮಾಡುವಿಕೆಯು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ ಅನ್ವಯವಾಗುವುದಿಲ್ಲ.

2. ಕಾಯ್ದೆಯ ಪ್ರಕರಣ 143(II)ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 (''ಆದೇಶ'') ರಂತೆ ಅಂತ್ಯವಾದಂತೆ, ಆದೇಶ ಪ್ಯಾರಾಗ್ರಾಫ್ 3 ಮತ್ತು 4ರಲ್ಲಿ ನಿರ್ದಿಷ್ಟಪಡಿಸಿರುವ ವಿಚಾರಗಳ ಬಗ್ಗೆ ವಿವರಣೆಯನ್ನು ''ಅನುಬಂಧ ಬಿ'' ರಲ್ಲಿ ನಾವು ನೀಡಿದ್ದೇವೆ.

3. ಕಂಪನಿಗೆ ಅನ್ವಯವಾಗುವ, ಕಾಯ್ದೆಯ ಪ್ರಕಟಣ 143(3)ರ ಅನ್ವಯ ಅಗತ್ಯವಾದಂತೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಹೊರಡಿಸಿರುವ ನಿರ್ದೇಶನಗಳ ಮೇರೆಗೆ ನಾವು ಗಮನಿಸಿದ ಅಂಶಗಳನ್ನು ''ಅನುಬಂಧ ಸಿ'' ನಲ್ಲಿ ನೀಡಿದೆ.

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417**W
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**
**ಯುಡಿಐಎನ್:** 24100892BJZXRJ4530

ಸ್ಥಳ : ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2024

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಎ

(ಸಮ ದಿನಾಂಕದ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸದಸ್ಯರುಗಳಿಗೆ ನಮ್ಮ ವರದಿಯ 'ಇ' ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ''ಮೇಲಿನ ವರದಿ'' ಅಡಿಯಲ್ಲಿ ಪ್ಯಾರಾಗ್ರಾಫ್ 1(ಎಫ್)ಗೆ ಸಂಬಂಧಿಸಿದಂತೆ) ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (ಜಿ) ರ ಅನ್ವಯದ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ)

### ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ

ನಾವು 31ನೇ ಮಾರ್ಚ್ 2024ರಂದು ಇದ್ದಂತೆ ಮೆ॥ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು, (''ಕಂಪನಿ'') ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಲೆಕ್ಕಪರಿಶೋಧನೆಯನ್ನು ಸದರಿ ದಿನಾಂಕದಂದು ಕೊನೆಗೊಂಡ ವರ್ಷದ ಕಂಪನಿಯ ಸ್ವತಂತ್ರ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕ ಪರಿಶೋಧನೆ ಜೊತೆಗೆ ಮಾಡಿದ್ದೇವೆ.

#### ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ಮಂಡಳಿ ಜವಾಬ್ದಾರಿ:

ಕಂಪನಿಯ ಆಡಳಿತ ಮಂಡಳಿಯು, ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ('ಐಸಿಎಐ') ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

#### ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳು ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ಭೌತಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ಭೌತಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆಯು ಕಂಪನಿಯ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದೆಂದು ನಾವು ನಂಬಿರುವೆವು.

#### ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಹೇಳಿಕೆಗಳನ್ನು

ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು: (1)ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿರುವುದು. (2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು (3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವಿಲೇವಾರಿ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

### ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಮಿತಿಗಳು:

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ, ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

### ಅರ್ಹತಾ ಅಭಿಪ್ರಾಯಕ್ಕೆ ಆಧಾರ

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳನುಸಾರ ಮತ್ತು ನಾವು ನಿರ್ವಹಿಸಿದ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ: 31.03.2024 ರಂದಿನಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ:

### ಎ.ಚಿಟ್‌ಫಂಡ್ ವಿಚಾರ:

1) (i) ಸೂಕ್ತವಾದ ಆಂತರಿಕ ನಿಯಂತ್ರಣ ಕ್ರಮಗಳು, (ii) ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾಗಿರುವ ವರದಿಗಳ ಸೃಜನೆಗೆ ಬೆಂಬಲ, (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆಯ ವ್ಯವಸ್ಥೆ ಇಲ್ಲದಿರುವುದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗಬಹುದಾಗಿರುತ್ತದೆ.

2. ''ಸುಸ್ತಿದಾರಿಕೆಯ ಸಂಭವನೀಯತೆ (%), ನಷ್ಟ ನೀಡಿಕೆ ಸುಸ್ತಿದಾರಿಕೆ (%) ಸೇರಿದಂತೆ ವಿವಿಧ ಮಾನದಂಡಗಳ ನಿಖರತೆ ಮತ್ತು ಕಾರಣಗಳ ಬಗ್ಗೆ ಮತ್ತು ಕ್ರೆಡಿಟ್ ಅಪಾಯದಲ್ಲಿ ಗುರುತರ ಹೆಚ್ಚಳದ ಆಧಾರದ ಮೇಲೆ ಹಣಕಾಸಿನ ಆಸ್ತಿಗಳ ವರ್ಗೀಕರಣದ ಆಧಾರದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕಂಪನಿ ಹೊಂದಿರುವುದಿಲ್ಲ. ತತ್ಪರಿಣಾಮವಾಗಿ 12 ತಿಂಗಳ ಇಸಿಎಲ್ ಮತ್ತು ಜೀವಿತಾವಧಿ ಇಸಿಎಲ್ ನಿರ್ಧರಣೆಯು ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಹೊಂದಿರುವ ಸಂಭವವಿರುತ್ತದೆ.

3. ಕಂಪನಿಯು ರೂ.1196.65 ಲಕ್ಷಗಳ ಮೊತ್ತದ ಚಂದಾದಾರರ ಸಮನ್ವಯತೆ ಮಾಡಿರದ ಶಿಲ್ಕುಗಳನ್ನು ಹೊಂದಿರುವುದು. ಇದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗುವ ಸಾಧ್ಯತೆ ಇರುವುದು.

4. ಬಿ) ಪಾವತಿ ಮಾಡಬೇಕಿರುವವು ಮತ್ತು ಬರಬೇಕಾಗಿರುವವುಗಳ ಶೀಘ್ರ, ನಿಯತಕಾಲಿಕ ಮತ್ತು ಇಂದಿನವರೆಗೆ ಸಮಂಜಸತೆ ಮಾಡಲು ಕಂಪನಿಯು ರೂಪಿಸಿರುವ ಹಣಕಾಸಿನ ಮತ್ತು ಕಾರ್ಯಾಚರಣೆ ನಿಯಂತ್ರಣಗಳ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗಬಹುದಾಗಿದೆ.

ಸಿ) ಕಂಪನಿಯು ಸಮಗ್ರವಾದ ಇಆರ್‌ಪಿ ವ್ಯವಸ್ಥೆ ಹೊಂದಿರುವುದಿಲ್ಲ. ಕಂಪನಿ ಬಳಸಿರುವ ವಿವಿಧ ಸಾಫ್ಟ್‌ವೇರ್ ಪ್ಯಾಕೇಜುಗಳನ್ನು ಸಾಫ್ಟ್‌ವೇರ್ ಲಿಂಕ್‌ಗಳ ಮೂಲಕ ಅಥವಾ ಕೈಯಿಂದ ಮಾಡುವ ಮೂಲಕ ಸಂಪರ್ಕ ಸಾಧಿಸಿದೆ. ಇದರಿಂದ ಈ ಎರಡರ ಮಧ್ಯೆ ನಿರ್ವಾತ ಉಂಟಾಗಿದೆ. ಇದರಿಂದ ಕ್ಷೀಣಿತ ಹಣಕಾಸಿನ ವರದಿಗಾರಿಕೆ ಉಂಟಾಗಲು ಸಕಾರಣವಾಗುತ್ತದೆ. ಇದಲ್ಲದೆ ಬಹುಪಾಲು ಸಾಫ್ಟ್‌ವೇರ್ ಪಾನೀಯ ವಿಭಾಗ ಹೊರತಾಗಿ, ಲೆಕ್ಕಪರಿಶೋಧನೆ ಟ್ರಯಲ್ ವೈಶಿಷ್ಟ್ಯತೆ ಹೊಂದಿರುವುದಿಲ್ಲ. ಇದರಿಂದ ಹಣಕಾಸಿನ ಮೇಲೆ ಪರಿಣಾಮ ಉಂಟಾಗುತ್ತದೆ.

ಡಿ) ಕಂಪನಿಯು ಸ್ವತ್ತು, ಸ್ಥಾವರ ಮತ್ತು ಉಪಕರಣದ (ಪಿಪಿಇ) ಭೌತಿಕ ಪರಿಶೀಲನೆಯ ವರದಿ ಒದಗಿಸಿರುವುದಿಲ್ಲ. ಇದರಿಂದ ಪಿಪಿಇನ ಶಿಲ್ಕುಗಳನ್ನು ಕಡಿಮೆಯಾಗಿ ತಿಳಿಸಿಲು/ಹೆಚ್ಚಿಗೆಯಾಗಿ ತಿಳಿಸಲು, ನಿಖರವಲ್ಲದ ಸವಕಳಿ ವ್ಯವಸ್ಥೆಗೆ ಮತ್ತು ನಿಖರವಲ್ಲದ ದುರ್ಬಲತೆ ನಿರ್ಧರಣೆಗೆ ಕಾರಣವಾಗುತ್ತದೆ.

‘ವಾಸ್ತವಿಕ ದುರ್ಬಲತೆಯು ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಒಂದು ಕೊರತೆಯಾಗಿರುವುದು ಅಥವಾ ಕೊರತೆಗಳ ಸಂಯೋಜನೆಯಾಗಿರುವುದು. ಹಾಗಾಗಿ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಸಾಧ್ಯತೆಯಿರುವುದನ್ನು ಸಕಾಲಿಕ ಆಧಾರದ ಮೇಲೆ ತಡೆಯಲು ಅಥವಾ ಪತ್ತೆ ಹಚ್ಚಲು ಸಾಧ್ಯವಾಗದು.

## ಅರ್ಹತಾ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ , ನಿಯಂತ್ರಣ ಮಾನದಂಡದ ಧ್ಯೇಯಗಳಲ್ಲಿ ಸಾಧನೆ ಬಗ್ಗೆ ಮೇಲೆ ವಿವರಿಸಿರುವ ವಾಸ್ತವಿಕ ದೌರ್ಬಲ್ಯದ ಸಾಧ್ಯನೀಯ ಪರಿಣಾಮಗಳನ್ನು ಹೊರತುಪಡಿಸಿ, ಕಂಪನಿಯು ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ಸ್ಥಾಪಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ 31ನೇ ಮಾರ್ಚ್ 2024 ರಂದು ಇದ್ದಂತೆ ಕಂಪನಿಯು ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಎಲ್ಲಾ ವಾಸ್ತವಿಕ ವಿಚಾರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಿರ್ವಹಣೆ ಮಾಡಿರುವುದು ಮತ್ತು ಹಣಕಾಸಿನ ವರದಿಗಾರಿಕೆ ಮೇಲಿನ ಆ ಆಂತರಿಕ ಹಣಕಾಸಿನ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವು.

ಕಂಪನಿಯ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕ ಪರಿಶೋಧನೆಯಲ್ಲಿ ಅನ್ವಯಿಸಿರುವ ಲೆಕ್ಕಪರಿಶೋಧನೆ ಪರೀಕ್ಷೆಗಳ ಸ್ವರೂಪ, ಸಮಯ, ಮತ್ತು ಪ್ರಮಾಣ ನಿರ್ಧರಣೆ ಮಾಡುವಲ್ಲಿ ಗುರುತಿಸಿರುವ ಮತ್ತು ಮೇಲೆ ವರದಿ ಮಾಡಿರುವ ವಾಸ್ತವಿಕ ದೌರ್ಬಲ್ಯವನ್ನು ನಾವು ಪರಿಗಣಿಸಿರುವೆವು ಮತ್ತು ಈ ವಾಸ್ತವಿಕ ದೌರ್ಬಲ್ಯವು ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯಕ್ಕೆ ಧಕ್ಕೆ ಉಂಟು ಮಾಡಿದೆ. ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ನಾವು ಅರ್ಹತಾ ಅಭಿಪ್ರಾಯ ನೀಡಿರುವೆವು.

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417W**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**

**ಯುಡಿಐಎನ್:** 24100892BJZXRJ4530
ಸ್ಥಳ : ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2024

## ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಗೆ ''ಅನುಬಂಧ-ಬಿ''

(ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ ಸಮ ದಿನಾಂಕದ ನಮ್ಮ ವರದಿಯ ''ಇತರೆ ಕಾನೂನು ಮತ್ತು ನಿಯಂತ್ರಣದ ಅಗತ್ಯತೆಗಳ ಮೇಲೆಇನ ವರದಿ'' ಭಾಗದ ಅಡಿಯಲ್ಲಿನ ಪ್ಯಾರಾಗ್ರಾಫ್ 2 ರ ಸಂಬಂಧದಲ್ಲಿ)

(i) **ಕಂಪನಿಯ ಸ್ಥಿರಾಸ್ತಿಗಳ ವಿಚಾರದಲ್ಲಿ :**

(ಎ) (1) ಕಂಪನಿಯು ಸ್ವತ್ತು ಸ್ಥಾವರ ಮತ್ತು ಉಪಕರಣದ ಪರಿಮಾಣಾತ್ಮಕ ವಿವರಗಳು ಮತ್ತು ಸ್ಥಳ ಸೇರಿದಂತೆ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತವಾದ ದಾಖಲೆಗಳನ್ನು ನಿರ್ವಹಿಸಿದೆ.

(2) ಅಗೋಚರಿತ ಆಸ್ತಿಗಳ ಪೂರ್ಣ ವಿವರಗಳನ್ನು ತಿಳಿಸುವ ಸೂಕ್ತವಾದ ದಾಖಲೆಗಳನ್ನು ಕಂಪನಿ ನಿರ್ವಹಿಸಿವೆ.

(ಬಿ) ಈ ವರ್ಷದ ಅವಧಿಯಲ್ಲಿ ನಡೆಸಿರುವ ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ ವರದಿಯನ್ನು ಕಂಪನಿ ಒದಗಿಸಿರುವುದಿಲ್ಲ. ಭೌತಿಕ ಪರಿಶೀಲನೆ ವರದಿ ಇಲ್ಲದ ಪ್ರಯುಕ್ತ, ಭೌತಿಕ ಪರಿಶೀಲನೆ ಅವಧಿಯಲ್ಲಿ ಗುರುತಿಸಿರುವ ಯಾವುದೇ ಇದ್ದಲ್ಲಿ ಅಂತಹ ವ್ಯತ್ಯಾಸದ ಬಗ್ಗೆ ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಿಲ್ಲ.

(ಸಿ) ಸ್ಥಿರಾಸ್ತಿಗಳ ಸಂಬಂಧ (ಕಂಪನಿಯು ಗುತ್ತಿಗೆದಾರರಾಗಿರುವ ಮತ್ತು ಗುತ್ತಿಗೆ ಒಪ್ಪಂದ ಪತ್ರಗಳನ್ನು ಕ್ರಮವಾಗಿ ಕಂಪನಿಯ ಪರವಾಗಿ ಬರೆದುಕೊಟ್ಟಿರುವ ಸ್ವತ್ತುಗಳು ಹೊರತಾಗಿ) ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿನ ಪ್ರಕಟಣೆಯನ್ನು ಸ್ವತ್ತು, ಸ್ಥಾವರ ಮತ್ತು ಉಪಕರಣ ಹಾಗೂ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಲ್ಲಿ ಸೇರ್ಪಡೆ ಮಾಡಿದೆ, ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ನಮಗೆ ಒದಗಿಸಿರುವ ನೋಂದಾಯಿತ ಕ್ರಯಪತ್ರ/ವರ್ಗಾವಣೆ ಪತ್ರ/ರವಾನೆ ಪತ್ರದ ಪರಿಶೀಲನೆ ಆಧಾರದ ಮೇಲೆ ನಾವು ವರದಿ ಮಾಡುವುದೇನೆಂದರೆ, ಸ್ಥಿತಿ ವಿವರಣಾ ಪಟ್ಟಿ ದಿನಾಂಕದಂದು ಇದ್ದಂತೆ ಸದರಿ ಸ್ಥಿರಾಸ್ತಿಗಳ ಹಕ್ಕುಪತ್ರಗಳು ಕಂಪನಿಯ ಹೆಸರಿನಲ್ಲಿರುವವು.

(ಡಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ ಮತ್ತು ಕಂಪನಿಯ ದಾಖಲೆ ಪತ್ರಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಕಂಪನಿಯು ಈ ವರ್ಷದ ಅವಧಿಯಲ್ಲಿ ತನ್ನ ಯಾವುದೇ ಸ್ವತ್ತು, ಸ್ಥಾವರ ಮತ್ತು ಉಪಕರಣ ಅಥವಾ ಅಗೋಚರಿತ ಆಸ್ತಿಗಳ ಬಗ್ಗೆ ಮರು ಮೌಲ್ಯಮಾಪನ ಮಾಡಿರುವುದಿಲ್ಲ.

(ಇ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಬೇನಾಮಿ ವ್ಯವಹಾರಗಳ (ನಿಷೇಧ) ಕಾಯ್ದೆ, 1988 (45/1988)ರ (2016ರಲ್ಲಿ ತಿದ್ದುಪಡಿಯಾಗಿರುವುದು) ಮತ್ತು ಇದರಡಿಯ ನಿಯಮಗಳ ಅನ್ವಯ ಯಾವುದೇ ಬೇನಾಮಿ ಸ್ವತ್ತನ್ನು ಹೊಂದಿರುವ ಬಗ್ಗೆ 31ನೇ ಮಾರ್ಚ್ 2024ರಂದು ಇದ್ದಂತೆ ಕಂಪನಿಯ ವಿರುದ್ಧ ಇತ್ಯರ್ಥವಾಗದೆ ಇರುವ ಯಾವುದೇ ನಡಾವಳಿಗಳು ಅಥವಾ ಈ ವರ್ಷದ ಅವಧಿಯಲ್ಲಿ ಕೈಗೊಂಡಿರುವ ಕ್ರಮಾವಳಿಗಳು ಯಾವುದೂ ಇರುವುದಿಲ್ಲ.

(ii) **ಕಂಪನಿಯ ಸರಕಿನ ತಪಶೀಲುಗಳ ವಿಚಾರದಲ್ಲಿ :**

(ಎ) ನಮಗೆ ವಿವರಿಸಿರುವಂತೆ ಸರಕುಗಳ ತಪಶೀಲನ್ನು ಆಡಳಿತ ವರ್ಗವು ಸೂಕ್ತವಾದ ಅಂತರಗಳಲ್ಲಿ ಭೌತಿಕ ಪರಿಶೀಲನೆ ನಡೆಸಿದೆ ಮತ್ತು ನಮ್ಮ ಅಭಿಪ್ರಾಯದಲ್ಲಿ ಅಂತಹ ಪರಿಶೀಲನೆಯಲ್ಲಿ ಒಳಪಡಿಸಿಕೊಂಡಿರುವ ಅಂಶಗಳು ಮತ್ತು ಅನುಸರಿಸಿರುವ ಕ್ರಮಾವಳಿಗಳು ಸರಿಯಾಗಿರುವವು, ಮತ್ತು ಪರಿಶೀಲನೆಯಲ್ಲಿ ಭೌತಿಕ ದಾಸ್ತಾನು ಮತ್ತು ಪುಸ್ತಕದ ದಾಖಲೆಗಳ ನಡುವೆ ಯಾವುದೇ ವಾಸ್ತವಿಕ ವ್ಯತ್ಯಾಸಗಳಿರುವುದಿಲ್ಲ. ಪ್ರತಿ ವರ್ಗದ ಸರಕಿನ ತಪಶೀಲಿನ ಒಟ್ಟಾರೆಯಲ್ಲಿ 10% ಅಥವಾ ಅದಕ್ಕೂ ಹೆಚ್ಚಿನ ವ್ಯತ್ಯಾಸಗಳಿರುವುದಿಲ್ಲ. (i) ಈ ವರ್ಷದ ಅವಧಿಯಲ್ಲಿ ಭೌತಿಕವಾಗಿ ಪರಿಶೀಲನೆ ಮಾಡಿರದ ಆಮದಾದ ನದಿ ಮರಳಿನ ತಪಶೀಲಿನ ಹೊರತಾಗಿ, ಉಳಿದವುಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಸೂಕ್ತವಾಗಿ ನಮೂದಿಸಿದೆ.

(ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಈ ವರ್ಷದ ಅವಧಿಯಲ್ಲಿ ಯಾವುದೇ ಸಮಯದಲ್ಲಿ ಚಾಲ್ತಿ ಆಸ್ತಿಗಳ ಭದ್ರತೆ ಆಧಾರದ ಮೇಲೆ ಬ್ಯಾಂಕು ಅಥವಾ ಹಣಕಾಸಿನ ಸಂಸ್ಥೆಯಿಂದ ಯಾವುದೇ ದುಡಿಮೆ ಬಂಡವಾಳದ ಸಾಲಗಳನ್ನು ಕಂಪನಿಗೆ ಮಂಜೂರು ಮಾಡಿರುವುದಿಲ್ಲ. ಹಾಗಾಗಿ ಆದೇಶದ ಕಲಂ 3 (ii)ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(iii)

(iv) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಮತ್ತು ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 185 ಮತ್ತು 186ರ ಅಡಿಯಲ್ಲಿ ಒಳಪಡುವ ಯಾವುದೇ ಸಾಲಗಳನ್ನು ನೀಡಿರುವುದಿಲ್ಲ ಅಥವಾ ಯಾವುದೇ ಖಾತರಿ ನೀಡಿರುವುದಿಲ್ಲ ಅಥವಾ ಯಾವುದೇ ಭದ್ರತೆ ಒದಗಿಸಿರುವುದಿಲ್ಲ ಅಥವಾ ಯಾವುದೇ ಹೂಡಿಕೆ ಮಾಡಿರುವುದಿಲ್ಲ; ಆದ್ದರಿಂದಾಗಿ, ಆದೇಶದ ಕಲಂ 3 (iv) ಅನ್ವಯವಾಗುವುದಿಲ್ಲ.

(v) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಕಾಯ್ದೆಯ ಪ್ರಕರಣ 73 ರಿಂದ 76 ರವರೆಗೆ ಅಥವಾ ಯಾವುದೇ ಇತರೆ ಸಂಬಂಧಪಟ್ಟ ನಿಬಂಧನೆಗಳು ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳ ಅರ್ಥದ ಒಳಗೆ ಸಾರ್ವಜನಿಕರಿಂದ ಕಂಪನಿಯು ಯಾವುದೇ ಠೇವಣಿಗಳನ್ನು ಅಂಗೀಕರಿಸಿರುವುದಿಲ್ಲ. ಕಂಪನಿ ಕಾನೂನು ಮಂಡಳಿ ಅಥವಾ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ ಅಥವಾ ಭಾರತೀಯ

ರಿಸರ್ವ್ ಬ್ಯಾಂಕ್ ಅಥವಾ ಯಾವುದೇ ನ್ಯಾಯಾಲಯ ಅಥವಾ ಯಾವುದೇ ಇತರೆ ನ್ಯಾಯ ಮಂಡಳಿಯು ಯಾವುದೇ ಆದೇಶ ಹೊರಡಿಸಿರುವುದಿಲ್ಲ.

(vi) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ, ಕಾಗದದ ವಿಭಾಗ ಹೊರತುಪಡಿಸಿ, ಕಂಪನಿಯ ಚಟುವಟಿಕೆಗಳಿಗೆ ಕಾಯ್ದೆಯ ಸೆಕ್ಷನ್ 148(1)ರ ಅನ್ವಯ ಕೇಂದ್ರ ಸರ್ಕಾರದಿಂದ ವೆಚ್ಚದ ದಾಖಲೆಗಳ ನಿರ್ವಹಣೆ ಮಾಡುವಿಕೆ ಬಗ್ಗೆ ನಿಗದಿಪಡಿಸಿರುವುದಿಲ್ಲ. ಆದರೂ, ಕಂಪನಿಯು ಕಾಗದದ ವಿಭಾಗದಲ್ಲಿ ವೆಚ್ಚದ ದಾಖಲೆಗಳನ್ನು ಇರಿಸಿರುವುದಿಲ್ಲ ಮತ್ತು ನಿರ್ವಹಣೆ ಮಾಡಿರುವುದಿಲ್ಲ.

(vii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಶಾಸನಬದ್ಧ ಬಾಕಿಗಳ ವಿಚಾರದಲ್ಲಿ:

(ಎ) ಭವಿಷ್ಯನಿಧಿ, ನೌಕರರ ರಾಜ್ಯ ವಿಮೆ, ಆದಾಯ ತೆರಿಗೆ, ಸೀಮಾ ಸುಂಕ, ಸರಕುಗಳು ಮತ್ತು ಸೇವೆಗಳ ತೆರಿಗೆ, ಸೆಸ್ ಮತ್ತು ಇತರೆ ವಾಸ್ತವಿಕವಾಗಿ ಇದಕ್ಕೆ ಅನ್ವಯವಾಗುವ ಶಾಸನಬದ್ಧ ಬಾಕಿಗಳು ಸೇರಿದಂತೆ ವಿವಾದ ರಹಿತ ಶಾಸನಬದ್ಧ ಬಾಕಿಗಳನ್ನು ಕಂಪನಿಯು ಸಾಮಾನ್ಯವಾಗಿ ನಿಯಮಿತವಾಗಿ ಸೂಕ್ತ ಪ್ರಾಧಿಕಾರಿಗಳಿಗೆ ಸಂದಾಯ ಮಾಡುತ್ತಿದೆ. ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ 31ನೇ ಮಾರ್ಚ್ 2024ರಂದು ಇದ್ದಂತೆ ಕೆಳಕಂಡವುಗಳ ಹೊರತಾಗಿ, ಅವುಗಳನ್ನು ಪಾವತಿ ಮಾಡಬೇಕಾದ ದಿನಾಂಕದಿಂದ ಆರು ತಿಂಗಳಿಗೂ ಹೆಚ್ಚಿನ ಅವಧಿಗೆ ಬಾಕಿಯಿರುವ ಪಾವತಿಸದಿರುವ ಶಾಸನಬದ್ಧ ಬಾಕಿಗಳ ಸಂಬಂಧ ಪಾವತಿಸಬೇಕಾದ ಯಾವುದೇ ವಿವಾದ ರಹಿತ ಮೊತ್ತಗಳು ಇರುವುದಿಲ್ಲ:

| ಕಾಯ್ದೆಯ ಹೆಸರು | ಬಾಕಿಗಳ ಸ್ವರೂಪ | ಮೊತ್ತ ರೂ. ಲಕ್ಷಗಳಲ್ಲಿ | ಮೊತ್ತವು ಯಾವ ಅವಧಿಗೆ ಸಂಬಂಧಿಸಿರುವುದು |
|---|---|---|---|
| | | | |
| ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ, 1996 | ಕಾರ್ಮಿಕರ ಕಲ್ಯಾಣ ಸೆಸ್ | 0.69 | 2013-14 |
| ರಾಜ್ಯದ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ, 1996 | ಕಾರ್ಮಿಕರ ಕಲ್ಯಾಣ ಸೆಸ್ | 0.23 | 2014-15 |
| ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಸೆಸ್ ಕಾಯ್ದೆ, 1996 | ಕಾರ್ಮಿಕರ ಕಲ್ಯಾಣ ಸೆಸ್ | 24.98 | 2017-18 |
| ಸರಕುಗಳು ಮತ್ತು ಸೇವಾ ತೆರಿಗೆ ಕಾಯ್ದೆ, 2016 | ಜಿಎಸ್‌ಟಿ | 40.37 | ಸೆಪ್ಟೆಂಬರ್ 23 ರವರೆಗೆ |
| | ಜಿಎಸ್‌ಟಿ ಮೇಲೆ ಟಿಡಿಎಸ್ | 0.59 | 2022-23 |
| ವೃತ್ತಿ, ವ್ಯಾಪಾರ, ಕಾಲಿಂಗ್ಸ್ ಮತ್ತು ಉದ್ಯೋಗದ ಮೇಲಿನ ಮಹಾರಾಷ್ಟ್ರ ರಾಜ್ಯ ತೆರಿಗೆ ಕಾಯ್ದೆ, 1975 | ವೃತ್ತಿ ತೆರಿಗೆ | 0.06 | 2021-22 |
| ಆದಾಯ ತೆರಿಗೆ ಕಾಯ್ದೆ, 1961 | ಟಿಡಿಎಸ್ | 0.03 | 2022-23 |

ಬಿ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನುಸಾರ ಕೆಳಕಂಡವುಗಳು ಹೊರತಾಗಿ, ಯಾವುದೇ ವಿವಾದದ ಪ್ರಯುಕ್ತ ಸಂದಾಯ ಮಾಡಿರದ, ಉಪ ಕಲಂ (ಎ) ರಲ್ಲಿನ ಮೇಲೆ ತಿಳಿಸಿರುವ ಶಾಸನಬದ್ಧ ಬಾಕಿಗಳು ಯಾವುದೂ ಇರುವುದಿಲ್ಲ;

| ಕಾಯ್ದೆಯ ಹೆಸರು | ಬಾಕಿಗಳ ಸ್ವರೂಪ | ಮೊತ್ತ ರೂ. ಲಕ್ಷಗಳಲ್ಲಿ | ವಿವಾದವು ಸಂಬಂಧಪಟ್ಟ ಅವಧಿ | ಪಾವತಿಸಿದ ಮೊತ್ತ ರೂ. ಲಕ್ಷಗಳಲ್ಲಿ | ವಿವಾದವು ಇತ್ಯರ್ಥವಾಗದೆ ಉಳಿದಿರುವ ವೇದಿಕೆ |
|---|---|---|---|---|---|
| ಹಣಕಾಸು ಕಾಯ್ದೆ, 1994 | ಸೇವಾ ತೆರಿಗೆ | 48.43 | 2005-06, 2006-07 | 10.00 | ಸೀಮಾ ಸುಂಕ, ಅಬಕಾರಿ ಮತ್ತು ಸೇವಾ ತೆರಿಗೆ ಮೇಲ್ಮನವಿ ನ್ಯಾಯ ಮಂಡಲಿ |
| | | 19.83 | 2002-03, 2003-04 | 19.83 | |
| | | 37.40 | 2003-04, 2005-06 | 37.40 | |
| | | 36.14 | 2007-08, 2008-09 | 10.00 | |
| | | 48.00 | 2013-14, 2014-15 | 9.00 | |
| | | 18.10 | 2015-16 | 5.43 | |
| | | 23.71 | 2016-17 | 2.37 | |
| ಆದಾಯ ತೆರಿಗೆ ಕಾಯ್ದೆ, 1961 | ಆದಾಯ ತೆರಿಗೆ | 91,288.46 | ಲೆಕ್ಕದ ವರ್ಷ 2018-19 | - | ನಿರ್ಧರಣೆ ಅಧಿಕಾರಿ/ರಾಷ್ಟ್ರೀಯ ಫೇಸ್‌ಲೆಸ್ ಅಸೆಸ್‌ಮೆಂಟ್ ಸೆಂಟರ್ |
| | | 0.10 | ಲೆಕ್ಕದ ವರ್ಷ 2020-21 | - | |
| | | 749.86 | ಲೆಕ್ಕದ ವರ್ಷ 2022-23 | - | |

viii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಮತ್ತು ಕಂಪನಿಯ ದಾಖಲೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಈ ಹಿಂದೆ ಲೆಕ್ಕದ ಪುಸ್ತಕಗಳಲ್ಲಿ ಆದಾಯ ಎಂದು ದಾಖಲು ಮಾಡದಿರುವ, ಈ ವರ್ಷದ ಅವಧಿಯಲ್ಲಿ ಆದಾಯ ಎಂದು ಆದಾಯ ತೆರಿಗೆ ಕಾಯ್ದೆ, 1961ರ ಅನ್ವಯ ತೆರಿಗೆ ನಿರ್ಧರಣೆಗಳಲ್ಲಿ ದಾಖಲಿಸದಿರುವ ಯಾವುದೇ ವ್ಯವಹಾರಗಳನ್ನು ಕಂಪನಿ ಒಪ್ಪಿಸಿರುವುದಿಲ್ಲ ಅಥವಾ ಪ್ರಕಟಿಸಿರುವುದಿಲ್ಲ.

ix) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಅನುಸಾರ;

(ಎ) ಕಂಪನಿಯು ಯಾವುದೇ ಹಣ ನೀಡಿಕೆದಾರರಿಂದ ಯಾವುದೇ ಸಾಲ ಪಡೆದಿರುವುದಿಲ್ಲ ಅಥವಾ ನಿಧಿಗಳನ್ನು ಪಡೆದಿರುವುದಿಲ್ಲ. ಹಾಗಾಗಿ ಕಲಂ 3 (ix)ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಬಿ) ಕಂಪನಿಯನ್ನು ಯಾವುದೇ ಬ್ಯಾಂಕ್, ಹಣಕಾಸಿನ ಸಂಸ್ಥೆ ಅಥವಾ ಯಾವುದೇ ಇತರೆ ಹಣ ನೀಡಿಕೆದಾರರಿಂದ ಉದ್ದೇಶಪೂರ್ವಕ ಸುಸ್ತಿದಾರರೆಂದು ಘೋಷಿಸಿರುವುದಿಲ್ಲ.

(ಸಿ) ಕಂಪನಿಯು ಯಾವುದೇ ಅವಧಿ ಸಾಲ ಪಡೆದಿರುವುದಿಲ್ಲ, ಹಾಗಾಗಿ ಆದೇಶದ ಕಲಂ 3 (ix) (ಸಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಡಿ) ಕಂಪನಿಯು ಈ ವರ್ಷದ ಅವಧಿಯಲ್ಲಿ ಯಾವುದೇ ನಿಧಿಗಳನ್ನು ಸಂಗ್ರಹಿಸಿರುವುದಿಲ್ಲ. ಆದ್ದರಿಂದ ಆದೇಶದ ಕಲಂ (ix)(ಡಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಇ) ಕಂಪನಿಯು ತನಗಾಗಿ ಅಥವಾ ತನ್ನ ಸಹಾಯಕ ಸಂಸ್ಥೆಗಳು, ಸಹವರ್ತಿ ಸಂಸ್ಥೆಗಳು ಅಥವಾ ಸಹಭಾಗಿತ್ವ ಉದ್ದಿಮೆಗಳ ಹೊಣೆಗಾರಿಕೆಗಳನ್ನು ಭರಿಸಲು ಯಾವುದೇ ಸಂಸ್ಥೆ ಅಥವಾ ವ್ಯಕ್ತಿಯಿಂದ ಯಾವುದೇ ಹಣವನ್ನು ಪಡೆದಿರುವುದಿಲ್ಲ.

(ಎಫ್) ಕಂಪನಿಯು ತನ್ನ ಸಹಾಯಕ ಸಂಸ್ಥೆಗಳು, ಸಹಭಾಗಿತ್ವ ಉದ್ದಿಮೆಗಳು ಅಥವಾ ಸಹವರ್ತಿ ಕಂಪನಿಗಳಲ್ಲಿ ಹೊಂದಿರುವ ಸೆಕ್ಯೂರಿಟಿಗಳನ್ನು ಈಡು ಮಾಡಿ ಈ ವರ್ಷದ ಅವಧಿಯಲ್ಲಿ ಯಾವುದೇ ಸಾಲಗಳನ್ನು ಪಡೆದಿರುವುದಿಲ್ಲ.

(x) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಯು ಈ ವರ್ಷದ ಅವಧಿಯಲ್ಲಿ ಪ್ರಾರಂಭಿಕ ಸಾರ್ವಜನಿಕ ನೀಡಿಕೆ ಅಥವಾ ಮುಂದುವರಿದ ಸಾರ್ವಜನಿಕ ನೀಡಿಕೆ (ಋಣ ಪತ್ರಗಳೂ ಸೇರಿದಂತೆ) ಅಥವಾ ಷೇರುಗಳು ಅಥವಾ ಪರಿವರ್ತಿಸಬಹುದಾದ ಡಿಬೆಂಚರುಗಳ (ಪೂರ್ಣ, ಭಾಗಶಃ ಅಥವಾ ಐಚ್ಛಿಕವಾಗಿ ಪರಿವರ್ತಿಸಬಹುದಾದ) ಪ್ರಿಫರೆನ್ಷಿಯಲ್ ಹಂಚಿಕೆ ಅಥವಾ ಖಾಸಗಿ ನೀಡಿಕೆ ರೂಪದಲ್ಲಿ ಕಂಪನಿಯು ಹಣಗಳನ್ನು ಸಂಗ್ರಹಿಸಿರುವುದಿಲ್ಲ, ಆದ್ದರಿಂದ ಆದೇಶದ ಕಲಂ 3(x) ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(xi) **ಕಂಪನಿಯಿಂದ ಅಥವಾ ಕಂಪನಿಗೆ ವಂಚನೆಯ ವಿಚಾರದಲ್ಲಿ :**

(ಎ) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಈ ವರ್ಷದ ಅವಧಿಯಲ್ಲಿ ಚಿಟ್ ಫಂಡ್ ವಿಭಾಗ ಮತ್ತು ಫಾರ್ಮಸಿ ವಿಭಾಗದ ಹೊರ ಸಂಪನ್ಮೂಲದ ನೌಕರರು ಅನುಕ್ರಮವಾಗಿ ರೂ.34.28 ಲಕ್ಷ ಮತ್ತು ರೂ.23.24 ಲಕ್ಷ ಮೊತ್ತದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ರೂ. ಇಲ್ಲ ಮತ್ತು ರೂ.17.63 ಲಕ್ಷವನ್ನು ವಸೂಲಿ ಮಾಡಲಾಗಿದೆ. ಈ ಬಗ್ಗೆ ಕಂಪನಿ ಪ್ರಥಮ ಮಾಹಿತಿ ವರದಿ ಸಲ್ಲಿಸಿದೆ. ಮತ್ತು ಈ ಬಗ್ಗೆ ಕ್ರಮಾವಳಿಗಳು ಪ್ರಗತಿಯಲ್ಲಿವೆ. ಕಂಪನಿಯು ಇವುಗಳ ಸಂಬಂಧ ಸಮಾನ ಮೊತ್ತಕ್ಕೆ ವ್ಯವಸ್ಥೆಯನ್ನು ಸಹ ಮಾಡಿದೆ. ಇದನ್ನು ಹೊರತುಪಡಿಸಿದರೆ, ವರದಿ ಮಾಡುತ್ತಿರುವ ವರ್ಷದ ಅವಧಿಯಲ್ಲಿ ಕಂಪನಿಯಿಂದ ಅಥವಾ ಕಂಪನಿ ಬಗ್ಗೆ ಯಾವುದೇ ವಂಚನೆ ನಡೆದಿರುವುದು ಕಂಪನಿಯ ಗಮನಕ್ಕೆ ಬಂದಿರುವುದಿಲ್ಲ ಅಥವಾ ವರದಿಯಾಗಿರುವುದಿಲ್ಲ.

(ಬಿ) ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು), ನಿಯಮಗಳು, 2014ರ ನಿಯಮ 13ರ ಅನ್ವಯ ನಿಗದಿಪಡಿಸಿರುವಂತೆ ಫಾರಂ ಎಡಿಟಿ-4ರಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 143ರ ಉಪ ಪ್ರಕರಣ 12ರ ಅನ್ವಯ ವರದಿಯನ್ನು ಈ ವರ್ಷದಲ್ಲಿ ಸಲ್ಲಿಸಿರುವುದಿಲ್ಲ.

(ಸಿ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆ ಅನುಸಾರ, ಕಂಪನಿಯು ವಿಸಲ್ ಬ್ಲೋಯರ್ ಮೆಕ್ಯಾನಿಸಂ ಸ್ಥಾಪಿಸುವ ಪ್ರಕ್ರಿಯೆಯಲ್ಲಿದೆ. ಆದರೂ, ಕಂಪನಿಯು ವರ್ಷದ ಅವಧಿಯಲ್ಲಿ ಯಾವುದೇ ಅನೌಪಚಾರಿಕ ದೂರುಗಳನ್ನು ಪಡೆದಿರುವುದಿಲ್ಲ.

(xii) ಕಂಪನಿಯು ನಿಧಿ ಕಂಪನಿಯಾಗಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3 (xii)ರ ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(xiii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ಸಂಬಂಧಪಟ್ಟ ವ್ಯಕ್ತಿಗಳ ಜೊತೆಗಿನ ಎಲ್ಲಾ ವ್ಯವಹಾರಗಳನ್ನು ಅನ್ವಯವಾಗುವೆಡೆಯಲ್ಲಿ ಕಾಯ್ದೆಯ ಪ್ರಕರಣ 177 ಮತ್ತು 188ರ ಅನುಸರಣೆ ಅನ್ವಯ ಮಾಡಲಾಗಿದೆ. ಮತ್ತು ಅನ್ವಯವಾಗುವ ಲೆಕ್ಕ ನಿರ್ವಹಣೆ ಗುಣಮಟ್ಟಗಳ ಅನ್ವಯ ಅಗತ್ಯವಾದಂತೆ ವಿವರಗಳನ್ನು ತಿಳಿಸಲಾಗಿದೆ.

(xiv) (ಎ) ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಗಳ ಆಧಾರದ ಮೇಲೆ ಮತ್ತು ನಮ್ಮ ಲೆಕ್ಕಪರಿಶೋಧನೆ ಕ್ರಮಾವಳಿಗಳ ಅನುಸಾರ, ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ಅದರ ವ್ಯವಹಾರದ ಗಾತ್ರ ಮತ್ತು ಸ್ವರೂಪದ ಆಧಾರದ ಮೇಲೆ ಆಂತರಿಕ ಲೆಕ್ಕಪರಿಶೋಧನೆ ವ್ಯವಸ್ಥೆ ಒಂದನ್ನು ಹೊಂದಿರುವುದು.

(ಬಿ) ವರ್ಷದ ಅವಧಿಯಲ್ಲಿ ಮತ್ತು ಇಂದಿನ ದಿನಾಂಕದವರೆಗೆ, ಲೆಕ್ಕ ಪರಿಶೋಧನೆಯಲ್ಲಿರುವ ಅವಧಿಗೆ ಕಂಪನಿಗೆ ನೀಡಿರುವ ಆಂತರಿಕ ಲೆಕ್ಕಪರಿಶೋಧನೆ ವರದಿಗಳನ್ನು ನಾವು ಪರಿಗಣಿಸಿದ್ದೇವೆ.

(xv) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಯು ತನ್ನ ನಿರ್ದೇಶಕರ ಜೊತೆ ಅಥವಾ ತನ್ನ ನಿರ್ದೇಶಕರುಗಳಿಗೆ ಸಂಬಂಧಿಸಿದ ವ್ಯಕ್ತಿಗಳ ಜೊತೆ ಯಾವುದೇ ನಗದೇತರ ವ್ಯವಹಾರ ಗಳನ್ನು ಮಾಡಿಕೊಂಡಿರುವುದಿಲ್ಲ. ಆದ್ದರಿಂದ ಕಂಪನಿಗಳ ಕಾಯ್ದೆ, 2013ರ ಪ್ರಕರಣ 192ರ ನಿಬಂಧನೆಗಳು ಕಂಪನಿಗೆ ಅನ್ವಯವಾಗುವುದಿಲ್ಲ.

(xvi) ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ:

(ಎ) ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934ರ ಪ್ರಕರಣ 45-ಐಎ ಅನ್ವಯ ನೋಂದಣಿ ಆಗಬೇಕಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3 (xvi) (ಎ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಬಿ) ಕಂಪನಿಯು ಯಾವುದೇ ಬ್ಯಾಂಕಿಂಗೇತರ ಹಣಕಾಸು ಅಥವಾ ಗೃಹ ನಿರ್ಮಾಣ ಹಣಕಾಸಿನ ಚಟುವಟಿಕೆಗಳನ್ನು ನಡೆಸುವುದಿಲ್ಲ. ಆದ್ದರಿಂದ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934ರ ಪ್ರಕರಣ 45-ಐಎ ಅನ್ವಯ ನೋಂದಣಿಯಾಗಬೇಕಿರುವುದಿಲ್ಲ. ಆದ್ದರಿಂದ ಆದೇಶದ ಕಲಂ 3 (xvi) (ಬಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಸಿ) ಭಾರತೀಯ ರಿಸರ್ವ್ ಬ್ಯಾಂಕ್ ಮಾಡಿರುವ ನಿಬಂಧನೆಗಳಲ್ಲಿ ಪ್ರತಿಪಾದಿಸಿರುವಂತೆ ಕಂಪನಿಯು ಪ್ರಮುಖ ಹೂಡಿಕೆ ಕಂಪನಿ (ಸಿಐಸಿ) ಆಗಿರುವುದಿಲ್ಲ. ಆದ್ದರಿಂದ ಆದೇಶದ 3 (xvi) (ಸಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(ಡಿ) ಗ್ರೂಪ್‌ನ ಒಳಗೆ ಪ್ರಮುಖ ಹೂಡಿಕೆ ಕಂಪನಿ ಇರುವುದಿಲ್ಲ (ಪ್ರಮುಖ ಹೂಡಿಕೆ ಕಂಪನಿಗಳ (ರಿಸರ್ವ್ ಬ್ಯಾಂಕ್) ನಿರ್ದೇಶನಗಳು, 2016ರಲ್ಲಿ ಪ್ರತಿಪಾದಿಸಿರುವಂತೆ). ಆದ್ದರಿಂದ ಆದೇಶದ 3 (xvi) (ಡಿ) ಅನ್ವಯ ವರದಿ ಮಾಡುವಿಕೆಯು ಅನ್ವಯವಾಗುವುದಿಲ್ಲ.

(xvii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ, ಕಂಪನಿಯು ಚಾಲ್ತಿ ವರ್ಷದಲ್ಲಿ ಮತ್ತು ತಕ್ಷಣದ ಹಿಂದಿನ ಹಣಕಾಸಿನ ವರ್ಷದಲ್ಲಿ ನಗದು ನಷ್ಟಗಳನ್ನು ಅನುಭವಿಸಿರುವುದಿಲ್ಲ.

(xviii) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆಗಳ ಅನುಸಾರ ವರ್ಷದ ಅವಧಿಯಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ರಾಜೀನಾಮೆ ನೀಡಿರುವುದಿಲ್ಲ.

(xix) ನಮಗೆ ಒದಗಿಸಿರುವ ಮಾಹಿತಿ ಮತ್ತು ನೀಡಿರುವ ವಿವರಣೆ ಅನ್ವಯ ಮತ್ತು ಹಣಕಾಸಿನ ಅನುಪಾತ, ಹಣಕಾಸಿನ ಆಸ್ತಿಗಳ ಕಾಲಮಾನ ಮತ್ತು ಅವು ನಗದೀಕರಣವಾಗುವ ನಿರೀಕ್ಷಿತ ದಿನಾಂಕಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಪಾವತಿ ಹಣಕಾಸಿನ ಹೇಳಿಕೆಗಳ ಜೊತೆಗಿನ ಇತರೆ ಮಾಹಿತಿ, ನಿರ್ದೇಶಕರ ಮಂಡಳಿ ಮತ್ತು ಆಡಳಿತ ಮಂಡಳಿ ಯೋಜನೆಗಳ ಬಗ್ಗೆಗಿನ ನಮ್ಮ ತಿಳುವಳಿಕೆ ಆಧಾರದ ಮೇಲೆ ಮತ್ತು ಊಹೆಗಳಿಗೆ ಬೆಂಬಲವಾದ ಪುರಾವೆಗಳನ್ನು ನಾವು ಪರಿಶೀಲನೆ ಮಾಡಿದ ಆಧಾರದ ಮೇಲೆ, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಇದ್ದ ತನ್ನ ಹೊಣೆಗಾರಿಕೆಗಳನ್ನು, ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಿಂದ ಒಂದು ವರ್ಷದ ಅವಧಿ ಒಳಗೆ ಅವು ಪಾವತಿಯಾಗುವ ಸಂದರ್ಭದಲ್ಲಿ ಕಂಪನಿಯು ತನ್ನ ಹೊಣೆಗಾರಿಕೆಗಳನ್ನು ಈಡೇರಿಸಲು ಸಮರ್ಥವಾಗಿರುವುದಿಲ್ಲ ಎಂದು ಲೆಕ್ಕ ಪರಿಶೋಧನೆ ವರದಿ ದಿನಾಂಕದಂದು ಯಾವುದೇ ವಾಸ್ತವಿಕ ಅನಿಶ್ಚಿತತೆ ಇರುವುದು ಎಂಬುವಂತೆ ಮಾಡುವ ಯಾವುದೇ ವಿಚಾರವು ನಮ್ಮ ಗಮನಕ್ಕೆ ಬಂದಿರುವುದಿಲ್ಲ. ಆದರೂ ನಾವು ತಿಳಿಸುವುದೇನೆಂದರೆ ಕಂಪನಿಯ ಭವಿಷ್ಯದಲ್ಲಿನ ಆಸ್ತಿತ್ವದ ಬಗ್ಗೆ ಇದು ಭರವಸೆಯಾಗಿರುವುದಿಲ್ಲ. ನಾವು ಮುಂದುವರಿದು ತಿಳಿಸುವುದೇನೆಂದರೆ ನಮ್ಮ ವರದಿಗಾರಿಕೆಯು ಲೆಕ್ಕ ಪರಿಶೋಧನೆ ವರದಿಯ ದಿನಾಂಕದವರೆಗಿನ ಅಂಶಗಳ ಮೇಲೆ ಆಧಾರಿತವಾಗಿದೆ ಮತ್ತು ಸ್ಥಿತಿ ವಿವರಣಾ ಪಟ್ಟಿ ದಿನಾಂಕದಿಂದ ಒಂದು ವರ್ಷದ ಅವಧಿ ಒಳಗೆ ಪಾವತಿಗೆ ಬಾಕಿಯಾಗುವ ಎಲ್ಲಾ ಹೊಣೆಗಾರಿಕೆಗಳನ್ನು ಅವುಗಳು ಬಾಕಿಯಾಗುವ ಸಮಯದಲ್ಲಿ ಅವುಗಳನ್ನು ಕಂಪನಿ ಪಾವತಿಸಿ ಪೂರ್ಣಗೊಳಿಸುವ ಬಗ್ಗೆ ನಾವು ಯಾವುದೇ ಗ್ಯಾರಂಟಿಯನ್ನಾಗಲಿ ಅಥವಾ ಯಾವುದೇ ಭರವಸೆಯನ್ನಾಗಲಿ ನಾವು ನೀಡುವುದಿಲ್ಲ.

(xx) ಕಂಪನಿಯ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ವಿಚಾರದಲ್ಲಿ:

(ಎ) ನಡೆಯುತ್ತಿರುವ ಯೋಜನೆಗಳ ಹೊರತಾಗಿ, ಇತರೆ ಯೋಜನೆಗಳಿಗೆ ಸಂಬಂಧಿಸಿದಂತೆ, ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಉಪ-ಪ್ರಕರಣ(5)ರ ಅನ್ವಯ ಯಾವುದೇ ಖರ್ಚು ಮಾಡದೆ ಉಳಿದಿರುವ ಮೊತ್ತಗಳಿರುವುದಿಲ್ಲ.

(ಬಿ) ಕಂಪನಿಯು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಬಗ್ಗೆ ಅಗತ್ಯವಾದ ಮೊತ್ತವನ್ನು ಪೂರ್ಣವಾಗಿ ಖರ್ಚು ಮಾಡಿದೆ. ಕಂಪನಿಗಳ ಕಾಯ್ದೆಯ ಪರಿಚ್ಛೇದ VII ರಲ್ಲಿ ಅಥವಾ ಕಂಪನಿಗಳ ಕಾಯ್ದೆ, 2013ರ ಪ್ರಕರಣ 135ರ ಉಪ ಪ್ರಕರಣ (6) ರ ನಿಬಂಧನೆ ಅನುಸರಿಸಿರುವ ವಿಶೇಷ ಖಾತೆಯಲ್ಲಿ ತಿಳಿಸಿರುವ ನಿಧಿ ಗೆ ವರ್ಗಾವಣೆ ಮಾಡಬೇಕಾದ ವರ್ಷದಲ್ಲಿನ ಖರ್ಚು ಮಾಡದಿರುವ ಸಿಎಸ್‌ಆರ್ ಮೊತ್ತ ಇರುವುದಿಲ್ಲ. ಆದ್ದರಿಂದ ಆದೇಶದ ಕಲಂಗಳು 3 (xx) (ಎ) ಮತ್ತು 3 (xx) (ಬಿ) ಅನ್ವಯವಾಗುವುದಿಲ್ಲ.

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸಂಸ್ಥೆಯ ನೋಂದಣಿ ಸಂ.100892**

**ಯುಡಿಐಎನ್:** 24100892BJZXRJ4530
ಸ್ಥಳ : ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2024

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ ''ಸಿ''

### (ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ ಸದಸ್ಯರಿಗೆ ಸಮ ದಿನಾಂಕ ನಮ್ಮ ವರದಿಯ 'ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಮೇಲಿನ ವರದಿ' ಅಡಿಯಲ್ಲಿನ ಪ್ಯಾರಾ ಗ್ರಾಫ್ 3ರ ಸಂಬಂಧದಲ್ಲಿ)

**ಭಾರತದ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ಹೊರಡಿಸಿರುವ ನಿರ್ದೇಶನಗಳಿಗೆ ಸಂಬಂಧಿಸಿದಂತೆ ಕಂಪನಿಗಳ ಕಾಯ್ದೆ, 2013(''ಕಾಯ್ದೆ'') ರ ಪ್ರಕರಣ 143(5)ರ ಅನ್ವಯ ವರದಿ**

| ಕ್ರಸಂ. | ನಿರ್ದೇಶನಗಳು | ಅನುಸರಣೆ |
|---|---|---|
| 1. | ಕಂಪನಿಯು ಲೆಕ್ಕನಿರ್ವಹಣೆಯ ಎಲ್ಲಾ ವ್ಯವಹಾರಗಳನ್ನು ಐಟಿ ಸಿಸ್ಟಮ್ ಮೂಲಕ ನಡೆಸಲು ವ್ಯವಸ್ಥೆಯನ್ನು ಹೊಂದಿರುವುದೇ? ಹೌದಾದಲ್ಲಿ, ಲೆಕ್ಕ ನಿರ್ವಹಣೆ ವ್ಯವಹಾರಗಳನ್ನು ಐಟಿ ಸಿಸ್ಟಮ್ ಹೊರಗೆ ನಡೆಸಿದರೆ, ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮಗಳ ಜೊತೆಗೆ ಲೆಕ್ಕಗಳ ಸಮಗ್ರತೆ ಮೇಲೆ ಉಂಟಾಗುವ ಪರಿಣಾಮಗಳನ್ನು ತಿಳಿಸಿ. | ಹೌದು, ಕಂಪನಿಯು ಐಟಿ ಸಿಸ್ಟಮ್ ಒಂದನ್ನು ಹೊಂದಿದೆ. ಕಂಪನಿಯು ಕ್ರೋಡೀಕರಣ ಮತ್ತು ವರದಿಗಾರಿಕೆಗೆ ಟ್ಯಾಲಿ ಇಆರ್‌ಪಿ ಅನ್ನು ಬಳಸುವುದು. ಆದರೂ, ಪಾನೀಯ, ಕಾಗದ ವಿಭಾಗಗಳು ಮತ್ತು ಶಾಖಾ ಕಚೇರಿಗಳು ಬೇರೆ ಬೇರೆ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್ ಬಳಸುತ್ತಿರುವವು ಮತ್ತು ಇದನ್ನು ಟ್ಯಾಲಿ ಇಆರ್‌ಪಿ 9ಕ್ಕೆ ಸಂಯೋಜನೆ ಮಾಡಿರುವುದಿಲ್ಲ. ಈ ವಿಭಾಗಗಳು ಟ್ರಯಲ್ ಬ್ಯಾಲೆನ್ಸ್ ಅನ್ನು ಸಂಬಂಧಪಟ್ಟ ಸಾಫ್ಟ್‌ವೇರ್‌ನಿಂದ ಪಡೆದುಕೊಳ್ಳುತ್ತಿವೆ ಮತ್ತು ಅದನ್ನು ಕ್ರೋಡೀಕರಣ ಮಾಡಲು ಮತ್ತು ವರದಿ ಮಾಡಲು ಟ್ಯಾಲಿ ಇಆರ್‌ಪಿ 9 ಸಾಫ್ಟ್‌ವೇರ್‌ಗೆ ಕೈಯಿಂದ ನಮೂದು ಮಾಡಿದೆ. ವ್ಯವಹಾರದ ವಿವರಗಳು ನಿರ್ದಿಷ್ಟ ಲೆಕ್ಕ ನಿರ್ವಹಣೆ ಸಾಫ್ಟ್‌ವೇರ್‌ನಲ್ಲಿ ಇರುವವು.<br>ಚಿಟ್‌ಫಂಡ್ ವಿಭಾಗವು 2 ಶಾಖೆಗಳನ್ನು ಹೊರತುಪಡಿಸಿ, ಡಾಟಾವನ್ನು ಬೇರೆ ಬೇರೆ ಸಾಫ್ಟ್‌ವೇರ್‌ನಲ್ಲಿ (ಟ್ಯಾಲಿ ಇಆರ್‌ಪಿ 9 ಯಲ್ಲಿ ಅಲ್ಲ) ನಿರ್ವಹಣೆ ಮಾಡಿದೆ. ಈ 2 ಶಾಖೆಗಳಲ್ಲಿ ಪುಸ್ತಕಗಳನ್ನು ಕೈಯಿಂದ ನಿರ್ವಹಣೆ ಮಾಡಿರುವವು. ಮೇಲಿನ 2 ಶಾಖೆಗಳ ಟ್ರಯಲ್ ಬ್ಯಾಲೆನ್ಸ್ ಅನ್ನು ಚಿಟ್‌ಫಂಡ್ ಸಾಫ್ಟ್‌ವೇರ್ ನಿಂದ ಟ್ರಯಲ್ ಬ್ಯಾಲೆನ್ಸ್ ಎಕ್ಸ್‌ಟ್ರಾ ್ಯಕ್ಟ್ ಜೊತೆ ಕೈಯಿಂದ ಕ್ರೋಡೀಕರಿಸಿದೆ. ಚಿಟ್‌ಫಂಡ್ ವಿಭಾಗದಲ್ಲಿನ ಸದರಿ ಕ್ರೋಡೀಕರಣದ ನಂತರ, ಟ್ರಯಲ್ ಬ್ಯಾಲೆನ್ಸ್ ಅನ್ನು ಕ್ರೋಡೀಕರಣಕ್ಕೆ ಟ್ಯಾಲಿ ಇಆರ್‌ಪಿ 9 ಸಾಫ್ಟ್‌ವೇರ್‌ಗೆ ಕೈಯಿಂದ ನಮೂದಿಸಲಾಗುತ್ತದೆ. |
| 2 | ಸಾಲ ಮರು ಪಾವತಿ ಮಾಡಲು ಕಂಪನಿಯು ಅಸಮರ್ಥವಾದ ಕಾರಣ ಹಾಲಿಯಿರುವ ಸಾಲವನ್ನು ಯಾವುದೇ ಪುನರ್ ರೂಪಿಸಿರುವಿಕೆ ಇರುವುದೇ ಅಥವಾ ಋಣಗಳು/ಸಾಲಗಳು/ ಬಡ್ಡಿ ಇತ್ಯಾದಿಯನ್ನು ಕಂಪನಿಗೆ ಸಾಲ ನೀಡಿಕೆದಾರರು ಮನ್ನಾ/ ವಜಾ ಮಾಡಿರುವ ಪ್ರಕರಣಗಳಿರುವವೆ? ಹೌದಾದರೆ, ಅದರಿಂದ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಸುವುದು. ಅಂತಹ ಪ್ರಕರಣಗಳನ್ನು ಸರಿಯಾಗಿ ಲೆಕ್ಕ ಮಾಡಲಾಗಿರುವುದೇ (ಒಂದು ವೇಳೆ ಸಾಲ ನೀಡಿಕೆದಾರರು ಸರ್ಕಾರದ ಕಂಪನಿಯಾಗಿದ್ದರೆ, ಆಗ ಈ ನಿರ್ದೇಶನವು ಸಾಲ ನೀಡಿಕೆ ಕಂಪನಿಯ ಶಾಸನಬದ್ಧ ಲೆಕ್ಕಪರಿಶೋಧಕರಿಗೂ ಅನ್ವಯವಾಗುವುದು) | ಕಂಪನಿಯು ಯಾವುದೇ ಸಾಲದ ಸೌಲಭ್ಯಗಳನ್ನು ಪಡೆದಿರುವುದಿಲ್ಲ. |

| | | |
|---|---|---|
| 3 | ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ನಿರ್ದಿಷ್ಟ ಯೋಜನೆಗಳಿಗೆ ಪಡೆದಿರುವ /ಪಡೆಯಬಹುದಾಗಿರುವ ಹಣಗಳನ್ನು (ಅನುದಾನಗಳು ಸಬ್ಸಿಡಿ ಇತ್ಯಾದಿ) ಸರಿಯಾಗಿ ಲೆಕ್ಕ ಮಾಡಲಾಗಿರುವುದೇ?) ಅದರ ನಿಯಮಗಳು ಮತ್ತು ನಿಬಂಧನೆಗಳ ಅನ್ವಯ ಬಳಕೆ ಮಾಡಲಾಗಿರುವುದೇ? ಮಾರ್ಗ ಬದಲಾವಣೆಯ ಪ್ರಕರಣಗಳ ಪಟ್ಟಿ ಮಾಡಿ | ಕಂಪನಿಯು ಈ ವರ್ಷದ ಅವಧಿಯಲ್ಲಿ ಕೇಂದ್ರ/ರಾಜ್ಯ ಏಜೆನ್ಸಿಗಳಿಂದ ಯಾವುದೇ ಹಣಗಳನ್ನು (ಅನುದಾನಗಳು/ಸಬ್ಸಿಡಿ ಇತ್ಯಾದಿ) ಪಡೆದಿರುವುದಿಲ್ಲ. ಆದರೂ, ಕಂಪನಿಯು ಜನವರಿ 2007ರಲ್ಲಿ ಎಎಸ್ಐಡಿಇ ನೆರವಿನ ಅಡಿಯಲ್ಲಿ ಅನುದಾನ ಪಡೆದಿದೆ. ಇದರಲ್ಲಿ ರೂ.247.05 ಲಕ್ಷಗಳನ್ನು ವರ್ಷಾಂತ್ಯದಲ್ಲಿ ಬಳಸಲಾಗಿದೆ. |
| | **ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು:** | |
| (ಎ) | ಅನುಬಂಧ-1ರಲ್ಲಿ ಲಗತ್ತಿಸಿರುವ ನಗದು ಮತ್ತು ಬ್ಯಾಂಕ್ ಶಿಲ್ಕುಗಳ ಬಗ್ಗೆ ಎಲ್ಲಾ ಐಟಂಗಳನ್ನು ಲೆಕ್ಕಪರಿಶೋಧಕರು ಪರಿಶೀಲಿಸಿರುವರೇ? ನಿರ್ದಿಷ್ಟವಾದ ಅನುಸರಣೆ ಮಾಡಿರದ ಪ್ರಕರಣವಿದ್ದಲ್ಲಿ, ಅದನ್ನು ವರದಿ ಮಾಡಲಾಗಿರುವುದೇ? | ಅನುಬಂಧ-1 ನೋಡಿ.<br>ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಿರ್ದಿಷ್ಟವಾಗಿ ಅನುಸರಣೆ ಮಾಡಿರದ ಯಾವುದೇ ಪ್ರಮುಖ ಪ್ರಕರಣ ಕಂಡು ಬಂದಿರುವುದಿಲ್ಲ. |
| (ಬಿ) | ದುರುಪಯೋಗ/ವಂಚನೆ ಪ್ರಕರಣಗಳ ಬಗ್ಗೆ ವ್ಯವಹರಿಸಲು ಕಂಪನಿಯು ಪರಿಣಾಮಕಾರಿ ವ್ಯವಸ್ಥೆ ಒಂದನ್ನು ಹೊಂದಿರುವುದೇ ಮತ್ತು ಯಾವುದೇ ಇದ್ದಲ್ಲಿ ಅಂತಹ ನಷ್ಟಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಸೂಕ್ತವಾಗಿ ಲೆಕ್ಕ ಮಾಡಲಾಗಿರುವುದೇ?<br>ಅನಿಶ್ಚಿತ ಶೀರ್ಷಿಕೆಯ ಅಡಿಯಲ್ಲಿ ಕಂಪನಿಯು ಯಾವುದೇ ವಿವರಿಸದಿರುವ ಶಿಲ್ಕುಗಳನ್ನು ಮತ್ತು ಲೆಕ್ಕಗಳನ್ನು ಕಾರ್ಯಾಚರಣೆ ಮಾಡಿರುವುದೇ ಎಂಬುದರ ಬಗ್ಗೆ ಅಭಿಪ್ರಾಯ ತಿಳಿಸಿರುವುದೇ. | ಕಂಪನಿಯು ದುರುಪಯೋಗ/ವಂಚನೆ ಪ್ರಕರಣಗಳ ಬಗ್ಗೆ ವ್ಯವಹರಿಸಲು ಪರಿಣಾಮಕಾರಿಯಾದ ವ್ಯವಸ್ಥೆ ಹೊಂದಿದೆ. ಆದರೆ ವರ್ಷದ ಅವಧಿಯಲ್ಲಿ ದುರುಪಯೋಗದ ಬಗ್ಗೆ ನಾವು ವಿವರಗಳನ್ನು ಪಡೆದುಕೊಂಡಿರುವೆವು ಮತ್ತು ನಮ್ಮ ಅನಿಸಿಕೆಗಳನ್ನು ಸ್ವತಂತ್ರ ಲೆಕ್ಕ ಪರಿಶೋಧಕರ ವರದಿಯ ಅಣುಬಂಧ-ಬಿ ನ ಕಲಂ (xi) ರಲ್ಲಿ ತಿಳಿಸಿದೆ. (ಸಿಎಆರ್‌ಬಿ 2020).<br>ಕಂಪನಿಯು ಹಿಂದಿನ ವರ್ಷಗಳಿಂದ ಸಂಚಯನವಾಗಿರುವ ಒಟ್ಟಾರೆ ರೂ.1196.65 ಲಕ್ಷಗಳ ಮೊತ್ತದ ಚೆಟ್ ಸಸ್ಪೆನ್ಸ್ ಶಿಲ್ಕುಗಳನ್ನು ಹೊಂದಿರುವುದು. ಅಂಕಿ ಅಂಶ ಸಮಂಜಸತೆಯ ಪ್ರಕ್ರಿಯೆಯಲ್ಲಿ ಕಂಪನಿ ತೊಡಗಿದೆ. |
| (ಸಿ) | ಕಂಪನಿಯು ಅದರ ಮಾರಾಟ ಚಟುವಟಿಕೆಗಳ ಸಂಬಂಧದಲ್ಲಿ ಬಾಕಿಗಳು ಮತ್ತು ವಸೂಲಾಗದೆ ಇರುವ ಬಾಕಿಗಳ ವಸೂಲಿಗೆ ಪರಿಣಾಮಕಾರಿಯಾದ ವ್ಯವಸ್ಥೆ ಒಂದನ್ನು ಹೊಂದಿರುವುದೆ ಮತ್ತು ಬಾಕಿಗಳನ್ನು ವಸೂಲಿ ಮಾಡಿರುವುದನ್ನು ಲೆಕ್ಕದ ಪುಸ್ತಕಗಳಲ್ಲಿ ಸೂಕ್ತವಾಗಿ ದಾಖಲು ಮಾಡಲಾಗಿರುವುದೇ? | ಕಂಪನಿಯು ಕಾಗದದ ವಿಭಾಗದಲ್ಲಿ ಹೊರತುಪಡಿಸಿ, ಉಳಿದಂತೆ ಬಾಕಿಗಳ ವಸೂಲಿಗೆ ಪರಿಣಾಮಕಾರಿಯಾದ ವ್ಯವಸ್ಥೆ ಹೊಂದಿದೆ. ಕಾಗದದ ವಿಭಾಗದಲ್ಲಿ ಬಹುಪಾಲು ಪ್ರಕರಣಗಳಲ್ಲಿ ಇನ್‌ವಾಯ್ಸ್‌ನಲ್ಲಿ ನಿಗದಿಪಡಿಸಿರುವ ಕ್ರೆಡಿಟ್ ಅವಧಿ ಒಳಗೆ ಸಾಲಗಾರರಿಂದ ವಸೂಲಿ ಮಾಡಿರುವುದಿಲ್ಲ.<br>ಪರೀಕ್ಷಾರ್ಥ ತಪಾಸಣೆ ಆಧಾರದ ಮೇಲೆ ಮತ್ತು ನಮಗೆ ಒದಗಿಸಿದ ಮಾಹಿತಿ ಮತ್ತು ನೀಡಿದ ವಿವರಣೆಗಳ ಆಧಾರದ ಮೇಲೆ, ನಾವು ವರದಿ ಮಾಡುವುದೇನೆಂದರೆ, ವಸೂಲಾಗದೆ ಉಳಿದಿರುವ ಬಾಕಿಗಳು ಮತ್ತು ಇವುಗಳ ವಸೂಲಾತಿಗಳನ್ನು ಲೆಕ್ಕದ ಪುಸ್ತಕಗಳಲ್ಲಿ ಸರಿಯಾಗಿ ದಾಖಲು ಮಾಡಿದೆ. ಆದರೂ, ಶಿಲ್ಕುಗಳ ದೃಢೀಕರಣೆಗಳನ್ನು ಬಹುಪಾಲು ಸಾಲಗಾರರುಗಳಿಂದ ಪಡೆದುಕೊಂಡಿರುವುದಿಲ್ಲ. |

## ''ಅನುಬಂಧ-1''

| ಕ್ರಸಂ. | ಪರಿಶೀಲನೆ ಪಟ್ಟಿಯಲ್ಲಿನ ಐಟಂಗಳು | ಷರಾ |
|---|---|---|
| 1. | ಎಲ್ಲಾ ಬ್ಯಾಂಕ್ ಖಾತೆಗಳು/ಸಾವಧಿ ಠೇವಣಿಗಳನ್ನು ಬ್ಯಾಂಕುಗಳಲ್ಲಿ ತೆರೆಯಲಾಗಿರುವುದೆ/ಸೂಕ್ತ ಅಧಿಕಾರ ನೀಡಿಕೆ ಮತ್ತು ಅನುಮೋದನೆಗಳು ಮೇಲೆ ತಿಳಿಸಿರುವ ಅಧಿಕಾರಗಳ ನೀಡಿಕೆ ಅನುಸಾರ ಇರುವುದೇ? | ಹೌದು |
| 2 | ಬ್ಯಾಂಕ್ ಸಮಂಜಸತೆ ವಿವರಗಳನ್ನು ಸಿದ್ಧಪಡಿಸುವ ನಿಯತಕಾಲಿಕ ವ್ಯವಸ್ಥೆ ಇರುವುದೇ ಮತ್ತು ಅವುಗಳನ್ನು ಲೆಕ್ಕಪರಿಶೋಧನೆ ಮಾಡಲು ಪರಿಶೀಲನೆಗೆ ಹಾಜರುಪಡಿಸಲಾಗಿತ್ತೇ ? | ಹೌದು |
| 3 | ಪ್ರಧಾನ ಮತ್ತು ಎಲ್ಲಾ ಸಹಾಯಕ ಬ್ಯಾಂಕ್ ಖಾತೆಗಳ ಬ್ಯಾಂಕ್ ಸಮಂಜಸತೆ ಮಾಡಲಾಗಿರುವುದೆ? | ಹೌದು |
| 4 | ಬ್ಯಾಂಕ್ ಖಾತೆಗಳ ಕಾರ್ಯಾಚರಣೆಗೆ ಏಕ ಸಹಿದಾರರಿಗೆ ಅಧಿಕಾರ ನೀಡಲಾಗಿರುವುದೆ? | ಇಲ್ಲ, ಇದರ ಹೊರತಾಗಿ ನೀಡಿರುವ ಅಧಿಕಾರದ ಅನ್ವಯ ಒಬ್ಬರೆ ಬ್ಯಾಂಕ್ ಖಾತೆಗಳನ್ನು ಕಾರ್ಯಾಚರಣೆ ಮಾಡಲು ವ್ಯವಸ್ಥಾಪಕ ನಿರ್ದೇಶಕರಿಗೆ ಅಧಿಕಾರ ನೀಡಿದೆ. |
| 5 | ಸಾವಧಿ ಠೇವಣಿಗಳ ಪೂರ್ಣ ಅವಧಿಯ ಬಡ್ಡಿಯನ್ನು ಲೆಕ್ಕದ ಪುಸ್ತಕಗಳಲ್ಲಿ ಸೇರಿಸಲಾಗಿರುವುದೆ? | ಹೌದು |
| 6 | ನಗದು ಹಣದ ಭೌತಿಕ ಪರಿಶೀಲನೆಯನ್ನು ನಿಯತಕಾಲಿಕವಾಗಿ ಮಾಡಲಾಗಿದೆಯೆ? | ಹೌದು |
| 7 | ಸ್ಥಿತಿ ವಿವರಣಾ ಪಟ್ಟಿಯಲ್ಲಿ ತೋರಿಸಿರುವ ಕೈಯಲ್ಲಿರುವ ನಗದಿನ ವಿವರ ನಗದು ಹಣದ ಭೌತಿಕ ಪರಿಶೀಲನೆ ಸರ್ಟಿಫಿಕೇಟ್ ಜೊತೆ ಹೊಂದಾಣಿಕೆಯಾಗಿರುವುದೆ? | ಹೌದು |
| 8 | ಠೇವಣಿ ಮೊತ್ತ , ಅವಧಿ ಮುಗಿಯುವ ದಿನಾಂಕಗಳು, ಬಡ್ಡಿ ದರ ಮತ್ತು ಬಡ್ಡಿ ಪಾವತಿ ದಿನಾಂಕಗಳನ್ನು ತೋರಿಸುವ ನಿಶ್ಚಿತ ಠೇವಣಿಗಳ ರಿಜಿಸ್ಟರ್ ಇರುವುದೆ? | ಹೌದು, ನಿಶ್ಚಿತ ಠೇವಣಿ ರಿಜಿಸ್ಟರ್ ನಿರ್ವಹಣೆ ಮಾಡಿದೆ. ಆದರೂ, ಬಡ್ಡಿ ಪಾವತಿ ದಿನಾಂಕಗಳ ಬಗ್ಗೆ ವಿವರಗಳನ್ನು ನಿರ್ವಹಣೆ ಮಾಡಿಲ್ಲ. |
| 9 | ನಿಶ್ಚಿತ ಠೇವಣಿಗಳ ಮೇಲಿನ ಬಡ್ಡಿಯನ್ನು ನಿಗದಿತ ದಿನಾಂಕಗಳಲ್ಲಿ ಪಡೆದಿರುವ ಬಗ್ಗೆ ಖಾತರಿಪಡಿಸುವ ಅನುಸರಣೆ ವ್ಯವಸ್ಥೆ ಇರುವುದೆ? | ಹೌದು |
| 10 | ನಿಶ್ಚಿತ ಠೇವಣಿಗಳ ಪಕ್ವತೆಯಾದ ಮೊತ್ತವನ್ನು ಯಾವುದೇ ವಿಳಂಬವಿಲ್ಲದೆ ವರ್ಗಾವಣೆ ಮಾಡಿರುವ ಬಗ್ಗೆ ಖಾತರಿಪಡಿಸುವ ಅನುಸರಣೆ ವ್ಯವಸ್ಥೆ ಇರುವುದೆ? | ಹೌದು |
| 11 | ಎಲ್ಲಾ ಖಾತೆಗಳ ಅಂದರೆ ಎಸ್‌ಬಿ ಖಾತೆಗಳು, ಚಾಲ್ತಿ ಖಾತೆಗಳು ಮತ್ತು ನಿಶ್ಚಿತ ಠೇವಣಿಗಳ ಬಗ್ಗೆ ಬ್ಯಾಂಕುಗಳಿಂದ ಬ್ಯಾಂಕ್ ದೃಢೀಕರಣೆ ವಿವರಗಳನ್ನು ನಿಯತಕಾಲಿಕವಾಗಿ ಪಡೆಯಲಾಗಿರುವುದೆ? | ಹೌದು |
| 12 | ಎಲ್ಲಾ ಬ್ಯಾಂಕ್ ಶಿಲ್ಕುಗಳ ಸಂಬಂಧ ಶಿಲ್ಕುಗಳ ದೃಢೀಕರಣೆಯು ಬ್ಯಾಂಕ್ ವಿವರಗಳ ಜೊತೆ ಹೊಂದಾಣಿಕೆಯಾಗುವವೆ? | ಹೌದು |
| 13 | ನಿಶ್ಚಿತ ಠೇವಣಿಗಳು ಮತ್ತು ನಿಶ್ಚಿತ ಠೇವಣಿಗಳ ರಿಜಿಸ್ಟರ್ ಅನ್ವಯ ಬಡ್ಡಿಯು ಬ್ಯಾಂಕ್ ನೀಡಿದ ದೃಢೀಕರಣೆ/ಸರ್ಟಿಫಿಕೇಟ್ ಜೊತೆ ಹೊಂದಾಣಿಕೆಯಾಗುವುದೆ? | ಹೌದು, ನಿಶ್ಚಿತ ಠೇವಣಿಗಳು ಮತ್ತು ಲೆಕ್ಕದ ಪುಸ್ತಕಗಳ ಅನ್ವಯ ಬಡ್ಡಿಗಳು ಬ್ಯಾಂಕುಗಳು ನೀಡಿರುವ ದೃಢೀಕರಣೆ/ಸರ್ಟಿಫಿಕೇಟ್ ಜೊತೆ ಹೊಂದಿಕೆಯಾಗುವುದು. |
| 14 | ಬ್ಯಾಂಕುಗಳಿಂದ ಪಡೆದಿರುವ ದೃಢೀಕರಣೆ ವಿವರಣೆಗಳು ಅಧಿಕೃತವಾಗಿರುವುದೇ ಮತ್ತು ಬ್ಯಾಂಕಿನ ಲೆಟರ್ ಹೆಡ್‌ನಲ್ಲಿ ಇರುವುದೆ? | ಹೌದು |

| | | |
|---|---|---|
| 15 | ಮೇಲಿನ ಪರಿಶೀಲನೆಯಲ್ಲಿ ಯಾವುದೇ ವ್ಯತ್ಯಾಸ ಕಂಡು ಬಂದಿದ್ದರೆ, ಅದನ್ನು ಮುಂದಿನ ವರ್ಷದಲ್ಲಿ ಹೊಂದಾಣಿಕೆ ಮಾಡಲಾಗಿರುವುದೆ? | ಯಾವುದೇ ವ್ಯತ್ಯಾಸವಿರುವುದಿಲ್ಲ. |
| 16 | ಪುಸ್ತಕಗಳಲ್ಲಿ ಲೆಕ್ಕ ಮಾಡಿರುವ ಬ್ಯಾಂಕ್ ಶಿಲ್ಕುಗಳು ಬ್ಯಾಂಕುಗಳಿಂದ ಲೆಕ್ಕ ಪರಿಶೋಧಕರು ಪಡೆದಿರುವ ಬಾಹ್ಯ ದೃಢೀಕರಣೆಗಳ ಜೊತೆ ಹೊಂದಾಣಿಕೆಯಾಗುವುದೇ? | ಕಂಪನಿಯು ಬ್ಯಾಂಕುಗಳಿಂದ ದೃಢೀಕರಣೆಗಳನ್ನು ಪಡೆದಿರುವುದು. ಇವು ಪುಸ್ತಕಗಳ ಲೆಕ್ಕದ ಜೊತೆ ಹೊಂದಾಣಿಕೆ ಆಗುವುದಿಲ್ಲ. ಇದನ್ನು ನಾವು ಪರಿಶೀಲಿಸಿರುವೆವು. |
| 17 | ಶಾಸನಬದ್ಧ ಲೆಕ್ಕಪರಿಶೋಧಕರು ಆಂತರಿಕ ಹಣಕಾಸಿನ ನಿಯಂತ್ರಣಗಳ ವರದಿಯಲ್ಲಿ ಮೇಲೆ ತಿಳಿಸಿರುವ ತಪ್ಪುಗಳನ್ನು ಬಹಿರಂಗಪಡಿಸಿರುವರೆ? ಇಲ್ಲದಿದ್ದರೆ, ಲೆಕ್ಕಪರಿಶೋಧನೆ ವಿಚಾರಣೆ ಹೊರಡಿಸಲಾಗಿತ್ತೆ ? | ಆಂತರಿಕ ಹಣಕಾಸಿನ ನಿಯಂತ್ರಣಗಳ ವರದಿ ಅಡಿಯಲ್ಲಿ ವರದಿ ಮಾಡಬೇಕಾದ ಯಾವುದೇ ವಾಸ್ತವಿಕ ಲೋಪಗಳು ಕಂಡು ಬಂದಿರುವುದಿಲ್ಲ. |

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸಂಸ್ಥೆಯ ನೋಂದಣಿ ಸಂ.100892**

**ಯುಡಿಐಎನ್:** 24100892BJZXRJ4530
ಸ್ಥಳ : ಬೆಂಗಳೂರು
ದಿನಾಂಕ: 6ನೇ ಸೆಪ್ಟೆಂಬರ್, 2024

MSIL

## 2023-24ನೇ ವರ್ಷದ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯಲ್ಲಿನ ಆಕ್ಷೇಪಣೆ ಅಂಶಗಳಿಗೆ ಉತ್ತರಗಳು

| ಲೆಕ್ಕಪರಿಶೋಧನೆ ಪ್ರಶ್ನೆಗಳು | ಕಂಪನಿಯ ಉತ್ತರ |
|---|---|
| ಎ. ಕಂಪನಿಯು ಈ ವರ್ಷದ ಅವಧಿಯಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ನಡೆಸಿರುವುದಿಲ್ಲ. ಆದರೂ, ಹಿಂದಿನ ವರ್ಷದಲ್ಲಿ ಮರಳಿನ ಭೌತಿಕ ಪರಿಶೀಲನೆ ಮಾಡಿದೆ. ಈ ಪರಿಶೀಲನೆಯಲ್ಲಿ ರೂ.347.87ಲಕ್ಷಗಳ ಮೌಲ್ಯದ 16565.002 ಎಂಟಿ ಮರಳು ಕಡಿಮೆ ಇರುವುದು ಕಂಡು ಬಂದಿದೆ. ಕಂಪನಿಯು ಹೀಗೆ ಕಂಡು ಬಂದಿರುವ ಸರಕಿನ ಕೊರತೆಯ ತಪಶೀಲನ್ನು ವಜಾ ಮಾಡಿರುವುದಿಲ್ಲ ಅಥವಾ ಪುಸ್ತಕಗಳಲ್ಲಿ ಈ ಮೊದಲು ಮಾಡಿದ್ದ ಸಂಬಂಧಪಟ್ಟ ವ್ಯವಸ್ಥೆಯನ್ನು ಹಿಂಪಡೆದಿರುವುದಿಲ್ಲ. ಆದ್ದರಿಂದ, ತಪಶೀಲುಗಳು ಮತ್ತು ತಪಶೀಲುಗಳ ವ್ಯವಸ್ಥೆ ಎರಡನ್ನು ರೂ.347.87ಲಕ್ಷಗಳವರೆಗೆ ಅಧಿಕವಾಗಿ ತಿಳಿಸಲಾಗಿದೆ. | ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ, ರೂ.1871.50 ಲಕ್ಷಗಳ ಪ್ರಮಾಣದ ಸಂಪೂರ್ಣ ಮರಳಿನ ದಾಸ್ತಾನಿಗೆ ಕಂಪನಿಯ ವ್ಯವಸ್ಥೆ ಮಾಡಿದೆ. ಈ ವಿಭಾಗ 2021-22 ರಿಂದ ಯಾವುದೇ ವ್ಯವಹಾರ ನಡೆಸಿರುವುದಿಲ್ಲ.<br><br>ಸರಕಿನ ತಪಶೀಲು ಪ್ರಸ್ಟಂ ವಿಧಾನದಿಂದ ಪ್ರಮಾಣ ಲೆಕ್ಕಾಚಾರದ ಮೇಲೆ ಅಂದಾಜು ಮಾಡಿದೆ. ಸಂಪೂರ್ಣ ಗಣನೀಯ ಪ್ರಮಾಣವನ್ನು ನಾವು ಮಾರಾಟ ಮಾಡದ ಹೊರತು, ನಿಖರವಾದ ಕೊರತೆಯನ್ನು ಗುರುತಿಸಲು ನಮಗೆ ಸಾಧ್ಯವಿಲ್ಲ. |
| ಬಿ. (i) ಸರಿಯಾದ ಆಂತರಿಕ ನಿಯಂತ್ರಣ ಕ್ರಮಗಳು ಇಲ್ಲದಿರುವುದಿರುವುದರಿಂದ, (ii) ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳನ್ನು ಸೃಜಿಸಲು ಬೆಂಬಲ ಇಲ್ಲದಿರುವುದರಿಂದ, (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆ ವ್ಯವಸ್ಥೆ ಇಲ್ಲದ ಕಾರಣ ಅದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಪರಿಣಾಮ ಉಂಟಾಗಬಹುದಾಗಿದ್ದರು ಸಹ ಅದನ್ನು ತಿಳಿಯಲಾಗಿಲ್ಲ.<br>ಐಎನ್‌ಎಎಸ್ 109 ಹಣಕಾಸಿನ ದಾಖಲೆಗಳ ಅನುಸಾರ, ನಿರೀಕ್ಷಿತ ಕ್ರೆಡಿಟ್ ಲಾಸ್ ಮಾಡೆಲಲನ (ಇಸಿಎಲ್) ಅನ್ವಯ ರೂ.635.91 ಲಕ್ಷಗಳ ಕ್ಷೀಣತೆ ನಷ್ಟದ ಅವಕಾಶವನ್ನು ಕಂಪನಿ ಮಾಡಿದೆ. ''ಆದರೆ ಸುಸ್ತಿಯ ಸಾಧ್ಯತೆ (%) ತಪ್ಪಾಗಿ ನೀಡಿರುವ ನಷ್ಟ (%) ಮತ್ತು ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳದ ಮೇಲಿನ ಆಧಾರದಲ್ಲಿ ಹಣಕಾಸಿನ ಆಸ್ತಿಗಳ ವರ್ಗೀಕರಣದ ಆಧಾರ ಮತ್ತು ತತ್ಪರಿಣಾಮವಾಗಿ 12 ತಿಂಗಳ ಇಸಿಎಲ್‌ನ ನಿರ್ಧರಣೆ ಮತ್ತು ಜೀವಿತಾವಧಿ ಇಸಿಎಲ್ ಸೇರಿದಂತೆ ವಿವಿಧ ಮಾನದಂಡಗಳ ನಿಖರತೆ ಮತ್ತು ಕಾರಣದ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದಿರುವುದರಿಂದ, ಇಸಿಎಲ್ ಸಾಕಷ್ಟಿರುವಿಕೆ ಬಗ್ಗೆ ಮೌಲ್ಯ ಮಾಪನ ಮಾಡಲು ಮತ್ತು ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಾಗದು. | ಚಿಟ್‌ಫಂಡ್ ವಿಭಾಗವು ಹೊಸ ವೆಬ್ ಆಧಾರಿತ ಸಾಫ್ಟ್‌ವೇರ್ ಪರಿಚಯಿಸುವ ಪ್ರಕ್ರಿಯೆಯಲ್ಲಿದೆ. ಒಮ್ಮೆ ಹೊಸ ಸಾಫ್ಟ್‌ವೇರ್ ಅನುಷ್ಠಾನ ಮಾಡಿದರೆ ಆಗ ಶಿವಮೊಗ್ಗ ಮತ್ತು ಕೆಂಗೇರಿ ಚಿಟ್‌ಫಂಡ್ ಶಾಖೆಗಳ ಸಮಸ್ಯೆಗಳು ಪರಿಹಾರವಾಗುವವು. ಹೊಸ ಸಾಫ್ಟ್ ವೇರ್ ಅನ್ನು 2024-25ರ ವರ್ಷದಲ್ಲಿ ಅನುಷ್ಠಾನವಾಗುವ ಸಂಭವವಿದೆ.<br><br>ನಿರೀಕ್ಷಿತ ಕ್ರೆಡಿಟ್ ನಷ್ಟದ ಮೌಲ್ಯಮಾಪನ ಕಾರ್ಯವು ಬಹು ದೀರ್ಘವಾದ ಪ್ರಕ್ರಿಯೆಯಾಗಿದ್ದು, ಇದರಲ್ಲಿ ನಿರ್ಧರಣೆಯಲ್ಲಿ ಅನೇಕ ಅಂಕಿ ಅಂಶಗಳ ವಿಚಾರಗಳು ಒಳಗೊಂಡಿರುವವು.<br><br>ಒಮ್ಮೆ ವಿಭಾಗವು ಹೊಸ ಸಾಫ್ಟ್‌ವೇರ್ ಅನುಷ್ಠಾನ ಮಾಡಿದರೆ, ವಿಭಾಗವು ಪ್ರಸಕ್ತ ಹಣಕಾಸಿನ ವರ್ಷ 2024-25ರಲ್ಲಿ ಸಂಬಂಧಿಸಿದ ಎಲ್ಲಾ ವಿಚಾರಗಳನ್ನು ಸಕಾಲಿಕಗೊಳಿಸುವುದು. |
| ಡಿ. ಕಂಪನಿಯು ನಿಷಿ ಫೋರೆಕ್ಸ್ ಮತ್ತು ಲೀಷರ್ ಲಿಮಿಟೆಡ್ ಕಂಪನಿಗೆ ರೂ.169.16 ಲಕ್ಷಗಳ ಸಂದೇಹಾಸ್ಪದ ಮುಂಗಡಗಳನ್ನು ನೀಡಿರುವುದಿಲ್ಲ. ಸದರಿ ಸಂದೇಹಾಸ್ಪದ ಮುಂಗಡಕ್ಕೆ ವ್ಯವಸ್ಥೆ ಮಾಡದಿರುವುದರಿಂದ ಈ ಅವಧಿಯ ಲಾಭವನ್ನು ಹೆಚ್ಚಿಗೆಯಾಗಿ ತಿಳಿಸಲು ಮತ್ತು ಸರಬರಾಜುದಾರರಿಗೆ ರೂ.169.16 ಲಕ್ಷದ ಮುಂಗಡಗಳನ್ನು ಹೆಚ್ಚಿಗೆಯಾಗಿ ತಿಳಿಸಲು ಕಾರಣವಾಗಿದೆ. | ಪ್ರವಾಸದ ಕಾರ್ಯಗಳು ಇದರಲ್ಲಿದ್ದು, ಇದನ್ನು ಪಾರ್ಟಿಯು ಏರ್ಪಡಿಸಿತ್ತು. ಈ ಸಂಬಂಧ ಬಿಲ್‌ಗಳನ್ನು ಇನ್ನೂ ಬಂದಿರುವುದಿಲ್ಲ. ಇದಲ್ಲದೆ, ಈ ದಿನಾಂಕದಂದು ಇದ್ದಂತೆ ಬಾಕಿ ಇರುವ ಮೌಲ್ಯಗಳ ವಸೂಲಿ ಬಗ್ಗೆ ಕಾನೂನು ಕ್ರಮಗಳನ್ನು ಕಂಡು ಹಿಡಿಯುವ ಕ್ರಿಯೆಯಲ್ಲಿ ವಿಭಾಗ ತೊಡಗಿದೆ. ಹಾಗಾಗಿ ಇದನ್ನು ವ್ಯವಸ್ಥೆ ಮಾಡಲು ಪರಿಗಣಿಸಿರುವುದಿಲ್ಲ. ಕಾನೂನ ಪ್ರಕ್ರಿಯೆಯ ಫಲಿತಾಂಶದ ಆಧಾರದ ಮೇಲೆ, ವಿಭಾಗವು ಅಗತ್ಯವಾದಲ್ಲಿ ಪ್ರಸ್ತುತ ವರ್ಷದಲ್ಲಿ ಸರಿಪಡಿಸುವ ಕ್ರಮ ಕೈಗೊಳ್ಳಲಾಗುವುದು. |

| | |
|---|---|
| ಇ. ಎಂಎಸ್‌ಎಂಇ ವ್ಯಾಪಾರದ ಸಂಬಂಧ ಪಾವತಿ ಮಾಡುವಿಕೆಯಲ್ಲಿ ವಿಳಂಬವಾಗಿರುವುದಕ್ಕೆ ಬಡ್ಡಿ ಹೊಣೆಗಾರಿಕೆಯನ್ನು ಎಂಎಸ್‌ಎಂಇ ಕಾಯ್ದೆ, 2006ರ ಅನ್ವಯ ನೆರವೇರಿಸಿರುವುದಿಲ್ಲ. ಆದರೆ, ಎಂಎಸ್ ಎಂಇ ವೆಂಡರ್‌ಗಳಾದ ಮಾಡಿರುವ ಯಾವುದೇ ಬಡ್ಡಿ ಕೇಳಿಕೆಯ ಹುಕ್ಕನ್ನು ಕಂಪನಿ ಪಡೆದಿರದ ಕಾರಣ ಎಂಎಸ್‌ಎಂಇ ವ್ಯಾಪಾರದ ಸಂಬಂಧ ಪಾವತಿ ಮಾಡುವುದರಲ್ಲಿ ಉಂಟಾದ ವಿಳಂಬದ ಅವಧಿಗೆ ಕಂಪನಿ ಬಡ್ಡಿ ನೀಡಿರುವುದಿಲ್ಲ. ಮಾಹಿತಿ ಇಲ್ಲದ ಕಾರಣ ಅಂತಹ ಬಡ್ಡಿ ಮೊತ್ತ ಎಷ್ಟು ಎಂಬುದನ್ನು ನಾವು ಪ್ರಮಾಣೀಕರಿಸಲು ಸಾಧ್ಯವಿಲ್ಲ | ಇ. ಕಂಪನಿಯು ಎಂಎಸ್‌ಎಂಇ ವೆಂಡರುಗಳಿಂದ ಯಾವುದೇ ಬಡ್ಡಿ ಕೇಳಿಕೆಯನ್ನು ಪಡೆದಿರುವುದಿಲ್ಲ, ಹಾಗಾಗಿ ಅಂತಹ ಬಡ್ಡಿಗೆ ವ್ಯವಸ್ಥೆ ಮಾಡದಿರುವುದಿಲ್ಲ. ಈ ಕೇಳಿಕೆಗಳ ಬಗ್ಗೆ ನಿರ್ದಿಷ್ಟ ಮಾಹಿತಿ ಇಲ್ಲದೆ, ಬಡ್ಡಿ ಹೊಣೆಗಾರಿಕೆ ಪ್ರಮಾಣ ನಿರ್ಧರಣೆ ಸಾಧ್ಯವಿಲ್ಲ. ಅಗತ್ಯವಾದ್ದಲ್ಲಿ ಕಂಪನಿಯು ಪ್ರಸಕ್ತ ವರ್ಷ 2024-25ರಲ್ಲಿ ಅಗತ್ಯ ವ್ಯವಸ್ಥೆಗಳನ್ನು ದಾಖಲಿಸಲು ಸೂಕ್ತ ಕ್ರಮ ಕೈಗೊಳ್ಳುವುದು. |
| ಎಫ್. ಕಂಪನಿಯು ದೀರ್ಘಾವಧಿ ಗುತ್ತಿಗೆಗಳನ್ನು ಐಎನ್‌ಡಿ ಎಎಸ್ 116 ಅನ್ವಯ ವರ್ಷದ ಅವಧಿಯಲ್ಲಿ ಮಾನ್ಯ ಮಾಡಿದೆ. ಇವುಗಳನ್ನು ಹಿಂದಿನ ಹಣಕಾಸಿನ ವರ್ಷದ ಕೊನೆಯವರೆಗೆ ಅಲ್ಪಾವಧಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಲಾಗಿದೆ. ಇದರಿಂದಾಗಿ ಬಳಕೆ ಹಕ್ಕಿನ ಆಸ್ತಿಗಳಿಗೆ (ಆರ್‌ಒಯು ಆಸ್ತಿಗಳು) ಸೇರ್ಪಡೆಯಾಗುತ್ತದೆ ಮತ್ತು ಗುತ್ತಿಗೆ ಹೊಣೆಗಾರಿಕೆಗಳು ರೂ.1011.20 ಲಕ್ಷಗಳಷ್ಟು ಅಧಿಕವಾಗುತ್ತದೆ. ಆರ್‌ಒಯು ಆಸ್ತಿಗಳ ಮೇಲಿನ ಸವಕಳಿಯು ರೂ.326.34 ಲಕ್ಷಗಳಷ್ಟು ಅಧಿಕವಾಗಿದೆ ಮತ್ತು ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ರೂ.49.18 ಲಕ್ಷಗಳಷ್ಟು ಅಧಿಕವಾಗಿದೆ. ಐಎನ್‌ಡಿ ಎಎಸ್-8 ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿನ ಬದಲಾವಣೆಗಳು ಮತ್ತು ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿನ ಈ ಬದಲಾವಣೆಗಳಿಗೆ ತಪ್ಪುಗಳ ಬಗ್ಗೆ ಪ್ರಕಟಣೆ ಅಗತ್ಯತೆಗನ್ನು ಕಂಪನಿ ಪರಿಪಾಲಿಸಿರುವುದಿಲ್ಲ. | ಸ್ವತಂತ್ರ ಹಣಕಾಸಿನ ಹೇಳಿಕೆಯಲ್ಲಿನ ಅಂದಾಜುಗಳಲ್ಲಿ ಬದಲಾವಣೆಗಳ ಪರಿಣಾಮವನ್ನು ಕಂಪನಿ ತಿಳಿಸಿರುವುದಿಲ್ಲ ಮತ್ತು ಐಎನ್‌ಡಿ ಎಎಸ್ 8 ರ ಅನ್ವಯ ಆರ್‌ಒಯು ಆಸ್ತಿಗಳ ಮೇಲೆ ಸವಕಳಿಯ ಲೆಕ್ಕ ನಿರ್ವಹಣೆ ನೀತಿಗಳಲ್ಲಿನ ಬದಲಾವಣೆ ಪ್ರಕಟಣೆಯನ್ನು ಪುನರ್ ಪರಿಶೀಲಿಸಲಾಗುವುದು. ಮತ್ತು ಅಗತ್ಯವಾದಲ್ಲಿ ಪ್ರಸಕ್ತ ಹಣಕಾಸಿನ ವರ್ಷದ 2024-25ರಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. |
| ಜಿ. ಹಣಕಾಸಿನ ವಿವರಗಳ ಟಿಪ್ಪಣಿ 42 (viii) ರಲ್ಲಿನ ಪ್ರಕಟಣೆಯು ಕಂಪನಿ ಮಾಡಿರುವ ಲೆಕ್ಕ ನಿರ್ವಹಣೆ ಬಗ್ಗೆ ಸಂಪೂರ್ಣ ವಿವರಗಳನ್ನು ಒಳಗೊಂಡಿರುವುದಿಲ್ಲ. ಕಂಪನಿಯು ರೂ.245.05 ಲಕ್ಷಗಳ ಬಾಡಿಗೆ ಆದಾಯ ಪರಿಗಣಿಸದೆ ಮತ್ತು ಇತರೆ ಖರ್ಚುಗಳಲ್ಲಿ ರೂ.245.05 ಲಕ್ಷದ ವ್ಯವಸ್ಥೆಯನ್ನು ಮಾಡದೆ ಇದರ ಬಗ್ಗೆ ಅವಕಾಶ ಒದಗಿಸಲಾಗಿದೆ. ಲಾಭ ಮತ್ತು ನಷ್ಟದ ಲೆಕ್ಕದ ಮೂಲಕ ತೆಗೆದುಕೊಳ್ಳದೆ ನಮೂದುಗಳನ್ನು ಮಾಡಿದೆ. ಕಂಪನಿಯು ಬರಬೇಕಾಗಿರುವವುಗಳು ಸಂದೇಹಾಸ್ಪದ ಎಂಬುದಾಗಿ ಪರಿಗಣಿಸಿರುವುದರಿಂದ ಹಣಕಾಸಿನ ಲಾಭದ ಮೇಲೆ ಯಾವುದೇ ಪರಿಣಾಮ ಉಂಟಾಗದು. | ಕಂಪನಿಯು 31ನೇ ಮಾರ್ಚ್ 2021ಕ್ಕೆ ಕೊನೆಗೊಂಡ ಹಣಕಾಸಿನ ವರ್ಷದಿಂದ ಪಡೆಯಬೇಕಾಗಿರುವವು ಸಂದೇಹಾಸ್ಪದ ಎಂಬುದಾಗಿ ವರ್ಗೀಕರಿಸಿದೆ. ಬಡ್ಡಿ ಮನ್ನಾ ಮಾಡುವಕೆಗೆ ಬಾಕಿಯಿರುವ ಬಾಕಿಗಳು ಹಾಗೂ ಪ್ರಸಕ್ತದ ಬಾಡಿಗೆ ಚುಕ್ತ ಮಾಡುವ ಭರವಸೆ ಷರತ್ತನ್ನು ವಿಧಿಸಿದೆ. ಇದಕ್ಕೆ ಪಾವತಿ ಮಾಡಬೇಕಾದ ಬಾಡಿಗೆ ಜೊತೆಗೆ ಬಡ್ಡಿ ವಸೂಲಿ ಮಾಡಲು ಮಂಡಳಿ ತೀರ್ಮಾನ ಮಾಡಿದೆ. ಕಂಪನಿಯ ಲಾಭದಾಯಕತೆ ಮೇಲೆ ಯಾವುದೇ ಪರಿಣಾಮ ಇಲ್ಲದಿರುವುದರಿಂದ, ಮಂಡಳಿ ಈ ತೀರ್ಮಾನ ಕೈಗೊಂಡಿದೆ. ಕಂಪನಿಯು ಪ್ರಸಕ್ತ ಹಣಕಾಸಿನ ವರ್ಷದ 2024-25 ರಲ್ಲಿ ಅಗತ್ಯ ಲೆಕ್ಕ ನಿರ್ವಹಣೆ ಮಾಡುವುದು. |
| ಎಚ್. ನೆಸ್ಟವೆಲ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್‌ಗೆ (''ಗುತ್ತಿಗೆದಾರರು'') ಮೈಸೂರಿನಲ್ಲಿ ಗುತ್ತಿಗೆಗೆ ನೀಡಿದ್ದ ಉಗ್ರಾಣಕ್ಕೆ ಡಿಸೆಂಬರ್ 2021 ರಿಂದ ಮಾರ್ಚ್ 2024 ರ ಅವಧಿಯ ವರೆಗೆ ಬಡ್ಡಿ ಆದಾಯವನ್ನು ಗುತ್ತಿಗೆದಾರರ ಜೊತೆಗಿನ ವಿವಾದದ ಕಾರಣ ಕಂಪನಿಯು ಮಾನ್ಯ ಮಾಡಿರುವುದಿಲ್ಲ. ಕಂಪನಿಯು ಹಣಕಾಸಿನ ಹೇಳಿಕೆಗಳಲ್ಲಿ ಸದರಿ ವಿವಾದದ ಬಗ್ಗೆ ಮತ್ತು ವಿವಾದದ ಪ್ರಯುಕ್ತ ಗುತ್ತಿಗೆದಾರರಿಂದ ವಸೂಲಿ ಮಾಡಬೇಕಿರುವ ಮೊತ್ತದ ಬಗ್ಗೆ ಸೂಕ್ತವಾದ ಪ್ರಕಟಣೆ ಮಾಡಿರುವುದಿಲ್ಲ. 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ ಗುತ್ತಿಗೆದಾರರ ಬಾಡಿಗೆ ಆದಾಯ ರೂ.41.73 ಲಕ್ಷಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಗಳಲ್ಲಿ ಲೆಕ್ಕಕ್ಕೆ ತೆಗೆದುಕೊಂಡಿರುವುದಿಲ್ಲ. ಬರಬೇಕಾಗಿರುವುಗಳು ಸಂದೇಹಾಸ್ಪದವಾಗಿರುವುದಾಗಿ ಕಂಪನಿ ಪರಿಗಣಿಸಿರುವುದರಿಂದ, ಹಣಕಾಸಿನ ಲಾಭದ ಮೇಲೆ ಯಾವುದೇ ಪರಿಣಾಮವಿರುವುದಿಲ್ಲ. | ಲೆಕ್ಕದ ಪುಸ್ತಕಗಳ ಅನುಸಾರ, ಪಾರ್ಟಿಯು ಬಾಕಿಗಳ ಪಾವತಿ ಮಾಡಿರುವುದಿಲ್ಲ ಮತ್ತು ಹಣಕಾಸಿನ ವರ್ಷ 31ನೇ ಮಾರ್ಚ್ 2022ರಿಂದ 31ನೇ ಮಾರ್ಚ್ 2024ರವರೆಗೆ ಕೊನೆಗೊಳ್ಳುವುದರಿಂದ ಕಂಪನಿಯು ಆದಾಯವನ್ನು ಮಾನ್ಯ ಮಾಡಿರುವುದಿಲ್ಲ.<br><br>ಕಂಪನಿಯು ಪರಿಗಣಿತ ಹಣವನ್ನು ವಸೂಲು ಮಾಡುವ ಬಾಧ್ಯತೆ ಇಲ್ಲದಿರುವುದರಿಂದ ಆದಾಯ ಪರಿಗಣನೆಯನ್ನು ಮುಂದೂಡಲಾಗಿದೆ.<br><br>ಪಾರ್ಟಿಯಿಂದ ಬರಬೇಕಾದ ಬಾಡಿಗೆಯನ್ನು ಪ್ರಸಕ್ತ ಹಣಕಾಸಿನ ವರ್ಷದಲ್ಲಿ ಪುನರ್ ಪರಿಶೀಲನೆ ಮಾಡಲಾಗುವುದು ಮತ್ತು ಸೂಕ್ತವಾದ ನಮೂದುಗಳನ್ನು ಮಾಡಲಾಗುವುದು. |




ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಕಂಪನಿಯು ''ಮುಖ್ಯಮಂತ್ರಿಯವರ ಪರಿಹಾರ ನಿಧಿಗೆ'' ನೀಡಿದ ರೂ.2.50 ಕೋಟಿ ಮೊತ್ತದ ಚೆಕ್ ಅನ್ನು ಎಂ.ಎಸ್.ಐ.ಎಲ್.ನ ಅಧ್ಯಕ್ಷರಾದ ಶ್ರೀ ಪುಟ್ಟರಂಗಶೆಟ್ಟಿ.ಸಿ. ರವರು ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರಿಗೆ ಹಸ್ತಾಂತರಿಸಿದ ಸಂದರ್ಭದಲ್ಲಿ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರಾದ ಶ್ರೀ ಎಂ.ಬಿ.ಪಾಟೀಲ್‌ರವರು ಕರ್ನಾಟಕ ಸರ್ಕಾರ, ಶ್ರೀ ಹೆಚ್.ಸಿ. ಮಹದೇವಪ್ಪ, ಮಾನ್ಯ ಸಮಾಜ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಪ್ರಧಾನ ಕಾರ್ಯದರ್ಶಿ ಶ್ರೀ ಸೆಲ್ವಕುಮಾರ್, ಭಾ.ಆ.ಸೇ, ಎಂಎಸ್‌ಐಎಲ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಮನೋಜ್‌ಕುಮಾರ್ ಭಾ.ಅ.ಸೇ, ಮತ್ತು ಎಂಎಸ್‌ಐಎಲ್‌ನ ಹಿರಿಯ ಕಾರ್ಯನಿರ್ವಹಣಾಧಿಕಾರಿಗಳು ಉಪಸ್ಥಿತರಿರುವರು.

# 2023ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 143(6)(ಬಿ)ರ ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2024ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಹಣಕಾಸು ಹೇಳಿಕೆಗಳ ಸಿದ್ದಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 6ನೇ ಸೆಪ್ಟೆಂಬರ್ 2024ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಸದರಿ ವರದಿಯು **ದಿನಾಂಕ 27ನೇ ಜೂನ್ 2024 ರ** ನಮ್ಮ ಈ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದು ಮಾಡಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2024ಕ್ಕೆ** ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು''ನ** ಹಣಕಾಸು ಹೇಳಿಕೆಗಳ ಬಗ್ಗೆ ಕಾಯ್ದೆಯ ಪ್ರಕರಣ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಶಾಸನಬದ್ಧ ಲೆಕ್ಕಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ತಿಳಿಸಿದ ನನ್ನ ಕೆಲವು ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಒತ್ತು ನೀಡಲು **'ಶಾಸನಬದ್ಧ ಲೆಕ್ಕಪರಿಶೋಧಕರ ವರದಿ'**ಯಲ್ಲಿ ಮಾಡಿರುವ ಪರಿಷ್ಕರಣೆಗಳ ಹಿನ್ನೆಲೆಯಲ್ಲಿ ಇದರ ಮೇಲೆ ಅಥವಾ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಪೂರಕವಾಗಿ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ನಾನು ಯಾವುದೇ ಹೆಚ್ಚಿನ ಟೀಕೆಗಳನ್ನು ಮಾಡುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ವಿಮಲೇಂದ್ರ ಎ.ಪಟ್ವರ್ಧನ್)**
**ಕಾರ್ಯನಿರತ ಅಕೌಂಟೆಂಟ್ ಜನರಲ್ (ಆಡಿಟ್-II)**
**ಕರ್ನಾಟಕ, ಬೆಂಗಳೂರು**

**ಬೆಂಗಳೂರು**
**ದಿನಾಂಕ : 12.09.2024**

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

## 31ನೇ ಮಾರ್ಚ್ 2024ರಂದು ಇದ್ದಂತೆ ಸ್ವತಂತ್ರ ಸ್ಥಿತಿ ವಿವರಣಾ ಪಟ್ಟಿ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|---|---|
| i. | **ಆಸ್ತಿಗಳು** | | | |
| | **ಚಾಲ್ತಿಯೇತರ ಆಸ್ತಿಗಳು** | | | |
| | (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 2 | 4,386.03 | 4,796.96 |
| | (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 3 | 533.96 | 592.83 |
| | (ಸಿ) ಹೂಡಿಕೆ ಸ್ವತ್ತುಗಳು | 4 | 3,729.13 | 3,847.40 |
| | (ಡಿ) ಇತರೆ ಅಗೋಚರ ಆಸ್ತಿಗಳು | 5 | 3.53 | – |
| | (ಇ) ಬಳಕೆ ಹಕ್ಕಿನ ಆಸ್ತಿಗಳು | 5ಎ | 1,146.31 | 737.64 |
| | (ಎಫ್) ಹಣಕಾಸಿನ ಆಸ್ತಿಗಳು | | | |
| | (i) ಹೂಡಿಕೆಗಳು | 6 | 4,192.10 | 3,002.36 |
| | (ii) ಇತರೆ ಹಣಕಾಸಿನ ಆಸ್ತಿಗಳು | 7 | 16,206.62 | 17,851.46 |
| | (iii) ಚಾಲ್ತಿಯೇತರ ಬ್ಯಾಂಕ್ ಶಿಲ್ಕುಗಳು | 12 | 4,256.45 | 4,170.72 |
| | (ಜಿ) ಮುಂದೂಡಿದ ತೆರಿಗೆ ಆಸ್ತಿಗಳು (ನಿವ್ವಳ) | 29 | 1,553.39 | 1,363.43 |
| | (ಎಚ್) ಇತರೆ ಚಾಲ್ತಿಯೇತರ ಆಸ್ತಿಗಳು | 8 | 47.78 | 63.21 |
| | (ಐ) ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ) | 8ಎ | 3,645.55 | 4,108.74 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **39,700.85** | **40,534.75** |
| | **ಚಾಲ್ತಿ ಆಸ್ತಿಗಳು** | | | |
| | (ಎ) ತಪಶೀಲುಗಳು | 9 | 15,925.70 | 15,062.08 |
| | (ಬಿ) ಹಣಕಾಸಿನ ಆಸ್ತಿಗಳು | | | |
| | (i) ವ್ಯಾಪಾರದಿಂದ ಬರಬೇಕಾಗಿರುವುದು | 10 | 7,455.19 | 3,912.11 |
| | (ii) ನಗದು ಮತ್ತು ನಗದು ಸಮಾನಗಳು | 11 | 5,635.43 | 4,181.43 |
| | (iii) ಮೇಲಿನ (ii) ಹೊರತಾಗಿ ಬ್ಯಾಂಕ್ ಶಿಲ್ಕುಗಳು | 12 | 32,049.10 | 20,287.90 |
| | (iv) ಇತರೆ ಹಣಕಾಸಿನ ಆಸ್ತಿಗಳು | 7 | 16,853.19 | 10,000.79 |
| | (ಸಿ) ಇತರೆ ಚಾಲ್ತಿ ಆಸ್ತಿಗಳು | 8 | 2,893.04 | 4,844.71 |
| | (ಇ) ಚಾಲ್ತಿ ತೆರಿಗೆ ಆಸ್ತಿ (ನಿವ್ವಳ)**ಒಟ್ಟು ಚಾಲ್ತಿ ಆಸ್ತಿಗಳು** | | **80,811.65** | **58,289.02** |
| | **ಮಾರಾಟಕ್ಕೆ ಹೊಂದಿರುವ ಆಸ್ತಿ** | **30** | **5.00** | **5.00** |
| | **ಒಟ್ಟು ಆಸ್ತಿಗಳು** | | **120,517.50** | **98,828.77** |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**31ನೇ ಮಾರ್ಚ್ 2024ರಂದು ಇದ್ದಂತೆ ಸ್ವತಂತ್ರ ಸ್ಥಿತಿ ವಿವರಣಾ ಪಟ್ಟಿ**

**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)**

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|---|---|
| ii | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | |
| | **ಈಕ್ವಿಟಿ** | | | |
| | (ಎ) ಈಕ್ವಿಟಿ ಷೇರು ಬಂಡವಾಳ | 13 | 4,273.48 | 4,273.48 |
| | (ಬಿ) ಇತರೆ ಈಕ್ವಿಟಿ | 14 | 61,720.25 | 52,271.94 |
| | **ಒಟ್ಟು ಈಕ್ವಿಟಿ** | | 65,993.73 | 56,545.42 |
| | **ಹೊಣೆಗಾರಿಕೆಗಳು** | | | |
| | **ಚಾಲ್ತಿಯೇತರ ಹೊಣೆಗಾರಿಕೆಗಳು** | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | |
| | (i) ಗುತ್ತಿಗೆ ಹೊಣೆಗಾರಿಕೆಗಳು | 15 | 438.14 | 342.75 |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15 | 17,539.74 | 14,983.32 |
| | (ಬಿ) ವ್ಯವಸ್ಥೆಗಳು | 16 | 725.45 | 742.08 |
| | | | | |
| | **ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು** | | **18,703.33** | **16,068.15** |
| | | | | |
| | **ಚಾಲ್ತಿ ಹೊಣೆಗಾರಿಕೆಗಳು** | | | |
| | **(ಎ) ಹಣಕಾಸು ಹೊಣೆಗಾರಿಕೆಗಳು** | | | |
| | (i) ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು | 18 | | |
| | (ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಯಿರುವ ಮೊತ್ತ | | 3,129.12 | 2,647.61 |
| | (ಬಿ) ಮೇಲಿನ (i)(ಎ) ಹೊರತಾಗಿ ಒಟ್ಟು ಬಾಕಿಯಿರುವ ಮೊತ್ತ | | 7,915.05 | 6,865.45 |
| | (ii) ಗುತ್ತಿಗೆ ಹೊಣೆಗಾರಿಕೆಗಳು | 15 | 725.06 | 382.77 |
| | (iii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15 | 21,187.34 | 14,860.52 |
| | (ಬಿ) ಇತರೆ ಹೊಣೆಗಾರಿಕೆಗಳು | 17 | 2,615.67 | 1,243.52 |
| | **(ಸಿ) ವ್ಯವಸ್ಥೆಗಳು** | 16 | **248.20** | **215.33** |
| | **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **35,820.44** | **26,215.20** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | **120,517.50** | **98,828.77** |

ಸ್ವತಂತ್ರ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುವ ಇದರೊಡನಿರುವ ಟಿಪ್ಪಣಿಗಳನ್ನು ನೋಡಿ

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:27ನೇ ಜೂನ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ. ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎನ್**
ಕಂಪನಿ ಕಾರ್ಯದರ್ಶಿ

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಲಾಭ ಮತ್ತು ನಷ್ಟದ ಸ್ವತಂತ್ರ ವಿವರಣಾ ಪಟ್ಟಿ

**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)**

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| | **ಮುಂದುವರೆಯುತ್ತಿರುವ ಕಾರ್ಯಾಚರಣೆಗಳು** | | | |
| | ಕಾರ್ಯಾಚರಣೆಗಳಿಂದ ಬಂದ ಆದಾಯ | 19 | 337,796.08 | 282,531.70 |
| | ಇತರೆ ಆದಾಯ | 20 | 3,764.12 | 3,061.84 |
| | **ಒಟ್ಟು ಆದಾಯ** | | **341,560.20** | **285,593.54** |
| | | | | |
| | **ಖರ್ಚುಗಳು** | | | |
| | ಬಳಸಿರುವ ಸಾಮಗ್ರಿಗಳ ಬೆಲೆ | 21 | 2,936.80 | 1,766.99 |
| | ವ್ಯಾಪಾರದ ಸರಕಿನ ಖರೀದಿ | 22 | 301,230.30 | 252,556.61 |
| | ಸಿದ್ಧಪಡಿಸಿದ ಸರಕುಗಳ ಮತ್ತು ವ್ಯಾಪಾರಿ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು | 23 | (979.41) | (523.75) |
| | ನೌಕರರ ಸೌಲಭ್ಯ ವೆಚ್ಚಗಳು | 24 | 2,003.83 | 1,860.32 |
| | ಹಣಕಾಸಿನ ವೆಚ್ಚಗಳು | 25 | 238.52 | 179.92 |
| | ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 26 | 1,946.94 | 1,834.44 |
| | ದುರ್ಬಲತೆ ನಷ್ಟಗಳು | 28 | – | – |
| | ಇತರೆ ಖರ್ಚುಗಳು | 27 | **20,881.28** | **19,839.73** |
| | | | **328,258.26** | **277,514.26** |
| | **ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ಆದ ತೆರಿಗೆಗೆ ಮುನ್ನ ಲಾಭ** | | 13,301.94 | 8,079.28 |
| | ಅಸಾಧಾರಣ ಐಟಂಗಳು | 41 | – | – |
| | **ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ತೆರಿಗೆಗೆ ಮುನ್ನ ಲಾಭ** | | **13,301.94** | **8,079.28** |
| | **ತೆರಿಗೆ ಖರ್ಚುಗಳು** | 29 | | |
| | (ಎ) ಚಾಲ್ತಿ ತೆರಿಗೆ | | 3,286.46 | 2,020.42 |
| | (ಬಿ) ಮುಂದೂಡಿದ ತೆರಿಗೆ ಶುಲ್ಕ /(ಕ್ರೆಡಿಟ್) | | (491.04) | (65.72) |
| | (3) ಹಿಂದಿನ ಅವಧಿಗಳಿಗೆ ಸಂಬಂಧಿಸಿದಂತೆ ತೆರಿಗೆಯ ಕಡಿಮೆ ವ್ಯವಸ್ಥೆ | | 124.14 | 35.29 |
| | **ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ವರ್ಷದ ಲಾಭ** | | **10,382.38** | **6,089.29** |
| | **ಸ್ಥಗಿತವಾದ ಕಾರ್ಯಾಚರಣೆಗಳು** | 30 | | |
| | ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ) | | 5.32 | (2.82) |
| | ಸ್ಥಗಿತಗೊಂಡ ಕಾರ್ಯಾಚರಣೆಗಳ ತೆರಿಗೆ ಆದಾಯ /(ಖರ್ಚು) | | (1.34) | 0.71 |
| | **ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ)** | | **3.98** | **(2.11)** |
| | | | | |
| | **ವರ್ಷದ ಲಾಭ** | | **10,386.36** | **6,087.18** |

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| | **ಇತರೆ ಸಮಗ್ರ ಆದಾಯ** | | | |
| | ಎ) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು | | | |
| | ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ಮೇಲೆ ನಿವ್ವಳ(ನಷ್ಟ) /ಲಾಭ | 31 | 1,189.74 | (19.01) |
| | ಮೇಲಿನವುಗಳ ಬಗ್ಗೆ ಆದಾಯ ತೆರಿಗೆ ಪರಿಣಾಮ | 29 | (300.79) | 4.78 |
| | **ನಿರೂಪಿತ ಸೌಲಭ್ಯ ಯೋಜನೆಗಳ ಮೇಲಿನ ಮರುಮಾಪನ ಮಾಡಿದ ಲಾಭಗಳು/ (ನಷ್ಟಗಳು)** | **31** | 1.16 | 26.61 |
| | ಮೇಲಿನವುಗಳ ಬಗ್ಗೆ ಆದಾಯ ತೆರಿಗೆ ಪರಿಣಾಮ | 29 | (0.29) | (6.69) |
| | **ವರ್ಷದ ಒಟ್ಟು ಇತರೆ ಸಮಗ್ರ ಆದಾಯ, ತೆರಿಗೆಯ ನಿವ್ವಳ** | | **889.82** | **5.69** |
| | | | | |
| | **ವರ್ಷದ ಒಟ್ಟು ಸಮಗ್ರ ಆದಾಯ** | | **11,276.18** | **6,092.87** |
| | **ಷೇರು ಒಂದರ ಗಳಿಕೆಗಳು (ಷೇರು ಒಂದರ ಸಾಧಾರಣ ಮೌಲ್ಯ ರೂ.100/-)** | 32 | | |
| | -ಮುಂದುವರಿಯುತ್ತಿರುವ ಕಾರ್ಯಾಚರಣೆಯ ಬಗ್ಗೆ ಷೇರು ಒಂದರ ಗಳಿಕೆಗಳು | | | |
| | ಮೂಲ ಮತ್ತು ದ್ರವೀಕೃತ (ರೂ) | | 242.95 | 142.49 |
| | | | | |
| | **-ಸ್ಥಗಿತಗೊಂಡ ಕಾರ್ಯಾಚರಣೆಯ ಬಗ್ಗೆ ಷೇರು ಒಂದರ ಗಳಿಕೆಗಳು** | | | |
| | ಮೂಲ ಮತ್ತು ದ್ರವೀಕೃತ (ರೂ) | | 0.09 | (0.05) |
| | | | | |
| | **ಮುಂದುವರಿಯುತ್ತಿರುವ ಮತ್ತು ಸ್ಥಗಿತಗೊಂಡಿರುವ ಕಾರ್ಯಾಚರಣೆಗಳ ಬಗ್ಗೆ ಷೇರು ಒಂದರ ಗಳಿಕೆಗಳು** | | | |
| | ಮೂಲ ಮತ್ತು ದ್ರವೀಕೃತ (ರೂ) | | 243.04 | 142.44 |

ಸ್ವತಂತ್ರ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುವ ಇದರೊಡನಿರುವ ಟಿಪ್ಪಣಿಗಳನ್ನು ನೋಡಿ

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಸಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:27ನೇ ಜೂನ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ. ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎಸ್**
ಕಂಪನಿ ಕಾರ್ಯದರ್ಶಿ

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
CIN:U85110KA1966SGC001612
## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಸ್ವತಂತ್ರ ನಗದು ಹರಿವಿನ ವಿವರ
**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುತ್ತವೆ)**

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---:|---:|
| **ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ** | | |
| **ಲಾಭ ಮತ್ತು ನಷ್ಟದ ಹೇಳಿಕೆ ಅನ್ವಯ ತೆರಿಗೆಗೆ ಮತ್ತು ಅಸಾಧಾರಣ ಐಟಂಗಳ ಮುನ್ನ ಲಾಭ ಇವುಗಳಿಗೆ ಹೊಂದಾಣಿಕೆ:** | **13,307.26** | **8,076.46** |
| ಲಾಭಾಂಶ | (638.58) | (280.69) |
| ಮುಂದೆ ಅಗತ್ಯವಿಲ್ಲದ ಸಂದೇಹಾಸ್ಪದ ಸಾಲಗಳಿಗೆ ವ್ಯವಸ್ಥೆ | (172.35) | (131.13) |
| ಬಡ್ಡಿ ಆದಾಯ | (2,196.75) | (1,270.77) |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಲಾಭ | 2.94 | (6.11) |
| ಬಾಡಿಗೆ | (597.79) | (855.40) |
| ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 1,946.94 | 1,834.44 |
| ಹಣಕಾಸಿನ ವೆಚ್ಚಗಳು | 238.52 | 179.92 |
| ಸಂದೇಹಾಸ್ಪದವಾದ ಸಾಲಗಳು ಮತ್ತು ಮುಂಗಡಗಳಿಗೆ ಅವಕಾಶಗಳು | 488.87 | 245.94 |
| ಇತರೆ ಹಣಕಾಸಿನ ಆಸ್ತಿಗಳ ಮೌಲ್ಯದಲ್ಲಿನ ದುರ್ಬಲತೆ ನಷ್ಟ | | 6.83 |
| **ದುಡಿಮೆ ಬಂಡವಾಳ ಬದಲಾವಣೆಗಳಿಗೆ ಹೊಂದಾಣಿಕೆಗಳು** | **12,379.06** | **7,799.49** |
| | | |
| **ದುಡಿಮೆ ಬಂಡವಾಳದಲ್ಲಿನ ಬದಲಾವಣೆಗಳು** | | |
| ವ್ಯಾಪಾರದಿಂದ ಬರಬೇಕಾಗಿರುವುದು (ಹೆಚ್ಚಳ)/ಇಳಿಕೆ | (3,367.03) | 4,623.26 |
| ಸರಕಿನ ತಪಶೀಲುಗಳಲ್ಲಿ (ಹೆಚ್ಚಳ)/ಇಳಿಕೆ | (903.15) | (612.21) |
| ಇತರೆ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಕೆ | 1,967.10 | 1,240.19 |
| ಇತರೆ ಹಣಕಾಸಿನ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಕೆ | (5,576.27) | (4,422.75) |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದರಲ್ಲಿ (ಹೆಚ್ಚಳ)/ಇಳಿಕೆ | 1,500.67 | (594.81) |
| ಇತರೆ ಹೊಣೆಗಾರಿಕೆಗಳಲ್ಲಿ (ಹೆಚ್ಚಳ)/ಇಳಿಕೆ | 1,318.27 | 259.19 |
| ಇತರೆ ಹಣಕಾಸಿನ ಹೊಣೆಗಾರಿಕೆಗಳಲ್ಲಿ (ಹೆಚ್ಚಳ)/ಇಳಿಕೆ | 8,883.24 | 3,043.18 |
| **ವ್ಯವಸ್ಥೆಗಳಲ್ಲಿ (ಹೆಚ್ಚಳ)/ಇಳಿಕೆ** | **17.41** | **(876.65)** |
| **ದುಡಿಮೆ ಬಂಡವಾಳದಲ್ಲಿನ ನಿವ್ವಳ ಬದಲಾವಣೆಗಳು** | **3,840.24** | **2,659.40** |
| **ಕಾರ್ಯಾಚರಣೆಗಳಿಂದ ಉತ್ಪತ್ತಿಯಾದ ನಗದು** | **16,219.30** | **10,458.89** |
| **ಪಾವತಿಸಿದ ತೆರಿಗೆ, ನಿವ್ವಳ** | **(2,948.77)** | **(5,657.81)** |
| **ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾಗಿರುವ ನಿವ್ವಳ ನಗದು** | **13,270.53** | **4,801.08** |

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಖರೀದಿ (ಬಂಡವಾಳ ಮುಂಗಡಗಳು ಸೇರಿದಂತೆ) | (643.67) | (2,211.27) |
| ಸರ್ಕಾರದ ಅನುದಾನ | | |
| ನಗದು ಮತ್ತು ನಗದು ಸಮಾನತೆಗಳು ಪರಿಗಣಿಸಿರುವ ಇತರೆ ಬ್ಯಾಂಕ್ ಶಿಲ್ಕುಗಳಲ್ಲಿನ ಬದಲಾವಣೆಗಳು | (11,552.99) | (7,046.68) |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಹಣ | 2.90 | 27.10 |
| ಹೂಡಿಕೆಗಳ (ಖರೀದಿ/ಮಾರಾಟ/ಜಂಟಿ ವ್ಯವಸ್ಥೆಗಳಿಂದ ಬಂದ ಲಾಭದ ಪಾಲು) | – | - |
| ಹೂಡಿಕೆ ಆದಾಯ (ಹೂಡಿಕೆ ಸ್ವತ್ತಿನ ಮೇಲಿನ ಬಾಡಿಗೆ ಆದಾಯ) | 597.79 | 855.40 |
| ಪಡೆದಿರುವ ಬಡ್ಡಿ | 1,902.80 | 878.32 |
| ಪಡೆದಿರುವ ಲಾಭಾಂಶ | 638.58 | 280.69 |
| **ಹೂಡಿಕೆ ಚಟುವಟಿಕೆಗಳಲ್ಲಿ ಬಳಸಿರುವ / ನಿವ್ವಳ ನಗದು ಹರಿವು** | **(9,054.59)** | **(7,216.44)** |
| | | |
| **ಸಿ.ಹಣಕಾಸಿನ ಚಟುವಟಿಕೆಗಳಿಂದ ಆದ ನಗದು ಹರಿವು** | | |
| ಪಾವತಿಸಿದ ಹಣಕಾಸಿನ ವೆಚ್ಚ | (106.74) | (76.08) |
| ಗುತ್ತಿಗೆ ಹೊಣೆಗಾರಿಕೆಗಳ ಪಾವತಿ | (827.33) | (631.08) |
| ಪಾವತಿ ಮಾಡಿದ ಲಾಭಾಂಶ | (1,827.87) | (1,105.19) |
| ವಿತರಣೆ ಮಾಡಿದ ಲಾಭಾಂಶಕ್ಕೆ ಪಾವತಿಸಲಾದ ತೆರಿಗೆ | - | - |
| **ಹಣಕಾಸಿನ ಚಟುವಟಿಕೆಗಳಲ್ಲಿ ಬಳಸಿದ ನಿವ್ವಳ ನಗದು** | **(2,761.94)** | **(1,812.35)** |
| **ನಗದು ಮತ್ತು ನಗದು ಸಮಾನತೆಗಳಲ್ಲಿನ ನಿವ್ವಳ ಬದಲಾವಣೆ** | **1,454.00** | **(4,227.71)** |
| ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು | 4,181.43 | 8,409.14 |
| ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು | **5,635.43** | **4,181.43** |

**ನಗದು ಮತ್ತು ನಗದು ಸಮಾನತೆಗಳ ಸಮಂಜಸತೆ**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| **ನಗದು ಮತ್ತು ನಗದು ಸಮಾನತೆಗಳು:** | | |
| ಕೈಯಲ್ಲಿರುವ ನಗದು ಮತ್ತು ಸ್ಟಾಂಪ್ | 2,077.20 | 1,011.69 |
| ಬ್ಯಾಂಕುಗಳಲ್ಲಿರುವ ಶಿಲ್ಕು | 3,553.99 | 3,161.94 |
| ರವಾನೆಯಲ್ಲಿರುವ ಸಂದಾಯಗಳು | 4.24 | 7.80 |
| **ಸ್ಥಿತಿ ವಿವರಣಾ ಪಟ್ಟಿ ಅನುಸಾರ ನಗದು ಮತ್ತು ನಗದು ಸಮಾನತೆಗಳು (ಟಿಪ್ಪಣಿ11 ನೋಡಿ)** | **5,635.43** | **4,181.43** |
| **ನಗದು ಹರಿವಿನ ಹೇಳಿಕೆ ಅನ್ವಯ ನಗದು ಮತ್ತು ನಗದು ಸಮಾನತೆಗಳು** | **5,635.43** | **4,181.43** |
| | | |

**ಸ್ವತಂತ್ರ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಅಂಗವಾಗಿರುವ ಇದರೊಡನಿರುವ ಟಿಪ್ಪಣಿಗಳನ್ನು ನೋಡಿ.**

| | | |
|---|---|---|
| **ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ) ನಿಯಮಗಳು 2015 (ತಿದ್ದುಪಡಿ) ಅಡಿಯಲ್ಲಿ ನಗದು ಹರಿವಿನ ಹೇಳಿಕೆಗಳ ಮೇಲೆ ಇಂಡ್ ಎಎಸ್ 7ರಲ್ಲಿ ನಿಗದಿಪಡಿಸಿದಂತೆ ಪ್ಯಾರಾ 44ಎ ಅಡಿಯಲ್ಲಿ ಬಹಿರಂಗಪಡಿಸುವಿಕೆ** | | |
| **ಹಣಕಾಸು ಚಟುವಟಿಕೆಗಳಿಂದ ಉಂಟಾಗುವ ಹೊಣೆಗಾರಿಕೆಗಳ ವಿವರಗಳು** | **ಇತರೆ ಬದಲಾವಣೆ** | **31ನೇ ಮಾರ್ಚ್ 2024ರಲ್ಲಿ ಇದ್ದಂತೆ** |
| ಗುತ್ತಿಗೆಗಳ ಹೊಣೆಗಾರಿಕೆಗಳು | 1,265.01 | 1,265.01 |
| | | |
| **ಹಣಕಾಸು ಚಟುವಟಿಕೆಗಳಿಂದ ಉಂಟಾಗುವ ಹೊಣೆಗಾರಿಕೆಗಳ ವಿವರಗಳು** | **ಇತರೆ ಬದಲಾವಣೆ** | **31ನೇ ಮಾರ್ಚ್ 2023ರಲ್ಲಿ ಇದ್ದಂತೆ** |
| ಗುತ್ತಿಗೆಗಳ ಹೊಣೆಗಾರಿಕೆಗಳು | 274.72 | 274.72 |
| **ಸೂಚನೆ:** ನಗದು ಹರಿವಿನ ಹೇಳಿಕೆಯನ್ನು ಪರೋಕ್ಷ ವಿಧಾನದ ಅಡಿಯಲ್ಲಿ ಭಾರತೀಯ ಲೆಕ್ಕ ನಿರ್ವಹಣೆ (ಇಂಡ್ ಎಎಸ್ 7) ನಗದು ಹರಿವಿನ ಹೇಳಿಕೆಯನ್ನು ಸಿದ್ಧಪಡಿಸಲಾಗಿದೆ. | | |

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:27ನೇ ಜೂನ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ . ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎನ್**
ಕಂಪನಿ ಕಾರ್ಯದರ್ಶಿ

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**CIN:U85110KA1966SGC001612**

## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ಸ್ವತಂತ್ರ ಹೇಳಿಕೆ
(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

| ವಿವರಗಳು (ಟಿಪ್ಪಣಿ 13) | ಮೊತ್ತ |
|---|---|
| **01ನೇ ಏಪ್ರಿಲ್ 2022 ರಂದು ಇದ್ದಂತೆ ಶಿಲ್ಕು** | **4,273.48** |
| ವರ್ಷದ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು | - |
| **31ನೇ ಮಾರ್ಚ್ 2023ರಂದು ಇದ್ದಂತೆ** | **4,273.48** |
| **1ನೇ ಏಪ್ರಿಲ್ 2023ರಂದು ಇದ್ದಂತೆ** | **4,273.48** |
| ವರ್ಷದ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು | - |
| **31ನೇ ಮಾರ್ಚ್ 2024ರಂದು ಇದ್ದಂತೆ** | **4,273.48** |

| ವಿವರಗಳು | ಮೀಸಲು ಮತ್ತು ಹೆಚ್ಚುವರಿ ನಿಧಿ (ಟಿಪ್ಪಣಿ 14) | | | | ಒಟ್ಟು ಇತರೆ ಈಕ್ವಿಟಿ |
|---|---|---|---|---|---|
| | ಸಾಮಾನ್ಯ ಮೀಸಲು ನಿಧಿಗಳು | ಚಿಟ್ ಮೀಸಲು ನಿಧಿ | ಉಳಿಸಿಕೊಂಡಿರುವ ಗಳಿಕೆಗಳು | ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ನ್ಯಾಯೋಜಿತ ಮೌಲ್ಯಮಾಪನ | |
| **1ನೇ ಏಪ್ರಿಲ್, 2022 ರಂದು ಇದ್ದಂತೆ ಶಿಲ್ಕು** | **19,125.69** | **816.48** | **25,661.74** | **1,680.35** | **47,284.26** |
| ವರ್ಷದ ಲಾಭ | - | - | 6,087.18 | - | 6,087.18 |
| ವರ್ಷದ ಇತರೆ ಸಮಗ್ರ ಆದಾಯ /(ನಷ್ಟ) | - | - | 19.92 | (14.23) | 5.69 |
| **ಒಟ್ಟು ಸಮಗ್ರ ಆದಾಯ** | **19,125.69** | **816.48** | **31,768.84** | **1,666.12** | **53,377.13** |
| ಉಳಿಸಿಕೊಂಡಿರುವ ಗಳಿಕೆ (ಗಳಿಗೆ)/ಗಳಿಕೆಯಿಂದ ವರ್ಗಾವಣೆ | - | 111.73 | (111.73) | - | - |
| ಕಳೆಯಿರಿ: ವರ್ಷದ ಅವಧಿಯಲ್ಲಿ ಪಾವತಿಸಿದ ಲಾಭಾಂಶ | - | - | (1,105.19) | - | (1,105.19) |
| **31ನೇ ಮಾರ್ಚ್ 2023ರಂದು ಇದ್ದಂತೆ ಶಿಲ್ಕು** | **19,125.69** | **928.21** | **30,551.92** | **1,666.12** | **52,271.94** |
| **1ನೇ ಏಪ್ರಿಲ್ 2023 ರಂದು ಇದ್ದಂತೆ ಶಿಲ್ಕು** | **19,125.69** | **928.21** | **30,551.92** | **1,666.12** | **52,271.94** |
| ವರ್ಷದ ಲಾಭ | - | - | 10,386.36 | - | 10,386.36 |
| ವರ್ಷದ ಇತರೆ ಸಮಗ್ರ ಆದಾಯ/(ನಷ್ಟ) | - | - | 0.87 | 888.95 | 889.82 |
| **ಒಟ್ಟು ಸಮಗ್ರ ಆದಾಯ** | **19,125.69** | **928.21** | **40,939.15** | **2,555.07** | **63,548.12** |
| ಉಳಿಸಿಕೊಂಡಿರುವ ಗಳಿಕೆ (ಗಳಿಗೆ)/ಗಳಿಕೆಯಿಂದ ವರ್ಗಾವಣೆ | - | 175.14 | (175.14) | - | - |
| ಕಳೆಯಿರಿ: ವರ್ಷದ ಅವಧಿಯಲ್ಲಿ ಪಾವತಿಸಿದ ಲಾಭಾಂಶ | - | - | (1,827.87) | - | (1,827.87) |
| **31ನೇ ಮಾರ್ಚ್ 2024 ರಂದು ಇದ್ದಂತೆ ಶಿಲ್ಕು** | **19,125.69** | **1,103.35** | **38,936.14** | **2,555.07** | **61,720.25** |

ಸ್ವತಂತ್ರ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ ಇದರೊಡನಿರುವ ಟಿಪ್ಪಣಿಗಳನ್ನು ನೋಡಿ.

★ ಚಿಟ್‌ಫಂಡ್ ವಿಭಾಗದ ಶೇ.10ರಷ್ಟು ಲಾಭಾಂಶವನ್ನು ಪ್ರತಿ ವರ್ಷ ಸಾಮಾನ್ಯ ಮೀಸಲಿಗೆ ವರ್ಗಾಯಿಸಲಾಗುತ್ತದೆ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 110417W
ಸಹಿ/-
(ಸಿ.ಎ. ಚೋಕ್ಷಿ ಶ್ರೇಯಸ್.ಬಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892

ಸ್ಥಳ : ಬೆಂಗಳೂರು
ದಿನಾಂಕ:27ನೇ ಜೂನ್ 2024

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಪುಟ್ಟರಂಗ ಶೆಟ್ಟಿ . ಸಿ
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
ಅವಿನಾಶ್ ಕೆ.ಆರ್.
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
ಶ್ರೀದೇವಿ ಬಿ.ಎನ್
ಕಂಪನಿ ಕಾರ್ಯದರ್ಶಿ

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಸ್ವತಂತ್ರ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು :

### 1. ಕಂಪನಿ ಅವಲೋಕನ ಮತ್ತು ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿ

### 1.1 ಕಂಪನಿ ಅವಲೋಕನ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (''ಕಂಪನಿ'') ಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಕಂಪನಿಯ ನೋಂದಾಯಿತ ಕಚೇರಿಯು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ಇದೆ. ಕಂಪನಿಯು ಪ್ರಾರಂಭವಾದ ಸಮಯದಿಂದ ರಾಷ್ಟ್ರೀಯ ಅಸ್ತಿತ್ವದೊಡನೆ ಪ್ರಮುಖವಾಗಿ ಮಾರುಕಟ್ಟೆ ಶಕ್ತಿಯಾಗಿ ಬೆಳೆದಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಮೆಟ್ರೋಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ಮತ್ತು ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ಮತ್ತು ಸೇವೆಗಳ ವ್ಯವಹಾರವನ್ನು ನಡೆಸುತ್ತಿರುವುದು.

### 1.2 ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆಗೆ ಆಧಾರ:

**(i) ಅನುಸರಣೆ ಹೇಳಿಕೆ :**

ಐಎನ್‌ಡಿ ಎಎಸ್ 109 ಚಿಟ್ ಹಣಕಾಸಿನ ಆಸ್ತಿಗಳ ಮೇಲಿನ ನಿರೀಕ್ಷಿತ ಕ್ರೆಡಿಟ್ ನಷ್ಟದ ಸಂಬಂಧದಲ್ಲಿ ಹೊರತಾಗಿ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮಾಡಿರುವ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 133ರ ಅನ್ವಯ ಪ್ರಕಟಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (ಐಎನ್‌ಡಿ ಎಎಸ್) ಅನ್ವಯ ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ. ಕಂಪನಿಯು ನಿರೂಪಿಸಿದ ಅವಧಿಗಳಲ್ಲಿ ಲೆಕ್ಕ ನಿರ್ವಹಣೆ ನೀತಿಗಳನ್ನು ಏಕ ರೀತಿಯಲ್ಲಿ ಅಳವಡಿಸಿದೆ.

31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳನ್ನು ನಿರ್ದೇಶಕರ ಮಂಡಳಿಯು 27.06.2024 ರಂದು ಅಧಿಕೃತಗೊಳಿಸಿದೆ ಮತ್ತು ನೀಡಲು ಅನುಮೋದಿಸಿದೆ.

**(ii) ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಗೆ ಆಧಾರ:**

ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹೊರತಾಗಿ, ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಐತಿಹಾಸಿಕ ವೆಚ್ಚದ ಅನ್ವಯ ಸಿದ್ಧಪಡಿಸಲಾಗಿದೆ:

ಐತಿಹಾಸಿಕ ವೆಚ್ಚ ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯಕ್ಕಾಗಿ ನೀಡುವ ಬೆಲೆಯ ನ್ಯಾಯೋಚಿತ ಮೌಲ್ಯದ ಮೇಲೆ ಆಧಾರಿತವಾಗಿರುವುದು.

ನ್ಯಾಯೋಚಿತ ಮೌಲ್ಯವು ಒಂದು ಆಸ್ತಿಯ ಮಾರಾಟದಿಂದ ಬರುವ ಬೆಲೆ ಅಥವಾ ಗಣನೆಯ ದಿನಾಂಕದಂದು ಮಾರುಕಟ್ಟೆ ಪಾಲುದಾರರ ನಡುವೆ ನಡೆಯುವ ಕ್ರಮಬದ್ಧ ವಹಿವಾಟುಗಳಲ್ಲಿ ಋಣಭಾರದ ವರ್ಗಾವಣೆಗಾಗಿ ಸಂದಾಯ ಮಾಡುವ ಮೊತ್ತವಾಗಿರುತ್ತದೆ. ಸದರಿ ಬೆಲೆಯು ನೇರವಾಗಿ ಒಳಪಡಿಸಬಹುದಾಗಿರುವುದು ಅಥವಾ ಇನ್ನೊಂದು ಮೌಲ್ಯಮಾಪನ ತಂತ್ರದ ಮೂಲಕ ಅಂದಾಜು ಮಾಡುವುದೋ ಅಥವಾ ಬಿಡುವುದನ್ನು ಪರಿಗಣಿಸಲಾಗದು. ಒಂದು ಆಸ್ತಿಯ ಅಥವಾ ಹೊಣೆಗಾರಿಕೆಯ ನ್ಯಾಯೋಚಿತ ಬೆಲೆಯ ಅಂದಾಜು ಮಾಡುವಾಗ ಕಂಪನಿ ಆಸ್ತಿ ಅಥವಾ ಹೊಣೆಗಾರಿಕೆ ಅಂದಾಜು ಲೆಕ್ಕಾಚಾರಕ್ಕಾಗಿ ಅನುಸರಿಸುವ ಲಕ್ಷಣಗಳನ್ನೇ ಒಂದು ವೇಳೆ ಮಾರುಕಟ್ಟೆ ಪಾಲುದಾರರು ಅನುಸರಿಸುತ್ತಿದ್ದಲ್ಲಿ ಕಂಪನಿಯು ಅವುಗಳನ್ನು ಮಾಪನ ದಿನದಂದು ಗಣನೆಗೆ ತೆಗೆದುಕೊಳ್ಳುವುದು. ನ್ಯಾಯೋಚಿತ ಮೌಲ್ಯವನ್ನು ಗಣನೆಗಾಗಿ ಮತ್ತು/ಅಥವಾ ಬಹಿರಂಗಪಡಿಸುವ ಉದ್ದೇಶಕ್ಕಾಗಿ ಈ ಹಣಕಾಸು ಹೇಳಿಕೆಗಳಲ್ಲಿ ಷೇರು ಆಧಾರಿತ ಪಾವತಿ ವಹಿವಾಟುಗಳನ್ನು ಹೊರತುಪಡಿಸಿ ಆ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಏಕೆಂದರೆ ಷೇರು ಆಧಾರಿತ ಪಾವತಿ ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 102 ಷೇರು ಆಧಾರಿತ ಪಾವತಿ ವ್ಯಾಪ್ತಿಯಲ್ಲಿ ಬರುತ್ತವೆ. ಗುತ್ತಿಗೆ (ಲೀಸಿಂಗ್) ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116ರ ಗುತ್ತಿಗೆಗಳು ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಅಳತೆ ಮಾಪನಗಳು ನ್ಯಾಯೋಚಿತ ಮೌಲ್ಯದೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿರುತ್ತವೆ. ಆದರೆ ಅವುಗಳ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-2 ತಪಶೀಲುಗಳಲ್ಲಿನ ನಿವ್ವಳ ಲಭಿಸಬಹುದಾದ ಮೌಲ್ಯ ಅಥವಾ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 36ರಲ್ಲಿನ ಆಸ್ತಿಗಳ ದುರ್ಬಲತೆ ಬಳಕೆಯಲ್ಲಿರುವ ಮೌಲ್ಯದಂತೆ ನ್ಯಾಯೋಚಿತ ಮೌಲ್ಯಗಳಾಗಿರುವುದಿಲ್ಲ.

ಇದರೊಂದಿಗೆ ಹಣಕಾಸು ವರದಿಗಾರಿಕೆ ಉದ್ದೇಶಕ್ಕಾಗಿ ನ್ಯಾಯೊಚಿತ ಮೌಲ್ಯಮಾಪನಗಳನ್ನು ಹಂತ (ಮಟ್ಟ) 1,2 ಅಥವಾ 3 ಗಳೆಂದು ವಸ್ತುಗಳು ಯಾವ ಹಂತದ ನ್ಯಾಯೋಚಿತ ಮೌಲ್ಯಮಾಪನಗಳಿಗೆ ಸೇರ್ಪಡೆಗೊಳ್ಳುವುವು ಎಂಬುದರ ಆಧಾರದ ಮೇಲೆ ವಿಂಗಡಿಸಲಾಗಿದೆ ಮತ್ತು ವಸ್ತುಗಳ ಪ್ರಾಮುಖ್ಯತೆಯು ಒಟ್ಟಾರೆಯಾಗಿ ಯಾವ

ನ್ಯಾಯೋಚಿತ ಮೌಲ್ಯಮಾಪಕಗಳಿಗೆ ಅನ್ವಯಿಸುತ್ತವೆ ಎಂಬುದರ ಆಧಾರದಲ್ಲಿ ಮಾಡಲಾಗಿದೆ. ಅವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:

ಹಂತ-1 : ಸಕ್ರಿಯ ಮಾರುಕಟ್ಟೆಗಳಲ್ಲಿ ಹಣಕಾಸು ಸಾಧನಗಳಿಗೆ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ-2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಬೆಲೆಯನ್ನು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಅವಲಂಬಿತವಾಗುವ ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸುವ ಮೂಲಕ ನಿರ್ಧರಿಸಲಾಗುತ್ತದೆ.

ಹಂತ-3: ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಅಂಕಿ ಅಂಶಗಳನ್ನು ಆಧಾರಿಸಿರದ ಆಸ್ತಿಗಳು ಅಥವಾ ಹೊಣೆಗಾರಿಕೆ ಮಾಹಿತಿಗಳು (ಅಂತರ್ಗತವಾಗದಿರುವ ಮಾಹಿತಿಗಳು)

(iii) **ಅಂದಾಜುಗಳ ಬಳಕೆ :**

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಕಾರ್ಯವು ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿರುವುದು. ಇದು ವರದಿಗಾರಿಕೆಯ ಅವಧಿ ಕೊನೆಯಲ್ಲಿದ್ದಂತೆ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ.

ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು.ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಗಿದೆ.

ಏಕೆಂದರೆ ಆಡಳಿತ ಮಂಡಳಿಯು ಅಂದಾಜುಗಳನ್ನು ಮಾಡಿದ ಸನ್ನಿವೇಶಗಳಲ್ಲಿನ ಬದಲಾವಣೆ ಬಗ್ಗೆ ಎಚ್ಚರ ವಹಿಸುತ್ತದೆ. ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳನ್ನು ಒಳಗೊಂಡ ಮಹತ್ತರ ಲೆಕ್ಕ ನಿರ್ವಹಣೆ ಅಂದಾಜುಗಳಿಗೆ ಅಗತ್ಯವಿರುವ ಲೆಕ್ಕ ನಿರ್ವಹಣಾ ನೀತಿಗಳ ಅನ್ವಯಿಕೆಯನ್ನು ಮತ್ತು ಈ ಹಣಕಾಸು ಹೇಳಿಕೆಗಳಲ್ಲಿ ಊಹೆಗಳ ಬಳಕೆಯನ್ನು ಟಿಪ್ಪಣಿ 1.3 ರಲ್ಲಿ ಬಹಿರಂಗಪಡಿಸಿದೆ.

(iv) **ಕಂಪನಿ ಇನ್ನೂ ಅಳವಡಿಸಿಕೊಂಡಿರದ ಹೊಸ ಲೆಕ್ಕನಿರ್ವಹಣೆ ಗುಣಮಟ್ಟಗಳು ಮತ್ತು ತಿದ್ದುಪಡಿಗಳು**

ಕಾಲಕಾಲಕ್ಕೆ ಹೊರಡಿಸಿದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳ ಅನ್ವಯ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ(ಎಂಸಿಎ) ಹೊಸ ಗುಣಮಟ್ಟಗಳನ್ನು ಅಥವಾ ಹಾಲಿಯಿರುವ ಗುಣಮಟ್ಟಗಳಿಗೆ ತಿದ್ದುಪಡಿಗಳನ್ನು ಪ್ರಕಟಿಸುವುದು. ದಿನಾಂಕ 31ನೇ ಮಾರ್ಚ್, 2024ರಂದು ಎಂಸಿಎಯು ಹಾಲಿಯಿರುವ ಗುಣಮಟ್ಟಗಳಿಗೆ ತಿದ್ದುಪಡಿಗಳನ್ನು ಅಥವಾ ಹೊಸ ಗುಣಮಟ್ಟಗಳನ್ನು ಪ್ರಕಟಿಸಿರುವುದಿಲ್ಲ.

(v) **ಮೊತ್ತಗಳನ್ನು ಪೂರ್ಣಾಂಕದಲ್ಲಿ ತಿಳಿಸುವುದು:**

ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಭಾರತೀಯ ರೂಪಾಯಿಯಲ್ಲಿ (''ಐಎನ್ಆರ್'') ನಿರೂಪಿಸಿದೆ ಮತ್ತು ನಿರ್ದಿಷ್ಟವಾಗಿ ತಿಳಿಸಿರದ ಹೊರತಾಗಿ ಪರಿಚ್ಛೇದ-III ರ ಅಗತ್ಯತೆಯ ಅನ್ವಯ ಎಲ್ಲಾ ಮೌಲ್ಯಗಳನ್ನು ಸಮೀಪದ ಲಕ್ಷಗಳಿಗೆ ಪೂರ್ಣಾಂಕಗೊಳಿಸಿದೆ.

(vi) **ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿ:**

**ಎ. ಚಾಲ್ತಿಗೆ ಪ್ರತಿಯಾಗಿ ಚಾಲ್ತಿಯೇತರ ವರ್ಗೀಕರಣ:**

ಕಂಪನಿ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ/ಚಾಲ್ತಿಯೇತರ ವರ್ಗೀಕರಣದ ಆಧಾರದಲ್ಲಿ ಪ್ರಸ್ತುತಪಡಿಸಿದೆ:

(i) ಒಂದು ಆಸ್ತಿಯು ಈ ಕೆಳಕಂಡಂತಿದ್ದರೆ ಆಗ ಅದನ್ನು ಚಾಲ್ತಿ ಆಸ್ತಿ ಎಂದು ವರ್ಗೀಕರಣ ಮಾಡಲಾಗಿದೆ;

- ಸಾಮಾನ್ಯ ಕಾರ್ಯಾಚರಣೆ ಆವರ್ತನದಲ್ಲಿ ನಗದೀಕರಣವಾಗಲಿರುವ ನಿರೀಕ್ಷೆಯಲ್ಲಿರುವುದು ಅಥವಾ ಮಾರಾಟ ಮಾಡಲು ಉದ್ದೇಶಿಸಿರುವುದು ಅಥವಾ ಬಳಸಿರುವುದು.
- ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿಯ ಅವಧಿಯ ನಂತರ 12 ತಿಂಗಳೊಳಗಾಗಿ ನಗದಾಗುವುದೆಂದು ನಿರೀಕ್ಷಿಸುವುದು. ಅಥವಾ
- ವರದಿ ಅವಧಿಯ ನಂತರ ಕನಿಷ್ಠ 12 ತಿಂಗಳಲ್ಲಿ ವಿನಿಮಯ ಗೊಳಿಸುವುದಕ್ಕೆ ಅಥವಾ ಹೊಣೆಗಾರಿಕೆ ಇತ್ಯರ್ಥಗೊಳಿಸಲು ಬಳಸಲು ಯಾವುದೇ ನಿರ್ಬಂಧ ಇರದ ನಗದು ಅಥವಾ ನಗದು ಸಮಾನವಾದುದು.

(ii) ಇನ್ನುಳಿದ ಎಲ್ಲ ಆಸ್ತಿಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(iii) ಒಂದು ಹೊಣೆಗಾರಿಕೆಯನ್ನು ಅದು ಕೆಳಕಂಡಂತಿದ್ದಾಗ ಚಾಲ್ತಿ ಎಂದು ವರ್ಗೀಕರಣ ಮಾಡಲಾಗಿರುತ್ತದೆ;

- ❒ ಅದು ಸಾಮಾನ್ಯ ಕಾರ್ಯಾಚರಣೆಯ ವಿಧಾನದಲ್ಲಿ ಇತ್ಯರ್ಥ ಗೊಳಿಸಲಾಗುವುದೆಂದು ನಿರೀಕ್ಷಿಸಿರುವುದು;
- ❒ ಅದನ್ನು ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ❒ ವರದಿ ಅವಧಿಯ ನಂತರ 12 ತಿಂಗಳೊಳಗಾಗಿ ಇತ್ಯರ್ಥ ಗೊಳಿಸಬೇಕಾಬೇಕಾಗಿರುವುದು, ಅಥವಾ
- ❒ ವರದಿಯ ಅವಧಿಯ ನಂತರ ಕನಿಷ್ಠ 12 ತಿಂಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡಲು ಬೇಷರತ್ ಹಕ್ಕು ಇಲ್ಲದಿರುವುದು.

(iv) ಇನ್ನುಳಿದ ಎಲ್ಲ ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(v) ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

ಕಂಪನಿ ತನ್ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳೆಂದು ವರ್ಗೀಕರಣ ಮಾಡುವ ಉದ್ದೇಶದಿಂದ ಕಾರ್ಯಾಚರಣೆ ಆವರ್ತನವನ್ನು ಒಂದು ವರ್ಷ ಎಂದು ದೃಢೀಕರಿಸಿದೆ. ಇದನ್ನು ಸೇವೆಯ ಸ್ವರೂಪ ಮತ್ತು ಅಭಿವೃದ್ಧಿಯ ಉದ್ದೇಶಕ್ಕಾಗಿ ಆಸ್ತಿಯ ಸ್ವಾಧೀನಪಡಿಸಿಕೊಳ್ಳಲಾದ ಹಾಗೂ ಅವುಗಳಿಂದ ಲಭ್ಯವಾಗ ಬಹುದಾದ ನಗದು ಅಥವಾ ನಗದು ಸಮಾನಗಳ ನಡುವಿನ ಸಮಯಗಳ ಆಧಾರದ ಮೇಲೆ ಮಾಡಲಾಗಿದೆ. ಚಿಟ್ ವ್ಯವಹಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಇದರಲ್ಲಿ ಸೇರಿರುವುದಿಲ್ಲ. ಇದರ ಆವರ್ತನ ಅದರ ಅವಧಿ ಮೇಲೆ ಆಧಾರಿತವಾಗಿದೆ. 40 ತಿಂಗಳುಗಳನ್ನು ಅದರ ಅವರ್ತನವೆಂದು ಪರಿಗಣಿಸಿದೆ. ಇದು ಅತ್ಯಂತ ಜನಪ್ರಿಯ ಚಿಟ್ ಅವಧಿಯಾಗಿರುವುದು.

### ಬಿ. ವಿದೇಶಿ ಕರೆನ್ಸಿ ವಹಿವಾಟು:

#### ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿ:

ಕಂಪನಿಯ ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿಯು ಭಾರತೀಯ ರೂಪಾಯಿ ಆಗಿರುವುದು. ವಿದೇಶಿ ಕರೆನ್ಸಿಗಳಲ್ಲಿನ ವ್ಯವಹಾರಗಳನ್ನು ವ್ಯವಹಾರವು ಪರಿಗಣನೆಗೆ ಮೊದಲು ಅರ್ಹವಾಗುವ ದಿನಾಂಕದಂದು ಇರುವ ಕಂಪನಿ ಕಾರ್ಯಾಚರಣೆ ಕರೆನ್ಸಿ ಸ್ಥಳದ ದರಗಳಲ್ಲಿ ಪ್ರಾರಂಭಿಕವಾಗಿ ದಾಖಲಿಸಲಾಗಿದೆ.

ವಿದೇಶಿ ಕರೆನ್ಸಿಗಳಲ್ಲಿ ತಿಳಿಸಿರುವ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವರದಿಯ ದಿನಾಂಕದಲ್ಲಿದ್ದ ವಿನಿಮಯದ ಸ್ಥಳದಲ್ಲಿನ ಕಾರ್ಯಾಚರಣೆ ಕರೆನ್ಸಿ ದರಗಳಲ್ಲಿ ಪರಿವರ್ತನೆ ಮಾಡಿದೆ. ವರ್ಷಾಂತ್ಯದ ವಿನಿಮಯ ದರದಲ್ಲ ಅಂತಹ ವ್ಯವಹಾರಗಳನ್ನು ಇತ್ಯರ್ಥಪಡಿಸಿದಾಗ ಮತ್ತು ಹಣಕಾಸಿನ ಇತ್ಯಾದಿಗಳು ಮತ್ತು ಹೊಣೆಗಾರಿಕೆಗಳನ್ನು ವಿದೇಶಿ ಕರೆನ್ಸಿಗಳಲ್ಲಿ ಲೆಕ್ಕ ಹಾಕಿರುವುದನ್ನು ಪರಿವರ್ತನೆ ಮಾಡಿದಾಗ, ಉಂಟಾಗುವ ವ್ಯತ್ಯಾಸಗಳನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ. ಅವು ಅರ್ಹತೆ ಹೊಂದಿದ ನಗದು ಹರಿವಿನ ಪರಿಗಣನೆಗೆ ಸಂಬಂಧಿಸಿದ್ದರೆ ಅವುಗಳನ್ನು ಈಕ್ವಿಟಿಯಲ್ಲಿ ಮುಂದೂಡಿದೆ.

ಹಣಕಾಸೇತರ ಐಟಂಗಳನ್ನು ವಿದೇಶಿ ಕರೆನ್ಸಿಯಲ್ಲಿನ ಐತಿಹಾಸಿಕ ಬೆಲೆಯಲ್ಲಿ ಮಾಪನ ಮಾಡಿದ್ದರೆ ಅವುಗಳನ್ನು ಪ್ರಾರಂಭಿಕ ವ್ಯವಹಾರಗಳ ದಿನಾಂಕಗಳಲ್ಲಿ ವಿನಿಮಯ ದರಗಳನ್ನು ಬಳಸಿ ಪರಿವರ್ತನೆ ಮಾಡಲಾಗಿದೆ. ವಿದೇಶಿ ಕರೆನ್ಸಿಯಲ್ಲಿನ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಹಣಕಾಸೇತರ ಐಟಂಗಳನ್ನು ನ್ಯಾಯೋಚಿತ ಮೌಲ್ಯ ನಿರ್ಧರಣೆ ಮಾಡಿದಾಗಿನ ದಿನಾಂಕದಲ್ಲಿನ ವಿನಿಮಯ ದರಗಳನ್ನು ಬಳಸಿ ಪರಿವರ್ತಿಸಲಾಗಿದೆ. ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ಹಣಕಾಸೇತರ ಐಟಂಗಳ ಪರಿವರ್ತನೆಯಲ್ಲಿ ಉಂಟಾಗುವ ಲಾಭ ಅಥವಾ ನಷ್ಟವನ್ನು ಐಟಂನ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ ಮಾಡಿದಾಗ ಉಂಟಾದ ಲಾಭ ಅಥವಾ ನಷ್ಟವನ್ನು ಮಾನ್ಯ ಮಾಡುವ ರೀತಿಯಲ್ಲಿ ಪರಿಗಣಿಸಿದೆ (ಅಂದರೆ ಯಾವುದರ ನ್ಯಾಯೋಚಿತ ಮೌಲ್ಯದಲ್ಲಿನ ಲಾಭ ಅಥವಾ ನಷ್ಟವನ್ನು ಒಸಿಐನಲ್ಲಿ ಅಥವಾ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗಿದೆಯೋ ಅವುಗಳ ಪರಿವರ್ತನೆ ವ್ಯತ್ಯಾಸಗಳನ್ನು ಸಹ ಅನುಕ್ರಮವಾಗಿ ಒಸಿಐ ಅಥವಾ ಲಾಭ ಅಥವಾ ನಷ್ಟದಲ್ಲಿ ಕೂಡ ಮಾನ್ಯ ಮಾಡಿದೆ.

### ಸಿ) ಆದಾಯ ಗುರುತಿಸುವಿಕೆ:

ಕಂಪನಿ ತನ್ನ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ರೂಪಿಸುವಾಗ ಕೆಳಕಂಡ ಲೆಕ್ಕ ನಿರ್ವಹಣಾ ನೀತಿಯನ್ನು ಅನುಸರಿಸಿದೆ:

#### ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ

ಕಂಪನಿಯು ಐಎನ್‌ಡಿ ಎಎಸ್ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಹಂತಗಳ ಮಾದರಿಯನ್ನು ಆಧರಿಸಿ ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯವನ್ನು ಮಾನ್ಯ ಮಾಡಿದೆ:

ಹಂತ:1 ಗ್ರಾಹಕರೊಂದಿಗಿನ ಗುತ್ತಿಗೆ (ಗಳು) ಯನ್ನು ಗುರುತಿಸುವುದು:

ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳ ನಡುವೆ ಉಂಟಾದ ಒಪ್ಪಂದವೆಂದು ನಿರೂಪಿಸಿದ್ದು, ಅದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ, ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಂತ:2 – ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ದಕ್ಷತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ದಕ್ಷತೆ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ಆಶ್ವಾಸನೆ

ಇರುವುದು.

ಹಂತ: 3 – ವಹಿವಾಟಿನ ಬೆಲೆ ನಿರ್ಧರಣೆ: ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಕಂಪನಿ ಪಡೆಯಲರ್ಹವಾದುದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ ಪರವಾಗಿ ಪಡೆದ ಮೊತ್ತವನ್ನು ಹೊರತುಪಡಿಸಿರುತ್ತದೆ.

ಹಂತ: 4– ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ, ಕಂಪನಿ ತಾನು ತೃಪ್ತಿಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಕಂಪನಿ ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣಾ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುವುದು.

ಹಂತ: 5– ಸಂಸ್ಥೆಯು ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯವನ್ನು ಮಾನ್ಯ ಮಾಡುವುದು:

ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಕಂಪನಿ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸುವುದು ಮತ್ತು ಕಾಲಾನಂತರ ಆದಾಯವನ್ನು ಮಾನ್ಯ ಮಾಡುತ್ತದೆ.

(1) ಕಂಪನಿ ನಿರ್ವಹಿಸುತ್ತಾ ಪೂರೈಸಿದ ಕಾರ್ಯನಿರ್ವಹಣೆಯಿಂದ ಗ್ರಾಹಕನು ಪ್ರಯೋಜನ ಬಳಸಿಕೊಳ್ಳುವುದು ಮತ್ತು ಉಪಯೋಗವನ್ನು ಏಕಕಾಲಕ್ಕೆ ಬಳಸಿಕೊಳ್ಳುವುದು ಅಥವಾ

(2) ಕಂಪನಿಯ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುವುದು ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುವುದು.ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿ ಎಂದು ಪರಿಗಣಿತ ಅಥವಾ

(3) ಕಂಪನಿಯ ಕಾರ್ಯನಿರ್ವಹಣೆಯು ಕಂಪನಿಯ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸದಿದ್ದರೆ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿದ್ದರೆ.

ಕಂಪನಿಯು ಆಶ್ವಾಸನೆ ನೀಡಿದ ಸರಕುಗಳು ಅಥವಾ ಸೇವೆಗಳನ್ನು ಪೂರೈಸುವ ಮೂಲಕ ಕಾರ್ಯಕ್ಷಮತೆ ಬಾಧ್ಯತೆಯನ್ನು ತೃಪ್ತಿಪಡಿಸಿದಾಗ ಕಾರ್ಯಕ್ಷಮತೆಯಿಂದ ಗಳಿಸಿದ ಹಣದ ಮೊತ್ತದ ಆಧಾರದ ಮೇಲೆ ಗುತ್ತಿಗೆ ಆಸ್ತಿ ಒಂದನ್ನು ಸೃಜಿಸುವುದು. ಗ್ರಾಹಕರಿಂದ ಪಡೆದಿರುವ ಹಣದ ಮೊತ್ತ ಮಾನ್ಯ ಮಾಡಿದ ಆದಾಯದ ಮೊತ್ತಕ್ಕಿಂತ ಹೆಚ್ಚಿದ್ದರೆ ಅದು ಗುತ್ತಿಗೆ ಹೊಣೆಗಾರಿಕೆ ಉಂಟು ಮಾಡುತ್ತದೆ.

ಪಾವತಿಯ ಒಪ್ಪಂದದ ಪ್ರತಿಪಾದಿತ ನಿಯಮಗಳನ್ನು ಗಮನಕ್ಕೆ ತೆಗೆದುಕೊಂಡು ಮತ್ತು ತೆರಿಗೆಗಳು ಮತ್ತು ಸುಂಕ ಹೊರತುಪಡಿಸಿ, ಪಡೆದಿರುವ ಅಥವಾ ಪಡೆಯಬಹುದಾಗಿರುವ ಹಣದ ನ್ಯಾಯೋಚಿತ ಮೌಲ್ಯದಲ್ಲಿ ಆದಾಯವನ್ನು ಮಾಪನ ಮಾಡಿದೆ.

ಗ್ರಾಹಕರಿಗೆ ಆಶ್ವಾಸನೆ ನೀಡಿದ ಸರಕುಗಳು ಮತ್ತು ಸೇವೆಗಳನ್ನು ವರ್ಗಾಯಿಸಿದ ಮತ್ತು ಗ್ರಾಹಕರು ಮಾಡಿದ ಪಾವತಿ ನಡುವಿನ ಅವಧಿ ಒಂದು ವರ್ಷಕ್ಕಿಂತ ಮೀರಿರುವ ಸಂದರ್ಭದಲ್ಲಿ ಕಂಪನಿ ಯಾವುದೇ ಗುತ್ತಿಗೆಗಳನ್ನು ಹೊಂದಲು ನಿರೀಕ್ಷಿಸುವುದಿಲ್ಲ. ಇದರ ಪರಿಣಾಮವಾಗಿ, ಅದು ಯಾವುದೇ ವ್ಯವಹಾರದ ಬೆಲೆಗಳನ್ನು ಹಣದ ಸಮಯದ ಮೌಲ್ಯಕ್ಕೆ ಹೊಂದಾಣಿಕೆ ಮಾಡುವುದಿಲ್ಲ.

### ಬಾಡಿಗೆ ಆದಾಯ:

ಬೆಲೆ ಏರಿಕೆ ಪರಿಣಾಮ ಬಿಂಬಿಸುವ ಹೆಚ್ಚಳದ ಗುತ್ತಿಗೆ ಪ್ರಕರಣ ಹೊರತಾಗಿ, ಹೂಡಿಕೆ ಸ್ವತ್ತುಗಳ ಮೇಲಿನ ಕಾರ್ಯಾಚರಣೆ ಗುತ್ತಿಗೆಗಳಿಂದ ಉಂಟಾಗುವ ಬಾಡಿಗೆ ಆದಾಯವನ್ನು ಗುತ್ತಿಗೆ ಅವಧಿಗಳಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲೆಕ್ಕಾಚಾರ ಮಾಡಿದೆ. ಹೆಚ್ಚಳವಾದ ಗುತ್ತಿಗೆ ಸಂಬಂಧದಲ್ಲಿ ಬಾಡಿಗೆ ಆದಾಯವನ್ನು ಆ ಅವಧಿಯ ವಾಸ್ತವಿಕ ಬಾಡಿಗೆಯಂತೆ ಲೆಕ್ಕ ಮಾಡಿದೆ.

### ವಿಮೆ ಕ್ಲೇಮುಗಳು:

ವಿಮೆ ಕ್ಲೇಮ್‌ಗಳನ್ನು ಅವುಗಳ ಅಂತಿಮ ಸಂಗ್ರಹಣೆಯ ಬಗ್ಗೆ ಕಂಪನಿ ಸೂಕ್ತವಾದ ಖಚಿತತೆ ಹೊಂದಿರುವ ಪ್ರಮಾಣದವರೆಗೆ ಲೆಕ್ಕಾಚಾರ ಮಾಡಿದೆ.

### ಲಾಭಾಂಶದ ಆದಾಯ

ಲಾಭಾಂಶದಿಂದ ಬರುವ ಆದಾಯವನ್ನು ಕಂಪನಿ ಪಾವತಿಯನ್ನು ಸ್ವೀಕರಿಸುವ ಹಕ್ಕನ್ನು ಸ್ಥಾಪಿಸಿದಾಗ ಮಾನ್ಯ ಮಾಡಲಾಗಿದೆ. ಲಾಭಾಂಶದ ಜೊತೆಗೆ ಸಂಯೋಜನೆಗೊಂಡ ಆರ್ಥಿಕ ಸೌಲಭ್ಯಗಳು ಕಂಪನಿಗೆ ಬರುವುದು ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಲಾಗುವುದು.

### ಬಡ್ಡಿ ಆದಾಯ:

ಹಣಕಾಸಿನ ಆಸ್ತಿಯಿಂದ ಬಂದ ಬಡ್ಡಿ ಆದಾಯವನ್ನು ಆರ್ಥಿಕ ಅನುಕೂಲಗಳ ಕಂಪನಿಗೆ ಬರುವ ಸಾಧ್ಯತೆ ಇರುವಾಗ ಮಾನ್ಯ ಮಾಡಿದೆ ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ ಮಾಪನ ಮಾಡಲಾಗುವುದು. ಪಾವತಿಯಾಗದೆ ಬಾಕಿಯಿರುವ ಅಸಲಿನ ಸಂಬಂಧ ಅನ್ವಯವಾಗುವ ಬಡ್ಡಿದರವನ್ನು ವಿಧಿಸುವ ಮೂಲಕ ಬಡ್ಡಿಯು ಅನುಪಾತದ ಆಧಾರದ ಮೇಲೆ ಸಂಚಯನವಾಗುವುದು. ಹಣಕಾಸಿನ ಆಸ್ತಿಯ ನಿವ್ವಳ ವಾಹಕ ಮೊತ್ತಕ್ಕೆ ಸೂಕ್ತವಾಗುವಲ್ಲಿ ಹಣಕಾಸಿನ ಸಾಧನದ ನಿರೀಕ್ಷಿತ ಜೀವಿತಾವಧಿಯಲ್ಲಿ ಅಥವಾ ಅಲ್ಪಕಾಲಿಕ ಅವಧಿಯಲ್ಲಿ ಅಂದಾಜು ಮಾಡಿದ ಮುಂದಿನ ನಗದು ಸ್ವೀಕಾರದ ನಿಖರವಾದ ರಿಯಾಯಿತಿಗಳ ದರವು ಇಪಿಆರ್ ಆಗಿರುವುದು. ಅನ್ವಯವಾಗುವ ಬಡ್ಡಿ ದರ ಲೆಕ್ಕಾಚಾರ ಮಾಡುವಾಗ ಹಣಕಾಸಿನ ಸಾಧನಗಳ (ಉದಾಹರಣೆಗೆ ಪೂರ್ವ ಪಾವತಿ, ವಿಸ್ತರಣೆ,

ಕಾಲ್ ಮತ್ತು ಇದೇ ರೀತಿಯ ಆಯ್ಕೆಗಳು) ಒಪ್ಪಂದವಾದ ಎಲ್ಲಾ ನಿಯಮಗಳನ್ನು ಪರಿಗಣಿಸುವ ಮೂಲಕ ಕಂಪನಿ ನಿರೀಕ್ಷಿತ ನಗದು ಹರಿವುಗಳನ್ನು ಅಂದಾಜು ಮಾಡುವುದು. ಆದರೆ ನಿರೀಕ್ಷಿತ ಕ್ರೆಡಿಟ್ ನಷ್ಟಗಳನ್ನು ಪರಿಗಣಿಸುವುದಿಲ್ಲ. ಬಡ್ಡಿ ಆದಾಯವು ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿನ ಇತರೆ ಆದಾಯದಲ್ಲಿ ಸೇರ್ಪಡೆಯಾಗಿದೆ.

ಅಂತಿಮ ವಸೂಲಿಯು ಸಂದೇಹಾಸ್ಪದವಾಗಿರುವ ವಿಚಾರಗಳಲ್ಲಿ ಮತ್ತು ಕೆಳಗೆ ಪಟ್ಟಿ ಮಾಡಿರುವ ವಿಷಯಗಳನ್ನು ಹೊರತುಪಡಿಸಿ ವಿಳಂಬವಾಗಿ ಸ್ವೀಕಾರಗಳು, ರದ್ದುಪಡಿಸಿದ/ಮುಟ್ಟುಗೋಲು ಹಾಕಿಕೊಂಡ ಆದಾಯ ಮತ್ತು ಗ್ರಾಹಕರುಗಳಿಂದ ಪಡೆದ ವರ್ಗಾವಣೆ ಶುಲ್ಕಗಳ ಮೇಲಿನ ಬಡ್ಡಿಯನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ:

**ನಗದು ಆಧಾರದ ಮೇಲೆ ಆದಾಯ ಪರಿಗಣನೆ:**

ವಿಶ್ವಾಸಾರ್ಹತೆಯು ಅನಿಶ್ಚಿತವಾಗಿರುವ ಕಾರಣ ನಗದು ಆಧಾರದ ಮೇಲೆ ಲೆಕ್ಕ ಮಾಡಲಾಗಿರುವ ಕೆಳಕಂಡ ಐಟಂಗಳು ಹೊರತಾಗಿ ಆದಾಯವನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ.

(i) **ಚಿಟ್ ಕಾರ್ಯಾಚರಣೆಗಳು**

ಚಿಟ್ ಕಾರ್ಯಾಚರಣೆಗಳಿಂದ ಬಂದ ಎಲ್ಲಾ ವಾಹಿನಿಗಳ ಆದಾಯ ನಗದು ಆಧಾರದ ಮೇಲಿರುವುದು.

(ii) ಜಾರಿಯಲ್ಲಿರುವ ಸುಂಕದ ಕ್ರೆಡಿಟ್/ವಿದೇಶಿ ವ್ಯಾಪಾರ ನೀತಿಯ ವಿವಿಧ ಪ್ರವರ್ಧನೆ ಯೋಜನೆಗಳ ಅಡಿಯಲ್ಲಿನ ವಿನಾಯಿತಿ ತೆರಿಗೆ ಕ್ರೆಡಿಟ್, ಮತ್ತು ಆದಾಯ ತೆರಿಗೆಗೆ/ಸೇವಾ ತೆರಿಗೆ/ಮಾರಾಟ ತೆರಿಗೆ/ವ್ಯಾಟ್/ಜಿಎಸ್‌ಟಿ ಮತ್ತು ಇದರ ಮೇಲಿನ ಬಡ್ಡಿ ಇತ್ಯಾದಿಯ ಮರುಪಾವತಿ.

(iii) ವಸೂಲಾಗುವುದು ವಿಳಂಬವಾದುದರ ಮೇಲಿನ ಬಡ್ಡಿ.

(iv) ಸರಬರಾಜುದಾರರು/ಹೊಣೆಗಾರರುಗಳಲ್ಲಿನ ದ್ರವೀಕೃತ ಹಾನಿಗಳು ಆದಾಯದ ಇತರೆ ಅವಧಿಯನ್ನು ಸ್ವೀಕರಿಸುವ ಹಕ್ಕು ಉಂಟಾದಾಗ ಮಾನ್ಯ ಮಾಡಿದೆ.

ಡಿ) **ಸರಕುಗಳ ತಪಶೀಲು:**

ಸರಕುಗಳ ತಪಶೀಲನ್ನು ಅನುಪಯುಕ್ತ ಮತ್ತು ಉತ್ಪನ್ನಗಳ ಹೊರತಾಗಿ ಉಳಿದವುಗಳಿಗೆ ಕಡಿಮೆ ಬೆಲೆಯಲ್ಲಿ ಮತ್ತು ನಿವ್ವಳ ನಗದಾಗುವ ಮೌಲ್ಯದಲ್ಲಿ ಮೌಲ್ಯ ನಿರ್ಣಯ ಮಾಡಿದೆ. ಅನುಪಯುಕ್ತ ಮತ್ತು ಉಪ ಉತ್ಪನ್ನಗಳ ಬಗ್ಗೆ ನಿವ್ವಳ ನಗದಾಗುವ ಮೌಲ್ಯದಲ್ಲಿ ಮೌಲ್ಯ ನಿರ್ಣಯ ಮಾಡಿದೆ. ನಿವ್ವಳ ನಗದಾಗುವ ಮೌಲ್ಯವು ಪೂರ್ಣಗೊಳ್ಳುವಿಕೆಯ ಅಂದಾಜು ಮಾಡಿದ ವೆಚ್ಚ ಮತ್ತು ಮಾರಾಟ ಮಾಡಲು ಅಗತ್ಯವಾಗಿರುವ ಅಂದಾಜು ವೆಚ್ಚಗಳನ್ನು ಕಳೆದು, ವ್ಯವಹಾರದ ಸಾಮಾನ್ಯ ರೂಪದಲ್ಲಿನ ಮಾರಾಟದ ಅಂದಾಜು ಮಾಡಿದ ಬೆಲೆಯಾಗಿರುವುದು. ಪ್ರತಿ ಉತ್ಪನ್ನವನ್ನು ಅದು ಪ್ರಸ್ತುತ ಇರುವ ಬಗ್ಗೆ ಮತ್ತು ಸ್ಥಿತಿಗೆ ತರಲು ಉಂಟಾಗುವ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕ ಮಾಡಲಾಗಿದೆ:

(i) **ಕಚ್ಚಾ ಸಾಮಗ್ರಿಗಳು:** ಇದರ ಬೆಲೆಯಲ್ಲಿ ಖರೀದಿ ಬೆಲೆ ಮತ್ತು ಸರಕುಗಳನ್ನು ಅವುಗಳ ಪ್ರಸಕ್ತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರಲು ಉಂಟಾದ ಇತರೆ ಖರ್ಚುಗಳೂ ಸೇರಿರುವವು. ಕಾಗದದ ವಿಭಾಗದಲ್ಲಿ ಬೆಲೆಯನ್ನು ತೂಕದ ಸರಾಸರಿ ಆಧಾರದಲ್ಲಿ ನಿರ್ಧರಣೆ ಮಾಡಿದೆ.

(ii) **ಸಿದ್ಧಪಡಿಸಿದ ಪದಾರ್ಥಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿ:** ಇದರ ಬೆಲೆಯಲ್ಲಿ ಸಾಮಾನ್ಯ ಕಾರ್ಯಾಚರಣೆ ಸಾಮರ್ಥ್ಯದ ಆಧಾರದ ಮೇಲೆ ತಯಾರಿಕೆಯ ಮೇಲ್ವೆಚ್ಚಗಳ ಒಂದು ಭಾಗ ಮತ್ತು ನೇರ ಸಾಮಗ್ರಿಗಳು ಮತ್ತು ಕೆಲಸದ ವೆಚ್ಚ ಸೇರಿರುವುದು. ಆದರೆ ಸಾಲದ ವೆಚ್ಚಗಳು ಸೇರಿರುವುದಿಲ್ಲ. ಬೆಲೆಯನ್ನು ತೂಕದ ಸರಾಸರಿ ಆಧಾರದ ಮೇಲೆ ನಿರ್ಧರಿಸಿದೆ.

(iii) ಒಳಬರುವ ಸಾಗಾಣಿಕೆ ವಸ್ತುವನ್ನು ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕೆ ಪರಿಗಣಿಸಿರುವುದಿಲ್ಲ ಮತ್ತು ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ವಿಧಿಸಿದೆ.

(iv) ಬಳಕೆಯಿಂದ ಹೊರತಾದ ಸರಕುಗಳು, ನಿಧಾನಗತಿಯ ಮಾರಾಟದ ಮತ್ತು ದೋಷಯುಕ್ತ ಸರಕುಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ನಿವ್ವಳ ನಗದಾಗುವ ಮೌಲ್ಯದಲ್ಲಿ ಬರೆಯಲಾಗಿದೆ.

ಇ) **ಸ್ವತ್ತು , ಸ್ಥಾವರ ಮತ್ತು ಉಪಕರಣ(ಪಿಪಿಇ):**

**ಗುರುತಿಸುವಿಕೆ ಮತ್ತು ಮಾಪನ**

ಸ್ವತ್ತು , ಸ್ಥಾವರ ಮತ್ತು ಉಪಕರಣವನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದು ಬೆಲೆಯಲ್ಲಿ ಮಾಪನ ಮಾಡಲಾಗಿದೆ. ಈ ಬೆಲೆಯಲ್ಲಿ ಆಸ್ತಿಯ ಸ್ವಾಧೀನಕ್ಕೆ ನೇರವಾಗಿ ಅನ್ವಯಿಸಬಹುದಾದ ಖರ್ಚುಗಳೂ ಸೇರಿರುವವು. ಅರ್ಹತಾ ಆಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಅನ್ವಯಿಸಬಹುದಾದ ಸಮಾನ್ಯ ಮತ್ತು ನಿರ್ದಿಷ್ಟ ಸಾಲದ ವೆಚ್ಚವನ್ನು ಬೆಲೆಯ ಭಾಗವಾಗಿ ಬಂಡವಾಳೀಕರಿಸಲಾಗಿದೆ.

**ಸವಕಳಿ ಮತ್ತು ಉಪಯುಕ್ತ ಜೀವಿತಾವಧಿ**

ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸವಕಳಿ/ಅಮಾರ್ಟೈಜೇಷನ್ ಅನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಯ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಿದೆ ಮತ್ತು ಸೂಕ್ತವಾಗಿದ್ದಲ್ಲಿ ಅನುಗುಣವಾಗಿ ಹೊಂದಾಣಿಕೆ ಮಾಡಿದೆ.

| ವಿವರಗಳು | ಜೀವಿತಾವಧಿ-ವರ್ಷಗಳಲ್ಲಿ |
|---|---|
| ಕಟ್ಟಡ | 60 |
| ಅಗ್ನಿಶಾಮಕ ಉಪಕರಣ | 10 |
| ವಿದ್ಯುತ್ ಉಪಕರಣ | 10 |
| ಪೀಠೋಪಕರಣ ಮತ್ತು ಅಳವಡಿಕೆಗಳು | 10 |
| ವಾಹನಗಳು | 8 |
| ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ | 5 |
| ನಿರ್ವಹಣೆ ಉಪಕರಣ | 5 |
| ತೂಕದ ಯಂತ್ರಗಳು | 5 |
| ಕಚೇರಿ ಉಪಕರಣ | 5 |
| ಕಂಪ್ಯೂಟರ್‌ಗಳು | 3 |
| ಗುತ್ತಿಗೆದಾರಿಕೆ ಆಸ್ತಿಗಳು/ ಗುತ್ತಿಗೆದಾರಿಕೆ ಕಟ್ಟಡಗಳ ಅಭಿವೃದ್ಧಿ | ಪ್ರಾಥಮಿಕ ಗುತ್ತಿಗೆ ಅವಧಿ ಯಲ್ಲಿ-ಜಮೀನಿಗೆ ಹೊರತಾಗಿ |

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

ತಾಂತ್ರಿಕ ಪರಿಣತರು ಮಾಡಿರುವ ತಾಂತ್ರಿಕ ನಿರ್ಧರಣೆ ಮತ್ತು ಆಡಳಿತ ಮಂಡಳಿ ಅಂದಾಜಿನ ಆಧಾರದ ಮೇಲೆ ಮದ್ಯದ ಮಾರಾಟ ಮಳಿಗೆಗಳಲ್ಲಿರುವ ಪೀಠೋಪಕರಣ ಮತ್ತು ಅಳವಡಿಕೆಗಳ ಅಂದಾಜು ಮಾಡಿದ ಜೀವಿತಾವಧಿ ಉಪಯುಕ್ತತೆಯಲ್ಲಿ ಸವಕಳಿ ಮಾಡಿದೆ. ಇದು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಜೀವಿತಾವಧಿಯಿಂದ ಭಿನ್ನವಾಗಿವೆ. ಸದರಿ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿಯು ಅವುಗಳನ್ನು ಬಳಸಲಿರುವ ಅವಧಿಯಲ್ಲಿ ವಾಸ್ತವಿಕವಾಗಿದ್ದು, ನ್ಯಾಯೋಚಿತ ಅಂದಾಜನ್ನು ಆಡಳಿತ ಮಂಡಳಿ ನಂಬುವುದು.

### ಅಮಾನ್ಯತೆ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಯಾವುದೇ ಬಾಬ್ತು ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವನ್ನು (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

### ಎಫ್) ಅಗೋಚರಿತ ಆಸ್ತಿಗಳು:

### ಮಾನ್ಯತೆ ಮತ್ತು ಮಾಪನ

ಪ್ರತ್ಯೇಕವಾಗಿ ಸ್ವಾಧೀನ ಮಾಡಿಕೊಂಡಿರುವ ಅಗೋಚರಿತ ಆಸ್ತಿ (ಸಾಫ್ಟ್‌ವೇರ್) ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚದ ಬೆಲೆಯಲ್ಲಿ ಮಾಪನ ಮಾಡಿದೆ. ಬೆಲೆಯು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯ ನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರಿ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಿದೆ.

ಪ್ರಾರಂಭಿಕ ಮಾನ್ಯತೆ ಅನುಸರಿಸಿ ಅಗೋಚರಿತ ಆಸ್ತಿಗಳನ್ನು ಯಾವುದೇ ಸಂಚಯನವಾಗಿರುವ ಅಮಾರ್ಟೈಜೇಷನ್ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಪರಿಗಣಿಸಿದೆ.

ಬಂಡವಾಳೀಕರಣಗೊಂಡ ತಂತ್ರಾಂಶಗಳ ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅವಧಿಯಲ್ಲಿ ಅಮಾರ್ಟೈಜೇಷನ್ ಮಾಡಲಾಗಿದೆ.

ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿಯ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯ ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯ, ಉಪಯುಕ್ತ ಜೀವಿತಾವಧಿ ಮತ್ತು ಅಮಾರ್ಟೈಜೇಷನ್ ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆಂದು ಅನ್ನಿಸಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

### ಜಿ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

ಪ್ರಗತಿಯಲ್ಲಿರುವ ಬಂಡವಾಳ ಹೂಡಿಕೆ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಮಾಡಿದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ವತ್ತಿನ ಬಳಕೆಯ ದಿನಾಂಕವನ್ನು ಮುಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ. ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕಕ್ಕೆ ಬಾಕಿಯಿದ್ದ ಪಿಪಿಇ ಖರೀದಿ/ಸ್ವಾಧೀನದ ಬಗ್ಗೆ ಕೊಟ್ಟಿರುವ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗಿದೆ.

## ಎಚ್. ಹೂಡಿಕೆ ಆಸ್ತಿ

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು / ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವ್ಯವಹಾರ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗಿದೆ. ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿಸಲಾಗಿದೆ. ಆರಂಭದ ಮಾನ್ಯತೆಯ ನಂತರ ಕಂಪನಿ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟಗಳನ್ನು (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗಿದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿಯನುಸಾರ ಸವಕಳಿಗೊಳಿಸಲಾಗಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ – II ರಲ್ಲಿ ನಿರ್ದಿಷ್ಟಪಡಿಸಿರುವ ಆಸ್ತಿಯ ಉಪಯುಕ್ತತೆ ಜೀವಿತಾವಧಿ ಆಧಾರದ ಮೇಲೆ ನೇರ ಮಾರ್ಗದ ವಿಧಾನದಲ್ಲಿ ಸವಕಳಿ/ ಅಮಾರ್ಟೈಜೇಷನ್ ಮಾಡಿದೆ. ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ – IIರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಗಳ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಲಾಗುವುದು ಮತ್ತು ಸೂಕ್ತವಾಗಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗಿದೆ.

ಕಟ್ಟಡಗಳ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿ 60 ವರ್ಷಗಳು. ಹೂಡಿಕೆ ಸ್ವತ್ತಿನ ನ್ಯಾಯೋಚಿತ ಮೌಲ್ಯವನ್ನು ಟಿಪ್ಪಣಿಗಳಲ್ಲಿ ತಿಳಿಸಿದೆ. ಮಾನ್ಯತೆ ಹೊಂದಿದ ಬಾಹ್ಯ ಸ್ವತಂತ್ರ ಮೌಲ್ಯಮಾಪಕರಿಂದ ಮಾಡಿದ ವಾರ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನ್ಯಾಯೋಚಿತ ಮೌಲ್ಯಗಳನ್ನು ನಿರ್ಧರಣೆ ಮಾಡಿದೆ.

## ಐ) ಹಣಕಾಸಿನ ವೆಚ್ಚಗಳು:

ಹಣಕಾಸಿನ ವೆಚ್ಚದಲ್ಲಿ ಗುತ್ತಿಗೆ ಮೇಲಿನ ಬಡ್ಡಿ ವೆಚ್ಚ ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳು, ಬ್ಯಾಂಕ್ ಶುಲ್ಕಗಳು ಮತ್ತು ಖಾತರಿ ಕಮಿಷನ್ ಒಳಗೊಂಡಿರುವುದು. ಎಲ್ಲಾ ಹಣಕಾಸಿನ ವೆಚ್ಚಗಳನ್ನು ಅವು ಉಂಟಾದ ಅವಧಿಯಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

## ಜೆ) ನಗದು ಮತ್ತು ನಗದು ಸಮಾನಗಳು:

ಸ್ಥಿತಿ ವಿವರಣಾ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪಕ್ವತೆ ಅವಧಿಯ ಅಲ್ಪಾವಧಿ ಠೇವಣಿಗಳು ಒಳಗೊಂಡಿವೆ. ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಿಕೆಗೆ ಒಳಪಟ್ಟಿರುತ್ತವೆ.

ನಗದು ಹರಿವಿನ ಹೇಳಿಕೆಯ ಉದ್ದೇಶಕ್ಕಾಗಿ, ನಗದು ಮತ್ತು ನಗದು ಸಮಾನತೆಗಳಲ್ಲಿ ಮೇಲೆ ಪ್ರತಿಪಾದಿಸಿರುವಂತೆ ನಗದು, ಅಲ್ಪಾವಧಿ ಠೇವಣಿಗಳು, ಕಂಪನಿಯ ನಗದು ನಿರ್ವಹಣೆಯ ಅವಿಭಾಜ್ಯ ಭಾಗವೆಂದು ಪರಿಗಣಿಸಿರುವ ಬಾಕಿಯಿರುವ ಬ್ಯಾಂಕ್ ಓವರ್ ಡ್ರಾಫ್ಟ್‌ಗಳಿಗೆ ಹೊಂದಾಣಿಕೆ ಮಾಡಿರುವ ಮೌಲ್ಯದಲ್ಲಿ ಬದಲಾವಣೆಯ ಮಹತ್ತರವಲ್ಲದ ಅಪಾಯಕ್ಕೆ ಒಳಪಟ್ಟಿರುವ ಗೊತ್ತಿರುವ ನಗದಿನ ಮೊತ್ತಕ್ಕೆ ಸಿದ್ಧವಾಗಿ ಪರಿವರ್ತಿಸಬಹುದಾದ ಮೂರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಮೂಲ ಅವಧಿ ಮುಕ್ತಾಯ ಉಳ್ಳ ಇತರೆ ಅಲ್ಪಾವಧಿಯ ಮತ್ತು ಅತಿ ಹೆಚ್ಚಿನ ದ್ರವೀಕರಣದ ಹೂಡಿಕೆಗಳೂ ಸೇರಿರುವವು. ಬ್ಯಾಂಕ್ ಡ್ರಾಫ್ಟ್‌ಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ ಹೊಣೆಗಾರಿಕೆಗಳಲ್ಲಿನ ಸಾಲಗಳಲ್ಲಿ ತಿಳಿಸಿದೆ.

## ಕೆ) ಗುತ್ತಿಗೆಗಳು:

ಕಂಪನಿಯು ಪ್ರತಿ ಗುತ್ತಿಗೆ ಅಥವಾ ವ್ಯವಸ್ಥೆಯನ್ನು ಅದು ಐಎನ್‌ಡಿ ಎಎಸ್ 116 ಅನ್ವಯ ಪ್ರತಿಪಾದಿಸಿರುವಂತೆ ಗುತ್ತಿಗೆ ಎಂಬುದಾಗಿ ಅರ್ಹತೆ ಪಡೆದಿರುವುದೇ ಎಂಬುದನ್ನು ಮೌಲ್ಯಮಾಪನ ಮಾಡುವುದು.

### ಕಂಪನಿಯು ಗುತ್ತಿಗೆದಾರನಾಗಿ

ಕಂಪನಿಯು ಅಂಗಡಿಗಳು ಮತ್ತು ಕಚೇರಿಗಳನ್ನು ಗುತ್ತಿಗೆಗೆ ಪಡೆಯಲು ವ್ಯವಸ್ಥೆಯೊಂದನ್ನು ಮಾಡಿಕೊಳ್ಳುವುದು. ಅಂತಹ ವ್ಯವಸ್ಥೆಗಳು ಸಾಮಾನ್ಯವಾಗಿ ನಿಗದಿತ ಅವಧಿಯದಾಗಿರುವವು. ಆದರೆ ವಿಸ್ತರಣೆ ಅಥವಾ ರದ್ದತಿ ಆಯ್ಕೆಯನ್ನು ಹೊಂದಿರಬಹುದು. ಕಾಂಟ್ರಾಕ್ಟ್ ಅದರ ಪ್ರಾರಂಭದಲ್ಲಿ ಗುತ್ತಿಗೆಯನ್ನು ಹೊಂದಿರುವುದೇ ಎಂಬುದನ್ನು ಕಂಪನಿ ನಿರ್ಧರಣೆ ಮಾಡುವುದು. ಕಾಂಟ್ರಾಕ್ಟ್ ಕೆಳಕಂಡವುಗಳಿಗೆ ಹಕ್ಕುಗಳನ್ನು ನೀಡುವುದಾಗಿದ್ದರೆ ಆಗ ಕಾಂಟ್ರಾಕ್ಟ್ ಗುತ್ತಿಗೆಯನ್ನು ಒಳಗೊಂಡಿರುತ್ತದೆ. –

ಎ) ಗುರುತಿಸಿದ ಆಸ್ತಿಯ ಬಳಕೆಯ ನಿಯಂತ್ರಣ

ಬಿ) ಗುರುತಿಸಿದ ಆಸ್ತಿಯ ಬಳಕೆಯಿಂದ ಬರುವ ಎಲ್ಲಾ ಆರ್ಥಿಕ ಅನುಕೂಲಗಳನ್ನು ಗಣನೀಯವಾಗಿ ಪಡೆಯುವುದು; ಮತ್ತು

ಸಿ) ಗುರುತಿಸಿದ ಆಸ್ತಿಯ ಬಳಕೆಯ ನಿರ್ದೇಶನ ನೀಡಿಕೆ.

ಕಂಪನಿಯು ಗುತ್ತಿಗೆ ಅವಧಿಯನ್ನು ಗುತ್ತಿಗೆಯ ರದ್ದುಪಡಿಸಲಾಗದ ಅವಧಿಯಾಗಿ ನಿರ್ಧರಣೆ ಮಾಡುವುದು. ಇದರ ಜೊತೆ ಜೊತೆಗೆ ಕಂಪನಿಯು ತನ್ನ ಆಯ್ಕೆಯನ್ನು ಚಲಾಯಿಸಲು ಸಕಾರಣೀಯ ನಿಶ್ಚಿತತೆಯಿರುವುದರಿಂದ ಗುತ್ತಿಗೆಯನ್ನು ವಿಸ್ತರಣೆ ಮಾಡಲು ಆಯ್ಕೆ ಒಂದರಿಂದ ಅಂತಹ ವಿಸ್ತರಣೆ ಮಾಡಬಹುದಾದ ಅವಧಿಯನ್ನು ಒಳಪಡಿಸಬಹುದಾಗಿರುತ್ತದೆ.

ಕಂಪನಿ ಹನ್ನೆರಡು ತಿಂಗಳುಗಳಿಗೂ ಕಡಿಮೆ ಅವಧಿಯ ಗುತ್ತಿಗೆಗಳು (ಅಲ್ಪಾವಧಿ ಗುತ್ತಿಗೆಗಳು) ಮತ್ತು ಕಡಿಮೆ ಮೌಲ್ಯದ ಆಸ್ತಿಗಳು ಹೊರತಾಗಿ ಗುತ್ತಿಗೆ ಕಾಂಟ್ರಾಕ್ಟ್‌ನ ಪ್ರಾರಂಭದಲ್ಲಿ ಆಸ್ತಿಯನ್ನು ಅದರ ಬೆಲೆಯಲ್ಲಿ ಮತ್ತು ಸಂಬಂಧಪಟ್ಟ ಗುತ್ತಿಗೆ ಹೊಣೆಗಾರಿಕೆಯಂತೆ ಬಳಕೆ ಹಕ್ಕನ್ನು (ಆರ್‌ಒಯು) ಪರಿಗಣಿಸುವುದು. ಸದರಿ ಅಲ್ಪಾವಧಿ ಯ ಮತ್ತು ಕಡಿಮೆ ಮೌಲ್ಯದ ಗುತ್ತಿಗೆಗಳಿಗೆ, ಕಂಪನಿ ಗುತ್ತಿಗೆ ಪಾವತಿಗಳನ್ನು ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಕಾರ್ಯಾಚರಣೆ ಖರ್ಚುಗಳಾಗಿ ಪರಿಗಣಿಸುವುದು.

ಬಳಕೆ ಹಕ್ಕಿನ ಆಸ್ತಿಯ ಬೆಲೆಯು ಗುತ್ತಿಗೆ ಬಾಧ್ಯತೆಯ ಪ್ರಾರಂಭಿಕ ಮಾಪನದ ಮೊತ್ತ , ಗುತ್ತಿಗೆ ಪ್ರಾರಂಭಿಕ ದಿನಾಂಕದಲ್ಲಿ ಅಥವಾ ಅದಕ್ಕೂ ಮುನ್ನ ಮಾಡಿದ ಯಾವುದೇ ಗುತ್ತಿಗೆ ಪಾವತಿಗಳು ಜೊತೆಗೆ ಯಾವುದೇ ಪ್ರಾರಂಭಿಕ ನೇರ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ಗುತ್ತಿಗೆ ಪ್ರೋತ್ಸಾಹ ಧನಗಳನ್ನು ಪಡೆದಿದ್ದರೆ ಅದನ್ನು ಇದರಲ್ಲಿ ಕಳೆದಿರುತ್ತದೆ. ತದನಂತರ ಬಳಕೆ ಹಕ್ಕಿನ ಆಸ್ತಿಗಳನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಯಾವುದೇ ಸಂಚಯನವಾದ ದುರ್ಬಲತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಬಳಕೆ ಹಕ್ಕಿನ ಆಸ್ತಿಗಳನ್ನು ಅತಿ ಕಡಿಮೆಯ ಗುತ್ತಿಗೆ ಅವಧಿಯಲ್ಲಿ ಅಥವಾ ಬಳಕೆ ಹಕ್ಕಿನ ಆಸ್ತಿಯ ಉಪಯುಕ್ತತೆ ಜೀವಿತಾವಧಿ ದಿನಾಂಕದಿಂದ ಪ್ರಾರಂಭಿಸಿ ನೇರ ಮಾರ್ಗದ ವಿಧಾನವನ್ನು ಬಳಸಿ ಸವಕಳಿ ಲೆಕ್ಕ ಹಾಕಲಾಗಿದೆ. ಬಳಕೆ ಹಕ್ಕಿನ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿ ಯನ್ನು ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸಂಬಂಧ ಮಾಡಿದ ಅದೇ ಆಧಾರದಲ್ಲಿ ನಿರ್ಧರಣೆ ಮಾಡಲಾಗಿದೆ.

ಕಂಪನಿಯು ಬಳಕೆ ಹಕ್ಕಿನ ಆಸ್ತಿಯು ದುರ್ಬಲಗೊಂಡಿರುವುದೇ ಎಂಬುದನ್ನು ನಿರ್ಧರಣೆ ಮಾಡಲು ಮತ್ತು ಹಣಕಾಸೇತರ ಆಸ್ತಿಗಳ ದುರ್ಬಲತೆಯಲ್ಲಿ ವಿವರಿಸಿರುವಂತೆ ಯಾವುದೇ ಗುರುತಿಸಿದ ದುರ್ಬಲತೆ ನಷ್ಟವನ್ನು ಲೆಕ್ಕ ಮಾಡಲು ಐಎನ್‌ಡಿ ಎಎಸ್ 36 ಅನ್ನು ಅನ್ವಯ ಮಾಡುವುದು. ಗುತ್ತಿಗೆಯ ಪ್ರಾರಂಭದಲ್ಲಿನ ಗುತ್ತಿಗೆ ಬಾಧ್ಯತೆಗಳಿಗಾಗಿ, ಆ ದಿನಾಂಕದಲ್ಲಿ ಪಾವತಿ ಮಾಡಿರದ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಗುತ್ತಿಗೆ ಬಾಧ್ಯತೆಯನ್ನು ಕಂಪನಿ ಮಾಪನ ಮಾಡುವುದು. ಗುತ್ತಿಗೆಯಲ್ಲಿ ಅಂತರ್ಗತವಾಗಿರುವ ಬಡ್ಡಿದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಬಹುದಾಗಿದ್ದರೆ ಅದನ್ನು ಬಳಸಿ ಗುತ್ತಿಗೆ ಪಾವತಿಯನ್ನು ಕಳೆಯಲಾಗಿದೆ. ಬಡ್ಡಿ ದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಿರದಿದ್ದರೆ, ಆಸ್ತಿಯ ಸ್ವರೂಪ ಮತ್ತು ಸ್ಥಳ, ಸಮಾನ ಭದ್ರತೆ, ಮಾರುಕಟ್ಟೆ ನಿಯಮಗಳು ಮತ್ತು ನಿಬಂಧನೆಗಳು, ಇದೇ ರೀತಿಯ ಆರ್ಥಿಕ ಪರಿಸ್ಥಿತಿಯಲ್ಲಿ ಅನ್ವಯವಾಗುವಿಕೆಯ ಅಂಶಗಳ ಪರಿಗಣನೆ ಸೇರಿದಂತೆ, ಹಣವನ್ನು ಪಡೆಯಲು ಕಂಪನಿ ಪಾವತಿ ಮಾಡಬೇಕಿರುವ ಹೆಚ್ಚಳ ಮಾಡಿದ ಹಣ ಪಡೆಯುವಿಕೆ ದರ ಬಳಸಿ ಗುತ್ತಿಗೆ ಪಾವತಿಗಳನ್ನು ಕಳೆಯಲಾಗಿದೆ.

ಪ್ರಾರಂಭಿಕ ದಿನಾಂಕದ ನಂತರ ಗುತ್ತಿಗೆ ಹೊಣೆಗಾರಿಕೆಯ ಮೊತ್ತವು ಬಡ್ಡಿಯ ಸಂಚಯನ ಬಿಂಬಿಸಲು ಹೆಚ್ಚಳಗೊಂಡಿದೆ ಮತ್ತು ಮಾಡಿದ ಗುತ್ತಿಗೆ ಪಾವತಿಯಿಂದ ಕಡಿಮೆಯಾಗಿದೆ.

ಕಂಪನಿ ಬಳಕೆ ಹಕ್ಕಿನ ಆಸ್ತಿಗಳಿಗೆ ಹೊಂದಾಣಿಕೆಯಾಗಿ ಗುತ್ತಿಗೆ ಬಾಧ್ಯತೆಯ ಮರು ಮಾಪನದ ಮೊತ್ತವನ್ನು ಪರಿಗಣಿಸಿದೆ. ಬಳಕೆ ಹಕ್ಕಿನ ಆಸ್ತಿಯ ವಾಹಕ ಮೊತ್ತವು ಶೂನ್ಯಕ್ಕೆ ಇಳಿಕೆಯಾಗಿರುವ ಸಂದರ್ಭದಲ್ಲಿ ಮತ್ತು ಗುತ್ತಿಗೆ ಬಾಧ್ಯತೆಯ ಮಾಪನದಲ್ಲಿ ಇನ್ನೂ ಇಳಿಕೆಯಾಗುವುದಿದ್ದರೆ ಆಗ ಕಂಪನಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮರು-ಮಾಪನದ ಯಾವುದೇ ಉಳಿಕೆಯಾಗಿರುವ ಮೊತ್ತವನ್ನು ಪರಿಗಣಿಸುವುದು.

ಗುತ್ತಿಗೆ ಬಾಧ್ಯತೆ ಪಾವತಿಗಳನ್ನು ನಗದು ಹರಿವಿನ ಹೇಳಿಕೆಯಲ್ಲಿ ಹಣ ನೀಡಿಕೆ ಚಟುವಟಿಕೆಗಳಲ್ಲಿ ಬಳಸಿದ ನಗದು ಎಂಬುದಾಗಿ ವರ್ಗೀಕರಿಸಲಾಗಿದೆ.

**ಕಂಪನಿ ಗುತ್ತಿಗೆ ನೀಡಿಕೆದಾರರಾಗಿ:**

ಕಂಪನಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳನ್ನು ಹಣಕಾಸಿನ ಅಥವಾ ಕಾರ್ಯಾಚರಣೆಯಾಗುತ್ತಿರುವ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಎಲ್ಲಾ ಅಪಾಯಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಗುತ್ತಿಗೆದಾರರಿಗೆ ವರ್ಗಾಯಿಸಿರುವ ಗುತ್ತಿಗೆ ಕಾಂಟ್ರಾಕ್ಟ್‌ಗಳನ್ನು ಹಣಕಾಸಿನ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಿದೆ. ಉಳಿದೆಲ್ಲ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳೆಂದು ವರ್ಗೀಕರಿಸಿದೆ.

ಕಂಪನಿ ಮಧ್ಯವರ್ತಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳಿಗೆ ಕಂಪನಿ ಪ್ರಧಾನ ಗುತ್ತಿಗೆ ಮತ್ತು ಉಪಗುತ್ತಿಗೆ ಎಂಬುದಾಗಿ ಎರಡು ಪ್ರತ್ಯೇಕ ಕಾಂಟ್ರಾಕ್ಟ್‌ಗಳ ಲೆಕ್ಕಾಚಾರ ಮಾಡಿದೆ. ಉಪ ಗುತ್ತಿಗೆಗಳನ್ನು ಪ್ರಧಾನ ಗುತ್ತಿಗೆಯಿಂದ ಬರುವ ಉಪಯೋಗದ ಹಕ್ಕಿನ ಆಸ್ತಿಯ ಉಲ್ಲೇಖ ಮಾಡುವ ಮೂಲಕ ಹಣಕಾಸಿನ ಗುತ್ತಿಗೆ ಅಥವಾ ಕಾರ್ಯಾಚರಣೆ ಗುತ್ತಿಗೆ ಎಂಬುದಾಗಿಯೂ ಮುಂದುವರಿದ ವರ್ಗೀಕರಣ ಮಾಡಿದೆ.

**ಎಲ್) ನೌಕರರ ಸೌಲಭ್ಯಗಳು:**

**ನಿರೂಪಿತ ವಂತಿಗೆ ಯೋಜನೆ:**

ಕಂಪನಿಯ ನಿರೂಪಿತ ವಂತಿಗೆ ಯೋಜನೆಗಳು-ನೌಕರರ ಭವಿಷ್ಯನಿಧಿ

(ನೌಕರರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ, 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಮತ್ತು ನಿವೃತ್ತಿ ಸೌಲಭ್ಯ ಆಗಿರುತ್ತವೆ. ಇವುಗಳಿಗೆ ಕಂಪನಿ ವಂತಿಗೆಗಳನ್ನು ನೀಡುವುದರ ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ, ಇಎಸ್ಐಗೆ ಮತ್ತು ನಿವೃತ್ತಿ ಯೋಜನೆಗೆ ಕಂಪನಿಯ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ. ನಿವೃತ್ತಿಗೆ ಸಂಬಂಧಿಸಿದ ಆಸ್ತಿಯನ್ನು ಟ್ರಸ್ಟ್ ಒಂದು ನಿರ್ವಹಿಸುತ್ತಿದ್ದು ಅದು ಭಾರತೀಯ ಜೀವ ವಿಮಾ ನಿಗಮದಲ್ಲಿ ಹೂಡಿಕೆ ಮಾಡುತ್ತಿದೆ.

### ಮರಣ ಪರಿಹಾರ ನಿಧಿ:

ಮರಣ ಪರಿಹಾರ ನಿಧಿಯ ಬಗ್ಗೆ ಕಂಪನಿ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

### ನಿರೂಪಿತ ಸೌಲಭ್ಯ ಯೋಜನೆ:

ಕಂಪನಿಯು ಗ್ರ್ಯಾಚ್ಯುಟಿ ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಕಂಪನಿಯೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದ ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ಎಂಎಸ್ಐಎಲ್ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಕಂಪನಿ ವಂತಿಗೆ ನೀಡುತ್ತದೆ.

ಕಂಪನಿಯು ಹೊಣೆಗಾರಿಕೆಯನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನ ಮೌಲ್ಯಮಾಪನದಿಂದ ನಿರ್ಧರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯದ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದಾದರೂ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ. ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಬಾಧ್ಯತೆ ಅಥವಾ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಅನುಭವ, ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯಮಾಡಲಾಗುತ್ತದೆ.

### ಗಳಿಕೆ ರಜೆಗಳು:

ಕಂಪನಿಯ ನೀತಿನಿಯಮಾನುಸಾರ ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಕಂಪನಿ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ.

ಇದರೊಡಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಂಪನಿಯ ಋಣಭಾರವನ್ನು ವಿಮಾಗಣವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

### ಇತರೆ ಅಲ್ಪಾವಧಿ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ

ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯಕ್ಷಮತೆ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

### ಎಂ. ತೆರಿಗೆ ವೆಚ್ಚಗಳು:

ಆದಾಯ ತೆರಿಗೆ ವೆಚ್ಚಗಳು ಚಾಲ್ತಿಯಲ್ಲಿನ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳನ್ನು ಒಳಗೊಂಡಿರುವುದು.

### ಚಾಲ್ತಿ ಆದಾಯ ತೆರಿಗೆ:

ಪ್ರಸ್ತುತ ಪಾವತಿ ಮಾಡಬೇಕಿರುವ ತೆರಿಗೆಯು ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೇಲೆ ಆಧಾರಿತವಾಗಿರುತ್ತದೆ. ಇತರೆ ವರ್ಷಗಳಲ್ಲಿ ತೆರಿಗೆ ವಿಧಿಸಬಹುದಾಗಿರುವ ಅಥವಾ ತೆರಿಗೆ ಮುರಿದುಕೊಳ್ಳಬೇಕಾದ ಆದಾಯ ಅಥವಾ ಖರ್ಚಿನ ಐಟಂಗಳು ಮತ್ತು ಯಾವತ್ತೂ ತೆರಿಗೆ ವಿಧಿಸದ ಅಥವಾ ತೆರಿಗೆ ಮುರಿದುಕೊಳ್ಳದಿರುವ ಐಟಂಗಳ ಕಾರಣದಿಂದಾಗಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ವರದಿಯಾಗಿರುವಂತೆ ತೆರಿಗೆ ವಿಧಿಸಬಹುದಾದ ಲಾಭವು ತೆರಿಗೆಗೆ ಮುನ್ನ ಲಾಭಗಳಿಂದ ಬೇರೆಯದಾಗಿರುತ್ತದೆ. ಕಾಯ್ದೆಗೊಳಿಸಿರುವ ಅಥವಾ ವರದಿಯ ದಿನಾಂಕಂದು ಸಮಗ್ರವಾಗಿ ಕಾಯ್ದೆಗೊಳಿಸಿ ಜಾರಿ ಮಾಡಿರುವ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಬಳಸಿ ಮೊತ್ತವನ್ನು ಲೆಕ್ಕ ಮಾಡಲಾಗುವುದು. ಅನ್ವಯವಾಗುವ ತೆರಿಗೆ ನಿಬಂಧನೆಗಳು ವ್ಯಾಖ್ಯಾನ ಮಾಡುವುದಕ್ಕೆ ಮತ್ತು ಸೂಕ್ತವಾಗಿರುವೆಡೆಗಳಲ್ಲಿ ನಿಬಂಧನೆಗಳನ್ನು ರೂಪಿಸುವುದಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಆಡಳಿತವು ತೆರಿಗೆ ರಿಟರ್ನ್‌ನಲ್ಲಿ ಇರುವ ಪರಿಸ್ಥಿತಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡುವುದು.

ಚಾಲ್ತಿ ಆದಾಯ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೆರಿಗೆ ವಿಧಿಸುವ ಪ್ರಾಧಿಕಾರಿಗಳಿಗೆ ಪಾವತಿ ಮಾಡಬೇಕಾದ ಅಥವಾ ವಸೂಲಿ ಮಾಡಬಹುದಾದ ನಿರೀಕ್ಷಿತ ಮೊತ್ತದಲ್ಲಿ ಮಾಪನ ಮಾಡಿದೆ. ಅನ್ವಯವಾಗುವ ತೆರಿಗೆ ನಿಬಂಧನೆಗಳನ್ನು ವ್ಯಾಖ್ಯಾನ ಮಾಡುವುದಕ್ಕೆ ಮತ್ತು ಸೂಕ್ತವಾಗಿರುವೆಡೆಗಳಲ್ಲಿ ನಿಬಂಧನೆಗಳನ್ನು ಮಾಡುವುದಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಆಡಳಿತವು ತೆರಿಗೆ ರಿಟರ್ನ್‌ನಲ್ಲಿ ಇರುವ ಪರಿಸ್ಥಿತಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡುವುದು.

ಇತರೆ ಸಮಗ್ರ ಆದಾಯದಲ್ಲಿ ಅಥವಾ ಈಕ್ವಿಟಿಯಲ್ಲಿ ನೇರವಾಗಿ ಮಾನ್ಯ ಮಾಡಿರುವ ಐಟಂಗಳಿಗೆ ಸಂಬಂಧಿಸಿದ ಪ್ರಮಾಣದವರೆಗೆ ಹೊರತುಪಡಿಸಿ ಚಾಲ್ತಿ ತೆರಿಗೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ಸಂದರ್ಭದಲ್ಲಿ, ತೆರಿಗೆಯನ್ನು ಅನುಕ್ರಮವಾಗಿ ಇತರೆ ಸಮಗ್ರ ಆದಾಯದಲ್ಲಿ ಹಾಗೂ ನೇರವಾಗಿ ಈಕ್ವಿಟಿಯಲ್ಲಿಯೂ ಮಾನ್ಯ ಮಾಡಿದೆ.

### ಮುಂದೂಡಿದ ತೆರಿಗೆ:

ವರದಿಯ ದಿನಾಂಕದಲ್ಲಿ ಹಣಕಾಸಿನ ವರದಿಗಾರಿಕೆ ಉದ್ದೇಶಗಳಿಗಾಗಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ತಾತ್ಕಾಲಿಕ ವ್ಯತ್ಯಾಸಗಳ ಹೊಣೆಗಾರಿಕೆ ವಿಧಾನ ಬಳಸಿ ಮುಂದೂಡಿದ ತೆರಿಗೆಯನ್ನು ಒದಗಿಸಿದೆ.

ಈ ಕೆಳಕಂಡವುಗಳನ್ನು ಹೊರತುಪಡಿಸಿ, ಮುಂದೂಡಿದ ತೆರಿಗೆ ಹೊಣೆಗಾರಿಕೆಗಳನ್ನು ಎಲ್ಲಾ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ ಮಾನ್ಯ ಮಾಡಿದೆ:

★ ವ್ಯಾಪಾರದ ಸಂಯೋಜನೆಯಾಗಿರದ ವ್ಯವಹಾರದಲ್ಲಿ ಮತ್ತು, ಲೆಕ್ಕ ನಿರ್ವಹಣೆ ಲಾಭ ಅಥವಾ ತೆರಿಗೆ ವಿಧಿಸಬಹುದಾದ ಲಾಭ ಅಥವಾ ನಷ್ಟಕ್ಕೆ ಪರಿಣಾಮ ಉಂಟು ಮಾಡದ ವ್ಯವಹಾರದ ಸಮಯದಲ್ಲಿ ವ್ಯಾಪಾರದ ಹಕ್ಕು ಅಥವಾ ಆಸ್ತಿಯ ಪ್ರಾರಂಭಿಕ ಮಾನ್ಯತೆಯಿಂದ ಮುಂದೂಡಿದ ತೆರಿಗೆ ಹೊಣೆಗಾರಿಕೆ ಉಂಟಾದಾಗ,

★ ಸಹಾಯಕ ಸಂಸ್ಥೆಗಳಲ್ಲಿನ ಹೂಡಿಕೆಗಳಲ್ಲಿ ಮತ್ತು ಜಂಟಿ ವ್ಯವಸ್ಥೆಗಳಲ್ಲಿನ ಬಡ್ಡಿಗಳಲ್ಲಿ ಸೇರಿರುವ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳ ಸಂಬಂಧದಲ್ಲಿ, ತಾತ್ಕಾಲಿಕ ವ್ಯತ್ಯಾಸಗಳನ್ನು ವ್ಯತಿರಿಕ್ತ ಮಾಡುವುದನ್ನು, ನಿಯಂತ್ರಿಸಬಹುದಾದ ಸಮಯವನ್ನು ನಿಯಂತ್ರಿಸಬಹುದಾಗಿರುವಾಗ ಮತ್ತು ತಾತ್ಕಾಲಿಕ ವ್ಯತ್ಯಾಸಗಳನ್ನು ಮುಂದಿನ ದಿನಗಳಲ್ಲಿ ವ್ಯತಿರಿಕ್ತಗೊಳಿಸುವ ಸಾಧ್ಯತೆ ಇಲ್ಲದಿರುವಾಗ.

ಮುಂದೂಡಿದ ತೆರಿಗೆ ಆಸ್ತಿಗಳನ್ನು ಎಲ್ಲಾ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ, ಮುಂದಕ್ಕೆ ತೆಗೆದುಕೊಂಡಿರುವ ಬಳಸದಿರುವ ತೆರಿಗೆ ಕ್ರೆಡಿಟ್‌ಗಳಿಗೆ ಮತ್ತು ಯಾವುದೇ ಬಳಸದಿರುವ ತೆರಿಗೆ ನಷ್ಟಗಳಿಗೆ ಮಾನ್ಯ ಮಾಡಿದೆ. ಕೆಳಕಂಡವುಗಳ ಹೊರತಾಗಿ, ಮುರಿದುಕೊಳ್ಳಬಹುದಾಗಿರುವ ತಾತ್ಕಾಲಿಕ ವ್ಯತ್ಯಾಸಗಳು, ಮತ್ತು ಬಳಸದಿರುವ ತೆರಿಗೆ ಕ್ರೆಡಿಟ್‌ಗಳನ್ನು ಮುಂದಕ್ಕೆ ತೆಗೆದುಕೊಳ್ಳುವ ಮತ್ತು ಬಳಸದಿರುವ ತೆರಿಗೆ ನಷ್ಟಗಳನ್ನು ಬಳಸಬಹುದಾಗಿರುವ ತೆರಿಗೆ ಲಾಭ ಲಭ್ಯವಿರುವ ಸಾಧ್ಯತೆಯ ಪ್ರಮಾಣದವರೆಗೆ ಮುಂದೂಡಿದ ತೆರಿಗೆ ಆಸ್ತಿಗಳನ್ನು ಮಾನ್ಯ ಮಾಡಿದೆ.

★ ವ್ಯವಹಾರ ಸಂಯೋಜನೆಯಾಗಿರದ ವ್ಯವಹಾರದಲ್ಲಿ ಆಸ್ತಿ ಅಥವಾ ಹೊಣೆಗಾರಿಕೆಯ ಪ್ರಾರಂಭಿಕ ಮಾನ್ಯತೆಯಿಂದ ಉದ್ಭವಿಸಿದ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಕ್ಕೆ ಮುಂದೂಡಿದ ತೆರಿಗೆ ಆಸ್ತಿ ಸಂಬಂಧಿಸಿರುವಾಗ, ಮತ್ತು ವ್ಯವಹಾರವು ಲೆಕ್ಕ ನಿರ್ವಹಣೆ ಲಾಭಕ್ಕಾಗಲಿ ಅಥವಾ ತೆರಿಗೆ ವಿಧಿಸಬಹುದಾದ ಲಾಭ ಅಥವಾ ನಷ್ಟಕ್ಕೆ

ತೊಂದರೆ ಉಂಟು ಮಾಡದಿರುವ ಸಮಯದಲ್ಲಿ.

★ ಸಹಾಯಕ ಸಂಸ್ಥೆಗಳು, ಸಹವರ್ತಿ ಸಂಸ್ಥೆಗಳಲ್ಲಿನ ಹೂಡಿಕೆಗಳ ಜೊತೆ ಸೇರಿರುವ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಗಳ ಮತ್ತು ಜಂಟಿ ವ್ಯವಸ್ಥೆಗಳಲ್ಲಿನ ಬಡ್ಡಿಗಳ ಸಂಬಂಧದಲ್ಲಿ, ಮುಂದೂಡಿದ ತೆರಿಗೆ ಆಸ್ತಿಗಳನ್ನು ಮುಂಗಾಣ್ಕೆಯ ದಿನಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳ ಸಾಧ್ಯತೆಯ ಪ್ರಮಾಣದವರೆಗೆ ಮತ್ತು ತೆರಿಗೆ ವಿಧಿಸಬಹುದಾದ ಲಾಭ ಲಭ್ಯವಿರುವ ಮತ್ತು ಇದರ ಎದುರಾಗಿ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಬಹುದಾಗಿರುವ ಪ್ರಮಾಣದವರೆಗೆ ಮಾತ್ರ ಮುಂದೂಡಿದ ತೆರಿಗೆ ಆಸ್ತಿಗಳನ್ನು ಮಾನ್ಯ ಮಾಡಿದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ಪ್ರತಿ ವರದಿ ದಿನಾಂಕದಲ್ಲಿ ಪರಿಶೀಲಿಸಲಾಗಿದೆ ಮತ್ತು ಮುಂದೂಡಿದ ತೆರಿಗೆ ಆಸ್ತಿಯ ಎಲ್ಲಾ ಅಥವಾ ಒಂದು ಭಾಗವನ್ನು ಉಪಯೋಗಿಸಲು ಅವಕಾಶ ನೀಡಲು ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭ ಎಲ್ಲಿಯವರೆಗೆ ಸಾಧ್ಯವಿರುವುದಿಲ್ಲವೋ ಆ ಪ್ರಮಾಣದ ವರೆಗೆ ಕಡಿಮೆ ಮಾಡಿದೆ. ಮಾನ್ಯ ಮಾಡಿರದ ಮುಂದೂಡಿದ ತೆರಿಗೆ ಆಸ್ತಿಗಳನ್ನು ಪ್ರತಿ ವರದಿ ದಿನಾಂಕದಲ್ಲಿ ಮರು ನಿರ್ಧರಣೆ ಮಾಡಿದೆ ಮತ್ತು ಮುಂದೂಡಿದ ತೆರಿಗೆ ಆಸ್ತಿ ವಸೂಲಿ ಮಾಡಲು ಅವಕಾಶ ನೀಡುವ ಮುಂದಿನ ತೆರಿಗೆ ವಿಧಿಸಬಹುದಾದ ಲಾಭಗಳು ದೊರೆಯುವ ಸಾಧ್ಯತೆ ಇರುವ ಪ್ರಮಾಣದಲ್ಲಿ ಅವುಗಳನ್ನು ಮಾನ್ಯ ಮಾಡಿದೆ.

ವರದಿ ದಿನಾಂಕದಲ್ಲಿ ಜಾರಿಗೊಳಿಸಿರುವ ಅಥವಾ ಗಣನೀಯವಾಗಿ ಜಾರಿಗೊಳಿಸಿರುವ ತೆರಿಗೆ ದರಗಳ (ಮತ್ತು ತೆರಿಗೆ ಕಾನೂನುಗಳ) ಆಧಾರದ ಮೇಲೆ ಆಧಾರಿತವಾಗಿ ಆಸ್ತಿಯು ನಗದಾದಾಗ ಅಥವಾ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಿದಾಗ ಆ ವರ್ಷದಲ್ಲಿ ಅನ್ವಯಿಸಲು ನಿರೀಕ್ಷಿಸಿರುವ ತೆರಿಗೆ ದರಗಳಲ್ಲಿ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮಾಪನ ಮಾಡಿದೆ.

ಮುಂದೂಡಿದ ತೆರಿಗೆಯನ್ನು, ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವ ಐಟಂಗಳಿಗೆ ಅಥವಾ ನೇರವಾಗಿ ಈಕ್ವಿಟಿಗೆ ಸಂಬಂಧಿಸಿದ ಪ್ರಮಾಣದವರೆಗೆ ಹೊರತುಪಡಿಸಿ, ಲಾಭ ಮತ್ತು ನಷ್ಟಗಳ ವಿವರದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ವಿಚಾರದಲ್ಲಿ, ತೆರಿಗೆಯನ್ನು ಅನುಕ್ರಮವಾಗಿ ಇತರೆ ಸಮಗ್ರ ಆದಾಯದಲ್ಲಿ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಸಹ ಮಾನ್ಯ ಮಾಡಿದೆ.

ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆಗೆ ಮತ್ತು ಅದೇ ತೆರಿಗೆಯ ಪ್ರಾಧಿಕಾರಿಗೆ ಸಂಬಂಧಿಸಿದ ಚಾಲ್ತಿ ತೆರಿಗೆ ಹೊಣೆಗಾರಿಕೆಗಳು ಮತ್ತು ಮುಂದೂಡಿದ ತೆರಿಗೆಗಳ ಎದುರಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ಸರಿದೂಗಿಸಲು ಕಾನೂನಾತ್ಮಕವಾಗಿ ಜಾರಿ ಮಾಡಬಹುದಾದ ಹಕ್ಕು ಇರುವುದಾದಲ್ಲಿ ಆಗ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸಲಾಗಿದೆ.

ಕಂಪನಿಯು ನಿಗದಿಪಡಿಸಿರುವ ಅವಧಿಯಲ್ಲಿ ಅಂದರೆ ತೆರಿಗೆ ಕ್ರೆಡಿಟ್ ಅನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಅವಕಾಶ ನೀಡಿರುವ ಅವಧಿಯಲ್ಲಿ ಸಾಧಾರಣವಾದ ಆದಾಯ ತೆರಿಗೆಯನ್ನು ಕಂಪನಿ ಪಾವತಿ ಮಾಡುವುದೆಂಬ ಮನವರಿಕೆ ಮಾಡುವ ಪುರಾವೆ ಇದ್ದಲ್ಲಿ ಆ ಪ್ರಮಾಣದವರೆಗೆ ಆಸ್ತಿ ಮಾತ್ರ ಎಂಬುದಾಗಿ ಮ್ಯಾಟ್ ಕ್ರೆಡಿಟ್‌ನ ರೂಪದಲ್ಲಿ ಕಂಪನಿಯು ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದೆ. ಕಂಪನಿಯು ಆಸ್ತಿ ಎಂಬುದಾಗಿ ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದ ವರ್ಷದಲ್ಲಿ, ಸದರಿ ಆಸ್ತಿಯನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದ ವರ್ಷದಲ್ಲಿ, ಸದರಿ ಆಸ್ತಿಯನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ತೆರಿಗೆ ಕ್ರೆಡಿಟ್‌ನ ರೀತಿಯಲ್ಲಿ ಸೃಜಿಸಿದೆ. ಇಂತಹ ತೆರಿಗೆ ಕ್ರೆಡಿಟ್ ಆಸ್ತಿಗಳನ್ನು ಪ್ರತಿ ವರದಿಯ ದಿನಾಂಕದಂದು ಕಂಪನಿ ಪರಿಶೀಲಿಸುವುದು ಮತ್ತು ನಿಗದಿತ ಅವಧಿಯಲ್ಲಿ ಸಾಧಾರಣ ತೆರಿಗೆಯನ್ನು ಪಾವತಿ ಮಾಡುವ ಬಗ್ಗೆ ಕಂಪನಿ ಮನವರಿಕೆ ಮಾಡುವ ಪುರಾವೆ ಇಲ್ಲದಿದ್ದರೆ ಆ ಪ್ರಮಾಣದವರೆಗೆ ಆಸ್ತಿಯನ್ನು ನಮೂದಿಸುವುದು ಮುಂದೂಡಿದ ತೆರಿಗೆ ಕ್ರೆಡಿಟ್‌ನಲ್ಲಿ ಸೇರಿರುವುದು.

### ಒಂದು ಅವಧಿಯ ಚಾಲ್ತಿ ಮತ್ತು ಮುಂದೂಡಿದ ತೆರಿಗೆ:

ಚಾಲ್ತಿ ಮತ್ತು ಮುಂದೂಡಿದ ತೆರಿಗೆಯನ್ನು ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಬರುವ ಬಾಬ್ತುಗಳಿಗೆ ಸಂಬಂಧಿಸಿದಂತಹ ಪ್ರಕರಣದಲ್ಲಿ ಚಾಲ್ತಿ ಮತ್ತು ಮುಂದೂಡಿದ ತೆರಿಗೆಗಳನ್ನು ಸಹ ಕ್ರಮವಾಗಿ ಇತರ ಸಮಗ್ರ ಆದಾಯ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಮಾನ್ಯ ಮಾಡಿರುವುದನ್ನು ಹೊರತುಪಡಿಸಿ ಕಂಪನಿಯ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗುತ್ತದೆ.

### ಎನ್) ಷೇರು ಒಂದರ ಗಳಿಕೆಗಳು:

ವರ್ಷದ ಅವಧಿಯಲ್ಲಿ ಬಾಕಿ ಉಳಿದಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಕಂಪನಿಯ ಸಾಮಾನ್ಯ ಈಕ್ವಿಟಿದಾರರುಗಳಿಗೆ ಅನ್ವಯಿಸಬಹುದಾದ ವರ್ಷದ ನಿವ್ವಳ ಲಾಭ/ನಷ್ಟವನ್ನು ವಿಭಾಗಿಸುವ ಮೂಲಕ ಮೂಲ ಇಪಿಎಸ್ ಅನ್ನು ಲೆಕ್ಕಾಚಾರ ಮಾಡಿದೆ.

ಎಲ್ಲಾ ದುರ್ಬಲಗೊಳ್ಳುವ ಸಾಧ್ಯತೆಯಿರುವ ಸಾಮಾನ್ಯ ಷೇರುಗಳನ್ನು ಸಾಮಾನ್ಯ ಷೇರುಗಳಾಗಿ ಪರಿವರ್ತನೆ ಮಾಡಿದಾಗ ನೀಡಬಹುದಾಗಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಗೆ ಹೊಂದಾಣಿಕೆ ಮಾಡಿದ, ವರ್ಷದ ಅವಧಿಯಲ್ಲಿ ಬಾಕಿಯಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಕಂಪನಿಯ ಸಾಮಾನ್ಯ ಈಕ್ವಿಟಿ ಷೇರುದಾರರಿಗೆ ಅನ್ವಯಿಸಬಹುದಾದ ನಿವ್ವಳ ಲಾಭ/ನಷ್ಟದಿಂದ ವಿಭಾಗಿಸುವ ಮೂಲಕ ದುರ್ಬಲವಾದ ಇಪಿಎಸ್ ಅನ್ನು ಲೆಕ್ಕಾಚಾರ ಮಾಡಿದೆ.

ಈಕ್ವಿಟಿ ಷೇರುಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ನೀಡಿದ್ದರೆ

(ಅಂದರೆ ಬಾಕಿಯಿರುವ ಈಕ್ವಿಟಿ ಷೇರುಗಳ ಸರಾಸರಿ ಮಾರುಕಟ್ಟೆ ಮೌಲ್ಯ) ಪಡೆಯಬಹುದಾಗಿರುವ ಹಣಕ್ಕೆ ದುರ್ಬಲಗೊಳ್ಳುವ ಸಾಧ್ಯತೆಯುಳ್ಳ ಈಕ್ವಿಟಿ ಷೇರುಗಳನ್ನು ಹೊಂದಾಣಿಕೆ ಮಾಡಿದೆ. ದುರ್ಬಲಗೊಳ್ಳುವ ಸಾಧ್ಯತೆಯಲ್ಲಿ ಈಕ್ವಿಟಿ ಷೇರುಗಳನ್ನು ಮುಂದಿನ ದಿನಾಂಕದಲ್ಲಿ ನೀಡದಿದ್ದಲ್ಲಿ, ಅವಧಿಯ ಪ್ರಾರಂಭದಲ್ಲಿದ್ದಂತೆ ಪರಿವರ್ತನೆಯಾಗಿರುವುದು ಎಂಬುದಾಗಿ ಪರಿಭಾವಿಸಲಾಗಿದೆ. ದುರ್ಬಲಗೊಳ್ಳುವ ಸಾಧ್ಯತೆಯ ಈಕ್ವಿಟಿ ಷೇರುಗಳನ್ನು ಅವುಗಳನ್ನು ನಿರೂಪಿಸಿದ ಪ್ರತಿ ಅವಧಿಯಲ್ಲಿ ಸ್ವತಂತ್ರವಾಗಿ ನಿರ್ಧರಣೆ ಮಾಡಿದೆ. ನಿರ್ದೇಶಕರ ಮಂಡಳಿಯಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಅನುಮೋದಿಸುವ ಮುನ್ನ ಬದಲಾವಣೆ ಉಂಟು ಮಾಡಿರುವುದು ಸೇರಿದಂತೆ ಯಾವುದೇ ಷೇರಿನ ವಿಭಜನೆಗೆ ಮತ್ತು ಬೋನಸ್ ಷೇರುಗಳ ನೀಡಿಕೆಗಳಿಗೆ ನಿರೂಪಕ ಎಲ್ಲಾ ಅವಧಿಗಳಿಗೆ ಹಿಂದಿನಿಂದ ಅನ್ವಯವಾಗುವಂತೆ ಈಕ್ವಿಟಿ ಷೇರುಗಳು ಮತ್ತು ಸಾಧ್ಯವಿರುವ ದುರ್ಬಲತೆಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಿದೆ.

**ಓ) ವ್ಯವಸ್ಥೆಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:**

ಕಂಪನಿಯು ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪ್ರಸಕ್ತದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯ ವಾಗಿ ಅಂದಾಜು ಮಾಡಬಹುದಾಗಿದೆ.

ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆ ಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಾಸ್ತವವಾಗಿರುತ್ತದೆಯೊ).

ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಾಸ್ತವವಾಗಿದ್ದಲ್ಲಿ, ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳ ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರು ವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು ಎಂದು ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ ಮತ್ತು ಆ ಪಡೆಯಬಹುದಾದ ಮೊತ್ತವನ್ನು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಸನ್ನಿವೇಶಗಳಿದ್ದಲ್ಲಿ ಬಹಿರಂಗಪಡಿಸಲಾಗಿದೆ:

- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿದ್ದಲ್ಲಿ, ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ
- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಾಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು
- ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ ಸಾಧ್ಯತೆಗಳು ಕ್ಷೀಣವಾಗಿಲ್ಲ ದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

## ಪಿ) ಹಣಕಾಸು ಸಾಧನಗಳು-ಪ್ರಾರಂಭಿಕ ಮಾನ್ಯತೆ ಮತ್ತು ನಂತರದ ಮಾಪನ:

ಕಂಪನಿಯು ಸಾಧನಗಳ ಒಪ್ಪಂದವಾದ ವ್ಯವಸ್ಥೆಗಳಿಗೆ ಪಾರ್ಟಿಯಾದಾಗ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ಮಾನ್ಯ ಮಾಡಿದೆ. ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಮಾನ್ಯತೆ ಮತ್ತು ಮಾಪನಕ್ಕೆ ಕೆಳಗೆ ತಿಳಿಸಿರುವಂತೆ ನೀತಿಯನ್ನು ನೋಡಿ:

### ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಪ್ರಾರಂಭಿಕ ಮಾನ್ಯತೆ:

ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ಪ್ರಾರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗುವುದು. ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ (ಲಾಭ ಅಥವಾ ನಷ್ಟ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳು ಹೊರತಾಗಿ) ಸ್ವಾಧೀನ ಅಥವಾ ನೀಡಿಕೆಗೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ವೆಚ್ಚಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ಸೂಕ್ತವಾದಂತೆ ಹಣಕಾಸಿನ ಆಸ್ತಿಗಳು ಅಥವಾ ಹಣಕಾಸಿನ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯಕ್ಕೆ ಸೇರ್ಪಡೆ ಮಾಡಲಾಗಿದೆ ಅಥವಾ ಅದರಿಂದ ಕಳೆಯಲಾಗಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳ ಸ್ವಾಧೀನಕ್ಕೆ ಅಥವಾ ಹಣಕಾಸಿನ ಹೊಣೆಗಾರಿಕೆಗಳಿಗೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ವೆಚ್ಚಗಳನ್ನು ಲಾಭ ಅಥವಾ ನಷ್ಟದಲ್ಲಿ ತಕ್ಷಣ ಮಾನ್ಯ ಮಾಡಿದೆ.

### ಹಣಕಾಸಿನ ಆಸ್ತಿಗಳ ತದನಂತರದ ಮಾಪನ:

ತದನಂತರದ ಮಾಪನದ ಉದ್ದೇಶಗಳಿಗಾಗಿ ಹಣಕಾಸಿನ ಆಸ್ತಿಗಳನ್ನು ನಾಲ್ಕು ಪ್ರವರ್ಗಗಳಾಗಿ ವರ್ಗೀಕರಿಸಿದೆ:

(ಎ) ಆರ್ಮಾಟ್ರೈಸ್ಡ್ ಬೆಲೆಯಲ್ಲಿನ ಹಣಕಾಸಿನ ಆಸ್ತಿಗಳು

(ಬಿ) ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು (ಎಫ್‌ವಿಟಿಒಸಿಐ)

(ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು (ಎಫ್‌ವಿಟಿಪಿಎಲ್)

(ಡಿ) ಇತರೆ ಸಮಗ್ರ ಆದಾಯ (ಎಫ್‌ವಿಟಿಒಸಿಐ) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಈಕ್ವಿಟಿ ಸಾಧನಗಳು.

### ಎ) ಆಮಾಟ್ರೈಸ್ಡ್ ಬೆಲೆಯಲ್ಲಿನ ಹಣಕಾಸಿನ ಆಸ್ತಿಗಳು:

ಹಣಕಾಸಿನ ಆಸ್ತಿಯನ್ನು ವ್ಯವಹಾರದ ಮಾದರಿ ಒಳಗೆ ಹೊಂದಿದ್ದರೆ, ಇವುಗಳ ಧ್ಯೇಯವು ಒಪ್ಪಂದವಾದ ನಗದು ಹರಿವುಗಳ ಸಂಗ್ರಹಣೆಗಾಗಿ ಹಣಕಾಸಿನ ಆಸ್ತಿಗಳನ್ನು ಹೊಂದುವುದು, ಮತ್ತು ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯ ಏಕ ಮಾತ್ರ ಪಾವತಿಗಳಿಗಾಗಿ (ಎಸ್‌ಪಿಪಿಐ) ನಗದು ಹರಿವುಗಳಿಗೆ ನಿಗದಿಪಡಿಸಿರುವ ದಿನಾಂಕಗಳಂದು ಉಂಟಾಗುವ ಹಣಕಾಸಿನ ಆಸ್ತಿಯ ಒಪ್ಪಂದವಾದ ಅವಧಿಯಲ್ಲಿ ಹೊಂದಿರುವುದಾಗಿರುವುದಾದಲ್ಲಿ ಅಮಾರ್ಟೈಸ್ಡ್ ಬೆಲೆಯಲ್ಲಿ ಹಣಕಾಸಿನ ಆಸ್ತಿಯನ್ನು ಮಾಪನ ಮಾಡಿದೆ. ಈ ಪ್ರವರ್ಗವು ಕಂಪನಿಗೆ ಅತ್ಯಂತ ಪೂರಕವಾಗಿದೆ. ಪ್ರಾರಂಭಿಕ ಮಾಪನದ ನಂತರ ಅಂತಹ ಹಣಕಾಸಿನ ಆಸ್ತಿಗಳನ್ನು ತದನಂತರ ಅನ್ವಯವಾಗುವ ಬಡ್ಡಿದರದ (ಇಪಿಆರ್) ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿದೆ. ಸ್ವಾಧೀನದ ಮೇಲಿನ ಯಾವುದೇ ರಿಯಾಯಿತಿ ಅಥವಾ ಪ್ರೀಮಿಯಂ ಮತ್ತು ಇಐಆರ್‌ನ ಅವಿಭಾಜ್ಯ ಭಾಗವಾಗಿರುವ ಶುಲ್ಕಗಳು ಅಥವಾ ವೆಚ್ಚಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಅಮಾರ್ಟೈಸ್ಡ್ ಬೆಲೆಯನ್ನು ಲೆಕ್ಕಾಚಾರ ಮಾಡಿದೆ. ಇಐಆರ್ ಅಮಾರ್ಟೈಜೇಷನ್ ಅನ್ನು ಲಾಭ ಅಥವಾ ನಷ್ಟದಲ್ಲಿ ಹಣಕಾಸಿನ ಆದಾಯದಲ್ಲಿ ಸೇರಿಸಲಾಗಿದೆ.

### (ಬಿ) ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು:

ಒಪ್ಪಂದವಾದ ನಗದು ಹರಿವು ಮತ್ತು ಹಣಕಾಸಿನ ಆಸ್ತಿಗಳ ಮಾರಾಟ ಈ ಎರಡರಿಂದ ಸಂಗ್ರಹಿಸುವ ಮೂಲಕ ಸಾಧಿಸುವ ಧ್ಯೇಯವಾಗಿರುವ ವ್ಯವಹಾರದ ಮಾದರಿ ಒಳಗೆ ಹಣಕಾಸಿನ ಆಸ್ತಿ ಹೊಂದಿದ್ದಲ್ಲಿ ಮತ್ತು ಹಣಕಾಸಿನ ಆಸ್ತಿಯ ಒಪ್ಪಂದವಾದ ನಿಯಮಗಳು ನಿಗದಿತ ದಿನಾಂಕಗಳಲ್ಲಿ ಬಾಕಿಯಿರುವ ಅಸಲು ಮೊತ್ತದ ಮೇಲಿನ ಬಡ್ಡಿ ಮತ್ತು ಅಸಲಿನ (ಎಸ್‌ಪಿಪಿಐ) ಏಕೈಕ ಪಾವತಿಗಳಾಗಿರುವ ನಗದು ಹರಿವುಗಳಿಗೆ ಹೆಚ್ಚಳದ ಅವಕಾಶ ನೀಡುವ ಹಣಕಾಸಿನ ಆಸ್ತಿಗಳಾಗಿದ್ದರೆ ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಯನ್ನು ಮಾಪನ ಮಾಡಿದೆ.

ಎಫ್‌ವಿಟಿಒಸಿಐ ಪ್ರವರ್ಗದ ಒಳಗೆ ಸೇರಿರುವ ಹಣಕಾಸಿನ ಆಸ್ತಿಗಳನ್ನು ಪ್ರತಿ ವರದಿ ದಿನಾಂಕದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ. ನ್ಯಾಯೋಚಿತ ಚಲನೆಯನ್ನು ಇತರೆ ಸಮಗ್ರ ಆದಾಯದಲ್ಲಿ (ಒಸಿಐ) ಮಾನ್ಯ ಮಾಡಿದೆ. ಆದರೂ, ಬಡ್ಡಿ ಆದಾಯ, ದುರ್ಬಲತೆ ನಷ್ಟಗಳು ಮತ್ತು ವ್ಯತಿರಿಕ್ತತೆಗಳು ಮತ್ತು ವಿದೇಶಿ ವಿನಿಮಯ ಲಾಭ ಅಥವಾ ನಷ್ಟವನ್ನು ಕಂಪನಿಯು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ಮೊದಲು ಒಸಿಐನಲ್ಲಿ ಮಾನ್ಯ ಮಾಡಿದ್ದ ಆಸ್ತಿ, ಸಂಚಿತ ಲಾಭ ಅಥವಾ ನಷ್ಟದ ಅಮಾನ್ಯತೆಯನ್ನು ಪಿ ಮತ್ತು ಎಲ್‌ಗೆ ಈಕ್ವಿಟಿಯಿಂದ ಮರು ವರ್ಗೀಕರಣ ಮಾಡಿದೆ. ಎಫ್‌ವಿಟಿಒಸಿಐ ಹಣಕಾಸಿನ ಆಸ್ತಿ ಹೊಂದಿದ್ದಾಗ ಗಳಿಸಿದ ಬಡ್ಡಿಯನ್ನು ಇಐಆರ್ ವಿಧಾನ ಬಳಸಿ ಬಡ್ಡಿ ಆದಾಯ ಎಂಬುದಾಗಿ ವರದಿ ಮಾಡಿದೆ.

### (ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು:

ಹಣಕಾಸಿನ ಆಸ್ತಿಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ಇತರೆ ಸಮಗ್ರ

ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಅಥವಾ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿರದ ಹೊರತು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳನ್ನು ಮಾಪನ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳನ್ನು ಮಾಪನ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ಬೆಲೆಗಳನ್ನು ತಕ್ಷಣ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ.

ಕಂಪನಿಯು ಹಣಕಾಸಿನ ಆಸ್ತಿಯನ್ನು ನಿಯುಕ್ತಿಗೆ ಆಯ್ಕೆ ಮಾಡಬಹುದು. ಇಲ್ಲದಿದ್ದರೆ ಅದು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ, ಇತರೆ ಸಮಗ್ರ ಆದಾಯದ ಮಾನದಂಡದ ಮೂಲಕ ಅಮಾರ್ಟೈಸ್ಡ್ ಬೆಲೆ ಅಥವಾ ನ್ಯಾಯೋಚಿತ ಮೌಲ್ಯವನ್ನು ಹೊಂದಬೇಕಾಗುತ್ತದೆ. ಆದರೂ, ಹಾಗೆ ಮಾಡುವಾಗ ಮಾಪನ ಅಥವಾ ಸುಸ್ಥಿರವಾಗಿರದ ಮಾನ್ಯತೆ ಕಡಿಮೆಯಾದರೆ ಅಥವಾ ತೊಡೆದು ಹಾಕಿದರೆ ಮಾತ್ರ (‘ಲೆಕ್ಕ ನಿರ್ವಹಣೆ ಅಸಂಗತತೆ’ ಸಂಬಂಧಪಟ್ಟ) ಅಂತಹ ಆಯ್ಕೆಗೆ ಅವಕಾಶ ನೀಡಲಾಗಿದೆ. ಕಂಪನಿಯು ಎಫ್‌ವಿಟಿಪಿಎಲ್‌ನಲ್ಲಿ ಇದ್ದಂತೆ ಯಾವುದೇ ಋಣ ಸಾಧನಗಳನ್ನು ನಿಯುಕ್ತಿ ಮಾಡಿರುವುದಿಲ್ಲ.

### (ಡಿ) ಈಕ್ವಿಟಿ ಸಾಧನಗಳು:

ಸಹಾಯಕ ಕಂಪನಿಗಳು, ಜಂಟಿ ಉದ್ಯಮಗಳು ಮತ್ತು ಸಹವರ್ತಿ ಕಂಪನಿಗಳಲ್ಲಿನ ಹೂಡಿಕೆ ಹೊರತಾಗಿ, ಐಎನ್‌ಡಿ-ಎಎಸ್ 109ರ ವ್ಯಾಪ್ತಿಯಲ್ಲಿನ ಎಲ್ಲಾ ಈಕ್ವಿಟಿ ಹೂಡಿಕೆಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ. ವ್ಯಾಪಾರಕ್ಕಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ಎಫ್‌ವಿಟಿಪಿಎಲ್ ನಲ್ಲಿ ಇದ್ದಂತೆ ವರ್ಗೀಕರಿಸಲಾಗಿದೆ. ಇತರೆ ಎಲ್ಲಾ ಈಕ್ವಿಟಿ ಸಾಧನಗಳಿಗೆ, ನ್ಯಾಯೋಚಿತ ಮೌಲ್ಯದಲ್ಲಿನ ತದನಂತರದ ಬದಲಾವಣೆಗಳ ಇತರೆ ಸಮಗ್ರ ಆದಾಯದಲ್ಲಿ ನಿರೂಪಿಸಲು ಕಂಪನಿ ಹಿಂಪಡೆಯಲಾಗದ ಆಯ್ಕೆಯನ್ನು ಕಂಪನಿ ಮಾಡಬಹುದು. ಕಂಪನಿಯು ಅಂತಹ ಆಯ್ಕೆಯನ್ನು ಸಾಧನದಿಂದ ಸಾಧನದ ಆಧಾರದ ಮೇಲೆ ಮಾಡುವುದು. ಪ್ರಾರಂಭಿಕ ಮಾನ್ಯತೆಯಲ್ಲಿ ವರ್ಗೀಕರಣ ಮಾಡಿದೆ ಮತ್ತು ಇದು ಹಿಂಪಡೆಯುವುದಾಗಿರುವುದಿಲ್ಲ.

ಸಹಾಯಕ ಕಂಪನಿಗಳು, ಜಂಟಿ ಉದ್ಯಮಗಳು ಮತ್ತು ಸಹವರ್ತಿ ಕಂಪನಿಗಳಲ್ಲಿನ ಈಕ್ವಿಟಿ ಹೂಡಿಕೆಯನ್ನು ಐಎನ್‌ಡಿ-ಎಎಸ್ 27- ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಅನ್ವಯ ಬೆಲೆಯಲ್ಲಿ ಮಾಪನ ಮಾಡಿದೆ. ಕಂಪನಿಯು ಈಕ್ವಿಟಿ ಸಾಧನವನ್ನು ಎಫ್ ವಿಟಿಒಸಿಐನಲ್ಲಿರುವಂತೆ ವರ್ಗೀಕರಿಸಲು ತೀರ್ಮಾನಿಸಿದ್ದೇ ಆದರೆ, ಆಗ ಲಾಭಾಂಶಗಳನ್ನು ಬಿಟ್ಟು, ಸಾಧನಗಳಲ್ಲಿನ ಎಲ್ಲಾ ನ್ಯಾಯೋಚಿತ ಮೌಲ್ಯ ಬದಲಾವಣೆಗಳನ್ನು ಒಸಿಐನಲ್ಲಿ ಮಾನ್ಯ ಮಾಡಿದೆ. ಹೂಡಿಕೆಯ ಮಾರಾಟ ಮಾಡಿದಾಗಲೂ ಸಹ, ಮೊತ್ತಗಳನ್ನು ಒಸಿಐನಿಂದ ಲಾಭ ಮತ್ತು ನಷ್ಟದ ಹೇಳಿಕೆಗೆ ಪುನರಾವರ್ತನೆ ಮಾಡಿರುವುದಿಲ್ಲ. ಆದರೂ, ಕಂಪನಿಯು ಸಂಚಿತ ಲಾಭ ಅಥವಾ ನಷ್ಟವನ್ನು ಈಕ್ವಿಟಿ ಒಳಗೆ ವರ್ಗಾಯಿಸಬಹುದಾಗಿರುವುದು.

### ಹಣಕಾಸಿನ ಆಸ್ತಿಗಳ ದುರ್ಬಲತೆ:

ಹಣಕಾಸಿನ ಆಸ್ತಿಯನ್ನು (ಅಥವಾ ಹಣಕಾಸಿನ ಆಸ್ತಿಗಳ ಒಂದು ಗುಂಪು) ಅಂದರೆ ಹೂಡಿಕೆಗಳು, ವ್ಯಾಪಾರದಿಂದ ಬರಬೇಕಾದವುಗಳು, ಮುಂಗಡಗಳು ಮತ್ತು ಭದ್ರತಾ ಠೇವಣಿಗಳನ್ನು ಅಮಾರ್ಟೈಸ್ಡ್ ಬೆಲೆಯಲ್ಲಿ ಹೊಂದಿರುವುದೇ ಎಂಬುದನ್ನು ಕಂಪನಿಯು ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಣೆ ಮಾಡುವುದು ಮತ್ತು ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ, ಮೌಲ್ಯದಲ್ಲಿ ಯಾವುದೇ ಅನಗತ್ಯ ವೆಚ್ಚ ಅಥವಾ ಕ್ರಯವಿಟ್ಟರೆ ಲಭ್ಯವಿರುವ ಮಾಹಿತಿ ಅಥವಾ ಪುರಾವೆಯ ಆಧಾರದ ಮೇಲೆ ಆಧಾರಿತವಾದ ದುರ್ಬಲತೆಗಾಗಿ ಪರೀಕ್ಷಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವನ್ನು (ಇಸಿಎಲ್) ನಿರ್ಧರಣೆ ಮಾಡಿದೆ ಮತ್ತು ಹಣಕಾಸಿನ ಆಸ್ತಿಯ ಕ್ರೆಡಿಟ್ ಗುಣಮಟ್ಟ ಪ್ರಾರಂಭಿಕ ಮಾನ್ಯತೆ ಸಮಯದಿಂದ ಗಣನೀಯವಾಗಿ ಕ್ಷೀಣಿಸಿದ್ದೇ ಆದರೆ ನಷ್ಟದ ಅವಕಾಶಗಳನ್ನು ಮಾನ್ಯ ಮಾಡಿದೆ.

ಮಹತ್ತರವಾದ ಹಣಕಾಸಿನ ಘಟಕವಿಲ್ಲದೆ ವ್ಯಾಪಾರದ ಸಂಬಂಧ ಬರಬೇಕಾಗಿರುವಿಕೆಗಳಿಗೆ ನಷ್ಟದ ಅವಕಾಶವನ್ನು ಜೀವಿತಾವಧಿ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ಇತರೆ ಎಲ್ಲಾ ಹಣಕಾಸಿನ ಆಸ್ತಿಗಳಿಗೆ, ಜೀವಿತಾವಧಿ ಇಸಿಎಲ್‌ನಲ್ಲಿ ಮಾಪನ ಮಾಡಿರುವ ಪ್ರಾರಂಭಿಕ ಮಾನ್ಯತೆಯಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಾಗಿರದಿದ್ದರೆ ಇಸಿಎಲ್ ಅನ್ನು 12 ತಿಂಗಳ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟಗಳ (ಅಥವಾ ಹಿಮ್ಮುಖಗೊಳಿಸುವುದು) ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ದುರ್ಬಲತೆಯ ಲಾಭ ಅಥವಾ ನಷ್ಟ ಎಂಬುದಾಗಿ ಮಾನ್ಯ ಮಾಡಬೇಕಾಗಿರುವ ಮೊತ್ತಕ್ಕೆ ವರದಿಯ ದಿನಾಂಕದಲ್ಲಿ ನಷ್ಟದ ಅವಕಾಶಕ್ಕೆ ಹೊಂದಾಣಿಕೆ ಮಾಡಬೇಕಾಗುವುದು.

### ಹಣಕಾಸಿನ ಆಸ್ತಿಗಳ ಅಮಾನ್ಯತೆ:

ಆಸ್ತಿಗಳಿಂದ ನಗದು ಹರಿವುಗಳನ್ನು ಸ್ವೀಕರಿಸುವ ಹಕ್ಕು ಮುಕ್ತಾಯವಾದಾಗ, ಅಥವಾ ವರ್ಗಾವಣೆಯಾದಾಗ, ಮತ್ತು ಕಂಪನಿಯು ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಪ್ರತಿಫಲಗಳನ್ನು ಗಣನೀಯವಾಗಿ ವರ್ಗಾವಣೆ ಮಾಡಿರುವಾಗ ಹಣಕಾಸಿನ ಆಸ್ತಿಗಳನ್ನು ಅಮಾನ್ಯಗೊಳಿಸಿದೆ.

ಒಟ್ಟಾರೆಯಾಗಿ, ಈ ಕೆಳಕಂಡಂತೆ ಒಂದು ಆಸ್ತಿಯನ್ನು ಮಾಪನ ಮಾಡಿದ್ದರೆ;

(ಎ) ಅಮಾರ್ಟೈಸ್ಡ್ ಬೆಲೆ, ಲಾಭ ಮತ್ತು ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದ್ದರೆ;

(ಬಿ) ಆಸ್ತಿಯು ಈಕ್ವಿಟಿ ಹೂಡಿಕೆಗಳನ್ನು ಪ್ರತಿನಿಧಿಸದಿದ್ದರೆ ಮತ್ತು ಈ

ವಿಚಾರದಲ್ಲಿ ಈ ಹಿಂದೆ ಮೀಸಲು ನಿಧಿಗಳಿಗೆ ಸಂಚಿತ ನ್ಯಾಯೋಚಿತ ಮೌಲ್ಯದ ಹೊಂದಾಣಿಕೆಯನ್ನು ತೆಗೆದುಕೊಂಡು ಈಕ್ವಿಟಿ ಒಳಗೆ ಮರು ವರ್ಗೀಕರಣ ಮಾಡಿರದ ಹೊರತು, ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯವನ್ನು, ಈ ಮೊದಲು ಮೀಸಲು ನಿಧಿಗೆ ತೆಗೆದುಕೊಂಡಿರುವ ಸಂಚಿತ ನ್ಯಾಯೋಚಿತ ಮೌಲ್ಯದ ಹೊಂದಾಣಿಕೆಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ವರ್ಗೀಕರಣ ಮಾಡಿರುವಾಗ ಆ ಆಸ್ತಿಯನ್ನು ಅಮಾನ್ಯಗೊಳಿಸಿದೆ.

### ಹಣಕಾಸಿನ ಹೊಣೆಗಾರಿಕೆಗಳು ಮತ್ತು ಈಕ್ವಿಟಿ ಸಾಧನಗಳು:

### ಸಾಲ ಅಥವಾ ಈಕ್ವಿಟಿಯಾಗಿ ವರ್ಗೀಕರಣ:

ಕಂಪನಿಯು ನೀಡಿರುವ ಸಾಲ ಮತ್ತು ಈಕ್ವಿಟಿ ಪತ್ರಗಳನ್ನು ಒಪ್ಪಂದದ ವ್ಯವಸ್ಥೆಗಳ ಸಾರಾಂಶದ ಮತ್ತು ಹಣಕಾಸಿನ ಹೊಣೆಗಾರಿಕೆಗಳು ಮತ್ತು ಈಕ್ವಿಟಿ ಪತ್ರದ ವ್ಯಾಖ್ಯಾನಗಳ ಅನುಸಾರ ಹಣಕಾಸಿನ ಹೊಣೆಗಾರಿಕೆಗಳು ಅಥವಾ ಈಕ್ವಿಟಿಯನ್ನಾಗಿ ವರ್ಗೀಕರಿಸಿದೆ.

### ಹಣಕಾಸಿನ ಹೊಣೆಗಾರಿಕೆಗಳು:

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳನ್ನು ತದನಂತರ ಅನ್ವಯವಾಗುವ ಬಡ್ಡಿ ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿದೆ.

### ಹಣಕಾಸಿನ ಹೊಣೆಗಾರಿಕೆಗಳು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯಗಳು:

ಲಾಭ ಅಥವಾ ನಷ್ಟದ ಮೂಲಕದ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಹೊಣೆಗಾರಿಕೆಗಳಲ್ಲಿ ವ್ಯಾಪಾರವು ಹೊಂದಿರುವ ಹಣಕಾಸಿನ ಹೊಣೆಗಾರಿಕೆಗಳು ಮತ್ತು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ ಪ್ರಾರಂಭಿಕ ಮಾನ್ಯತೆಯಾದಾಗ ಗೊತ್ತುಪಡಿಸಿರುವ ಹಣಕಾಸಿನ ಹೊಣೆಗಾರಿಕೆಗಳು ಸೇರಿರುವವು.

ಹಣಕಾಸಿನ ಹೊಣೆಗಾರಿಕೆಗಳನ್ನು ಅವುಗಳನ್ನು ಸಮೀಪದ ಅವಧಿಯಲ್ಲಿ ಮರು ಖರೀದಿಯ ಉದ್ದೇಶಕ್ಕಾಗಿ ಒಳಪಟ್ಟಿದ್ದರೆ ಅವುಗಳನ್ನು ವ್ಯಾಪಾರಕ್ಕಾಗಿ ಹೊಂದಿರುವವುಗಳೆಂದು ವರ್ಗೀಕರಿಸಿದೆ. ಈ ಪ್ರವರ್ಗದಲ್ಲಿಯೂ ಸಹ ಐಎನ್‌ಡಿ-ಎಎಸ್ 109ರಲ್ಲಿ ವ್ಯಾಖ್ಯಾನಿಸಿರುವಂತೆ ರಕ್ಷಣೆ ಸಂಬಂಧದಲ್ಲಿ ರಕ್ಷಣೆ ಸಾಧನಗಳಾಗಿ ಗೊತ್ತುಪಡಿಸಿರದ, ಕಂಪನಿಯಿಂದ ಮಾಡಿಕೊಂಡ ಜನ್ಯ ಹಣಕಾಸಿನ ಪತ್ರಗಳೂ ಸೇರಿರುವವು.

ವ್ಯಾಪಾರಕ್ಕಾಗಿ ಹೊಂದಿರುವ ಹೊಣೆಗಾರಿಕೆಗಳ ಮೇಲಿನ ಲಾಭಗಳು ಅಥವಾ ನಷ್ಟಗಳನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಪ್ರಾರಂಭಿಕ ಮಾನ್ಯತೆಯಲ್ಲಿ ಗೊತ್ತುಪಡಿಸಿರುವ ಹಣಕಾಸಿನ ಹೊಣೆಗಾರಿಕೆಗಳನ್ನು ಮಾನ್ಯತೆಯ ಪ್ರಾರಂಭಿಕ ದಿನಾಂಕದಲ್ಲಿ ಗೊತ್ತುಪಡಿಸಿದೆ. ಮಾತ್ರ ಅವುಗಳನ್ನು ಗೊತ್ತುಪಡಿಸಿದೆ. ಎಫ್‌ವಿಟಿಪಿಎಲ್, ಸ್ವಂತ ಕ್ರೆಡಿಟ್ ನಷ್ಟಗಳಲ್ಲಿ ಬದಲಾವಣೆಗಳಿಗೆ ಅನ್ವಯಿಸಬಹುದಾದ ನ್ಯಾಯೋಚಿತ ಮೌಲ್ಯದ ಲಾಭಗಳು/ನಷ್ಟಗಳಾಗಿ ಗೊತ್ತುಪಡಿಸಿರುವ ಹೊಣೆಗಾರಿಕೆಗಳನ್ನು ಒಸಿಐನಲ್ಲಿ ಮಾನ್ಯ ಮಾಡಿದೆ. ಈ ಲಾಭಗಳು/ನಷ್ಟಗಳನ್ನು ತದನಂತರ ಲಾಭ ಅಥವಾ ನಷ್ಟದ ಹೇಳಿಕೆಗೆ ವರ್ಗಾಯಿಸಲಾಗದು. ಆದರೂ, ಕಂಪನಿಯು ಈಕ್ವಿಟಿ ಒಳಗೆ ಸಂಚಿತ ಲಾಭ ಅಥವಾ ನಷ್ಟವನ್ನು ವರ್ಗಾಯಿಸಬಹುದಾಗಿದೆ. ಅಂತಹ ಹೊಣೆಗಾರಿಕೆಯ ನ್ಯಾಯೋಚಿತ ಮೌಲ್ಯದಲ್ಲಿನ ಇತರೆ ಎಲ್ಲಾ ಬದಲಾವಣೆಗಳನ್ನು ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಲಾಭ ಮತ್ತು ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ ಯಾವುದೇ ಹಣಕಾಸಿನ ಹೊಣೆಗಾರಿಕೆಯನ್ನು ಕಂಪನಿ ಗೊತ್ತುಪಡಿಸಿರುವುದಿಲ್ಲ.

### ಈಕ್ವಿಟಿ ಸಾಧನಗಳು:

ಈಕ್ವಿಟಿ ಸಾಧನವು ಸಂಸ್ಥೆ ಒಂದರ ಆಸ್ತಿಗಳಲ್ಲಿ ಅದರ ಎಲ್ಲಾ ಹೊಣೆಗಾರಿಕೆಗಳನ್ನು ಕಳೆದ ನಂತರ ಉಳಿಯುವ ಬಡ್ಡಿಯ ಪುರಾವೆಯಾಗಿರುವ ಯಾವುದೇ ಗುತ್ತಿಗೆಯಾಗಿರುವುದು. ಕಂಪನಿಯು ನೀಡಿರುವ ಈಕ್ವಿಟಿ ಸಾಧನಗಳನ್ನು ಪಡೆದ ಹಣದ ಮೊತ್ತದಲ್ಲಿ, ನೇರ ನೀಡಿಕೆ ಬೆಲೆಗಳ ನಿವ್ವಳದಲ್ಲಿ ಮಾನ್ಯ ಮಾಡಿದೆ.

### ಹಣಕಾಸಿನ ಖಾತರಿ ಒಪ್ಪಂದಗಳು:

ಹಣಕಾಸಿನ ಖಾತರಿ ಒಪ್ಪಂದವು, ಋಣ ಸಾಧನದ ನಿಯಮಗಳ ಅನುಸಾರ ಬಾಕಿಯಾದಾಗ ಹಣ ಪಾವತಿ ಮಾಡಲು ನಿರ್ದಿಷ್ಟಪಡಿಸಿದ ಸಾಲಗಾರ ವಿಫಲವಾಗುವುದರಿಂದ ಉಂಟಾಗುವ ನಷ್ಟವನ್ನು ಈಕ್ವಿಟಿದಾರರಿಗೆ ಮರಳಿ ತುಂಬಿಕೊಡುವುದಕ್ಕೆ ನಿಗದಿಪಡಿಸದ ಪಾವತಿಗಳನ್ನು ನೀಡಿಕೆದಾರ ಮಾಡಬೇಕಾಗಿರುವ ಒಂದು ಒಪ್ಪಂದವಾಗಿರುವುದು.

ಕಂಪನಿ ನೀಡಿರುವ ಹಣಕಾಸಿನ ಖಾತರಿ ಒಪ್ಪಂದಗಳನ್ನು ಪ್ರಾರಂಭಿಕವಾಗಿ ಅವುಗಳ ನ್ಯಾಯೋಚಿತ ಮೌಲ್ಯಗಳಲ್ಲಿ ಮಾಪನ ಮಾಡಿದೆ ಮತ್ತು ಎಫ್‌ವಿಟಿಪಿಎಲ್‌ನಲ್ಲಿ ಗೊತ್ತುಪಡಿಸದಿದ್ದಲ್ಲಿ, ಅವುಗಳನ್ನು ತದನಂತರ ಈ ಕೆಳಕಂಡವುಗಳ ಹೆಚ್ಚಿನ ಪ್ರಮಾಣದಲ್ಲಿ ಮಾಪನ ಮಾಡಿದೆ:

- ★ ಐಎನ್‌ಡಿ ಎಎಸ್ 109ರ ದುರ್ಬಲತೆ ಅಗತ್ಯತೆಗಳ ಅನುಸಾರ ನಿರ್ಧರಣೆ ಮಾಡಿದ ನಷ್ಟದ ಅವಕಾಶದ ಮೊತ್ತದಲ್ಲಿ, ಮತ್ತು
- ★ ಸೂಕ್ತವಾಗಿದ್ದಾಗ ಪ್ರಾರಂಭಿಕವಾಗಿ ಮಾನ್ಯ ಮಾಡಿದ ಕಡಿಮೆ ಮೊತ್ತದಲ್ಲಿ ಐಎನ್‌ಡಿ ಎಎಸ್ 18ರ ನೀತಿಗಳ ಅನುಸಾರ ಮಾನ್ಯ ಮಾಡಿದ ಆದಾಯದ ಸಂಚಿತ ಮೊತ್ತದಲ್ಲಿ.

### ಹಣಕಾಸಿನ ಹೊಣೆಗಾರಿಕೆಗಳ ಅಮಾನ್ಯೀಕರಣ:

ಕಂಪನಿಯ ಹೊಣೆಗಾರಿಕೆಗಳನ್ನು ಪಾವತಿ ಮಾಡಿ ಪೂರೈಸಿದಾಗ,

ರದ್ದುಪಡಿಸಿದಾಗ ಅಥವಾ ಅವಧಿ ಮುಗಿದಾಗ ಮಾತ್ರ ಕಂಪನಿಯು ಹಣಕಾಸಿನ ಹೊಣೆಗಾರಿಕೆಗಳನ್ನು ಅಮಾನ್ಯಗೊಳಿಸಿದೆ. ಗಣನೀಯವಾಗಿ ಬೇರೆ ಅವಧಿಗಳನ್ನು ಒಳಗೊಂಡ ಋಣ ಸಾಧನಗಳ ನೀಡಿಕೆಯೊಡನಿನ ವಿನಿಮಯವನ್ನು ಮೂಲ ಹಣಕಾಸಿನ ಹೊಣಣಗಾರಿಕೆಯ ತೀರುವಳಿಯಾಗಿ ಪರಿಗಣಿಸಿದೆ ಮತ್ತು ಹೊಸ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸಿದೆ. ಇದೇ ರೀತಿ, ಹಾಲಿಯಿರುವ ಹಣಕಾಸಿನ ಹೊಣೆಗಾರಿಕೆಯ (ಸಾಲಗಾರರ ಹಣಕಾಸಿನ ಸಂಕಷ್ಟಕ್ಕೆ ಅನ್ವಯಿಸಿರಲಿ ಅಥವಾ ಅನ್ವಯಿಸಿರದಿರಲಿ) ಅವಧಿಗಳ ಗಣನೀಯ ಮಾರ್ಪಾಡನ್ನು ಮೂಲಕ ಹಣಕಾಸಿನ ತೀರುವಳಿಯಾಗಿ ಪರಿಗಣಿಸಿದೆ ಮತ್ತು ಹೊಸ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸಿದೆ. ಅಮಾನ್ಯಗೊಳಿಸಿದ ಹಣಕಾಸಿನ ಹೊಣೆಗಾರಿಕೆಯ ವಾಹಕ ಮೊತ್ತ ಮತ್ತು ಪಾವತಿ ಮಾಡಿದ ಮತ್ತು ಪಾವತಿ ಮಾಡಬೇಕಿರುವ ಮೊತ್ತದ ನಡುವಿನ ವ್ಯತ್ಯಾಸವನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ.

### ಹಣಕಾಸಿನ ಸಾಧನಗಳನ್ನು ಸರಿದೂರಿಸುವುದು:

ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸರಿದೂಗಿಸಲಾಗಿದೆ ಮತ್ತು ಮಾನ್ಯ ಮಾಡಿದ ಮೊತ್ತಗಳನ್ನು ಸರಿದೂಗಿಸುವ ಬಗ್ಗೆ ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಹಕ್ಕು ಇದ್ದಾಗ ಮತ್ತು ನಿವ್ವಳ ಆಧಾರದ ಮೇಲೆ ಇತ್ಯರ್ಥಪಡಿಸುವ ಅಪೇಕ್ಷೆ ಇದ್ದಾಗ ಅಥವಾ ಆಸ್ತಿಯನ್ನು ನಗದಾಗಿಸಿದಾಗ ಮತ್ತು ಏಕಕಾಲದಲ್ಲಿ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಿದಾಗ ನಿವ್ವಳ ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಿಳಿಸಿದೆ. ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಹಕ್ಕು ಮುಂದಿನ ದಿನಗಳಲ್ಲಿನ ಘಟನಾವಳಿಗಳ ಬಗ್ಗೆ ಸಂಭಾವ್ಯವಾಗಿರಬಾರದು ಮತ್ತು ಅದು ವ್ಯವಹಾರದ ಸಾಮಾನ್ಯ ರೀತಿಯಲ್ಲಿ ಜಾರಿಗೊಳಿಸಬಹುದಾಗಿರಬೇಕು ಮತ್ತು ಕಂಪನಿ ಅಥವಾ ಎದುರು ಪಾರ್ಟಿಯು ಸುಸ್ತಿ ದಿವಾಳಿ ಅಥವಾ ಸಾಲ ತೀರಿಸಲಾಗದಿದ್ದ ಸಂದರ್ಭದಲ್ಲಿ ಇದನ್ನು ಜಾರಿಗೊಳಿಸಬಹುದಾಗಿರುವುದು.

### ಕ್ಯು. ಹಣಕಾಸಿನ ಆಸ್ತಿಗಳ ದುರ್ಬಲತೆ

ಕಂಪನಿಯು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿರದ ನಷ್ಟಗಳ ಬಗ್ಗೆ ಹಣಕಾಸಿನ ಆಸ್ತಿಗಳ ನಿರೀಕ್ಷಿತ ಕ್ರೆಡಿಟ್ ನಷ್ಟ (ಇಸಿಎಲ್) ಮಾದರಿ ಬಳಸಿ ನಷ್ಟದ ಅವಕಾಶಗಳನ್ನು ಮಾನ್ಯ ಮಾಡಿದೆ. ಗಣನೀಯವಾದ ಹಣಕಾಸಿನ ಘಟಕ ಹೊಂದಿರದ ವ್ಯಾಪಾರ ಸಂಬಂಧದಲ್ಲಿ ಪಡೆಯಬಹುದಾಗಿರುವ ಸಮನಾದ ಮೊತ್ತದಲ್ಲಿ ವ್ಯಾಪಾರದ ಸಂಬಂಧ ಬರಬೇಕಾದ ನಷ್ಟದ ಅವಕಾಶವನ್ನು ಮಾಪನ ಮಾಡಿದೆ. ಪ್ರಾರಂಭಿಕ ಮಾನ್ಯತೆಯಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳ ಆಗದಿರುವ ಹೊರತು, ಇತರ ಎಲ್ಲಾ ಹಣಕಾಸಿನ ಆಸ್ತಿಗಳಿಗೆ ನಿರೀಕ್ಷಿತ ಕ್ರೆಡಿಟ್ ನಷ್ಟಗಳನ್ನು ಹನ್ನೆರಡು ತಿಂಗಳ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ಪ್ರಾರಂಭಿಕ ಮಾನ್ಯತೆಯಿಂದ ಕೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಾಗಿದಲ್ಲಿ ಆ ವಿಚಾರದಲ್ಲಿ ಜೀವಿತಾವಧಿ ಇಸಿಎಲ್‌ನಲ್ಲಿ ಮಾಪನ ಮಾಡಿದೆ. ಮಾನ್ಯತೆ ಮಾಡಬೇಕಾಗಿರುವ ಮೊತ್ತಕ್ಕೆ ವರದಿಯ ದಿನಾಂಕದಲ್ಲಿ ನಷ್ಟದ ಅವಕಾಶ ಹೊಂದಾಣಿಕೆಗೆ ಬೇಕಾಗಿರುವ ನಿರೀಕ್ಷಿತ ಕ್ರೆಡಿಟ್ ನಷ್ಟ (ಅಥವಾ ಪ್ರತಿಲೋಮ)ದ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ದುರ್ಬಲತೆಯ ಲಾಭ ಅಥವಾ ನಷ್ಟ ಎಂಬುದಾಗಿ ಮಾನ್ಯ ಮಾಡಿದೆ.

### ಆರ್. ಹಣಕಾಸೇತರ ಆಸ್ತಿಗಳ ದುರ್ಬಲತೆ:

ಆಸ್ತಿ ಒಂದು ದುರ್ಬಲಗೊಳ್ಳುವ ಲಕ್ಷಣ ಹೊಂದಿರುವುದೇ ಅಥವಾ ಇಲ್ಲವೇ ಎಂಬುದನ್ನು ಕಂಪನಿಯು ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಿಸುವುದು. ದುರ್ಬಲತೆಯ ಯಾವುದೇ ಲಕ್ಷಣ ಇದ್ದಲ್ಲಿ, ಅಥವಾ ಆಸ್ತಿ ಒಂದರ ವಾರ್ಷಿಕ ದುರ್ಬಲತೆ ಪರೀಕ್ಷೆ ಮಾಡಬೇಕಿರುವಾಗ, ಕಂಪನಿಯು ಆಸ್ತಿಯ ವಸೂಲು ಮಾಡಬಹುದಾದ ಮೊತ್ತವನ್ನು ಅಂದಾಜು ಮಾಡುವುದು. ಆಸ್ತಿ ಒಂದರ ಪಡೆಯಬಹುದಾದ ಮೊತ್ತವು ಮಾರಾಟ ಮಾಡುವುದೇ ಮತ್ತು ಅದರ ಬಳಕೆಯಲ್ಲಿನ ಮೌಲ್ಯ ಕಳೆದು ಆಸ್ತಿಯ ಅತಿ ಹೆಚ್ಚಿನ ಅಥವಾ ನಗದು ಸೃಜನತೆ ಘಟಕದ (ಸಿಜಿಯು) ನ್ಯಾಯೋಚಿತ ಮೌಲ್ಯವಾಗಿರುವುದು. ಕಂಪನಿಯ ಇತರೆ ಆಸ್ತಿಗಳಿಂದ ಕಾನೂನಾತ್ಮಕವಾಗಿ ಬೇರೆಯಾಗಿರುವ ಆಸ್ತಿಯು ನಗದು ಹರಿವನ್ನು ಮಾಡದಿರುವ ಹೊರತು, ಇದನ್ನು ಪ್ರತಿ ಆಸ್ತಿಯಲ್ಲಿ ನಿರ್ಧರಣೆ ಮಾಡಲಾಗುವುದು. ಆಸ್ತಿ ಅಥವಾ ಸಿಜಿಯು ಒಂದರ ವಾಹಕ ಮೊತ್ತವು ಅದರ ಪಡೆಯಬಹುದಾದ ಮೊತ್ತಕ್ಕಿಂತ ಮಿಗಿಲಾಗಿದ್ದಾಗ, ಆಸ್ತಿಯನ್ನು ದುರ್ಬಲವಾಗಿರುವುದಾಗಿ ಪರಿಗಣಿಸಲಾಗುವುದು ಮತ್ತು ಅದರ ಪಡೆಯಬಹುದಾದ ಮೊತ್ತಕ್ಕೆ ಬರೆಯಲಾಗುವುದು.

ಬಳಕೆಯಲ್ಲಿರುವ ಮೌಲ್ಯ ನಿರ್ಧರಣೆ ಮಾಡುವಾಗ, ಅಂದಾಜು ಮಾಡಿದ ಮುಂದಿನ ನಗದು ಹರಿಯುವಿಕೆಗಳನ್ನು ಹಣದ ಸಮಯದ ಮೌಲ್ಯದ ಪ್ರಸ್ತುತ ಮಾರುಕಟ್ಟೆ ನಿರ್ಧರಣೆಗಳನ್ನು ಮತ್ತು ಆಸ್ತಿಗೆ ನಿರ್ದಿಷ್ಟಪಡಿಸಿದ ಅಪಾಯಗಳನ್ನು ಬಿಂಬಿಸುವ ತೆರಿಗೆ ಪೂರ್ವ ರಿಯಾಯಿತಿ ದರ ಬಳಸಿ ಅವುಗಳ ಪ್ರಸಕ್ತದ ಮೌಲ್ಯಕ್ಕೆ ಕಳೆಯಲಾಗಿದೆ. ಮಾರಾಟ ಮಾಡಲು ನ್ಯಾಯೋಚಿತ ಮೌಲ್ಯ ಕಳೆದ ಬೆಲೆ ನಿರ್ಧರಣೆ ಮಾಡುವಾಗ, ಲಭ್ಯವಿದ್ದಲ್ಲಿ, ಇತ್ತೀಚಿನ ಮಾರುಕಟ್ಟೆ ವ್ಯವಹಾರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಅಂತಹ ವ್ಯವಹಾರಗಳನ್ನು ಗುರುತಿಸಲಾಗದಿದ್ದಲ್ಲಿ, ಸೂಕ್ತ ಮೌಲ್ಯ ನಿರ್ಣಯ ವಿಧಾನವನ್ನು ಬಳಸಲಾಗುವುದು. ಮೌಲ್ಯ ನಿರ್ಧರಣೆ ವಿವಿಧತೆ, ಸಾರ್ವಜನಿಕ ವ್ಯಾಪಾರ ಮಾಡಿದ ಸಹಾಯಕ ಕಂಪನಿಗಳ ನಮೂದಿತ ಷೇರು ದರಗಳಿಂದ ಅಥವಾ ಇತರೆ ಲಭ್ಯವಿರುವ ನ್ಯಾಯೋಚಿತ ಮೌಲ್ಯ ಸೂಚಕರುಗಳಿಂದ ಈ ಲೆಕ್ಕಾಚಾರಗಳನ್ನು ದೃಢೀಕರಿಸಿದೆ.

ಕಂಪನಿಯು ತನ್ನ ದುರ್ಬಲತೆಯ ಲೆಕ್ಕಾಚಾರ ಮಾಡಲು ವಿವರವಾದ ಬಜೆಟ್‌ಗಳ ಮತ್ತು ಮುಂಗಾಣ್ಕೆಗಳನ್ನು ಆಧಾರವಾಗಿ ತೆಗೆದುಕೊಳ್ಳುವುದು. ಈ ವಿವರವಾದ ಬಜೆಟ್‌ಗಳನ್ನು ಮತ್ತು ಮುಂಗಾಣ್ಕೆಗಳನ್ನು, ಪ್ರತಿ ಆಸ್ತಿಯನ್ನು ಹಂಚಿಕೆ ಮಾಡಿರುವ

ಕಂಪನಿಯ ಪ್ರತಿ ಸಿಜಿಯುಗೆ ಪ್ರತ್ಯೇಕವಾಗಿ ಸಿದ್ಧಪಡಿಸಿದೆ. ಈ ಬಜೆಟ್‌ಗಳು ಮತ್ತು ಮುಂಗಾಣ್ಕೆಗಳು ಸಾಮಾನ್ಯವಾಗಿ ಐದು ವರ್ಷಗಳ ಅವಧಿಯನ್ನು ಒಳಪಟ್ಟಿರುತ್ತವೆ. ದೀರ್ಘಾವಧಿಗೆ, ದೀರ್ಘಾವಧಿ ಬೆಳವಣಿಗೆ ದರವನ್ನು ಲೆಕ್ಕಾಚಾರ ಮಾಡಲಾಗುವುದು ಮತ್ತು ಐದನೇ ವರ್ಷದ ನಂತರ ಯೋಜನೆಯ ಮುಂದಿನ ನಗದು ಹರಿಯುವಿಕೆಗೆ ಅನ್ವಯಿಸಲಾಗುವುದು.

ಸರಕುಗಳ ತಪಶೀಲುಗಳ ಮೇಲಿನ ದುರ್ಬಲತೆ ಸೇರಿದಂತೆ, ದುರ್ಬಲತೆ ನಷ್ಟಗಳನ್ನು ಈ ಹಿಂದೆ ಮರು ಮೌಲ್ಯಮಾಪನ ಮಾಡಿರುವ ಮತ್ತು ಇತರೆ ಸಮಗ್ರ ಆದಾಯಕ್ಕೆ ಮರು ಮೌಲ್ಯಮಾಪನ ಅನ್ವಯವಾಗಿರುವ ಸ್ವತ್ತಿಗೆ ಹೊರತಾಗಿ, ದುರ್ಬಲತೆಯ ಆಸ್ತಿಯ ಕಾರ್ಯಕ್ಕೆ ಅನ್ವಯವಾಗುವ ಖರ್ಚಿನ ಪ್ರವರ್ಗಗಳಲ್ಲಿನ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ವಿಚಾರದಲ್ಲಿ, ದುರ್ಬಲತೆಯನ್ನು ಸಹ ಹಿಂದಿನ ಯಾವುದೇ ಮರು ಮೌಲ್ಯಮಾಪನದ ಮೊತ್ತದವರೆಗೆ ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿದೆ.

ವ್ಯಾಪಾರದ ಹಕ್ಕು ಒಳಗೊಂಡಿರದ ಆಸ್ತಿಗಳಿಗೆ, ಈ ಹಿಂದೆ ಮಾನ್ಯ ಮಾಡಿದ್ದ ನಷ್ಟಗಳು ಇನ್ನೂ ಉಳಿದಿಲ್ಲರುವಿಕೆಯ ಅಥವಾ ನಷ್ಟಗಳು ಕಡಿಮೆಯಾಗಿರಬಹುದಾದ ಯಾವುದೇ ಲಕ್ಷಣಗಳು ಇರುವವು ಎಂಬುದನ್ನು ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಣೆ ಮಾಡಲಾಗುವುದು. ಒಂದು ವೇಳೆ ಈ ಲಕ್ಷಣಗಳು ಇದ್ದಲ್ಲಿ ಕಂಪನಿಯು ಆಸ್ತಿಯ ಅಥವಾ ಸಿಜಿಯುನ ಪಡೆಯಬಹುದಾಗಿರುವ ಮೊತ್ತವನ್ನು ಅಂದಾಜು ಮಾಡುವುದು. ಹಿಂದಿನ ದುರ್ಬಲತೆ ನಷ್ಟವನ್ನು ಮಾನ್ಯ ಮಾಡಿರುವುದರಿಂದ, ಆಸ್ತಿಯ ಪಡೆಯಬಹುದಾಗಿರುವ ಮೊತ್ತದ ನಿರ್ಧರಣೆಗೆ ಬಳಸಿರುವ ಊಹೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಮಾತ್ರ ಈ ಹಿಂದೆ ಮಾನ್ಯ ಮಾಡಿದ್ದ ದುರ್ಬಲತೆ ನಷ್ಟವನ್ನು ಹಿಮ್ಮುಖಿಗೊಳಿಸಿದೆ. ಆಸ್ತಿಯ ವಾಹಕ ಮೊತ್ತವು ಅದರ ಪಡೆಯಬಹುದಾದ ಮೊತ್ತಕ್ಕಿಂತ ಮೀರದಿರುವುದಕ್ಕೆ ಅಥವಾ ನಿರ್ಧರಣೆ ಮಾಡಬಹುದಾಗಿರುವ ವಾಹಕ ಮೊತ್ತಕ್ಕಿಂತ ಮೀರದಿರುವುದಕ್ಕೆ ಸವಕಳಿಯ ನಿವ್ವಳ ಪ್ರಮಾಣಕ್ಕಿಂತ ಮೀರಿರದಿದ್ದರೆ, ಹಿಂದಿನ ವರ್ಷಗಳಲ್ಲಿ ಆಸ್ತಿಗಳಿಗೆ ದುರ್ಬಲ ನಷ್ಟ ಮಾನ್ಯ ಮಾಡದಿರುವುದಕ್ಕೆ ಹಿಮ್ಮುಖಿಗೊಳಿಸುವಿಕೆಯು ಸೀಮಿತವಾಗಿರುವುದು. ಹಿಮ್ಮುಖಿಗೊಳಿಸಿರುವಿಕೆಯನ್ನು ಮರು ಮೌಲ್ಯ ಮಾಪನ ಹೆಚ್ಚಳವೆಂದು ಭಾವಿಸಿರುವ ವಿಚಾರಗಳಲ್ಲಿ ಆಸ್ತಿಯನ್ನು ಮರು ಮೌಲ್ಯಮಾಪನದ ಮೊತ್ತದಲ್ಲಿ ಲೆಕ್ಕ ಮಾಡಿರದ ಹೊರತು, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

## ಎಸ್. ನಗದು ಹರಿಯುವಿಕೆ ಹೇಳಿಕೆ

ನಗದು ಹರಿವನ್ನು ಪರೋಕ್ಷ ವಿಧಾನ ಬಳಸಿ ವರದಿ ಮಾಡಿದೆ. ಅ ಮೂಲಕ ಅ ಅವಧಿಯ ಲಾಭವನ್ನು ಹಣಕಾಸೇತರ ಸ್ವರೂಪದ ವ್ಯವಹಾರಗಳಿಗೆ, ಹಿಂದಿನ ಕಾರ್ಯಾಚರಣೆ ನಗದು ಸ್ವೀಕಾರಗಳು ಅಥವಾ ಪಾವತಿಗಳ ಯಾವುದೇ ಮುಂದೂಡಿಕೆ ಅಥವಾ ಸಂಚಯನಗಳಿಗೆ ಮತ್ತು ಹೂಡಿಕೆ ಅಥವಾ ಹಣಕಾಸು ನೀಡಿಕೆ ನಗದು ಹರಿಯುವಿಕೆ ಜೊತೆ ಸೇರಿರುವ ಆದಾಯ ಅಥವಾ ಖರ್ಚುಗಳಿಗೆ ಹೊಂದಾಣಿಕೆ ಮಾಡಿದೆ. ಕಂಪನಿಯ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದನ್ನು ಪ್ರತ್ಯೇಕಿಸಿದೆ.

## ಟಿ. ಲಾಭಾಂಶ

ಕಂಪನಿಗೆ ವಿತರಣೆಯ ಜವಾಬ್ದಾರಿ ನೀಡಿದಾಗ ಮತ್ತು ಕಂದಪನಿಯ ತೀರ್ಮಾನದಂತೆ ವಿತರಣೆ ಇಲ್ಲವೆನ್ನದಿರುವಾಗ ಕಂಪನಿಯ ಈಕ್ವಿಟಿ ಷೇರುದಾರರುಗಳಿಗೆ ನಗದು ಅಥವಾ ನಗದೇತರ ವಿತರಣೆ ಮಾಡಲು ಹೊಣೆಗಾರಿಕೆಯನ್ನು (ಇದರ ಮೇಲಿನ ತೆರಿಗೆ ಸೇರಿದಂತೆ) ಕಂಪನಿ ಮಾನ್ಯ ಮಾಡುವುದು.

ನಗದೇತರ ವಿತರಣೆಯನ್ನು, ಈಕ್ವಿಟಿಯಲ್ಲಿ ನೇರವಾಗಿ ಮಾನ್ಯ ಮಾಡಿದ ನ್ಯಾಯೋಚಿತ ಮೌಲ್ಯದ ಮರು ಮಾಪನದೊಡನೆ ವಿತರಿಸಬೇಕಾಗಿರುವ ಆಸ್ತಿಗಳ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ.

ನಗದೇತರ ಆಸ್ತಿಗಳ ವಿತರಣೆ ಮಾಡಿದ ಮೇಲೆ, ಹೊಣೆಗಾರಿಕೆಯ ವಾಹಕ ಮೊತ್ತ ಮತ್ತು ವಿತರಣೆ ಮಾಡಿದ ಆಸ್ತಿಗಳ ವಾಹಕ ಮೊತ್ತದ ನಡುವೆ ಯಾವುದೇ ವ್ಯತ್ಯಾಸವಿದ್ದರೆ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

ವರದಿಯ ಅವಧಿ ನಂತರ ಕಂಪನಿ ಘೋಷಿಸಿದ ಲಾಭಾಂಶಗಳನ್ನು ವರದಿಯ ಅವಧಿ ಕೊನೆಯಲ್ಲಿ ಹೊಣೆಗಾರಿಕೆ ಎಂಬುದಾಗಿ ಮಾನ್ಯ ಮಾಡುವುದಿಲ್ಲ. ವರದಿಯ ಅವಧಿ ನಂತರ ಅದರೆ ಹಣಕಾಸಿನ ಹೇಳಿಕೆ ನೀಡುವ ಮುನ್ನ ಘೋಷಿಸಿದ ಲಾಭಾಂಶಗಳನ್ನು, ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಯಾವುದೇ ಬಾಧ್ಯತೆ ಇಲ್ಲದಿರುವುದರಿಂದ ಅವುಗಳನ್ನು ಹೊಣೆಗಾರಿಕೆ ಎಂದು ಮಾನ್ಯ ಮಾಡುವುದಿಲ್ಲ. ಅಂತಹ ಲಾಭಾಂಶಗಳನ್ನು ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ತಿಳಿಸಲಾಗುವುದು.

## ಯು. ವರದಿಯ ದಿನಾಂಕದ ನಂತರದ ಘಟನೆಗಳು:

ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವರದಿಯ ಅವಧಿ ನಂತರ ಉಂಟಾಗುವ ಘಟನಾವಳಿಗೆ ಹೊಂದಾಣಿಕೆ ಮಾಡಿದೆ. ವರದಿಯ ಅವಧಿ ಕೊನೆಯಲ್ಲಿ ಇರುವ ಪರಿಸ್ಥಿತಿಗೆ ಸಂಬಂಧಿಸಿದಂತೆ ಮೊತ್ತಗಳ ಅಂದಾಜು ಮಾಡುವಿಕೆಗೆ ನೆರವಾಗುವ ಹೆಚ್ಚುವರಿ ಪುರಾವೆಯನ್ನು ಇದು ನೀಡುವುದು.

## ವಿ. ಮಾರಾಟಕ್ಕೆ ಹೊಂದಿರುವ ಮತ್ತು ಕಾರ್ಯಾಚರಣೆ ಸ್ಥಗಿತಗೊಂಡಿರುವ ಚಾಲ್ತಿಯೇತರ ಆಸ್ತಿಗಳು:

ಕಂಪನಿಯು ಚಾಲ್ತಿಯೇತರ ಆಸ್ತಿಗಳನ್ನು (ಅಥವಾ ವಿಲೇವಾರಿ ಗ್ರೂಪ್) ಅವುಗಳ ವಾಹಕ ಮೊತ್ತಗಳನ್ನು ಮುಂದುವರಿದ ಬಳಕೆ ಮೂಲಕಕ್ಕಿಂತ

ಮಾರಾಟದ ಮೂಲಕ ಪ್ರಮುಖವಾಗಿ ಪಡೆಯಬಹುದಾಗಿದ್ದಲ್ಲಿ ಅವುಗಳನ್ನು ಮಾರಾಟಕ್ಕೆ ಹೊಂದಿರುವುದೆಂದು ವರ್ಗೀಕರಣ ಮಾಡುವುದು. ಮಾರಾಟವನ್ನು ಪೂರ್ಣಗೊಳಿಸಲು, ಮಾರಾಟಕ್ಕೆ ಗಣನೀಯವಾದ ಬದಲಾವಣೆಗಳನ್ನು ಮಾಡುವುದಿಲ್ಲ ಅಥವಾ ಮಾರಾಟ ಮಾಡುವ ತೀರ್ಮಾನವನ್ನು ಹಿಂತೆಗೆದುಕೊಳ್ಳುವುದಿಲ್ಲವೆಂಬ ಸೂಚನೆಯ ಕ್ರಮ ಅಗತ್ಯವಾಗಿರುತ್ತದೆ. ಆಡಳಿತವು ವರ್ಗೀಕರಣ ಮಾಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ನಿರೀಕ್ಷಿತ ಮಾರಾಟಕ್ಕೆ ಬದ್ಧವಾಗಿರಬೇಕು.

ಆಸ್ತಿಯು ಅದರ ಪ್ರಸಕ್ತ ಸ್ಥಿತಿಯಲ್ಲಿ ತಕ್ಷಣಕ್ಕೆ ಮಾರಾಟಕ್ಕೆ ಲಭ್ಯವಿದ್ದಾಗ, ಅಂತಹ ಆಸ್ತಿಗಳ ಮಾರಾಟಕ್ಕೆ ಸಾಮಾನ್ಯ ಮತ್ತು ಸಾಂಪ್ರದಾಯಿಕವಾದ ನಿಯಮಗಳಿಗೆ ಮಾತ್ರ ಒಳಪಟ್ಟು, ಅದರ ಮಾರಾಟವು ಅತ್ಯಂತ ಸಾಧ್ಯನೀಯತೆ; ಮತ್ತು ಅದನ್ನು ಪ್ರಾಮಾಣಿಕವಾಗಿ ಮಾರಾಟ ಮಾಡಿದಾಗ, ಮಾರಾಟವನ್ನು ರದ್ದು ಮಾಡದಿರುವಾಗ ಮಾರಾಟಕ್ಕೆ ಹೊಂದಿರುವ ವರ್ಗೀಕರಣದ ಮಾನದಂಡ ಈಡೇರಿಕೆ ಆಗುತ್ತದೆ. ಕೆಳಕಂಡ ವ್ಯವಸ್ಥೆಯಿದ್ದಾಗ ಕಂಪನಿಯು ಆಸ್ತಿಯ ಮಾರಾಟವು ಅತ್ಯಂತ ಸಾಧ್ಯತೆಯಿರುವುದಾಗಿ ಕಂಪನಿ ಭಾವಿಸುವುದು:

★ ಸೂಕ್ತ ಮಟ್ಟದ ಆಡಳಿತವು ಆಸ್ತಿಯ ಮಾರಾಟದ ಯೋಜನೆಗೆ ಬದ್ಧವಾಗಿದ್ದಾಗ;

★ ಖರೀದಿದಾರರನ್ನು ಗುರುತಿಸಲು ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಸಕ್ರಿಯ ಕಾರ್ಯಕ್ರಮ ಕೈಗೊಂಡಾಗ (ಅನ್ವಯವಾಗಿದ್ದಲ್ಲಿ)

★ ಆಸ್ತಿಯನ್ನು ಅದರ ಪ್ರಸಕ್ತದ ನ್ಯಾಯೋಚಿತ ಮೌಲ್ಯದ ಸಂಬಂಧದಲ್ಲಿ ಸೂಕ್ತವೆನಿಸಿರುವ ಬೆಲೆಯಲ್ಲಿ ಮಾರಾಟ ಮಾಡಲು ಸಕ್ರಿಯವಾಗಿ ಪ್ರಚಾರ ಮಾಡಿದಾಗ

★ ವರ್ಗೀಕರಣದ ದಿನಾಂಕದಿಂದ ಒಂದು ವರ್ಷದ ಒಳಗೆ ಪೂರ್ಣಗೊಂಡ ಮಾರಾಟ ಎಂಬುದಾಗಿ ಮಾನ್ಯ ಮಾಡಲು ಅರ್ಹವಾಗುವ ನಿರೀಕ್ಷೆಯುಳ್ಳ ಮಾರಾಟ, ಮತ್ತು

★ ಮಾರಾಟದ ಯೋಜನೆಗೆ ಗಣನೀಯವಾದ ಬದಲಾವಣೆ ಮಾಡುವ ಅಥವಾ ಮಾರಾಟದ ಯೋಜನೆಯನ್ನು ಹಿಂಪಡೆಯುವ ಸಾಧ್ಯತೆಗಳಿರುವುದಿಲ್ಲ ಎಂಬ ಸೂಚನೆ ಮೇರೆಗೆ ಯೋಜನೆ ಪೂರ್ಣಗೊಳಿಸಲು ಅಗತ್ಯ ಕ್ರಮಗಳಿದ್ದಾಗ;

ಮಾರಾಟಕ್ಕೆ ಹೊಂದಿರುವ ಚಾಲ್ತಿಯೇತರ ಆಸ್ತಿಗಳನ್ನು ಅವುಗಳ ವಾಹಕ ಮೊತ್ತದ ಕಡಿಮೆ ಮಟ್ಟದಲ್ಲಿ ಮತ್ತು ಮಾರಾಟ ಮಾಡುವ ನ್ಯಾಯೋಚಿತ ಮೌಲ್ಯ ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಮಾರಾಟಕ್ಕೆ ಹೊಂದಿರುವವುಗಳೆಂದು ವರ್ಗೀಕರಣ ಮಾಡಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಪ್ರತ್ಯೇಕವಾಗಿ ನಿರೂಪಿಸಿದೆ.

ದುರ್ಬಲತೆ ನಷ್ಟವನ್ನು ಆಸ್ತಿಗಳ ನ್ಯಾಯೋಚಿತ ಮೌಲ್ಯ ರಹಿತ ಬೆಲೆಯಲ್ಲಿ ಮಾರಾಟದ ಯಾವುದೇ ಪ್ರಾರಂಭಿಕ ಅಥವಾ ತದನಂತರದ ಪರಿಗಣನೆಗೆ ಮಾನ್ಯ ಮಾಡಿದೆ. ಆಸ್ತಿಯೊಂದರ ಮಾರಾಟದ ನ್ಯಾಯೋಚಿತ ಮೌಲ್ಯ ರಹಿತ ಬೆಲೆಯಲ್ಲಿ ಯಾವುದೇ ತದನಂತರದ ಹೆಚ್ಚಳಕ್ಕಾಗಿ ಲಾಭವನ್ನು ಮಾನ್ಯ ಮಾಡಿದೆ. ಆದರೆ ಹಿಂದೆ ಮಾನ್ಯ ಮಾಡಿದ ಸಂಚಿತ ದುರ್ಬಲತೆ ನಷ್ಟಕ್ಕೂ ಮೀರಿದ ಆಸ್ತಿಗಳಿಗೆ ಇದು ಅನ್ವಯವಾಗದು. ಚಾಲ್ತಿಯೇತರ ಆಸ್ತಿಗಳ ಮಾರಾಟದ ದಿನಾಂಕದಲ್ಲಿ ಹಿಂದೆ ಮಾನ್ಯ ಮಾಡಿರದ ಲಾಭ ಅಥವಾ ನಷ್ಟವನ್ನು ಅಮಾನ್ಯಗೊಳಿಸಿದ ದಿನಾಂಕದಂದು ಮಾನ್ಯ ಮಾಡಿದೆ.

ಮಾರಾಟ/ಮಾಲೀಕರಿಗೆ ವಿತರಣೆಗಾಗಿ ಹೊಂದಿರುವುದು ಎಂಬುದಾಗಿ ಒಮ್ಮೆ ವರ್ಗೀಕರಣ ಮಾಡಿರುವ ಸ್ವತ್ತು , ಸ್ಥಾವರ, ಮತ್ತು ಉಪಕರಣ ಮತ್ತು ಅಗೋಚರಿತ ಆಸ್ತಿಗಳನ್ನು ಸವಕಳಿ ಮಾಡಿರುವುದಿಲ್ಲ ಅಥವಾ ಅಮಾರ್ಟೈಸ್ ಮಾಡಿರುವುದಿಲ್ಲ.

ಕಾರ್ಯಾಚರಣೆಯು ಒಂದು ಸಂಸ್ಥೆಯ ಅಂಗ ಭಾಗವಾಗಿದ್ದರೆ, ಅದನ್ನು ಮಾರಾಟ ಮಾಡಿದ್ದರೆ ಅಥವಾ ಮಾರಾಟಕ್ಕೆ ಹೊಂದಿರುವುದಾಗಿ ವರ್ಗೀಕರಿಸದ್ದರೆ ಸ್ಥಗಿತಗೊಂಡಿರುವ ಕಾರ್ಯಾಚರಣೆಯು ಸ್ಥಗಿತಗೊಂಡಿರುವ ಕಾರ್ಯಾಚರಣೆಯಾಗಿ ಮತ್ತು ;

★ ವ್ಯವಹಾರದ ಪ್ರತ್ಯೇಕ ಪ್ರಮುಖ ರೂಪವನ್ನು ಅಥವಾ ಕಾರ್ಯಾಚರಣೆಗಳ ಭೌಗೋಳಿಕ ಪ್ರದೇಶ ಪ್ರತಿನಿಧಿಸುವ,

★ ವ್ಯವಹಾರದ ಪ್ರತ್ಯೇಕ ಪ್ರಮುಖ ರೀತಿಯ ವಿಲೇವಾರಿಗೆ ಏಕ ಸಮನ್ವಯತೆ ಯೋಜನೆಯ ಅಥವಾ ಕಾರ್ಯಾಚರಣೆಗಳ ಭೌಗೋಳಿಕ ಪ್ರದೇಶದ ಭಾಗವಾಗಿದ್ದರೆ, ಅಥವಾ

★ ಮರು ಮಾರಾಟದ ಸೃಷ್ಟಿಯಲ್ಲಿ ವಿಶೇಷವಾಗಿ, ತದನಂತರ ಸ್ವಾಧೀನ ಮಾಡಿಕೊಂಡಿದ್ದರೆ.

ಸ್ಥಗಿತಗೊಂಡಿರುವ ಕಾರ್ಯಾಚರಣೆಗಳನ್ನು ಮುಂದು ವರಿಯುತ್ತಿರುವ ಕಾರ್ಯಾಚರಣೆಗಳ ಫಲಿತಾಂಶಗಳಿಂದ ತೆಗೆದು ಹಾಕಲಾಗಿದೆ ಮತ್ತು ಅವುಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಿಂದ ಬಂದ ತೆರಿಗೆ ನಂತರದ ಲಾಭ ಅಥವಾ ನಷ್ಟವಾಗಿ ಏಕ ಮೊತ್ತವಾಗಿ ನಿರೂಪಿಸಿದೆ.

### ಡಬ್ಲ್ಯೂ. ವಿಭಾಗದ ವರದಿ

ಮುಖ್ಯ ಕಾರ್ಯಾಚರಣೆ ತೀರ್ಮಾನ ಮಾಡುವವರಿಗೆ ಒದಗಿಸಿರುವ ಆಂತರಿಕ ವರದಿಗೆ ಅನುರೂಪವಾಗಿರುವ ರೀತಿಯಲ್ಲಿ ಕಾರ್ಯಾಚರಣೆ ವಿಭಾಗಗಳ ಬಗ್ಗೆ ವರದಿ ಮಾಡಿದೆ.

### ಎಕ್ಸ್. ಸರ್ಕಾರದ ಅನುದಾನಗಳು

ಅನುದಾನವನ್ನು ಸ್ವೀಕರಿಸಲಾಗುವುದು, ಮತ್ತು ಅನ್ವಯವಾಗುವ ಎಲ್ಲಾ ನಿಬಂಧನೆಗಳನ್ನು ಅನುಸರಿಸಲಾಗಿದೆ ಎಂಬುದರ ಬಗ್ಗೆ

ಸೂಕ್ತವಾದ ಭರವಸೆ ಇದ್ದಾಗ ಸರ್ಕಾರದ ಅನುದಾನವನ್ನು ಮಾನ್ಯ ಮಾಡಿದೆ.

ಖರ್ಚಿನ ಬಾಬ್ತುಗಳಿಗೆ ಸಂಬಂಧಿಸಿದ ಅನುದಾನವನ್ನು ಯಾವುದಕ್ಕೆ ಅದನ್ನು ಸರಿಹೊಂದಿಸಲು ಉದ್ದೇಶಿಸಲಾಗಿರುವುದೊ, ಆ ಸಂಬಂಧಿತ ವೆಚ್ಚಗಳನ್ನು ಖರ್ಚು ಮಾಡಲಾಗಿರುವುದು. ಆ ಅವಧಿಗಳಲ್ಲಿ ವ್ಯವಸ್ಥಿತ ಆಧಾರದ ಮೇಲೆ ಆದಾಯ ಎಂದು ಮಾನ್ಯ ಮಾಡಿದೆ.

ಅನುದಾನವು ಆಸ್ತಿ ಒಂದಕ್ಕೆ ಸಂಬಂಧಿಸಿರುವಾಗ, ಆಸ್ತಿಯ ವಾಹಕ ಮೊತ್ತದಿಂದ ಅನುದಾನವನ್ನು ಕಳೆಯುವ ಮೂಲಕ ನಿರೂಪಿಸಲಾಗಿದೆ. ಕಂಪನಿಯು ಹಣಕಾಸೇತರ ಆಸ್ತಿಗಳ ಅನುದಾನವನ್ನು ಪಡೆದಾಗ, ಅದನ್ನು ಸಾಧಾರಣ ಮೌಲ್ಯವೆಂದು ಪರಿಗಣಿಸಿದೆ.

ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳು ಪ್ರಸ್ತುತದಲ್ಲಿ ಅನ್ವಯವಾಗುವ ಮಾರುಕಟ್ಟೆ ದರಕ್ಕಿಂತ ಕಡಿಮೆ ಬಡ್ಡಿದರದಲ್ಲಿ ಸಾಲಗಳು ಅಥವಾ ಅದೇ ರೀತಿಯ ಹಣಕಾಸಿನ ನೆರವು ನೀಡಿದಾಗ, ಈ ಅನುಕೂಲಕರವಾದ ಬಡ್ಡಿಯ ಪರಿಣಾಮವನ್ನು ಸರ್ಕಾರದ ಅನುದಾನ ಎಂಬುದಾಗಿ ಪರಿಗಣಿಸಿದೆ. ಸಾಲ ಅಥವಾ ಹಣಕಾಸಿನ ನೆರವನ್ನು ಪ್ರಾರಂಭಿಕವಾಗಿ ಮಾನ್ಯ ಮಾಡಿದೆ ಮತ್ತು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ ಮತ್ತು ಸರ್ಕಾರದ ಅನುದಾನವನ್ನು ಸಾಲ ಪ್ರಾರಂಭಿಕ ವಾಹಕ ಮೌಲ್ಯ ಮತ್ತು ಪಡೆದ ಹಣದ ನಡುವಿನ ವ್ಯತ್ಯಾಸವಾಗಿ ಮಾಪನ ಮಾಡಿದೆ. ಸಾಲವನ್ನು ತದನಂತರ ಹಣಕಾಸಿನ ಹೊಣೆಗಾರಿಕೆಗಳಿಗೆ ಅನ್ವಯವಾಗುವ ಲೆಕ್ಕ ನಿರ್ವಹಣೆ ನೀತಿ ಅನುಸಾರ ಮಾಪನ ಮಾಡಿದೆ.

## 1.3 ನಿರ್ಣಾಯಕ ಲೆಕ್ಕ ನಿರ್ವಹಣೆ ಅಂದಾಜುಗಳು ಮತ್ತು ಊಹೆಗಳು:

ಕಂಪನಿಯ ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಆದಾಯಗಳು, ಖರ್ಚುಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲಾದ ಮೊತ್ತಗಳಿಗೆ ಮತ್ತು ಇದರೊಡನಿನ ಪ್ರಕಟಣೆಗಳು ಮತ್ತು ಸಂಭಾವ್ಯ ಹೊಣೆಗಾರಿಕೆಗಳ ಪ್ರಕಟಣೆಗೆ ಅನ್ವಯವಾಗುವ ತೀರ್ಪುಗಳು ಅಂದಾಜುಗಳು ಮತ್ತು ಊಹೆಗಳನ್ನು ಆಡಳಿತ ಮಂಡಳಿ ಮಾಡಬೇಕಾಗುತ್ತದೆ. ಈ ಊಹೆಗಳು ಮತ್ತು ಅಂದಾಜುಗಳ ಬಗ್ಗೆಗಿನ ಅನಿಶ್ಚಿತತೆಯು ಮುಂದಿನ ಅವಧಿಗಳಲ್ಲಿ ಅನ್ವಯವಾಗುವ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಕ್ಕೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾದ ಅವಶ್ಯಕತೆಯನ್ನು ಉಂಟು ಮಾಡುವುದು.

### ಅಂದಾಜುಗಳು ಮತ್ತು ಊಹೆ

ಮುಂದಿನ ಅವಧಿಯ ಕಾಳಜಿಯುಳ್ಳ ಪ್ರಮುಖ ಊಹೆಗಳು ಮತ್ತು ಅಂದಾಜಿನ ಇತರೆ ಪ್ರಮುಖ ಸಂಪನ್ಮೂಲಗಳು ವರದಿಗಾರಿಕೆ ದಿನಾಂಕದಲ್ಲಿ ಅನಿಶ್ಚಿತವಾಗಿದ್ದರೆ, ಮುಂದಿನ ಹಣಕಾಸಿನ ವರ್ಷದ ಒಳಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡುವ ಗುರುತರವಾದ ಅಪಾಯ ಹೊಂದಿರುವವುಗಳನ್ನು ಈ ಕೆಳಗೆ ವಿವರಿಸಿದೆ. ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದಾಗ ಲಭ್ಯವಿರುವ ಮಾನದಂಡಗಳ ಆಧಾರದ ಮೇಲೆ ಕಂಪನಿಯು ತನ್ನ ಊಹೆಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು. ಹಾಲಿಯಿರುವ ಪರಿಸ್ಥಿತಿಗಳು ಮತ್ತು ಮುಂದಿನ ಬೆಳವಣಿಗೆಗಳ ಬಗ್ಗೆಗಿನ ಊಹೆಗಳು, ಮಾರುಕಟ್ಟೆ ಬದಲಾವಣೆಗಳ ಪ್ರಯುಕ್ತ ಅಥವಾ ಕಂಪನಿಯ ನಿಯಂತ್ರಣಕ್ಕೂ ಮೀರಿ ಉಂಟಾಗುವ ಪರಿಸ್ಥಿತಿಗಳ ಕಾರಣದಿಂದ ಬದಲಾಗಬಹುದಾಗಿರುತ್ತದೆ. ಅಂತಹ ಬದಲಾವಣೆಗಳು ಅವು ಉಂಟಾದಾಗ ಊಹೆಗಳಲ್ಲಿ ಪ್ರತಿಬಿಂಬಿತವಾಗುವುವು.

#### (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ ಹಾಗೂ ಅಗೋಚರಿತ ಆಸ್ತಿಗಳ ಉಪಯುಕ್ತತೆ ಜೀವಿತಾವಧಿ:

ವಾಸ್ತವಿಕ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿಯ ಟಿಪ್ಪಣಿ ಇ ಮತ್ತು ಎಫ್ ನಲ್ಲಿ ವಿವರಿಸಿರುವಂತೆ, ಸ್ವತ್ತು , ಸ್ಥಾವರ ಮತ್ತು ಉಪಕರಣ ಮತ್ತು ಅಗೋಚರಿತ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿಗಳನ್ನು ಕಂಪನಿಯು ಪ್ರತಿ ವರದಿಗಾರಿಕೆ ಅವಧಿಯ ಕೊನೆಯಲ್ಲಿ ಪರಿಶೀಲಿಸುವುದು.

#### (ಬಿ) ಹಣಕಾಸೇತರ ಆಸ್ತಿಗಳ ದುರ್ಬಲತೆ:

ಆಸ್ತಿ ಒಂದರ ಅಥವಾ ನಗದು ಸೃಜನತೆ ಘಟಕದ ವಾಹಕ ಮೌಲ್ಯವು ಅದರಿಂದ ಪಡೆಯಬಹುದಾದ ಮೊತ್ತಕ್ಕಿಂತ ಅಧಿಕವಾದಾಗ, ಅಂದರೆ ಅದರ ವಿಲೇವಾರಿಯ ನ್ಯಾಯೋಚಿತ ಮೌಲ್ಯ ಕಳೆದ ಬೆಲೆಯ ಮತ್ತು ಬಳಕೆಯಲ್ಲಿರುವ ಅದರ ಮೌಲ್ಯಕ್ಕಿಂತ ಹೆಚ್ಚಿನದಾಗಿದ್ದಾಗ ದುರ್ಬಲತೆ ಉಂಟಾಗಿರುವುದು. ಇದೇ ರೀತಿಯ ಆಸ್ತಿಗಳಿಗೆ ಯಾವುದೇ ಅನ್ಯ ಪ್ರಭಾವವಿಲ್ಲದೆ ಸ್ವಯಂ ಧೋರಣೆಯಿಂದ ನಡೆಸಿದ ಬದ್ಧವಾದ ಮಾರಾಟಗಳ ವ್ಯವಹಾರಗಳಿಂದ ಲಭ್ಯವಿರುವ ಅಂಕಿ ಅಂಶಗಳ ಅಥವಾ ಆಸ್ತಿಯ ವಿಲೇವಾರಿಗೆ ಅನ್ವಯಿಸಬಹುದಾದ ಮಾರುಕಟ್ಟೆ ಬೆಲೆಗಿಂತ ಕಡಿಮೆ ಹೆಚ್ಚಳ ಬೆಲೆಗಳ ಆಧಾರದ ಮೇಲೆ ವಿಲೇವಾರಿಯ ನ್ಯಾಯೋಚಿತ ಮೌಲ್ಯಕ್ಕಿಂತ ಕಡಿಮೆ ಬೆಲೆಯಲ್ಲಿ ಲೆಕ್ಕಾಚಾರ ಮಾಡಿದೆ. ಬಳಕೆಯಲ್ಲಿನ ಮೌಲ್ಯದ ಲೆಕ್ಕಾಚಾರವು ಡಿಸಿಎಫ್ ಮಾದರಿಯ ಮೇಲೆ ಆಧಾರಿತವಾಗಿರುವುದು. ನಗದು ಹರಿಯುವಿಕೆಗಳು ಮುಂದಿನ ಐದು ವರ್ಷಗಳಿಗೆ ಮಾಡಿದ ಬಜೆಟ್‌ನಿಂದ ಬರುವುದು. ಇದರಲ್ಲಿ ಸಿಜಿಯು ಅನ್ನು ಪರೀಕ್ಷಿಸಿರುವ ಆಸ್ತಿಯ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಕಂಪನಿಯು ಇನ್ನೂ ನಿರ್ಧರಿಸದಿರುವ ಪುನರ್ ರೂಪಿತ ಚಟುವಟಿಕೆಗಳು ಅಥವಾ ಮಹತ್ತರವಾದ ಮುಂದಿನ ಹೂಡಿಕೆಗಳು ಸೇರಿರುವುದಿಲ್ಲ. ಪಡೆಯಬಹುದಾಗಿರುವ ಮೊತ್ತವು ಡಿಸಿಎಫ್ ಮಾದರಿಗೆ ಬಳಸಿರುವ ರಿಯಾಯಿತಿ ದರಕ್ಕೆ ಹಾಗೂ ನಿರೀಕ್ಷಿತ ಮುಂದಿನ ನಗದು ಹರಿವುಗಳಿಗೆ ಮತ್ತು ಊಹೆ ಮಾಡಿದ ಉದ್ದೇಶಗಳಿಗೆ ಬಳಸಿರುವ ವೃದ್ಧಿ ದರಕ್ಕೆ ಒಳಪಡುವುದು.

#### (ಸಿ) ವ್ಯವಸ್ಥೆಗಳು ಮತ್ತು ಸಂಭಾವ್ಯತೆಗಳು:

ವ್ಯವಸ್ಥೆಗಳು ಮತ್ತು ಸಂಭಾವ್ಯತೆಗಳನ್ನು ಮಾನ್ಯ ಮಾಡಲು ಕೈಗೊಂಡಿರುವ ನಿರ್ಧಾರಣೆಗಳನ್ನು ಅನ್ವಯವಾಗುವ ಐಎನ್‌ಡಿ ಎಎಸ್‌ನ ಅನುಸಾರ ಮಾಡಲಾಗಿದೆ. ಹಿಂದಿನ ಘಟನೆಯ ಪರಿಣಾಮವಾಗಿ, ಕಂಪನಿ ಪ್ರಸಕ್ತದಲ್ಲಿನ ಕಾನೂನು ಅಥವಾ ರಚನಾತ್ಮಕ ಹೊಣೆಗಾರಿಕೆ ಹೊಂದಿದ್ದರೆ, ಅದನ್ನು ವಿಶ್ವಾಸನೀಯವಾಗಿ ಅಂದಾಜು ಮಾಡಿರುವುದಾಗಿದ್ದು, ಮತ್ತು ಆರ್ಥಿಕ ಅನುಕೂಲಗಳ ಹೊರಹರಿವನ್ನು ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಬೇಕಾಗಿದ್ದ ಸಂಭವವಿದ್ದಾಗ ವ್ಯವಸ್ಥೆಯನ್ನು ಮಾನ್ಯ ಮಾಡಿದೆ. ಹಣದ ಸಮಯದ ಮೌಲ್ಯ ಪರಿಣಾಮವು ಉಂಟಾದಾಗ ನಿರೀಕ್ಷಿತ ಮುಂದಿನ ನಗದು ಹರಿವುಗಳನ್ನು ಕಳೆಯುವ ಮೂಲಕ ವ್ಯವಸ್ಥೆಗಳನ್ನು ನಿರ್ಧಾರಣೆ ಮಾಡಿದೆ.

ಕಂಪನಿಯು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಮಾನ್ಯ ಮಾಡಿರದ ವಿವಿಧ ಬಂಡವಾಳ ಯೋಜನೆಗಳಿಗೆ ಸಂಬಂಧಪಟ್ಟಂತೆ ಮಹತ್ತರವಾದ ಬಂಡವಾಳ ಬದ್ಧತೆಗಳನ್ನು ಹೊಂದಿರುವುದು. ಸಾಧಾರಣ ಸ್ವರೂಪದ ವ್ಯವಹಾರದಲ್ಲಿ, ವ್ಯಾಜ್ಯದಿಂದ ಮತ್ತು ಕಂಪನಿಯ ಮೇಲಿನ ಇತರೆ ಕ್ಲೇಮುಗಳಿಂದ ಸಂಭಾವ್ಯ ಹೊಣೆಗಾರಿಕೆಗಳು ಉಂಟಾಗುವವು. ಸಾಧಾರಣ ಸ್ವರೂಪದ ವ್ಯವಹಾರದಲ್ಲಿ ಖಾತರಿಗಳನ್ನು ಸಹ ಒದಗಿಸಲಾಗುವುದು. ಕೆಲವು ಹೊಣೆಗಾರಿಕೆಗಳನ್ನು ಲಭ್ಯವಿರುವ ಅಂಶಗಳು ಮತ್ತು ಸಂದರ್ಭಗಳ ಆಧಾರದ ಮೇಲೆ ಆಡಳಿತ ಮಂಡಳಿ ಇತ್ಯರ್ಥಪಡಿಸಿದೆ. ಈ ಹೊಣೆಗಾರಿಕೆಗಳು ಪಾವತಿಯ ಅವಶ್ಯಕತೆ ಹೊಂದಿರುವುದಿಲ್ಲ ಅಥವಾ ವಿಶ್ವಾಸನೀಯವಾಗಿ ಅದನ್ನು ಪ್ರಮಾಣೀಕರಿಸುವುದು ತುಂಬಾ ಕಷ್ಟದಾಯಕ. ಇಂತಹ ಹೊಣೆಗಾರಿಕೆಗಳನ್ನು ಸಂಭವನೀಯ ಹೊಣೆಗಾರಿಕೆಗಳೆಂದು ಪರಿಗಣಿಸಿದೆ ಮತ್ತು ಟಿಪ್ಪಣಿಗಳಲ್ಲಿ ತಿಳಿಸಿದೆ. ಆದರೆ ಅವು ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು ಎಂಬುದಾಗಿ ಬಿಂಬಿತವಾಗಿರುವುದಿಲ್ಲ. ಹಾಗಿದ್ದರೂ, ಕಂಪನಿಯು ಒಳಪಟ್ಟಿರುವ ಕಾನೂನು ಕ್ರಮಾವಳಿಗಳ ಅಂತಿಮ ಫಲಿತಾಂಶಗಳ ಬಗ್ಗೆ ಯಾವುದೇ ಭರವಸೆಯಿರುವುದಿಲ್ಲ. ಅಂತಹ ಸಂಭಾವ್ಯತೆಗಳು ಕಂಪನಿಯ ಹಣಕಾಸಿನ ಸ್ಥಾನಮಾನದ ಮೇಲೆ ಅಥವಾ ಲಾಭದಾಯಕತೆ ಮೇಲೆ ವಾಸ್ತವಿಕ ಪರಿಣಾಮ ಉಂಟುಮಾಡುವುದೆಂದು ನಿರೀಕ್ಷಿಸಿರುವುದಿಲ್ಲ.

### (ಡಿ) ಪ್ರತಿಪಾದಿತ ಸೌಲಭ್ಯ ಯೋಜನೆಗಳು:

ನೌಕರರ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ ಬಗ್ಗೆ ಕಂಪನಿಯ ಬಾಧ್ಯತೆಯ ನಿರ್ಧಾರಣೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮತ್ತು ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಬೇಕಾಗಿರುವ ಮೊತ್ತಗಳ ನಿರ್ಧಾರಣೆಯೂ ಸೇರಿದಂತೆ ಸ್ವತಂತ್ರ ವಿಮಾಗಣನ ಮೌಲ್ಯಮಾಪನ ಮೂಲಕ ಮಾಡಿದೆ. ಹಣದುಬ್ಬರ, ಜ್ಯೇಷ್ಠತೆ, ಬಡ್ತಿ ಮತ್ತು ಇತರೆ ಸಂಬಂಧಪಟ್ಟ ಅಂಶಗಳಾದ ಉದ್ಯೋಗ ಮಾರುಕಟ್ಟೆಯಲ್ಲಿನ ಪೂರೈಕೆ ಮತ್ತು ಬೇಡಿಕೆಗಳ ಅಂಶಗಳನ್ನು ಗಣನೆಗೆ ತೆಗೆದುಕೊಂಡ ನಂತರ ಅಂತಹ ಮೌಲ್ಯಮಾಪನವನ್ನು ಊಹೆಗಳ ಮೇಲೆ ಅವಲಂಬಿತವಾಗಿ ನಿರ್ಧಾರಣೆ ಮಾಡಿದೆ.

ಅಂತಹ ಮೌಲ್ಯಮಾಪನದ ಬಗ್ಗೆ ಮಾಹಿತಿಯನ್ನು ಸ್ವತಂತ್ರ ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ಒದಗಿಸಿದೆ.

ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಟಿಪ್ಪಣಿ 30ರಲ್ಲಿ ಒದಗಿಸಿದೆ.

### (ಇ) ಹಣಕಾಸಿನ ಆಸ್ತಿಗಳ ಮೇಲೆ ನಿರೀಕ್ಷಿತ ಕ್ರೆಡಿಟ್ ನಷ್ಟ (ಚಿಟ್‌ಫಂಡ್ ವ್ಯವಹಾರ)

ಹಣಕಾಸಿನ ಆಸ್ತಿಗಳ ದುರ್ಬಲತೆ ಅವಕಾಶವು ವಸೂಲಿಯ ಸಾಧ್ಯನೀಯ ಸುಸ್ತಿ ಮತ್ತು ನಿರೀಕ್ಷಿತ ಸಮಯದ ಅಪಾಯದ ಊಹೆಯ ಮೇಲೆ ಆಧಾರಿತವಾಗಿರುವುದು. ವಸೂಲಿಗಳ ಬಗ್ಗೆ ಕಂಪನಿಯ ಇತಿಹಾಸ, ಗ್ರಾಹಕರು ಸಾಲ ಪಡೆಯುವಿಕೆ ಅರ್ಹತೆ, ಹಾಲಿಯಿರುವ ಮಾರುಕಟ್ಟೆ ಪರಿಸ್ಥಿತಿಗಳ ಹಾಗೂ ಪ್ರತಿ ವರದಿಗಾರಿಕೆ ಅವಧಿ ಕೊನೆಯಲ್ಲಿ ಮುಂಗಾಣ್ಕೆ ಅಂದಾಜುಗಳ ಆಧಾರದ ಮೇಲೆ ಕಂಪನಿಯು ಈ ಊಹೆಗಳನ್ನು ಮಾಡುವಲ್ಲಿ ಮತ್ತು ನಿರೀಕ್ಷಿತ ಕ್ರೆಡಿಟ್ ನಷ್ಟದ ಲೆಕ್ಕಾಚಾರಕ್ಕೆ ಮಾಹಿತಿ ಆಯ್ಕೆ ಮಾಡಲು ತೀರ್ಪುಗಳನ್ನು ಬಳಸುವುದು.

### ಎಫ್) ಗುತ್ತಿಗೆಗಳು:

| | -ಹಾಸನ ಮಂಗಳೂರು ರೈಲ್ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್ | 89.28 | (192.72) |
| | | | |
| | ಪ್ರತಿ ಪಾದಿತ ಸೌಲಭ್ಯ ಯೋಜನೆಗಳ ಬಗ್ಗೆ ಮರು-ಮಾಪನ ಲಾಭಗಳು (ನಷ್ಟಗಳು) | **1.16** | **26.61** |
| | **ಒಟ್ಟು ಇತರೆ ಸಮಗ್ರ ಆದಾಯ** | **1,190.90** | **7.60** |

| | | | |
|---|---|---|---|
| 32 | ಷೇರು ಒಂದರ ಗಳಿಕೆಗಳು | | |
| | **ವಿವರಗಳು** | **31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ** | **31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ** |
| | ಕಂಪನಿಯ ಮುಂದುವರಿಯುತ್ತಿರುವ ಕಾರ್ಯಾಚರಣೆಗಳ ಈಕ್ವಿಟಿದಾರರುಗಳಿಗೆ ಅನ್ವಯಿಸಬಹುದಾದ ಲಾಭ | 10,382.38 | 6,089.29 |
| | ಸ್ಥಗಿತಗೊಂಡಿರುವ ಕಾರ್ಯಾಚರಣೆಗಳು | 3.98 | (2.11) |
| | **ಒಟ್ಟು** | **10,386.36** | **6,087.18** |
| | ಮೂಲ ಮತ್ತು ದ್ರವೀಕೃತ ಇಪಿಎಸ್‌ಗೆ ಬಳಸಿರುವ ಷೇರುಗಳ ಸಂಖ್ಯೆ | 4,273,477 | 4,273,477 |
| | ಷೇರುಗಳ ಮುಖ ಬೆಲೆ (ರೂ.) | 100.00 | 100.00 |
| | ಮುಂದುವರಿಯುತ್ತಿರುವ ಕಾರ್ಯಾಚರಣೆಗಳ ಸಂಬಂಧದ ಷೇರು ಒಂದರ ಗಳಿಕೆಗಳು | | |
| | ಮೂಲ ಮತ್ತು ದ್ರವೀಕೃತ (ರೂ.) | 242.95 | 142.49 |
| | ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಲ್ಲಿನ ಷೇರು ಒಂದರ ಗಳಿಕೆಗಳು | | |
| | ಮೂಲ ಮತ್ತು ದ್ರವೀಕೃತ (ರೂ.) | 0.09 | (0.05) |
| | ಮುಂದುವರಿಯುತ್ತಿರುವ ಮತ್ತು ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಲ್ಲಿ ಷೇರು ಒಂದರ ಗಳಿಕೆಗಳು | | |
| | ಮೂಲ ಮತ್ತು ದ್ರವೀಕೃತ (ರೂ.) | 243.04 | 142.44 |

| | | | |
|---|---|---|---|
| 33 | ಪಾವತಿ ಮಾಡಿರುವ ಲಾಭಾಂಶ | | |
| | **ಈಕ್ವಿಟಿ ಷೇರುಗಳ ಬಗ್ಗೆ ಪಾವತಿ ಮಾಡಿರುವ ನಗದು ಲಾಭಾಂಶಗಳು:** | **31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷ** | **31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷ** |
| | ಕೊನೆಗೊಂಡ ವರ್ಷದ ಲಾಭಾಂಶ | **31ನೇ ಮಾರ್ಚ್ 2023** | **31ನೇ ಮಾರ್ಚ್ 2022** |
| | ಪಾವತಿ ಮಾಡಿದ ಲಾಭಾಂಶ | **1,827.87** | **1,105.19** |

ಮಂಡಳಿಯು ಈ ವರ್ಷದ ತೆರಿಗೆ ಪಾವತಿ ನಂತರದ ಲಾಭದ 30% ನಂತೆ ಲಾಭಾಂಶ ಪಾವತಿಸಲು ಉದ್ದೇಶಿಸಿದೆ. ಇದರಿಂದ ರೂ.3,115.91 ಲಕ್ಷ ಹೊರ ಹರಿವನ್ನು ಹೊಂದುವುದು. 31ನೇ ಮಾರ್ಚ್ 2023: ರೂ.1,827.87 ಲಕ್ಷ ಉದ್ದೇಶಿತ ಲಾಭಾಂಶವು ವಾರ್ಷಿಕ ಮಹಾಸಭೆಯಲ್ಲಿ ಅನುಮೋದನೆಗೆ ಒಳಪಟ್ಟಿರುವುದು ಮತ್ತು 31ನೇ ಮಾರ್ಚ್ 2024ರಂದು ಇದ್ದಂತೆ ಹೊಣೆಗಾರಿಕೆ ಎಂಬುದಾಗಿ ಮಾನ್ಯ ಮಾಡಿರುವುದಿಲ್ಲ.

**34 ನೌಕರರ ಸೌಲಭ್ಯಗಳು**

**ಎ. ಪ್ರತಿಪಾದಿತ ವಂತಿಕೆ ಯೋಜನೆ**

ರೂ.175.13 ಲಕ್ಷಗಳನ್ನು (31ನೇ ಮಾರ್ಚ್ 2023: ರೂ.147.45ಲಕ್ಷ) ಮೊತ್ತವನ್ನು ಖರ್ಚುಗಳು ಎಂಬುದಾಗಿ ಮಾನ್ಯ ಮಾಡಿದೆ ಮತ್ತು ಟಿಪ್ಪಣಿ ಸಂ.24 ''ನೌಕರರ ಸೌಲಭ್ಯಗಳ ಖರ್ಚು'' ರಲ್ಲಿ ಸೇರಿಸಲಾಗಿದೆ.

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಭವಿಷ್ಯ ನಿಧಿ ಮತ್ತು ಇತರೆ ನಿಧಿಗಳಿಗೆ ವಂತಿಗೆ | 175.13 | 147.45 |
| **ಒಟ್ಟು** | **175.13** | **147.45** |

**ಬಿ. ಪ್ರತಿಪಾದಿತ ಸೌಲಭ್ಯ ಯೋಜನೆಗಳು ಮತ್ತು ಇತರೆ ದೀರ್ಘಾವಧಿ ಸೌಲಭ್ಯಗಳು:**

**ಗ್ರ್ಯಾಚ್ಯುಟಿ (ಹಣ ಒದಗಿಸಿರುವುದು)**

ಕಂಪನಿಯು ತನ್ನ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಪ್ರತಿಪಾದಿತ ಸೌಲಭ್ಯ ಯೋಜನೆಯ ನಿವ್ವಳ ಹೊಣೆಗಾರಿಕೆಯನ್ನು ಆಸ್ತಿ ಅಥವಾ ಹೊಣೆಗಾರಿಕೆ ಎಂಬುದಾಗಿ ಪರಿಗಣಿಸಿದೆ. ನಿವ್ವಳ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ/(ಆಸ್ತಿ)ಯ ಮರು ಮಾಪನಗಳ ಮೂಲಕ ಲಾಭಗಳು ಮತ್ತು ನಷ್ಟಗಳನ್ನು ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿದೆ ಮತ್ತು ಮುಂದಿನ ಅವಧಿಗಳಲ್ಲಿ ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಣ ಮಾಡಿರುವುದಿಲ್ಲ. ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆಗಳ ಮಾಪನಕ್ಕೆ ಬಳಸಿರುವ ರಿಯಾಯಿತಿ ದರ ಅನ್ವಯಿಸುವ ಮೂಲಕ ಲೆಕ್ಕಾಚಾರ ಮಾಡಿದ ಗಳಿಕೆಗಳ ಹೆಚ್ಚಳವಾಗಿ, ಯೋಜನೆ ಆಸ್ತಿಗಳ ವಿಭಾಗದ ವಾಸ್ತವಿಕ ಗಳಿಕೆಯನ್ನು ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿದೆ.

**ರಜೆ ನಗದೀಕರಣ (ಹಣ ಒದಗಿಸಿಲ್ಲದ್ದು)**

ಕಂಪನಿಯು ರಜೆ ನಗದೀಕರಣದ ಬಗ್ಗೆ ನೀತಿಯನ್ನು ಹೊಂದಿದೆ. ಇವು ಸಂಚಯನ ಮತ್ತು ಸಂಚಯರಹಿತವಾಗಿರುವವು. ಸಂಚಯನವಾಗುವ ರಜೆ ನಗದೀಕರಣದ ನಿರೀಕ್ಷಿತ ವೆಚ್ಚವನ್ನು ಸ್ಥಿತಿ ವಿವರಣಾ ದಿನಾಂಕದಲ್ಲಿ ಸಂಚಯನವಾಗಿರುವ ಬಳಸದಿರುವ ಅರ್ಹತೆಯ ಫಲಿತಾಂಶವಾಗಿ ಪಾವತಿ ಮಾಡಬೇಕಾದ ನಿರೀಕ್ಷೆಯುಳ್ಳ/ಪಡೆದಿರುವ ಹೆಚ್ಚುವರಿ ಮೊತ್ತದ ಮೇಲೆ ಅಂದಾಜಿಸಿದ ಯೂನಿಟ್ ಕ್ರೆಡಿಟ್ ವಿಧಾನ ಬಳಸಿ ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಸ್ವತಂತ್ರ ವಿಮಾಗಣಕರಿಂದ ಮಾಡಿರುವ ವಿಮಾಗಣನ ಮೌಲ್ಯಮಾಪನದ ಮೂಲಕ ಸಂಚಯನವಾದ ರಜೆ ನಗದೀಕರಣದ ನಿರೀಕ್ಷಿತ ವೆಚ್ಚವನ್ನು ನಿರ್ಧರಣೆ ಮಾಡಿದೆ. ಸಂಚಯನವಾಗಿರದ ಪರಿಹಾರಿತ ಗೈರು ಹಾಜರಿಗಳ ಬಗ್ಗೆಗಿನ ಖರ್ಚನ್ನು ಗೈರು ಹಾಜರಿಗಳು ಉಂಟಾದ ಅವಧಿಯಲ್ಲಿ ಮಾನ್ಯ ಮಾಡಿದೆ.

**ಮರಣ ಪರಿಹಾರ ನಿಧಿ (ಹಣ ಒದಗಿಸಿಲ್ಲದ್ದು)**

ಕಂಪನಿಯು ತನ್ನ ನೌಕರರುಗಳಿಗೆ ಮರಣ ಪರಿಹಾರ ನಿಧಿಯ ಬಗ್ಗೆ ನೀತಿ ಒಂದನ್ನು ಹೊಂದಿದೆ. ಎಲ್ಲಾ ಸದಸ್ಯರು ಮರಣ ಅಪಾಯಕ್ಕೆ ಒಳಪಟ್ಟಿರುವರು. ಮರಣ ಹೊಂದಿದ ಪಕ್ಷದಲ್ಲಿ, ಫಲಾನುಭವಿಯು ಕಂಪನಿಯ ವಂತಿಗೆ ಸೇರಿದಂತೆ ಕೆಲವೊಂದು ನಿಗದಿತ ಮೊತ್ತ ಪಡೆಯುವರು. ಸಂಚಯನವಾದ ಮರಣ ಪರಿಹಾರ ಹೊಣೆಗಾರಿಕೆಯ ನಿರೀಕ್ಷಿತ ವೆಚ್ಚವನ್ನು ಪ್ರತಿ ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಯೋಜಿತ ಯೂನಿಟ್ ಕ್ರೆಡಿಟ್ ವಿಧಾನ ಬಳಸಿ ಸ್ವತಂತ್ರ ವಿಮಾಗಣಕರು ಮಾಡಿದ ವಿಮಾಗಣನ ಮೌಲ್ಯಮಾಪನದ ಮೂಲಕ ನಿರ್ಧರಣೆ ಮಾಡಿದೆ.

| i. | ಐಎನ್‌ಡಿ ಎಎಸ್ 19ರ ಅನ್ವಯ ನೌಕರರ ಸೌಲಭ್ಯಗಳ ಪ್ರಕಟಣೆ | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024 ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | **ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ-ಗ್ರಾಚ್ಯುಟಿ** | (47.78) | (63.21) |
| | ಪರಿಹಾರಿತ ಗೈರು ಹಾಜರಿಗಳಿಗೆ ಹೊಣೆಗಾರಿಕೆ | 477.05 | 474.69 |
| | ಮರಣ ಪರಿಹಾರ ನಿಧಿಗೆ (ಡಿಆರ್‌ಎಫ್) ಹೊಣೆಗಾರಿಕೆ | 94.18 | 93.13 |
| | ಒಟ್ಟು ನೌಕರರ ಸೌಲಭ್ಯ ಹೊಣೆಗಾರಿಕೆಗಳು | **523.45** | **504.61** |
| | **ಚಾಲ್ತಿಯೇತರ** | 275.25 | 289.28 |
| | **ಚಾಲ್ತಿ** | 248.20 | 215.33 |

**ii.** ಸ್ಥಿತಿ ವಿವರಣೆ ಪಟ್ಟಿಯಲ್ಲಿ ಮಾನ್ಯ ಮಾಡಿರುವ ಮೊತ್ತ - ವಿಮಾಗಣನೆ ಮೌಲ್ಯಮಾಪನದ ಅನ್ವಯ

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ | |
|---|---|---|---|---|---|---|
| | **2023-24** | **2022-23** | **2023-24** | **2022-23** | **2023-24** | **2022-23** |
| ವರ್ಷದ ಕೊನೆಯಲ್ಲಿದ್ದ ಹೊಣೆಗಾರಿಕೆಯ ಪ್ರಸಕ್ತ ಮೌಲ್ಯ | 662.00 | 793.85 | 477.05 | 474.69 | 94.18 | 93.13 |
| ವರ್ಷದ ಕೊನೆಯಲ್ಲಿದ್ದ ಯೋಜನೆ ಆಸ್ತಿಗಳ ನ್ಯಾಯೋಚಿತ ಮೌಲ್ಯ | 709.78 | 857.06 | - | - | - | - |
| ನಿಧಿಗಳ ಸ್ಥಿತಿಗತಿ | 47.78 | 63.21 | - | - | - | - |
| ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗಣನೆ ಮಾಡಿರುವ ಆಸ್ತಿ / (ಹೊಣೆಗಾರಿಕೆಗಳು) | 47.78 | 63.21 | (477.05) | (474.69) | (94.18) | (93.13) |

**iii.** ನಿವ್ವಳ ಪ್ರತಿಪಾದಿತ ಹೊಣೆಗಾರಿಕೆಯ ಸಮನ್ವಯತೆ - ಹೊಣೆಗಾರಿಕೆಯ ಪ್ರಸಕ್ತ ಮೌಲ್ಯದಲ್ಲಿನ ಬದಲಾವಣೆ

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿ-ಪ್ರತಿಪಾದಿತ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ | |
|---|---|---|---|---|---|---|
| | **2023-24** | **2022-23** | **2023-24** | **2022-23** | **2023-24** | **2022-23** |
| ವರ್ಷದ ಆರಂಭದಲ್ಲಿದ್ದ ಹೊಣೆಗಾರಿಕೆಯ ಪ್ರಸಕ್ತ ಮೌಲ್ಯ | 793.85 | 1,016.28 | 474.69 | 650.48 | 93.13 | 104.36 |
| ಬಡ್ಡಿ ವೆಚ್ಚ | 50.39 | 54.33 | - | - | 6.31 | 6.86 |
| ಚಾಲ್ತಿ ಸೇವಾ ವೆಚ್ಚ | 24.65 | 26.50 | 133.21 | 70.66 | 6.81 | 6.73 |
| ಪಾವತಿಸಿದ ಸೌಲಭ್ಯಗಳು | (209.02) | (291.28) | (130.85) | (246.45) | (10.63) | (20.95) |
| ಇತರೆ ಸಮಗ್ರ ಆದಾಯದ ವಿವರದಲ್ಲಿ ಮಾನ್ಯ ಮಾಡಿರುವ ಹೊಣೆಗಾರಿಕೆ ಮೇಲಿನ ವಿಮಾಗಣನ ನಷ್ಟ/(ಲಾಭ) | 2.13 | (11.98) | - | - | (1.44) | (3.87) |
| **ವರ್ಷದ ಕೊನೆಯಲ್ಲಿರುವ ಶಿಲ್ಕು** | **662.00** | **793.85** | **477.05** | **474.69** | **94.18** | **93.13** |

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**iv. ಯೋಜನೆ ಆಸ್ತಿಗಳ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ**

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | |
|---|---|---|
| | **2023-24** | **2022-23** |
| ವರ್ಷದ ಆರಂಭದಲ್ಲಿ ಯೋಜನಾ ಆಸ್ತಿಗಳ ನ್ಯಾಯೋಚಿತ ಮೌಲ್ಯ | 857.06 | 1,007.05 |
| ಬಡ್ಡಿ ವೆಚ್ಚ | - | - |
| ಉದ್ಯೋಗದಾತರ ವಂತಿಗೆ | 4.70 | 74.45 |
| ಸೌಲಭ್ಯಗಳ ಪಾವತಿ | (209.02) | (291.28) |
| **ಯೋಜನೆ ಆಸ್ತಿಗಳ ಮೇಲಿನ ಗಳಿಕೆ ಯೋಜನೆ ಆಸ್ತಿಗಳ ಮೇಲಿನ ವಾಸ್ತವಿಕ ಗಳಿಗೆ ಹೊರತಾಗಿ** | 55.19 | 56.08 |
| ಹೊಣೆಗಾರಿಕೆ ಮೇಲಿನ ವಿಮಾಗಣನ ಲಾಭ/(ನಷ್ಟ) | 1.85 | 10.76 |
| **ವರ್ಷದ ಕೊನೆಯಲ್ಲಿ ಇದ್ದಂತೆ ಶಿಲ್ಕು** | **709.78** | **857.06** |

**v. ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿರುವ ಖರ್ಚು**

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ | |
|---|---|---|---|---|---|---|
| | **2023-24** | **2022-23** | **2023-24** | **2022-23** | **2023-24** | **2022-23** |
| ಚಾಲ್ತಿ ಸೇವಾ ವೆಚ್ಚ | 24.65 | 26.50 | 133.21 | 70.66 | 6.81 | 6.73 |
| ಹಿಂದಿನ ಸೇವಾ ವೆಚ್ಚ | - | - | - | - | - | - |
| ಹೊಣೆಗಾರಿಕೆಯ ಮರು ಮಾಪನ | - | - | - | - | - | - |
| ನಿವ್ವಳ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆಗಳ ಮೇಲಿನ ನಿವ್ವಳ ಬಡ್ಡಿ | (4.80) | (1.75) | - | - | 6.31 | 6.86 |
| **ತೆರಿಗೆಗೆ ಮುನ್ನ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿರುವ ಖರ್ಚುಗಳು** | 19.85 | 24.75 | 133.21 | 70.66 | 13.12 | 13.59 |

**vi. ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವ ಮರು ಮಾಪನ**

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿಗಳು-ಪ್ರತಿಪಾದಿತ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ | |
|---|---|---|---|---|---|---|
| | **2023-24** | **2022-23** | **2023-24** | **2022-23** | **2023-24** | **2022-23** |
| ಹೊಣೆಗಾರಿಕೆಯಲ್ಲಿನ ವಿಮಾಗಣನ ನಷ್ಟ/(ಲಾಭ) | 0.28 | (22.74) | | | (1.44) | (3.87) |

**vii. ಆಸ್ತಿಗಳು**

ಗ್ರ್ಯಾಚ್ಯುಟಿ ಆಸ್ತಿಗಳನ್ನು ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುವುದು.

ಗ್ರ್ಯಾಚ್ಯುಟಿಯ ಒಟ್ಟು ಯೋಜನೆ ಆಸ್ತಿಗಳ ನ್ಯಾಯೋಚಿತ ಮೌಲ್ಯದ ಯೋಜನೆ ಆಸ್ತಿಗಳ ಪ್ರಮುಖ ಪ್ರವರ್ಗಗಳು ಕೆಳಕಂಡಂತಿರುವುದು:

| ವಿವರಗಳು | 2023-24 | 2022-23 |
|---|---|---|
| | ಹೊಣೆಗಾರಿಕೆಯ ಪ್ರಸಕ್ತ ಮೌಲ್ಯದ (%) | |
| ಹಣ ಒದಗಿಸುವಿಕೆ ಅನುಪಾತ | 108.00% | 107.20% |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**viii. ಊಹೆಗಳು:**

ಪ್ರತಿಪಾದಿತ ಸೌಲಭ್ಯ ಯೋಜನೆಗಳ ಯೋಜನಾ ಆಸ್ತಿಗಳು ಮತ್ತು ಯೋಜನಾ ಹೊಣೆಗಾರಿಕೆಗಳು ಹಾಗೂ ನಿವೃತ್ತಿ ನಂತರದ ಸೌಲಭ್ಯಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಅವುಗಳ ನ್ಯಾಯೋಚಿತ ಮೌಲ್ಯದಲ್ಲಿ ನಿರೂಪಿಸುವ ಧ್ಯೇಯದಿಂದ ಐಎನ್‌ಡಿ ಎಎಸ್ 19ರ ಅಡಿಯಲ್ಲಿ ಊಹೆಗಳನ್ನು ಮೌಲ್ಯಮಾಪನ ದಿನಾಂಕದಲ್ಲಿದ್ದ ಮಾರುಕಟ್ಟೆ ಸ್ಥಿತಿಗಳ ಬಗ್ಗೆ ಗಮನಹರಿಸಿ ಮಾಡಲಾಗಿದೆ. ಮಹತ್ತರವಾದ ವಿಮಾಗಣನ ಊಹೆಗಳು ಈ ಕೆಳಕಂಡಂತಿರುವುದು:

| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿಗಳು-ಪ್ರತಿಪಾದಿತ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ-ಪ್ರತಿಪಾದಿತ ವಂತಿಗೆ ಯೋಜನೆ | |
|---|---|---|---|---|---|---|
| | 2023-24 | 2022-23 | 2023-24 | 2022-23 | 2023-24 | 2022-23 |
| ರಿಯಾಯಿತಿ ದರ | 7.19% | 7.31% | 7.19% | 7.31% | 7.19% | 7.31% |
| ಸಂಬಳ ಹೆಚ್ಚಳ ದರ | 7.00% | 7.00% | 0.00% | 0.00% | 0.00% | 0.00% |
| ಆಸ್ತಿಗಳ ಮೇಲಿನ ನಿರೀಕ್ಷಿತ ಗಳಿಕೆ | 7.31% | 6.24% | 0.00% | 0.00% | 0.00% | 0.00% |
| ಸವಕಳಿ ದರ | 10.00% | 10.00% | 10.00% | 10.00% | 1.00% | 1.00% |
| ಉದ್ಯೋಗದ ಅವಧಿಯಲ್ಲಿ ಮರಣದ ಪ್ರಮಾಣ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ | ಮರಣ ಪ್ರಮಾಣ ಭಾರತೀಯರ ಭರವಸೆಯುಳ್ಳ ಜೀವನದ ಮರಣ ಪ್ರಮಾಣ (2012-14) ಅಂತಿಮ |

**ix. ಸೂಕ್ಷ್ಮತೆ ವಿಶ್ಲೇಷಣೆ**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
|---|---|---|---|---|
| | ಹೆಚ್ಚಳ | ಇಳಿಕೆ | ಹೆಚ್ಚಳ | ಇಳಿಕೆ |
| **ಗ್ರ್ಯಾಚ್ಯುಟಿ** | | | | |
| ರಿಯಾಯಿತಿ ದರ (100 bps ಚಲನೆ) | (16.65) | 17.81 | (19.61) | 20.99 |
| ಸಂಬಳ ಹೆಚ್ಚಳ ದರ (100 bps ಚಲನೆ) | 11.72 | (11.76) | 15.53 | (15.63) |
| ಸವಕಳಿ ದರ (100 bps ಚಲನೆ) | 0.13 | (0.17) | (0.09) | 0.09 |
| **ಪರಿಹಾರಿತ ಗೈರುಹಾಜರಿಗಳು** | - | - | - | - |
| ರಿಯಾಯಿತಿ ದರ (100 bps ಚಲನೆ) | (20.39) | 22.09 | (20.77) | 22.52 |
| ಸಂಬಳ ಹೆಚ್ಚಳ ದರ (100 bps ಚಲನೆ) | 20.88 | (19.62) | 21.50 | (20.92) |
| ಸವಕಳಿ ದರ (100 bps ಚಲನೆ) | (0.91) | 0.98 | (0.88) | 0.95 |
| **ಮರಣ ಪರಿಹಾರ ನಿಧಿ** | - | - | - | - |
| ರಿಯಾಯಿತಿ ದರ (100 bps ಚಲನೆ) | (2.36) | 2.54 | (2.12) | 2.27 |
| ಸಂಬಳ ಹೆಚ್ಚಳ ದರ (100 bps ಚಲನೆ) | 2.81 | (2.65) | 2.32 | (2.43) |
| ಸವಕಳಿ ದರ (100 bps ಚಲನೆ) | 0.70 | (0.74) | 0.58 | (0.61) |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| ಪ್ರತಿಪಾದಿತ ಸೌಲಭ್ಯ ಯೋಜನೆಗೆ ನಿರೀಕ್ಷಿತ ಮುಂದಿನ ಸೌಲಭ್ಯ ಪಾವತಿಗಳು ಕೆಳಕಂಡಂತಿರುವುದು | | | | | | |
|---|---|---|---|---|---|---|
| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಪರಿಹಾರಿತ ಗೈರುಹಾಜರಿ ವಂತಿಗೆ ಯೋಜನೆ | | ಮರಣ ಪರಿಹಾರ ನಿಧಿ | |
| | **2023-24** | **2022-23** | **2023-24** | **2022-23** | **2023-24** | **2022-23** |
| ಗ್ರ್ಯಾಚ್ಯುಟಿ | | | | | | |
| ಮುಂದಿನ 12 ತಿಂಗಳ ಒಳಗೆ | 261.66 | 232.57 | 169.90 | 136.78 | 39.71 | 29.30 |
| 2 ರಿಂದ 5 ವರ್ಷಗಳ ನಡುವೆ | 290.41 | 479.39 | 237.09 | 297.84 | 37.23 | 55.22 |
| 5 ವರ್ಷಗಳಿಗೂ ಹೆಚ್ಚು | 273.32 | 278.04 | 284.89 | 266.64 | 40.95 | 29.79 |
| **ಒಟ್ಟು ನಿರೀಕ್ಷಿತ ಪಾವತಿಗಳು** | **825.39** | **990.00** | **691.88** | **701.26** | **117.89** | **114.31** |

| ಪ್ರತಿಪಾದಿತ ಯೋಜನೆ ಹೊಣೆಗಾರಿಕೆಯ ಪರಿಭಾವಿತ ಸರಾಸರಿ ಕಾಲಾವಧಿ (ರಿಯಾಯಿತಿ ಮಾಡಿದ ನಗದು ಹರಿಯುವಿಕೆಗಳ ಆಧಾರದಲ್ಲಿ) | | | | |
|---|---|---|---|---|
| ವಿವರಗಳು | ಗ್ರ್ಯಾಚ್ಯುಟಿ-ಪ್ರತಿಪಾದಿತ ಸೌಲಭ್ಯ ಯೋಜನೆ | | ಮರಣ ಪರಿಹಾರ ನಿಧಿ- ಪ್ರತಿಪಾದಿತ ವಂತಿಗೆ ಯೋಜನೆ | |
| | **2023-24** | **2022-23** | **2023-24** | **2022-23** |
| ಗ್ರ್ಯಾಚ್ಯುಟಿ | 5.52 | 5.86 | 5.52 | 5.86 |

### ಅಪಾಯಕ್ಕೆ ಒಳಪಡಿಸುವಿಕೆಯ ಬಗ್ಗೆ ವಿವರ

ಮೌಲ್ಯಮಾಪನವನ್ನು ಪೂರ್ವ ನಿರ್ಧರಿತ ಊಹೆಗಳ ಕೆಲವೊಂದು ಮೂಲ ಆಧಾರದ ಮೇಲೆ ಮಾಡಲಾಗಿದೆ. ಇದು ಕಾಲಾಂತರದಲ್ಲಿ ವ್ಯತ್ಯಾಸವಾಗಬಹುದಾಗಿರುತ್ತದೆ. ಹಾಗಾಗಿ ಮೇಲೆ ತಿಳಿಸಿರುವ ಸೌಲಭ್ಯಗಳನ್ನು ಒದಗಿಸುವಲ್ಲಿ ಕಂಪನಿಯು ವಿವಿಧ ಅಪಾಯಗಳಿಗೆ ಒಳಪಡುವುದು. ಅವುಗಳು ಈ ಕೆಳಕಂಡಂತಿರುವವು:

| | |
|---|---|
| ಬಡ್ಡಿ ದರದ ಅಪಾಯ | ಯೋಜನೆಯು ಬಡ್ಡಿದರಗಳಲ್ಲಿ ಇಳಿಕೆಯಾಗುವ ಅಪಾಯಕ್ಕೆ ಕಂಪನಿಯನ್ನು ಒಳಪಡಿಸುವುದು. ಬಡ್ಡಿದರಗಳು ಕಡಿಮೆಯಾಗುವರಿಂದ ಮೇಲಿನ ಸೌಲಭ್ಯ ಒದಗಿಸುವ ಅಂತಿಮ ವೆಚ್ಚದಲ್ಲಿ ಹೆಚ್ಚಳ ಉಂಟಾಗುತ್ತದೆ. ಇದರಿಂದ ಹೊಣೆಗಾರಿಕೆ ಮೌಲ್ಯ ಹೆಚ್ಚಳವಾಗುತ್ತದೆ (ಹಣಕಾಸಿನ ಹೇಳಿಕೆಯಲ್ಲಿ ತೋರಿಸಿರುವಂತೆ) |
| ದ್ರವೀಕರಣ ಅಪಾಯ | ಇದು ಕಂಪನಿಯು ಅಲ್ಪಾವಧಿ ಸೌಲಭ್ಯ ಪಾವತಿ ಮಾಡಲು ಆಗದ ಅಪಾಯವಾಗಿದೆ. ಹೊಣೆಗಾರಿಕೆ ಈಡೇರಿಸಲು ಸಾಕಷ್ಟು ನಗದು/ನಗದು ಸಮಾನತೆಗಳು ಲಭ್ಯವಿಲ್ಲದಿರುವುದರಿಂದ ಅಥವಾ ಸಕಾಲದಲ್ಲಿ ಮಾರಾಟ ಮಾಡಲಾಗದ ದ್ರವೀಕೃತ ಆಸ್ತಿಗಳನ್ನು ಹೊಂದಿರುವ ಪ್ರಯುಕ್ತ ಇದು ಉಂಟಾಗುತ್ತದೆ. |
| ಸಂಬಳ ಹೆಚ್ಚಳ ಅಪಾಯ | ಮೇಲೆ ತಿಳಿಸಿರುವ ಸೌಲಭ್ಯ ಯೋಜನೆಯ ಪ್ರಸಕ್ತದ ಮೌಲ್ಯವನ್ನು ಮುಂದಿನ ದಿನಗಳಲ್ಲಿ ಯೋಜನೆಯಲ್ಲಿ ಪಾಲ್ಗೊಳ್ಳುವವರ ಸಂಬಳ ಹೆಚ್ಚಳ ದರದ ಊಹೆಯೊಡನೆ ಲೆಕ್ಕಾಚಾರ ಮಾಡಲಾಗಿದೆ. ಹೊಣೆಗಾರಿಕೆಯ ಪ್ರಸಕ್ತದ ಮೌಲ್ಯ ನಿರ್ಧರಣೆ ಮಾಡಲು ಬಳಸಿರುವ ಸಂಬಳದಲ್ಲಿ ಹೆಚ್ಚಳವಾದ ದರದಿಂದ ಯೋಜನೆಗೆ ಒಳಪಡುವವರಿಗೆ ಮುಂದಿನ ದಿನಗಳಲ್ಲಿ ಸಂಬಳ ಹೆಚ್ಚಳ ದರದಲ್ಲಿ ಬದಲಾವಣೆ ಮಾಡಿದರೆ ಅದರಿಂದ ಯೋಜನೆಯ ಹೊಣೆಗಾರಿಕೆ ಮೇಲೆ ಹೆಚ್ಚು ಹೊರೆ ಬೀಳುತ್ತದೆ. |
| ಜನಸಂಖ್ಯೆ ಅಪಾಯ | ಕಂಪನಿಯ ಹೊಣೆಗಾರಿಕೆಯ ಬಗ್ಗೆ ಮೌಲ್ಯಮಾಪನ ಮಾಡುವಾಗ ಕೆಲವೊಂದು ಮರಣ ಪ್ರಮಾಣ ಮತ್ತು ಕ್ಷೀಣತೆ ಊಹೆಗಳನ್ನು ಬಳಸಿರುತ್ತದೆ. ಆದರೆ ಊಹೆಗೆ ಹೋಲಿಸಿದರೆ ವಾಸ್ತವಿಕ ಅನುಭವವು ತೀರಾ ಬಿಗಡಾಯಿಸಿದ ಅಪಾಯಕ್ಕೆ ಕಂಪನಿ ಒಳಗಾಗಿರುತ್ತದೆ. |
| ನಿಯಂತ್ರಕ ಅಪಾಯ | ಗ್ರ್ಯಾಚ್ಯುಟಿ ಸೌಲಭ್ಯಗಳನ್ನು ಗ್ರ್ಯಾಚ್ಯುಟಿ ಪಾವತಿ ಕಾಯ್ದೆ, 1972ರ (ಕಾಲಕಾಲಕ್ಕೆ ತಿದ್ದುಪಡಿಯಾದಂತೆ) ಅಗತ್ಯತೆ ಅನುಸಾರ ಪಾವತಿ ಮಾಡಲಾಗುತ್ತದೆ. ಹೆಚ್ಚಿನ ಪ್ರಮಾಣದ ಗ್ರ್ಯಾಚ್ಯುಟಿ ಪಾವತಿ ಮಾಡಬೇಕಾಗುವಂತೆ ನಿಬಂಧನೆಗಳ ಬದಲಾವಣೆಯಾಗುವ ಅಪಾಯಗಳು ಇಲ್ಲಿರುತ್ತವೆ. (ಉದಾಹರಣೆಗೆ, ಗ್ರ್ಯಾಚ್ಯುಟಿಯ ಗರಿಷ್ಠ ಹೊಣೆಗಾರಿಕೆ ರೂ.20 ಲಕ್ಷಗಳಿಗೆ ಹೆಚ್ಚಳವಾಗಿದೆ) |
| ಹೂಡಿಕೆ ಅಪಾಯ | ಯಾವುದೇ ನಿರ್ದಿಷ್ಟ ಹೂಡಿಕೆಯ ಮೇಲೆ ನಿರೀಕ್ಷಿಸಿರುವ ಗಳಿಕೆಗೆ ಸಂಬಂಧಿಸಿದಂತೆ ನಷ್ಟಗಳು ಉಂಟಾಗುವ ಸಂಭವ ಅಥವಾ ಸಾಧ್ಯತೆ ಇರುವುದು. |
| ಆಸ್ತಿ ಹೊಣೆಗಾರಿಕೆ ಹೊಂದಾಣಿಕೆಯಾಗದಿರುವಿಕೆ ಅಥವಾ ಮಾರುಕಟ್ಟೆ ಅಪಾಯ | ಆಸ್ತಿಗಳ ಅವಧಿಗೆ ಹೋಲಿಸಿದರೆ ಹೊಣೆಗಾರಿಕೆ ಅವಧಿ ಹೆಚ್ಚಾಗಿರುವುದು. ಹೀಗಾಗಿ ಬಡ್ಡಿ ದರದಲ್ಲಿ ಕ್ಷೀಣತೆ ಉಂಟಾಗುವ ಮಾರುಕಟ್ಟೆ ಅಪಾಯಗಳಿಗೆ ಕಂಪನಿ ಒಳಗಾಗುತ್ತದೆ. |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**35. ಬಂಡವಾಳ ನಿರ್ವಹಣೆ;**

ಕಂಪನಿಯ ಬಂಡವಾಳ ನಿರ್ವಹಣೆಯು, ಖರ್ಚು ಮತ್ತು ಈಕ್ವಿಟಿ ಶಿಲ್ಕುಗಳನ್ನು ಸಮತೋಲನ ಮಾಡುವ ಮೂಲಕ ಕಂಪನಿಯ ದೀರ್ಘಾವಧಿ ಮತ್ತು ಅಲ್ಪಾವಧಿ ಗುರಿಗಳನ್ನು ಈಡೇರಿಸಲು ಷೇರುದಾರರುಗಳಿಗೆ ಲಾಭದ ಅನುಕೂಲಗಳನ್ನು ಗರಿಷ್ಠ ಪ್ರಮಾಣದಲ್ಲಿ ಒದಗಿಸುವ ಅಪೇಕ್ಷೆ ಹೊಂದಿರುವುದು

ಕಂಪನಿಯು ವಾರ್ಷಿಕ ಮತ್ತು ದೀರ್ಘಾವಧಿ ಕಾರ್ಯಾಚರಣೆ ಯೋಜನೆಗಳು ಮತ್ತು ಚಾತುರ್ಯಕರ ಹೂಡಿಕೆ ಯೋಜನೆಗಳ ಆಧಾರದ ಮೇಲೆ ಬಂಡವಾಳ ಅಗತ್ಯತೆಯ ಮೊತ್ತವನ್ನು ನಿರ್ಧರಣೆ ಮಾಡುವುದು. ಹಣದ ಅಗತ್ಯತೆಗಳನ್ನು ದೀರ್ಘಾವಧಿ ಮತ್ತು ಅಲ್ಪಾವಧಿ ಸಾಲಗಳ ಮೂಲಕ ಪೂರೈಸಲಾಗುವುದು. ಈಕ್ವಿಟಿ ಅನುಪಾತಕ್ಕೆ ಸಾಲ ಮತ್ತು ಕಂಪನಿಯ ಒಟ್ಟಾರೆ ಸಾಲದ ಪಕ್ವತೆ ಆಧಾರದ ಮೇಲೆ ಬಂಡವಾಳ ಸ್ವರೂಪವನ್ನು ಕಂಪನಿ ಉಸ್ತುವಾರಿ ಮಾಡುವುದು.

ಕೆಳಕಂಡ ತಃಖ್ತೆಯು ಕಂಪನಿಯ ಬಂಡವಾಳದ ಸಾರಾಂಶ ತಿಳಿಸುವುದು:

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023 ರಂದು ಇದ್ದಂತೆ |
|---|---|---|
| ಒಟ್ಟು ಈಕ್ವಿಟಿ (ಟಿಪ್ಪಣಿ 13 ಮತ್ತು 14) | 65,993.73 | 56,545.42 |
| ಸಾಲ | | |
| ನಗದು ಸಮಾನಗಳು, ಇತರೆ ಬ್ಯಾಂಕ್ ಶಿಲ್ಕುಗಳು ಸೇರಿದಂತೆ (ಟಿಪ್ಪಣಿ 11 ಮತ್ತು 12) | 41,940.98 | 28,640.05 |
| ನಿವ್ವಳ ಸಾಲ | **(41,940.98)** | **(28,640.05)** |
| **ಒಟ್ಟು ಈಕ್ವಿಟಿ + ನಿವ್ವಳ ಸಾಲ ಏರಿಕೆ ಅನುಪಾತ** | **24,052.75** | **27,905.37** |
| **ಗೇರಿಂಗ್ ಅನುಪಾತ (ನಿವ್ವಳ ಸಾಲದಿಂದ ಬಂಡವಾಳದ ಅನುಪಾತಕ್ಕೆ)** | **-** | **-** |

31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷಗಳ ಅವಧಿಯಲ್ಲಿ ಬಂಡವಾಳ ನಿರ್ವಹಣೆಗೆ ಗುರಿಗಳು, ನೀತಿಗಳು ಅಥವಾ ಪ್ರಕ್ರಿಯೆಗಳಲ್ಲಿ ಯಾವುದೇ ಬದಲಾವಣೆ ಮಾಡಿರುವುದಿಲ್ಲ.

**36 ಹಣಕಾಸಿನ ಅಪಾಯ ನಿರ್ವಹಣೆ**

ಕಂಪನಿಯ ಚಟುವಟಿಕೆಗಳು ಮಾರುಕಟ್ಟೆ ಅಪಾಯ, ದ್ರವೀಕರಣ ಅಪಾಯ ಮತ್ತು ಕ್ರೆಡಿಟ್ ಅಪಾಯಕ್ಕೆ ಒಳಗಾಗುತ್ತವೆ. ಸಂಸ್ಥೆಯು ಒಳಗಾಗುವ ಅಪಾಯಗಳ ಮೂಲಗಳು ಮತ್ತು ಸಂಸ್ಥೆಯು ಹೇಗೆ ಅಂತಹ ಅಪಾಯಗಳನ್ನು ನಿಭಾಯಿಸುವುದು ಮತ್ತು ಇದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಸಂಬಂಧಿತ ಪರಿಣಾಮವೇನು ಎಂಬುದನ್ನು ಈ ಟಿಪ್ಪಣಿ ವಿವರಿಸುತ್ತದೆ.

| ಅಪಾಯ | ಒಳಗಾಗುವಿಕೆ ಉಂಟಾಗುವ ಅಂಶ ಯಾವುದು | ಮಾಪನ |
|---|---|---|
| ಕ್ರೆಡಿಟ್ ಅಪಾಯ | ಇತರೆ ಬ್ಯಾಂಕ್ ಶಿಲ್ಕುಗಳು, ವ್ಯಾಪಾರದಿಂದ ಬರಬೇಕಾಗಿರುವುದು, ಅಮಾರ್ಟೈಸ್ಡ್ ಬೆಲೆಯಲ್ಲಿ ಗಣಿಸಿರುವ ಹೂಡಿಕೆಗಳು, ಸಾಲಗಳು, ಇತರೆ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಖಾತರಿಗಳು | ಅವಧಿ ವಿಶ್ಲೇಷಣೆ ಮತ್ತು ವಸೂಲಾತಿ ನಿರ್ಧರಣೆ |
| ದ್ರವೀಕರಣ ಅಪಾಯ | ಭದ್ರತೆಯಾಗಿ ತೆಗೆದುಕೊಂಡಿರುವ ಇತರೆ ಹಣಕಾಸಿನ ಹೊಣೆಗಾರಿಕೆಗಳು ಮತ್ತು ಪೂರಕ ಭದ್ರತೆಗಳು | ನಗದು ಹರಿಯುವಿಕೆ ಗತಿಯ ಬಗ್ಗೆ ಮುಂದಾಲೋಚನೆ |
| ಮಾರುಕಟ್ಟೆ ಅಪಾಯ-ವಿದೇಶಿ ವಿನಿಮಯ | ಭಾರತೀಯ ರೂಪಾಯಿಯಲ್ಲಿ ಗಣಿಸದೆ ಇರುವುದು ಮಾನ್ಯ ಮಾಡಿದ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು | ಸೂಕ್ಷ್ಮತೆ ವಿಶ್ಲೇಷಣೆ |
| ಮಾರುಟ್ಟೆ ಅಪಾಯ-ಭದ್ರತಾ ದರಗಳು | ಈಕ್ವಿಟಿ ಸೆಕ್ಯುರಿಟೀಸ್‌ನಲ್ಲಿ ಹೂಡಿಕೆ | ಸೂಕ್ಷ್ಮತೆ ವಿಶ್ಲೇಷಣೆ |

i ಸಾಲದ ಅಪಾಯ

ಎದುರು ಪಕ್ಷಕಾರ ತನ್ನ ಒಪ್ಪಂದವಾದ ಹೊಣೆಗಾರಿಕೆಗಳನ್ನು ನಿರ್ವಹಿಸಲು ವಿಫಲವಾದಾಗ ಅದರಿಂದ ಗ್ರೂಪ್‌ಗೆ ಹಣಕಾಸಿನ ನಷ್ಟ ಉಂಟಾಗುತ್ತದೆ. ಸಾಲದ ಅಪಾಯವು ಇದಕ್ಕೆ ಸಂಬಂಧಪಡುತ್ತದೆ. ಗ್ರೂಪ್‌ನ ಅದರ ಕಾರ್ಯಾಚರಣೆ ಚಟುವಟಿಕೆಗಳಿಂದ (ಪ್ರಮುಖವಾಗಿ ವ್ಯಾಪಾರದ ಸಂಬಂಧ ಬರಬೇಕಾದ ಹಣ) ಮತ್ತು ಬ್ಯಾಂಕುಗಳಲ್ಲಿ ಮತ್ತು ಹಣಕಾಸು ಸಂಸ್ಥೆಗಳಲ್ಲಿರುವ ಠೇವಣಿಗಳು, ವಿದೇಶಿ ವಿನಿಮಯ ವ್ಯವಹಾರಗಳು ಮತ್ತು ಇತರೆ ಹಣಕಾಸಿನ ಸಾಧನಗಳು ಸೇರಿದಂತೆ ಅದರ ಹಣಕಾಸಿನ ಚಟುವಟಿಕೆಗಳಿಂದಲೂ ಕೂಡ ಸಾಲದ ಅಪಾಯಕ್ಕೆ ಒಳಗಾಗುತ್ತದೆ.

ಸಾಲದ ಅಪಾಯ ನಿರ್ವಹಣೆ

ಗ್ರೂಪ್‌ನ ಸ್ಥಾಪಿತ ನೀತಿ, ಕ್ರಮಾವಳಿಗಳು, ಮತ್ತು ಗ್ರಾಹಕರ ಸಾಲದ ಅಪಾಯ ನಿರ್ವಹಣೆಗೆ ಸಂಬಂಧಿಸಿದ ನಿಯಂತ್ರಣಕ್ಕೆ ಒಳಪಟ್ಟು, ಪ್ರತಿ ವ್ಯಾಪಾರ ಘಟಕದಿಂದ ಗ್ರಾಹಕರ ಸಾಲದ ಅಪಾಯ ನಿರ್ವಹಣೆ ಮಾಡುವುದು. ಗ್ರೂಪ್ ಬಹುಪಾಲು ತನ್ನ ಗ್ರಾಹಕರುಗಳ ಸಾಲದ ಗುಣಮಟ್ಟವನ್ನು ಮಾಪನ ಮಾಡಲು ಹಣಕಾಸಿನ ಮಾಹಿತಿ ಮತ್ತು ಹಿಂದಿನ ಅನುಭವವನ್ನು ಬಳಸುತ್ತದೆ ಮತ್ತು ಈ ನಿರ್ಧರಣೆ ಅನುಸಾರ ಪ್ರತಿಯೊಬ್ಬರ ಸಾಲದ ಮಿತಿಯನ್ನು ನಿರೂಪಿಸುತ್ತದೆ. ತನ್ನ ಎದುರು ಪಕ್ಷಕಾರರುಗಳ ಬರಬೇಕಾಗಿರುವ ಬಾಕಿಗಳು ಮತ್ತು ಸಾಲದ ಅರ್ಹತೆಗಳನ್ನು ನಿಯತಕಾಲಿಕವಾಗಿ ಗಮನಿಸುವುದು ಮತ್ತು ಒಂದೊಂದೆ ಪ್ರಕರಣವನ್ನು ವಿಶ್ಲೇಷಿಸುವುದು. ಹಿಂದಿನ ಅನುಭವದ ಆಧಾರದ ಮೇಲೆ ನೋಡಿದರೆ ವಾಸ್ತವವಾಗಿ ನಿರೀಕ್ಷಿತ ಸಾಲದ ನಷ್ಟಗಳು ಯಾವುದೂ ಇರುವುದಿಲ್ಲ. ಆದರೂ ಗ್ರೂಪ್ ಪ್ರತಿಯೊಂದು ಪ್ರಕರಣವನ್ನು ಪ್ರತ್ಯೇಕವಾಗಿ ತೆಗೆದುಕೊಂಡು ವ್ಯಾಪಾರದಿಂದ ಬರಬೇಕಾಗಿರುವವುಗಳಲ್ಲಿನ ಕ್ಷೀಣತೆಯನ್ನು ನಿರ್ಧರಣೆ ಮಾಡುವುದು. ಅದರನುಸಾರ ಸಾಲದ ನಷ್ಟಕ್ಕೆ ಅವಕಾಶ ನೀಡುವುದು.

ನಗದು ಮತ್ತು ಬ್ಯಾಂಕ್ ಶಿಲ್ಕುಗಳಲ್ಲಿನ ಕ್ರೆಡಿಟ್ ಅಪಾಯವು ಸೀಮಿತವಾಗಿರುವುದು.ಏಕೆಂದರೆ ಎದುರು ಪಕ್ಷದಾರರು ಮಾನ್ಯತೆ ಪಡೆದ ರೇಟಿಂಗ್ ಏಜೆನ್ಸಿಗಳಿಂದ ಹೆಚ್ಚಿನ ಕ್ರೆಡಿಟ್ ರೇಟಿಂಗ್ ನೀಡಿದ ಬ್ಯಾಂಕ್‌ಗಳಾಗಿರುತ್ತವೆ.

ಗ್ರೂಪ್ ಊಹೆಗಳು, ಹಣಕಾಸಿನ ಆಸ್ತಿಗಳ ದರ್ಜೆಗೆ ಸಂಬಂಧಿಸಿದ ಮಾಹಿತಿ ಮತ್ತು ಅಂಶಗಳ ಆಧಾರದ ಮೇಲೆ ನಿರ್ಣಯಕ್ಕೆ ಬಂದ ಕೆಳಕಂಡ ಪ್ರವರ್ಗಗಳ ಆಧಾರದ ಮೇಲೆ ಹಣಕಾಸಿನ ಆಸ್ತಿಗಳ ಕ್ರೆಡಿಟ್ ಅಪಾಯವನ್ನು ನಿರ್ಧರಣೆ ಮಾಡುತ್ತದೆ ಮತ್ತು ನಿರ್ವಹಣೆ ಮಾಡುತ್ತದೆ.

ವಿವಿಧ ಹಂತಗಳಲ್ಲಿ ಹಣಕಾಸಿನ ಆಸ್ತಿಗಳ ವರ್ಗೀಕರಣ

ಗ್ರೂಪ್ ಹಣಕಾಸಿನ ಆಸ್ತಿಗಳನ್ನು ಈ ಕೆಳಕಂಡ ವೈಲಕ್ಷಣಗಳನ್ನು ಒಳಗೊಂಡ ಮೂರು ಹಂತಗಳನ್ನಾಗಿ ವರ್ಗೀಕರಿಸಿರುವುದು:

ಹಂತ:1: ಇಸಿಎಲ್‌ಗೆ 12 ತಿಂಗಳ ಅವಕಾಶ ಮಾನ್ಯ ಮಾಡಿರುವುದರಿಂದ ಪ್ರಾರಂಭಿಕ ಗಣನೆಯಲ್ಲಿ ಕ್ಷೀಣತೆಯಿರುವುದಿಲ್ಲ ಮತ್ತು ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳ ಇರುವುದಿಲ್ಲ;

ಹಂತ:2: ಪ್ರಾರಂಭಿಕ ಗಣನೆಯು ಇಸಿಎಲ್‌ನ ಜೀವಿತಾವಧಿ ಗಣನೆಯಾಗಿರುವುದರಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಿರುವುದು ಗೋಚರ ಮತ್ತು

ಹಂತ:3: ಕ್ಷೀಣತೆಯ ವಸ್ತುವಿನ ಪುರಾವೆ, ಮತ್ತು ಇದು ದೋಷದಿಂದ ಕೂಡಿರಬಹುದೆಂದು ಪರಿಗಣಿಸಿದೆ ಅಥವಾ ಜೀವಿತಾವಧಿ ಇಸಿಎಲ್ ಮಾನ್ಯ ಮಾಡಿರುವುದರಿಂದ ಕ್ರೆಡಿಟ್ ಕ್ಷೀಣಿಸುವುದು ಎಂದು ಗಣನೆ ಮಾಡಿದೆ.

ಎಲ್ಲಾ ಹಣಕಾಸಿನ ಆಸ್ತಿಗಳು ಅವುಗಳು 30 ದಿನಗಳ ಹಿಂಬಾಕಿ (ಡಿಪಿಡಿ)ಅಥವಾ ವರದಿಗಾರಿಕೆಯ ದಿನಾಂಕದಂದು ಒಂದು ಕಂತು ಸುಸ್ತಿಯಾಗಿರುವಾಗ ಸಾಲದ ಅಪಾಯದಲ್ಲಿ ಮಹತ್ತರವಾದ ಹೆಚ್ಚಳವಾಗುವುದೆಂದು ಭಾವಿಸಲಾಗಿದೆ. ಅದರಂತೆ ಹಂತ 1 ರಿಂದ ಹಂತ 2ಕ್ಕೆ ವರ್ಗಾವಣೆಯಾಗಿವೆ. ಹಂತ 1ಕ್ಕೆ ಇಸಿಎಲ್ ಅವಕಾಶವನ್ನು ಸುಸ್ತಿಯ ಸಂಭವನೀಯತೆ (PD) ಸಮಯದ 12 ತಿಂಗಳ ಅಂಶದ (PIT) ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ. ಹಂತ 2 ಮತ್ತು 3 ಆಸ್ತಿಗಳಿಗೆ ಜೀವಿತಾವಧಿ ಇಸಿಎಲ್ ಅನ್ನು ಸುಸ್ತಿಯ ಜೀವಿತಾವಧಿ ಸಂಭವನೀಯತೆ ಆಧಾರದ ಮೇಲೆ ಲೆಕ್ಕಾಚಾರ ಮಾಡಲಾಗಿದೆ.

ಹಣಕಾಸಿನ ಸಾಧನಗಳ ಮೇಲಿನ ಕ್ಷೀಣತೆಯನ್ನು ಐಎನ್‌ಡಿ ಎಎಸ್ 109 'ಹಣಕಾಸಿನ ಸಾಧನಗಳ' ಅನ್ವಯ ನಿಗದಿಪಡಿಸಿರುವ ಇಸಿಎಲ್ ರೂಪದಲ್ಲಿ ಗ್ರೂಪ್ ಲೆಕ್ಕಾಚಾರ ಮಾಡಲಾಗುವುದು. ಇಸಿಎಲ್ ಮೂರು ಪ್ರಮುಖ ಅಂಶಗಳನ್ನು ಬಳಸುವುದು: ಮುನ್ನಡೆಯ ಬೃಹತ್ ಆರ್ಥಿಕ ಪರಿಸ್ಥಿತಿಗಳನ್ನು ಪರಿಗಣಿಸಿ ಹೊಂದಾಣಿಕೆಯೊಡನೆ ಪಿಡಿ, ಎಲ್‌ಜಿಡಿ (ಸುಸ್ತಿಯಿಂದ ಆದ ನಷ್ಟ) ಮತ್ತು ಇಎಡಿ (ಒಳಗು ಮಾಡಿದ ಸುಸ್ತಿ)

ಸಾಲಗಳು ಹೊರತಾಗಿ ಹಣಕಾಸಿನ ಸಾಧನಗಳು ಐಎನ್‌ಡಿ ಎಎಸ್ 109 'ಹಣಕಾಸಿನ ಸಾಧನಗಳು' ಅನ್ವಯ ಸರಳೀಕರಣಗೊಳಿಸಿದ ಇಸಿಎಲ್ ವಿಧಾನಕ್ಕೆ ಒಳಪಟ್ಟಿರುವವು.

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**

**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| | | | | |
|---|---|---|---|---|
| | **ಸಾಲದ ಅಪಾಯಕ್ಕೆ ಒಳಗಾಗುವಿಕೆ** | | | |
| | **ನಿರೀಕ್ಷಿತ ಸಾಲದ ನಷ್ಟಗಳಿಗೆ ಹವಣಿಕೆ** | | | |
| | ಕಂಪನಿ ಕೆಳಕಂಡ ಹಣಕಾಸಿನ ಆಸ್ತಿಗಳಿಗೆ 12 ತಿಂಗಳ ಆಧಾರದ ಮೇಲಿನ ನಿರೀಕ್ಷಿತ ಸಾಲದ ನಷ್ಟ ಮತ್ತು ಜೀವಿತಾವಧಿ ನಿರೀಕ್ಷಿತ ಸಾಲದ ನಷ್ಟದ ಆಧಾರದ ಮೇಲೆ ವ್ಯವಸ್ಥೆ ಮಾಡುವುದು: | | | |
| | **31ನೇ ಮಾರ್ಚ್ 2024ರಂದು ಇದ್ದಂತೆ** | | | |
| | **ವಿವರಗಳು** | **ಒಟ್ಟು ವಾಹಕ ಮೊತ್ತ** | **ನಿರೀಕ್ಷಿತ ಸಾಲದ ನಷ್ಟಗಳು** | **ಕ್ಷೀಣತೆ ವ್ಯವಸ್ಥೆಯ ನಿವ್ವಳ ವಾಹಕ ಮೊತ್ತ** |
| | ವ್ಯಾಪಾರದಿಂದ ಬರಬೇಕಾಗುವುದು | 8,386.60 | (931.41) | 7,455.19 |
| | ನಗದು ಮತ್ತು ನಗದು ಸಮಾನತೆಗಳು | 5,635.43 | – | 5,635.43 |
| | ಇತರೆ ಬ್ಯಾಂಕ್ ಶಿಲ್ಕು | 36,305.55 | – | 36,305.55 |
| | ಇತರೆ ಹಣಕಾಸಿನ ಆಸ್ತಿಗಳು | 4,423.02 | (1,994.87) | 2,428.15 |
| | **31ನೇ ಮಾರ್ಚ್ 2023ರಂದು ಇದ್ದಂತೆ** | | | |
| | **ವಿವರಗಳು** | **ಒಟ್ಟು ವಾಹಕ ಮೊತ್ತ** | **ನಿರೀಕ್ಷಿತ ಸಾಲದ ನಷ್ಟಗಳು** | **ಕ್ಷೀಣತೆ ವ್ಯವಸ್ಥೆಯ ನಿವ್ವಳದ ವಾಹಕ ಮೊತ್ತ** |
| | ವ್ಯಾಪಾರದಿಂದ ಬರಬೇಕಾಗುವುದು | 4,695.92 | (783.81) | 3,912.11 |
| | ನಗದು ಮತ್ತು ನಗದು ಸಮಾನತೆಗಳು | 4,181.43 | – | 4,181.43 |
| | ಇತರೆ ಬ್ಯಾಂಕ್ ಶಿಲ್ಕು | 24,458.62 | – | 24,458.62 |
| | ಇತರೆ ಹಣಕಾಸಿನ ಆಸ್ತಿಗಳು | 4,077.20 | (1,877.26) | 2,199.94 |
| | **31ನೇ ಮಾರ್ಚ್ 2022ರಂದು ಇದ್ದಂತೆ** | | | |
| | **ವಿವರಗಳು** | **ಒಟ್ಟು ವಾಹಕ ಮೊತ್ತ** | **ನಿರೀಕ್ಷಿತ ಸಾಲದ ನಷ್ಟಗಳು** | **ಕ್ಷೀಣತೆ ವ್ಯವಸ್ಥೆಯ ನಿವ್ವಳದ ವಾಹಕ ಮೊತ್ತ** |
| | ವ್ಯಾಪಾರದಿಂದ ಬರಬೇಕಾಗುವುದು | 9,168.93 | (764.69) | 8,404.24 |
| | ನಗದು ಮತ್ತು ನಗದು ಸಮಾನತೆಗಳು | 8,409.14 | – | 8,409.14 |
| | ಇತರೆ ಬ್ಯಾಂಕ್ ಶಿಲ್ಕು | 17,048.61 | – | 17,048.61 |
| | ಇತರೆ ಹಣಕಾಸಿನ ಆಸ್ತಿಗಳು | 24,701.86 | (1518.30) | 23,183.56 |

| | | | |
|---|---|---|---|
| | **ನಷ್ಟ ಅನುಮತಿ ವ್ಯವಸ್ಥೆ ಸಮನ್ವಯತೆ – ವ್ಯಾಪಾರದಿಂದ ಬರಬೇಕಾಗಿರುವುದು, ಸಾಲಗಳು ಮತ್ತು ಇತರೆ ಹಣಕಾಸಿನ ಆಸ್ತಿ** | | |
| | **ವಿವರಗಳು** | **ವ್ಯಾಪಾರದಿಂದ ಬರಬೇಕಾದುದು** | **ಇತರೆ ಹಣಕಾಸಿನ ಆಸ್ತಿ** |
| | **01ನೇ ಏಪ್ರಿಲ್ 2021ರಂದು ನಷ್ಟದ ಅನುಮತಿ** | **(743.67)** | **(1715.60)** |
| | ನಿರೀಕ್ಷಿತ ಸಾಲದ ನಷ್ಟಕ್ಕೆ ಅನುಮತಿ | ,743.67 | 363.56 |
| | ವರ್ಷದ ಅವಧಿಯಲ್ಲಿ ಹಿಮ್ಮುಖಗೊಳಿಸಿರುವುದು/ ವಜಾ ಮಾಡಿರುವುದು | | |
| | **1ನೇ ಏಪ್ರಿಲ್ 2022 ರಂದು ನಷ್ಟದ ಅನುಮತಿ** | **(764.69)** | **(1,937.27)** |
| | ನಿರೀಕ್ಷಿತ ಕ್ರೆಡಿಟ್ ನಷ್ಟಕ್ಕೆ ಅನುಮತಿ | (19.12) | – |
| | ವರ್ಷದ ಅವಧಿಯಲ್ಲಿ ಹಿಮ್ಮುಖಗೊಳಿಸಿರುವುದು/ವಜಾ ಮಾಡಿರುವುದು | – | 60.01 |
| | **31ನೇ ಮಾರ್ಚ್ 2023 ರಂದು ನಷ್ಟದ ಅವಕಾಶ** | **(783.81)** | **(1,877.26)** |
| | **ನಿರೀಕ್ಷಿತ ಸಾಲದ ನಷ್ಟಕ್ಕೆ ಅನುಮತಿ** | (158.12) | (155.57) |
| | **ವರ್ಷದ ಅವಧಿಯಲ್ಲಿ ಹಿಮ್ಮುಖಗೊಳಿಸಿರುವುದು/ವಜಾ ಮಾಡಿರುವುದು** | 10.52 | 37.96 |
| | **31ನೇ ಮಾರ್ಚ್ 2024ರಂದು ನಷ್ಟಕ್ಕೆ ಅನುಮತಿ** | **(931.41)** | **(1,994.87)** |

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**ii. ದ್ರವ್ಯತೆ ಅಪಾಯ**

ಕಂಪನಿಯು ಸಾಕಷ್ಟು ಮೀಸಲು ನಿಧಿಗಳ ನಿರ್ವಹಣೆ, ಬ್ಯಾಂಕಿಂಗ್ ಸೌಲಭ್ಯಗಳು ಮತ್ತು ಮೀಸಲು ಸಾಲ ಪಡೆಯುವ ಸೌಲಭ್ಯಗಳ ಮೂಲಕ, ಮುಂದೆ ಉಂಟಾಗಬಹುದಾದ ಮತ್ತು ವಾಸ್ತವಿಕ ನಗದು ಹರಿಯುವಿಕೆಗಳನ್ನು ನಿರಂತರವಾಗಿ ಮೇಲುಸ್ತುವಾರಿ ಮಾಡುವ ಮೂಲಕ ಮತ್ತು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ಪಕ್ವತೆ ವಿವರಗಳನ್ನು ಹೊಂದಾಣಿಕೆ ಮಾಡುವ ಮೂಲಕ ದ್ರವ್ಯತೆ ಅಪಾಯವನ್ನು ನಿರ್ವಹಿಸುವುದು.

ದ್ರವ್ಯತೆ ಪರಿಸ್ಥಿತಿಯ ಆವರ್ತನ ಮುಂಗಾಣ್ಕೆಗಳು ಮತ್ತು ನಗದು ಮತ್ತು ನಗದು ಸಮಾನತೆಗಳನ್ನು ನಿರೀಕ್ಷಿತ ನಗದು ಹರಿಯುವಿಕೆ ಆಧಾರದ ಮೇಲೆ ಆಡಳಿತ ಮಂಡಳಿ ಮೇಲುಸ್ತುವಾರಿ ಮಾಡುವುದು. ಸಂಸ್ಥೆಯು ಕಾರ್ಯನಿರ್ವಹಿಸುವ ಮಾರುಕಟ್ಟೆಯ ದ್ರವ್ಯತೆಯನ್ನು ಕಂಪನಿ ಲೆಕ್ಕಕ್ಕೆ ತೆಗೆದುಕೊಳ್ಳುವುದು. ಇದರ ಜೊತೆಗೆ ಕಂಪನಿಯ ದ್ರವ್ಯತೆ ನಿರ್ವಹಣೆ ನೀತಿಯು ಪ್ರಮುಖ ಕರೆನ್ಸಿಗಳಲ್ಲಿ ನಗದು ಹರಿಯುವಿಕೆಗಳನ್ನು ಯೋಜಿಸುವುದು ಮತ್ತು ಇವುಗಳನ್ನು ಈಡೇರಿಸಲು ಅಗತ್ಯವಾದ ದ್ರವ್ಯತೆ ಆಸ್ತಿಗಳ ಮಟ್ಟವನ್ನು ಪರಿಗಣಿಸುವುದು, ಆಂತರಿಕ ಮತ್ತು ಬಾಹ್ಯ ನಿಯಂತ್ರಣ ಅಗತ್ಯತೆ ಎದುರಾಗಿ ಸ್ಥಿತಿ ವಿವರಣಾ ಪಟ್ಟಿ ದ್ರವ್ಯತೆ ಅನುಪಾತದ ಮೇಲುಸ್ತುವಾರಿ ಮತ್ತು ಋಣಕ್ಕೆ ಹಣಕಾಸಿನ ಯೋಜನೆಗಳ ನಿರ್ವಹಣೆಯನ್ನು ಒಳಗೊಂಡಿರುವುದು.

**ಹಣಕಾಸಿನ ಹೊಣೆಗಾರಿಕೆಗಳ ವಾಯಿದೆಗಳು:**

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳಿಗೆ ಅವುಗಳ ಒಪ್ಪಂದವಾದ ವಾಯಿದೆ ಮುಕ್ತಾಯಗಳ ಆಧಾರದ ಮೇಲೆ ಸಂಬಂಧಪಟ್ಟ ವಾಯಿದೆ ಮುಕ್ತಾಯದ ಗುಂಪುಗಳ ಆಧಾರದ ಮೇಲೆ ಕಂಪನಿಯ ಹಣಕಾಸಿನ ಹೊಣೆಗಾರಿಕೆಗಳನ್ನು ಈ ಕೆಳಗಿನ ತಃಖ್ತೆಯು ವಿಶ್ಲೇಷಿಸುವುದು. ತಃಖ್ತೆಯಲ್ಲಿ ತಿಳಿಸಿರುವ ಮೊತ್ತಗಳು ಒಪ್ಪಂದವಾದ ರಿಯಾಯಿತಿ ಮಾಡಿರದ ನಗದು ಹರಿವು ಆಗಿರುವುದು (ಗುತ್ತಿಗೆ ಹೊಣೆಗಾರಿಕೆಗಳು ಹೊರತಾಗಿ).

| 31ನೇ ಮಾರ್ಚ್ 2024ರಂದು ಇದ್ದಂತೆ | 1 ವರ್ಷಕ್ಕಿಂತ ಕಡಿಮೆ | 1 ವರ್ಷದಿಂದ 5 ವರ್ಷಗಳು | 5 ವರ್ಷಗಳು ಮತ್ತು ಮೇಲ್ಪಟ್ಟು | ಒಟ್ಟು |
|---|---|---|---|---|
| ಜನ್ಮ ರಹಿತ | | | | |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು | 11,044.17 | - | - | 11,044.17 |
| ಗುತ್ತಿಗೆ ಹೊಣೆಗಾರಿಕೆಗಳು | 725.06 | 438.14 | - | 1,163.20 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | 21,187.34 | 17,539.74 | - | 38,727.08 |
| **ಒಟ್ಟು** | **32,956.57** | **17,977.88** | **-** | **50,934.45** |

| 31ನೇ ಮಾರ್ಚ್ 2023 ರಂದು ಇದ್ದಂತೆ | 1 ವರ್ಷಕ್ಕಿಂತ ಕಡಿಮೆ | 1 ವರ್ಷದಿಂದ 5 ವರ್ಷಗಳು | 5 ವರ್ಷಗಳು ಮತ್ತು ಮೇಲ್ಪಟ್ಟು | ಒಟ್ಟು |
|---|---|---|---|---|
| ಜನ್ಮ ರಹಿತ | | | | |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು | 9,513.06 | - | - | 9,513.06 |
| ಗುತ್ತಿಗೆ ಹೊಣೆಗಾರಿಕೆಗಳು | 382.77 | 342.75 | - | 725.52 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | 14,860.52 | 14,983.32 | - | 29,843.84 |
| **ಒಟ್ಟು** | **24,756.35** | **15,326.07** | **-** | **40,082.42** |

| 31ನೇ ಮಾರ್ಚ್ 2022ರಂದು ಇದ್ದಂತೆ | 1 ವರ್ಷಕ್ಕಿಂತ ಕಡಿಮೆ | 1 ವರ್ಷದಿಂದ 5 ವರ್ಷಗಳು | 5 ವರ್ಷಗಳು ಮತ್ತು ಮೇಲ್ಪಟ್ಟು | ಒಟ್ಟು |
|---|---|---|---|---|
| ಜನ್ಮ ರಹಿತ | | | | |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾಗಿರುವುದು | 0.07 | 0.02 | - | 0.09 |
| ಗುತ್ತಿಗೆ ಹೊಣೆಗಾರಿಕೆಗಳು | 619.57 | 462.31 | - | 1,081.88 |
| ಇತರೆ ಹಣಕಾಸಿನ ಹೊಣೆಗಾರಿಕೆಗಳು | 16,660.73 | 9,090.92 | - | 25,751.65 |
| **ಒಟ್ಟು** | **17,280.37** | **9,553.25** | **-** | **26,833.62** |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| | | | |
|---|---|---|---|
| iii **ಮಾರುಕಟ್ಟೆ ಅಪಾಯ** | | | |
| **ಎ. ವಿದೇಶಿ ಕರೆನ್ಸಿ ಅಪಾಯ** | | | |
| ಕಂಪನಿ ವಿದೇಶಿ ಕರೆನ್ಸಿಯಲ್ಲಿ ನಮೂದಿಸಿರುವ ಯಾವುದೇ ಆಸ್ತಿ ಅಥವಾ ಹೊಣೆಗಾರಿಕೆಯನ್ನು ಹೊಂದಿರುವುದಿಲ್ಲ. ಆದ್ದರಿಂದಾಗಿ ಕಂಪನಿಯು ಕರೆನ್ಸಿ ಅಪಾಯಕ್ಕೆ ಒಳಗಾಗುವುದಿಲ್ಲ. | | | |
| **ಬಿ. ಬೆಲೆ ಅಪಾಯ** | | | |
| ಗ್ರೂಪ್ ಹೊಂದಿರುವ ಹೂಡಿಕೆಗಳಿಂದ ಉಂಟಾಗುವ ಈಕ್ವಿಟಿ ಸೆಕ್ಯೂರಿಟಿಸ್‌ನ ಬೆಲೆ ಅಪಾಯಕ್ಕೆ ಕಂಪನಿ ಒಳಗಾಗುವುದು ಮತ್ತು ಒಸಿಐ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಸ್ಥಿತಿ ವಿವರಣಾ ಪಟ್ಟಿಯಲ್ಲಿ ವರ್ಗೀಕರಿಸಿದೆ. | | | |
| **ಸೂಕ್ಷ್ಮತೆ** | | | |
| ಸದರಿ ಅವಧಿಗಳ ಕಂಪನಿಯ ಲಾಭಗಳ ಮೇಲೆ ಸಾಧನಗಳ ಹೆಚ್ಚಿನ/ಕಡಿಮೆ ಬೆಲೆಗಳಿಗೆ ಲಾಭ ಅಥವಾ ನಷ್ಟ ಸೂಕ್ಷ್ಮತೆ ಹೊಂದಿರುವುದು. | | | |
| **ವಿವರಗಳು** | **31ನೇ ಮಾರ್ಚ್ 2024** | **31ನೇ ಮಾರ್ಚ್ 2023** | **31ನೇ ಮಾರ್ಚ್ 2022** |
| 5% ನಷ್ಟು ಬೆಲೆ ಹೆಚ್ಚಳ–ಎಫ್‌ವಿಒಸಿಐ | 179.73 | 120.25 | – |
| 5% ನಷ್ಟು ಬೆಲೆ ಇಳಿಕೆ – ಎಫ್‌ವಿಒಸಿಐ | (179.73) | (120.25) | – |

| 37 | **ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ಮೇಲಿನ ಖರ್ಚು** | | |
|---|---|---|---|
| | ಕಂಪನಿಗಳ ಕಾಯ್ದೆ, 2013ರ ಪ್ರಕರಣ 135 ಮತ್ತು ಇದರಡಿ ರೂಪಿಸಿರುವ ನಿಯಮಗಳ(ಸಿಎಸ್‌ಆರ್ ನಿಬಂಧನೆಗಳು) ಅನ್ವಯ, ಕಂಪನಿಯು ನಿರ್ದೇಶಕರ ಮಂಡಳಿಯ ಸಿಎಸ್‌ಆರ್ ಸಮಿತಿ ಒಂದನ್ನು ರಚಿಸಿದೆ. | | |
| | **ವಿವರಗಳು** | **31ನೇ ಮಾರ್ಚ್ 2024** | **31ನೇ ಮಾರ್ಚ್ 2023** |
| | ವರ್ಷದ ಅವಧಿಯಲ್ಲಿ ಕಂಪನಿ ಖರ್ಚು ಮಾಡಬೇಕಿರುವ ಒಟ್ಟು ಮೊತ್ತ | 149.00 | 129.01 |
| | ವರ್ಷದ ಅವಧಿಯಲ್ಲಿ ಯಾವುದೇ ಆಸ್ತಿಯ ನಿರ್ಮಾಣ/ಸ್ವಾಧೀನ ಹೊರತಾಗಿ ಖರ್ಚು ಮಾಡಿರುವ ಮೊತ್ತ | 147.90 | 90.66 |
| | –ಪಾವತಿ ಮಾಡಿರುವುದು | 147.90 | 90.66 |
| | –ಪಾವತಿ ಮಾಡಬೇಕಾಗಿರುವುದು | – | – |
| | ವರ್ಷದ ಕೊನೆಯಲ್ಲಿನ ಕೊರತೆ/ (ಅಧಿಕ) | 1.10 | 38.35 |
| | ಹಿಂದಿನ ವರ್ಷಗಳಲ್ಲಿ ಅಧಿಕವಾಗಿ ಖರ್ಚು ಮಾಡಿರುವುದು | (10.83) | (50.09) |
| | ಹಿಂದಿನ ವರ್ಷ ಕೊರತೆಯಾಗಿದ್ದರ ಒಟ್ಟು ಮೊತ್ತ | – | – |
| | ಕೊರತೆಗೆ ಕಾರಣ | – | – |
| | ಸಿಎಸ್‌ಆರ್ ಚಟುವಟಿಕೆಗಳ ಸ್ವರೂಪ★ | – | – |
| | ಸಂಬಂಧಿತ ವ್ಯಕ್ತಿಗಳ ವ್ಯವಹಾರಗಳ ವಿವರ | – | – |

★ಸಿಎಸ್‌ಆರ್ ಚಟುವಟಿಕೆಗಳನ್ನು ಕೆಳಗೆ ಪಟ್ಟಿ ಮಾಡಿದೆ.

i) ಆರೋಗ್ಯ ರಕ್ಷಣೆ ಸೇವೆಗಳು

ii) ಶೈಕ್ಷಣಿಕ ಚಟುವಟಿಕೆಗಳು

## 38. ಹಣಕಾಸು ಸಾಧನಗಳು
## ಪ್ರವರ್ಗವಾರು ಹಣಕಾಸು ಸಾಧನಗಳು

ಕೆಳಗಿನ ತಃಖ್ತೆಯು ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ವಾಹಕ ಮೊತ್ತಗಳನ್ನು ತೋರಿಸುವುದು.

| ಟಿಪ್ಪಣಿ ಸಂಖ್ಯೆ | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | | | 31ನೇ ಮಾರ್ಚ್ 2023ರಂದು ಇದ್ದಂತೆ | | | |
|---|---|---|---|---|---|---|---|---|---|
| | | ಬೆಲೆ | ಎಫ್‌ವಿಟಿ ಒಸಿಐ | ಅಮಾರ್ಟೈಸ್ಡ್ ಬೆಲೆ | ಒಟ್ಟು | ಬೆಲೆ | ಎಫ್‌ವಿಟಿ ಒಸಿಐ | ಅಮಾರ್ಟೈಸ್ಡ್ ಬೆಲೆ | ಒಟ್ಟು |
| **ಹಣಕಾಸಿನ ಆಸ್ತಿಗಳು:** | | | | | | | | | |
| 6 | ಹೂಡಿಕೆಗಳು | 597.43 | 3,594.67 | – | 4,192.10 | 597.43 | 2,404.93 | – | 3,002.36 |
| 7 | ಇತರೆ ಹಣಕಾಸಿನ ಆಸ್ತಿಗಳು | – | – | 33,059.81 | 33,059.81 | – | – | 27,852.25 | 27,852.25 |
| 10 | ವ್ಯಾಪಾರದಿಂದ ಬರಬೇಕಾಗಿರುವುದು | – | – | 7,455.19 | 7,455.19 | – | – | 3,912.11 | 3,912.11 |
| 11 | ನಗದು ಮತ್ತು ನಗದು ಸಮಾನಗಳು | – | – | 5,635.43 | 5,635.43 | – | – | 4,181.43 | 4,181.43 |
| 12 | ಇತರೆ ಬ್ಯಾಂಕ್ ಶಿಲ್ಕುಗಳು | – | – | 36,305.55 | 36,305.55 | – | – | 24,458.62 | 24,458.62 |
| | **ಒಟ್ಟು ಹಣಕಾಸಿನ ಆಸ್ತಿಗಳು** | **597.43** | **3,594.67** | **82,455.98** | **86,648.08** | **597.43** | **2,404.93** | **60,404.41** | **63,406.77** |
| **ಹಣಕಾಸಿನ ಹೊಣೆಗಾರಿಕೆಗಳು:** | | | | | | | | | |
| 18 | ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು | – | – | 11,044.17 | 11,044.17 | – | – | 9,513.06 | 9,513.06 |
| 15 | ಇತರೆ ಹಣಕಾಸಿನ ಹೊಣೆಗಾರಿಕೆಗಳು | – | – | 38,727.08 | 38,727.08 | – | – | 29,843.84 | 29,843.84 |
| 15 | ಲೀಸ್ ಹೊಣೆಗಾರಿಕೆಗಳು | – | – | 1,163.20 | 1,163.20 | – | – | 725.52 | 725.52 |
| | **ಒಟ್ಟು ಹಣಕಾಸಿನ ಆಸ್ತಿಗಳು** | – | – | 50,934.45 | 50,934.45 | – | – | 40,082.42 | 40,082.42 |

### ಹಣಕಾಸಿನ ಸಾಧನಗಳ ನ್ಯಾಯೋಚಿತ ಮೌಲ್ಯ ಪ್ರಕಟಣೆ

| ಟಿಪ್ಪಣಿ ಸಂಖ್ಯೆ | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
|---|---|---|---|---|---|
| | | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ | ವಾಹಕ ಮೊತ್ತ | ನ್ಯಾಯೋಚಿತ ಮೌಲ್ಯ |
| | **ಹಣಕಾಸಿನ ಆಸ್ತಿಗಳು:** | | | | |
| 6 | ಒಸಿಐ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ಹೂಡಿಕೆಗಳು | 3,594.67 | 3,594.67 | 2,404.93 | 2,404.93 |
| | ಒಟ್ಟು ಹಣಕಾಸಿನ ಆಸ್ತಿಗಳು | 3,594.67 | 3,594.67 | 2,404.93 | 2,404.93 |
| | ಹಣಕಾಸಿನ ಹೊಣೆಗಾರಿಕೆಗಳು | – | – | – | – |
| | ಒಟ್ಟು ಹಣಕಾಸಿನ ಹೊಣೆಗಾರಿಕೆಗಳು | – | – | – | – |

(i) ನಗದು, ನಗದು ಸಮಾನತೆಗಳು, ವ್ಯಾಪಾರದಿಂದ ಬರಬೇಕಾದುದು, ಸಾಲಗಳು, ಇತರೆ ಹಣಕಾಸಿನ ಆಸ್ತಿಗಳು, ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದು, ಸಾಲಗಳು ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳ ಅಂದಾಜು, ಈ ಸಾಧನಗಳ ಅಲ್ಪಾವಧಿ ವಾಯಿದೆ ಮುಕ್ತಾಯಕ್ಕೆ ಬಹುಪಾಲು ಸೇರಿದ ವಾಹಕ ಮೊತ್ತವನ್ನು ಆಡಳಿತ ಮಂಡಳಿ ನಿರ್ಧರಣೆ ಮಾಡಿರುವುದು.

(ii) ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯವನ್ನು, ಒತ್ತಾಯಿತ ಅಥವಾ ಪರಿಸಮಾಪ್ತಿ ಮಾರಾಟ ಹೊರತಾಗಿ, ಅಪೇಕ್ಷಿತ ವ್ಯಕ್ತಿಗಳ ನಡುವಿನ ಚಾಲ್ತಿ ವ್ಯವಹಾರದಲ್ಲಿನ ಸಾಧನದ ವಿನಿಮಯ ಮಾಡಿಕೊಳ್ಳುವ ಮೊತ್ತದಲ್ಲಿ ಸೇರಿಸಿದೆ.

(iii) ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳಿಗೆ ವಾಹಕ ಮೊತ್ತಗಳು ನ್ಯಾಯೋಚಿತ ಮೌಲ್ಯಗಳಿಗೆ ಸಮನಾಗಿರುವುದು.

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

## (ii) ನ್ಯಾಯೋಚಿತ ಮೌಲ್ಯದ ಶ್ರೇಣಿ

ಹಣಕಾಸಿನ ಸ್ಥಿತಿಯ ಹೇಳಿಕೆಯಲ್ಲಿ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವುದನ್ನು ನ್ಯಾಯೋಚಿತ ಮೌಲ್ಯ ಶ್ರೇಣಿಯ ಮೂರು ಹಂತಗಳಲ್ಲಿ ಗುಂಪು ಮಾಡಲಾಗಿದೆ. ಮಾಪನಕ್ಕೆ ಮಹತ್ತರ ಅಂಶಗಳ ಗಮನಹರಿಸುವಿಕೆ ಆಧಾರದ ಮೇಲೆ ಮೂರು ಹಂತಗಳು ಕೆಳಕಂಡಂತಿರುವವು:

| | 31ನೇ ಮಾರ್ಚ್ 2024ರಂದು ಇದ್ದಂತೆ | | | ಒಟ್ಟು | 31ನೇ ಮಾರ್ಚ್ 2023 ರಂದು ಇದ್ದಂತೆ | | | ಒಟ್ಟು |
|---|---|---|---|---|---|---|---|---|
| | ಸಕ್ರಿಯ ಮಾರುಕಟ್ಟೆಗಳಲ್ಲಿ ನಮೂದಿತ ಬೆಲೆ (ಹಂತ-1) | ಗಣನೀಯವಾಗಿ ಗುರುತಿಸ ಬಹುದಾದ ಮಾಹಿತಿ (ಹಂತ-2) | ಗಣನೀಯವಾಗಿ ಗುರುತಿಸ ಬಹುದಾದ ಮಾಹಿತಿ (ಹಂತ -3) | | ಸಕ್ರಿಯ ಮಾರುಕಟ್ಟೆಗಳಲ್ಲಿ ನಮೂದಿತ ಬೆಲೆ (ಹಂತ-1) | ಗಣನೀಯವಾಗಿ ಗುರುತಿಸ ಬಹುದಾದ ಮಾಹಿತಿ (ಹಂತ-2) | ಗಣನೀಯವಾಗಿ ಗುರುತಿಸ ಬಹುದಾದ ಮಾಹಿತಿ (ಹಂತ -3) | |
| ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ಆಸ್ತಿ | - | - | - | - | - | - | - | - |
| ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ | - | - | - | - | - | - | - | - |
| ಈಕ್ವಿಟಿ ಷೇರುಗಳಲ್ಲಿ ಹೂಡಿಕೆ | 1,749.13 | - | 1,845.54 | 3,594.67 | 648.93 | - | 1,756.00 | 2,404.93 |

## ನ್ಯಾಯೋಚಿತ ಮೌಲ್ಯದ ಶ್ರೇಣಿ

ಹಂತ 1: ಹಂತ 1 ಶ್ರೇಣಿಯಲ್ಲಿ ನಮೂದಿತ ಬೆಲೆಗಳನ್ನು ಬಳಸಿ ಮಾಪನ ಮಾಡಿದ ಹಣಕಾಸಿನ ಸಾಧನಗಳು ಸೇರಿರುವವು, ಇದು ನಮೂದಿತ ಬೆಲೆ ಹೊಂದಿರುವ ಪಟ್ಟಿಯಾಗಿರುವ ಈಕ್ವಿಟಿ ಸಾಧನಗಳನ್ನು ಒಳಗೊಂಡಿರುವುದು. ಸ್ಟಾರ್ ಎಕ್ಸ್‌ಚೇಂಜ್‌ಗಳಲ್ಲಿ ವ್ಯಾಪಾರ ಮಾಡಿದ ಎಲ್ಲಾ ಈಕ್ವಿಟಿ ಸಾಧನಗಳ ನ್ಯಾಯೋಚಿತ ಮೌಲ್ಯವನ್ನು ವರದಿಯ ಅವಧಿಯಲ್ಲಿ ಇದ್ದಂತೆ ಆಖೈರು ಬೆಲೆ ಬಳಸಿ ಮೌಲ್ಯಮಾಪನ ಮಾಡಿದೆ.

ಹಂತ 2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡಿರದ (ಉದಾಹರಣೆಗೆ ವ್ಯಾಪಾರ ಮಾಡಿದ ಬಾಂಡ್‌ಗಳು, ಕೌಂಟರ್ ಜನ್ಯತೆಗಳು) ಹಣಕಾಸಿನ ಸಾಧನಗಳ ನ್ಯಾಯೋಚಿತ ಮೌಲ್ಯವನ್ನು ಅನ್ವಯಿಸಬಹುದಾದ ಮೌಲ್ಯಮಾಪನ ಉಪಾಯಗಳನ್ನು ಬಳಸಿ ನಿರ್ಧರಣೆ ಮಾಡಿದೆ. ಸಾಧನ ಒಂದರ ನ್ಯಾಯೋಚಿತ ಮೌಲ್ಯಕ್ಕೆ ಎಲ್ಲಾ ಗಣನೀಯವಾದ ಮಾಹಿತಿಗಳು ಅಗತ್ಯವಾದಲ್ಲಿ, ಆ ಸಾಧನವನ್ನು ಹಂತ 2 ರಲ್ಲಿ ಸೇರಿಸಿದೆ.

ಹಂತ 3: ಗಣನೀಯವಾದ ಒಂದು ಅಥವಾ ಹೆಚ್ಚು ಮಾಹಿತಿಗಳು ಅನ್ವಯವಾಗುವ ಮಾರುಕಟ್ಟೆ ಅಂಕಿ ಅಂಶದ ಮೇಲೆ ಆಧಾರಿತವಾಗಿರದಿದ್ದರೆ, ಆ ಸಾಧನವನ್ನು ಹಂತ 3 ರಲ್ಲಿ ಸೇರಿಸಿದೆ. ಹಂತ 3ರಲ್ಲಿ ಸೇರಿಸಿರುವ ಪಟ್ಟಿಯಾಗಿರದ ಈಕ್ವಿಟಿ ಸೆಕ್ಯುರಿಟಿಗಳು, ಸಂಭವನೀಯ ಪರಿಗಣನೆ ಮತ್ತು ನಷ್ಟ ಭರಿಸುವಿಕೆ ಆಸ್ತಿಗಳ ಪ್ರಕರಣ ಇದಾಗಿದೆ.

ವರ್ಷದ ಅವಧಿಯಲ್ಲಿ ಹಂತ 1, 2 ಮತ್ತು 3ರ ನಡುವೆ ಯಾವುದೇ ವರ್ಗಾವಣೆಗಳಿರುವುದಿಲ್ಲ.

ಕಂಪನಿಯ ನೀತಿಯು ವರದಿಯ ಅವಧಿಯ ಕೊನೆಯಲ್ಲಿದ್ದಂತೆ ನ್ಯಾಯೋಚಿತ ಮೌಲ್ಯದ ಶ್ರೇಣಿಗೆ ವರ್ಗಾವಣೆಗಳು ಮತ್ತು ಶ್ರೇಣಿಯ ಹೊರಕ್ಕೆ ವರ್ಗಾವಣೆಗಳನ್ನು ಪರಿಗಣಿಸುವುದಾಗಿದೆ.

| 39 | ಐಎನ್‌ಡಿ ಎಎಸ್-24ರ ಅನುಸಾರ ಸಂಬಂಧಿಸಿದ ಪಾರ್ಟಿಯ ವ್ಯವಹಾರಗಳ ಪ್ರಕಟಣೆ-ಸಂಬಂಧಿಸಿದ ಪಾರ್ಟಿ ಪ್ರಕಟಣೆಗಳು | | |
|---|---|---|---|
| (ಎ) | **ಸಂಬಂಧಿಸಿದ ಪಾರ್ಟಿಯ ಹೆಸರು ಮತ್ತು ಸಂಬಂಧದ ಸ್ವರೂಪ** | | |
| ಕ್ರ.ಸಂ | **ಸಂಬಂಧಪಟ್ಟ ಪಾರ್ಟಿಗಳ ಹೆಸರು** | **ಸಂಬಂಧ** | **ಷರಾ** |
| (I) | **ಪ್ರಮುಖ ಆಡಳಿತ ಸಿಬ್ಬಂದಿ (ಕೆಎಂಪಿ)** | | |
| 1 | ಶ್ರೀ ಪುಟ್ಟರಂಗ ಶೆಟ್ಟಿ | ಅಧ್ಯಕ್ಷರು | 26.01.2024 ರಿಂದ |
| 2 | ಶ್ರೀ ಪಾಟೀಲ್ ಎಂ.ಬಿ | ಅಧ್ಯಕ್ಷರು | 13.06.2023ರಿಂದ<br>26.01.2024ರವರೆಗೆ |
| 3 | ಶ್ರೀ ಹಾಲಪ್ಪ | ಅಧ್ಯಕ್ಷರು | 12.04.2023ರವರೆಗೆ |
| 4 | ಶ್ರೀ ಮನೋಜ್ ಕುಮಾರ್ | ವ್ಯವಸ್ಥಾಪಕ ನಿರ್ದೇಶಕರು | 03.07.2023 ರಿಂದ |
| 5 | ಶ್ರೀ ವಿಕಾಶ್‌ಕುಮಾರ್ ವಿಕಾಶ್ | ವ್ಯವಸ್ಥಾಪಕ ನಿರ್ದೇಶಕರು | 03.07.2023ರವರೆಗೆ |
| 6 | ಶ್ರೀ ರವಿಶಂಕರ್ .ಜೆ | ನಿರ್ದೇಶಕರು | |
| 7 | ಶ್ರೀಮತಿ ಗುಂಜನ್ ಕೃಷ್ಣ | ನಿರ್ದೇಶಕರು | |
| 8 | ಶ್ರೀ ನಿತೀಶ್ .ಕೆ | ನಿರ್ದೇಶಕರು | |
| 9 | ಶ್ರೀ ರಮೇಶ್.ಆರ್ | ನಿರ್ದೇಶಕರು | |
| 10 | ಶ್ರೀ ಸತೀಶ್ ಬಿ.ಸಿ. | ನಿರ್ದೇಶಕರು | 23.11.2023 ರಿಂದ |
| 11 | ಶ್ರೀ ರವಿ ಎಂ.ಆರ್. | ನಿರ್ದೇಶಕರು | 23.11.2023ರ ವರೆಗೆ |
| 12 | ಶ್ರೀ ವೆಂಕಟೇಶ್ ನಾಯ್ಡು | ನಿರ್ದೇಶಕರು | 22.05.2023ರ ವರೆಗೆ |
| 13 | ಶ್ರೀ ಚನ್ನದೇವರು .ಸಿ | ನಿರ್ದೇಶಕರು | 22.05.2023ರ ವರೆಗೆ |
| 14 | ಶ್ರೀ ಶಿವಾಜಿ ಶಿವರಾಯ್ ದೊಲ್ಲಿನ್ | ನಿರ್ದೇಶಕರು | 22.05.2023ರ ವರೆಗೆ |
| 15 | ಶ್ರೀ ಅಂದಪ್ಪ ಜವಳಿ | ನಿರ್ದೇಶಕರು | 22.05.2023ರ ವರೆಗೆ |
| 16 | ಶ್ರೀ ತೋಟಪ್ಪ ನಾಗಪ್ಪ ನಿಡಗುಂದಿ | ನಿರ್ದೇಶಕರು | 22.05.2023ರ ವರೆಗೆ |
| 17 | ಶ್ರೀ ಸತೀಶ್ ಆರ್.ಡಿ. | ನಿರ್ದೇಶಕರು | 22.05.2023ರ ವರೆಗೆ |
| 18 | ಶ್ರೀ ನಿಂಗಪ್ಪ | ನಿರ್ದೇಶಕರು | 22.05.2023ರ ವರೆಗೆ |
| 19 | ಶ್ರೀ ಶಶಿಧರ್ ಬಿ ಹೊನ್ನಣ್ಣವರ್ | ನಿರ್ದೇಶಕರು | 22.05.2023ರ ವರೆಗೆ |
| 20 | ಶ್ರೀಮತಿ ಶ್ರೀ ದೇವಿ ಬಿ.ಎನ್. | ಕಂಪನಿ ಕಾರ್ಯದರ್ಶಿ | |
| 21 | ಶ್ರೀ ಅವಿನಾಶ್ ಕೆ.ಆರ್. | ಮುಖ್ಯ ಹಣಕಾಸು ಅಧಿಕಾರಿ | 01.12.2023 ರಿಂದ |
| 22 | ಶ್ರೀ ಚಂದ್ರಪ್ಪ ಎ.ಎಂ. | ಮುಖ್ಯ ಹಣಕಾಸು ಅಧಿಕಾರಿ | 01.12.2023 ರ ವರೆಗೆ |
| 23 | ಶ್ರೀಮತಿ ಶಾರದ ಮನೋಜ್‌ಕುಮಾರ್ | ವ್ಯವಸ್ಥಾಪಕ ನಿರ್ದೇಶಕರ ಸಂಬಂಧಿ | |
| (II) | **ಸಹಾಯಕ ಕಂಪನಿಗಳು** | | |
| 1 | **ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್** | | |
| 2 | **ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್** | | |

**ಸಹವರ್ತಿ ಕಂಪನಿಗಳು**

ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್

ಕೆ.ಟಿ. ಮ್ಯಾನ್‌ಷನ್ಸ್ ಅಪಾರ್ಟ್‌ಮೆಂಟ್ಸ್ ಓನರ್ಸ್ ಅಸೋಷಿಯೇಷನ್

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| (ಬಿ) | **ಸಂಬಂಧಿತ ವ್ಯಕ್ತಿಗಳ ಜೊತೆಗಿನ ವ್ಯವಹಾರಗಳು :** | | |
|---|---|---|---|
| | | **31ನೇ ಮಾರ್ಚ್ 2024** | **31ನೇ ಮಾರ್ಚ್ 2023** |
| | **ಎ) ಕೆಎಂಪಿಯಲ್ಲಿ ಮತ್ತು ಕೆಎಂಪಿ ಸಂಬಂಧಿಕರ ಜೊತೆ** | | |
| | ಪ್ರಮುಖ ಆಡಳಿತ ಸಿಬ್ಬಂದಿಗೆ ಪಾವತಿ ಮಾಡಿದ ಸಂಭಾವನೆ (*)(#) | 113.92 | 107.37 |
| | ಚಿಟ್ ವಂತಿಗೆ | 7.50 | |
| | ಚಿಟ್ ವಂತಿಕೆದಾರರಿಂದ ಮುಂಗಡದ ಮರುಪಾವತಿ | 4.20 | 4.20 |
| | ಕೆಎಂಪಿ ಪರವಾಗಿ ಮಾಡಿದ ಖರ್ಚುಗಳು | 1.13 | 9.41 |
| | ನಿರ್ದೇಶಕರಿಗೆ ಪಾವತಿ ಮಾಡಿದ ಹಾಜರಿ ಶುಲ್ಕ | 0.51 | 1.64 |
| | **ಬಿ) ಸಹಾಯಕ ಕಂಪನಿಗಳಲ್ಲಿ** | | |
| | ಸಹಾಯಕ ಕಂಪನಿಗಳಿಂದ ಬಂದ ಲಾಭಾಂಶ | 627.06 | 274.58 |
| | ಸಹಾಯಕ ಕಂಪನಿಗಳಿಂದ ಬಂದ ಬಾಡಿಗೆ ಆದಾಯ | 2.13 | 3.64 |
| | ಜಾಹೀರಾತು ಮತ್ತು ಮುದ್ರಣ ಖರ್ಚುಗಳು | 82.86 | 24.45 |
| | ಸಹಾಯಕ ಕಂಪನಿಗಳ ಪರವಾಗಿ ಮಾಡಿದ ಖರ್ಚುಗಳು | 1.00 | 0.44 |
| (*) ಕಂಪನಿಗೆ ಒಟ್ಟಾರೆಯಾಗಿ ಗ್ರಾ ್ಯಚ್ಯುಟಿ ಮತ್ತು ರಜೆ ಪಾವತಿಯ ಹೊಣೆಗಾರಿಕೆ ವ್ಯವಸ್ಥೆಯನ್ನು ವಿಮಾಗಣನೆ ಆಧಾರದ ಮೇಲೆ ಒದಗಿಸಿದೆ. ವ್ಯಕ್ತಿಗಳಿಗೆ ಸಂಬಂಧಿಸಿದ ಮೊತ್ತವು ತಿಳಿದಿಲ್ಲ. ಆದ್ದರಿಂದ ಮೇಲಿನವುಗಳನ್ನು ಸೇರಿಸಿಲ್ಲ. | | | |
| (#) | ಭವಿಷ್ಯ ನಿಧಿಗೆ ವಂತಿಕೆಯು ಸೇರಿರುವುದು | | |

| (ಸಿ) | **ಈ ದಿನಾಂಕದಂದು ಇದ್ದಂತೆ ಸಂಬಂಧಿತ ವ್ಯಕ್ತಿಗಳಲ್ಲಿನ ಶಿಲ್ಕುಗಳು ಕೆಳಕಂಡಂತಿರುವುದು:** | **31ನೇ ಮಾರ್ಚ್ 2024** | **31ನೇ ಮಾರ್ಚ್ 2023** |
|---|---|---|---|
| | **ಎ) ಕೆಎಂಪಿ ಜೊತೆ** | | |
| | ಚಿಟ್‌ಗೆ ಕೆಎಂಪಿಯಿಂದ ಬಂದ ಮುಂಗಡಗಳು | 7.50 | – |
| | ಚಿಟ್‌ಗಾಗಿ ಕೆಎಂಪಿಗೆ ನೀಡಿದ ಮುಂಗಡಗಳು | 1.55 | 5.75 |
| | ಕೆಎಂಪಿಯಿಂದ ಪಡೆಯಬಹುದಾಗಿರುವುದು | 10.53 | 9.41 |
| | | | |
| | **ಬಿ) ಸಹಾಯಕ ಕಂಪನಿಗಳ ಜೊತೆ** | | |
| | ಸಹಾಯಕ ಕಂಪನಿಗಳಿಗೆ ಪಾವತಿಸಬೇಕಾಗಿರುವುದು | 26.65 | 10.59 |

**(ಡಿ) ಸಂಬಂಧಪಟ್ಟ ಪಾರ್ಟಿಗಳ ಜೊತೆಗಿನ ವ್ಯವಹಾರಗಳ ನಿಯಮಗಳು ಮತ್ತು ನಿಬಂಧನೆಗಳು**

ಸಂಬಂಧಪಟ್ಟ ವ್ಯಕ್ತಿಗಳ ಜೊತೆ ಮಾಡಿಕೊಂಡಿರುವ ವ್ಯವಹಾರವನ್ನು ನಿಗದಿತ ವ್ಯವಹಾರಗಳಲ್ಲಿರುವ ನಿಬಂಧನೆಗಳಿಗೆ ಸಮನಾದ ನಿಬಂಧನೆಗಳ ಮೇಲೆ ಮಾಡಿದೆ. ವರ್ಷದ ಕೊನೆಯಲ್ಲಿ ಇದ್ದಂತೆ ನೀಡಿರುವ ಸಾಲದ ಹೊರತುಪಡಿಸಿ ಬಾಕಿಯಿರುವ ಶಿಲ್ಕುಗಳು ಭದ್ರತೆಯಲ್ಲಿದವು ಮತ್ತು ಬಡ್ಡಿರಹಿತವಾಗಿದ್ದು ಮತ್ತು ಇವುಗಳ ಇತ್ಯರ್ಥವು ನಗದು ರೂಪದಲ್ಲಿ ನಡೆಯುವುದು.

**(ಇ) ಸಂಬಂಧಪಟ್ಟ ಪಾರ್ಟಿಗಳ ಜೊತೆಗಿನ ಬದ್ಧತೆಗಳು**

ಕಂಪನಿಯು ಸಂಬಂಧಪಟ್ಟ ಪಾರ್ಟಿಗೆ 31ನೇ ಮಾರ್ಚ್ 2024ರಂದು ಇದ್ದಂತೆ ಯಾವುದೇ ಬದ್ಧತೆಯನ್ನು ಒದಗಿಸಿರುವುದಿಲ್ಲ (31ನೇ ಮಾರ್ಚ್ 2023: ರೂ. ಇಲ್ಲ)

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| 40 | ಸಂಭಾವ್ಯ ಹೊಣೆಗಾರಿಕೆಗಳು ಮತ್ತು ಬದ್ಧತೆಗಳು | | | |
|---|---|---|---|---|
| | ಕ್ರ. ಸಂ. | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | 1 | ಕಂಪನಿ ಪರವಾಗಿ ಬ್ಯಾಂಕ್‌ನಿಂದ ನೀಡಿರುವ ಗ್ಯಾರಂಟಿಗಳು/ಪ್ರತಿ ಗ್ಯಾರಂಟಿಗಳು | 38.57 | 38.57 |
| | 2 | ಸಾಲ ಎಂಬುದಾಗಿ ಪರಿಗಣಿಸದಿರುವ ಕಂಪನಿಯ ಮೇಲಿನ ಹಕ್ಕುಗಳು | | |
| | ಎ | ಅಗ್ನಿಶಾಮಕ ನೀತಿಯ ಮೇಲಿನ ವಿಮೆ ಕ್ಲೇಮ್- ಕೆಳಗಿನ ಟಿಪ್ಪಣಿ (i) ನೋಡಿ | | |
| | | - ಉಳಿದಿರುವ ಪ್ರಕರಣಗಳು | 207.73 | 207.73 |
| | | - ತೀರ್ಪು ನೀಡಿರುವ ಪ್ರಕರಣಗಳು | 488.70 | 488.70 |
| | | - ಮೇಲಿನವುಗಳ ಬಗ್ಗೆಗಿನ ಬಡ್ಡಿ | 718.56 | 680.06 |
| | ಬಿ | ಕಬ್ಬಿಣದ ಅದುರಿನ ರಫ್ತು ವ್ಯವಹಾರದಲ್ಲಿ ಪಾರ್ಟಿಯು ಮಾಡಿರುವ ಕ್ಲೇಮ್ (ಬಡ್ಡಿ ಸೇರಿ-ಕೆಳಗಿನ ಟಿಪ್ಪಣಿ (i) ನೋಡಿ | 2,594.64 | 2,465.96 |
| | ಸಿ | ಪಿಂಚಣಿ, ಸಣ್ಣ ಉಳಿತಾಯ ಆಸ್ತಿ ಉಸ್ತುವಾರಿ ನಿರ್ದೇಶನಾಲಯ ಮಾಡಿರುವ ಕ್ಲೇಮ್ -ಕೆಳಗಿನ ಟಿಪ್ಪಣಿ (iii) ನೋಡಿ | 1,553.60 | 4,609.86 |
| | ಡಿ | ವೆಸ್‌ಕೇರ್ (ಇಂಡಿಯಾ) ಲಿಮಿಟೆಡ್ ನಿಂದ ವಿಂಡ್‌ಮಿಲ್‌ನ ಗುತ್ತಿಗೆ ಮೇಲಿನ ಕ್ಲೇಮ್ -ಕೆಳಗಿನ ಟಿಪ್ಪಣಿ (iv) ನೋಡಿ | 123.79 | 119.23 |
| | ಇ | ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ಮಾಡಿರುವ ಕ್ಲೇಮ್ - ಬೆಂಘಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್‌ನ (ಬಿಎಸಿಸಿ) ಗುತ್ತಿಗೆ ಮೇಲಿನ ಪರವಾನಗಿ ಶುಲ್ಕ-ಕೆಳಗಿನ ಟಿಪ್ಪಣಿ (v) ನೋಡಿ | 397.14 | 397.14 |
| | 3 | ವಿವಾದಿತ ಡಿಮ್ಯಾಂಡ್‌ಗಳು-ಕೆಳಗಿನ ಟಿಪ್ಪಣಿ (vi) ನೋಡಿ | | |
| | | -ಆದಾಯ ತೆರಿಗೆ ಸಂಬಂಧದಲ್ಲಿ | 3,725.62 | 2,975.76 |
| | | -ಸೇವಾ ತೆರಿಗೆ ಸಂಬಂಧದಲ್ಲಿ | 231.61 | 290.00 |
| | 4 | ಸಾಗಾಣಿಕೆ ಶುಲ್ಕಗಳ ಮೇಲಿನ ಜಿಎಸ್‌ಟಿ ಆರ್‌ಸಿಎಂ-ಕೆಳಗಿನ ಟಿಪ್ಪಣಿ (viii) ನೋಡಿ | 365.49 | 45.98 |
| | 5 | ಎಸ್‌ಕೆಒಎಲ್ ಬ್ರೂಯರೀಸ್ ಕ್ಲೇಮ್ ಮೇಲಿನ ಬಡ್ಡಿ ಹೊಣೆಗಾರಿಕೆ- ಕೆಳಗಿನ ಟಿಪ್ಪಣಿ (viii) ನೋಡಿ | 308.77 | |

ಕಂಪನಿಯು ಕ್ಲೈಮ್‌ಗಳ ಬಗ್ಗೆ ವಿವಾದ ಮಾಡಿರುವುದರಿಂದ ಮೇಲೆ ತಿಳಿಸಿರುವ ಮೊತ್ತಗಳನ್ನು ಒದಗಿಸಿರುವುದಿಲ್ಲ.

i. ಕಂಪನಿ ಮಾಲೀಕತ್ವದ ಬಿಎಸಿಸಿಯಲ್ಲಿ ಸಂಭವಿಸಿದ ಅಗ್ನಿ ಅಪಘಾತದ ಸಂಬಂಧ 2001ರ ಅವಧಿಯಲ್ಲಿ ತಮ್ಮ ಗ್ರಾಹಕರ ಕ್ಲೈಮ್‌ಗಳನ್ನು ಕೆಲವು ವಿಮಾ ಕಂಪನಿಗಳು ಇತ್ಯರ್ಥಪಡಿಸಿದ್ದು, ಇವು ತಾವು ಇತ್ಯರ್ಥಪಡಿಸಿರುವ ಕ್ಲೈಮ್‌ಗಳ ವಸೂಲಿಗಾಗಿ ಪ್ರತಿಸ್ಥಾಪನೆ ತತ್ವಗಳ ಅಡಿಯಲ್ಲಿ ಕಂಪನಿ ಮೇಲೆ ಹಲವಾರು ದಾವೆಗಳನ್ನು ಹೂಡಿವೆ. ಕಂಪನಿ ಅಂತಿಮವಾಗಿ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಘನ ಸರ್ವೋಚ್ಚ ನ್ಯಾಯಾಲಯದ ಮರೆ ಹೋಗಿದೆ. ಘನ ಸರ್ವೋಚ್ಚ ನ್ಯಾಯಾಲಯವು ಸಂಬಂಧಪಟ್ಟ ಎಲ್ಲಾ ವ್ಯಕ್ತಿಗಳು ಸರ್ಕಾರದ ಸಂಸ್ಥೆಗಳಾಗಿರುವುದರಿಂದ (ಕಂಪನಿ, ವಿಮಾ ಕಂಪನಿಗಳು ಮತ್ತು ಸೀಮಾ ಸುಂಕದ ಪ್ರಾಧಿಕಾರಿಗಳು) ವಿವಾದಿತ ವಿಷಯವನ್ನು ಪರಸ್ಪರ ಸೌಹಾರ್ದಯುತವಾಗಿ ಚರ್ಚಿಸಿ ಇತ್ಯರ್ಥಪಡಿಸಿಕೊಳ್ಳುವಂತೆ ದಿನಾಂಕ 6ನೇ ನವೆಂಬರ್ 2009ರ ಆದೇಶದಲ್ಲಿ ನಿರ್ದೇಶಿಸಿದೆ.

ರೂ.207.73 ಲಕ್ಷಗಳ ಮೊತ್ತದ (ಹಿಂದಿನ ವರ್ಷ: ರೂ.207.73ಲಕ್ಷ) ಕೆಲವು ಪ್ರಕರಣಗಳು ಇನ್ನೂ ಇತ್ಯರ್ಥವಾಗದೆ ಉಳಿದಿವೆ.

ಈ ಹಿಂದೆ ಇದೇ ರೀತಿಯ ವಿಚಾರದಲ್ಲಿ ಕೆಳ ನ್ಯಾಯಾಲಯಗಳು ಕಂಪನಿ ಮತ್ತು ಸೀಮಾ ಸುಂಕಗಳ ಇಲಾಖೆ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ವಿಮಾ ಕ್ಲೈಮ್‌ಗಳನ್ನು ಇತ್ಯರ್ಥಪಡಿಸುವ ಜವಾಬ್ದಾರಿ ಹೊಂದಿವೆ ಎಂದು ತೀರ್ಮಾನಿಸಿದ್ದವು. ಕಂಪನಿಯು ಒಟ್ಟು ತೀರ್ಪಿನ ಹೊಣೆಗಾರಿಕೆಯ ರೂ.651.60 ಲಕ್ಷಗಳ ಹೊಣೆಗಾರಿಕೆಯ 25% ಆಗಿ ರೂ.162.90ಲಕ್ಷ ಒದಗಿಸಿದೆ (ಹಿಂದಿನ ವರ್ಷ ರೂ.162.90ಲಕ್ಷಗಳು) ಮತ್ತು ರೂ.488.70 ಲಕ್ಷ (ಹಿಂದಿನ ವರ್ಷ: ರೂ.488.70 ಲಕ್ಷ) ಮೊತ್ತದ ಒದಗಿಸಿಲ್ಲದ ಭಾಗವನ್ನು ಮೇಲೆ ತಿಳಿಸಿದೆ. ಚಾಲ್ತಿ ವರ್ಷದಲ್ಲಿ 6%ನಂತೆ ಚಕ್ರಬಡ್ಡಿಯನ್ನು ರೂ.958.08 ಲಕ್ಷ (ಹಿಂದಿನ ವರ್ಷ: ರೂ.906.75ಲಕ್ಷ) ಮೊತ್ತದ ಮೇಲೆ ಲೆಕ್ಕಾಚಾರ ಮಾಡಿದೆ. ಚಾಲ್ತಿ ವರ್ಷದಲ್ಲಿ ರೂ.239.52 ಲಕ್ಷದ ಮೊತ್ತ ನೀಡಿದೆ. (ಹಿಂದಿನ ವರ್ಷ: ರೂ.226.69ಲಕ್ಷಗಳು) ಮತ್ತು ರೂ.680.06ಲಕ್ಷಗಳ ಬಾಕಿ ಮೊತ್ತವನ್ನು (ಹಿಂದಿನ ವರ್ಷ: ರೂ.641.57ಲಕ್ಷ) ಸಂಭಾವ್ಯ ಹೊಣೆಗಾರಿಕೆಯಲ್ಲಿ ವರದಿ ಮಾಡಿದೆ. ವಿಮೆ ಕಂಪನಿಗಳು ಮತ್ತು ಸೀಮಾ ಸುಂಕ ಇಲಾಖೆ ಮಾಡಬೇಕಿರುವ ಇತ್ಯರ್ಥದ ಪಾಲನ್ನು ಇನ್ನೂ ಅಂತಿಮಗೊಳಿಸಿಲ್ಲ. ಬಿಎಸಿಸಿ ಉಗ್ರಾಣದಲ್ಲಿರುವ ಸರಕನ್ನು ಸೀಮಾ ಸುಂಕ ಇಲಾಖೆ ನೀಡಿರುವ ವ್ಯಾಪಾರ ಸುತ್ತೋಲೆ ಅನ್ವಯ ಕೆಜಿ ಒಂದಕ್ಕೆ ಯುಎಸ್‌ಡಿ 20 ರ ದರದಲ್ಲಿ ಕಂಪನಿ ವಿಮೆ ಮಾಡಿಸಿದೆ.

ii. ಕಂಪನಿಯು ಎಫ್‌ಇ ಅಂಶ 52% ಉಳ್ಳ ಕಬ್ಬಿಣದ ಅದುರನ್ನು ಚೀನಾಕ್ಕೆ ರಫ್ತು ಮಾಡಲು ಒಪ್ಪಂದ ಒಂದನ್ನು ಮಾಡಿಕೊಂಡಿತ್ತು. ಕಂಪನಿಯು ಬದ್ಧತೆಯನ್ನು ಪಾಲಿಸದ ಪ್ರಯುಕ್ತ ಖರೀದಿದಾರರು ಮಧ್ಯಸ್ಥಿಕೆ ನ್ಯಾಯ ಪಂಚಾಯ್ತಿಗೆ ಹೋಗಿದ್ದರು. ಒಪ್ಪಂದದ ಅನ್ವಯ ರೂಪಿಸಿದ್ದ ಮಧ್ಯಸ್ಥಿಕೆ ಸಮಿತಿಯು 5% ನಂತೆ ಬಡ್ಡಿ ಪಾವತಿ ಮಾಡಬೇಕಾಗಿರುವುದಲ್ಲದೆ ಯುಎಸ್‌ಡಿ 18,80,851ರ ಮೊತ್ತಕ್ಕೆ ಕಂಪನಿ ವಿರುದ್ಧ ತೀರ್ಪನ್ನು ಹೊರಡಿಸಿತ್ತು. ಸಾಗರೋತ್ತರ ಖರೀದಿದಾರರಿಂದ ಯುಎಸ್‌ಡಿ 67,473 ಮೊತ್ತದ ಬಾಕಿ ಬರಬೇಕಾಗಿದೆ. ಕಂಪನಿಯ ವಿರುದ್ಧದ ರೂ.2594.64 ಲಕ್ಷಗಳ (ಹಿಂದಿನ ವರ್ಷ: ರೂ.2465.96 ಲಕ್ಷ ) ಬಡ್ಡಿ ಸೇರಿ ಮೇಲಿನ ತಃಖ್ತೆಯಲ್ಲಿ ತಿಳಿಸಿದೆ. ಚೀನಾದಲ್ಲಿ ಮಾಡಿದ ಖರ್ಚುಗಳ ಸಂಬಂಧ ಸಾಗರೋತ್ತರ ಖರೀದಿದಾರರ ಕ್ಲೈಮ್‌ಗಳು ಮತ್ತು ಎಫ್‌ಇಎಂಎ ಅನ್ವಯದ ಹೊಣೆಗಾರಿಕೆಯನ್ನು ಇಲ್ಲಿ ಪರಿಗಣಿಸಿರುವುದಿಲ್ಲ.

ಮಧ್ಯಸ್ಥಿಕೆ ತೀರ್ಪುಗಾರರ ತೀರ್ಪನ್ನು ಕಂಪನಿ ವಿರೋಧಿಸಿದೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ಒಂದನ್ನು ಸಲ್ಲಿಸಿತ್ತು. ಘನ ಉಚ್ಚ ನ್ಯಾಯಾಲಯವು ಪ್ರಕರಣವನ್ನು ಅಂಗೀಕರಿಸಲು ಮತ್ತು ಆದ್ಯತೆಯ ಮೇರೆಗೆ ಪ್ರಕರಣ ನಿರ್ಧಾರ ಮಾಡುವಂತೆ ಸಿಟಿ ಸಿವಿಲ್ ನ್ಯಾಯಾಲಯಕ್ಕೆ ನಿರ್ದೇಶಿಸಿತ್ತು.

ಮೇಲೆ ತಿಳಿಸಿರುವ ವ್ಯವಹಾರಗಳಲ್ಲಿ ಅವ್ಯವಹಾರ ನಡೆದಿದೆ ಎಂಬುದಾಗಿ ಕರ್ನಾಟಕ ವಿಧಾನ ಸಭೆಯ ಸಾರ್ವಜನಿಕ ಉದ್ದಿಮೆಗಳ ಮೇಲಿನ ಸಮಿತಿ ವರದಿ ಮಾಡಿರುವ ಹಿನ್ನೆಲೆಯಲ್ಲಿ ಕಂಪನಿಯು ಅಧಿಕಾರ ವ್ಯಾಪ್ತಿಯ ಪೊಲೀಸ್ ಠಾಣೆಯಲ್ಲಿ ಕ್ರಿಮಿನಲ್ ದೂರನ್ನು ಸಲ್ಲಿಸಿದೆ ಮತ್ತು ಪೊಲೀಸರು ಪ್ರಕರಣದ ತನಿಖೆ ಮಾಡುತ್ತಿದ್ದಾರೆ. ಈ ಕ್ರಿಮಿನಲ್ ದೂರುಗಳ ಸಂಬಂಧ ಪೊಲೀಸರು ಆರೋಪಪಟ್ಟಿ ತಯಾರಿಸಿದ್ದು, ಮ್ಯಾಜಿಸ್ಟ್ರೇಟ್ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ ಹೂಡಿದ್ದಾರೆ.

ಎಂಎಂಐ ಪರವಾಗಿ ರೂ.5 ಕೋಟಿಗಳ ಹಿಂಪಡೆಯಲಾಗದ ಲೆಟರ್ ಆಫ್ ಕ್ರೆಡಿಟ್ ಅನ್ನು ಸ್ಥಾಪಿಸಲಾಗಿದೆ. ಸರಬರಾಜುದಾರರು ಅದುರನ್ನು ಪಡೆಯಲು ಹಣ ವ್ಯವಸ್ಥೆ ಮಾಡಲು ವಿಫಲವಾಗಿ, ಎಂಎಸ್‌ಐಎಲ್ ನಿಂದ ಮುಂಗಡ ಪಡೆಯಿತು. ಹಡಗು 10ನೇ ಡಿಸೆಂಬರ್ 2009ರಂದು ಈಗಾಗಲೇ ಬಂದರಿಗೆ ಬಂದಿದ್ದು, ವಿಳಂಬ ಶುಲ್ಕ ತಪ್ಪಿಸಲು, ಕಂಪನಿಯು ಮುಂದಿನ ದಿನಾಂಕದ ಚೆಕ್‌ಗಳ ಮೇಲೆ ರೂ.2.15 ಕೋಟಿ ಮುಂಗಡ ನೀಡಿತು. ಸ್ವತ್ತುಗಳ ಮೇಲೆ ಸಮಾನಾಂತರ ಅಡಮಾನ ಸೃಷ್ಟಿಸುವ ಬದ್ಧತೆಯನ್ನು ಕಂಪನಿಯು ಪೂರ್ಣಗೊಳಿಸಲಾಗಲಿಲ್ಲ. ಅದುರನ್ನು ಸರಬರಾಜು ಮಾಡುವುದರಲ್ಲಿ ಮುಂದುವರಿದ ವಿಫಲತೆಯ ಹಿನ್ನೆಲೆಯಲ್ಲಿ, ಕಂಪನಿಯು ವಸೂಲಿಗಾಗಿ ಚೆಕ್‌ಗಳನ್ನು ಬ್ಯಾಂಕಿಗೆ ಸಲ್ಲಿಸಿತು. ಆದರೆ ಈ ಚೆಕ್ಕುಗಳು ಅಮಾನ್ಯಗೊಂಡವು. ಹಾಗಾಗಿ ನೆಗೋಷಿಯಬಲ್ ಇನ್‌ಸ್ಟ್ರುಮೆಂಟ್ ಕಾಯ್ದೆ, 1881ರ ಅನ್ವಯ ಕ್ರಿಮಿನಲ್ ಕೇಸನ್ನು 25.02.2010ರಂದು ಹೂಡಲಾಯಿತು. ಈಗ ಈ ಕೇಸ್ ಚೀಫ್ ಮೆಟ್ರೋಪಾಲಿಟನ್ ಕೋರ್ಟ್, ಬೆಂಗಳೂರು ಇಲ್ಲಿ ಉಳಿದಿದೆ. ದಿನಾಂಕ:18ನೇ ಆಗಸ್ಟ್ 2019ರಂದು ನಡೆದ ವಿಚಾರಣೆಯಲ್ಲಿ ಆರೋಪಿಯು ನಿಧನರಾಗಿದ್ದು, ಮರಣ ಪ್ರಮಾಣ ಪತ್ರವನ್ನು ಮುಂದಿನ ವಿಚಾರಣೆಯಲ್ಲಿ ಸಲ್ಲಿಸಲಾಗುವುದು ಎಂದು ಆರೋಪಿಯ ವಕೀಲರು ತಿಳಿಸಿರುವರು.

ಎಂಎಂಐ ಸರಬರಾಜು ಮಾಡಲು ವಿಫಲವಾದುದರಿಂದ ಕಂಪನಿಯು ಮತ್ತೊಂದು ಸರಬರಾಜುದಾರರಾದ ಸರಂ ಎಕ್ಸ್‌ಪೋರ್ಟ್ಸ್ ಅನ್ನು ಭೇಟಿ ಮಾಡಿತು. ಇವರು ಅದೇ ನಿಯಮಗಳು ಮತ್ತು ನಿಬಂಧನೆಗಳಲ್ಲಿ ಸರಬರಾಜು ಮಾಡಲು ಒಪ್ಪಿದರು. ಎಂಎಸ್‌ಐಎಲ್ ನೀಡಿತು ಮತ್ತು 46,846.48 ಎಂ.ಟಿ ಅದುರನ್ನು ತುಂಬಿದ ಹಡಗು 29 ದಿನಗಳ ವಿಳಂಬದ ನಂತರ 14ನೇ ಜನವರಿ 2010ರಂದು ಪ್ರಯಾಣ ಬೆಳೆಸಿತು. ಭಾರತ ಸರ್ಕಾರವು ಸೀಮಾ ಸುಂಕವನ್ನು ಹೆಚ್ಚಿಸಿದರಿಂದ ಎಂಎಸ್‌ಐಎಲ್ ರೂ. 32,22, 600/- ರ ಹೆಚ್ಚುವರಿಯಾಗಿ ಸೀಮಾ ಸುಂಕಾಡವತಿಸಬೇಕಾಯಿತು. ಹಡಗು ನಿಲುಗಡೆಯ ಲಭ್ಯವಿರುವ ಸಮಯ ಮುಗಿದಿದ್ದರಿಂದ ಪರೀಕ್ಷೆ ವರದಿಗಾಗಿ ಕಾಯಲಾಗದ ಪ್ರಯುಕ್ತ ತುತ್ ಆಧಾರದ ಮೇಲೆ ಸರಂ ಎಕ್ಸ್‌ಪೋರ್ಟ್ಸ್ ನಿಂದ ಬಂದ ಅದುರಿನ ಸರಬರಾಜನ್ನು ರವಾನಿಸಲಾಯಿತು. ತದನಂತರ ಹಡಗಿನ ಸರಕಿನ ಎಫ್‌ಇ ಅಂಶ ಕೇವಲ 49.37% ಇರುವುದಾಗಿ ಪರೀಕ್ಷೆ ವರದಿ ತಿಳಿಸಿತು.

ಕಂಪನಿ ಖರೀದಿದಾರರಿಗೆ ಇನ್‌ವಾಯ್ಸ್ ನೀಡಿತು ಮತ್ತು ಎಲ್‌ಸಿ ಮೂಲಕ ದಾಖಲೆಗಳ ಸಮಾಲೋಚನೆ ಮಾಡಿತು. ಆದರೆ ಅದು ಆಗಲೇ ಅವಧಿ ಮೀರಿದ್ದರಿಂದ ಸಂಧಾನ ಫಲಿಸಲಿಲ್ಲ. ಕಾರ್ಗೋ ಹಾಂಗ್‌ಕಾಂಗ್ ಬಂದರನ್ನು ತಲುಪಿದಾಗ ಎಫ್‌ಇ ಅಂಶ 45.9% ಇರುವುದಾಗಿ ಚೀನಾದ ಪರಿಶೀಲನೆ ಗುಣಮಟ್ಟದ ವರದಿಯು ತಿಳಿಸಿತು. ಹಾಗಾಗಿ ಖರೀದಿದಾರರು ಅದುರು ಕಳಪೆ ಗುಣಮಟ್ಟದ್ದು ಎಂಬುದಾಗಿ ತಿರಸ್ಕರಿಸಿದರು. ತದನಂತರ ಸಾಗರೋತ್ತರ

ಖರೀದಿದಾರರಿಗೆ ಅದುರನ್ನು ಮಾರಾಟ ಮಾಡಲು ಮತ್ತು ಹಣವನ್ನು ಪಡೆದುಕೊಳ್ಳುವಂತೆ ಅಧಿಕಾರ ನೀಡಲಾಯಿತು. ಅದರಂತೆ ಅದುರನ್ನು ಸಿಎಫ್ಆರ್ ಆಧಾರದ ಮೇಲೆ ಎಂ.ಟಿ. ಒಂದಕ್ಕೆ ಯುಎಸ್ ಡಾಲರ್ 35 ರಂತೆ ಮಾರಾಟ ಮಾಡಿದ್ದು, 31ನೇ ಮಾರ್ಚ್ 2010ರ ದಿನಾಂಕದ ಇನ್ ವಾಯ್ಸ್ ಅನ್ವಯ ಯುಎಸ್ ಡಾಲರ್ 16,39,626.80 ಬಂದಿದೆ. ಮಾರಾಟದ ಹಣವನ್ನು ಸಂದಾಯ ಮಾಡುವಂತೆ ಎಂಎಸ್ಐಎಲ್ ಸಾಗರೋತ್ತರ ಖರೀದಿದಾರರನ್ನು ಕೋರಿತ್ತು . ಆದರೆ ಸಾಗರೋತ್ತರ ಖರೀದಿದಾರರು ಕಂಪನಿ ವಿರುದ್ಧ ಯುಎಸ್ ಡಾಲರ್ 24,25,051.88 ತನ್ನ ಕ್ಲೇಮ್ ಮಾಡಿದರು. ಇದಕ್ಕೆ ಕಂಪನಿ ಒಪ್ಪಲಿಲ್ಲ.

iii. ಸಣ್ಣ ಉಳಿತಾಯಗಳ ನಿರ್ದೇಶನಾಲಯ: ಪಿಂಚಣಿ, ಸಣ್ಣ ಉಳಿತಾಯಗಳ ಆಸ್ತಿ ಉಸ್ತುವಾರಿ ನಿರ್ದೇಶನಾಲಯದಿಂದ 18ನೇ ನವೆಂಬರ್, 2020 ರ ಪತ್ರ ಒಂದು ಬಂದಿದ್ದು, ಅದರಲ್ಲಿ ತಮ್ಮ ಈ ಮೊದಲಿನ ಪತ್ರಗಳ ಉಲ್ಲೇಖದ ಬಗ್ಗೆ ಗಮನ ಸೆಳೆದು, ಲಾಟರಿ ಮಾರಾಟದ ಹಣ ಕಡಿಮೆ ಸಂದಾಯದ ಬಗ್ಗೆ ಮತ್ತು ವಿಳಂಬವಾದ ಸಂದಾಯದ ಮೇಲಿನ ಬಡ್ಡಿ ರೂ.4,609.86 ಲಕ್ಷ ಎಂಬುದಾಗಿ ತಿಳಿಸಿದೆ. ಆದರೆ ಕಂಪನಿಯು 10ನೇ ಡಿಸೆಂಬರ್ 2020ರ ತನ್ನ ಪತ್ರದ ಅನ್ವಯ ಎಲ್ಲಾ ಬಾಕಿಗಳ ಪೂರ್ಣ ಮತ್ತು ಅಂತಿಮ ಇತ್ಯರ್ಥದ ಬಗ್ಗೆ 17ನೇ ಅಕ್ಟೋಬರ್ 2016ರಂದು ರೂ.352.61ಲಕ್ಷ ಮೊತ್ತವನ್ನು ಮೊದಲೇ ಪಾವತಿ ಮಾಡಿದೆ ಮತ್ತು ಈ ವಿಚಾರದಲ್ಲಿ ಕಂಪನಿಯಿಂದ ಪಾವತಿ ಮಾಡಬೇಕಾದ ಯಾವುದೇ ಬಾಕಿ ಇರುವುದಿಲ್ಲ ಎಂಬುದಾಗಿ ತಿಳಿಸಿದೆ. ಕಂಪನಿಯ ಈ ಪತ್ರವನ್ನು ಸಣ್ಣ ಉಳಿತಾಯಗಳ ನಿರ್ದೇಶನಾಲಯ ಸ್ವೀಕರಿಸಿದೆ. ಅಗತ್ಯ ದಾಖಲೆ ಪತ್ರಗಳನ್ನು ಸಲ್ಲಿಸಿದ ನಂತರ, ಕರ್ನಾಟಕ ಸರ್ಕಾರವು ಮೇಲೆ ತಿಳಿಸಿದ್ದ ಡಿಮ್ಯಾಂಡ್‌ನ್ನು ಬಡ್ಡಿ ಸೇರಿದಂತೆ ರೂ.1787.00 ಲಕ್ಷಗಳಿಗೆ ಕಡಿಮೆ ಮಾಡಿತು. ಕಂಪನಿ ಈ ಕ್ಲೇಮ್ ಸಂಬಂಧ ರೂ.233.40ಲಕ್ಷ ಒದಗಿಸಿದೆ. ಉಳಿಕೆ ಮೊತ್ತ ರೂ.1553.60 ಲಕ್ಷವನ್ನು ಸಂಭಾವ್ಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ. ಬಡ್ಡಿ ಮನ್ನಾ ಮಾಡಲು ಕೋರಿ ಮನವಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಕಂಪನಿ ತೊಡಗಿದೆ.

iv. ಗುತ್ತಿಗೆದಾರರಾದ ಮೆ|| ವೆಸ್‌ಕೇರ್ (ಇಂಡಿಯಾ) ಲಿಮಿಟೆಡ್ ಕಂಪನಿ ಕ್ಲೈಮ್ ಒಂದನ್ನು ಮಾಡಿದ್ದು, ಕಂಪನಿಯು ಅದನ್ನು ವಿರೋಧಿಸಿದೆ. ಈ ವಿಚಾರವನ್ನು ಮಧ್ಯಸ್ಥಿಕೆ ಸಮಿತಿಗೆ ವಹಿಸಿದ್ದು, ಅದು ಕಂಪನಿ ವಿರುದ್ಧ ರೂ.119.23 ಲಕ್ಷಗಳನ್ನು (ಹಿಂದಿನ ವರ್ಷ:ರೂ.119.23ಲಕ್ಷ) ಪಾವತಿ ಮಾಡುವಂತೆ, ಆದೇಶ ಹೊರಡಿಸಿದೆ. ಮಧ್ಯಸ್ಥಿಕೆ ಸಮಿತಿಯ ಈ ತೀರ್ಪನ್ನು ಕಂಪನಿ ವಿರೋಧಿಸಿ 2015-16ರ ಸಾಲಿನಲ್ಲಿ ದಾವೆಯನ್ನು ಹೂಡಿದೆ. ಈ ದಾವೆಯು ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಈ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ.

v. ಕಂಪನಿಯು ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರದಿಂದ (ಎಎಐ) ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ), ಬೆಂಗಳೂರು ಇಲ್ಲಿ, 2,565.4 ಚದರ ಮೀಟರ್ ಜಾಗವನ್ನು ಗುತ್ತಿಗೆಗೆ ಪಡೆದಿತ್ತು. ಗುತ್ತಿಗೆಯನ್ನು 01ನೇ ಜನವರಿ 2001 ರಿಂದ 2010ರ ವರೆಗಿನ ಅವಧಿಗೆ 10 ವರ್ಷಗಳವರೆಗೆ ನವೀಕರಿಸಲಾಗಿತ್ತು. ಜಂಟಿ ಸರ್ವೆಯ ನಂತರ, ಸ್ವತ್ತನ್ನು 02ನೇ ಮಾರ್ಚ್ 2022ರಂದು ವಹಿಸಿಕೊಡಲಾಗಿತ್ತು. ಎಎಐ ಪರವಾನಗಿ ಶುಲ್ಕಗಳ ಬಗ್ಗೆ ರೂ.226.89 ಲಕ್ಷ, ರೂ.167.24 ಲಕ್ಷಗಳ ಹಾನಿ ಮತ್ತು ರೂ.229.90 ಲಕ್ಷಗಳ ಬಡ್ಡಿ ಪಾವತಿಗೆ ಡಿಮ್ಯಾಂಡ್ ಮಾಡಿತ್ತು. ಈ ಸಂಬಂಧ ಕಂಪನಿಯು ಇತ್ಯರ್ಥದ ಮಾತುಕತೆ ಪ್ರಕ್ರಿಯೆಯಲ್ಲಿದೆ ಮತ್ತು ಪರವಾನಗಿ ಶುಲ್ಕ ಬಗ್ಗೆ ರೂ.226.89 ಲಕ್ಷ (ಹಿಂದಿನ ವರ್ಷ: ರೂ.226.89 ಲಕ್ಷ) ಒದಗಿಸಿದೆ. ಎಎಐನಲ್ಲಿ ಇತ್ಯರ್ಥದ ವಿಚಾರವು ಹಾಗೆಯೇ ಉಳಿದಿದ್ದು, ಬಾಡಿಗೆ ತಗಾದೆಯನ್ನು ಪೂರ್ಣವಾಗಿ ಒದಗಿಸಿದೆ. ಕಂಪನಿಯು ರೂ.397.14 ಲಕ್ಷ (ಹಿಂದಿನ ವರ್ಷ: ರೂ.397.14 ಲಕ್ಷ) ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಾಗಿ ವರದಿ ಮಾಡಿದೆ.

vi. **ವಿವಾದಿತ ಡಿಮ್ಯಾಂಡ್‌ಗಳು**

ಎ) ನಗದು ಹರಿಯುವಿಕೆಗಳ ಸಮಯವನ್ನು ಅಂದಾಜು ಮಾಡುವುದು ಕಂಪನಿಯ ಪದ್ಧತಿಯಾಗಿರುವುದಿಲ್ಲ. ಸಂಬಂಧಪಟ್ಟ ಕ್ರಮಾವಳಿಗಳ ಯಾವುದೇ ಉಳಿದಿರುವ ನಿರ್ಣಯದ ಸಂಬಂಧದಲ್ಲಿ ಇದು ಅನ್ವಯ.

ಬಿ) ಮೇಲಿನ ಸಂಭಾವ್ಯ ಹೊಣೆಗಾರಿಕೆಗಳ ಸಂಬಂಧದಲ್ಲಿ ಕಂಪನಿ ಯಾವುದೇ ಮರುಪಾವತಿಗಳನ್ನು ನಿರೀಕ್ಷಿಸಿರುವುದಿಲ್ಲ.

ಸಿ) ಈ ಕ್ರಮಾವಳಿಗಳು ಅಂತಿಮ ಫಲಿತಾಂಶಗಳು ಕಂಪನಿಯ ಹಣಕಾಸಿನ ಸ್ಥಿತಿ ಮತ್ತು ಕಾರ್ಯಾಚರಣೆಗಳ ಫಲಿತಾಂಶಗಳ ಮೇಲೆ ವಾಸ್ತವಿಕ ವ್ಯತಿರಿಕ್ತ ಪರಿಣಾಮ ಉಂಟು ಮಾಡುವುದಿಲ್ಲ ಎಂಬುದಾಗಿ ಕಂಪನಿ ನಂಬಿರುವುದು.

vii. ಸಾಗಾಣಿಕೆ ಶುಲ್ಕಗಳ ಬಗ್ಗೆ ರೂ.45.98ಲಕ್ಷಗಳ ಜಿಎಸ್‌ಟಿ ಆರ್‌ಸಿಎಂ ಮರುಪಾವತಿ ಕ್ಲೇಮ್ ಪಾವತಿಸಿದೆ. ಇದನ್ನು ಟಿಪ್ಪಣಿ ಸಂ.8ರಲ್ಲಿ ಇತರೆ ಆಸ್ತಿಗಳು ಅಡಿಯಲ್ಲಿ ತಿಳಿಸಿದೆ. ಡಿಸೆಂಬರ್ 2020ರವರೆಗೆ ವಾಸ್ತವಿಕ ಕ್ಲೇಮ್ ರೂ.121.42 ಲಕ್ಷಗಳು ರೂ.75.44 ಲಕ್ಷಗಳ ವ್ಯತ್ಯಾಸವನ್ನು ಹಿಂದಿನ ವರ್ಷಗಳಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಗಳಿಗೆ ಸೇರಿಸಿದೆ.

ಕಂಪನಿಯ ಕ್ಲೇಮ್ ಅನ್ನು ಕೇಂದ್ರ ತೆರಿಗೆಯ ಸಹಾಯಕ ಆಯುಕ್ತರು, ಉತ್ತರ ವಿಭಾಗ-3, ಬೆಂಗಳೂರು ಇವರು ತಿರಸ್ಕರಿಸಿದ್ದಾರೆ. ತದನಂತರ ಕಂಪನಿಯು ಸಲ್ಲಿಸಿದ್ದ ಮೇಲ್ಮನವಿಯು ಸಹ ಜಿಎಸ್‌ಟಿಯ ಹೆಚ್ಚುವರಿ ಆಯುಕ್ತರು, ಮೇಲ್ಮನವಿಗಳು-ಐಐ, ಬೆಂಗಳೂರು ಇವರಿಂದ ತಿರಸ್ಕೃತವಾಗಿದೆ. ಮುಂದುವರಿದು, ಜನವರಿ 2021ರಿಂದ ಮಾರ್ಚ್ 2024ರ ವರೆಗಿನ ಅವಧಿಯ ಸಾಗಾಣಿಕೆ ಶುಲ್ಕಗಳ ಮೇಲಿನ ಜಿಎಸ್‌ಟಿ ಆರ್‌ಸಿಎಂ ಮೇಲಿನ ಹೊಣೆಗಾರಿಕೆ ರೂ.319.51 ಲಕ್ಷವನ್ನು ಕಂಪನಿ ಪಾವತಿಸಿರುವುದಿಲ್ಲ. ಕಂಪನಿ ಪರವಾಗಿ ತೀರ್ಪು ಬರುವ ಅವಕಾಶ ಹೆಚ್ಚಾಗಿರುವುದಾಗಿ ಕಾನೂನು ಸಲಹೆ ನೀಡಿರುವುದರಿಂದ ಬರಬೇಕಾಗಿರುವ ಮರು ಪಾವತಿ ಮತ್ತು ಹೆಚ್ಚುವರಿ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ. ಕಂಪನಿ ಆ ಮೊತ್ತವನ್ನು ''ಸಂಭಾವ್ಯ ಹೊಣೆಗಾರಿಕೆ'' ಎಂಬುದಾಗಿ ತಿಳಿಸಿದೆ.

viii. ಮೈಸೂರ್ ಬ್ರೂಯರೀಸ್‌ನಿಂದ (ಎಂಬಿಎಲ್) (ಮೈಸೂರ್ ಬ್ರೂಯರೀಸ್ ಅನ್ನು ಮೊದಲು ಮೆ॥ ಎಸ್‌ಕೆಒಎಲ್ ಬ್ರೂಯರೀಸ್ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದು, ಈಗ ಅದನ್ನು ಮೆ॥ ಎಬಿ ಇನ್‌ಬೆವ್ ಇಂಡಿಯಾ ಲಿಮಿಟೆಡ್ ಹೆಸರಿನಿಂದ ಕರೆಯಲಾಗುತ್ತಿದೆ) ಎಂಎಸ್‌ಐಎಲ್‌ಗೆ ಬರಬೇಕಾಗಿ ಬಾಕಿಯಿರುವ ಕಮಿಷನ್ ಅನ್ನು ನಿರ್ಧರಿಸಲು ಅಧಿಕಾರ ಹೊಂದಿದ ಅಧಿಕಾರಿ ಒಬ್ಬರನ್ನು ನೇಮಕ ಮಾಡುವಂತೆ ಘನ ಸರ್ವೋಚ್ಚ ನ್ಯಾಯಾಲಯ ದಿನಾಂಕ 13ನೇ ಫೆಬ್ರವರಿ 2003ರ ಆದೇಶದ ಅನ್ವಯ ನಿರ್ದೇಶನ ನೀಡಿತ್ತು. ರೂ.2518 ಲಕ್ಷಗಳ ಮೊತ್ತವನ್ನು ಪಾವತಿ ಮಾಡುವಂತೆ ಅಧಿಕಾರ ಹೊಂದಿದ ಅಧಿಕಾರಿಯು ಮಾಡಿದ ನಿರ್ಧಾರವನ್ನು ಮೈಸೂರ್ ಬ್ರೂಯರೀಸ್ ಲಿ. ವಿರೋಧಿಸಿದ್ದು, ಈ ವಿಚಾರವು ವಿಚಾರಣೆಯಲ್ಲಿದೆ.

ಕಂಪನಿಯು ಕಮಿಷನ್ ವಸೂಲಿಗಾಗಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಒಂದನ್ನು ಸಲ್ಲಿಸಿದೆ. ಆದೇಶದ ದಿನಾಂಕದಿಂದ ಎಂಟು ವಾರಗಳ ಕಡೆಯ ಅವಧಿ ಒಳಗೆ ತೀರ್ಪಿನ ಮೊತ್ತದ 60% ಠೇವಣಿ ಇಡುವಂತೆ ಎಂಬಿಎಲ್‌ಗೆ ಆದೇಶಿಸಿದೆ. ಮತ್ತು ಬಾಕಿ ಮೊತ್ತಕ್ಕೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ಇವರ ಹೆಸರಿನಲ್ಲಿ ಬ್ಯಾಂಕ್ ಗ್ಯಾರಂಟಿ ಸಲ್ಲಿಸುವಂತೆ ಆದೇಶಿಸಿದೆ. ಕಂಪನಿಯು ಆಸ್ತಿಗಳ ಜಪ್ತಿಗಾಗಿ ಉಚ್ಚ ನ್ಯಾಯಾಲಯದ ಮೊರೆ ಹೋಗಿದೆ. ಹಣಕಾಸಿನ ವರ್ಷ 2023-24ರ ಅವಧಿಯಲ್ಲಿ ಕಂಪನಿಯು ಕರ್ನಾಟಕ ಉಚ್ಚ ನ್ಯಾಯಾಲಯದ ಪರವಾಗಿ ರೂ.3525.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿಗೆ ಎದುರಾಗಿ ರೂ.3531.53 ಲಕ್ಷದ ಮೊತ್ತವನ್ನು ಪಡೆದಿದೆ. ಒಂದು ವೇಳೆ ಮೇಲ್ಮನವಿಯ ಆದೇಶವು ಕಂಪನಿಯ ವಿರುದ್ಧ ಬಂದರೆ, ಆಗ ಕಂಪನಿಯು ಬ್ಯಾಂಕ್ ದರದಲ್ಲಿ ಬಡ್ಡಿ ಸೇರಿದಂತೆ ಸಂಪೂರ್ಣ ಮೊತ್ತವನ್ನು ಆ ನಿಶ್ಚಿತ ಠೇವಣಿಗಳ ರೂ.308.77 ಲಕ್ಷಗಳ ಬಡ್ಡಿಯನ್ನು ''ಸಂಭಾವ್ಯ ಹೊಣೆಗಾರಿಕೆ ಎಂಬುದಾಗಿ ತಿಳಿಸಿದೆ.

| 41 | ಬಂಡಾವಳ ಬದ್ಧತೆ ಮತ್ತು ಇತರೆ ಬದ್ಧತೆಗಳು | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | **(ಎ) ಬಂಡವಾಳ ಬದ್ಧತೆಗಳು** | | |
| | ಸ್ವತ್ತು, ಸ್ಥಾವರ ಮತ್ತು ಉಪಕರಣ | 187.79 | 160.08 |
| | | | |
| | **(ಬಿ) ಇತರೆ ಬದ್ಧತೆಗಳು** | | |
| | ಪರ್ಯಾಯವಾದ ಚಿಟ್‌ಗೆ ಚಂದಾದಾರಿಕೆಯ ಸಂಬಂಧ ಬದ್ಧತೆ | 104.11 | 22.53 |

## 42. ಇತರೆ ಟಿಪ್ಪಣಿಗಳು:

i. ವಾಹನಗಳು ಮತ್ತು ಗ್ರಾಹಕರುಗಳ ದೀರ್ಘಬಾಳಿಕೆ ವಸ್ತುಗಳ ಸರಬರಾಜಿಗಾಗಿ ಕಂಪನಿಯು ಸರ್ಕಾರಿ ನೌಕರರುಗಳ ಜೊತೆ (ಬಾಡಿಗೆದಾರರು) ಹೈರ್ ಪರ್ಚೇಸ್ ಒಪ್ಪಂದ ಮಾಡಿಕೊಂಡಿತ್ತು. ಬಾಡಿಗೆದಾರರಿಂದ ಬರಬೇಕಾದ ಬಡ್ಡಿ ಸೇರಿದಂತೆ ಬಾಕಿಯಿರುವ ಕಂತುಗಳನ್ನು ''ಬಾಡಿಗೆದಾರರಲ್ಲಿರುವ ದಾಸ್ತಾನು'' ಎಂಬ ಶೀರ್ಷಿಕೆಯಡಿ ತೋರಿಸಿದೆ. ಹೈರ್‌ಪರ್ಚೇಸ್ ವ್ಯವಹಾರವನ್ನು ಜುಲೈ 2008 ರಿಂದ ಸ್ಥಗಿತಗೊಳಿಸಲಾಗಿದೆ.

ii. ಜಂಟಿ ಕಾರ್ಯಾಚರಣೆ ವ್ಯವಸ್ಥೆಗಳು ಮತ್ತು ಮುಂಗಡಗಳು/ಠೇವಣಿಗಳೂ ಸೇರಿದಂತೆ ಸಂಡ್ರಿ ಕ್ರೆಡಿಟರ್ಸ್, ಸಂಡ್ರಿ ಡೆಟರ್ಸ್, ವ್ಯಾಪಾರಿ ಸಹವರ್ತಿಗಳ ಲೆಕ್ಕದ ಖಾತೆಗಳಲ್ಲಿರುವ ಶಿಲ್ಕುಗಳು ದೃಢೀಕರಣ ಮತ್ತು ಸಮನ್ವಯಗೊಳಿಸುವುದಕ್ಕೆ ಒಳಪಟ್ಟಿರುವವು. ನಿವ್ವಳ ಲಾಭದ ಮೇಲೆ ಅಂತಹ ಸಮನ್ವಯತೆ ಮತ್ತು ದೃಢೀಕರಣದ ಯಾವುದೇ ಪರಿಣಾಮ ಉಂಟಾಗುವಿಕೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ತಿಳಿಯಲಾಗದು.

iii. **ಸರ್ಕಾರದ ಅನುದಾನ / ಪ್ರೋತ್ಸಾಹ ಧನ**

ಕಂಪನಿಯು ಸರ್ಕಾರದ ಏಜೆನ್ಸಿ-ಬಿಪಿಪಿಐ ನಿಂದ ಅನುದಾನ ಕೇಳಿದೆ. ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ ಬಿಪಿಪಿಐ ಹೊಸ ಮಳಿಗೆ ಪ್ರಾರಂಭಿಸುವ ಸಮಯದಲ್ಲಿದ್ದ ಸ್ಥಿರಾಸ್ತಿಗಳ ಬಗ್ಗೆ ಖರ್ಚುಗಳಿಗೆ ಸಂಪರ್ಕಿಸಿದ್ದ ಈ ಮೊದಲಿದ್ದ ಯೋಜನೆಯಿಂದ ಪ್ರತಿ ಜನ್ ಔಷಧಿ ಮಳಿಗೆಗಳಲ್ಲಿ ಮಾಡಿದ ಖರೀದಿಗಳಿಗೆ ಮರು ಪಾವತಿ ಸಂಪರ್ಕಿತ ಯೋಜನೆಯನ್ನು ಬದಲಾಯಿಸಿದೆ. ಕಂಪನಿಯು 66 ಮಳಿಗೆಗಳಿಗೆ ಹಕ್ಕು ಸಲ್ಲಿಸಿತ್ತು. ಇದರ ಪೈಕಿ 17 ಮಳಿಗೆಗಳಿಗೆ ಹಕ್ಕನ್ನು ನಿರಾಕರಿಸಲಾಗಿತ್ತು. 13 ಮಳಿಗೆಗಳಿಗೆ ಹಕ್ಕನ್ನು ಸಲ್ಲಿಸಿರುವುದಿಲ್ಲ. ವರ್ಷದ ಕೊನೆಯಲ್ಲಿದ್ದಂತೆ ಸದರಿ ಹಕ್ಕಿನ ಅಡಿಯಲ್ಲಿ ರೂ.66.06 ಲಕ್ಷ ಮೊತ್ತ ಬಾಕಿಯಿದ್ದಿತು. ಇದಕ್ಕಾಗಿ ಸಮಾನ ಮೊತ್ತದ ವ್ಯವಸ್ಥೆ ಮಾಡಿದೆ. ಆದರೂ, ಜನೌಷಧಿ ಇಲಾಖೆಯಿಂದ ಬಂದಿರುವ ಪತ್ರದ ಅನುಸಾರ, ಕಂಪನಿಯು ಸಾಧಾರಣ ಪ್ರೋತ್ಸಾಹಧನದ ಸಂಪೂರ್ಣ ಮೊತ್ತವನ್ನು ಪಡೆಯುವುದು ಮತ್ತು ಅಂತಹ ಪ್ರೋತ್ಸಾಹ ಧನದ ಲೆಕ್ಕದಲ್ಲಿ ಬರಬೇಕಾಗಿರುವ ಯಾವುದೇ ಬಾಕಿಯಿರುವುದಿಲ್ಲ.

iv. ಚಿಟ್‌ಫಂಡ್ ವಿಭಾಗದ ಸಂಬಂಧಲ್ಲಿ, ''ಬಹುಮಾನಿತ ಚಂದಾದಾರರುಗಳಿಂದ ವಸೂಲು ಮಾಡಬೇಕಾಗಿರುವ ಮೊತ್ತ'' ರೂ.31618.08 ಲಕ್ಷವನ್ನು'' ಹಣಕಾಸಿನ ಆಸ್ತಿಗಳ ಅಡಿಯಲ್ಲಿನ ಸಾಲಗಳು'' ಎಂಬುದಾಗಿ ವರ್ಗೀಕರಿಸಿದೆ. ಅದರ ಬೆಲೆಯಲ್ಲಿ ಮಾಪನ ಮಾಡಿದೆ. ರೂ.1196.65ಲಕ್ಷಗಳ ನಿವ್ವಳ ವಾಹಕ ಮೊತ್ತವು ಸಮನ್ವಯತೆ ಮಾಡಿರದ ಶಿಲ್ಕು ಆಗಿರುವುದು. ಅಂತಹ ಸಮನ್ವಯತೆ ಮತ್ತು ದೃಢೀಕರಣದ ಪರಿಣಾಮ ಯಾವುದಾದರೂ ಇದ್ದರೆ, ಅದರಿಂದ ಲಾಭದ ಮೇಲೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲಿನ ಪರಿಣಾಮವನ್ನು ತಿಳಿಯಲಾಗದು.

v. ಕಂಪನಿಯು ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್, ಬೆಂಗಳೂರು ಇದರ ಸಮೀಪದಲ್ಲಿನ ಸ್ವತ್ತಿನ ಸಂಬಂಧ ಶ್ರೀಮತಿ ನಾಗರತ್ನ ಇವರೊಡನೆ ಗುತ್ತಿಗೆ ಒಪ್ಪಂದ ಒಂದನ್ನು ಮಾಡಿಕೊಂಡಿದೆ. ಗುತ್ತಿಗೆಯನ್ನು 2003 ರಿಂದ 2008ರವರೆಗೆ 5 ವರ್ಷಗಳ ಅವಧಿಗೆ ನವೀಕರಿಸಿದೆ. ಸ್ವತ್ತನ್ನು ಖಾಲಿ ಮಾಡುವುದರಲ್ಲಿ ವಿಳಂಬವಾಗಿರುವುದರಿಂದ ಗುತ್ತಿಗೆ ಪಡೆದವರು ಪಾವತಿ ಮಾಡಿರದ ಬಾಡಿಗೆ ರೂ.43ಲಕ್ಷಗಳನ್ನು 18%ನಂತೆ ಬಡ್ಡಿಯ ಮೊತ್ತ ರೂ.16ಲಕ್ಷಗಳ ವಸೂಲಿಗೆ ನ್ಯಾಯಾಲಯದ ಮೊರೆ ಹೋಗಿದ್ದಾರೆ (ಓಎಸ್ ನಂ.75/2014). 15ನೇ ನವೆಂಬರ್ 2011 ರಿಂದ 20ನೇ ಡಿಸೆಂಬರ್ 2013ರ ಅವಧಿಗೆ ರೂ.59 ಲಕ್ಷಗಳ ಪಾವತಿ ಮಾಡಿರದ ಬಾಡಿಗೆ ವಸೂಲಿ ಬಗ್ಗೆ ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರು ಕಂಪನಿಯ ವಿರುದ್ಧ ದಿನಾಂಕ 24ನೇ ಜೂನ್ 2019ರ ಆದೇಶ ಒಂದನ್ನು ಹೊರಡಿಸಿದೆ. ಈ ಸಂಬಂಧ ಕಂಪನಿ ಮಾನ್ಯ ಕರ್ನಾಟಕದ ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದು, 21ನೇ ಅಕ್ಟೋಬರ್ 2019 ರಂದು ಮಧ್ಯಂತರ ತಡೆಯಾಜ್ಞೆ ಪಡೆದಿದೆ. ನ್ಯಾಯಾಲಯದ ಆದೇಶಗಳ ಅನ್ವಯ ಕಂಪನಿಯು ಉಚ್ಚ ನ್ಯಾಯಾಲಯದಲ್ಲಿ ರೂ.50 ಲಕ್ಷ ಠೇವಣಿ ಮಾಡಿದೆ (ಆರ್‌ಎಫ್‌ಎ 1704/2019). ಈ ವಿಚಾರವು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದೆ.

vi. ಕಂಪನಿಯು ಆಮದಾದ ನದಿ ಮರಳಿಗಾಗಿ 2017ರಲ್ಲಿ ಮೆ॥ ಪೊಸಿಡಾನ್ ಎಫ್‌ಜಡ್‌ಇ, ದುಬೈ (ಸರಬರಾಜುದಾರರು) ಇವರ ಜೊತೆ ಒಪ್ಪಂದ ಒಂದನ್ನು ಮಾಡಿಕೊಂಡಿತ್ತು . ಈ ದಿನಾಂಕದವರೆಗೆ 2 ಶಿಪ್‌ಮೆಂಟ್‌ಗಳಲ್ಲಿ (ಅಕ್ಟೋಬರ್ 2017 ಮತ್ತು ಜನವರಿ 2018) 1,03,872.77 ಎಂಟಿ ಮರಳನ್ನು ಆಮದು ಮಾಡಿಕೊಂಡಿದೆ ಮತ್ತು ಈ ಮರಳನ್ನು ಆಂಧ್ರಪ್ರದೇಶದಲ್ಲಿನ ಕೃಷ್ಣಪಟ್ಲಂ ಬಂದರಿನಲ್ಲಿ ದಾಸ್ತಾನು ಮಾಡಿದೆ. ಕಂಪನಿಯು ಇದುವರೆವಿಗೆ 14,759 ಎಂಟಿ ಮರಳನ್ನು ಕಂಪನಿ ಮಾರಾಟ ಮಾಡಿದೆ.

ಸೀಮಾ ಸುಂಕದ ಆಯುಕ್ತರು, ವಿಜಯವಾಡ ಇವರು ನಂ.ವಿಜೆಡಿ-ಕಸ್ಟಂ-ಪಿಆರ್‌ವಿ-ಸಿಓಎಂ-003-20-21 ದಿನಾಂಕ: 03ನೇ ಡಿಸೆಂಬರ್ 2020ರ ಅನ್ವಯ ವ್ಯತ್ಯಾಸದ ಸುಂಕ, ಕಡಿಮೆ ಮಾಡಿದ ದಂಡ ಮತ್ತು ಶಿಕ್ಷೆಯ ಬಗ್ಗೆ ರೂ.599 ಲಕ್ಷಗಳ ಪಾವತಿಗೆ ಡಿಮ್ಯಾಂಡ್ ಮಾಡಿ ಆದೇಶ ಒಂದನ್ನು ಹೊರಡಿಸಿದ್ದರು.

ಸೀಮಾ ಸುಂಕದ ಆಯುಕ್ತರ ಈ ಆದೇಶವನ್ನು ರದ್ದುಪಡಿಸಲು ಕಂಪನಿ ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಮೇಲ್ಮನವಿ ಸಲ್ಲಿಸಿತ್ತು ಮತ್ತು ಸದರಿ ವಿಷಯವು ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಇತ್ಯರ್ಥವಾಗದೆ ಉಳಿದಿದೆ. ಈ ಸಂಬಂಧವಾಗಿ ಕಂಪನಿಯು ರೂ.11.80 ಲಕ್ಷಗಳ ಬ್ಯಾಂಕ್ ಗ್ಯಾರಂಟಿ ನೀಡಿದೆ. ಕಂಪನಿಯು ಖರೀದಿದಾರರಾದ ಓಷನ್ ಏಜೆನ್ಸೀಸ್ ಇವರಿಗೆ ಸೇರಿದ 6,826 ಟನ್‌ಗಳ ತೂಕದ ಮರಳನ್ನು ಹೊಂದಿದೆ. 10000 ಎಂಟಿ ಮಾರಾಟ ಮಾಡಿದ ನಂತರ ಮೇಲ್ಕಂಡ ತೂಕದ ಮರಳು ಉಳಿದಿದೆ.

vii. ಮೆ॥ ಪರ್ಲ್ ಪೋರ್ಟ್ಸ್ ಅಂಡ್ ವೇರ್ ಹೌಸಿಂಗ್ ಪ್ರೈ.ಲಿ. ಇವರು 89,888 ಚದರ ಅಡಿ ಜಾಗವನ್ನು, ಪ್ರತಿ ವರ್ಷ 25% ಹೆಚ್ಚಳದೊಡನೆ, 15 ವರ್ಷಗಳ ಅವಧಿವರೆಗೆ ಗುತ್ತಿಗೆಗೆ ನೀಡಲು ದಿನಾಂಕ:28ನೇ ಮಾರ್ಚ್ 2018ರಂದು ಎಂಎಸ್‌ಐಎಲ್ ಜೊತೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿತ್ತು . ಸದರಿ ಒಪ್ಪಂದ ಪತ್ರಕ್ಕೆ ಸೇರ್ಪಡೆ ಒಂದನ್ನು ಮಾಡುವ ಮುಖೇನ ದಿನಾಂಕ:18ನೇ ಜೂನ್ 2018ರಂದು ಮಾರ್ಪಾಡು ಮಾಡಲಾಗಿದೆ. ಬಾಡಿಗೆದಾರರು ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಕಿಗಳನ್ನು ಪಾವತಿ ಮಾಡದಿರುವುದಕ್ಕಾಗಿ ಕಂಪನಿಯು 3ನೇ ಮೇ 2021 ರಂದು ಗುತ್ತಿಗೆ ರದ್ದತಿ ನೋಟೀಸ್ ನೀಡಿತ್ತು . ಬಾಡಿಗೆದಾರರು ಕಂಪನಿಯಿಂದ ಅನುಮತಿ ಪಡೆಯದೆ ಸಿವಿಲ್ ಕಾಮಗಾರಿಗಳನ್ನು ಕೈಗೊಂಡಿದ್ದರಿಂದ ಅವರ ವಿರುದ್ಧ ಪೊಲೀಸ್ ದೂರು ಸಲ್ಲಿಸಲಾಗಿತ್ತು . ಏಕೈಕ ನ್ಯಾಯ ತೀರ್ಮಾನದ ಮಧ್ಯಸ್ಥಿಕೆದಾರರನ್ನು ನೇಮಕ ಮಾಡುವಂತೆ ಕೋರಿ ಕಂಪನಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿತ್ತು ಮತ್ತು 21ನೇ ಮಾರ್ಚ್ 2022ರಂದು ನಿವೃತ್ತ ನ್ಯಾಯಾಧೀಶರನ್ನು ಏಕೈಕ ನ್ಯಾಯ ತೀರ್ಮಾನ ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿತ್ತು . ವರ್ಷದ ಕೊನೆಯಲ್ಲಿ ಇದ್ದಂತೆ, ಬಾಡಿಗೆದಾರರಿಂದ ರೂ.337.32 ಲಕ್ಷ (ಹಿಂದಿನ ವರ್ಷ 279.53 ಲಕ್ಷ) ಬಾಕಿ ಬರಬೇಕಾಗಿದೆ. ಕಂಪನಿಯು ಇದರ ಸಂಬಂಧ ರೂ.137.24 ಲಕ್ಷ (ಹಿಂದಿನ ವರ್ಷ: ರೂ.137.24ಲಕ್ಷ)

viii. ಕಂಪನಿಯು ನವಿ ಮುಂಬಯಿಯಲ್ಲಿ ಇರುವ ಅದರ ಗುತ್ತಿಗೆ ಸ್ವತ್ತನ್ನು (ಕರ್ನಾಟಕ ಭವನ) ಮೆ॥ ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ.ಲಿ. ಜೊತೆ 15 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ದಿನಾಂಕ 27ನೇ ಸೆಪ್ಟೆಂಬರ್ 2018ರಂದು ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದು. ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಡಿಗೆದಾರರು ಬಾಕಿಗಳನ್ನು ಪಾವತಿಸಿರುವುದಿಲ್ಲ ಮತ್ತು ವರ್ಷದ ಕೊನೆಯಲ್ಲಿ ಇದ್ದಂತೆ ಬಾಡಿಗೆದಾರರಿಂದ ರೂ.1,006.03 ಲಕ್ಷ (ಹಿಂದಿನ ವರ್ಷ: ರೂ.759.18ಲಕ್ಷ) ಬಾಡಿಗೆ ಬಾಕಿ ಬರಬೇಕಿದೆ ಮತ್ತು ಕಂಪನಿಯು ಸಮಾನ ಮೊತ್ತದ ವ್ಯವಸ್ಥೆ ಹೊಂದಿರುವುದು.

ix. ಕಂಪನಿಯು ಟೂರ್ಸ್ ಅಂಡ್ ಟ್ರಾವಲ್ಸ್ ಸೇವೆಗಳಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಕರ್ನಾಟಕ ಇದರಿಂದ ಕೆಲವು ಮುಂಗಡಗಳನ್ನು ಪಡೆದಿದೆ. ಕಂಪನಿಯು ಕಾಗದ ವಿಭಾಗದಿಂದಲೂ ಕೂಡ ಆರ್‌ಜಿಯುಎಚ್‌ಎಸ್‌ಗೆ ಸರಬರಾಜುಗಳನ್ನು ಮಾಡಿದೆ. ಕಂಪನಿ ಮತ್ತು ಆರ್‌ಜಿಯುಎಚ್‌ಎಸ್ ಹಾಗೂ ಸಂಬಂಧಪಟ್ಟ ಸೇವೆ ಪೂರೈಕೆದಾರರ ನಡುವೆ ವಿವಾದ ಉಂಟಾಗಿರುವುದರಿಂದ, ಆರ್‌ಜಿಯುಎಚ್ ಎಸ್ ಮತ್ತು ಸೇವೆ ಪೂರೈಕೆದಾರರುಗಳ ಸ್ವೀಕರಿಸಬಹುದಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಲೆಕ್ಕಗಳನ್ನು ಸಮನ್ವಯತೆ ಮಾಡಬೇಕಾಗಿದೆ. ಕಂಪನಿಯು ಈ ವಿಚಾರದ ಸಂಬಂಧ ರೂ.200 ಲಕ್ಷಗಳ ಪ್ರಮಾಣದ ವಸೂಲಾಗದ ಸಮನ್ವಯತೆ ವಿವರಣೆಗಳು ಇಲ್ಲದಿರುವುದರಿಂದ, ಇದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಸಾಧ್ಯನೀಯ ಪರಿಣಾಮವನ್ನು ತಿಳಿಯಲಾಗದು.

43. **ಅನುಸೂಚಿ-III ರ ಅನ್ವಯ ಅಗತ್ಯವಾದ ಇತರೆ ನಿಯಂತ್ರಣ ಮಾಹಿತಿ ಪಡೆದ ಹಣಗಳ ಬಳಕೆ**

31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವರ್ಷದಲ್ಲಿ ವಿದೇಶಿ ಕಂಪನಿಗಳು (ಮಧ್ಯವರ್ತಿಗಳು) ಸೇರಿದಂತೆ ಯಾವುದೇ ಇತರೆ ವ್ಯಕ್ತಿಗೆ (ಗಳಿಗೆ) ಅಥವಾ ಕಂಪನಿಗೆ (ಗಳಿಗೆ) ಕಂಪನಿಯು ಮುಂಗಡ ನೀಡಿರುವುದಿಲ್ಲ ಅಥವಾ ಸಾಲ ನೀಡಿರುವುದಿಲ್ಲ ಅಥವಾ ಹಣ ಹೂಡಿಕೆ ಮಾಡಿರುವುದಿಲ್ಲ. (ಪಡೆದುಕೊಂಡ ಹಣದಿಂದ ಅಥವಾ ಷೇರ್ ಪ್ರೀಮಿಯಂನಿಂದ ಅಥವಾ ಹಣಗಳ ರೂಪದಲ್ಲಿ)

i) ಕಂಪನಿಯಿಂದ ಅಥವಾ ಕಂಪನಿ ಪರವಾಗಿ (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ನೀಡಿಕೆ ಅಥವಾ ಹೂಡಿಕೆಗೆ ಅಥವಾ

ii) ಅಂತಿಮ ಫಲಾನುಭವಿಗಳಿಗೆ ಅಥವಾ ಇವರ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹ ಯಾವುದಾದರೂ ಒದಗಿಸುವಿಕೆ.

ಮುಂದುವರಿದು, 31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ, ಕಂಪನಿಯು ಕೆಳಕಂಡಂತೆ ವ್ಯವಹಾರ ನಡೆಸಲು (ಲಿಖಿತವಾಗಿ ದಾಖಲಾದ ಅಥವಾ ದಾಖಲಿಸದೆ ಇರುವ) ಅರ್ಥವಂತಿಕೆಯೊಡನೆ ವಿದೇಶಿ ಸಂಸ್ಥೆಗಳು (ಹಣ ನೀಡಿಕೆ ಪಾರ್ಟಿ) ಸೇರಿದಂತೆ ಯಾವುದೇ ವ್ಯಕ್ತಿಯಿಂದ (ಗಳಿಂದ) ಅಥವಾ ಕಂಪನಿಯಿಂದ (ಗಳಿಂದ) ಯಾವುದೇ ಹಣ ಪಡೆದಿರುವುದಿಲ್ಲ.

i) ಹಣ ನೀಡಿಕೆ ಪಾರ್ಟಿಯಿಂದ ಅಂತಿಮ ಫಲಾನುಭವಿಗಳು ಅಥವಾ ಇವರ ಪರವಾಗಿ ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳು ನೇರವಾಗಿ ಅಥವಾ ಪರೋಕ್ಷವಾಗಿ ಹಣ ನೀಡಿಕೆ ಅಥವಾ ಹಣ ಹೂಡಿಕೆ ಅಥವಾ

ii) ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಇತರೆ ಒದಗಿಸುವಿಕೆ

### ಬಿ. ಕ್ರಿಪ್ಟೋ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿ ವಿವರಗಳು

ಕಂಪನಿಯು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಕ್ರಿಪ್ಟೊ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿಯಲ್ಲಿ ಹೂಡಿಕೆ ಮಾಡಿರುವುದಿಲ್ಲ ಅಥವಾ ವ್ಯಾಪಾರ ಮಾಡಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

### ಸಿ. ಹೊಂದಿರುವ ಬೇನಾಮಿ ಸ್ವತ್ತಿನ ವಿವರಗಳು

ಬೇನಾಮಿ ಸ್ವತ್ತನ್ನು ಹೊಂದಿರುವ ಬಗ್ಗೆ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಬೇನಾಮಿ ಸ್ವತ್ತಿನ ವ್ಯವಹಾರಗಳ ನಿಷೇಧ ಕಾಯ್ದೆ 1988 (2016ರಲ್ಲಿ ತಿದ್ದುಪಡಿಯಾದಂತೆ) (ಮೊದಲು ಬೇನಾಮಿ ವ್ಯವಹಾರಗಳ (ನಿಷೇಧ) ಕಾಯ್ದೆ, 1988 (45/1988) ಮತ್ತು ಇದರಡಿಯಲ್ಲಿ ಮಾಡಿದ ನಿಯಮಗಳ ಅನ್ವಯ ಕಂಪನಿಯ ವಿರುದ್ಧ ಯಾವುದೇ ಕ್ರಮಾವಳಿಗಳನ್ನು ಕೈಗೊಂಡಿರುವುದಿಲ್ಲ ಅಥವಾ ಇತ್ಯರ್ಥವಾಗದೆ ಉಳಿದಿರುವುದಿಲ್ಲ (ಹಿಂದನ ವರ್ಷ: ಇಲ್ಲ)

### ಡಿ. ಉದ್ದೇಶಪೂರ್ವಕ ಸುಸ್ತಿದಾರ

ಕಂಪನಿಯನ್ನು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಯಾವುದೇ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆ ಅಥವಾ ಸರ್ಕಾರ ಅಥವಾ ಯಾವುದೇ ಸರ್ಕಾರಿ ಅಧಿಕಾರಿಯು ಉದ್ದೇಶಪೂರ್ವಕ ಸುಸ್ತಿದಾರ ಎಂದು ಘೋಷಿಸಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

### ಇ. ಘೋಷಣೆ ಮಾಡಿರದ ಆದಾಯ

ಕಂಪನಿಯು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಆದಾಯ ತೆರಿಗೆ ಕಾಯ್ದೆ, 1961ರ ಅನ್ವಯ ತೆರಿಗೆ ನಿರ್ಧರಣೆ ಸಮಯದಲ್ಲಿ (ಅಂದರೆ ಆದಾಯ ತೆರಿಗೆ ಕಾಯ್ದೆ, 1961ರ ತಪಾಸಣೆ ಅಥವಾ ಸರ್ವೆ ಅಥವಾ ಯಾವುದೇ ಇತರೆ ನಿಬಂಧನೆಗಳು) ಲೆಕ್ಕದ ಪುಸ್ತಕಗಳಲ್ಲಿ ದಾಖಲಿಸದಿರುವ ಯಾವುದೇ ವ್ಯವಹಾರಗಳನ್ನು ಆದಾಯ ಎಂಬುದಾಗಿ ಒಪ್ಪಿಸಿರುವುದಿಲ್ಲ ಅಥವಾ ಘೋಷಿಸಿರುವುದಿಲ್ಲ.

### ಎಫ್. ಸ್ಥಗಿತಗೊಂಡಿರುವ ಕಂಪನಿಗಳ ಜೊತೆಗಿನ ಸಂಬಂಧ

ಕಂಪನಿಯು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 248ರ ಅನ್ವಯ ಅಥವಾ ಕಂಪನಿಗಳ ಕಾಯ್ದೆ, 1956ರ ಪ್ರಕರಣ 560ರ ಅನ್ವಯ, ಸ್ಥಗಿತಗೊಂಡಿರುವ ಕಂಪನಿಗಳ ಜೊತೆ ಯಾವುದೇ ವ್ಯವಹಾರಗಳನ್ನು ನಡೆಸಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

### ಜಿ. ಕಂಪನಿಗಳ ಪದರಗಳ ಸಂಖ್ಯೆಯ ಪರಿಪಾಲನೆ

ಕಂಪನಿಗಳ (ಪದರಗಳ ಸಂಖ್ಯೆಯ ಮೇಲೆ ನಿರ್ಬಂಧ) ನಿಯಮಗಳು, 2017 ಓದಿಕೊಂಡಂತೆ ಕಾಯ್ದೆಯ ಪ್ರಕರಣ 2ರ ಕಲಂ (87)ರ ಅನ್ವಯ ನಿಗದಿಪಡಿಸಿರುವಂತೆ ಪದರಗಳ ಸಂಖ್ಯೆಯನ್ನು ಕಂಪನಿ ಅನುಪಾಲನೆ ಮಾಡಿದೆ.

### ಎಚ್. ವ್ಯವಸ್ಥೆಗಳ ಅನುಮೋದಿತ ಯೋಜನೆಯ(ಗಳ) ಅನುಪಾಲನೆ

ಕಂಪನಿಯು ಟಿಪ್ಪಣಿ 43ರಲ್ಲಿ ತಿಳಿಸಿರುವಂತೆ ವ್ಯವಸ್ಥೆಯ ಯೋಜನೆ ಒಂದನ್ನು ಮಾಡಿಕೊಂಡಿದೆ. ಅಂತಹ ಯೋಜನೆಯ ಲೆಕ್ಕ ನಿರ್ವಹಣೆ ಪರಿಣಾಮವನ್ನು ''ಯೋಜನೆ'' ಮತ್ತು ಐಎನ್‌ಡಿ ಎಎಸ್ ಅನುಸಾರ ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕ ಮಾಡಿದೆ.

### ಐ. ಸ್ವತ್ತು , ಸ್ಥಾವರ ಮತ್ತು ಉಪಕರಣದ, ಬಳಕೆ ಹಕ್ಕಿನ ಆಸ್ತಿಗಳು ಮತ್ತು ಅಗೋಚರಿತ ಆಸ್ತಿಯ ಮೌಲ್ಯಮಾಪನ:

ಕಂಪನಿಯು ತನ್ನ ಸ್ವತ್ತು , ಸ್ಥಾವರ ಮತ್ತು ಉಪಕರಣ, ಬಳಕೆ ಹಕ್ಕಿನ ಆಸ್ತಿಗಳು ಮತ್ತು ಅಗೋಚರಿತ ಆಸ್ತಿಯ ಬಗ್ಗೆ ಚಾಲ್ತಿ ವರ್ಷ ಅಥವಾ ಹಿಂದಿನ ವರ್ಷದ ಅವಧಿಯಲ್ಲಿ ಮರು ಮೌಲ್ಯಮಾಪನ ಮಾಡಿರುವುದಿಲ್ಲ.

**ಟಿಪ್ಪಣಿ 44 : ಹಣಕಾಸಿನ ಅನುಪಾತ**

| | ಅನುಪಾತದ ವಿಧ | ನ್ಯಾಮರೇಟರ್ | ಡಿನಾಮಿನೇಟರ್ | 2023-24 | 2022-23 | ವ್ಯತ್ಯಾಸ % ನಲ್ಲಿ | 25%ಗಿಂತ ಹೆಚ್ಚಳ ವ್ಯತ್ಯಾಸಕ್ಕೆ ಕಾರಣ |
|---|---|---|---|---|---|---|---|
| 1 | ಚಾಲ್ತಿ ಅನುಪಾತ (ಸಮಯಗಳಲ್ಲಿ) | ಚಾಲ್ತಿ ಆಸ್ತಿಗಳು | ಚಾಲ್ತಿ ಹೊಣೆಗಾರಿಕೆಗಳು | 2.26 | 2.22 | 1.46% | ಅನ್ವಯವಾಗದು |
| 2 | ಸಾಲ-ಈಕ್ವಿಟಿ ಅನುಪಾತ (ಸಮಯಗಳಲ್ಲಿ) | ಒಟ್ಟು ಸಾಲ | ಒಟ್ಟು ಈಕ್ವಿಟಿ | ಅನ್ವಯವಾಗದು | ಅನ್ವಯವಾಗದು | ಅನ್ವಯವಾಗದು | ಅನ್ವಯವಾಗದು |
| 3 | ಸಾಲದ ಸೇವೆ ಒಳಗೊಂಡ ಅನುಪಾತ (ಸಮಯಗಳಲ್ಲಿ) | ಬಡ್ಡಿಗೆ ಮುನ್ನ ಗಳಿಕೆಗಳು, ಸವಕಳಿ ಮತ್ತು ಅಮಾರ್ಟೈಜೇಷನ್ ಮತ್ತು ತೆರಿಗೆ ನಂತರ ಸ್ಥಿರಾಸ್ತಿಗಳು ಇತ್ಯಾದಿ ಮಾರಾಟದ ಮೇಲೆ ನಷ್ಟ/ಲಾಭದಂತಹ ಇತರೆ ಹೊಂದಾಣಿಕೆಗಳು | ಸಾಲದ ಸೇವೆ | ಅನ್ವಯವಾಗದು | ಅನ್ವಯವಾಗದು | ಅನ್ವಯವಾಗದು | ಅನ್ವಯವಾಗದು |
| 4 | ಈಕ್ವಿಟಿ ಮೇಲೆ ಗಳಿಕೆ ಅನುಪಾತ (%) | ತೆರಿಗೆ ನಂತರ ನಿವ್ವಳ ಲಾಭ | ಸರಾಸರಿ ಒಟ್ಟು ಈಕ್ವಿಟಿ | 16.95% | 11.00% | 54.11% | ಗಳಿಕೆ ಮತ್ತು ಸಾಲಗಳಲ್ಲಿ ಹೆಚ್ಚಳ |
| 5 | ತಪಶೀಲು ವಹಿವಾಟು ಅನುಪಾತ (ಸಮಯಗಳಲ್ಲಿ) | ಕಾರ್ಯಾಚರಣೆಗಳಿಂದ ಬಂದ ಗಳಿಕೆ | ಸರಾಸರಿ ತಪಶೀಲುಗಳು | 21.80 % | 19.14 % | 13.91% | ಅನ್ವಯಿಸದು |
| 6 | ವ್ಯಾಪಾರದಿಂದ ಬರಬೇಕಾದವುಗಳ ವಹಿವಾಟಿನ ಅನುಪಾತ (ಸಮಯಗಳಲ್ಲಿ) | ಕಾರ್ಯಾಚರಣೆಗಳಿಂದ ಬಂದ ಗಳಿಕೆ | ಸರಾಸರಿ ವ್ಯಾಪಾರದಿಂದ ಬರಬೇಕಾದವು | 59.43% | 45.87% | 29.57% | ಗಳಿಕೆ ಮತ್ತು ಸಾಲಗಳಲ್ಲಿ ಹೆಚ್ಚಳ |
| 7 | ವ್ಯಾಪಾರದ ಬಗ್ಗೆ ಪಾವತಿಸಬೇಕಾದ ವಹಿವಾಟಿನ ಅನುಪಾತ (ಸಮಯಗಳಲ್ಲಿ) | ಒಟ್ಟು ಖರ್ಚುಗಳು | ಸರಾಸರಿ ವ್ಯಾಪಾರದ ಬಗ್ಗೆ ಪಾವತಿಸ ಬೇಕಾಗಿರುವುದು | 59.16% | 24.15% | 144.98% | ಖರೀದಿಗಳು ಮತ್ತು ವ್ಯಾಪಾರದ ಪಾವತಿಗಳಲ್ಲಿ ಹೆಚ್ಚಳ |
| 8 | ನಿವ್ವಳ ಬಂಡವಾಳ ಅನುಪಾತ (ಸಮಯಗಳಲ್ಲಿ) | ಕಾರ್ಯಾಚರಣೆಗಳಿಂದ ಬಂದ ಗಳಿಕೆ | ದುಡಿಮೆ ಬಂಡವಾಳ | 5.44 % | 7.45 % | 27.00% | ಗಳಿಕೆಯಲ್ಲಿ ಹೆಚ್ಚಳ |
| 9 | ನಿವ್ವಳ ಲಾಭದ ಅನುಪಾತ (%) | ತೆರಿಗೆ ನಂತರ ನಿವ್ವಳ ಲಾಭ | ಕಾರ್ಯಾಚರಣೆಗಳಿಂದ ಬಂದ ಗಳಿಕೆ | 3.07% | 2.15% | 42.71% | ನಿವ್ವಳ ಲಾಭದಲ್ಲಿ ಹೆಚ್ಚಳ |
| 10 | ಹೂಡಿಕೆ ಮೇಲಿನ ಗಳಿಕೆ (%) | ಬಡ್ಡಿ, ವಿಶೇಷ ಬಾಬ್ತುಗಳು ಮತ್ತು ತೆರಿಗೆಗೆ ಮುನ್ನ ಲಾಭ | ಹೂಡಿರುವ ಬಂಡವಾಳ (ಒಟ್ಟು ಈಕ್ವಿಟಿ + ಒಟ್ಟು ಸಾಲ + ಮುಂದೂಡಿದ ತೆರಿಗೆ ಹೊಣೆಗಾರಿಕೆಗಳು/ ಆಸ್ತಿಗಳು) | 20.05% | 14.26% | 40.65% | ತೆರಿಗೆಗೆ ಮುನ್ನ ಲಾಭದಲ್ಲಿ ಹೆಚ್ಚಳ |
| 11 | ಹೂಡಿಕೆ ಮೇಲಿನ ಗಳಿಕೆ (%) | ಅನ್ವಯಿಸದು | | ಅನ್ವಯವಾಗದು | ಅನ್ವಯವಾಗದು | ಅನ್ವಯವಾಗದು | |

**45 ಸ್ವತಂತ್ರ ಹಣಕಾಸಿನ ಹೇಳಿಕೆಗಳಲ್ಲಿನ ಐಟಂಗಳ ಮರು ವರ್ಗೀಕರಣ**

ಅಗತ್ಯವಿರುವೆಡೆಗಳಲ್ಲಿ ಚಾಲ್ತಿ ವರ್ಷದ ವರ್ಗೀಕರಣಗಳಿಗೆ ಅನುಗುಣವಾಗಿ ಹಿಂದಿನ ವರ್ಷದ ಅಂಕಿಗಳನ್ನು ಮರು ವರ್ಗೀಕರಣ ಮಾಡಿದೆ.

**ಎ. ಸ್ಥಿತಿ ವಿವರಣಾ ಪಟ್ಟಿ ಐಟಂ ಗಳಿಗೆ:**

ಕೆಳಕಂಡ ಕಾರಣಗಳಿಗಾಗಿ ಮರು ವರ್ಗೀಕರಣ ಮಾಡಲಾಗಿದೆ.

1. ಐಟಂಗಳನ್ನು ಚಾಲ್ತಿಯಿಂದ ಚಾಲ್ತಿಯೇತರಕ್ಕೆ ಮತ್ತು ಚಾಲ್ತಿಯೇತರದಿಂದ ಚಾಲ್ತಿಗೆ ಮರು ವರ್ಗೀಕರಣ
2. ಐಟಂಗಳನ್ನು ಹಣಕಾಸಿದಿಂದ ಹಣಕಾಸೇತರ ಪ್ರವರ್ಗಕ್ಕೆ ಮತ್ತು ಹಣಕಾಸೇತರದಿಂದ ಹಣಕಾಸಿನ ಪ್ರವರ್ಗಕ್ಕೆ ಮರು ವರ್ಗೀಕರಣ.

| ಕ್ರ. ಸಂ | ಮರು ವರ್ಗೀಕರಣ ಮಾಡಿರುವ ಐಟಂನ ವರ್ಗ | ಟಿಪ್ಪಣಿ | ಹಿಂದಿನ ಲೆಕ್ಕಪರಿಶೋಧಿತ ಹಣಕಾಸಿನ ಹೇಳಿಕೆಗಳ ಅನ್ವಯ | ಹೊಂದಾಣಿಕೆಗಳು | ಮರು ವರ್ಗೀಕರಣ ಮಾಡಿರುವ ಹಣಕಾಸಿನ ಹೇಳಿಕೆಗಳ ಅನುಸಾರ |
|---|---|---|---|---|---|
| I | **ಆಸ್ತಿಗಳು** | | | | |
| | **ಚಾಲ್ತಿಯೇತರ ಆಸ್ತಿಗಳು** | | | | |
| | (ಎ) ಹಣಕಾಸಿನ ಆಸ್ತಿಗಳು | | | | |
| | (i) ಇತರೆ ಹಣಕಾಸಿನ ಆಸ್ತಿಗಳು | 7 | 16,590.89 | 1,260.57 | 17,851.46 |
| | (ಬಿ) ಇತರೆ ಹಣಕಾಸೇತರ ಆಸ್ತಿಗಳು | 8 | 68.60 | (5.39) | 63.21 |
| | (ಸಿ) ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ) | 8ಎ | – | 4,108.74 | 4,108.74 |
| | **ಚಾಲ್ತಿ ಆಸ್ತಿಗಳು** | | | | |
| | (ಎ) ಹಣಕಾಸಿನ ಆಸ್ತಿಗಳು | | | | |
| | (i) ಇತರೆ ಹಣಕಾಸಿನ ಆಸ್ತಿಗಳು | 7 | 12,365.78 | (2,364.99) | 10,000.79 |
| | (ಬಿ) ಇತರೆ ಹಣಕಾಸೇತರ ಆಸ್ತಿಗಳು | 8 | 7,406.21 | (2,561.50) | 4,844.71 |
| | (ಸಿ) ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ) | 8ಅ | 437.44 | (437.44) | |
| | | | | | |
| II. | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | |
| | **ಹೊಣೆಗಾರಿಕೆಗಳು** | | | | |
| | ಚಾಲ್ತಿಯೇತರ ಹೊಣೆಗಾರಿಕೆಗಳು | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15 | 17,706.03 | (2,722.71) | 14,983.32 |
| | (ಬಿ) ವ್ಯವಸ್ಥೆಗಳು | 16 | 1,508.83 | (766.75) | 742.08 |
| | **ಚಾಲ್ತಿ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ವ್ಯಾಪಾರದ ಪಾವತಿ ಮಾಡಬೇಕಿರುವುದು | 18 | | | |
| | (ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮ ಹೊರತಾಗಿ ಒಟ್ಟು ಬಾಕಿಯಿರುವ ಬಾಕಿಗಳು | | 8,317.74 | (1,452.29) | 6,865.45 |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15 | 9,756.79 | 5,103.73 | 14,860.52 |
| | (ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 17 | 1,361.55 | (118.03) | 1,243.52 |
| | (ಸಿ) ವ್ಯವಸ್ಥೆಗಳು | 16 | 259.28 | (43.95) | 215.33 |

| ಬಿ. | ಲಾಭ ಮತ್ತು ನಷ್ಟದ ಐಟಂಗಳ ಹೇಳಿಕೆಗೆ:<br>ಕೆಳಕಂಡ ಕಾರಣದಿಂದಾಗಿ ಮರು ವರ್ಗೀಕರಣ ಮಾಡಿದೆ:<br>1. ಇತರೆ ಆದಾಯದಿಂದ ಕಾರ್ಯಾಚರಣೆಗಳಿಂದ ಬಂದ ಗಳಿಕೆಗೆ ಐಟಂಗಳ ಮರು ವರ್ಗೀಕರಣ | | | | |
|---|---|---|---|---|---|
| ಕ್ರ. ಸಂ | ಮರು ವರ್ಗೀಕರಣ ಮಾಡಿರುವ ಐಟಂನ ವರ್ಗ | ಟಿಪ್ಪಣಿ | ಹಿಂದಿನ ಲೆಕ್ಕಪರಿಶೋಧಕ ಹಣಕಾಸಿನ ಹೇಳಿಕೆಗಳ ಅನ್ವಯ | ಹೊಂದಾಣಿಕೆಗಳು | ಮರು ವರ್ಗೀಕರಣ ಮಾಡಿದ ಹಣಕಾಸಿನ ಹೇಳಿಕೆಗಳ ಅನುಸಾರ |
| 1. | ಮುಂದುವರಿಯುತ್ತಿರುವ ಕಾರ್ಯಾಚರಣೆಗಳು | | | | |
| | ಕಾರ್ಯಾಚರಣೆಗಳಿಂದ ಬಂದ ಆದಾಯ | 19 | 282,499.26 | 32.44 | 282,531.70 |
| | ಇತರೆ ಆದಾಯ | 20 | 3,094.28 | (32.44) | 3,061.84 |

46 ಹಣಕಾಸಿನ ಹೇಳಿಕೆಗಳಲ್ಲಿನ ತದನಂತರದ ಘಟನಾವಳಿಗಳ ಮತ್ತು ವ್ಯವಹಾರಗಳ ಗುರುತಿಸುವಿಕೆಗಾಗಿ / ಮತ್ತು / ಅಥವಾ ವರದಿ ಮಾಡಲು ಅಗತ್ಯತೆಯನ್ನು ನಿರ್ಧರಿಸಲು ಸ್ಥಿತಿ ವಿವರಣಾ ಪಟ್ಟಿ ದಿನಾಂಕದ ನಂತರ. ಆದರೆ ಹಣಕಾಸಿನ ಹೇಳಿಕೆಗಳ ಅನುಮೋದನೆಗೆ ಮುನ್ನ ಉಂಟಾದ ಘಟನಾವಳಿಗಳು ಮತ್ತು ವ್ಯವಹಾರಗಳನ್ನು ಕಂಪನಿ ಮೌಲ್ಯಮಾಪನ ಮಾಡುವುದು. 27ನೇ ಜೂನ್, 2024ರಂದು ಇದ್ದಂತೆ ಈಗಾಗಲೇ ತಿಳಿಸದಿರುವ ತದನಂತರದ ಘಟನಾವಳಿಗಳು ಮತ್ತು ವ್ಯವಹಾರಗಳನ್ನು ಗುರುತಿಸಲು ಅಥವಾ ವರದಿ ಮಾಡಲು ಯಾವುದೂ ಇರುವುದಿಲ್ಲ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ. ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎನ್**
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ:27ನೇ ಜೂನ್ 2024

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ
## ವರ್ಷದ ಕ್ರೋಢೀಕೃತ ಲೆಕ್ಕಗಳು

MSIL

# ಪರಿಷ್ಕೃತ ಸ್ವತಂತ್ರ ಲೆಕ್ಕ ಪರಿಶೋಧಕರ ವರದಿ

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ
## ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಮೇಲಿನ ಪರಿಸ್ಕೃತ ವರದಿ

### ಅರ್ಹತಾ ಅಭಿಪ್ರಾಯ

ನಾವು **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ** (''ಮಾತೃ ಕಂಪನಿ'') 31ನೇ ಮಾರ್ಚ್ 2024ರಂದು ಇದ್ದಂತೆ ಇತರೆ ಸಮಗ್ರ ಆದಾಯ ಸೇರಿದಂತೆ, ಕ್ರೋಢಿಕೃತ ಸ್ಥಿತಿ ವಿವರಣಾ ಪಟ್ಟಿ, ಲಾಭ ಮತ್ತು ನಷ್ಟದ ಹೇಳಿಕೆ, ನಗದು ಹರಿಯುವಿಕೆಗಳ ಹೇಳಿಕೆ ಮತ್ತು ಈ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆಗಳ ಹೇಳಿಕೆ ಮತ್ತು ವಾಸ್ತವಿಕ ಲೆಕ್ಕ ನಿರ್ವಹಣೆ ನೀತಿಗಳು ಮತ್ತು ಇತರೆ ವಿವರಣಾತ್ಮಕ ಮಾಹಿತಿ ಒಳಗೊಂಡ ಸ್ವತಂತ್ರ ಹಣಕಾಸಿನ ಹೇಳಿಕೆಯ ಲೆಕ್ಕಪರಿಶೋಧನೆ ಮಾಡಿದ್ದೇವೆ. (ಇಲ್ಲಿ ಇನ್ನು ಮುಂದೆ ''ಕ್ರೋಢೀಕೃತ ಹಣಕಾಸಿನ ಹೇಳಿಕೆಗಳು'' ಎಂದು ಪ್ರಸ್ತಾಪಿಸಲಾಗುವುದು)

ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಿರುವ ಮಾಹಿತಿ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ, ನಮ್ಮ ವರದಿಯ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ವಿಭಾಗದಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮಗಳ ಹೊರತಾಗಿ, ಸಹಾಯಕ ಕಂಪನಿಗಳ ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಮೇಲಿನ ಇತರೆ ಲೆಕ್ಕ ಪರಿಶೋಧಕರ ವರದಿಗಳ ಪರಿಗಣನೆಯ ಆಧಾರದ ಮೇಲೆ ತಿಳಿಸಿರುವ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳು ಕಂಪನಿಗಳ ಕಾಯ್ದೆ 2013ರ (''ಕಾಯ್ದೆ'') ಅನ್ವಯ ಅಗತ್ಯವಾದಂತೆ ಸ್ವರೂಪದಲ್ಲಿ ಮಾಹಿತಿಯನ್ನು ನೀಡುವುದು ಮತ್ತು ತಿದ್ದುಪಡಿಯಾದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳು; 2015 ಅನ್ನು (''ಐಎನ್‌ಡಿ ಎಎಸ್'') ಒದಿಕೊಂಡಂತೆ ಕಾಯ್ದೆಯ ಪ್ರಕರಣ 133 ಅನ್ವಯ ನಿಗದಿಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳಿಗೆ ಅನುಗುಣವಾಗಿ ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿ, 31ನೇ ಮಾರ್ಚ್ 2024ರಂದು ಇದ್ದಂತೆ ಗ್ರೂಪ್‌ನ ವ್ಯವಹಾರದ ಪರಿಸ್ಥಿತಿ ಮತ್ತು ಅದರ ಲಾಭ, ಇತರೆ ಸಮಗ್ರ ಆದಾಯ, ನಗದು ಹರಿಯುವಿಕೆಗಳು ಮತ್ತು ಆ ದಿನಾಂಕಕ್ಕೆ ಕೊನೆಗೊಂಡ ವರ್ಷದಲ್ಲಿ ಈಕ್ವಿಟಿಯಲ್ಲಿನ ಬದಲಾವಣೆ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವುದು.

ಸಮ ದಿನಾಂಕದಂದು ನಿರ್ದೇಶಕರ ಮಂಡಳಿ ಅಳವಡಿಸಿಕೊಂಡಿರುವಂತೆ ಹಣಕಾಸಿನ ಹೇಳಿಕೆಗಳ ಬಗ್ಗೆ ನಾವು ಬೆಂಗಳೂರಿನಲ್ಲಿ ದಿನಾಂಕ: 10ನೇ ಸೆಪ್ಟೆಂಬರ್ 2024ರ ಲೆಕ್ಕಪರಿಶೋಧನಾ ವರದಿ ಒಂದನ್ನು (ಮೂಲ ವರದಿ) ನೀಡಿದ್ದೆವು. ಕಂಪನಿಗಳ ಕಾಯ್ದೆ, 2013ರ ಪ್ರಕರಣ 143 (6)(ಎ) ಅನ್ವಯ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕ ಪರಿಶೋಧಕರ ಅಭಿಪ್ರಾಯದ ಅನುಸಾರ, ನಾವು ಸದರಿ ಲೆಕ್ಕಪರಿಶೋಧಕಾ ವರದಿಯನ್ನು ಪರಿಷ್ಕರಣೆ ಮಾಡಿದ್ದೇವೆ. ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಮೊದಲು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಎಂದಿತ್ತು) ಅರ್ಹತಾ ಅಭಿಪ್ರಾಯಕ್ಕೆ ಆಧಾರದ ಪ್ಯಾರಾಗ್ರಾಫ್‌ನ ಅಡಿಯಲ್ಲಿನ ಕಲಂ (ಎಫ್), (ಜಿ) ಹೊರತುಪಡಿಸಿ ಕಂಪನಿಯ ಹಣಕಾಸಿನ ಹೇಳಿಕೆಗಳಲ್ಲಿನ ವರದಿಯಾಗಿರುವ ಅಂಕಿ ಅಂಶಗಳ ಮೇಲೆ ಪರಿಷ್ಕೃತ ವರದಿಯು ಯಾವುದೇ ಪರಿಣಾಮ ಉಂಟು ಮಾಡುವುದಿಲ್ಲ. ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರ ಅಭಿಪ್ರಾಯಗಳನ್ನು ಪರಿಗಣಿಸಲು ಸೂಕ್ತವಾಗಿ ಪರಿಷ್ಕರಣೆ ಮಾಡಿರುವ ಸದರಿ ಲೆಕ್ಕ ಪರಿಶೋಧನಾ ವರದಿಯು ಮೂಲ ವರದಿಯನ್ನು ರದ್ದುಗೊಳಿಸುವುದು.

### ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಅರ್ಹತಾ ಅಭಿಪ್ರಾಯಕ್ಕೆ ಆಧಾರ

ಎ. ಕಂಪನಿಯು ರಫ್ತು ವಿಭಾಗದಲ್ಲಿ ಈ ವರ್ಷದ ಅವಧಿಯಲ್ಲಿ ಆಮದಾದ ನದಿ ಮರಳಿನ ದಾಸ್ತಾನಿನ ಭೌತಿಕ ಪರಿಶೀಲನೆ ಮಾಡಿರುವುದಿಲ್ಲ. ಆದರೂ, ಹಿಂದಿನ ವರ್ಷ ಭೌತಿಕ ಪರಿಶೀಲನೆ ನಡೆಸಲಾಗಿದ್ದು, ರೂ.347.87 ಲಕ್ಷಗಳ ಮೊತ್ತದ 16565.002 ಎಂ.ಟಿ. ಮರಳು ಕಡಿಮೆಯಿರುವುದು ಕಂಡು ಬಂದಿದೆ. ಸರಕಿನ ತಪಶೀಲು ಕಡಿಮೆಯಾಗಿರುವುದು ಕಂಡು ಬಂದಿದ್ದರೂ ಕಂಪನಿ ಅದನ್ನು ವಜಾಗೊಳಿಸುವುದನ್ನಾಗಲಿ ಅಥವಾ ಪುಸ್ತಕಗಳಲ್ಲಿ ಈ ಮೊದಲು ಮಾಡಿರುವ ಸಂಬಂಧಪಟ್ಟ ಅವಕಾಶವನ್ನಾಗಲಿ ಹಿಂಪಡೆದಿರುವುದಿಲ್ಲ. ಆದ್ದರಿಂದ ಸರಕಿನ ತಪಶೀಲುಗಳನ್ನು ಮತ್ತು ಸರಕಿನ ತಪಶೀಲುಗಳಿಗೆ ಅವಕಾಶಗಳನ್ನು ಈ ಎರಡನ್ನೂ ರೂ.347.87 ಲಕ್ಷಗಳ ಪ್ರಮಾಣಕ್ಕೆ ಅಧಿಕವಾಗಿ ತಿಳಿಸಿದೆ.

ಬಿ. ಚಿಟ್‌ಫಂಡ್ ವಿಭಾಗದಲ್ಲಿ (i)ಸರಿಯಾದ ಆಂತರಿಕ ನಿಯಂತ್ರಣ ಕ್ರಮಗಳು, (ii) ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾದ ವರದಿಗಳ ಸೃಷ್ಟಿಗೆ ಬೆಂಬಲ; (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆಯಾಗಲಿ ಇಲ್ಲದಿರುವುದರಿಂದ, ಹಣಕಾಸಿನ ಹೇಳಿಕೆಗಳ ಮೇಲೆ ಪರಿಣಾಮ ಉಂಟಾಗಬಹುದಾಗಿರುತ್ತದೆ. ಆದರೆ ಅದನ್ನು ತಿಳಿಯಲು ಸಾಧ್ಯವಿರುವುದಿಲ್ಲ.

ಸಿ. ಐಎನ್‌ಡಿ ಎಎಸ್ 109 ಹಣಕಾಸಿನ ಸಾಧನಗಳ ಅನ್ವಯ ಕಂಪನಿಯು ಚಿಟ್‌ಫಂಡ್ ವಿಭಾಗಕ್ಕೆ ನಿರೀಕ್ಷಿತ ಕ್ರೆಡಿಟ್ ನಷ್ಟದ ಮಾದರಿ (ಇಸಿಎಲ್) ಅನ್ವಯ ರೂ.635.91ಲಕ್ಷಗಳ ದುರ್ಬಲತೆ ನಷ್ಟದ ಅವಕಾಶವನ್ನು ಮಾಡಿದೆ. ಆದರೆ, ''ಸುಸ್ತಿಯ (%) ಸಾಧ್ಯತೆ, ನಷ್ಟ ಅವಕಾಶದ ಸುಸ್ತಿ (%) ಮತ್ತು ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳದ ಆಧಾರದಲ್ಲಿ ಹಣಕಾಸಿನ ಆಸ್ತಿಗಳ ವರ್ಗೀಕರಣದ ಆಧಾರ ಮತ್ತು ತತ್ಪರಿಣಾಮವಾಗಿ 12 ತಿಂಗಳ ಇಸಿಎಲ್ ಮತ್ತು ಜೀವಿತಾವಧಿ ಇಸಿಎಲ್‌ನ ನಿರ್ಧರಣೆ ಸೇರಿದಂತೆ ವಿವಿಧ ಮಾನದಂಡಗಳ ನಿಖರತೆ

MSIL

ಮತ್ತು ಯುಕ್ತತೆಯ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದಿರುವುದರಿಂದ, ಇಸಿಎಲ್ ಅವಕಾಶ ಸಾಕಷ್ಟಿರುವಿಕೆ ಬಗ್ಗೆ ಮೌಲ್ಯಮಾಪನ ಮಾಡಲು ಮತ್ತು ಅಭಿಪ್ರಾಯ ತಿಳಿಸಲು ನಮಗೆ ಸಾಧ್ಯವಿಲ್ಲ.

ಡಿ. ಕಂಪನಿಯು, ಟೂರ್ಸ್ ಅಂಡ್ ಟ್ರಾವಲ್ ವಿಭಾಗದಲ್ಲಿ ನಿಷಿ ಫೋರೆಕ್ಸ್ ಅಂಡ್ ಲೀಷರ್ ಲಿಮಿಟೆಡ್‌ಗೆ ರೂ.169.16ಲಕ್ಷಗಳ ಸಂದೇಹಾಸ್ಪದ ಮುಂಗಡಗಳನ್ನು ಒದಗಿಸಿರುವುದಿಲ್ಲ. ಈ ಸಂದೇಹಾಸ್ಪದ ಮುಂಗಡಕ್ಕೆ ವ್ಯವಸ್ಥೆ ಮಾಡದಿರುವುದರಿಂದ ಆ ಅವಧಿಯ ಲಾಭವನ್ನು ಹೆಚ್ಚಿಗೆಯಾಗಿ ತಿಳಿಸಲು ಮತ್ತು ಸರಬರಾಜುದಾರರಿಗೆ ಮುಂಗಡಗಳನ್ನು ರೂ.119.16ಲಕ್ಷಗಳಷ್ಟು ಹೆಚ್ಚಿಗೆಯಾಗಿ ತಿಳಿಸಲು ಕಾರಣವಾಗಿದೆ.

ಇ. ವಿಳಂಬವಾದ ಪಾವತಿಗಾಗಿ ಎಂಎಸ್ಎಂಇ ವ್ಯಾಪಾರದ ಪಾವತಿಗಳ ಮೇಲಿನ ಬಡ್ಡಿ ಹೊಣೆಗಾರಿಕೆಯನ್ನು ಎಂಎಸ್ಎಂಇ ಕಾಯ್ದೆ, 2006ರ ಅನ್ವಯ ಪಾವತಿ ಮಾಡಬೇಕಿದೆ. ಅದರೂ, ಎಂಎಸ್ಎಂಇ ವೆಂಡರ್‌ಗಳಿಂದ ಕಂಪನಿಗೆ ಯಾವುದೇ ಬಡ್ಡಿ ಕೇಳಿಕೆ ಬಾರದಿರುವುದರಿಂದ ಎಂಎಸ್ಎಂಇ ವ್ಯಾಪಾರದ ಸಂಬಂಧ ಮಾಡಬೇಕಾಗಿದ್ದ ಪಾವತಿಯು ವಿಳಂಬವಾದ ಅವಧಿಗೆ ಕಂಪನಿ ಬಡ್ಡಿ ಪಾವತಿ ಮಾಡಿರುವುದಿಲ್ಲ. ಮಾಹಿತಿ ಇಲ್ಲದ ಪ್ರಯುಕ್ತ, ಅಂತಹ ಬಡ್ಡಿ ಮೊತ್ತ ಎಷ್ಟು ಎಂಬುದಾಗಿ ತಿಳಿಸಲು ನಮಗೆ ಸಾಧ್ಯವಿಲ್ಲ.

ಎಫ್. ಹಿಂದಿನ ಹಣಕಾಸಿನ ವರ್ಷದ ಕೊನೆಯವರೆಗೆ ಅಲ್ಪಾವಧಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಲಾಗಿದ್ದವುಗಳನ್ನು ಕಂಪನಿಯು ಈ ವರ್ಷದ ಅವಧಿಯಲ್ಲಿ ಐಎನ್‌ಡಿ ಎಎಸ್ 116ರ ಅನ್ವಯ ದೀರ್ಘಾವಧಿ ಗುತ್ತಿಗೆಗಳು ಎಂಬುದಾಗಿ ಪರಿಗಣಿಸಿದೆ. ಇದರಿಂದ ಬಳಕೆ ಹಕ್ಕಿನ ಆಸ್ತಿಗಳಿಗೆ (ಆರ್‌ಒಯು ಆಸ್ತಿಗಳು) ಸೇರ್ಪಡೆಯಾಗಿದೆ ಮತ್ತು ಗುತ್ತಿಗೆ ಹೊಣೆಗಾರಿಕೆ ರೂ.1,011.20 ಲಕ್ಷಗಳಷ್ಟು ಹೆಚ್ಚಾಗಿದೆ, ಆರ್‌ಒಯು ಆಸ್ತಿಗಳ ಸವಕಳಿಯು ರೂ.326.34ಲಕ್ಷಗಳಷ್ಟು ಹೆಚ್ಚಳವಾಗಿದೆ. ಮತ್ತು ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ರೂ.49.18 ಲಕ್ಷಗಳಷ್ಟು ಹೆಚ್ಚಳವಾಗಿದೆ. ಐಎನ್‌ಡಿ ಎಎಸ್-8 ಲೆಕ್ಕ ನಿರ್ವಹಣೆ ನೀತಿಗಳು, ಲೆಕ್ಕ ನಿರ್ವಹಣೆ ಅಂದಾಜುಗಳಲ್ಲಿನ ಬದಲಾವಣೆಗಳು, ಮತ್ತು ಬಡ್ಡಿ ಮಾಡಬೇಕಾಗಿದ್ದ ಪ್ರಕಟಣೆ ಅಗತ್ಯತೆಯನ್ನು ಕಂಪನಿ ಅನುಸರಣೆ ಮಾಡಿರುವುದಿಲ್ಲ.

ಜಿ. ಹಣಕಾಸಿನ ಟಿಪ್ಪಣಿ 41(viii) ರಲ್ಲಿ ಮಾಡಿರುವ ಪ್ರಕಟಣೆಯಲ್ಲಿ ಕಂಪನಿ ಮಾಡಿರುವ ಲೆಕ್ಕ ನಿರ್ವಹಣೆಯ ಬಗ್ಗೆ ಸಂಪೂರ್ಣ ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ.ಲಿ. (''ಬಾಡಿಗೆದಾರ'') ಇವರಿಂದ ವಸೂಲಾಗಬೇಕಾಗಿರುವುದನ್ನು ಮಾನ್ಯ ಮಾಡಿದೆ. ಆದರೆ ಮಾನ್ಯ ಮಾಡಿರುವುದಿಲ್ಲ, ಇತರೆ ಖರ್ಚುಗಳಿಗೆ ವ್ಯವಸ್ಥೆ, ಮಾಡದೆ, ಇದಕ್ಕೆ ರೂ.245.05 ಲಕ್ಷಗಳ ವ್ಯವಸ್ಥೆ ಒದಗಿಸಿದೆ. ಲಾಭ ಮತ್ತು ನಷ್ಟದ ಲೆಕ್ಕದ ಮೂಲಕ ಮಾರ್ಗ ಅನುಸರಣೆ ಮಾಡದೆ ನಮೂದುಗಳನ್ನು ಮಾಡಿದೆ. ಬರಬೇಕಾಗಿರುವವುಗಳನ್ನು ಕಂಪನಿಯು ಸಂದೇಹಾಸ್ಪದ ಎಂಬುದಾಗಿ ಪರಿಗಣಿಸಿರುವುದರಿಂದ ಹಣಕಾಸಿನ ಲಾಭದ ಮೇಲೆ ಯಾವುದೇ ಪರಿಣಾಮ ಉಂಟಾಗದು.

ಎಚ್. ನೆಸ್ಟ್ ವೆಲ್ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್ (''ಗುತ್ತಿಗೆದಾರ'') ಇವರಿಗೆ ಗುತ್ತಿಗೆಗೆ ನೀಡಿರುವ ಮೈಸೂರಿನಲ್ಲಿನ ಉಗ್ರಾಣದ ಬಾಡಿಗೆ ಸಂಬಂಧ ಗುತ್ತಿಗೆದಾರರ ಜೊತೆ ವಿವಾದ ಉಂಟಾಗಿರುವ ಕಾರಣ ಡಿಸೆಂಬರ್ 2021ರಿಂದ ಮಾರ್ಚ್ 2024ರ ವರೆಗಿನ ಅವಧಿಗೆ ಕಂಪನಿಯು ಬಾಡಿಗೆ ಆದಾಯವನ್ನು ಪರಿಗಣಿಸಿರುವುದಿಲ್ಲ. ಕಂಪನಿಯು ಹಣಕಾಸಿನ ಹೇಳಿಕೆಗಳಲ್ಲಿ ಈ ವಿವಾದದ ಬಗ್ಗೆ ಮತ್ತು ವಿವಾದದಿಂದಾಗಿ ಗುತ್ತಿಗೆದಾರನಿಂದ ವಸೂಲಾಗದೆ ಉಳಿದಿರುವ ಬಾಡಿಗೆ ಮೊತ್ತದ ಬಗ್ಗೆ ಕಂಪನಿ ಸೂಕ್ತವಾದ ಪ್ರಕಟಣೆ ಮಾಡಿರುವುದಿಲ್ಲ. 31ನೇ ಮಾರ್ಚ್, 2024ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಗುತ್ತಿಗೆಯಿಂದ ಬಂದ ಬಾಡಿಗೆ ಆದಾಯ ರೂ.41.73 ಲಕ್ಷಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಿರುವುದಿಲ್ಲ. ಪಡೆಯಬೇಕಾದವು ಸಂದೇಹಾಸ್ಪದವೆಂದು ಕಂಪನಿ ಪರಿಗಣಿಸಿರುವುದರಿಂದ ಹಣಕಾಸಿನ ಲಾಭದ ಮೇಲೆ ಇದರಿಂದ ಯಾವುದೇ ಪರಿಣಾಮ ಉಂಟಾಗದು.

ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಹಿಂದಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಧಾರಕ ಕಂಪನಿಯ ಸಹಾಯಕ ಕಂಪನಿ, ಇದರ ಹಣಕಾಸಿನ ಹೇಳಿಕೆಗಳ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ಸ್‌ನ ಸ್ವತಂತ್ರ ಸಂಸ್ಥೆಯು ನೀಡಿರುವ ದಿನಾಂಕ:24ನೇ ಸೆಪ್ಟೆಂಬರ್, 2024ರ ತಮ್ಮ ಪರಿಷ್ಕೃತ ಲೆಕ್ಕ ಪರಿಶೋಧನೆ ವರದಿಯ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಅಭಿಪ್ರಾಯದ ಸಂಬಂಧ ಕೆಳಕಂಡ ಆಕ್ಷೇಪಣೆಗಳ ಬಗ್ಗೆ ನಾವು ನಿಮ್ಮ ಗಮನ ಸೆಳೆಯುವೆವು ಮತ್ತು ಅವುಗಳನ್ನು ನಾವು ಈ ಕೆಳಕಂಡಂತೆ ಮರು ಮಂಡನೆ ಮಾಡಿರುವೆವು.

ಎ. ವ್ಯಾಪಾರದಿಂದ ಬರಬೇಕಾದುದ್ದು ಎಂದು ತಿಳಿಸಿರುವ ರೂ.17,802.24 ಲಕ್ಷ (ಹಿಂದಿನ ವರ್ಷ ರೂ.15,408.87ಲಕ್ಷ) ಇದು ಕ್ರೆಡಿಟ್ ಶಿಲ್ಕುಗಳ ರೂ.359.96ಲಕ್ಷ, ರೂ.1,260.63 ಲಕ್ಷದ ಜಿಎಸ್‌ಟಿ ಟಿಡಿಎಸ್, ರೂ.810.04ಲಕ್ಷಗಳ ಗುರುತಿಸಿಲ್ಲದ ಸಾಲಗಳ ವಸೂಲಿ ಮತ್ತು ಸಂಬಂಧಪಟ ಸಾಲಗಾರರಿಗೆ ಹೊಂದಾಣಿಕೆ ಮಾಡಬೇಕಾಗಿರುವ ರೂ.1,483.94 ಲಕ್ಷಗಳ ಆದಾಯ ತೆರಿಗೆ ಟಿಡಿಎಸ್‌ನ ಕ್ರೆಡಿಟ್ ಶಿಲ್ಕುಗಳನ್ನು ಕಳೆದ ನಂತರದ ನಿವ್ವಳ ಮೊತ್ತವನ್ನು ಪ್ರತಿನಿಧಿಸುವುದು.

ಹೊಂದಾಣಿಕೆ ಮಾಡದೆ ಉಳಿದಿರುವ ಕ್ರೆಡಿಟ್‌ಗಳ ಮೇಲೆ ತಿಳಿಸಿರುವ ಮೊತ್ತಗಳ ಹಿನ್ನೆಲೆಯಲ್ಲಿ, ವಸೂಲಿಯು ಸಂದೇಹಾಸ್ಪದವಾಗಿರುವ ವ್ಯಾಪಾರದ ಸಂಬಂಧ ಬರಬೇಕಿರುವವುಗಳ ಬಗ್ಗೆ ಲೆಕ್ಕಗಳ ಪುಸ್ತಕಗಳಲ್ಲಿ ಮಾಡಿರುವ ರೂ.3,772.02ಲಕ್ಷ ತೃಪ್ತಿಪಡಿಸಲು ನಮಗೆ ಸಾಧ್ಯವಿರುವುದಿಲ್ಲ ಮತ್ತು ಈ ಬಗ್ಗೆ ಸಾಕಷ್ಟು ಮಾಹಿತಿ ಇಲ್ಲದಿರುವುದರಿಂದ ಇದು ಹೆಚ್ಚುವರಿಯಾಗಿರುವುದೇ ಅಥವಾ ಇಲ್ಲವೇ ಎಂಬುದನ್ನು ಪ್ರಮಾಣವನ್ನು ತಿಳಿಸಲು ನಮಗೆ ಸಾಧ್ಯವಾಗಿಲ್ಲ.

ಮುಂದುವರಿದು, ಬಹುಪಾಲು ಸಾಲಗಾರರುಗಳಿಂದ ಬಾಕಿ ಶಿಲ್ಕುಗಳ ಬಗ್ಗೆ ವರ್ಷದಿಂದ ವರ್ಷಕ್ಕೆ ದೃಢೀಕರಣ ಪಡೆದಿಲ್ಲದಿರುವ ವಿಚಾರವು ಸಹ ಈ ಅಂಶದ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಸಾಧ್ಯವಾಗದ ನಮ್ಮ ಅಸಮರ್ಥತೆ ಬಗ್ಗೆ ನಾವು ವಿಷಾದ ವ್ಯಕ್ತಪಡಿಸುವಂತೆ ಮಾಡಿದೆ.

ಬಿ. ಕೇಳಿರುವ ಆದಾಯ ತೆರಿಗೆ ಮರುಪಾವತಿಗಳ ಗಣನೀಯ ಭಾಗಗಳನ್ನು ತೆರಿಗೆ ಅಧಿಕಾರಿಗಳು ಹಿಂದಿನ ವರ್ಷಗಳ ವಿವಿಧ ತೆರಿಗೆ ಡಿಮ್ಯಾಂಡ್‌ಗಳಿಗೆ ಹೊಂದಾಣಿಕೆ ಮಾಡಿರುವ ವಾಸ್ತವಾಂಶ ಪರಿಗಣಿಸಿ ಮತ್ತು ಹಣಕಾಸಿನ ವರ್ಷ 2001-02ರಿಂದ ಪ್ರಾರಂಭಿಸಿ ಹಣಕಾಸಿನ ವರ್ಷ 2022-23ರ ವರೆಗಿನ ವರ್ಷಗಳ ಬಗ್ಗೆ ಇದನ್ನು ಸಮನ್ವಯತೆ ಮಾಡದಿರುವ ಕಾರಣ, ವಾರ್ಷಿಕ ಲೆಕ್ಕಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳ ಟಿಪ್ಪಣಿ ಸಂ.8ರಲ್ಲಿ ಚಾಲ್ತಿಯೇತರ ಆಸ್ತಿಗಳ ಅಡಿಯಲ್ಲಿ ತಿಳಿಸಿರುವಂತೆ ಹಣಕಾಸಿನ ವರ್ಷ 2022-23 ರ ಅವಧಿವರೆಗೆ ಹೆಚ್ಚುವರಿಯಾಗಿ ಪಾವತಿ ಮಾಡಿರುವ ಆದಾಯ ತೆರಿಗೆ ಬಗ್ಗೆ ರೂ.488.73ಲಕ್ಷಗಳ ಮರುಪಾವತಿ ಕೇಳಿಕೆಗೆ ಕಂಪನಿಯ ಹಕ್ಕಿನ ಬಗ್ಗೆ ಅದು ವಸೂಲಿಯಾಗುವ ಸಾಧ್ಯತೆ ಇರುವುದೇ ಎಂಬುದರ ಬಗ್ಗೆ ಸ್ವತಃ ನಾವು ತೃಪ್ತಿಪಡಲು ನಮಗೆ ಸಾಧ್ಯವಾಗದು.

ಸಿ. ವಿವಿಧ ಸುದ್ದಿ ಪ್ರಕಾಶಕರುಗಳಿಂದ ಬರಬೇಕಾಗಿರುವ ಗುರಿ ತಲುಪಿದಕ್ಕೆ ನೀಡುವ ಪ್ರೋತ್ಸಾಹಧನ ರೂ.68.51ಲಕ್ಷ (ಹಿಂದಿನ ವರ್ಷ ರೂ.68.51ಲಕ್ಷ) ಟಿಪ್ಪಣಿ ಸಂ.12ರಲ್ಲಿ ವ್ಯಾಪಾರದ ಮುಂಗಡಗಳು ಮತ್ತು ಇತರೆ ಬರಬೇಕಾಗಿರುವುಗಳ (ಸಾಲಗಳು ಮತ್ತು ಮುಂಗಡಗಳು) ಅಡಿಯಲ್ಲಿನ ಮೊತ್ತವನ್ನು ಸಮನ್ವಯತೆ ಮಾಡಿರುವುದಿಲ್ಲ, ಇದರ ಬಗ್ಗೆ ಯಾವುದೇ ದೃಢೀಕರಣೆ ಲಭ್ಯವಿಲ್ಲ ಮತ್ತು ಇದು ಬರುವ ಬಗ್ಗೆ ಖಚಿತತೆ ಇರುವುದಿಲ್ಲ. ಹಾಗಾಗಿ ಇದು ನಮ್ಮ ಅಭಿಪ್ರಾಯದಲ್ಲಿ ವಸೂಲಿಯಾಗುವುದು ಸಂದೇಹಾಸ್ಪದವಾಗಿರುವುದು.

ಇದೇ ರೀತಿ ವಾರ್ಷಿಕ ಲೆಕ್ಕಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳ ಟಿಪ್ಪಣಿ ಸಂ.12ರಲ್ಲಿ ವ್ಯಾಪಾರದ ಮುಂಗಡಗಳು ಮತ್ತು ಇತರೆ ಬರಬೇಕಾದವುಗಳಲ್ಲಿ ಪತ್ರಿಕಾ ಪ್ರಕಾಶಕರುಗಳಿಗೆ ಪಾವತಿ ಮಾಡಿದ ಮುಂಗಡ ರೂ.51.12ಲಕ್ಷಗಳು (ಹಿಂದಿನ ವರ್ಷ ರೂ.51.12ಲಕ್ಷಗಳು) ಮೊತ್ತ ಸೇರಿರುವುದು. ಇದನ್ನು ಸಮನ್ವಯ ಮಾಡಿರುವುದಿಲ್ಲ, ಇದಕ್ಕೆ ದೃಢೀಕರಣ ಲಭ್ಯವಿರುವುದಿಲ್ಲ ಮತ್ತು ಇದು ಪಾವತಿಯಾಗುವಂತೆ ಬಗ್ಗೆ ಖಚಿತತೆ ಇರುವುದಿಲ್ಲ. ಇದು ನಮ್ಮ ಅಭಿಪ್ರಾಯದಲ್ಲಿ ವಸೂಲಿಯಾಗುವುದು ಸಂದೇಹಾಸ್ಪದವಾಗಿದೆ.

ಈ ಪ್ರಮಾಣದ ವರೆಗೆ ಚಾಲ್ತಿ ಆಸ್ತಿಗಳ ಶಿಲ್ಕನ್ನು ಹೆಚ್ಚಾಗಿ ತಿಳಿಸಿದೆ ಮತ್ತು ಇದನ್ನು ಲೆಕ್ಕಗಳಲ್ಲಿ ಒದಗಿಸಿರುವುದಿಲ್ಲ.

ಡಿ. ಸಂಭಾವ್ಯ ಹೊಣೆಗಾರಿಕೆಗಳ ಬಗ್ಗೆ ಟಿಪ್ಪಣಿ ಸಂ.31(ಬಿ)ರಲ್ಲಿ ಕಂಪನಿಯ ಹಿಂದಿನ ನೌಕರ ದಿವಂಗತ ಶ್ರೀ ಎಚ್.ಎಸ್.ಹನುಮಂತಯ್ಯ ಇವರ ಪ್ರಕರಣದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯ ಆದೇಶದಲ್ಲಿ ಹೊಣೆಗಾರಿಕೆಯನ್ನು ತಿಳಿದುಕೊಂಡಿದ್ದ ಮತ್ತು ಅದನ್ನು ದೃಢಪಡಿಸಿದೆ, ಈ ಆದೇಶವನ್ನು ಭಾರತದ ಸುಪ್ರೀಂ ಕೋರ್ಟ್ ತನ್ನ ಆದೇಶ ದಿನಾಂಕ 12ನೇ ಅಕ್ಟೋಬರ್ 2017ರ ಅನ್ವಯ ವಿಶೇಷ ರಜೆ ಅರ್ಜಿ ರದ್ದುಗೊಳಿಸುವ ಮೂಲಕ ಮತ್ತೆ ಎತ್ತಿಹಿಡಿದಿರುವ ಒಳಗೊಂಡ ಮುಕ್ತಾಯವಾದ ಪ್ರಕರಣದ ಬಗ್ಗೆ ವಿವರಣೆಗಳೂ ಸೇರಿರುವವು. ನೌಕರರು ನಿಧನರಾಗಿರುವುದರಿಂದ ಮತ್ತು ಇವರ ಕಾನೂನುಬದ್ಧ ಉತ್ತರಾಧಿಕಾರಿಗಳಿಂದ ಯಾವುದೇ ಹಕ್ಕು ಕೇಳಿಕೆ ಮಾಡದಿರುವುದರಿಂದ ಕಂಪನಿಯು ಲೆಕ್ಕದ ಪುಸ್ತಕಗಳಲ್ಲಿ ಮೇಲೆ ತಿಳಿಸಿರುವ ಖಚಿತವಾಗಿ ತಿಳಿದಿರುವ ಹೊಣೆಗಾರಿಕೆ ಒದಗಿಸಿರುವುದಿಲ್ಲ.

ಸದರಿ ಹೊಣೆಗಾರಿಕೆಯು ಖಚಿತವಾಗಿ ಮನದಟ್ಟಾಗಿರುವ ಹೊಣೆಗಾರಿಕೆಯಾಗಿದ್ದು, ಮತ್ತು ಈ ವಿಚಾರವನ್ನು ಅನ್ವಯವಾಗುವ ಕಾರ್ಮಿಕ ಕಾನೂನುಗಳ ಅನ್ವಯ ವ್ಯವಹರಿಸಬೇಕಾಗಿದ್ದು, ವಜಾಗೊಂಡಿರುವ ಮತ್ತು ನಿಧನರಾಗಿರುವ ನೌಕರರ ಕಾನೂನುಬದ್ಧ ಉತ್ತರಾಧಿಕಾರಿಗಳಿಂದ ಯಾವುದೇ ಹಕ್ಕುಗಳಿರುವುದಿಲ್ಲ ಎಂಬ ಶೀರ್ಷಿಕೆ ಅಡಿ ಲೆಕ್ಕದ ಪುಸ್ತಕಗಳಲ್ಲಿ ಒದಗಿಸುವುದನ್ನು ಕಂಪನಿ ತಪ್ಪಿಸಲಾಗದು.

ಈ ಬಗ್ಗೆ ಆಡಳಿತ ಮಂಡಳಿಯಿಂದ ವಿವರಗಳು ನಮಗೆ ಬೇಕಾಗಿರುವುದರಿಂದ, ಸದರಿ ನಿಧನರಾಗಿರುವ ನೌಕರನಿಗೆ ಲೆಕ್ಕಗಳಲ್ಲಿ ಒದಗಿಸದಿರುವ ಹೊಣೆಗಾರಿಕೆಯ ಪ್ರಮಾಣ ತಿಳಿಸಲು ನಮಗೆ ಸಾಧ್ಯವಾಗದು.

ಇ. ಜಿಎಸ್‌ಟಿ ನಗದು ರೂ.275.43 ಲಕ್ಷಗಳು (ಹಿಂದಿನ ವರ್ಷ ರೂ.149.21ಲಕ್ಷ) ವಿಳಂಬಿತ ಪಾವತಿ ಮೇಲೆ ಕಂಪನಿ ಭರಿಸಿರುವ ಬಡ್ಡಿಯನ್ನು ಟಿಪ್ಪಣಿ ನಂ.29 ಇತರೆ ಖರ್ಚುಗಳಲ್ಲಿ ತಿಳಿಸಿದೆ. ಕಂಪನಿಯು ಸದರಿ ಖರ್ಚನ್ನು ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿವು ಎಂಬುದಾಗಿ ಪರಿಗಣಿಸಿದೆ. ಆದರೆ ಇದನ್ನು ಹಣಕಾಸಿನ ಚಟುವಟಿಕೆಗಳಿಂದ ಬಂದ ನಗದು ಹರಿವು ಎಂಬುದಾಗಿ ಪರಿಗಣಿಸಬೇಕಾಗಿತ್ತು. ಹಾಗಾಗಿ ಇದರಿಂದ ಐಎನ್‌ಡಿ-ಎಎಸ್-7ರ ಅನ್ವಯ ತಪ್ಪಾದ ಪ್ರಕಟಣೆಯಾಗಿ ಪರಿಣಮಿಸಿದೆ.

ಎಫ್. ಟಿಪ್ಪಣಿ ನಂ.8, ಇತರೆ ಚಾಲ್ತಿಯೇತರ ಆಸ್ತಿಗಳು, ನೋಂದಣಿ ರದ್ದಿಯಾದ ವ್ಯಾಪಾರಿಗೆ/ವೆಂಡರ್‌ಗೆ ಪಾವತಿಸಿರುವ ವ್ಯಾಟ್‌ನ ಸಂಬಂಧ ಪಡೆಯಬಹುದಾಗಿರುವ ವ್ಯಾಟ್ ಮರುಪಾವತಿಯಾಗಿರುವ ರೂ.10.30ಲಕ್ಷ ಸೇರಿದೆ ಮತ್ತು ಇದು 05ನೇ ಮಾರ್ಚ್ 2015ರಂದು ಮರು ಪಾವತಿಗೆ ಕೋರಿ ಅರ್ಜಿ ಸಲ್ಲಿಸುತ್ತಿದ್ದರೂ ಅದು ಮರುಪಾವತಿಯಾಗದೆ ಉಳಿದುಕೊಂಡಿದೆ. ಸದರಿ ಮೊತ್ತದ ವಸೂಲಿಗಾಗಿ ವರ್ಷದ ಅವಧಿಯಲ್ಲಿ ತೆರಿಗೆ ಅಧಿಕಾರಿಗಳಿಗೆ ಕಂಪನಿಯು ಯಾವುದೇ ಮನವಿಗಳನ್ನು ಸಲ್ಲಿಸದಿರುವುದಿಲ್ಲ. ಸದರಿ ವಿಚಾರವು ಉಳಿದುಕೊಂಡಿರುವ ಅವಧಿಯನ್ನು ಪರಿಗಣಿಸಿ, ಇದು ವಸೂಲಾಗುವ ಸಂಭವವಿರುವುದೇ ಎಂಬುವ ಬಗ್ಗೆ ತೃಪ್ತಿಕರ ನಿಲುವು ಪಡೆಯಲು ನಮಗೆ ಸಾಧ್ಯವಿರುವುದಿಲ್ಲ.

MSIL

ಜಿ. ವಸ್ತು ರೂಪದಲ್ಲಿ ವಸೂಲಿ ಮಾಡಬಹುದಾದ ಮುಂಗಡಗಳು ಅಥವಾ ಪಡೆಯಬೇಕಿರುವ ಮೌಲ್ಯದ ಟಿಪ್ಪಣಿ ನಂ.7ರಲ್ಲಿ ಪಾವತಿ ಮಾಡಿದ ರೂ.69.57ಲಕ್ಷ (ಹಿಂದಿನ ವರ್ಷ ರೂ.41.07ಲಕ್ಷ) ಸೇರಿರುವುದು. ಇದರ ಪೈಕಿ ರೂ.40.42 ಲಕ್ಷ 2013-14ರಿಂದ 2018-19ರ ವರೆಗಿನ ಅವಧಿಗಳಿಗೆ ಸೇರಿದ್ದು, ವಸೂಲಿಯಾಗದೆ ಉಳಿದಿದೆ. ಇದನ್ನು ವಸೂಲು ಮಾಡಲು ಯಾವುದೇ ಕ್ರಮ ಕೈಗೊಂಡಿಲ್ಲದಿರುವುದರಿಂದ ಮತ್ತು ವಸೂಲಾಗದ ಉಳಿದಿರುವ ಅವಧಿ ಪರಿಗಣಿಸಿ ಈ ಠೇವಣಿಗಳು ವಸೂಲಾಗುವ ಅವಕಾಶ ಇರುವುದೇ ಎಂಬುವ ಬಗ್ಗೆ ನಾವು ಸ್ವತಃ ತೃಪ್ತಿ ವ್ಯಕ್ತಪಡಿಸಲು ನಮಗೆ ಸಾಧ್ಯವಿರುವುದಿಲ್ಲ. ಮುಂಗಡಗಳನ್ನು ವಸ್ತುವಿನ ರೂಪದಲ್ಲಿ ಪಡೆಯುವ ಅಥವಾ ಪಡೆಯಬೇಕಾಗಿರುವ ಮೌಲ್ಯವನ್ನು ಹೆಚ್ಚಿಗೆಯಾಗಿ ತಿಳಿಸಿರುವುದರಿಂದ ಹಣಕಾಸಿನ ಪರಿಣಾಮವನ್ನು ಹೆಚ್ಚಿನ ಮಾಹಿತಿ ಇಲ್ಲದ ಪ್ರಯುಕ್ತ ನಿರ್ಧರಣೆ ಮಾಡಲಾಗದು.

ಎಚ್. ಗ್ರಾಹಕರು ಮತ್ತು ಇತರರುಗಳಿಂದ ಬಂದಿರುವ ಠೇವಣಿಗಳ ಅಡಿಯಲ್ಲಿನ ಟಿಪ್ಪಣಿ ಸಂ.15ಸಿ ರಲ್ಲಿ ತಿಳಿಸಿರುವ ಮೊತ್ತದಲ್ಲಿ ರೂ.183.82ಲಕ್ಷಗಳ ಮೊತ್ತದ ಅರ್ನೆಸ್ಟ್ ಹಣ ಠೇವಣಿಗಳು ಒಳಗೊಂಡಿದ್ದು, ಇದರಲ್ಲಿ ರೂ.71.19ಲಕ್ಷ (ಹಿಂದಿನ ವರ್ಷ ರೂ.73.69ಲಕ್ಷ) ಸೇರಿರುವುದು. ಇದನ್ನು ಹೊಂದಿರುಗಿಸಬಹುದಾದ ಅರ್ನೆಸ್ಟ್ ಹಣ ಠೇವಣಿಯಾಗಿ ಪಡೆಯಲಾಗಿರುವುದು. ಮತ್ತು ಇದನ್ನು ಇತರೆ ಚಾಲ್ತಿ ಹೊಣೆಗಾರಿಕೆಗಳಾಗಿ ತೋರಿಸಿದೆ. ಆದರೆ, ಕಂಪನಿಯು ಸಂಬಂಧಪಟ್ಟ ಸರಬರಾಜುದಾರರುಗಳನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ ಮತ್ತು ಸಂಬಂಧಪಟ್ಟ ಯೋಜನೆಗಳು ಕೆಲವಾರು ವರ್ಷಗಳ ಹಿಂದೆಯೇ ಪೂರ್ಣವಾಗಿದ್ದರೂ ಸಹ ಈ ಠೇವಣಿಗಳನ್ನು ಮರುಪಾವತಿ ಮಾಡಿರುವುದಿಲ್ಲ.

ಧಾರಕ ಕಂಪನಿಯ ಸಹಾಯಕ ಕಂಪನಿಯಾದ ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ ಹಣಕಾಸಿನ ಹೇಳಿಕೆಗಳ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ಸ್ ಸ್ವತಂತ್ರ ಸಂಸ್ಥೆಯು ದಿನಾಂಕ 6ನೇ ಸೆಪ್ಟೆಂಬರ್ 2024ರ ತಮ್ಮ ಪರಷ್ಕೃತ ಲೆಕ್ಕಪರಿಶೋಧನೆ ವರದಿ ಅನ್ವಯ ನೀಡಿರುವ ವ್ಯತಿರಿಕ್ತ ಲೆಕ್ಕ ಪರಿಶೋಧನೆಯನ್ನು ನಾವು ಈ ಕೆಳಕಂಡಂತೆ ಮರು ಮಂಡನೆ ಮಾಡಿರುವ ಬಗ್ಗೆ ಗಮನ ಸೆಳೆಯುವೆವು:

### ವ್ಯತಿರಿಕ್ತ ಅಭಿಪ್ರಾಯಕ್ಕೆ ಆಧಾರ

ಎ) ಕಂಪನಿಯು 1986ರಿಂದ ಯಾವುದೇ ತಯಾರಿಕಾ ಚಟುವಟಿಕೆಗಳನ್ನು ನಡೆಸಿಲ್ಲದಿರುವುದರಿಂದ, ಕಂಪನಿಯು ಚಲನಾಶೀಲ ಕಂಪನಿ ಆಗಿರುವುದಿಲ್ಲ. ಕಂಪನಿಯು ರೂ.816.94 ಲಕ್ಷಗಳ ಸಂಚಯನವಾದ ನಷ್ಟವನ್ನು ಹೊಂದಿರುವುದು ಮತ್ತು ನಿವ್ವಳ ಮೌಲ್ಯ ಕ್ಷಯಿಸಿ ಹೋಗಿದೆ. ಈ ದಿನಾಂಕದಲ್ಲಿ ಇದ್ದಂತೆ ಕಂಪನಿಯ ಹೊಣೆಗಾರಿಕೆಯು ಅದರ ಒಟ್ಟಾರೆ ಆಸ್ತಿಗಳಿಗಿಂ ರೂ.741.20ಲಕ್ಷಗಳಷ್ಟು ಅಧಿಕವಾಗಿದೆ. ಈ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಜೊತೆಗೆ ಇತರೆ ವಿಚಾರಗಳು ವಾಸ್ತವಿಕ ಅನಿಶ್ಚಿತತೆ ಇರುವಿಕೆಯನ್ನು ಸೂಚಿಸುವುದು ಮತ್ತು ಕಂಪನಿಯು ಚಲನಶೀಲ ಕಂಪನಿಯಾಗಿ ಮುಂದುವರಿಯುವ ಸಾಮರ್ಥ್ಯದ ಬಗ್ಗೆ ಗುರುತರವಾದ ಸಂದೇಹ ಮೂಡಿಸುವುದು.

ಬಿ. ಕಂಪನಿಯು ಕೆಎಸ್‌ಐಐಡಿಸಿ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲದ ಬಗ್ಗೆ ಚಾಲ್ತಿ ವರ್ಷದಲ್ಲಿ ರೂ.5.48 ಲಕ್ಷಗಳ ಬಡ್ಡಿಯನ್ನು ಮತ್ತು ಏಪ್ರಿಲ್ 1999 ರಿಂದ ರೂ.137.03ಲಕ್ಷಗಳ ಬಡ್ಡಿಯನ್ನು ಪಾವತಿಸಿರುವುದಿಲ್ಲ. ಒಂದು ವೇಳೆ ಈ ಬಡ್ಡಿಯನ್ನು ಪಾವತಿಸಿದ್ದೇ ಆಗಿದ್ದರೆ, ವರ್ಷದ ತೆರಿಗೆ ಮುಂಚಿನ ಲಾಭ ರೂ.32.41 ಲಕ್ಷಗಳ ಎದುರಾಗಿ ರೂ.26.93 ಲಕ್ಷಗಳ ಲಾಭವನ್ನು ಈ ವರ್ಷದಲ್ಲಿ ಸಾಧಿಸಬಹುದಾಗಿತ್ತು. ಚಾಲ್ತಿ ಹೊಣೆಗಾರಿಕೆಯನ್ನು ಈ ವರ್ಷದಲ್ಲಿ ರೂ.5.48ಲಕ್ಷಗಳಷ್ಟು ಕಡಿಮೆಯಾಗಿ ತಿಳಿಸಿದೆ. ಮತ್ತು ಸಂಚಯನವಾದ ನಷ್ಟವನ್ನು ರೂ.137.03ಲಕ್ಷಗಳಷ್ಟು ಕಡಿಮೆಯಾಗಿ ತಿಳಿಸಿದೆ. ಇಷ್ಟಾಗಿದ್ದರೂ ಇದನ್ನು ಕಂಪನಿಯು ಸಂಭಾವ್ಯ ಹೊಣೆಗಾರಿಕೆ ಎಂದು ವರದಿ ಮಾಡಿದೆ.

### ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್‌ನ ಮಹತ್ತರ ವಿಚಾರಗಳು:

ಎ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.41(iv)ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ ''ಅಮೂಲ್ಯ ಚಂದದಾರರುಗಳಿಂದ ಬರಬೇಕಾಗಿರುವ ಮೊತ್ತದ'' ಸಂಬಂಧದಲ್ಲಿ ರೂ.31618.08 ಲಕ್ಷಗಳ ಮೊತ್ತವನ್ನು ''ಹಣಕಾಸಿನ ಆಸ್ತಿಗಳ ಅಡಿಯಲ್ಲಿನ ಸಾಲಗಳು'' ಎಂಬುದಾಗಿ ವರ್ಗೀಕರಿಸಿದೆ. ಆಮಟ್ಯೆರ್ಸ್ಡ್ ಬೆಲೆಯಲ್ಲಿ ಮಾಪನ ಮಾಡಲಾಗಿದೆ. ರೂ.1196.65 ಲಕ್ಷಗಳ ನಿವ್ವಳ ವಾಹಕ ಮೊತ್ತವನ್ನು ಸಮಂಜಸತೆ ಮಾಡಿರದ ಶಿಲ್ಕುಗಳೆಂಬುದಾಗಿ ತಿಳಿಸಿದೆ. ಹಣಕಾಸಿನ ಹೇಳಿಕೆಗಳ ಮೇಲೆ ಇದರ ಪರಿಣಾಮವೇನೆಂದು ತಿಳಿಯಲು ಸಾಧ್ಯವಿಲ್ಲ.

ಬಿ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.41 (ix) ರ ಬಗ್ಗೆ ನಾವು ಗಮನಸೆಳೆಯುವುದೇನೆಂದರೆ, ಕಂಪನಿಯು ಟೂರ್ಸ್ ಅಂಡ್ ಟ್ರಾವಲ್ಸ್ ಸೇವೆಗಳಿಗೆ ಕಂಪನಿ ಕೆಲವು ಮುಂಗಡಗಳನ್ನು ಪಡೆಯಲಾಗಿದೆ ಎಂದು ತಿಳಿಸಿದೆ. ಕಂಪನಿಯು ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಕರ್ನಾಟಕ ಇದರ ಮತ್ತು ಇದಕ್ಕೆ ಸಂಬಂಧಿಸಿದ ಸೇವೆ ಪೂರೈಕೆದಾರರುಗಳ ಲೆಕ್ಕಗಳನ್ನು ಸಮಂಜಸತೆ ಮಾಡಬೇಕು.

ಕಂಪನಿಯು ಕಾಗದಗಳ ವಿಭಾಗದಲ್ಲಿ ಆರ್‌ಜಿಯುಎಚ್‌ಎಸ್ ಗೆ ಸರಬರಾಜುಗಳನ್ನು ಸಹ ಮಾಡಿದೆ. ಕಂಪನಿ ಮತ್ತು ಆರ್‌ಜಿಯುಎಚ್‌ಎಸ್ ಹಾಗೂ ಸಂಬಂಧಪಟ್ಟ ಸೇವೆ ಪೂರೈಕೆದಾರರುಗಳ ನಡುವೆ ವಿವಾದ ಉಂಟಾದುದರಿಂದ, ಆರ್‌ಜಿಯುಎಚ್‌ಎಸ್ ಮತ್ತು ಸೇವೆ ಪೂರೈಕೆದಾರರಿಂದ ಬರಬೇಕಾಗಿರುವುದು ಮತ್ತು ಅವರಿಗೆ ಪಾವತಿ ಮಾಡಬೇಕಾಗಿರುವ ಲೆಕ್ಕಗಳನ್ನು ಸಮಂಜಸತೆ ಮಾಡಬೇಕಾಗಿದೆ.

ಕಂಪನಿಯು ಈ ಸಂಬಂಧ ರೂ.200 ಲಕ್ಷಗಳ ಮೊತ್ತದ ವಸೂಲಾಗದಿರುವ ಮತ್ತು ಸಂದೇಹಾಸ್ಪದವಾಗಿರುವ ಸಾಲಗಳಿಗೆ ವ್ಯವಸ್ಥೆ ಮಾಡಿದೆ. ಸಮಂಜಸತೆ ವಿವರಣೆಗಳಿಲ್ಲದ ಪ್ರಯುಕ್ತ, ಹಣಕಾಸಿನ ಹೇಳಿಕೆಗಳ ಮೇಲೆ ಇದರಿಂದ ಉಂಟಾಗಬಹುದಾದ ಸಾಧ್ಯನೀಯ ಪರಿಣಾಮವನ್ನು ತಿಳಿಯಲಾಗದು.

ಸಿ. ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.39(vii) ರ ಬಗ್ಗೆ ನಾವು ಗಮನ ಸೆಳೆಯುವುದೇನೆಂದರೆ ಸಾರಿಗೆ ಬಗ್ಗೆ ಜಿಎಸ್‌ಟಿ ಆರ್‌ಸಿಎಂ ಲೆಕ್ಕದಲ್ಲಿ ''ಬರಬೇಕಾಗಿರುವ ಮರು ಪಾವತಿ ಹಕ್ಕು'' ರೂ.45.98 ಲಕ್ಷಗಳೆಂದು ತಿಳಿಸಿದೆ. ಆದರೆ ಡಿಸೆಂಬರ್ 2020ರವರೆಗೆ ವಾಸ್ತವಿಕ ಹಕ್ಕು ಕೇಳಿಕೆಯು ರೂ.121.42 ಲಕ್ಷಗಳು ಆಗಿರುವುದು. ವ್ಯತ್ಯಾಸದ ಮೊತ್ತ ರೂ.75.44 ಲಕ್ಷವನ್ನು ಹಿಂದಿನ ವರ್ಷಗಳಲ್ಲಿ ಲಾಭ ಮತ್ತು ನಷ್ಟದ ವಿವರಣೆಗೆ ವಿಧಿಸಿದೆ. ಕಂಪನಿಯು ಹಕ್ಕು ಕೇಳಿಕೆಯನ್ನು ಕೇಂದ್ರ ತೆರಿಗೆಯ ಸಹಾಯಕ ಆಯುಕ್ತರು, ಉತ್ತರ ವಿಭಾಗ-3, ಬೆಂಗಳೂರು ಇವರು ತಿರಸ್ಕರಿಸಿರುವರು. ತರುವಾಯ, ಕಂಪನಿಯು ಸಲ್ಲಿಸಿದ್ದ ಮೇಲ್ಮನವಿಯನ್ನು ಸಹ ಜಿಎಸ್‌ಟಿಯ ಹೆಚ್ಚುವರಿ ಆಯುಕ್ತರು, ಮೇಲ್ಮನವಿ-II, ಬೆಂಗಳೂರು ಇವರು ತಿರಸ್ಕರಿಸಿದ್ದಾರೆ. ಮುಂದುವರಿದು ಜನವರಿ 2021 ರಿಂದ ಮಾರ್ಚ್ 2024ರ ವರೆಗಿನ ಅವಧಿಗೆ ಸಾರಿಗೆಯ ಮೇಲಿನ ಜಿಎಸ್‌ಟಿ ಆರ್‌ಸಿಎಂ ಹೊಣೆಗಾರಿಕೆಯು ರೂ.319.51 ಲಕ್ಷ ಆಗಿದ್ದು, ಇದನ್ನು ಕಂಪನಿ ಪಾವತಿಸಿರುವುದಿಲ್ಲ. ಕಂಪನಿಯ ಪರವಾಗಿ ತೀರ್ಪು ಬರುವ ಅವಕಾಶಗಳು ಅಧಿಕವಾಗಿರುವುದಾಗಿ ಕಾನೂನು ಸಲಹೆ ಮಾಡಿರುವುದರಿಂದ ಪಡೆಯಬಹುದಾಗಿರುವ ಮರು ಪಾವತಿ ಹಾಗೂ ಹೆಚ್ಚುವರಿ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ.

ಡಿ. ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.41(II)ರ ಬಗ್ಗೆ ನಾವು ಗಮನಸೆಳೆಯುವುದೇನೆಂದರೆ, ಪಾವತಿ ಮಾಡಬೇಕಿರುವ ಮತ್ತು ಪಡೆಯಬಹುದಾಗಿರುವ ಬಾಕಿಯಿರುವ ಶಿಲ್ಕುಗಳಿಗೆ ಸಂಬಂಧಿಸಿದಂತೆ ಅನಿಶ್ಚಿತತೆಯಿರುವುದಾಗಿ ವಿವರಿಸಲಾಗಿದೆ. ಶಿಲ್ಕಿನ ದೃಢೀಕರಣಗಳು ಮತ್ತು ಸಮಂಜಸತೆಗಳಿಲ್ಲದಿರುವುದರಿಂದ, ಇದರಿಂದ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಹಣಕಾಸಿನ ಪರಿಣಾಮವನ್ನು ತಿಳಿಯಲಾಗದು.

ಈ ವಿಚಾರದ ಬಗ್ಗೆ ನಮ್ಮ ಅಭಿಪ್ರಾಯವು ಅನ್ವಯವಾಗದು.

ಚಾರ್ಟರ್ಡ್ ಅಕೌಂಟೆಂಟ್‌ನ ಸ್ವತಂತ್ರ ಸಂಸ್ಥೆ ದಿನಾಂಕ: 24ನೇ ಸೆಪ್ಟೆಂಬರ್ 2024ರ ತಮ್ಮ ಪರಿಸ್ಕೃತ ಲೆಕ್ಕಪರಿಶೋಧನೆ ವರದಿ ಅನ್ವಯ ನೀಡಿರುವ ಧಾರಕ ಕಂಪನಿಯ ಸಹಾಯಕ ಕಂಪನಿಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್(ಹಿಂದಿನ ಹೆಸರು: ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಅಭಿಪ್ರಾಯದ ಕೆಳಕಂಡ ಮಹತ್ವದ ವಿಚಾರಗಳ ಬಗ್ಗೆ ನಾವು ಗಮನ ಸೆಳೆಯುವೆವು. ಅದನ್ನು ನಾವು ಈ ಕೆಳಕಂಡಂತೆ ಮರು ಮಂಡನೆ ಮಾಡಿರುವೆವು.

ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವವುಗಳ ಅಡಿಯಲ್ಲಿನ ಟಿಪ್ಪಣಿ ಸಂ.18ರಲ್ಲಿ ತಿಳಿಸಿರುವ ವಿಚಾರದ ಬಗ್ಗೆ ಗಮನಸೆಳೆಯುವುದೇನೆಂದರೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006 (''ಎಂಎಸ್‌ಇಎಂಡಿ ಕಾಯ್ದೆ, 2005) ರ ಅನ್ವಯ ನೋಂದಣಿಯಾಗಿರುವ ಸೂಕ್ಷ್ಮ ಮತ್ತು ಸಣ್ಣ ಉದ್ದಿಮೆಗಳಿಗೆ ಪಾವತಿ ಮಾಡಬೇಕಿರುವ ಬಾಕಿಗಳಿಗೆ ಸಂಬಂಧಿಸಿದ ರೂ.66.07ಲಕ್ಷ (ಹಿಂದಿನ ವರ್ಷ ರೂ.46.44ಲಕ್ಷದ ಮೊತ್ತವು ಸೇರಿರುವುದು ಮತ್ತು ಅಂಕಿ ಅಂಶಗಳನ್ನು ನಿರೂಪಿಸಲು ಅಂತಹ ಮಾಹಿತಿಯನ್ನು ಸಂಗ್ರಹಿಸುವ ವಿಧಾನ ಮತ್ತು ಆ ಮಾಹಿತಿ ಮೇಲೆ ಅವಲಂಬನೆಯಾಗುವುದನ್ನು ತಿಳಿಸುವ ಬಗ್ಗೆ ಇದರಡಿ ತಿಳಿಸಿರುವ ವಿವರಣೆ ಟಿಪ್ಪಣಿ ಬಗ್ಗೆ, ಗಮನ ಸೆಳೆಯುವುದೇನೆಂದರೆ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006(''ಎಂಎಸ್‌ಇಎಂಡಿ'' ಕಾಯ್ದೆ, 2006) ರ ಅನ್ವಯ ನೋಂದಣಿಯಾಗಿರುವ ಸರಬರಾಜುದಾರರ ಬಗ್ಗೆ ನಾವು ಅವಲಂಬನೆಯಾಗುವಿಕೆಯು 23 ಸರಬರಾಜುದಾರರಿಗೆ ಸೀಮಿತವಾಗಿರುವುದು. ಇವರು ಎಂಎಸ್‌ಎಂಇ ಆಗಿ ನೋಂದಣಿ ಸ್ಥಿತಿಗತಿಯನ್ನು ಕಂಪನಿಗೆ ತಿಳಿಸಿ ದೃಢೀಕರಿಸಿರುವರು.

ಸದರಿ ವಿಚಾರದ ಬಗ್ಗೆ ಅವರ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದು:

ಧಾರಕ ಕಂಪನಿಯ ಸಹಾಯಕ ಕಂಪನಿಯಾದ ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ ಸಂಬಂಧ ಚಾರ್ಟರ್ಡ್ ಅಕೌಂಟೆಂಟ್ಸ್‌ನ ಸ್ವತಂತ್ರ ಸಂಸ್ಥೆ ದಿನಾಂಕ: 6ನೇ ಸೆಪ್ಟೆಂಬರ್ 2024ರ ಅವರ ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ಅನ್ವಯ ನೀಡಿರುವ ಹಣಕಾಸಿನ ಹೇಳಿಕೆಗಳ ವ್ಯತಿರಿಕ್ತ ಲೆಕ್ಕಪರಿಶೋಧನಾ ಅಭಿಪ್ರಾಯದ ಮಹತ್ವದ ವಿಚಾರಗಳ ಬಗ್ಗೆ ನಾವು ಈ ಕೆಳಗೆ ಮರು ಮಂಡನೆ ಮಾಡಿರುವ ಬಗ್ಗೆ ನಾವು ಗಮನ ಸೆಳೆಯುವೆವು-

ಎ) ಬಿಡಿಎ ಯಿಂದ ಪರಿಹಾರದ ಮೊತ್ತ ವಸೂಲಿಯ ಬಗ್ಗೆ ಮೊತ್ತ ಎಷ್ಟು ಎಂಬುದು ತಿಳಿಯಲಾಗಿಲ್ಲ.

ಬಿ) ವಿಶೇಷ ಘಟಕ ಯೋಜನೆ ಬಗ್ಗೆ ಬಡ್ಡಿ ವ್ಯವಸ್ಥೆ ಮಾಡದಿರುವ ಬಗ್ಗೆ, ಇದರ ಪರಿಣಾಮ ತಿಳಿಯಲಾಗಿಲ್ಲ.

ಸಿ) ಸಾಲಗಳು ಮತ್ತು ಮುಂಗಡಗಳ ಬಗ್ಗೆ ದೃಢೀಕರಣ ಮಾಡದಿರುವುದು.

ಡಿ) ಕಂಪನಿಯ ಸಂಭಾವ್ಯ ಹೊಣೆಗಾರಿಕೆಗಳ ಸಂಬಂಧದ ಫಲಿತಾಂಶಕ್ಕೆ ಸಂಬಂಧಿಸಿದ ಅನಿಶ್ಚಿತತೆ ವಿವರಿಸುವ ಹಣಕಾಸಿನ ಹೇಳಿಕೆಗಳು

ಇ) ಕಂಪನಿಗಳ ಕಾಯ್ದೆ 2013ರ ಅನ್ವಯ ಕಂಪನಿಗಳ ರಿಜಿಸ್ಟ್ರಾರ್‌ರವರಲ್ಲಿ ಉಳಿದುಕೊಂಡಿರುವ ಅನುಸರಣೆಗಳ ವಿಚಾರದಲ್ಲಿ

ಎಫ್) ಹಿಂದಿನ ವರ್ಷಕ್ಕೆ ಸಂಬಂಧಿಸಿದಂತೆ ಮುಂಗಡ ಎಂಬುದಾಗಿ ತೋರಿಸಿರುವ ಟಿಡಿಎಸ್‌ನ ವಜಾಗೊಳಿಸಿರುವ ಬಗ್ಗೆ

ಜಿ) ಕೊಳಚೆ ನಿವಾಸಿಗಳು ವಶಪಡಿಸಿಕೊಂಡಿರುವ 2979 ಚದರ ಮೀಟರ್

ಜಮೀನಿನ ಸಂಬಂಧ ಕೆಎಸ್‌ಸಿಬಿ ಒಪ್ಪಿರುವ ಪರಿಹಾರದ ವಿಚಾರದಲ್ಲಿ, ಪರಿಹಾರದ ಮೊತ್ತ ಎಂಬುದು ತಿಳಿಯಲಾಗಿಲ್ಲ.

ಈ ವಿಚಾರದ ಸಂಬಂಧದಲ್ಲಿ ಅವರ ಅಭಿಪ್ರಾಯವನ್ನು ಮಾರ್ಪಾಡು ಮಾಡಿರುವುದಿಲ್ಲ;

ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕ ಪರಿಶೋಧನೆಯನ್ನು ಕಾಯ್ದೆಯ ಸೆಕ್ಷನ್ 143(10)ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಲೆಕ್ಕಪರಿಶೋಧನೆಯ ಬಗ್ಗೆಗಿನ ಮಾನದಂಡಗಳ (ಎಸ್‌ಎಗಳು) ಅನುಸರ ನಾವು ನಡಸಿರುವೆವು. ಸದರಿ ಮಾನದಂಡಗಳ ಅನ್ವಯ ನಮಗಿರುವ ಜವಾಬ್ದಾರಿಗಳನ್ನು ನಮ್ಮ ವರದಿಯ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆ ಬಗ್ಗೆಗಿನ ಲೆಕ್ಕಪರಿಶೋಧಕರ ಜವಾಬ್ದಾರಿಗಳ ಭಾಗದಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ವಿವರಿಸಿದೆ. ಕಾಯ್ದೆಯ ನಿಬಂಧನೆಗಳು ಮತ್ತು ಇದರಡಿಯಲ್ಲಿ ಮಾಡಿರುವ ನಿಯಮಗಳ ಅನ್ವಯ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸದ ಸ್ವತಂತ್ರದ ಅಗತ್ಯತೆಗಳ ಜೊತೆಗೆ ಭಾರತದ ಲೆಕ್ಕಪರಿಶೋಧಕರ ಸಂಸ್ಥೆ (ಐಸಿಎಐ) ಹೊರಡಿಸಿರುವ ನೀತಿ ಸಂಹಿತೆಗಳ ಅನುಸಾರ ನಾವು ಸ್ವತಂತ್ರರಾಗಿರುವೆವು. ಮತ್ತು ನಾವು ಈ ಅಗತ್ಯತೆಗಳು ಮತ್ತು ಐಸಿಎಐನ ನೀತಿ ಸಂಹಿತೆಗಳ ಅನುಸಾರ ಇತರೆ ನೈತಿಕ ಜವಾಬ್ದಾರಿಗಳನ್ನು ಈಡೇರಿಸಿದ್ದೇವೆ. ನಾವು ಪಡೆದುಕೊಂಡಿರುವ ಲೆಕ್ಕ ಪರಿಶೋಧನೆ ಪುರಾವೆಯು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅರ್ಹತಾ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದಾಗಿ ನಾವು ನಂಬಿದ್ದೇವೆ.

## ಕ್ರೋಡೀಕೃತ ಹಣಕಾಸು ಹೇಳಿಕೆಗಳು ಮತ್ತು ಇದರ ಮೇಲಿನ ಲೆಕ್ಕಪರಿಶೋಧಕರ ವರದಿ ಹೊರತಾದ ಮಾಹಿತಿ

ಮಾತೃ ಕಂಪನಿಯ ನಿರ್ದೇಶಕರ ಮಂಡಳಿಯು ಇತರೆ ಮಾಹಿತಿ ಸಿದ್ಧಪಡಿಸಲು ಜವಾಬ್ದಾರರಾಗಿರುವರು. ಇತರೆ ಮಾಹಿತಿಯಲ್ಲಿ ಮಂಡಳಿಯ ವರದಿ, ಮಂಡಳಿಯ ವರದಿಗೆ ಅನುಬಂಧ ಒಳಗೊಂಡಿರುವುದು. ಆದರೆ ಹಣಕಾಸಿನ ಹೇಳಿಕೆಗಳು ಮತ್ತು ಇದರ ಮೇಲಿನ ನಮ್ಮ ಲೆಕ್ಕಪರಿಶೋಧಕರ ವರದಿ ಸೇರಿರುವುದಿಲ್ಲ. ಸದರಿ ಲೆಕ್ಕಪರಿಶೋಧಕರ ವರದಿ ದಿನಾಂಕದ ನಂತರ ಮಂಡಳಿಯ ವರದಿಯನ್ನು ನಮಗೆ ದೊರಕಿಸಿಕೊಡುವ ನಿರೀಕ್ಷೆಯಿದೆ.

ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರೆ ಮಾಹಿತಿಯನ್ನು ಒಳಪಡಿಸಿಕೊಂಡಿರುವುದಿಲ್ಲ. ಆದ್ದರಿಂದಾಗಿ ಇದರ ಮೇಲೆ ನಾವು ಯಾವುದೇ ರೀತಿಯ ಭರವಸೆಯ ನಿರ್ಣಯ ವ್ಯಕ್ತಪಡಿಸುವುದಿಲ್ಲ.

ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕಪರಿಶೋಧನೆ ಸಂಬಂಧದಲ್ಲಿ, ನಮ್ಮ ಜವಾಬ್ದಾರಿಯು ಇತರೆ ಮಾಹಿತಿಯನ್ನು ಓದುವುದಾಗಿರುತ್ತದೆ. ಹಾಗೆ ಮಾಡುವಾಗ ಇತರೆ ಮಾಹಿತಿಯು ಹಣಕಾಸಿನ ಹೇಳಿಕೆಗಳಿಗೆ ವಾಸ್ತವಿಕವಾಗಿ ಅಸಂಗತವಾಗಿರುವವೇ ಅಥವಾ ಲೆಕ್ಕ ಪರಿಶೋಧನೆಯಲ್ಲಿ ಪಡೆದಿರುವ ನಮ್ಮ ತಿಳುವಳಿಕೆಯು ಅಸಂಗತವಾಗಿರುವುದೇ ಅಥವಾ ವಾಸ್ತವಿಕವಾಗಿ ತಪ್ಪು ನೀಡಲಾಗಿದೆಯೇ ಎಂಬುದನ್ನು ಪರಿಗಣಿಸುವೆವು.

ನಾವು ಮಾಡಿರುವ ಕೆಲಸದ ಆಧಾರದ ಮೇಲೆ ಸದರಿ ಇತರೆ ಮಾಹಿತಿಯು ವಾಸ್ತವಿಕವಾಗಿ ತಪ್ಪು ಹೇಳಿಕೆಯಿಂದ ಕೂಡಿರುವುದು ಎಂದು ನಾವು ನಿರ್ಣಯಿಸುವೆವು. ಹಾಗೆ ಮಾಡಿದಾಗ ನಾವು ಆ ವಾಸ್ತವಾಂಶವನ್ನು ವರದಿ ಮಾಡಬೇಕಾಗುತ್ತದೆ. ಈ ವಿಚಾರದಲ್ಲಿ ನಾವು ವರದಿ ಮಾಡುವುದು ಏನೂ ಇರುವುದಿಲ್ಲ. ನಾವು ನಿರ್ದೇಶಕರ ವರದಿ ಓದಿದಾಗ ಅದರಲ್ಲಿ ವಾಸ್ತವಿಕ ತಪ್ಪು ಹೇಳಿಕೆ ಇರುವುದೆಂದು ನಾವು ನಿರ್ಧಾರಕ್ಕೆ ಬಂದಿದ್ದೇ ಆದಲ್ಲಿ, ಆ ವಿಚಾರವನ್ನು ಆಡಳಿತ ಜವಾಬ್ದಾರಿ ಹೊಂದಿರುವವರಿಗೆ ನಾವು ತಿಳಿಸಬೇಕಾಗುತ್ತದೆ.

## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಆಡಳಿತ ಮಂಡಳಿಯ ಮತ್ತು ಆಡಳಿತ ಜವಾಬ್ದಾರಿಯುಳ್ಳವರ ಜವಾಬ್ದಾರಿ

ಮಾತೃ ಕಂಪನಿಯ ನಿರ್ದೇಶಕರ ಮಂಡಳಿಯು, ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಲೆಕ್ಕ ನಿರ್ವಹಣೆ ಮಾನದಂಡಗಳೂ ಸೇರಿದಂತೆ, ಭಾರತದಲ್ಲಿ ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕನಿರ್ವಹಣೆ ನೀತಿಗಳ ಅನುಸಾರ ಗ್ರೂಪ್‌ನ ಹಣಕಾಸಿನ ಪರಿಸ್ಥಿತಿ, ಹಣಕಾಸಿನ ಕಾರ್ಯಕ್ಷಮತೆ, ಮತ್ತು ನಗದು ಹರಿಯುವಿಕೆಗಳ ಬಗ್ಗೆ ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಈ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದಕ್ಕೆ ಕಾಯ್ದೆಯ ಪ್ರಕರಣ 134(5)ರಲ್ಲಿ ತಿಳಿಸಿರುವ ವಿಚಾರಗಳಿಗೆ ಜವಾಬ್ದಾರಿಯಾಗಿರುವುದು. ಮಾತೃ ಕಂಪನಿಯ ಆಸ್ತಿಗಳನ್ನು ಸುರಕ್ಷತೆ ಮಾಡಲು ಕಾಯ್ದೆಯ ಉಪಬಂಧಗಳ ಅನುಸಾರ ಸಾಕಷ್ಟು ಮಟ್ಟದಲ್ಲಿ ಲೆಕ್ಕ ನಿರ್ವಹಣೆ ದಾಖಲೆಗಳನ್ನು ನಿರ್ವಹಣೆ ಮಾಡುವುದು ಮತ್ತು ವಂಚನೆಗಳು ಮತ್ತು ಇತರೆ ಅಕ್ರಮಗಳನ್ನು ತಡೆಯಲು ಮತ್ತು ಪತ್ತೆ ಹಚ್ಚಲು, ಸೂಕ್ತವಾದ ಲೆಕ್ಕ ನಿರ್ವಹಣೆ ನೀತಿಗಳನ್ನು ಆಯ್ಕೆ ಮಾಡುವುದು ಮತ್ತು ಬಳಸುವುದು; ಸೂಕ್ತವಾದ ಮತ್ತು ನ್ಯಾಯಸಮ್ಮತವಾದ ತೀರ್ಮಾನಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು; ಮತ್ತು ವಂಚನೆ ಅಥವಾ ತಪ್ಪಿನಿಂದ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವ ಮತ್ತು ನೈಜ ಮತ್ತು ನ್ಯಾಯೋಚಿತ ಚಿತ್ರಣ ನೀಡುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಮತ್ತು ನಿರೂಪಿಸಲು ಸೂಕ್ತವಾದ ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆಯನ್ನು ಖಾತರಿ ಪಡಿಸುವುದಕ್ಕೆ ಪರಿಣಾಮಕಾರಿಯಾಗಿ ಕಾರ್ಯಾಚರಣೆ ಮಾಡುತ್ತಿರುವ ಸಾಕಷ್ಟು ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸ, ಅನುಷ್ಠಾನ ಮತ್ತು ನಿರ್ವಹಣೆ ಮಾಡುವುದು ಸಹ ಈ ಜವಾಬ್ದಾರಿಯಲ್ಲಿ ಸೇರಿರುವುದು.

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಲ್ಲಿ, ಗ್ರೂಪ್‌ನಲ್ಲಿ ಸೇರಿರುವ ಸಂಬಂಧಪಟ್ಟ ಆಡಳಿತ ವರ್ಗ ಮತ್ತು ಕಂಪನಿಗಳ ನಿರ್ದೇಶಕರುಗಳ ಮಂಡಳಿ, ಸಂಬಂಧಪಟ್ಟ ನಿರ್ದೇಶಕರುಗಳ ಮಂಡಳಿಯು ತಮ್ಮ ಸಂಬಂಧಪಟ್ಟ ಕಂಪನಿಗಳನ್ನು ಪರಿಸಮಾಪ್ತಿ ಮಾಡಲು ಅಥವಾ ಕಾರ್ಯಾಚರಣೆಗಳನ್ನು ಸ್ಥಗಿತಗೊಳಿಸಲು ಅಥವಾ ಹಾಗೆ ಮಾಡದೆ ಬೇರೆ ವಾಸ್ತವಿಕ ಪರ್ಯಾಯವಿಲ್ಲವೆಂದು ಅಪೇಕ್ಷಿಸದಿರದ ಹೊರತು, ಚಲನಶೀಲ ಸಂಸ್ಥೆಗೆ ಸಂಬಂಧಿಸಿದ ವಿಚಾರಗಳನ್ನು ಮತ್ತು ಲೆಕ್ಕ ನಿರ್ವಹಣೆಯ ಚಲನಶೀಲ ಸಂಸ್ಥೆ ಆಧಾರ ಬಳಕೆಯ ವಿಚಾರಗಳನ್ನು ಅನ್ವಯವಾಗುವಂತೆ ತಿಳಿಸಿ, ಸಂಬಂಧಪಟ್ಟ ಸಂಸ್ಥೆಗಳು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಸಾಮರ್ಥ್ಯವನ್ನು ನಿರ್ಧರಣೆ ಮಾಡಲು ಜವಾಬ್ದಾರರಾಗಿರುವರು.

ಗ್ರೂಪ್‌ನಲ್ಲಿ ಸೇರಿರುವ ಕಂಪನಿಗಳ ಸಂಬಂಧಪಟ್ಟ ನಿರ್ದೇಶಕರ ಮಂಡಳಿಯು ಗ್ರೂಪ್‌ನ ಹಣಕಾಸಿನ ವರದಿಗಾರಿಕೆಯ ಪ್ರಕ್ರಿಯೆಯನ್ನು ಅವಲೋಕಿಸುವುದಕ್ಕೂ ಜವಾಬ್ದಾರರಾಗಿರುವುದು.

### ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಗೆ ಲೆಕ್ಕಪರಿಶೋಧಕರು ಹೊಂದಿರುವ ಜವಾಬ್ದಾರಿಗಳು

ನಮ್ಮ ಧ್ಯೇಯವು ಕ್ರೋಡೀಕೃತ ಸ್ವತಂತ್ರ ಹಣಕಾಸಿನ ಹೇಳಿಕೆಗಳು ಒಟ್ಟಾರೆಯಾಗಿ ವಂಚನೆ ಅಥವಾ ತಪ್ಪಿನಿಂದಾಗಲಿ ವಾಸ್ತವಿಕ ತಪ್ಪು ಹೇಳಿಕೆಗಳಿಲ್ಲದೆ ಮುಕ್ತವಾಗಿರುವಂತೆ ಸೂಕ್ತವಾದ ಭರವಸೆ ಪಡೆಯುವುದು, ಮತ್ತು ನಮ್ಮ ಅಭಿಪ್ರಾಯ ಒಳಗೊಂಡ ಲೆಕ್ಕ ಪರಿಶೋಧಕರ ವರದಿ ಒಂದನ್ನು ನೀಡುವುದು ಆಗಿರುತ್ತದೆ. ಸೂಕ್ತವಾದ ಭರವಸೆ ಅಂದರೆ ಉನ್ನತ ಮಟ್ಟದ ಭರವಸೆಯಾಗಿರುವುದು. ಆದರೆ ಲೆಕ್ಕಪರಿಶೋಧನೆಯ ಗುಣಮಟ್ಟಗಳ ಅನುಸಾರ ಲೆಕ್ಕಪರಿಶೋಧನೆಯು ಯಾವಾಗಲೂ ವಾಸ್ತವಿಕ ತಪ್ಪು ಹೇಳಿಕೆಗಳೇನಾದರೂ ಇದ್ದಲ್ಲಿ ಅವುಗಳನ್ನು ಪತ್ತೆ ಹಚ್ಚುವುದೆಂಬ ಬಗ್ಗೆ ಖಾತರಿಯಿರುವುದಿಲ್ಲ. ತಪ್ಪು ಹೇಳಿಕೆಗಳು ವಂಚನೆ ಅಥವಾ ತಪ್ಪಿನಿಂದ ಉಂಟಾಗಬಹುದು. ಅವು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ, ಸದರಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಆಧಾರದ ಮೇಲೆ ಬಳಕೆದಾರರು ತೆಗೆದುಕೊಂಡ ಆರ್ಥಿಕ ತೀರ್ಮಾನಗಳ ಮೇಲೆ ಪ್ರಭಾವ ಬೀರುವುವು ಎಂಬುದಾಗಿ ಸಕಾರಣವಾಗಿ ನಿರೀಕ್ಷಿಸಲಾಗಿದ್ದಲ್ಲಿ ಅವು ವಾಸ್ತವಿಕವಾದವು ಎಂಬುದಾಗಿ ಪರಿಗಣಿಸಲಾಗುವುದು.

ಲೆಕ್ಕಪರಿಶೋಧನೆ ಗುಣಮಟ್ಟಗಳ (ಎಸ್‌ಎಗಳ) ಅನುಸಾರದ ಅಂಗವಾಗಿ ನಾವು ಲೆಕ್ಕಪರಿಶೋಧನೆ ಕಾರ್ಯದ ಉದ್ದಕ್ಕೂ ವೃತ್ತಿದಾಯಕ ತೀರ್ಮಾನಗಳನ್ನು ಮಾಡುವೆವು ಮತ್ತು ವೃತ್ತಿದಾಯಕ ಸಂದೇಹವನ್ನು ಅನುಸರಿಸುವೆವು. ಇದಲ್ಲದೆ ನಾವು:

- ವಂಚನೆ ಅಥವಾ ತಪ್ಪಿನ ಪ್ರಯುಕ್ತ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಅಪಾಯಗಳನ್ನು ಗುರುತಿಸುವೆವು ಮತ್ತು ನಿರ್ಧರಣೆ ಮಾಡುವೆವು. ಅಂತಹ ಅಪಾಯಗಳನ್ನು ನಿಭಾಯಿಸಲು ಪೂರಕವಾದ ಲೆಕ್ಕ ಪರಿಶೋಧನೆ ಕ್ರಮಾವಳಿಗಳನ್ನು ವಿನ್ಯಾಸ ಮಾಡುವೆವು ಮತ್ತು ಲೆಕ್ಕಪರಿಶೋಧನೆ ಮಾಡುವೆವು ಹಾಗೂ ನಮ್ಮ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸೂಕ್ತವಾದ ಮತ್ತು ಸಾಕಷ್ಟು ಪ್ರಮಾಣದ ಲೆಕ್ಕಪರಿಶೋಧನೆ ಪುರಾವೆ ಪಡೆಯುವೆವು. ವಂಚನೆಯಿಂದ ಉಂಟಾಗುವ ವಾಸ್ತವಿಕ ತಪ್ಪು ಹೇಳಿಕೆಯನ್ನು ಪತ್ತೆಹಚ್ಚದಿರುವ ಅಪಾಯವು, ತಪ್ಪಿನಿಂದ ಉಂಟಾಗುವ ಅಪಾಯಕ್ಕಿಂತ ತೀವ್ರವಾದುದಾಗಿರುತ್ತದೆ. ವಂಚನೆಯು ಒಳಸಂಚು, ನಕಲಿ ಪತ್ರ ಸೃಷ್ಟಿ, ಉದ್ದೇಶಪೂರ್ವಕವಾಗಿಯೇ ಬಿಟ್ಟುಬಿಡುವುದು, ತಪ್ಪು ಪ್ರಾತಿನಿಧ್ಯಗಳನ್ನು ನೀಡುವುದು ಅಥವಾ ಆಂತರಿಕ ನಿಯಂತ್ರಣವನ್ನು ಉಲ್ಲಂಘಿಸುವ ಕೃತ್ಯಗಳನ್ನು ಒಳಗೊಂಡಿರುವುದರಿಂದ ವಂಚನೆಯು ತಪ್ಪಿಗಿಂತ ತೀವ್ರ ಸ್ವರೂಪದ ಅಪಾಯವಾಗಿರುವುದು.
- ಪರಿಸ್ಥಿತಿಗಳಿಗೆ ಸೂಕ್ತವಾಗಿರುವ ಲೆಕ್ಕಪರಿಶೋಧನೆ ಕ್ರಮಾವಳಿಗಳನ್ನು ರೂಪಿಸಲು, ಲೆಕ್ಕಪರಿಶೋಧನೆಗೆ ಪೂರಕವಾದ ಆಂತರಿಕ ನಿಯಂತ್ರಣದ ಅರ್ಥವಂತಿಕೆ ಒಂದನ್ನು ಪಡೆಯುವೆವು. ಕಾಯ್ದೆಯ ಪ್ರಕರಣ 143(3)(i)ರ ಅನ್ವಯ, ಕಂಪನಿ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಸಂಬಂಧ ಸಾಕಷ್ಟು ಪ್ರಮಾಣದ ಆಂತರಿಕ ಹಣಕಾಸಿನ ನಿಯಂತ್ರಣ ವ್ಯವಸ್ಥೆಗಳನ್ನು ಹೊಂದಿರುವುದೇ ಮತ್ತು ಆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿದೆ ಎಂಬುದರ ಬಗ್ಗೆ ನಮ್ಮ ಅಭಿಪ್ರಾಯ ತಿಳಿಸಲು ಸಹ ನಾವು ಜವಾಬ್ದಾರರಾಗಿರುವೆವು.
- ಆಡಳಿತ ಮಂಡಳಿ ಬಳಸಿರುವ ಲೆಕ್ಕ ನಿರ್ವಹಣೆ ನೀತಿಗಳ ಸೂಕ್ತಾಸೂಕ್ತತೆ ಮತ್ತು ಲೆಕ್ಕನಿರ್ವಹಣೆ ಅಂದಾಜುಗಳ ಯುಕ್ತತೆ ಮತ್ತು ಸಂಬಂಧಪಟ್ಟ ಪ್ರಕಟಣೆಗಳ ಸೂಕ್ತತೆಗಳನ್ನು ಮೌಲ್ಯಮಾಪನ ಮಾಡುವೆವು.
- ಆಡಳಿತ ವರ್ಗವು ಚಲನಶೀಲ ಸಂಸ್ಥೆಯ ಆಧಾರದ ಲೆಕ್ಕನಿರ್ವಹಣೆ ಬಳಕೆಯ ಸೂಕ್ತತೆಗಳ ಬಗ್ಗೆ ಅಂತಿಮ ತೀರ್ಮಾನಕ್ಕೆ ಬರುವುದು ಮತ್ತು, ಪಡೆದುಕೊಂಡ ಲೆಕ್ಕಪರಿಶೋಧನೆ ಪುರಾವೆಯ ಆಧಾರದ ಮೇಲೆ, ಕಂಪನಿಯು ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವ ಬಗ್ಗೆ ಗುರುತರವಾದ ಸಂದೇಹ ಸೂಚಿಸುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕ ಅನಿಶ್ಚಿತತೆ ಇರುವುದೇ ಎಂಬುದನ್ನು ತೀರ್ಮಾನಿಸುವೆವು. ವಾಸ್ತವಿಕ ಅನಿಶ್ಚಿತತೆ ಇರುವುದೆಂದು ನಾವು ತೀರ್ಮಾನಿಸಿದ್ದೇ ಆದರೆ, ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ತಿಳಿಸಿರುವ ಸಂಬಂಧಪಟ್ಟ ಘೋಷಣೆಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ವರದಿಯಲ್ಲಿ ನಾವು ಗಮನ ಸೆಳೆಯಬೇಕಾಗುತ್ತದೆ; ಅಥವಾ ಅಂತಹ ಘೋಷಣೆಗಳು ಸಾಕಷ್ಟು ಇಲ್ಲದಿದ್ದರೆ, ಆಗ ನಮ್ಮ ಅಭಿಪ್ರಾಯವನ್ನು ಮಾರ್ಪಾಡು ಮಾಡಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ಪಡೆದುಕೊಂಡಿರುವ ಲೆಕ್ಕಪರಿಶೋಧನಾ ಪುರಾವೆಯ ಮೇಲೆ ಆಧಾರಿತವಾಗಿರುವುದು. ಆದರೂ, ಮುಂದಿನ ದಿನಗಳಲ್ಲಿ ಉಂಟಾಗುವ ಘಟನಾವಳಿಗಳು ಅಥವಾ ಪರಿಸ್ಥಿತಿಗಳು ಗ್ರೂಪ್ ಚಲನಶೀಲ ಸಂಸ್ಥೆಯಾಗಿ ಮುಂದುವರಿಯುವುದನ್ನು ಸ್ಥಗಿತಗೊಳಿಸಬಹುದಾಗಿರುವುದು.
- ಪ್ರಕಟಣೆಗಳೂ ಸೇರಿದಂತೆ ಒಟ್ಟಾರೆ ನಿರೂಪಣೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಸ್ವರೂಪ ಮತ್ತು ವಿಷಯ ಒಕ್ಕಣೆಯನ್ನು ಮೌಲ್ಯಮಾಪನ ಮಾಡುವೆವು. ಮತ್ತು ಸ್ವತಂತ್ರ ಹಣಕಾಸಿನ ಹೇಳಿಕೆಗಳು ಮುಂದೆ ತಿಳಿಸಿರುವ ವ್ಯವಹಾರಗಳು ಮತ್ತು ಘಟನಾವಳಿಗಳನ್ನು ನ್ಯಾಯೋಚಿತ ನಿರೂಪಣೆಯ ರೀತಿಯಲ್ಲಿ ಪ್ರತಿನಿಧಿಸುವುದೇ ಎಂಬುದನ್ನು ಮೌಲ್ಯಮಾಪನ ಮಾಡುವೆವು.
- ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯ ಒಂದನ್ನು ತಿಳಿಸಲು ಸಂಸ್ಥೆಗಳ ಹಣಕಾಸಿನ ಮಾಹಿತಿ ಅಥವಾ ಗ್ರೂಪ್‌ನ ಒಳಗಿನ ವ್ಯವಹಾರದ ಚಟುವಟಿಕೆಗಳ ಬಗ್ಗೆ ಸಾಕಷ್ಟು ಪ್ರಮಾಣದ ಸೂಕ್ತವಾದ ಲೆಕ್ಕ ಪರಿಶೋಧನೆ ಪುರಾವೆ ಪಡೆಯುವೆವು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರಿರುವ ಮತ್ತು ಅವುಗಳಿಗೆ ನಾವು ಸ್ವತಂತ್ರ ಲೆಕ್ಕಪರಿಶೋಧಕರಾಗಿರುವ, ಅಂತಹ ಸಂಸ್ಥೆಗಳ ಹಣಕಾಸಿನ ಹೇಳಿಕೆಗಳ ಲೆಕ್ಕ ಪರಿಶೋಧನೆಯ ನಿರ್ದೇಶನ, ಮೇಲ್ವಿಚಾರಣೆ ಮತ್ತು ಕಾರ್ಯದಕ್ಷತೆಗೆ ನಾವು ಜವಾಬ್ದಾರರಾಗಿರುವೆವು. ಇತರೆ ಲೆಕ್ಕ

ಪರಿಶೋಧಕರು ಮಾಡಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರಿರುವ ಇತರೆ ಸಂಸ್ಥೆಗಳಿಗೆ, ಆ ಸಂಸ್ಥೆಗಳ ಲೆಕ್ಕಪರಿಶೋಧಕರು ಅವರು ನಡೆಸಿರುವ ಲೆಕ್ಕ ಪರಿಶೋಧನೆ ನಿರ್ದೇಶನ, ಮೇಲ್ವಿಚಾರಣೆ ಮತ್ತು ಕಾರ್ಯಕ್ಷಮತೆಗೆ ಜವಾಬ್ದಾರರಾಗಿರುವರು. ನಾವು ನಮ್ಮ ಲೆಕ್ಕ ಪರಿಶೋಧನೆ ಅಭಿಪ್ರಾಯ ತಿಳಿಸಲು ನಾವು ಸಂಪೂರ್ಣವಾಗಿ ಜವಾಬ್ದಾರರಾಗಿರುವೆವು.

ವಾಸ್ತವಿಕತೆಯು ಹಣಕಾಸಿನ ಹೇಳಿಕೆಗಳಲ್ಲಿನ ತಪ್ಪು ಹೇಳಿಕೆಗಳ ಒಟ್ಟು ಪ್ರಮಾಣವಾಗಿರುವುದು. ಅದು ಪ್ರತ್ಯೇಕವಾಗಿ ಅಥವಾ ಒಟ್ಟಾರೆಯಾಗಿ ಹಣಕಾಸಿನ ಹೇಳಿಕೆಗಳ ಸೂಕ್ತವಾಗಿ ಜ್ಞಾನ ಹೊಂದಿರುವ ಬಳಕೆದಾರರ ಆರ್ಥಿಕ ತೀರ್ಮಾನಗಳ ಬಗ್ಗೆ ಪ್ರಭಾವ ಬೀರುವ ಸಾಧ್ಯತೆಯಿರುತ್ತದೆ. ನಾವು (i) ನಮ್ಮ ಲೆಕ್ಕ ಪರಿಶೋಧನೆ ವ್ಯಾಪ್ತಿಯ ಯೋಜನೆ ಮಾಡುವಲ್ಲಿ ಮತ್ತು ನಮ್ಮ ಕೆಲಸದ ಫಲಿತಾಂಶಗಳನ್ನು ಮೌಲ್ಯಮಾಪನ ಮಾಡುವಲ್ಲಿ ಮತ್ತು (ii)ಹಣಕಾಸಿನ ಹೇಳಿಕೆಗಳಲ್ಲಿನ ಯಾವುದೇ ಗುರುತಿಸಿದ ತಪ್ಪು ಹೇಳಿಕೆಗಳ ಪರಿಣಾಮ ಮೌಲ್ಯಮಾಪನ ಮಾಡುವಲ್ಲಿ ಪರಿಮಾಣಿತ ವಾಸ್ತವಿಕತೆ ಮತ್ತು ಗುಣಾತ್ಮಕ ಅಂಶಗಳನ್ನು ಪರಿಗಣಿಸುವೆವು.

ನಮ್ಮ ಲೆಕ್ಕಪರಿಶೋಧನೆಯ ಅವಧಿಯಲ್ಲಿ ನಾವು ಗುರುತಿಸಿದ, ಆಂತರಿಕ ನಿಯಂತ್ರಣಗಳಲ್ಲಿನ ಯಾವುದೇ ಗಮನಾರ್ಹ ಕೊರತೆಗಳೂ ಸೇರಿದಂತೆ, ಇತರೆ ವಿಚಾರಗಳ ಜೊತೆ ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಸಮಯ ಮತ್ತು ಮಹತ್ತರವಾದ ಲೆಕ್ಕಪರಿಶೋಧನೆಯಲ್ಲಿ ಕಂಡು ಬಂದ ಅಂಶಗಳ ಬಗ್ಗೆ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ತಿಳಿಸುವೆವು.

ಸ್ವತಂತ್ರದ ವಿಚಾರವಾಗಿ ಸಂಬಂಧಪಟ್ಟ ನೈತಿಕ ಅಗತ್ಯತೆಗಳನ್ನು ನಾವು ಅನುಸರಿಸಿರುವ ಬಗ್ಗೆ ಹೇಳಿಕೆ ಒಂದನ್ನು ಸಹ ನಾವು ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ಒದಗಿಸುವೆವು ಮತ್ತು ಎಲ್ಲಾ ಬಾಂಧವ್ಯಗಳು ಮತ್ತು ನಮ್ಮ ಸ್ವತಂತ್ರದ ಬಗ್ಗೆ ಒಳಪಡುವುದಾಗಿ ಸಕಾರಣವಾಗಿ ಯೋಜಿಸಿರುವ ಮತ್ತು ಅನ್ವಯವಾಗುವ ಸಂದರ್ಭ, ಸಂಬಂಧಿಸಿದ ಸುರಕ್ಷತೆಗಳ ಇತರೆ ವಿಚಾರಗಳನ್ನು ಅವರಿಗೆ ತಿಳಿಸುವೆವು.

ಆಡಳಿತದ ಜವಾಬ್ದಾರಿ ಹೊಂದಿರುವವರಿಗೆ ತಿಳಿಸಿರುವ ವಿಚಾರಗಳಿಂದ, ಚಾಲ್ತಿ ಅವಧಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆಯಲ್ಲಿ ಅತ್ಯಂತ ಗಮನಾರ್ಹವಾದ ವಿಚಾರಗಳನ್ನು ನಾವು ನಿರ್ಧರಿಸುವೆವು. ಆದ್ದರಿಂದಾಗಿ ಅವು ಪ್ರಮುಖ ಲೆಕ್ಕ ಪರಿಶೋಧನೆ ವಿಚಾರಗಳಾಗಿರುವವು. ವಿಚಾರವನ್ನು ಸಾರ್ವಜನಿಕವಾಗಿ ತಿಳಿಸದಂತೆ ಕಾನೂನು ಅಥವಾ ನಿಬಂಧನೆಗಳು ನಿರ್ಬಂಧಿಸಿರದ ಹೊರತು ಮತ್ತು ವಿಚಾರವನ್ನು ಸಾರ್ವಜನಿಕವಾಗಿ ತಿಳಿಸುವುದರಿಂದ ಸಾರ್ವಜನಿಕ ಆಸಕ್ತಿಯ ಸೌಲಭ್ಯಗಳ ಬಗ್ಗೆ ತೊಂದರೆ ಉಂಟು ಮಾಡುವುದೆಂದು ಸೂಕ್ತವಾದ ನಿರೀಕ್ಷೆಯಿದ್ದಾಗ ವ್ಯತಿರಿಕ್ತ ಪರಿಣಾಮಗಳುಂಟಾಗದಿದ್ದರೆ ಅಂತಹ ವಿಚಾರಗಳನ್ನು ನಮ್ಮ ಲೆಕ್ಕಪರಿಶೋಧನೆ ವರದಿಯಲ್ಲಿ ನಾವು ವಿವರಿಸುವೆವು.

### ಇತರೆ ವಿಚಾರಗಳು:

ನಾವು ಎರಡು ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆಗಳು/ಹಣಕಾಸಿನ ಮಾಹಿತಿಯ ಲೆಕ್ಕಪರಿಶೋಧನೆ ಮಾಡಿರುವುದಿಲ್ಲ. ಈ ಕಂಪನಿಗಳ ಹಣಕಾಸಿನ ಹೇಳಿಕೆಗಳು 31ನೇ ಮಾರ್ಚ್ 2023ರಂದು ಇದ್ದಂತೆ ರೂ.42,727.60 ಲಕ್ಷಗಳ ಒಟ್ಟು ಆಸ್ತಿಗಳನ್ನು ಮತ್ತು ಸದರಿ ದಿನಾಂಕದಂದು ಕೊನೆಗೊಂಡ ವರ್ಷದಲ್ಲಿ ರೂ.58,565.53 ಲಕ್ಷಗಳ ಒಟ್ಟು ಆದಾಯಗಳನ್ನು ಮತ್ತು ರೂ.2,180.06 ಲಕ್ಷಗಳ ನಿವ್ವಳ ನಗದು ಹರಿವನ್ನು ಪ್ರತಿಬಿಂಬಿಸುವುದು ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ ರೂ.2,343.09 ಲಕ್ಷಗಳ ನಿವ್ವಳ ಲಾಭದ ಕಂಪನಿಯ ಪಾಲನ್ನು ಬಿಂಬಿಸುವುದು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಪರಿಗಣಿಸಿರುವಂತೆ ಈ ಅಂಶಗಳು ಗೋಚರವಾಗಿವೆ. ಒಂದು ಸಹವರ್ತಿ ಕಂಪನಿಯ ಸಂಬಂಧ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಪರಿಗಣಿಸಿರುವಂತೆ 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಬಗ್ಗೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ನಿವ್ವಳ ಲಾಭ ರೂ.14.28ಲಕ್ಷಗಳ ಗ್ರೂಪ್‌ನ ಪಾಲನ್ನು ಸಹ ಒಳಗೊಂಡಿರುವುದು. ಈ ಹಣಕಾಸಿನ ಹೇಳಿಕೆಗಳು/ ಹಣಕಾಸಿನ ಮಾಹಿತಿಯನ್ನು ಬೇರೆ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿರುವರು. ಇವರ ವರದಿಗಳನ್ನು ಆಡಳಿತ ಮಂಡಳಿ ನಮಗೆ ಸಲ್ಲಿಸಿರುವುದು ಮತ್ತು ಸಹವರ್ತಿ ಕಂಪನಿ ಸಂಬಂಧ ಸೇರ್ಪಡೆಯಾಗಿರುವ ಮೊತ್ತಗಳು ಮತ್ತು ಪ್ರಕಟಣೆಗಳಿಗೆ ಸಂಬಂಧಿಸಿದಂತೆ, ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಅಭಿಪ್ರಾಯ ಮತ್ತು ಮೇಲೆ ತಿಳಿಸಿರುವ ಸಹವರ್ತಿ ಕಂಪನಿಗೆ ಸಂಬಂಧಿಸಿದಂತೆ, ಕಾಯ್ದೆಯ ಪ್ರಕರಣ 143ರ ಉಪ ಪ್ರಕರಣಗಳು (3) ಮತ್ತು (11)ರ ಅನ್ವಯದ ನಮ್ಮ ವರದಿಯು ಬೇರೆ ಲೆಕ್ಕ ಪರಿಶೋಧಕರ ವರದಿಗಳ ಮೇಲೆ ಸಂಪೂರ್ಣವಾಗಿ ಆಧಾರಿತವಾಗಿರುವುದು.

ಸದರಿ ವಿಚಾರದ ಸಂಬಂಧ ನಮ್ಮ ಅಭಿಪ್ರಾಯವು ಅನ್ವಯವಾಗುವುದಿಲ್ಲ.

1. ಕಂಪನಿಯ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಗ್ರೂಪ್‌ನ ಹೇಳಿಕೆಗಳನ್ನು ಮತ್ತೊಬ್ಬ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ಮಾಡಿದ್ದಾರೆ. ಇವರ ದಿನಾಂಕ 30ನೇ ಡಿಸೆಂಬರ್ 2024ರ ಪರಿಷ್ಕೃತ ವರದಿಯು ಆ ಹೇಳಿಕೆಗಳ ಬಗ್ಗೆ ಮಾರ್ಪಾಡು ಮಾಡಿದ ಅಭಿಪ್ರಾಯ ತಿಳಿಸಿದೆ.

### ಇತರೆ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ಬಗ್ಗೆ ವರದಿ:

1. ಕಾಯ್ದೆಯ ಪ್ರಕರಣ 143(3)ರ ಅನ್ವಯ ಅಗತ್ಯವಾದಂತೆ ನಮ್ಮ ಲೆಕ್ಕಪರಿಶೋಧನೆ ಆಧಾರದ ಮೇಲೆ ಮತ್ತು ಮೇಲಿನ ಇತರೆ ವಿಚಾರಗಳ ವಿಭಾಗದಲ್ಲಿ ಪ್ರಸ್ತಾಪಿಸಿರುವ ಸಹಾಯಕ ಕಂಪನಿಗಳ ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಮೇಲಿನ ಇತರೆ ಲೆಕ್ಕಪರಿಶೋಧಕರ ವರದಿಗಳನ್ನು ಪರಿಗಣಿಸಿದ ಆಧಾರದ ಮೇಲೆ ನಾವು ಅನ್ವಯವಾಗುವ ಪ್ರಮಾಣದವರೆಗೆ ವರದಿ ಮಾಡುವುದೇನೆಂದರೆ:

ಎ) ಮೇಲೆ ತಿಳಿಸಿರುವ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕ ಪರಿಶೋಧನೆ ಉದ್ದೇಶಗಳಿಗೆ ಅಗತ್ಯವಾಗಿರುವುದಾಗಿ ನಾವು ತಿಳಿಸಿರುವ ಮತ್ತು ನಂಬಿರುವ ಎಲ್ಲಾ ಮಾಹಿತಿ ಮತ್ತು ವಿವರಣೆಗಳನ್ನು ನಾವು ಕೇಳಿ ಪಡೆದಿದ್ದೇವೆ.

ಬಿ) ಮೇಲೆ ತಿಳಿಸಿರುವ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ಪ್ಯಾರಾಗ್ರಾಫ್‌ನಲ್ಲಿ ವಿವರಿಸಿರುವ ವಿಚಾರಗಳ ಸಾಧ್ಯನೀಯ ಪರಿಣಾಮಗಳ ಹೊರತಾಗಿ, ಆ ಪುಸ್ತಕಗಳನ್ನು ನಾವು ಪರಿಶೀಲನೆ ಮಾಡಿದರಿಂದ ಕಂಡು ಬಂದಿರುವಂತೆ ನಮ್ಮ ಅಭಿಪ್ರಾಯದಲ್ಲಿ ಮೇಲೆ

ತಿಳಿಸಿರುವ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಸಂಬಂಧಿಸಿದ ಸಂಬಂಧಪಟ್ಟ ದಾಖಲೆಗಳು ಸೇರಿದಂತೆ ಗ್ರೂಪ್ ಕಾನೂನಿನ ಅನ್ವಯ ಅಗತ್ಯವಾದಂತೆ ಲೆಕ್ಕಗಳ ಸೂಕ್ತ ಪುಸ್ತಕಗಳನ್ನು ಇಟ್ಟಿದೆ.

ಸಿ) ಸದರಿ ವರದಿಯಲ್ಲಿ ತಿಳಿಸಿರುವ ಕ್ರೋಢೀಕೃತ ಸ್ಥಿತಿ ವಿವರಣಾ ಪಟ್ಟಿ, ಇತರೆ ಸಮಗ್ರ ಆದಾಯ ಸೇರಿದಂತೆ ಲಾಭ ಮತ್ತು ನಷ್ಟ ಕ್ರೋಢೀಕೃತ ಹೇಳಿಕೆ, ಕ್ರೋಢೀಕೃತ ಲಾಭ ಮತ್ತು ನಷ್ಟದ ಕ್ರೋಢೀಕೃತ ಹೇಳಿಕೆ, ಕ್ರೋಢೀಕೃತ ನಗದು ಹರಿಯುವಿಕೆ ಹೇಳಿಕೆಗಳು ಮತ್ತು ಈಕ್ವಿಟಿಯಲ್ಲಿನ ಬದಲಾವಣೆಯ ಕ್ರೋಢೀಕೃತ ಹೇಳಿಕೆಗಳು ಕ್ರೋಢೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಉದ್ದೇಶಕ್ಕಾಗಿ ನಿರ್ವಹಿಸಿರುವ ಲೆಕ್ಕದ ಪುಸ್ತಕಗಳ ಅನುಸಾರ ಇರುವುದು.

ಡಿ) ಮೇಲಿನ ''ಅರ್ಹತಾ ಅಭಿಪ್ರಾಯಕ್ಕೆ ಆಧಾರದ'' ಪ್ಯಾರಾಗ್ರಾಫ್ ನಲ್ಲಿ ವಿವರಿಸಿರುವ ವಿಚಾರಗಳ ಪರಿಣಾಮ ಹೊರತಾಗಿ, ನಮ್ಮ ಅಭಿಪ್ರಾಯದಲ್ಲಿ, ಮೇಲೆ ತಿಳಿಸಿರುವ ಕ್ರೋಢೀಕೃತ ಐಎನ್‌ಡಿ ಎಎಸ್ ಹಣಕಾಸಿನ ಹೇಳಿಕೆಯು ಕಾಯ್ದೆಯ ಪ್ರಕರಣ 133ರ ಅನ್ವಯ ನಿರ್ದಿಷ್ಟಪಡಿಸಿರುವ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟದ ಅನುಸಾರ ಇರುವುದು.

ಇ) ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್‌ನ (ಎಂಸಿಟಿಸಿಎಲ್) ಪರಿಷ್ಕೃತ ಲೆಕ್ಕ ಪರಿಶೋಧನೆ ವರದಿಯ ಆಧಾರದ ಮೇಲೆ, ಮೇಲಿನ ವ್ಯತಿರಿಕ್ತ ಅಭಿಪ್ರಾಯ ಪ್ಯಾರಾಗ್ರಾಫ್‌ನ ಆಧಾರದಲ್ಲಿ ವಿವರಿಸಿರುವ ಎಂಸಿಟಿಸಿಎಲ್‌ಗೆ ಸಂಬಂಧಿಸಿದ ವಿಚಾರಗಳು ಮತ್ತು ಮಹತ್ವದ ವಿಚಾರಗಳಲ್ಲಿ ತಿಳಿಸಿರುವ ವಿಚಾರಗಳ ಆಧಾರದಲ್ಲಿ, ಎಂಸಿಟಿಸಿಎಲ್‌ನ ಸ್ವತಂತ್ರ ಲೆಕ್ಕಪರಿಶೋಧಕರ ಅಭಿಪ್ರಾಯದಲ್ಲಿ, ಎಂಸಿಟಿಸಿಎಲ್‌ನ ಕಾರ್ಯಾಚರಣೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುವುದು.

ಎಫ್) ಸರ್ಕಾರದ ಕಂಪನಿಯಾಗಿರುವುದರಿಂದ, ಕಾಯ್ದೆಯ ಪ್ರಕರಣ 164(2)ರ ಅನ್ವಯ ಕಂಪನಿಯ ನಿರ್ದೇಶಕರ ಅನರ್ಹತೆ ವಿಚಾರದ ಬಗ್ಗೆ ವರದಿ ಮಾಡುವಿಕೆಯು, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್. 463(ಇ) ದಿನಾಂಕ:05.06.2015ರ ಅನ್ವಯ ಅನ್ವಯವಾಗುವುದಿಲ್ಲ.

ಜಿ) ಕ್ರೋಢೀಕೃತ ಹಣಕಾಸಿನ ಹೇಳಿಕೆಗಳಿಗೆ ಸಂಬಂಧಿಸಿದಂತೆ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಪ್ರಮಾಣದಲ್ಲಿ ಇರುವಿಕೆ ಬಗ್ಗೆ ಮತ್ತು ಆ ನಿಯಂತ್ರಣಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಮಾತೃ ಕಂಪನಿ, ಸಹಾಯಕ ಕಂಪನಿಗಳ ಲೆಕ್ಕಪರಿಶೋಧಕರ ವರದಿಗಳ ಮೇಲೆ ಆಧಾರಿತವಾಗಿರುವ 'ಅನುಬಂಧ ಬಿ' ನಲ್ಲಿನ ನಮ್ಮ ಪ್ರತ್ಯೇಕ ವರದಿ ನೋಡುವುದು.

ಆ ಕಂಪನಿಗಳ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಸಂಬಂಧ ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟಿರುವಿಕೆ ಬಗ್ಗೆ ಮತ್ತು ಕಾರ್ಯಾಚರಣೆ ಪರಿಣಾಮದ ಬಗ್ಗೆ ನಮ್ಮ ವರದಿಯು ಅರ್ಹತಾ ಅಭಿಪ್ರಾಯ ವ್ಯಕ್ತಪಡಿಸಿದೆ.

ಎಚ್) ಸರ್ಕಾರದ ಕಂಪನಿಯಾಗಿರುವುದರಿಂದ ಕಾಯ್ದೆಯ ಪ್ರಕರಣ 197(16)ರ ಅನ್ವಯ ಆಡಳಿತದವರ ಸಂಭಾವನೆ ವಿಚಾರದ ಬಗ್ಗೆ ವರದಿ ಮಾಡುವಿಕೆಯು ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿರುವ ಅಧಿಸೂಚನೆ ಸಂ.ಜಿ.ಎಸ್.ಆರ್. 463(ಇ) ದಿನಾಂಕ:05.06.2015ರ ಅನ್ವಯ ಅನ್ವಯವಾಗುವುದಿಲ್ಲ.

ಐ) ತಿದ್ದುಪಡಿಯಾದಂತೆ ಕಂಪನಿಗಳ (ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಿರುವ ಇತರೆ ವಿಚಾರಗಳ ಸಂಬಂಧ, ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ದೊರೆತಿರುವ ಮಾಹಿತಿಯನುಸಾರ ಮತ್ತು ನಮಗೆ ನೀಡಿರುವ ವಿವರಣೆಗಳ ಅನುಸಾರ:

i) ಕ್ರೋಢೀಕೃತ ಹಣಕಾಸಿನ ಹೇಳಿಕೆಗಳು ಇತ್ಯರ್ಥವಾಗದೆ ಉಳಿದಿರುವ ವಿವಾದಗಳು ಗ್ರೂಪ್‌ನ ತನ್ನ ಕ್ರೋಢೀಕೃತ ಹಣಕಾಸಿನ ಪರಿಸ್ಥಿತಿಯ ಮೇಲೆ ಉಂಟು ಮಾಡಿರುವ ಪರಿಣಾಮವನ್ನು ತಿಳಿಸಿರುವುದು. ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ.39(3) ನೋಡಿ.

ಅದರಂತೆ, ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ ಸಂಬಂಧ ರಸ್ತೆ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ 5777 ಚದರ ಗಜಗಳ ವಿಸ್ತೀರ್ಣದ ಜಮೀನಿಗೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಬರಬೇಕಿರುವ ಪರಿಹಾರದ ಮೊತ್ತ ವಸೂಲಿಗೆ ಸಂಬಂಧಿಸಿದ ವಿವಾದದ ಹೊರತು, ಹಣಕಾಸಿನ ಪರಿಸ್ಥಿತಿ ಮೇಲೆ ಪರಿಣಾಮ ಉಂಟು ಮಾಡುವ ಯಾವುದೇ ಇತ್ಯರ್ಥವಾಗದ ಉಳಿದಿರುವ ವ್ಯಾಜ್ಯಗಳಿರುವುದಿಲ್ಲ.

ii) ಗ್ರೂಪ್ ಜನ್ಯ ಗುತ್ತಿಗೆಗಳು ಸೇರಿದಂತೆ ಯಾವುದೇ ದೀರ್ಘಾವಧಿ ಗುತ್ತಿಗೆಗಳನ್ನು ಹೊಂದಿರುವುದಿಲ್ಲ. ಇದಕ್ಕೆ ಯಾವುದೇ ಮುಂಗಾಣ್ಕೆಯು ನಷ್ಟಗಳಿರುವುದಿಲ್ಲ.

iii) ಮಾತೃ ಕಂಪನಿ ಮತ್ತು ಇತರ ಸಹಾಯಕ ಕಂಪನಿಗಳಿಂದ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿಗೆ ವರ್ಗಾಯಿಸಬೇಕಾಗಿರುವ ಯಾವುದೇ ಮೊತ್ತಗಳಿರುವುದಿಲ್ಲ.

iv) (I) ಭಾರತದಲ್ಲಿ ಸ್ಥಾಪನೆಯಾಗಿರುವ, ಕಾಯ್ದೆಯ ಅನ್ವಯ ಹಣಕಾಸಿನ ಹೇಳಿಕೆಗಳ ಲೆಕ್ಕಪರಿಶೋಧನೆ ಮಾಡುವ ಮಾತೃ ಕಂಪನಿ, ಇದರ ಸಹಾಯಕ ಕಂಪನಿಗಳ ಸಂಬಂಧಪಟ್ಟ ಆಡಳಿತ ಮಂಡಳಿಗಳು ನಮಗೆ ಮತ್ತು ಅನುಕ್ರಮವಾಗಿ ಆ ಸಹಾಯಕ ಕಂಪನಿಗಳ ಇತರೆ ಲೆಕ್ಕಪರಿಶೋಧಕರಿಗೆ ತಿಳಿಸಿರುವಂತೆ ಅದರ

ಜ್ಞಾನ ಮತ್ತು ನಂಬಿಕೆಯಂತೆ ಮಾತ್ರ ಕಂಪನಿಯಿಂದ ಅಥವಾ ಯಾವುದೇ ಅಂತಹ ಸಹಾಯಕ ಕಂಪನಿಗಳಿಂದ ವಿದೇಶಿ ಕಂಪನಿಗಳು ('ಮಧ್ಯವರ್ತಿಗಳು') ಸೇರಿದಂತೆ ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ಅಥವಾ ಕಂಪನಿಗಳಲ್ಲಿ ('ಅಂತಿಮ ಫಲಾನುಭವಿಗಳು) ಇವರಿಂದ ಅಥವಾ ಇವರ ಪರವಾಗಿ ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ಮಧ್ಯವರ್ತಿಗಳು ನೇರವಾಗಿ ಅಥವಾ ಪರೋಕ್ಷವಾಗಿ ಸಾಲ ನೀಡಲು ಅಥವಾ ಹೂಡಿಕೆ ಮಾಡಲು ಲಿಖಿತ ರೂಪದಲ್ಲಿ ದಾಖಲಾದ ಅಥವಾ ಇದಿಲ್ಲದ ಅರ್ಥವಂತಿಕೆಯೊಡನೆ (ಸಾಲವಾಗಿ ಪಡೆದ ಹಣದಿಂದ ಅಥವಾ ಸೆಕ್ಯುರಿಟೀಸ್ ಪ್ರೀಮಿಯಂ ಅಥವಾ ಯಾವುದೇ ಇತರೆ ಮೂಲದಿಂದ ಅಥವಾ ಹಣದ ಸ್ವರೂಪದಲ್ಲಿ) ಯಾವುದೇ ಹಣವನ್ನು ಮುಂಗಡವಾಗಿ ನೀಡಿರುವುದಿಲ್ಲ ಅಥವಾ ಸಾಲ ನೀಡಿರುವುದಿಲ್ಲ ಅಥವಾ ಹೂಡಿಕೆ ಮಾಡಿರುವುದಿಲ್ಲ ಅಥವಾ ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹದೇನನ್ನೂ ಒದಗಿಸಿರುವುದಿಲ್ಲ.

2) 'ಕಾಯ್ದೆಯ' ಅನ್ವಯ ಯಾರ ಹಣಕಾಸಿನ ಹೇಳಿಕೆಗಳನ್ನು ಲೆಕ್ಕಪರಿಶೋಧನೆ ಮಾಡಲಾಗಿರುವುದೊ ಭಾರತದಲ್ಲಿ ಸ್ಥಾಪನೆಯಾಗಿರುವ ಅಂತಹ ಧಾರಕ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಗಳ ಸಂಬಂಧಪಟ್ಟ ಆಡಳಿತ ಮಂಡಳಿಗಳು ನಮಗೆ ಮತ್ತು ಅನುಕ್ರಮವಾಗಿ ಆ ಸಹಾಯಕ ಕಂಪನಿಗಳ ಇತರೆ ಲೆಕ್ಕಪರಿಶೋಧಕರಿಗತಿಳಿಸಿರುವಂತೆ ಅವರ ತಿಳುವಳಿಕೆ ಮತ್ತು ನಂಬಿಕೆಯ ಅನುಸಾರ, ಇದರ ಸಹವರ್ತಿ ಕಂಪನಿಯು ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳಿಂದ ಹಣ ನೀಡಿಕೆ ವ್ಯಕ್ತಿಯು (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಲಿಖಿತ ರೂಪದಲ್ಲಿ ದಾಖಲಾದ ಅಥವಾ ಇದಿಲ್ಲದ ಅರ್ಥವಂತಿಕೆಯೊಡನೆ ಯಾವುದೇ ಹಣವನ್ನು ಯಾವುದೇ ವ್ಯಕ್ತಿಗಳು ಅಥವಾ ಕಂಪನಿಗಳು, ವಿದೇಶಿ ಕಂಪನಿಗಳು ('ಹಣ ನೀಡಿಕೆ ವ್ಯಕ್ತಿಗಳು') ಸೇರಿದಂತೆ ಇವರಿಂದ ಹಣ ಪಡೆದಿರುವುದಿಲ್ಲ ಅಥವಾ ಹಣ ನೀಡಿಕೆ ವ್ಯಕ್ತಿ (ಅಂತಿಮ ಫಲಾನುಭವಿಗಳು) ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹ ಯಾವುದನ್ನೂ ಒದಗಿಸಿರುವುದಿಲ್ಲ ಮತ್ತು

(3) ನಾವು ನಡೆಸಿದ ಲೆಕ್ಕಪರಿಶೋಧಕನೆ ಕ್ರಮಾವಳಿಗಳು ಮತ್ತು ಭಾರತದಲ್ಲಿ ಸ್ಥಾಪನೆಯಾಗಿರುವ, ಕಾಯ್ದೆಯ ಅನ್ವಯ ಯಾರ ಹಣಕಾಸಿನ ಹೇಳಿಕೆಗಳನ್ನು ಲೆಕ್ಕಪರಿಶೋಧನೆ ಮಾಡಲಾಗಿದೆಯೋ ಆ ಸಹಾಯಕ ಕಂಪನಿಗಳ ಬಗ್ಗೆ ಲೆಕ್ಕಪರಿಶೋಧಕರು ನಡೆಸಿರುವ ಲೆಕ್ಕ ಪರಿಶೋಧನೆ ಆಧಾರದ ಮೇಲೆ ಉಪಕಲಂ (i) ಮತ್ತು (ii) ರ ಅನ್ವಯದ ಹೇಳಿಕೆಗಳು ಯಾವುದೇ ವಾಸ್ತವಿಕ ತಪ್ಪು ಹೇಳಿಕೆಗಳನ್ನು ಒಳಗೊಂಡಿರುವುದಾಗಿ ನಂಬುವಂತೆ ಮಾಡುವ ಯಾವುದೇ ಅಂಶ ನಮ್ಮ ಗಮನಕ್ಕೆ ಅಥವಾ ಇತರೆ ಲೆಕ್ಕಪರಿಶೋಧಕರ ಗಮನಕ್ಕೆ ಬಂದಿರುವುದಿಲ್ಲ.

v. ಹಿಂದಿನ ವರ್ಷದಲ್ಲಿ ಉದ್ದೇಶಿಸಿರುವ, ಭಾರತದಲ್ಲಿ ಸ್ಥಾಪನೆಯಾಗಿರುವ, ಕಾಯ್ದೆಯ ಅನ್ವಯ ಯಾರ ಹಣಕಾಸುಗಳ ಲೆಕ್ಕಪರಿಶೋಧನೆ ಮಾಡಿದೆಯೋ ಆ ಮಾತ್ರ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳು ಘೋಷಿಸಿರುವ ಅಥವಾ ಪಾವತಿ ಮಾಡಿರುವ ಅಂತಿಮ ಲಾಭಾಂಶವು ವರ್ಷದ ಅವಧಿಯಲ್ಲಿ ಅನ್ವಯವಾಗಲಿದ್ದು, ಅದು ಕಂಪನಿಗಳ ಕಾಯ್ದೆ, 2013ರ ಪ್ರಕರಣ 123ರ ಅನ್ವಯ ಇರುವುದು.

vi. ಪರೀಕ್ಷಾರ್ಥ ತಪಾಸಣೆಗಳು ಸೇರಿರುವ ನಾವು ಮಾಡಿದ ಪರಿಶೀಲನೆ ಆಧಾರದ ಮೇಲೆ ಮತ್ತು ಸಹಾಯಕ ಕಂಪನಿಗಳ ಸಂಬಂಧಪಟ್ಟ ಲೆಕ್ಕಪರಿಶೋಧಕರು ಮಾಡಿದ ಪರಿಶೀಲನೆ ಆಧಾರದ ಮೇಲೆ ಮತ್ತು ಕಾಯ್ದೆಯ ಅನ್ವಯ ಯಾವ ಕಂಪನಿಗಳ ಹಣಕಾಸಿನ ಲೆಕ್ಕಪರಿಶೋಧನೆ ಮಾಡಲಾಗಿರುವುದೋ ಅಂತಹ ಸಹಾಯಕ ಕಂಪನಿಗಳ ಇತರೆ ಲೆಕ್ಕಪರಿಶೋಧಕರ ವರದಿಗಳ ಆಧಾರಗಳ ಮೇಲೆ, ಮಾತ್ರ ಕಂಪನಿ ಮತ್ತು ಇದರ ಸಹಾಯಕ ಕಂಪನಿಗಳು ಅದರ ಲೆಕ್ಕದ ಪುಸ್ತಕಗಳ ನಿರ್ವಹಣೆಗೆ ಲೆಕ್ಕ ನಿರ್ವಹಣೆಗೆ ಸಾಫ್ಟ್‌ವೇರ್ ಬಳಸಿವೆ. ಈ ಸಾಫ್ಟ್‌ವೇರ್ ಆಡಿಟ್ ಟ್ರಯಲ್ ದಾಖಲಿಸುವ ಸೌಲಭ್ಯ ಹೊಂದಿದೆ ಮತ್ತು ಆಡಿಟ್ ಟ್ರಯಲ್ ಸೌಲಭ್ಯವನ್ನು ಎಲ್ಲಾ ಸಂಬಂಧಪಟ್ಟ ವ್ಯವಹಾರಗಳಿಗೆ ವರ್ಷ ಪೂರ್ತಿ ಚಾಲನೆ ಮಾಡಿದೆ. ಮಾತ್ರ ಕಂಪನಿಯ ಪಾನೀಯ ವಿಭಾಗದ ಸಂಬಂಧ ಮತ್ತು ಸಹಾಯಕ ಕಂಪನಿಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ (ಹಿಂದಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಸಂಬಂಧ ಸಂಬಂಧಪಟ್ಟ ವ್ಯವಹಾರಗಳನ್ನು ಈ ಸಾಫ್ಟ್‌ವೇರ್ ನಲ್ಲಿ ದಾಖಲಿಸಿದೆ.

ನಮ್ಮ ಲೆಕ್ಕ ಪರಿಶೋಧನೆ ಕಾರ್ಯದ ಅವಧಿಯಲ್ಲಿ ನಮಗೆ ಮತ್ತು ಮಾತ್ರ ಕಂಪನಿಯ ಆಡಳಿತವು ನಮಗೆ ಸಲ್ಲಿಸಿರುವ ಸಂಬಂಧಪಟ್ಟ ಇತರೆ ಲೆಕ್ಕಪರಿಶೋಧಕರಿಗೆ ಆಡಿಟ್ ಟ್ರಯಲ್ ಕಾರ್ಯವನ್ನು ಟ್ಯಾಂಪರ್ ಮಾಡಿರುವ ಯಾವುದೇ ಪ್ರಕರಣ ತಿಳಿದುಬಂದಿಲ್ಲ. ಮಾತ್ರ ಕಂಪನಿಯ ಇತರೆ ವಿಭಾಗಗಳು ಮತ್ತು ಇತರೆ ಸಹಾಯಕ ಕಂಪನಿಗಳ ಬಗ್ಗೆ ಅಕೌಂಟಿಂಗ್ ಸಾಫ್ಟ್‌ವೇರ್ ಆಡಿಟ್ ಟ್ರಯಲ್ ವ್ಯವಸ್ಥೆ ಹೊಂದಿರುವುದಿಲ್ಲ.

ಕಂಪನಿಗಳ (ಲೆಕ್ಕಗಳು) ನಿಯಮಗಳು, 2014ರ ನಿಯಮ 3(1)ರ ನಿಬಂಧನೆ ಏಪ್ರಿಲ್ 1, 2023ರಿಂದ

ಅನ್ವಯವಾಗುವುದರಿಂದ, ದಾಖಲೆ ಉಳಿಸಿಕೊಳ್ಳಲು ಶಾಸನಬದ್ಧ ಅಗತ್ಯತೆಗಳ ಅನ್ವಯ ಆಡಿಟ್ ಟ್ರಯಲ್ ಗಳ ಸಂರಕ್ಷಣೆ ಬಗ್ಗೆ ಕಂಪನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ ಅನ್ವಯವಾಗದು.

2. ಕಾಯ್ದೆಯ ಪ್ರಕರಣ 143(ii)ರ ಅನ್ವಯ ಕೇಂದ್ರ ಸರ್ಕಾರ ಹೊರಡಿಸಿರುವ ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 (''ಆದೇಶ'')ದ ಅನ್ವಯ ಅಗತ್ಯವಾದಂತೆ, ಆದೇಶದ ಪ್ಯಾರಾಗ್ರಾಫ್ 3 ಮತ್ತು 4ರಲ್ಲಿ ತಿಳಿಸಿರುವಂತೆ ವಿಚಾರಗಳ ಬಗ್ಗೆ ವಿವರಣೆ ಒಂದನ್ನು ನಾವು ''ಅನುಬಂಧ ಸಿ'' ನಲ್ಲಿ ನೀಡಿದ್ದೇವೆ.

**ಸೊರಬ್ ಎಸ್ ಇಂಜಿನಿಯರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417W**
**ಸಹಿ/-**
**ಸಿಎ. ಚೊಕ್ಶಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**
**ಯುಡಿಐಎನ್:** 24100892BJZXBK4603

ಸ್ಥಳ : ಬೆಂಗಳೂರು
ದಿನಾಂಕ: 27ನೇ ಸೆಪ್ಟೆಂಬರ್, 2024

## ಅನುಬಂಧ-ಎ

### ಕಂಪನಿಗಳ ಪಟ್ಟಿ

| ಕ್ರ.ಸಂ. | ಕಂಪನಿ ಹೆಸರು | ಸಂಬಂಧ |
|---|---|---|
| 1 | ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಹಿಂದಿನ ಹೆಸರು: ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್) | ಸಹಾಯಕ ಕಂಪನಿ |
| 2 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | ಸಹಾಯಕ ಕಂಪನಿ |
| 3 | ಫುಡ್ ಕರ್ನಾಟಕ ಲಿಮಿಟೆಡ್ | ಸಹವರ್ತಿ ಕಂಪನಿ |

**ಸೊರಬ್ ಎಸ್ ಇಂಜಿನಿಯರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417W**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**
**ಯುಡಿಐಎನ್:** 24100892BJZXBK4603
ಸ್ಥಳ : ಬೆಂಗಳೂರು
ದಿನಾಂಕ: 27ನೇ ಸೆಪ್ಟೆಂಬರ್, 2024

MSIL

## ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಬಿ

(ಸಮ ದಿನಾಂಕದ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ ಸದಸ್ಯರುಗಳಿಗೆ ನಮ್ಮ ವರದಿಯ 'ಇತರೆ' ವಿಭಾಗದ ಕಾನೂನು ಮತ್ತು ನಿಯಂತ್ರಣ ಅಗತ್ಯತೆಗಳ ''ಮೇಲಿನ ವರದಿ'' ಅಡಿಯಲ್ಲಿ ಪ್ಯಾರಾಗ್ರಾಫ್ 1(ಜಿ)ಗೆ ಸಂಬಂಧಿಸಿದಂತೆ)

ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (ಐ) ರ ಅನ್ವಯದ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ವರದಿ

### ಕಂಪನಿಗಳ ಕಾಯ್ದೆ, 2013ರ (''ಕಾಯ್ದೆ'') ಪ್ರಕರಣ 143ರ ಉಪ ಪ್ರಕರಣ 3 ರ ಕಲಂ (i)ರ ಅನ್ವಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿ

ನಾವು 31ನೇ ಮಾರ್ಚ್ 2024ರಂದು ಇದ್ದಂತೆ ಮೆ|| ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು, (''ಮಾತೃ ಕಂಪನಿ'') ಮತ್ತು ಸಹಾಯಕ ಕಂಪನಿಗಳು ಮತ್ತು ಸಹವರ್ತಿ ಕಂಪನಿಗಳ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಲೆಕ್ಕಪರಿಶೋಧನೆಯನ್ನು ಸದರಿ ದಿನಾಂಕದಂದು ಕೊನೆಗೊಂಡ ವರ್ಷದ ಕಂಪನಿ, ಇದರ ಸಹಾಯಕ ಕಂಪನಿಗಳು ಮತ್ತು ಹಣಕಾಸಿನ ಹೇಳಿಕೆಗಳ ಬಗ್ಗೆ ನಮ್ಮ ಲೆಕ್ಕ ಪರಿಶೋಧನೆ ಜೊತೆಗೆ ಮಾಡಿದ್ದೇವೆ.

### ಆಂತರಿಕ ಹಣಕಾಸಿನ ನಿಯಂತ್ರಣಗಳಿಗೆ ಆಡಳಿತ ಮಂಡಳಿ ಜವಾಬ್ದಾರಿ:

ಕಂಪನಿಯ ಆಡಳಿತ ಮಂಡಳಿಯು, ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ('ಐಸಿಎಐ') ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಬಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಕಂಪನಿ ರೂಪಿಸಿರುವ ಹಣಕಾಸಿನ ವರದಿಗಾರಿಕೆ ಮಾನದಂಡದ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ಜವಾಬ್ದಾರರಾಗಿರುವರು. ಈ ಜವಾಬ್ದಾರಿಗಳಲ್ಲಿ ಕಂಪನಿಗಳ ಕಾಯ್ದೆ, 2013ರ ಅನ್ವಯ ಅಗತ್ಯವಾದಂತೆ ಕಂಪನಿಯ ನೀತಿಗಳ ಅನುಸರಣೆ, ತನ್ನ ಆಸ್ತಿಗಳ ಸಂರಕ್ಷಣೆ ಮಾಡುವಿಕೆ, ವಂಚನೆಗಳು ಮತ್ತು ತಪ್ಪುಗಳ ತಡೆಯುವಿಕೆ ಮತ್ತು ಪತ್ತೆ ಹಚ್ಚುವಿಕೆ, ಲೆಕ್ಕನಿರ್ವಹಣೆ ದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ, ಮತ್ತು ವಿಶ್ವಾಸನೀಯವಾದ ಹಣಕಾಸಿನ ಮಾಹಿತಿಯನ್ನು ಸಕಾಲಿಕವಾಗಿ ಸಿದ್ಧಪಡಿಸುವಿಕೆಯೂ ಒಳಗೊಂಡಂತೆ, ತನ್ನ ವ್ಯವಹಾರವನ್ನು ಕ್ರಮಬದ್ಧವಾಗಿ ಮತ್ತು ಸಮರ್ಥವಾಗಿ ನಡೆಸುವಿಕೆಯನ್ನು ಖಾತರಿಪಡಿಸಲು ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುವ ಸಾಕಷ್ಟು ಮಟ್ಟದ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ವಿನ್ಯಾಸಪಡಿಸುವುದು, ಅನುಷ್ಠಾನ ಮಾಡುವುದು ಮತ್ತು ನಿರ್ವಹಣೆ ಮಾಡುವುದು ಒಳಗೊಂಡಿರುವುದು.

### ಲೆಕ್ಕ ಪರಿಶೋಧಕರ ಜವಾಬ್ದಾರಿ:

ನಮ್ಮ ಲೆಕ್ಕಪರಿಶೋಧನೆಯ ಆಧಾರದ ಮೇಲೆ ಹಣಕಾಸಿನ ವರದಿಗಾರಿಕೆ ಮೇಲಿನ ಕಂಪನಿಯ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ಅಭಿಪ್ರಾಯ ತಿಳಿಸುವುದು ನಮ್ಮ ಜವಾಬ್ದಾರಿಯಾಗಿರುವುದು. ಕಂಪನಿಗಳ ಕಾಯ್ದೆ 2013ರ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕ ಪರಿಶೋಧನೆಯ ಮಾನದಂಡಗಳು ಮತ್ತು ಭಾರತದ ಚಾರ್ಟರ್ಡ್ ಅಕೌಂಟೆಂಟ್ಸ್ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಲೆಕ್ಕಪರಿಶೋಧನೆ ಮೇಲಿನ ಮಾರ್ಗದರ್ಶಿ ಟಿಪ್ಪಣಿ ('ಮಾರ್ಗದರ್ಶಿ ಟಿಪ್ಪಣಿ') ಅನುಸಾರ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಪ್ರಮಾಣದವರೆಗೆ ನಾವು ನಮ್ಮ ಲೆಕ್ಕಪರಿಶೋಧನೆ ಕಾರ್ಯವನ್ನು ನಡೆಸಿದ್ದೇವೆ. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳು ಸಾಕಷ್ಟು ಮಟ್ಟದಲ್ಲಿರುವುದೇ ಮತ್ತು ನಿರ್ವಹಣೆ ಮಾಡಲಾಗಿರುವುದೇ ಹಾಗೂ ಸದರಿ ನಿಯಂತ್ರಣಗಳು ಎಲ್ಲಾ ವಾಸ್ತವಿಕ ವಿಚಾರಗಳ ಸಂಬಂಧ ಪರಿಣಾಮಕಾರಿಯಾಗಿ ಕಾರ್ಯಾಚರಣೆಯಾಗುತ್ತಿರುವವೇ ಎಂಬ ಬಗ್ಗೆ ಸೂಕ್ತವಾದ ಭರವಸೆ ಪಡೆಯಲು ನಾವು ನೈತಿಕ ಅಗತ್ಯತೆಗಳನ್ನು ಅನುಸರಿಸಿ ಲೆಕ್ಕಪರಿಶೋಧನೆ ನಡೆಸಲು ಯೋಜನೆ ಮಾಡಬೇಕು ಮತ್ತು ಲೆಕ್ಕ ಪರಿಶೋಧನೆ ನಡೆಸಬೇಕೆಂದು ಸದರಿ ಗುಣಮಟ್ಟಗಳು ಮತ್ತು ಮಾರ್ಗದರ್ಶಿ ಟಿಪ್ಪಣಿಗಳು ತಿಳಿಸುತ್ತವೆ.

ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆಯು ಸಾಕಷ್ಟು ಪ್ರಮಾಣದಲ್ಲಿರುವುದೇ ಎಂಬುದರ ಬಗ್ಗೆ ಮತ್ತು ಅವುಗಳ ಕಾರ್ಯಾಚರಣೆ ಪರಿಣಾಮಗಳ ಬಗ್ಗೆ ಲೆಕ್ಕಪರಿಶೋಧನಾ ಪುರಾವೆ ಪಡೆಯಲು ಕ್ರಮಾವಳಿಗಳನ್ನು ಅನುಸರಿಸುವ ಕಾರ್ಯವು ನಮ್ಮ ಲೆಕ್ಕಪರಿಶೋಧನೆಯಲ್ಲಿ ಒಳಗೊಂಡಿರುವುದು. ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಬಗ್ಗೆ ನಮ್ಮ ಲೆಕ್ಕಪರಿಶೋಧನೆಯಲ್ಲಿ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥವಂತಿಕೆ ಪಡೆಯುವುದು, ಇರುವ ಭೌತಿಕ ದೌರ್ಬಲ್ಯದ ಅಪಾಯ ನಿರ್ಧರಣೆ ಮಾಡುವುದು, ನಿರ್ಧರಣೆ ಮಾಡಿದ ಅಪಾಯದ ಆಧಾರದ ಮೇಲೆ ಆಂತರಿಕ ನಿಯಂತ್ರಣದ ವಿನ್ಯಾಸ ಮತ್ತು ಕಾರ್ಯಾಚರಣೆ ಪರಿಣಾಮವನ್ನು ಪರೀಕ್ಷಿಸುವುದು ಮತ್ತು ಮೌಲ್ಯಮಾಪನವೂ ಸಹ ಒಳಗೊಂಡಿರುವುದು. ಆಯ್ಕೆ ಮಾಡಿದ ಕ್ರಮಾವಳಿಗಳು, ವಂಚನೆ ಅಥವಾ ತಪ್ಪಿನ ಪ್ರಯುಕ್ತ ಹಣಕಾಸಿನ ಹೇಳಿಕೆಗಳಲ್ಲಿ ಉಂಟಾಗುವ ಭೌತಿಕ ತಪ್ಪು ಹೇಳಿಕೆಯ ಅಪಾಯದ ನಿರ್ಧರಣೆ ಸೇರಿದಂತೆ ಲೆಕ್ಕಪರಿಶೋಧಕರು ಮಾಡುವ ತೀರ್ಮಾನಗಳ ಮೇಲೆ ಅವಲಂಬಿತವಾಗಿರುತ್ತದೆ.

ನಾವು ಪಡೆದಿರುವ ಲೆಕ್ಕಪರಿಶೋಧನೆ ಪುರಾವೆಯು ಕಂಪನಿಯ ಹಣಕಾಸಿನ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ವ್ಯವಸ್ಥೆ ಬಗ್ಗೆ ನಮ್ಮ ಲೆಕ್ಕಪರಿಶೋಧನೆ ಅಭಿಪ್ರಾಯಕ್ಕೆ ಆಧಾರ ಒದಗಿಸಲು ಸಾಕಷ್ಟಾಗಿರುವುದು ಮತ್ತು ಸೂಕ್ತವಾಗಿರುವುದೆಂದು ನಾವು ನಂಬಿರುವೆವು.

### ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಅರ್ಥ

ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಸಾಮಾನ್ಯವಾಗಿ ಅಂಗೀಕಾರವಾಗಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವುದು ಮತ್ತು ಹಣಕಾಸಿನ ವರದಿಯ ವಿಶ್ವಾಸಾರ್ಹತೆ ಬಗ್ಗೆ ಸೂಕ್ತವಾದ ಆಶ್ವಾಸನೆ ಒದಗಿಸಲು ರೂಪಿಸಿರುವ ಒಂದು ಪ್ರಕ್ರಿಯೆ ಆಗಿದೆ. ಕಂಪನಿಯ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದಲ್ಲಿ ಒಳಪಡುವ ನೀತಿಗಳು ಮತ್ತು ಕ್ರಮಾವಳಿಗಳು: (1)ಕಂಪನಿಯ ವ್ಯವಹಾರಗಳನ್ನು ಮತ್ತು ಆಸ್ತಿಗಳ ಸ್ಥಾನಮಾನವನ್ನು ಸೂಕ್ತವಾದ ವಿವರಣೆಗಳೊಡನೆ ನಿಖರವಾಗಿ ಮತ್ತು ಅತ್ಯುತ್ತಮವಾಗಿ ನಿರೂಪಿಸುವ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿರುವುದು. (2) ಸಾಮಾನ್ಯವಾಗಿ ಅಂಗೀಕರಿಸಲ್ಪಟ್ಟಿರುವ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಅನುಮತಿ ನೀಡಲು ಅಗತ್ಯವಾದಂತೆ ವ್ಯವಹಾರವನ್ನು ದಾಖಲು ಮಾಡಲಾಗಿದೆ, ಮತ್ತು ಕಂಪನಿಯ ಸ್ವೀಕರಣೆ ಮತ್ತು ಖರ್ಚುಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರು ನೀಡಿರುವ ಅಧಿಕಾರಗಳ ಅನುಸಾರ ಮಾತ್ರ ಮಾಡಲಾಗುತ್ತಿದೆ ಎಂಬುದಕ್ಕೆ ಸೂಕ್ತವಾದ ಭರವಸೆ ನೀಡಿಕೆ; ಮತ್ತು (3) ಹಣಕಾಸಿನ ಹೇಳಿಕೆಗಳ ಮೇಲೆ ವಾಸ್ತವಿಕವಾಗಿ ಪರಿಣಾಮ ಬೀರಬಹುದಾದ ಕಂಪನಿಯ ಸ್ವತ್ತುಗಳ ಅನಧಿಕೃತ ಸ್ವಾಧೀನತೆ, ಉಪಯೋಗ ಅಥವಾ ವಿಲೇವಾರಿ ತಡೆ ಅಥವಾ ಸಕಾಲಿಕವಾಗಿ ಪತ್ತೆ ಹಚ್ಚುವಿಕೆ ಬಗ್ಗೆ ಸೂಕ್ತ ಭರವಸೆ ಒದಗಿಸುವುದು.

### ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಮಿತಿಗಳು:

ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳಲ್ಲಿನ ಅಂತರ್ಗತ ಮಿತಿಗಳಿಂದಾಗಿ ಮೋಸ ಅಥವಾ ಅಸಮರ್ಪಕ ಆಡಳಿತವು ನಿಯಂತ್ರಣಗಳನ್ನು ದಾಟಿ ಹೋಗುವ, ತಪ್ಪು ಅಥವಾ ವಂಚನೆಯ ಪ್ರಯುಕ್ತ ವಾಸ್ತವಿಕ ತಪ್ಪು ಹೇಳಿಕೆಗಳು ಉಂಟಾಗುವ ಸಾಧ್ಯತೆಗಳಿರುತ್ತವೆ. ಇವುಗಳನ್ನು ಪತ್ತೆ ಹಚ್ಚುವುದು ಸಾಧ್ಯವಾಗುವುದಿಲ್ಲ. ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಯಾವುದೇ ಮೌಲ್ಯಮಾಪನವನ್ನು ಮುಂದಿನ ಅವಧಿಗಳಿಗೆ ಅನ್ವಯಿಸಿದರೆ ಅದು ಪರಿಸ್ಥಿತಿಯ ಬದಲಾವಣೆಗಳ ಪ್ರಯುಕ್ತ ಹಣಕಾಸಿನ ವರದಿಯ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣವು ಕೊರತೆಯಾಗುವ ಅಪಾಯಕ್ಕೆ ಒಳಪಟ್ಟಿರುತ್ತದೆ ಅಥವಾ ನೀತಿಗಳು ಅಥವಾ ಕ್ರಮಾವಳಿಗಳ ಅನುಸರಣೆ ಪ್ರಮಾಣ ಕ್ಷೀಣಿಸಬಹುದಾಗಿರುತ್ತದೆ.

### ಅರ್ಹತಾ ಅಭಿಪ್ರಾಯಕ್ಕೆ ಆಧಾರ

ನಮಗೆ ನೀಡಿರುವ ಮಾಹಿತಿ ಮತ್ತು ವಿವರಣೆಗಳನುಸಾರ ಮತ್ತು ನಾವು ನಿರ್ವಹಿಸಿದ ಲೆಕ್ಕಪರಿಶೋಧನೆ ಆಧಾರದ ಮೇಲೆ ದಿನಾಂಕ: 31.03.2024 ರಂದಿನಂತೆ ಈ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳನ್ನು ಗುರುತಿಸಲಾಗಿದೆ:

### ಎ.ಚಿಟ್‌ಫಂಡ್ ವಿಚಾರ:

1) (i) ಸೂಕ್ತವಾದ ಆಂತರಿಕ ನಿಯಂತ್ರಣ ಕ್ರಮಗಳು, (ii) ನಿಯೋಜಿಸಿರುವ ಸಾಫ್ಟ್‌ವೇರ್‌ನಿಂದ ನಿಖರವಾದ ಮತ್ತು ಅಗತ್ಯವಾಗಿರುವ ವರದಿಗಳ ಸೃಜನೆಗೆ ಬೆಂಬಲ, (iii) ಆಫ್‌ಲೈನ್ ಶಾಖೆಗಳಿಗೆ (ಶಿವಮೊಗ್ಗ ಮತ್ತು ಕೆಂಗೇರಿ) ಯಾವುದೇ ಪ್ರತಿಪಾದಿತ ವ್ಯವಸ್ಥೆ ಮತ್ತು ಪುಸ್ತಕಗಳ ಸಕಾಲಿಕ ಮುಚ್ಚುವಿಕೆಯ ವ್ಯವಸ್ಥೆ ಇಲ್ಲದಿರುವುದರಿಂದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗಬಹುದಾಗಿರುತ್ತದೆ.

2. "ಸುಸ್ತಿದಾರಿಕೆಯ ಸಂಭವನೀಯತೆ (%), ನಷ್ಟ ನೀಡಿಕೆ ಸುಸ್ತಿದಾರಿಕೆ (%) ಸೇರಿದಂತೆ ವಿವಿಧ ಮಾನದಂಡಗಳ ನಿಖರತೆ ಮತ್ತು ಕಾರಣಗಳ ಬಗ್ಗೆ ಮತ್ತು ಕ್ರೆಡಿಟ್ ಅಪಾಯದಲ್ಲಿ ಗುರುತರ ಹೆಚ್ಚಳದ ಆಧಾರದ ಮೇಲೆ ಹಣಕಾಸಿನ ಆಸ್ತಿಗಳ ವರ್ಗೀಕರಣದ ಆಧಾರದ ಬಗ್ಗೆ ಸಾಕಷ್ಟು ಮಾಹಿತಿಯನ್ನು ಕಂಪನಿ ಹೊಂದಿರುವುದಿಲ್ಲ. ತತ್ಪರಿಣಾಮವಾಗಿ 12 ತಿಂಗಳ ಇಸಿಎಲ್ ಮತ್ತು ಜೀವಿತಾವಧಿ ಇಸಿಎಲ್ ನಿರ್ಧರಣೆಯು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಹೊಂದಿರುವ ಸಂಭವವಿರುತ್ತದೆ.

3. ಕಂಪನಿಯು ರೂ.1196.65 ಲಕ್ಷಗಳ ಮೊತ್ತದ ಚಂದಾದಾರರ ಸಮನ್ವಯತೆ ಮಾಡಿರದ ಶಿಲ್ಕುಗಳನ್ನು ಹೊಂದಿರುವುದು. ಇದರಿಂದ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗುವ ಸಾಧ್ಯತೆ ಇರುವುದು.

4. ವಿಭಾಗವು ಹೆಚ್ಚುವರಿ ನಿಧಿಗಳನ್ನು ಗುರುತಿಸಲು ಸರಿಯಾದ ಆಂತರಿಕ ನಿಯಂತ್ರಣಗಳನ್ನು ಹೊಂದಿರುವುದಿಲ್ಲ ಮತ್ತು ಕರ್ನಾಟಕ ಸರ್ಕಾರದ ಹಣಕಾಸಿನ ಇಲಾಖೆ ಹೊರಡಿಸಿರುವ ಸುತ್ತೋಲೆ ಸಂ. ಎಫ್‌ಡಿ(9) ಟಿಎಆರ್ 2022 ದಿನಾಂಕ:02.07.2022ರ ಅನ್ವಯ ಹೆಚ್ಚುವರಿ ಹಣಗಳನ್ನು ಹೂಡಿಕೆ ಮಾಡುವ ಅಗತ್ಯತೆಗಳನ್ನು ಅನುಸರಿಸಿರುವುದಿಲ್ಲ.

ಬಿ) ಪಾವತಿ ಮಾಡಬೇಕಿರುವವು ಮತ್ತು ಬರಬೇಕಾಗಿರುವವುಗಳ ಶೀಘ್ರ, ನಿಯತಕಾಲಿಕ ಮತ್ತು ಇಂದಿನವರೆಗೆ ಸಮಂಜಸತೆ ಮಾಡಲು ಕಂಪನಿಯು ರೂಪಿಸಿರುವ ಹಣಕಾಸಿನ ಮತ್ತು ಕಾರ್ಯಾಚರಣೆ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಇದರಿಂದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ಹಣಕಾಸಿನ ಪರಿಣಾಮ ಉಂಟಾಗಬಹುದಾಗಿದೆ.

ಸಿ) ಕಂಪನಿಯು ಸಮಗ್ರವಾದ ಇಆರ್‌ಪಿ ವ್ಯವಸ್ಥೆ ಹೊಂದಿರುವುದಿಲ್ಲ. ಕಂಪನಿ ಬಳಸಿರುವ ವಿವಿಧ ಸಾಫ್ಟ್‌ವೇರ್ ಪ್ಯಾಕೇಜುಗಳನ್ನು ಸಾಫ್ಟ್‌ವೇರ್ ಲಿಂಕ್‌ಗಳ ಮೂಲಕ ಅಥವಾ ಕೈಯಿಂದ ಮಾಡುವ ಮೂಲಕ ಸಂಪರ್ಕ ಸಾಧಿಸಿದೆ. ಇದರಿಂದ ಈ ಎರಡರ ಮಧ್ಯೆ ನಿರ್ವಾತ ಉಂಟಾಗಿದೆ. ಇದರಿಂದ ಕ್ಷೀಣಿತ ಹಣಕಾಸಿನ ವರದಿಗಾರಿಕೆ

ಉಂಟಾಗಲು ಸಕಾರಣವಾಗುತ್ತದೆ. ಇದಲ್ಲದೆ ಬಹುಪಾಲು ಸಾಫ್ಟ್‌ವೇರ್ ಪಾನೀಯ ವಿಭಾಗ ಹೊರತಾಗಿ, ಲೆಕ್ಕಪರಿಶೋಧನೆ ಟ್ರಯಲ್ ವೈಶಿಷ್ಟ್ಯತೆ ಹೊಂದಿರುವುದಿಲ್ಲ. ಇದರಿಂದ ಹಣಕಾಸಿನ ಮೇಲೆ ಪರಿಣಾಮ ಉಂಟಾಗುತ್ತದೆ.

ಡಿ) ಕಂಪನಿಯು ಸ್ವತ್ತು, ಸ್ಥಾವರ ಮತ್ತು ಉಪಕರಣದ (ಪಿಪಿಇ) ಭೌತಿಕ ಪರಿಶೀಲನೆಯ ವರದಿ ಒದಗಿಸಿರುವುದಿಲ್ಲ. ಇದರಿಂದ ಪಿಪಿಇನ ಶಿಲ್ಕುಗಳನ್ನು ಕಡಿಮೆಯಾಗಿ ತಿಳಿಸಿಲು/ಹೆಚ್ಚಿಗೆಯಾಗಿ ತಿಳಿಸಲು, ನಿಖರವಲ್ಲದ ಸವಕಳಿ ವ್ಯವಸ್ಥೆಗೆ ಮತ್ತು ನಿಖರವಲ್ಲದ ದುರ್ಬಲತೆ ನಿರ್ಧರಣೆಗೆ ಕಾರಣವಾಗುತ್ತದೆ.

'ವಾಸ್ತವಿಕ ದುರ್ಬಲತೆಯು ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣದ ಒಂದು ಕೊರತೆಯಾಗಿರುವುದು ಅಥವಾ ಕೊರತೆಗಳ ಸಂಯೋಜನೆಯಾಗಿರುವುದು. ಹಾಗಾಗಿ ಕಂಪನಿಯ ವಾರ್ಷಿಕ ಅಥವಾ ಮಧ್ಯಂತರ ಹಣಕಾಸಿನ ಹೇಳಿಕೆಗಳ ವಾಸ್ತವಿಕ ತಪ್ಪು ಹೇಳಿಕೆಯ ಸಾಧ್ಯತೆಯಿರುವುದನ್ನು ಸಕಾಲಿಕ ಆಧಾರದ ಮೇಲೆ ತಡೆಯಲು ಅಥವಾ ಪತ್ತೆ ಹಚ್ಚಲು ಸಾಧ್ಯವಾಗದು.

ಧಾರಕ ಕಂಪನಿಯ ಸಹಾಯಕ ಕಂಪನಿಯಾದ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ (ಹಿಂದಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್) ಇದರ ಹಣಕಾಸಿನ ಹೇಳಿಕೆಗಳ ಬಗ್ಗೆ ಚಾರ್ಟರ್ಡ್ ಅಕೌಂಟೆಂಟ್ಸ್‌ನ ಸ್ವತಂತ್ರ ಸಂಸ್ಥೆ ಅವರ ದಿನಾಂಕ:24ನೇ ಸೆಪ್ಟೆಂಬರ್, 2024ರ ತಮ್ಮ ಪರಿಷ್ಕೃತ ಲೆಕ್ಕಪರಿಶೋಧನಾ ವರದಿ ಅನ್ವಯ ನೀಡಿರುವ ಹಣಕಾಸಿನ ವರದಿ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಮೇಲಿನ ವರದಿಯಲ್ಲಿ ಸೇರಿಸಿರುವ ಮತ್ತು ನಾವು ಅದ್ದು ಈ ಕೆಳಕಂಡಂತೆ ಮರು ಮಂಡನೆ ಮಾಡಿರುವ ಕೆಳಕಂಡ ವಾಸ್ತವಿಕ ದೌರ್ಬಲ್ಯಗಳ ಬಗ್ಗೆ ನಾವು ಗಮನ ಸೆಳೆಯುವೆವು.

(ಎ) ಕರ್ನಾಟಕ ಸರ್ಕಾರದ ಆದೇಶದ ಅನ್ವಯ ಕಂಪನಿಯಿಂದ ಒದಗಿಸುವ ಅಥವಾ ಒದಗಿಸಲು ವ್ಯವಸ್ಥೆ ಮಾಡುವ ಸರಕುಗಳು ಮತ್ತು ಸೇವೆಗಳಿಗೆ ಕಂಪನಿಯು ಇತರೆ ಮಾಧ್ಯಮ ಮತ್ತು ಇವೆಂಟ್ಸ್, ಉತ್ಪಾದನೆ ಮತ್ತು ಮೀಡಿಯಾ ಕಾಂಟ್ರಾಕ್ಟ್‌ಗಳಿಗೆ ನಿರ್ದಿಷ್ಟಪಡಿಸಿರುವ ಶೇಕಡ ಪ್ರಮಾಣದಲ್ಲಿ ಲಾಭವನ್ನು ಪಡೆಯಲು ಅರ್ಹವಾಗಿರುವುದು. ಕಾಂಟ್ರಾಕ್ಟ್ ವಿಚಾರದಲ್ಲಿ ಈಗ ಜಾರಿಯಲ್ಲಿರುವಂತೆ ಕಂಪನಿಯು ಪಟ್ಟಿಯಲ್ಲಿ ಸೇರ್ಪಡೆಯಾಗಿರುವ ಸರಬರಾಜುದಾರರುಗಳಿಂದ ಕೊಟೇಶನ್ ಆಹ್ವಾನಿಸುತ್ತದೆ ಮತ್ತು ಆ ಕೊಟೇಷನ್‌ಅನ್ನು ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗೆ ರವಾನಿಸುವುದು ಮತ್ತು ಏಜೆನ್ಸಿಗಳಿಗೂ ರವಾನಿಸುವುದು. ಸರ್ಕಾರದ ಖರೀದಿದಾರ ಇಲಾಖೆಗಳು ಮತ್ತು ಏಜೆನ್ಸಿಗಳು ಒಮ್ಮೆ ಸರಕುಗಳು ಮತ್ತು ಸೇವೆಗಳ ಪೂರೈಕೆದಾರರನ್ನು ಆಯ್ಕೆ ಮಾಡಿದಾಗ ಕಂಪನಿಯು ಯಶಸ್ವಿ ಎಂಪ್ಯಾನೆಲ್ಡ್ ಸರಬರಾಜುದಾರರಿಗೆ ಕಾಂಟ್ರಾಕ್ಟ್ ನೀಡುವುದು.

ಸರಬರಾಜುದಾರರು ನಮೂದಿಸಿದ ಮೊತ್ತದ ವಿಚಾರದಲ್ಲಿ ಕಂಪನಿಯು ಯಾವುದೇ ಒಳಗೊಳ್ಳುವಿಕೆ ಇಲ್ಲದಿದ್ದರೂ ಸಹ ಸರ್ಕಾರ ಮತ್ತು ಕಂಪನಿಯ ನಡುವಿನ ಒಪ್ಪಂದವಾಗಿರುವ ನಿಯಮಗಳ ಹಿನ್ನೆಲೆಯಲ್ಲಿ ನೋಡಿದಾಗ ಹಾಗೆ ಪಡೆದ ಕೊಟೇಶನ್‌ಗಳನ್ನು ನಮೂದಿಸಿರುವ ಬೆಲೆಗಳು ಸೂಕ್ತವಾಗಿರುವವು ಮತ್ತು ಹಾಲಿಯಿರುವ ಮಾರುಕಟ್ಟೆ ದರಗಳಿಗೆ ಹೊಂದಾಣಿಕೆಯಾಗುತ್ತವೆಯೇ ಎಂಬುದ್ದಕ್ಕೆ ಕಂಪನಿ ಮೌಲ್ಯಮಾಪನ ಮಾಡಬೇಕಾಗುತ್ತದೆ. ಆದರೆ ಕಂಪನಿ ಸರಬರಾಜುದಾರರುಗಳಿಂದ ಬಿಡ್ಡಿಂಗ್ ಪಡೆದ ಮೇಲೆ ಅವುಗಳನ್ನು ರವಾನಿಸುವ ಮುನ್ನ ಕಂಪನಿಯು ಅಂತಹ ಮೌಲ್ಯಮಾಪನ ಮಾಡಿರುವುದಿಲ್ಲ. ಇದರಿಂದಾಗಿ, ಸರಬರಾಜುದಾರರು ನಮೂದಿಸಿದ ಮತ್ತು ಸರ್ಕಾರದ ಇಲಾಖೆಗಳು ಅಂಗೀಕರಿಸಿರುವ ದರಗಳು ಸೂಕ್ತವಾಗಿರುವವೆ ಅಥವಾ ಇಲ್ಲವೇ ಎಂಬುದರ ಬಗ್ಗೆ ಕಂಪನಿಗೆ ತಿಳಿದಿರುವುದಿಲ್ಲ.

(ಬಿ) ಟೆಂಡರ್‌ಗಳನ್ನು ಕರೆಯುವ ಪ್ರಕ್ರಿಯೆಯನ್ನು ತಪ್ಪಿಸಲು ಇಡೀ ಕಾಂಟ್ರಾಕ್ಟ್ ಅನ್ನು ವಿಭಜನೆ ಅಥವಾ ಉಪ-ವಿಭಜನೆ ಮಾಡುವ ಮೂಲಕ ಟೆಂಡರ್ ಕರೆಯದೆ ಒಂದೇ ವ್ಯಕ್ತಿಗೆ ಗಣನೀಯವಾಗಿ ಅತ್ಯಧಿಕ ಮೊತ್ತದ ಕಾಂಟ್ರಾಕ್ಟ್‌ಗಳನ್ನು ನೀಡಿರುವುದು ಕಂಡು ಬಂದಿದೆ. ಆಂತರಿಕ ನಿಯಂತ್ರಣಗಳು ಮತ್ತು ಆಂತರಿಕ ಲೆಕ್ಕಪರಿಶೋಧನೆ ಪರಿಣಾಮ ಕ್ಷೀಣಿಸುವಿಕೆಯನ್ನು ತಪ್ಪಿಸಲು ಇಂತಹ ಪ್ರಕರಣಗಳನ್ನು ತಪ್ಪಿಸಬಹುದಾಗಿತ್ತು.

(ಸಿ) ವಿವಿಧ ಸಾಲಗಾರರುಗಳಿಂದ ಪಡೆದ ಮೊತ್ತಗಳು ಮತ್ತು ಸಾಲಗಾರರು ಪಾವತಿಸಿದ ಸಿಡಿಎಸ್ ಮತ್ತು ಜಿಎಸ್‌ಟಿ ಟಿಡಿಎಸ್ ಅನ್ನು ಸಮಂಜಸತೆ ಮತ್ತು ಹೊಂದಾಣಿಕೆ ಮಾಡುವುದರಲ್ಲಿ ತೀರಾ ವಿಳಂಬವಾಗಿದೆ ಮತ್ತು ಸಾಲಗಾರರುಗಳಿಂದ ಬರಬೇಕಾಗಿ ಬಾಕಿಯಿರುವ ಮೊತ್ತಗಳ ಬಗ್ಗೆ ಅದನ್ನು ತೆಗೆದಿರಿಸುವಲ್ಲಿಯೂ ಸಹ ತೀರಾ ವಿಳಂಬವಾಗಿದೆ. ಈ ಪ್ರಕ್ರಿಯೆಯಲ್ಲಿ, ಲೆಕ್ಕಪರಿಶೋಧನೆಯಲ್ಲಿರುವ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು, ಕೆಳಕಂಡ ಮೊತ್ತಗಳು ಸಮಂಜಸತೆ ಆಗಿದೆ. ಗುರುತಿಸದೆ ಮತ್ತು ವಿನಿಯೋಗಿಸದೆ ಹಾಗೆಯೇ ಉಳಿದಿವೆ:

| ವಿವರಗಳು | ಮೊತ್ತ (ರೂ. ಲಕ್ಷಗಳು) | ಕೆಳಕಂಡ ವರ್ಷಗಳಲ್ಲಿ ಹೊಂದಾಣಿಕೆ ಮಾಡದಿರುವುದು (ರೂ.ಲಕ್ಷಗಳಲ್ಲಿ) |
|---|---|---|
| ಗುರುತಿಸಿರದ ಸಾಲಗಾರರಿಂದ ಪಡೆದಿರುವ ಮೊತ್ತಗಳು | 810.04 | ₹ 1 ವರ್ಷ: 16.57<br>1-2 ವರ್ಷಗಳು: 136.73<br>2-3 ವರ್ಷಗಳು: 235.03<br>1-3 ವರ್ಷಗಳು: 47.17 |
| ಹೊಂದಾಣಿಕೆ ಮಾಡಬೇಕಿರುವ ಜಿಎಸ್‌ಟಿ ಟಿಡಿಎಸ್ | 1,260.63 | ಹ.ವ. 18-19: 65.57<br>ಹ.ವ. 19-20: 142.95<br>ಹ.ವ. 20-21: 174.70<br>ಹ.ವ. 21-22: 197.85<br>ಹ.ವ. 22-23: 364.37<br>ಹ.ವ. 23-24: 315.16 |

| | | |
|---|---|---|
| ಹೊಂದಾಣಿಕೆ ಮಾಡಬೇಕಿರುವ ಆದಾಯ ತೆರಿಗೆ ಟಿಡಿಎಸ್ | 1,483.94 | ಹ.ವ. 21-22: 279.74<br>ಹ.ವ. 22-23: 601.84<br>ಹ.ವ. 23-24: 602.34 |

ಸದರಿಯವುಗಳನ್ನು ಸಮಂಜಸತೆ ಮಾಡುವುದರಲ್ಲಿ ಮಿತಿ ಮೀರಿದ ವಿಳಂಬವು ಅಂತಹ ಸಮಂಜಸತೆ ಮಾಡದ ಮತ್ತು ಹೊಂದಾಣಿಕೆ ಮಾಡದ ಶಿಲ್ಕುಗಳು ವರ್ಷದಿಂದ ವರ್ಷದಲ್ಲಿ ಹೆಚ್ಚಳವಾಗಲು ಕಾರಣವಾಗಿದೆ.

(ಡಿ) ಹಣಕಾಸಿನ ಟಿಪ್ಪಣಿ ಸಂ.7ರ ಅಡಿಯಲ್ಲಿ ತಿಳಿಸಿರುವ ರೂ.119.63 ಲಕ್ಷಗಳ ಮೊತ್ತದ ವ್ಯಾಪಾರದ ಸಂಬಂಧದ ಮುಂಗಡಗಳ ಮತ್ತು ಇತರೆ ಬರಬೇಕಾಗಿರುವವುಗಳು ರೂ.68.51ಲಕ್ಷಗಳ ಪ್ರಮಾಣದ ಗುರಿ ತಲುಪಿದೆ. ಪ್ರೋತ್ಸಾಹಧನ ಮತ್ತು ರೂ.51.12ಲಕ್ಷಗಳ ಪ್ರಮಾಣದ ಮುಂಗಡಗಳ ಪಾವತಿಯನ್ನು ಪ್ರತಿನಿಧಿಸುವುದು. ಇವು 3 ವರ್ಷಗಳಿಗೂ ಹೆಚ್ಚಿನ ಅವಧಿಯಿಂದ ವಸೂಲಾಗದೆ ಉಳಿದಿವೆ.

(ಇ) ಲೆಕ್ಕದ ಪುಸ್ತಕಗಳಲ್ಲಿ ಕಂಡು ಬರುವಂತೆ 2007.08 ರಿಂದ ಪ್ರಾರಂಭಿಸಿ 2023-24ರವರೆಗಿನ ಅವಧಿಯ ರೂ.623.65ಲಕ್ಷಗಳ ಮೊತ್ತದ ಬರಬೇಕಾಗಿರುವ ಆದಾಯ ತೆರಿಗೆ ಮರುಪಾವತಿಗಳನ್ನು ಸಮಂಜಸತೆ ಮಾಡಿರುವುದಿಲ್ಲ.

(ಎಫ್) ಅಸೆಸ್‌ಮೆಂಟ್ ವರ್ಷ 2002-03ರಿಂದ ಅಸೆಸ್‌ಮೆಂಟ್ ವರ್ಷ 2018-19ರವರೆಗೆ ಆದಾಯ ತೆರಿಗೆ ಡಿಮ್ಯಾಂಡ್‌ಗಳಲ್ಲಿ ಇತರೆ ವರ್ಷಗಳ ಮರುಪಾವತಿಗಳನ್ನು ರೂ.542.28 ಲಕ್ಷಗಳ ಮೊತ್ತಕ್ಕೆ ಹೊಂದಾಣಿಕೆ ಮಾಡಿರುವುದನ್ನು ಸಮಂಜಸತೆ ಮಾಡಿರುವುದಿಲ್ಲ.

(ಜಿ) ಮೂರು ವರ್ಷಗಳಿಗೂ ಹೆಚ್ಚಿನ ಅವಧಿಯ ರೂ.1,891.76 ಲಕ್ಷಗಳ ಮೊತ್ತದ ವ್ಯಾಪಾರದ ಸಂಬಂಧ ಪಾವತಿಸಬೇಕಾದ್ದು ಬಾಕಿಯಾಗಿ ಉಳಿದಿದ್ದು ಅವುಗಳು ಅನಗತ್ಯವಾಗಿ ದೀರ್ಘಕಾಲದಲ್ಲಿ ಸಮಂಜಸತೆ ಆಗದೆ ಉಳಿದಿದೆ. ಆ ರೀತಿ ಸಂಚಯನವಾಗಿರುವ ಮೊತ್ತ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಇವುಗಳ ದುರ್ಬಳಕೆ ಮಾಡಿಕೊಳ್ಳುವ ಯಾವುದೇ ಅವಕಾಶಗಳನ್ನು ತಪ್ಪಿಸುವ ದಿಸೆಯಲ್ಲಿ ಆಡಳಿತವು ಸದರಿ ವಿಚಾರದ ಬಗ್ಗೆ ತನಿಖೆ ನಡೆಸಿ ಇದಕ್ಕೆ ಕಾರಣವನ್ನು ದಾಖಲೆಯಲ್ಲಿ ತಿಳಿಸಲು ಮತ್ತು ಅಂತಹ ಹೊಣೆಗಾರಿಕೆ ಇರುವಿಕೆ ಅಥವಾ ಇಲ್ಲದಿರುವಿಕೆ ಬಗ್ಗೆ ಮೌಲ್ಯಮಾಪನ ಮಾಡಲು ಮತ್ತು ಇನ್ನು ಮುಂದೆ ಅಗತ್ಯವಿಲ್ಲದ ಹೊಣೆಗಾರಿಕೆಗಳನ್ನು ವಜಾ ಮಾಡಲು ಆಡಳಿತ ಮಂಡಳಿ ತಕ್ಷಣ ಗಮನಹರಿಸಬೇಕಾಗಿದೆ.

ಎಚ್) ನೌಕರರಿಂದ ಎಸಗಿರುವ ವಂಚನೆ ಮತ್ತು ದುರುಪಯೋಗದಿಂದ ಉಂಟಾಗಿರುವ ಬಾಕಿಗಳ ವಸೂಲಿಗೆ ಸಂಬಂಧಿಸಿದಂತೆ ಕ್ರಮದ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣಗಳು ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

(i) ನಮಗೆ ನೀಡಿರುವ ಮಾಹಿತಿಯ ಅನುಸಾರ ಮತ್ತು ಹಣಕಾಸಿನ ವಿವರಗಳ ಟಿಪ್ಪಣಿ ಸಂ.41(x)ರಲ್ಲಿ ತಿಳಿಸಿರುವಂತೆ ಕಂಪನಿಯ ನೌಕರರೊಬ್ಬರ ವಿರುದ್ಧ ಕ್ರಿಮಿನಲ್ ದಾವೆ ಹೂಡಿದ್ದು, ಆ ನೌಕರರನ್ನು ಅಮಾನತ್ತುಗೊಳಿಸಲಾಗಿತ್ತು. ಸದರಿ ನೌಕರನಿಂದ ಹಣವನ್ನು ವಸೂಲಿ ಮಾಡಿದ ನಂತರ ಆ ದಾವೆಯನ್ನು ಮತ್ತು ಅಮಾನತ್ತನ್ನು ಹಿಂಪಡೆಯಲಾಗಿದೆ.

(ii) ವಾಸ್ತವಿಕವಾಗಿ ವಂಚನೆ ಮಾಡಿದ್ದ ಹಣವನ್ನು ಪಾವತಿ ಮಾಡಿದ ಮಾತ್ರಕ್ಕೆ ನೌಕರರನ್ನು ಅಂತಹ ವಂಚನೆ ಮಾಡಿರುವುದು ಪರಿಹಾರವಾಗಿದೆ ಎಂದು ಭಾವಿಸಲಾಗದು. ಹಾಗಾಗಿ ಆಡಳಿತ ಮಂಡಳಿ ಕ್ರಿಮಿನಲ್ ಮೊಕದ್ದಮೆಯನ್ನು ತೆಗೆದುಕೊಂಡಿರುವುದು ಸರಿಯಲ್ಲ. ಕಂಪನಿಯು ಮೊಕದ್ದಮೆಯನ್ನು ಹಿಂಪಡೆದ ತಕ್ಷಣ ಸದರಿ ನೌಕರನು ಇನ್ನೂ ಅಧಿಕ ಮೊತ್ತದ ವಂಚನೆ ನಡೆಸಿದ ಸಂದರ್ಭಗಳು ಗಮನಕ್ಕೆ ಬಂದಿವೆ ಮತ್ತು ಕಂಪನಿಯು ಅವನ ಮೇಲೆ ಇನ್ನೂ ಕ್ರಮ ಕೈಗೊಳ್ಳಬೇಕಾಗಿದೆ. ಇದಕ್ಕೆ ಸಂಬಂಧಿಸಿದ ವಿಚಾರಗಳನ್ನು ಹಣಕಾಸಿನ ಹೇಳಿಕೆಗಳ ಟಿಪ್ಪಣಿ ಸಂ. 41(x)ರಲ್ಲಿ ನೋಡಬಹುದು.

(iii) ಮೇಲೆ ತಿಳಿಸಿದ ಕೃತ್ಯವು ವಾಣಿಜ್ಯ ವಿವೇಚನ ವಿರುದ್ಧ ನಡೆದ ಕೃತ್ಯವಾಗಿರುವುದು. ಕಂಪನಿಯ ಹಿತಾಸಕ್ತಿಯಿಂದ ನಡೆದಿರುವುದಿಲ್ಲ. ಇಂತಹ ಪ್ರಕರಣಗಳ ನಿಯಂತ್ರಣಕ್ಕೆ ನಿಯಂತ್ರಣ ವ್ಯವಸ್ಥೆಯನ್ನು ಬಲಗೊಳಿಸಬೇಕಾಗಿದೆ.

ಮೇಲೆ ತಿಳಿಸಿರುವ ಎಲ್ಲಾ ಅಂಶಗಳನ್ನು ಪರಿಗಣಿಸಿ ಮತ್ತು ಕಂಪನಿಯ ಗಾತ್ರವನ್ನು ಗಮನದಲ್ಲಿರಿಸಿಕೊಂಡು ಮತ್ತು ಅದರ ವ್ಯವಹಾರದ ಸ್ವರೂಪವನ್ನು ಗಮನಿಸಿ ಕಂಪನಿಯಲ್ಲಿನ ಆಂತರಿಕ ಲೆಕ್ಕ ಪರಿಶೋಧನೆ ಮತ್ತು ಆಂತರಿಕ ನಿಯಂತ್ರಣ ವ್ಯವಸ್ಥೆಗಳು ಸಾಕಷ್ಟಿರುವುದಿಲ್ಲ ಎಂಬುದಾಗಿ ನಾವು ಅನಿವಾರ್ಯವಾಗಿ ವರದಿ ಮಾಡಬೇಕಿದೆ ಮತ್ತು ಹೆಚ್ಚು ವರ್ಷಗಳಿಂದ ಹಾಗೆಯೇ ಉಳಿದಿರುವ ಮೇಲೆ ತಿಳಿಸಿರುವ ಪ್ರಕರಣಗಳ ಸಮಂಜತೆ ಮಾಡಲು, ವಸೂಲಿ ಮಾಡಲು ಮತ್ತು ಆದಷ್ಟು ಬೇಗ ಹೊಂದಾಣಿಕೆ ಮಾಡಲು ನಿಯಂತ್ರಣವನ್ನು ಬಲಗೊಳಿಸಬೇಕು ಮತ್ತು ಲೆಕ್ಕಗಳ ವಿವರಗಳಲ್ಲಿ ಹೆಚ್ಚು ಸ್ಪಷ್ಟತೆ ಮತ್ತು ವಿಶ್ವಾಸಾರ್ಹತೆ ಉಂಟು ಮಾಡಲು ಮುಂದಿನ ವರ್ಷಗಳಲ್ಲಿ ಇಂತಹ ಪರಿಸ್ಥಿತಿ ಉಂಟಾಗದಂತೆ ತಡೆಯಬಹುದು.

(ಐ) ಲೆಕ್ಕ ನಿರ್ವಹಣೆ ಮತ್ತು ಸ್ವತ್ತು, ಸ್ಥಾವರ ಮತ್ತು ಉಪಕರಣದ ವರದಿ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣವು ಸಹಾಯಕ ಕಂಪನಿಗಳ ವಾರ್ಷಿಕ ಲೆಕ್ಕಗಳ ಭಾಗವಾಗಿರುವ ಟಿಪ್ಪಣಿಗಳ ಟಿಪ್ಪಣಿ ಸಂ.3ರಲ್ಲಿ ಗಮನಿಸಿರುವ ಮರು ವರ್ಗೀಕರಣಗಳಲ್ಲಿನ ತಪ್ಪುಗಳ ಅನುಸಾರ ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ.

(ಜೆ) ಲೆಕ್ಕ ನಿರ್ವಹಣೆ ಮತ್ತು ಬಿಲ್ ಮಾಡಿರದ ಆದಾಯದ ಅವಕಾಶಗಳ ವರದಿ ಬಗ್ಗೆ ಕಂಪನಿಯ ಆಂತರಿಕ ನಿಯಂತ್ರಣವು ಕೆಳಕಂಡ ಕಾರಣಗಳ ಕಾರಣ ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ;

ನಾವು ನಡೆಸಿದ ಮಾದರಿ ತಪಾಸಣೆ ಆಧಾರದ ಮೇಲೆ, ಇತರೆ ಮಾಧ್ಯಮ ಮತ್ತು ಕಾರ್ಯಕ್ರಮಗಳ ಇಲಾಖೆಗೆ ಸಂಬಂಧಿಸಿದ ಪ್ರಕರಣಗಳು ನಮಗೆ ಕಂಡು ಬಂದಿವೆ. ಇಲ್ಲಿ ಪೂರ್ಣಗೊಳಿಸಿದ ಬಗ್ಗೆ ಕಂಪನಿ ನೀಡಿದ ಸರ್ಟಿಫಿಕೇಟ್ ಲಭ್ಯವಿಲ್ಲ. ಆದರೆ ಮಾಡಿರುವ ಕೆಲಸದ ಭಾವಚಿತ್ರಗಳನ್ನು ಮಾತ್ರ ಒದಗಿಸಿದೆ ಮತ್ತು ಅದನ್ನು ಕಡತದಲ್ಲಿಟ್ಟಿದೆ. ಇತರೆ ಕಡತಗಳ ಜೊತೆಗೆ ಮಾದರಿ ಕಡತಗಳ ಸಂಖ್ಯೆ: 3852, 3738, 3742, 3925, 3682, 3774, 4138, 3907

(ಕೆ) ಲೆಕ್ಕ ನಿರ್ವಹಣೆ ಮತ್ತು ಇತರೆ ಮಾಧ್ಯಮ ಮತ್ತು ಇವೆಂಟ್ ಗಳ ಇಲಾಖೆ ಮತ್ತು ಉತ್ಪಾದನೆ ಇಲಾಖೆಯ ಆದಾಯ ಮತ್ತು ಖರ್ಚುಗಳ ವರದಿ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣವು ಕೆಳಕಂಡ ಕಾರಣಗಳಿಂದಾಗಿ, ಕಂಪನಿಯ ಕಾರ್ಯಾಚರಣೆಗಳ ಗಾತ್ರಕ್ಕೆ ಅನುಗುಣವಾಗಿರುವುದಿಲ್ಲ:

(i) ನಾವು ನಡೆಸಿದ ಮಾದರಿ ತಪಾಸಣೆಯ ಆಧಾರದ ಮೇಲೆ ಕೆಲಸ ಪೂರ್ಣಗೊಳಿಸಿದ ಸರ್ಟಿಫಿಕೇಟ್‌ಗಳು ಮತ್ತು ಕೆಲಸಗಳ ಭಾವಚಿತ್ರಗಳು/ಇತರೆ ಪುರಾವೆಗಳು ಕಂಪನಿಯಲ್ಲಿ ಲಭ್ಯವಿರುವುದಿಲ್ಲ. ಇತರೆಯವುಗಳ ಪೈಕಿ ಮಾದರಿ ಇನ್ ವಾಯ್ಸ್ ನಂಬರ್‌ಗಳು: 3966/ಒಎಂ/23-24, 5024/ ಒಎಂ/23-24, 5003/ಒಎಂ/23-24. ಉತ್ಪಾದನಾ ವಿಭಾಗದ ಸಂಬಂಧಿಸಿದ ತಪಾಸಣೆ ಮಾಡಿದ ಕಡತಗಳ ಸಂಖ್ಯೆಯಲ್ಲಿ ಇತರೆಯವುಗಳ ಜೊತೆಗೆ 407, 396, 394, 60, 62, 82, 430 ಸೇರಿರುವವು.

(ii) ನಾವು ನಡೆಸಿದ ಮಾದರಿ ತಪಾಸಣೆ ಆಧಾರದ ಮೇಲೆ ಕಂಪನಿ ನಿರ್ವಹಿಸಿರುವ ಕಡತಗಳಲ್ಲಿ ಕೆಲಸದ ಕೋರಿಕೆ ಪತ್ರ, ವಿಚಾರಣೆಗಳಿಗೆ ಉತ್ತರಗಳು, ಕಾರ್ಯಾದೇಶಗಳನ್ನು ದಾಖಲು ಮಾಡಿಲ್ಲ ಮತ್ತು ಅವುಗಳನ್ನು ಲೆಕ್ಕಪರಿಶೋಧನೆ ಮಾಡಿದ ಅವಧಿಯಲ್ಲಿ ಮಾಡಿದ ಆಕ್ಷೇಪಣೆಗಳ ನಂತರ ಮಾತ್ರ ಕಡತದಲ್ಲಿ ಹಾಕಲಾಗಿದೆ. ಮಾದರಿ ಕಡತಗಳ ಸಂಖ್ಯೆ: 4012, 4000, 4001, 4002 ಮತ್ತು ಇತರೆಯವು ಸೇರಿವೆ.

(iii) ನಾವು ನಡೆಸಿದ ಮಾದರಿ ತಪಾಸಣೆ ಆಧಾರದ ಮೇಲೆ ವೆಂಡರ್ ಗಳಿಗೆ ಮಾಡಿರುವ ಹೆಚ್ಚುವರಿ ಪಾವತಿಗಳ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ಈ ಬಗ್ಗೆ ಕೆಲಸ ಪೂರ್ಣಗೊಳಿಸಿರುವ ಸರ್ಟಿಫಿಕೇಟ್ ಮತ್ತು ಕಾರ್ಯಗಳ ಫೋಟೋಗಳು ಸಹ ಕಡತದಲ್ಲಿ ಲಭ್ಯವಿರುವುದಿಲ್ಲ ಮತ್ತು ಫೋಟೋಗಳನ್ನು, ಲೆಕ್ಕಪರಿಶೋಧನೆ ಆಕ್ಷೇಪಣೆಗಳನ್ನು ಮಾಡಿದ ನಂತರ ಮಾತ್ರ ಸೇರಿಸಿದೆ. ದಾಖಲೆಗಳ ಸಿದ್ಧಪಡಿಸುವಿಕೆಯಲ್ಲಿ ಆಂತರಿಕ ವ್ಯವಸ್ಥೆಗಳು ಮತ್ತು ನಿಯಂತ್ರಣವು ಸರಿಯಾಗಿಲ್ಲದಿರುವುದನ್ನು ಮತ್ತು ಕೆಲಸಕ್ಕೆ ಕೋರಿಕೆ ಸಲ್ಲಿಕೆ ಮತ್ತು ಪಾವತಿಗಳನ್ನು ಮಾಡುವ ಕ್ರಮಗಳು ಮತ್ತು ನಿಯಂತ್ರಣಗಳು ಸರಿಯಿಲ್ಲದಿರುವುದನ್ನು ಸೂಚಿಸುವುದು. ಮಾದರಿ ಕಡತಗಳ ಸಂಖ್ಯೆ: 3833, 3836, 3185

(iv) ನಾವು ನಡೆಸಿದ ಮಾದರಿ ತಪಾಸಣಾ ಆಧಾರದ ಮೇಲೆ ಕೆಲವು ವಿಚಾರಗಳಲ್ಲಿ ಟೆಂಡರು ಫಾರಂಗಳಿಗೆ ಕಂಪನಿಗಳ ಅಧಿಕಾರ ಹೊಂದಿದ ಸಹಿದಾರರು ಸಹಿ ಮಾಡದಿರುವುದು ನಮ್ಮ ಗಮನಕ್ಕೆ ಬಂದಿದೆ.

(ಎಲ್) ಹೊಂದಿರುವ ಮತ್ತು ವರ್ಗಾಯಿಸಿರುವ ಷೇರುಗಳ ವರದಿಯ ಮೇಲಿನ ಕಂಪನಿಯ ಆಂತರಿಕ ನಿಯಂತ್ರಣ ವ್ಯವಸ್ಥೆ ಸರಿಯಾಗಿಲ್ಲ. ಕಂಪನಿಗಳ ಷೇರುದಾರರಿಗೆ ನೀಡಿರುವ ಷೇರು ಸರ್ಟಿಫಿಕೇಟ್‌ಗಳ ಪ್ರತಿಗಳನ್ನು ಕಂಪನಿ ನಿರ್ವಹಣೆ ಮಾಡಿರುವುದಿಲ್ಲ ಮತ್ತು ಷೇರು ವರ್ಗಾವಣೆಗಳ ರಿಜಿಸ್ಟರ್ ಅನ್ನು ನಿರ್ವಹಣೆ ಮಾಡಿರುವುದಿಲ್ಲ. ಇದನ್ನು ಪರಿಗಣಿಸಿ ಮೇಲಿನ ಆಕ್ಷೇಪಣೆ ಮಾಡಲಾಗಿದೆ.

(ಎಂ) ಕಂಪನಿಯ ವಿವಿಧ ಇಲಾಖೆಗಳಲ್ಲಿ ಫ್ರೀಲ್ಯಾನ್ಸರುಗಳ ಸೇವೆಗಳನ್ನು ಪಡೆಯುವ ಬಗ್ಗೆ ಕಂಪನಿಯು ಆಂತರಿಕ ನಿಯಂತ್ರಣ ವ್ಯವಸ್ಥೆ ಮತ್ತು ಗುಣಮಟ್ಟದ ಕಾರ್ಯಾಚರಣೆ ಕ್ರಮಾವಳಿಗಳನ್ನು ಹೊಂದಿರುವುದಿಲ್ಲ. ಫ್ರೀಲ್ಯಾನ್ಸರ್‌ಗಳ ಜೊತೆ ಯಾವುದೇ ಗುಣಮಟ್ಟದ ಒಪ್ಪಂದಗಳನ್ನು ಮಾಡಿಕೊಂಡಿರುವುದಿಲ್ಲ ಮತ್ತು ಫ್ರೀಲ್ಯಾನ್ಸರ್‌ಗಳು ನೀಡಿದ ಇನ್ ವಾಯ್ಸ್‌ಗಳ ಮೇಲೆ ಪಾವತಿಗಳನ್ನು ಮಾಡಿದೆ.

(ಎನ್) ಲೆಕ್ಕದ ಪುಸ್ತಕಗಳನ್ನು ಸಿದ್ಧಪಡಿಸುವಲ್ಲಿ ಒಳಗೊಂಡಿರುವ ಪ್ರಕ್ರಿಯೆಗಳು ಮತ್ತು ಹಣಕಾಸಿನ ವಿವರಣೆಗಳು, ಲೆಡ್ಜರ್ ಲೆಕ್ಕಗಳ ಸೃಜನೆ ಮತ್ತು ಲೆಕ್ಕದ ಪುಸ್ತಕಗಳಲ್ಲಿ ಲೆಡ್ಜರ್ ಲೆಕ್ಕಗಳ ವರ್ಗೀಕರಣ ಸೇರಿದಂತೆ ಕಂಪನಿಯ ವಿವಿಧ ಪ್ರಕ್ರಿಯೆಗಳಿಗೆ ಗುಣಮಟ್ಟದ ಕಾರ್ಯಾಚರಣೆ ಕ್ರಮಾವಳಿಗಳು ಮತ್ತು ಅಪಾಯ ನಿಯಂತ್ರಣ ಸರಣಿಗಳನ್ನು ಕಂಪನಿ ಹೊಂದಿರುವುದಿಲ್ಲ.

## ಅರ್ಹತಾ ಅಭಿಪ್ರಾಯ

ನಮ್ಮ ಅಭಿಪ್ರಾಯದಲ್ಲಿ, ನಿಯಂತ್ರಣ ಮಾನದಂಡದ ಧ್ಯೇಯಗಳಲ್ಲಿ ಸಾಧನೆ ಬಗ್ಗೆ ಮೇಲೆ ವಿವರಿಸಿರುವ ವಾಸ್ತವಿಕ ದೌರ್ಬಲ್ಯದ ಸಾಧ್ಯನೀಯ ಪರಿಣಾಮಗಳನ್ನು ಹೊರತುಪಡಿಸಿ, ಗ್ರೂಪ್ ಭಾರತದ ಲೆಕ್ಕಪರಿಶೋಧಕರ ಸಂಸ್ಥೆ ಹೊರಡಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳ ಲೆಕ್ಕಪರಿಶೋಧನೆ ಬಗ್ಗೆಗಿನ ಮಾರ್ಗದರ್ಶಿ ಟಿಪ್ಪಣಿಯಲ್ಲಿ ತಿಳಿಸಿರುವ ಆಂತರಿಕ ನಿಯಂತ್ರಣದ ಅಗತ್ಯ ಅಂಶಗಳನ್ನು ಪರಿಗಣಿಸಿ ಗ್ರೂಪ್ ಸ್ಥಾಪಿಸಿರುವ ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ನಿಯಂತ್ರಣದ ಆಧಾರದ ಮೇಲೆ 31ನೇ ಮಾರ್ಚ್ 2024 ರಂದು ಇದ್ದಂತೆ ಕಂಪನಿಯು ಹಣಕಾಸಿನ ವರದಿಗಾರಿಕೆ ಮೇಲಿನ ಆಂತರಿಕ ಹಣಕಾಸಿನ ನಿಯಂತ್ರಣಗಳನ್ನು ಎಲ್ಲಾ ವಾಸ್ತವಿಕ ವಿಚಾರಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನಿರ್ವಹಣೆ ಮಾಡಿರುವುದು ಮತ್ತು ಹಣಕಾಸಿನ ವರದಿಗಾರಿಕೆ ಮೇಲಿನ ಆ ಆಂತರಿಕ ಹಣಕಾಸಿನ ನಿಯಂತ್ರಣಗಳು ಪರಿಣಾಮಕಾರಿಯಾಗಿ

ಕಾರ್ಯಾಚರಣೆಯಾಗುತ್ತಿರುವವು. ಕಂಪನಿಯ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ನಮ್ಮ ಲೆಕ್ಕ ಪರಿಶೋಧನೆಯಲ್ಲಿ ಅನ್ವಯಿಸಿರುವ ಲೆಕ್ಕಪರಿಶೋಧನೆ ಪರೀಕ್ಷೆಗಳ ಸ್ವರೂಪ, ಸಮಯ, ಮತ್ತು ಪ್ರಮಾಣ ನಿರ್ಧರಣೆ ಮಾಡುವಲ್ಲಿ ಗುರುತಿಸಿರುವ ಮತ್ತು ಮೇಲೆ ವರದಿ ಮಾಡಿರುವ ವಾಸ್ತವಿಕ ದೌರ್ಬಲ್ಯವನ್ನು ನಾವು ಪರಿಗಣಿಸಿರುವೆವು ಮತ್ತು ಈ ವಾಸ್ತವಿಕ ದೌರ್ಬಲ್ಯವು ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲಿನ ನಮ್ಮ ಅಭಿಪ್ರಾಯಕ್ಕೆ ಧಕ್ಕೆ ಉಂಟು ಮಾಡಿದೆ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಮೇಲೆ ನಾವು ಅರ್ಹತಾ ಅಭಿಪ್ರಾಯ ನೀಡಿರುವೆವು.

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417W**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**
**ಯುಡಿಐಎನ್:** 24100892BJZXVK4603

ಸ್ಥಳ : ಬೆಂಗಳೂರು
ದಿನಾಂಕ: 27ನೇ ಸೆಪ್ಟೆಂಬರ್, 2024

### ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ ಅನುಬಂಧ-ಸಿ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ ಸದಸ್ಯರುಗಳಿಗೆ ನೀಡಿದ ಸಮ ದಿನಾಂಕದ ನಮ್ಮ ವರದಿಯ 'ಇತರೆ ಕಾನೂನು ಮತ್ತು ನಿಯಂತ್ರಕ ಅಗತ್ಯತೆಗಳ ಮೇಲಿನ ವರದಿ' ಅನ್ವಯ ಕಂಡಿಕೆ 2 ಅನ್ನು ನೋಡಿ.

ಕಂಪನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2020 (ಸಿಎಆರ್ಒ) 2020ರ ಕಂಡಿಕೆ (xxi) ರ ಅನ್ವಯ ಅಗತ್ಯವಾದಂತೆ, ನಾವು ವರದಿ ಮಾಡುವುದೇನೆಂದರೆ, ಕೆಳಕಂಡ ಕಂಪನಿಗಳ ಲೆಕ್ಕಪರಿಶೋಧಕರು, ಧಾರಕ ಕಂಪನಿಯ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರ್ಪಡೆ ಮಾಡಿರುವ ಸಂಬಂಧಪಟ್ಟ ಕಂಪನಿಗಳ ಸ್ವತಂತ್ರ ಹಣಕಾಸಿನ ಹೇಳಿಕೆಗಳ ಮೇಲಿನ ತಮ್ಮ ವರದಿಯಲ್ಲಿ ಅಭಿಪ್ರಾಯ ಅಥವಾ ವ್ಯತಿರಿಕ್ತ ಟೀಕೆಗಳನ್ನು ವ್ಯಕ್ತಪಡಿಸಿರುವರು:

| ಕ್ರ. ಸಂ | ಕಂಪನಿಯ ಹೆಸರು | ಸಿಐಎನ್ | ಪ್ರವರ್ಗ | ಸಂಬಂಧಪಟ್ಟ ಲೆಕ್ಕಪರಿಶೋಧಕರ ವರದಿ ದಿನಾಂಕ | ಸಂಬಂಧಪಟ್ಟ ಸಿಎಆರ್ಒ ವರದಿಗಳಲ್ಲಿನ ಕಂಡಿಕೆ ಸಂಖ್ಯೆ |
|---|---|---|---|---|---|
| 1 | ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | ಯು85110ಕೆಎ1966 ಎಸ್‌ಜಿಸಿ001612 | ಧಾರಕ ಕಂಪನಿ | ಸೆಪ್ಟೆಂಬರ್ 6, 2024 | ಕಂಡಿಕೆ (i)(b) ಕಂಡಿಕೆ (vi) |
| 2 | ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಆಡ್ವರ್ಟೈಸಿಂಗ್ ಲಿಮಿಟೆಡ್ (ಮೊದಲಿನ ಹೆಸರು ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | ಯು51101ಕೆಎ1972 ಪಿಎಲ್‌ಸಿ002242 | ಸಹಾಯಕ ಕಂಪನಿ | ಆಗಸ್ಟ್ 15, 2024 | ಕಂಡಿಕೆ (i)(c) ಕಂಡಿಕೆ (xiv) (a) |
| 3 | ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | ಯು85110ಕೆಎ1940 ಎನ್‌ಜಿಸಿ000261 | ಸಹಾಯಕ ಕಂಪನಿ | ಸೆಪ್ಟೆಂಬರ್ 6, 2024 | ಕಂಡಿಕೆ (ix)(a) ಕಂಡಿಕೆ (xix) |

**ಸೊರಬ್ ಎಸ್ ಇಂಜಿನೀರ್ ಅಂಡ್ ಕಂ.**
**ಚಾರ್ಟರ್ಡ್ ಅಕೌಂಟೆಂಟ್ಸ್ ಪರವಾಗಿ**
**ಸಂಸ್ಥೆ ನೋಂದಣಿ ಸಂ.110417W**
**ಸಹಿ/-**
**ಸಿಎ. ಚೊಕ್ಷಿ ಶ್ರೇಯಸ್ ಬಿ.**
**ಪಾಲುದಾರರು**
**ಸದಸ್ಯತ್ವ ಸಂ.100892**
**ಯುಡಿಐಎನ್:** 24100892BJZXGB6862

ಸ್ಥಳ : ಬೆಂಗಳೂರು
ದಿನಾಂಕ: 27ನೇ ಸೆಪ್ಟೆಂಬರ್ 2024

# 2024ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷಕ್ಕಾಗಿ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು ಇದರ ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಬಗ್ಗೆ 2013ರ ಕಂಪನಿಗಳ ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಪ್ರಕರಣ 143(6)(ಬಿ) ಅನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ ಟೀಕೆಗಳು

2013ರ ಕಂಪನಿಗಳ ಕಾಯ್ದೆಯಡಿಯಲ್ಲಿ (ಕಾಯ್ದೆ) ನಿಗದಿಪಡಿಸಿರುವ ಹಣಕಾಸು ವರದಿ ಚೌಕಟ್ಟಿನ ಅನುಸಾರ **31ನೇ ಮಾರ್ಚ್ 2024ಕ್ಕೆ** ಕೊನೆಗೊಂಡ ವರ್ಷಕ್ಕೆ **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು** ಇದರ ಕ್ರೋಢೀಕೃತ ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಯು ಕಂಪನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಪ್ರಕರಣ 139(5)ರನ್ವಯ ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್ ಇವರಿಂದ ನೇಮಕಗೊಂಡ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪ್ರಕರಣ 143(10)ರ ಅನ್ವಯ ನಿಗದಿಪಡಿಸಿರುವ ಲೆಕ್ಕಪರಿಶೋಧನೆ ಬಗೆಗಿನ ಗುಣಮಟ್ಟದ ಅನುಸಾರ ಸ್ವತಂತ್ರ ಲೆಕ್ಕಪರಿಶೋಧನೆ ಆಧಾರದ ಮೇಲೆ, ಕಾಯ್ದೆಯ 129(4) ಓದಿಕೊಂಡಂತೆ ಪ್ರಕರಣ 143ರ ಅನ್ವಯ ಸದರಿ ಹಣಕಾಸಿನ ಹೇಳಿಕೆಗಳ ಬಗ್ಗೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಹೊಣೆಯಾಗಿರುತ್ತಾರೆ. **ದಿನಾಂಕ 27ನೇ ಸೆಪ್ಟೆಂಬರ್ 2024 ರ** ಅವರ ಪರಿಷ್ಕೃತ ಲೆಕ್ಕಪರಿಶೋಧನೆ ವರದಿಯಂತೆ ಅವರಿಂದ ಇದನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ. ಇದು **ದಿನಾಂಕ 10ನೇ ಸೆಪ್ಟೆಂಬರ್ 2024 ರ** ಅವರ ಮೊದಲಿನ ಲೆಕ್ಕಪರಿಶೋಧನೆ ವರದಿಯನ್ನು ರದ್ದುಗೊಳಿಸಿರುವುದು.

ಭಾರತದ ಕಂಪ್ಟ್ರೋಲರ್ ಅಂಡ್ ಆಡಿಟರ್ ಜನರಲ್ ಪರವಾಗಿ, ನಾನು **31ನೇ ಮಾರ್ಚ್ 2024ಕ್ಕೆ** ಕೊನೆಗೊಂಡ ವರ್ಷದ **''ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್, ಬೆಂಗಳೂರು''**ನ ಕ್ರೋಢೀಕೃತ ಹಣಕಾಸು ಹೇಳಿಕೆಗಳನ್ನು ಕಾಯ್ದೆಯ 129(4) ಓದಿಕೊಂಡಂತೆ ಕಾಯ್ದೆಯ ಸೆಕ್ಷನ್ 143(6)(ಎ) ಅಡಿಯಲ್ಲಿ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇನೆ. ನಾವು **ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ಬೆಂಗಳೂರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್, ಬೆಂಗಳೂರು ಮತ್ತು ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್, ಬೆಂಗಳೂರು** ಇವುಗಳ ಹಣಕಾಸಿನ ಹೇಳಿಕೆಗಳ ಪೂರಕ ಲೆಕ್ಕಪರಿಶೋಧನೆ ಮಾಡಿದ್ದೇವೆ. ಆದರೆ **ಫುಡ್ ಕರ್ನಾಟಕ ಲಿಮಿಟೆಡ್, ಬೆಂಗಳೂರು** ಇವರ **31ನೇ ಮಾರ್ಚ್ 2024**ಕ್ಕೆ ಕೊನೆಗೊಂಡ ವರ್ಷದ ಪೂರಕ ಲೆಕ್ಕ ಪರಿಶೋಧನೆ ಮಾಡಿರುವುದಿಲ್ಲ. ಈ ಪೂರಕ ಲೆಕ್ಕ ಪರಿಶೋಧನೆಯನ್ನು ಶಾಸನಬದ್ಧ ಲೆಕ್ಕ ಪರಿಶೋಧಕರ ಕಾರ್ಯಾಚರಣೆ ಕಾಗದ ಪತ್ರಗಳನ್ನು ಬಳಸದೆ ಸ್ವತಂತ್ರವಾಗಿ ನಡೆಸಲಾಗಿದೆ ಮತ್ತು ಶಾಸನಬದ್ಧ ಲೆಕ್ಕ ಪರಿಶೋಧಕರ ಮತ್ತು ಕಂಪನಿಯ ಸಿಬ್ಬಂದಿ ವಿಚಾರಣೆಗಳಿಗೆ ಮತ್ತು ಕೆಲವು ಆಯ್ದ ಲೆಕ್ಕ ಪತ್ರಗಳ ದಾಖಲೆಗಳ ಪರಿಶೀಲನೆಗೆ ಸೀಮಿತವಾಗಿರುತ್ತದೆ.

ಪೂರಕ ಲೆಕ್ಕಪರಿಶೋಧನೆ ಅವಧಿಯಲ್ಲಿ ಎತ್ತಿದ ನನ್ನ ಲೆಕ್ಕಪರಿಶೋಧನೆ ಪ್ರಶ್ನಾವಳಿಗಳಿಗೆ ಪರಿಣಾಮ ನೀಡಲು **ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಯಲ್ಲಿ ಪರಿಷ್ಕರಣೆ ಮಾಡಿರುವುದರಿಂದ** ಕಾಯ್ದೆಯ ಪ್ರಕರಣ 129(4) ಓದಿಕೊಂಡಂತೆ ಕಾಯ್ದೆಯ ಪ್ರಕರಣ 143(6)(ಬಿ) ಅನ್ವಯ ಶಾಸನಬದ್ಧ ಲೆಕ್ಕ ಪರಿಶೋಧಕರ ವರದಿಗೆ ಪೂರಕವಾದ ಲೆಕ್ಕ ಪರಿಶೋಧನೆ ವರದಿ ಬಗ್ಗೆ ಯಾವುದೇ ಟೀಕೆ ಟಿಪ್ಪಣಿ ಮಾಡುವುದಿಲ್ಲ.

**ಭಾರತದ ಕಂಪ್ಟ್ರೋಲರ್ ಮತ್ತು ಆಡಿಟರ್ ಜನರಲ್‌ರವರ**
**ಪರವಾಗಿ ಮತ್ತು ಹೆಸರಿನಲ್ಲಿ**
**ಸಹಿ/-**
**(ವಿಮಲೇಂದ್ರ ಆನಂದ್.ಪಟ್ವರ್ಧನ್)**
**ಕಾರ್ಯನಿರತ ಅಕೌಂಟೆಂಟ್ ಜನರಲ್ (ಆಡಿಟ್-II)**
**ಕರ್ನಾಟಕ, ಬೆಂಗಳೂರು**

**ಬೆಂಗಳೂರು**
**ದಿನಾಂಕ : 30ನೇ ಸೆಪ್ಟೆಂಬರ್ 2024**

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2024ರಂದು ಇದ್ದಂತೆ ಕ್ರೋಢೀಕೃತ ಸ್ಥಿತಿ ವಿವರಣಾ ಪಟ್ಟಿ
**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)**

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|---|---|
| i. | **ಆಸ್ತಿಗಳು** | | | |
| | **ಚಾಲ್ತಿಯೇತರ ಆಸ್ತಿಗಳು** | | | |
| | (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ | 2 | 5,118.91 | 5,493.93 |
| | (ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ | 3 | 533.96 | 592.83 |
| | (ಸಿ) ಹೂಡಿಕೆ ಸ್ವತ್ತು | 4 | 3,729.13 | 3,847.40 |
| | (ಡಿ) ಇತರೆ ಅಗೋಚರ ಆಸ್ತಿಗಳು | 5 | 13.35 | 20.69 |
| | (ಇ) ಬಳಕೆ ಹಕ್ಕಿನ ಆಸ್ತಿಗಳು | 5ಎ | 1,292.82 | 860.27 |
| | (ಎಫ್) ಹಣಕಾಸಿನ ಆಸ್ತಿಗಳು | | | |
| | (i) ಹೂಡಿಕೆಗಳು | 6 | 3,594.67 | 2,404.93 |
| | (ii) ಇತರೆ ಹಣಕಾಸಿನ ಆಸ್ತಿಗಳು | 7 | 16,209.69 | 17,854.75 |
| | (iii) ಚಾಲ್ತಿಯೇತರ ಬ್ಯಾಂಕ್ ಶಿಲ್ಕುಗಳು | 12 | 4,432.13 | 4,247.52 |
| | (ಜಿ) ಮುಂದೂಡಿದ ತೆರಿಗೆ ಆಸ್ತಿಗಳು (ನಿವ್ವಳ) | 29 | 2,854.66 | 2,800.89 |
| | (ಎಚ್) ಇತರೆ ಚಾಲ್ತಿಯೇತರ ಆಸ್ತಿಗಳು | 8 | 200.85 | 248.27 |
| | (ಐ) ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ) | 8ಎ | 4,406.03 | 4,139.85 |
| | **ಒಟ್ಟು ಚಾಲ್ತಿಯೇತರ ಆಸ್ತಿಗಳು** | | **42,386.20** | **42,511.33** |
| | | | | |
| | **ಚಾಲ್ತಿ ಆಸ್ತಿಗಳು** | | | |
| | (ಎ) ತಪಶೀಲುಗಳು | 9 | 15,925.70 | 15,844.24 |
| | (ಬಿ) ಹಣಕಾಸಿನ ಆಸ್ತಿಗಳು | | | |
| | (i) ವ್ಯಾಪಾರದಿಂದ ಬರಬೇಕಾಗಿರುವುದು | 10 | 25,230.78 | 19,312.72 |
| | (ii) ನಗದು ಮತ್ತು ನಗದು ಸಮಾನಗಳು | 11 | 15,608.95 | 10,174.78 |
| | (iii) ಮೇಲಿನ (iii) ಹೊರತಾಗಿ ಬ್ಯಾಂಕ್ ಶಿಲ್ಕುಗಳು | 12 | 44,477.28 | 31,580.89 |
| | (iv) ಇತರೆ ಹಣಕಾಸಿನ ಆಸ್ತಿಗಳು | 7 | 17,523.96 | 11,927.18 |
| | (ಸಿ) ಇತರೆ ಚಾಲ್ತಿ ಆಸ್ತಿಗಳು | 8 | 5,295.50 | 9,601.01 |
| | **ಒಟ್ಟು ಚಾಲ್ತಿ ಆಸ್ತಿಗಳು** | | **124,062.17** | **98,440.82** |
| | | | | |
| | **ಮಾರಾಟಕ್ಕೆ ಇಟ್ಟಿರುವ ಆಸ್ತಿಗಳು** | **30** | **409.07** | **414.73** |
| | | | | |
| | **ಒಟ್ಟು ಆಸ್ತಿಗಳು** | | **166,857.44** | **141,366.88** |

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|---|---|
| ii | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | |
| | **ಈಕ್ವಿಟಿ** | | | |
| | (ಎ) ಈಕ್ವಿಟಿ ಷೇರು ಬಂಡವಾಳ | 13 | 4,273.48 | 4,273.48 |
| | (ಬಿ) ಇತರೆ ಈಕ್ವಿಟಿ | 14 | 81,310.10 | 70,713.89 |
| | (ಸಿ) ಅನಿಯಂತ್ರಿತ ಬಡ್ಡಿ | | (35.73) | (36.62) |
| | **ಒಟ್ಟು ಈಕ್ವಿಟಿ** | | **85,547.85** | **74,950.75** |
| | **ಹೊಣೆಗಾರಿಕೆಗಳು** | | | |
| | ಚಾಲ್ತಿಯೇತರ ಹೊಣೆಗಾರಿಕೆಗಳು | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | |
| | (i) ಸಾಲಗಳು | 15ಎ | 149.28 | 174.55 |
| | (ii) ಗುತ್ತಿಗೆ ಹೊಣೆಗಾರಿಕೆಗಳು | 15ಬಿ | 438.14 | 342.75 |
| | (iii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15ಸಿ | 17,539.74 | 15,015.82 |
| | (ಬಿ) ವ್ಯವಸ್ಥೆಗಳು | 16 | 830.38 | 878.66 |
| | (ಸಿ) ಇತರೆ ಚಾಲ್ತಿಯೇತರ ಹೊಣೆಗಾರಿಕೆಗಳು | 17 | 36.72 | 36.72 |
| | **ಒಟ್ಟು ಚಾಲ್ತಿಯೇತರ ಹೊಣೆಗಾರಿಕೆಗಳು** | | **18,994.26** | **16,448.50** |
| | **ಚಾಲ್ತಿ ಹೊಣೆಗಾರಿಕೆಗಳು** | | | |
| | **(ಎ) ಹಣಕಾಸು ಹೊಣೆಗಾರಿಕೆಗಳು** | | | |
| | (i) ವ್ಯಾಪಾರ ಸಂಬಂಧ ಪಾವತಿ ಮಾಡಬೇಕಾಗಿರುವುದು | 18 | | |
| | (ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಯಿರುವ ಮೊತ್ತ | | 3,195.19 | 2,694.04 |
| | (ಬಿ) ಮೇಲಿನ ಹೊರತಾಗಿ ಒಟ್ಟು ಬಾಕಿಯಿರುವ ಮೊತ್ತ | | 31,940.97 | 26,523.86 |
| | (ii) ಸಾಲಗಳು | 15ಎ | | |
| | (iii) ಗುತ್ತಿಗೆ ಹೊಣೆಗಾರಿಕೆಗಳು | 15ಬಿ | 725.06 | 382.77 |
| | (iv) ಇತರೆ ಹಣಕಾಸು ಹೊಣೆಗಾರಿಕೆಗಳು | 15ಸಿ | 21,430.15 | 15,037.85 |
| | (ಬಿ) ಇತರೆ ಹೊಣೆಗಾರಿಕೆಗಳು | 17 | 4,768.00 | 5,113.78 |
| | (ಸಿ) ಚಾಲ್ತಿ ತೆರಿಗೆ ಹೊಣೆಗಾರಿಕೆಗಳು (ನಿವ್ವಳ) | 8ಬಿ | 7.76 | - |
| | (ಡಿ) ವ್ಯವಸ್ಥೆಗಳು | 16 | 248.20 | 215.33 |
| | **ಒಟ್ಟು ಚಾಲ್ತಿ ಹೊಣೆಗಾರಿಕೆಗಳು** | | **62,315.33** | **49,967.63** |
| | **ಒಟ್ಟು ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | **166,857.44** | **141,366.88** |

ಕ್ರೋಡಿಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳನ್ನು ನೋಡಿ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ . ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎನ್**
ಕಂಪನಿ ಕಾರ್ಯದರ್ಶಿ

ಸ್ಥಳ : ಬೆಂಗಳೂರು
ದಿನಾಂಕ:10ನೇ ಸೆಪ್ಟೆಂಬರ್ 2024

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಕ್ರೋಡೀಕೃತ ಲಾಭ ಮತ್ತು ನಷ್ಟದ ವಿವರಣಾ ಪಟ್ಟಿ

**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)**

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| | **ಮುಂದುವರೆಯುತ್ತಿರುವ ಕಾರ್ಯಾಚರಣೆಗಳು** | | | |
| | ಆದಾಯ | | | |
| | ಕಾರ್ಯಾಚರಣೆಗಳಿಂದ ಬಂದ ಆದಾಯ | 19 | 376,424.14 | 340,421.62 |
| | ಇತರೆ ಆದಾಯ | 20 | 4,113.29 | 3,433.99 |
| | **ಒಟ್ಟು ಆದಾಯ** | | **380,537.43** | **343,855.61** |
| | **ಖರ್ಚುಗಳು** | | | |
| | ಬಳಸಿರುವ ಸಾಮಗ್ರಿಗಳ ಬೆಲೆ | 21 | 2,853.94 | 1,742.54 |
| | ವ್ಯಾಪಾರದ ಸರಕಿನ ಖರೀದಿ | 22 | 303,883.87 | 265,845.06 |
| | ಸೇವೆಗಳ ವೆಚ್ಚ | 23 | 31,861.48 | 40,344.44 |
| | ಸಿದ್ದಪಡಿಸಿದ ಸರಕುಗಳ ಮತ್ತು ವ್ಯಾಪಾರಿ ಸರಕುಗಳ ತಪಶೀಲಿನಲ್ಲಿ ಬದಲಾವಣೆಗಳು | 24 | (197.25) | (1,100.41) |
| | ನೌಕರರ ಸೌಲಭ್ಯ ವೆಚ್ಚಗಳು | 25 | 2,485.08 | 2,419.31 |
| | ಹಣಕಾಸಿನ ವೆಚ್ಚಗಳು | 26 | 239.43 | 180.00 |
| | ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 27 | 2,017.62 | 1,904.75 |
| | ಇತರೆ ಖರ್ಚುಗಳು | 28 | 22,135.09 | 21,314.73 |
| | **ಒಟ್ಟು ಖರ್ಚುಗಳು** | | **365,279.26** | **332,650.42** |
| | **ಅಸಾಧಾರಣ ಬಾಬ್ತುಗಳ ಮುನ್ನ ಲಾಭ, ಹೂಡಿಕೆಗಳ ನಿವ್ವಳ ಲಾಭ/(ನಷ್ಟ)ದ ಪಾಲು ಈಕ್ವಿಟಿ ವಿಧಾನ ಬಳಸಿ ಲೆಕ್ಕ ಮಾಡಿರುವುದು ಮತ್ತು ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ಆದಾಯ** | | 15,258.17 | 11,205.19 |
| | ಈಕ್ವಿಟಿ ವಿಧಾನ ಬಳಸಿ ಲೆಕ್ಕ ಮಾಡಿರುವ ಸಹವರ್ತಿ ಕಂಪನಿಗಳ ನಿವ್ವಳ ನಷ್ಟದ ಗ್ರೂಪ್‌ನ ಪಾಲು | | (5.66) | (14.28) |
| | **ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ತೆರಿಗೆಗೆ ಮುನ್ನ ಲಾಭ** | | **15,252.51** | **11,190.91** |
| | **ತೆರಿಗೆ ಖರ್ಚುಗಳು** | 29 | | |
| | (ಎ) ಚಾಲ್ತಿ ತೆರಿಗೆ | | 4,045.19 | 3,336.47 |
| | (ಬಿ) ಮುಂದೂಡಿದ ತೆರಿಗೆ ಶುಲ್ಕ / (ಕ್ರೆಡಿಟ್) | | (349.42) | (608.09) |
| | (ಸಿ) ಹಿಂದಿನ ಅವಧಿಗಳಿಗೆ ಸಂಬಂಧಿಸಿದಂತೆ ತೆರಿಗೆಯ ಕಡಿಮೆ ವ್ಯವಸ್ಥೆ | | 25.92 | 35.28 |
| | **ಮುಂದುವರಿಯುತ್ತಿರುವ ಕಾರ್ಯಾಚರಣೆಗಳಿಂದ ಬಂದ ವರ್ಷದ ಲಾಭ** | | **11,530.82** | **8,427.25** |
| | **ಸ್ಥಗಿತವಾದ ಕಾರ್ಯಾಚರಣೆಗಳು** | 30 | | |
| | ಸ್ಥಗಿತವಾದ ಕಾರ್ಯಾಚರಣೆಗಳಿಂದ ಬಂದ ವರ್ಷದ ತೆರಿಗೆ ಪಾವತಿಗೆ ಮುನ್ನಿನ ಲಾಭ /(ನಷ್ಟ) | | 5.32 | (2.82) |
| | ಸ್ಥಗಿತಗೊಂಡ ಕಾರ್ಯಾಚರಣೆಗಳ ತೆರಿಗೆ ಆದಾಯ /(ಖರ್ಚು) | | (1.34) | 0.71 |
| | ಸ್ಥಗಿತಗೊಂಡ ಕಾರ್ಯಾಚರಣೆಗಳಿಂದ ವರ್ಷದಲ್ಲಿ ಆದ ಲಾಭ/(ನಷ್ಟ) | | 3.98 | (2.11) |
| | | | | |
| | **ವರ್ಷದ ಲಾಭ** | | **11,534.80** | **8,425.14** |

| ಕ್ರ. ಸಂ. | ವಿವರ | ಟಿಪ್ಪಣಿ ಸಂಖ್ಯೆ | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|---|---|
| | **ಇತರೆ ಸಮಗ್ರ ಆದಾಯ** | | | |
| | ಎ) ಲಾಭ ಅಥವಾ ನಷ್ಟಕ್ಕೆ ಮರು ವರ್ಗೀಕರಿಸಲಾಗದ ಐಟಂಗಳು | | | |
| | ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ಮೇಲೆ ನಿವ್ವಳ(ನಷ್ಟ) /ಲಾಭ | 31 | 1,189.74 | (19.01) |
| | ಮೇಲಿನವುಗಳ ಬಗ್ಗೆ ಆದಾಯ ತೆರಿಗೆ ಪರಿಣಾಮ | 29 | (300.79) | 4.78 |
| | | | | |
| | **ನಿರೂಪಿತ ಸೌಲಭ್ಯ ಯೋಜನೆಗಳ ಮೇಲಿನ ಮರುಮಾಪನ ಮಾಡಿದ ಲಾಭಗಳು/(ನಷ್ಟಗಳು)** | 31 | (1.38) | 2.50 |
| | ಮೇಲಿನವುಗಳ ಬಗ್ಗೆ ಆದಾಯ ತೆರಿಗೆ ಪರಿಣಾಮ | 29 | 5.14 | (0.45) |
| | **ವರ್ಷದ ಇತರೆ ಸಮಗ್ರ ಆದಾಯ ತೆರಿಗೆಯ ನಿವ್ವಳ** | | 892.71 | (12.18) |
| | | | | |
| | **ವರ್ಷದ ಒಟ್ಟು ಸಮಗ್ರ ಆದಾಯ** | | 12,427.51 | 8,412.96 |
| | **ಕೆಳಕಂಡವುಗಳಿಗೆ ಅನ್ವಯಿಸಬಹುದಾದ ನಿವ್ವಳ ಲಾಭ:** | | | |
| | ಮಾತೃಸಂಸ್ಥೆಯ ಈಕ್ವಿಟಿ ಹೊಂದಿರುವವರು | | 11,533.91 | 8,425.00 |
| | ನಿಯಂತ್ರಣರಹಿತ ಬಡ್ಡಿ | | 0.89 | 0.14 |
| | **ಒಟ್ಟು ಇತರೆ ಸಮಗ್ರ ಆದಾಯ/ನಷ್ಟ (ತೆರಿಗೆಯ ನಿವ್ವಳ)** | | | |
| | ಕೆಳಕಂಡವುಗಳಿಗೆ ಅನ್ವಯಿಸಬಹುದಾದುದು: | | | |
| | ಮಾತೃಸಂಸ್ಥೆಯ ಈಕ್ವಿಟಿ ಹೊಂದಿರುವವರು | | 892.71 | (12.18) |
| | ನಿಯಂತ್ರಣರಹಿತ ಬಡ್ಡಿ | | - | - |
| | **ಒಟ್ಟು ಸಮಗ್ರ ಆದಾಯ/ನಷ್ಟ (ತೆರಿಗೆಯ ನಿವ್ವಳ)** | | | |
| | ಕೆಳಕಂಡವುಗಳಿಗೆ ಅನ್ವಯ: | | 12,426.62 | 8,412.82 |
| | ಮಾತೃಸಂಸ್ಥೆಯ ಈಕ್ವಿಟಿದಾರರು | | 0.89 | 0.14 |
| | ನಿಯಂತ್ರಣ ರಹಿತ ಬಡ್ಡಿ | | | |
| | **ಷೇರು ಒಂದರ ಗಳಿಕೆಗಳು (ಷೇರು ಒಂದರ ಸಾಧಾರಣ ಮೌಲ್ಯ ರೂ.100/-)** | 32 | | |
| | ಮೂಲ ಮತ್ತು ದ್ರವೀಕೃತ (ರೂ) | | 269.82 | 197.20 |
| | ಮುಂದುವರಿದ ಕಾರ್ಯಾಚರಣೆಗಳಿಗೆ | | 0.09 | (0.05) |
| | ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಿಗೆ | | 269.92 | 197.15 |

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳನ್ನು ನೋಡಿ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ
ಸಂಸ್ಥೆ ನೋಂದಣಿ ಸಂಖ್ಯೆ 110417W
ಸಹಿ/-
(ಸಿ.ಎ. ಚೋಕ್ಷಿ ಶ್ರೇಯಸ್.ಬಿ)
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:10ನೇ ಸೆಪ್ಟೆಂಬರ್ 2024

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
ಪುಟ್ಟರಂಗ ಶೆಟ್ಟಿ . ಸಿ
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
ಮನೋಜ್‌ಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
ಅವಿನಾಶ್ ಕೆ.ಆರ್.
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
ಶ್ರೀದೇವಿ ಬಿ.ಎಸ್
ಕಂಪನಿ ಕಾರ್ಯದರ್ಶಿ

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ಕ್ರೋಡೀಕೃತ ನಗದು ಹರಿವಿನ ವಿವರ
**(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುತ್ತವೆ)**

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ಬಂದ ನಗದು ಹರಿಯುವಿಕೆ** | | |
| **ಲಾಭ ಮತ್ತು ನಷ್ಟದ ಹೇಳಿಕೆ ಅನ್ವಯ ತೆರಿಗೆಗೆ ಮತ್ತು ಅಸಾಧಾರಣ ಐಟಂಗಳ ಮುನ್ನ ಲಾಭ** | 15,257.83 | 11,188.09 |
| **ನಿವ್ವಳ ನಗದು ಹರಿಯುವಿಕೆಗಳಿಗೆ ತೆರಿಗೆಗೆ ಮುನ್ನ ಲಾಭದ ಸಮಂಜಸತೆಗೆ ಹೊಂದಾಣಿಕೆಗಳು** | | |
| ಲಾಭಾಂಶ | (11.53) | (6.11) |
| ಮುಂದೆ ಅಗತ್ಯವಿಲ್ಲದ ಸಾಲಗಳಿಗೆ ಅಧಿಕ ವ್ಯವಸ್ಥೆ | (172.35) | (131.13) |
| ಬಡ್ಡಿ ಆದಾಯ | (3,131.78) | (1,918.85) |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಲಾಭ/ನಷ್ಟ | 3.24 | (6.11) |
| ಸ್ವತ್ತುಗಳ ಹಾನಿಯಿಂದ ಉಂಟಾದ ನಷ್ಟ | (595.66) | (851.04) |
| ಹೂಡಿಕೆ ಸ್ವತ್ತಿನ ಮೇಲಿನ ಬಾಡಿಗೆ ಆದಾಯ | 2,017.62 | 1,904.75 |
| ಸವಕಳಿ ಮತ್ತು ಅಮಾರ್ಟೈಸೇಷನ್ ಖರ್ಚುಗಳು | 239.43 | 179.99 |
| ಹಣಕಾಸಿನ ವೆಚ್ಚಗಳು | 502.84 | 430.33 |
| ಸಂದೇಹಾಸ್ಪದವಾದ ಸಾಲಗಳು ಮತ್ತು ಮುಂಗಡಗಳಿಗೆ ಅವಕಾಶಗಳು | - | 6.83 |
| ಡಿಜಿಟಲ್ ಫ್ಲೆಕ್ಸ್ ಪ್ರಿಂಟಿಂಗ್ ಮೆಷಿನ್‌ನ ದುರ್ಬಲ | (2.54) | - |
| ಇತರೆ ಹಣಕಾಸಿನ ಆಸ್ತಿಗಳ ಮೌಲ್ಯದಲ್ಲಿನ ದುರ್ಬಲತೆ ನಷ್ಟಗಳು | 5.66 | 14.28 |
| **ಕ್ರೋಡೀಕರಣಕ್ಕೆ ಹೊಂದಾಣಿಕೆ** | **14,112.76** | **10,811.03** |
| ಈಕ್ವಿಟಿ ವಿಧಾನ ಬಳಸಲು ಲೆಕ್ಕಕ್ಕೆ ತೆಗೆದುಕೊಂಡಿರುವ ಸಹವರ್ತಿ ಕಂಪನಿಗಳ ನಿವ್ವಳ ನಷ್ಟದ ಗ್ರೂಪ್‌ನ ಪಾಲು | | |
| **ದುಡಿಮೆ ಬಂಡವಾಳ ಬದಲಾವಣೆಗೆ ಮುನ್ನ ಕಾರ್ಯಾಚರಣೆ ಲಾಭ** | | |
| **ದುಡಿಮೆ ಬಂಡವಾಳದಲ್ಲಿನ ಬದಲಾವಣೆಗಳಿಗೆ ಹೊಂದಾಣಿಕೆಗಳು** | | |
| ವ್ಯಾಪಾರದಿಂದ ಬರಬೇಕಾಗಿರುವುದಿಲ್ಲ (ಹೆಚ್ಚಳ)/ಇಳಿಕೆ | (6,420.90) | (2,598.18) |
| ಸರಕಿನ ತಪಶೀಲುಗಳಲ್ಲಿ (ಹೆಚ್ಚಳ)/ಇಳಿಕೆ | (81.46) | (1,188.87) |
| ಇತರೆ ಆಸ್ತಿಗಳಲ್ಲಿ (ಹೆಚ್ಚಳ)/ಇಳಿಕೆ | 4,324.34 | (3,619.18) |
| ಇತರೆ ಹಣಕಾಸಿನ ಆಸ್ತಿಗಳಲ್ಲಿ (ಹೆಚ್ಚಳ) ಇಳಿಕೆ | (3,951.72) | (10,549.05) |
| ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದರಲ್ಲಿ (ಹೆಚ್ಚಳ)/ಇಳಿಕೆ | 6,036.73 | 9,976.06 |
| ಇತರೆ ಹೊಣೆಗಾರಿಕೆಗಳಲ್ಲಿ ಹೆಚ್ಚಳ (ಇಳಿಕೆ) | (345.78) | 2,413.02 |
| ಇತರೆ ಹಣಕಾಸಿನ ಹೊಣೆಗಾರಿಕೆಗಳಲ್ಲಿ ಹೆಚ್ಚಳ (ಇಳಿಕೆ) | 8,970.10 | 486.61 |
| ವ್ಯವಸ್ಥೆಗಳಲ್ಲಿ ಹೆಚ್ಚಳ /(ಇಳಿಕೆ) | (16.79) | (52.81) |
| **ದುಡಿಮೆ ಬಂಡವಾಳದಲ್ಲಿನ ನಿವ್ವಳ ಬದಲಾವಣೆಗಳು** | **8,514.52** | **(5,132.40)** |
| ಕಾರ್ಯಾಚರಣೆಗಳಿಂದ ಉತ್ಪತ್ತಿಯಾಗಿರುವ ನಗದು | **22,627.28** | **5,678.63** |
| ಪಾವತಿಸಿದ ತೆರಿಗೆ, ನಿವ್ವಳ | (4,330.87) | (3,249.39) |
| **ಕಾರ್ಯಾಚರಣೆ ಚಟುವಟಿಕೆಗಳಿಂದ ಉತ್ಪತ್ತಿಯಾಗಿರುವ ನಿವ್ವಳ ನಗದು** | **18,296.41** | **2,429.24** |

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| **ಬಿ. ಹೂಡಿಕೆ ಚಟುವಟಿಕೆಗಳಿಂದ ಬಂದ ನಗದು ಹರಿವು** | | |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಖರೀದಿ (ಬಂಡವಾಳ ಮುಂಗಡಗಳು ಸೇರಿದಂತೆ) | (703.94) | 2,265.93 |
| ಸ್ವತ್ತು , ಸ್ಥಾವರ ಮತ್ತು ಉಪಕರಣ ಮಾರಾಟದಿಂದ ಬಂದ ಹಣ | 3.39 | - |
| ಅಗೋಚರಿತ ಆಸ್ತಿಗಳ ಖರೀದಿ | (2.95) | - |
| ನಗದು ಮತ್ತು ನಗದು ಸಮಾನತೆಗಳು ಎಂದು ಪರಿಗಣಿಸದಿರುವ ಇತರೆ ಬ್ಯಾಂಕುಗಳಲ್ಲಿನ ಶಿಲ್ಕುಗಳಲ್ಲಿ ಬದಲಾವಣೆಗಳು | (12,604.91) | (13,089.01) |
| ಹೂಡಿಕೆ ಆದಾಯ (ಹೂಡಿಕೆ ಸ್ವತ್ತಿನ ಮೇಲಿನ ಬಾಡಿಗೆ ಆದಾಯ) | 595.66 | 851.04 |
| ಪಡೆದಿರುವ ಬಡ್ಡಿ | 2,655.69 | 1,518.14 |
| ಪಡೆದಿರುವ ಲಾಭಾಂಶ | 11.53 | 6.11 |
| **ಹೂಡಿಕೆ ಚಟುವಟಿಕೆಗಳಲ್ಲಿ ಬಳಸಿರುವ ನಿವ್ವಳ ನಗದು ಹರಿವು** | **(10,045.53)** | **(8,447.79)** |
| | | |
| **ಸಿ.ಹಣಕಾಸಿನ ಚಟುವಟಿಕೆಗಳಿಂದ ಆದ ನಗದು ಹರಿವು** | | |
| ಪಾವತಿಸಿದ ಹಣಕಾಸಿನ ವೆಚ್ಚ | (161.51) | 75.83 |
| ಗುತ್ತಿಗೆ ಹೊಣೆಗಾರಿಕೆಗಳ ಪಾವತಿ | (827.33) | (631.08) |
| ಪಾವತಿ ಮಾಡಿದ ಲಾಭಾಂಶ | (1,827.87) | (1,105.19) |
| **ಹಣಕಾಸಿನ ಚಟುವಟಿಕೆಗಳಲ್ಲಿ ಬಳಸಿದ ನಿವ್ವಳ ನಗದು** | **(2,816.71)** | **(1,660.44)** |
| **ನಗದು ಮತ್ತು ನಗದು ಸಮಾನತೆಗಳಲ್ಲಿ ನಿವ್ವಳ ಬದಲಾವಣೆ** | **5,434.17** | **(7,678.99)** |
| ವರ್ಷದ ಆರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು | 10,174.78 | 17,853.77 |
| ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನತೆಗಳು | 15,608.95 | 10,174.78 |

**ನಗದು ಮತ್ತು ನಗದು ಸಮಾನತೆಗಳ ಸಮಂಜಸತೆ**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| **ನಗದು ಮತ್ತು ನಗದು ಸಮಾನತೆಗಳು:** | | |
| ಕೈಯಲ್ಲಿರುವ ನಗದು ಮತ್ತು ಸ್ಟಾಂಪ್ | 2,078.42 | 1,012.85 |
| ಬ್ಯಾಂಕುಗಳಲ್ಲಿರುವ ಶಿಲ್ಕು | 13,526.29 | 9,154.13 |
| ರವಾನೆಯಲ್ಲಿರುವ ಸಂದಾಯಗಳು | 4.24 | 7.80 |
| **ಸ್ಥಿತಿ ವಿವರಣಾ ಪಟ್ಟಿ ಅನುಸಾರ ನಗದು ಮತ್ತು ನಗದು ಸಮಾನತೆಗಳು (ಟಿಪ್ಪಣಿ11 ನೋಡಿ)** | **15,608.95** | **10,174.78** |
| **ನಗದು ಹರಿವಿನ ಹೇಳಿಕೆ ಅನ್ವಯ ನಗದು ಮತ್ತು ನಗದು ಸಮಾನತೆಗಳು** | | |
| ಕ್ರೋಢಿಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳನ್ನು ನೋಡಿ. | | |

| ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ ಇದರೊಡನೆ ಜೊತೆಗೂಡಿರುವ ಟಿಪ್ಪಣಿಗಳನ್ನು ನೋಡಿ. | | | | |
|---|---|---|---|---|
| ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳು, 2015ರ (ತಿದ್ದುಪಡಿಯಾದಂತೆ) ಅನ್ವಯ ನಗದು ಹರಿವಿನ ಹೇಳಿಕೆಗಳ ಮೇಲಿನ ಐಎನ್‌ಡಿ ಎಎಸ್ 7 ರಲ್ಲಿ ತಿಳಿಸಿರುವಂತೆ ಪ್ಯಾರಾ 44ಎ ಅನ್ವಯ ಪ್ರಕಟಣೆ | | | | |
| **ಹಣಕಾಸಿನ ಚಟುವಟಿಕೆಯಿಂದ ಉಂಟಾಗಿರುವ ಹೊಣೆಗಾರಿಕೆಗಳ ವಿವರಗಳು** | **31ನೇ ಮಾರ್ಚ್ 2023 ರಂದು ಇದ್ದಂತೆ** | **ನಗದು ಹರಿವುಗಳು** | **ಇತರೆ ಬದಲಾವಣೆಗಳು** | **31ನೇ ಮಾರ್ಚ್ 2024ರಂದು ಇದ್ದಂತೆ** |
| ಗುತ್ತಿಗೆ ಹೊಣೆಗಾರಿಕೆ | 725.52 | (827.33) | 1,265.01 | 1,163.20 |

| **ಹಣಕಾಸಿನ ಚಟುವಟಿಕೆಯಿಂದ ಉಂಟಾಗಿರುವ ಹೊಣೆಗಾರಿಕೆಗಳ ವಿವರಗಳು** | **31ನೇ ಮಾರ್ಚ್ 2022 ರಂದು ಇದ್ದಂತೆ** | **ನಗದು ಹರಿವುಗಳು** | **ಇತರೆ ಬದಲಾವಣೆಗಳು** | **31ನೇ ಮಾರ್ಚ್ 2024ರಂದು ಇದ್ದಂತೆ** |
|---|---|---|---|---|
| ಗುತ್ತಿಗೆ ಹೊಣೆಗಾರಿಕೆ | 1,081.88 | (630.08) | 274.72 | 725.52 |
| **ಸೂಚನೆ:** ನಗದು ಹರಿವಿನ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ (ಐಎನ್‌ಡಿ ಎಎಸ್ 7) ದಲ್ಲಿ ತಿಳಿಸಿರುವಂತೆ ನಗದು ಹರಿವಿನ ಹೇಳಿಕೆಯನ್ನು ಪರೋಕ್ಷ ವಿಧಾನದ ಅನ್ವಯ ಸಿದ್ಧಪಡಿಸಿದೆ. | | | | |

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೌರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:10ನೇ ಸೆಪ್ಟೆಂಬರ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ . ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎಸ್**
ಕಂಪನಿ ಕಾರ್ಯದರ್ಶಿ

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

CIN:U85110KA1966SGC001612

## 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷಕ್ಕೆ ಈಕ್ವಿಟಿಯಲ್ಲಿನ ಬದಲಾವಣೆಗಳ ಕ್ರೋಢೀಕೃತ ಹೇಳಿಕೆ

(ಎಲ್ಲಾ ಮೊತ್ತಗಳು ನಿರ್ದಿಷ್ಟಪಡಿಸದ ಹೊರತು ಲಕ್ಷ ರೂಪಾಯಿಗಳಲ್ಲಿರುವವು)

| ಎ.ಈಕ್ವಿಟಿ ಷೇರು ಬಂಡವಾಳ | |
|---|---|
| ವಿವರಗಳು (ಟಿಪ್ಪಣಿ 13) | ಮೊತ್ತ |
| **01ನೇ ಏಪ್ರಿಲ್ 2022 ರಂದು ಇದ್ದಂತೆ** | **4,273.48** |
| ವರ್ಷದ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು | - |
| **31ನೇ ಮಾರ್ಚ್ 2023ರಂದು ಇದ್ದಂತೆ** | **4,273.48** |
| **1ನೇ ಏಪ್ರಿಲ್ 2023ರಂದು ಇದ್ದಂತೆ** | **4,273.48** |
| ವರ್ಷದ ಅವಧಿಯಲ್ಲಿ ಈಕ್ವಿಟಿ ಷೇರು ಬಂಡವಾಳದಲ್ಲಿನ ಬದಲಾವಣೆಗಳು | - |
| **31ನೇ ಮಾರ್ಚ್ 2024ರಂದು ಇದ್ದಂತೆ** | **4,273.48** |

| ಬಿ. ಇತರೆ ಈಕ್ವಿಟಿ | | | | | | |
|---|---|---|---|---|---|---|
| ವಿವರಗಳು | ಮೀಸಲು ಮತ್ತು ಹೆಚ್ಚುವರಿ ನಿಧಿ (ಟಿಪ್ಪಣಿ 14) | | | | | ಒಟ್ಟು ಇತರೆ ಈಕ್ವಿಟಿ |
| | ಸಾಮಾನ್ಯ ಮೀಸಲು ನಿಧಿಗಳು | ಚಿಟ್ ಮೀಸಲು ನಿಧಿ | ಉಳಿಸಿಕೊಂಡಿರುವ ಗಳಿಕೆಗಳು | ಬಂಡವಾಳ ಮೀಸಲು | ಇತರೆ ಸಮಗ್ರ ಆದಾಯದ ಮೂಲಕ ಈಕ್ವಿಟಿ ಸಾಧನಗಳ ನ್ಯಾಯೋಜಿತ ಮೌಲ್ಯಮಾಪನ | |
| **1ನೇ ಏಪ್ರಿಲ್, 2023 ರಂದು ಇದ್ದಂತೆ ಶಿಲ್ಕು** | **23,221.55** | **816.48** | **37,661.40** | **77.98** | **1,680.35** | **63,457.76** |
| ವರ್ಷದ ಲಾಭ | - | - | 8,425.14 | - | - | 8,425.14 |
| ವರ್ಷದ ಇತರೆ ಸಮಗ್ರ ಆದಾಯ /(ನಷ್ಟ) | - | - | 19.92 | - | (14.23) | 5.69 |
| **ಒಟ್ಟು ಸಮಗ್ರ ಆದಾಯ** | **23,221.55** | **816.48** | **46,106.46** | **77.98** | **1,666.12** | **71,888.59** |
| ಉಳಿಸಿಕೊಂಡಿರುವ ಗಳಿಕೆ (ಗಳಿಗೆ)/ಗಳಿಕೆಯಿಂದ ವರ್ಗಾವಣೆ | 200.00 | 111.73 | (311.73) | - | - | - |
| ಕಳೆಯಿರಿ: ವರ್ಷದ ಅವಧಿಯಲ್ಲಿ ಪಾವತಿಸಿದ ಲಾಭಾಂಶ | - | - | (1,105.19) | - | - | (1,105.19) |
| ಕಳೆಯಿರಿ: ನಿಯಂತ್ರಣ ರಹಿತ ಬಡ್ಡಿಯ ಲಾಭ/(ನಷ್ಟ)ದ ಪಾಲು | - | - | (0.14) | - | - | (0.14) |
| ಕಳೆಯಿರಿ: ಕೆಐಎಡಿಬಿ ಜಮೀನು | - | - | (69.41) | - | - | (69.41) |
| ಸೇರಿಸಿ: ತೆರಿಗೆಗಳು | - | - | 0.04 | - | - | 0.04 |
| **31ನೇ ಮಾರ್ಚ್ 2023ರಂದು ಇದ್ದಂತೆ ಶಿಲ್ಕು** | **23,421.55** | **928.21** | **44,620.03** | **77.98** | **1,666.12** | **70,713.89** |
| **1ನೇ ಏಪ್ರಿಲ್ 2023 ರಂದು ಇದ್ದಂತೆ ಶಿಲ್ಕು** | **23,421.55** | **928.21** | **44,620.03** | **77.98** | **1,666.12** | **70,713.89** |
| ವರ್ಷದ ಲಾಭ | - | - | 11,534.80 | - | - | 11,534.80 |
| ವರ್ಷದ ಇತರೆ ಸಮಗ್ರ ಆದಾಯ/(ನಷ್ಟ) | - | - | 3.76 | - | 888.95 | 892.71 |
| **ಒಟ್ಟು ಸಮಗ್ರ ಆದಾಯ** | **23,421.55** | **928.21** | **56,158.59** | **77.98** | **2,555.07** | **83,141.40** |
| ಉಳಿಸಿಕೊಂಡಿರುವ ಗಳಿಕೆ (ಗಳಿಗೆ)/ಗಳಿಕೆಯಿಂದ ವರ್ಗಾವಣೆ | 200.00 | 175.14 | (375.14) | - | - | - |
| ಕಳೆಯಿರಿ: ವರ್ಷದ ಅವಧಿಯಲ್ಲಿ ಪಾವತಿಸಿದ ಲಾಭಾಂಶ | - | - | (1,827.87) | - | - | (1,827.87) |
| ಲಾಭದ ಪಾಲು-ನಿಯಂತ್ರಣ ರಹಿ ಬಡ್ಡಿ | - | - | (0.89) | - | - | (0.89) |
| ಕ್ರೋಢೀಕರಣೆಗೆ ಹೊಂದಾಣಿಕೆ | - | - | (2.54) | - | - | (2.54) |
| **31ನೇ ಮಾರ್ಚ್ 2024 ರಂದು ಇದ್ದಂತೆ ಶಿಲ್ಕು** | **23,621.55** | **1,103.35** | **53,952.15** | **77.98** | **2,555.07** | **81,310.10** |

★ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ ಇದರೊಡನಿರುವ ಟಿಪ್ಪಣಿಗಳನ್ನು ನೋಡಿ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಷಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:10ನೇ ಸೆಪ್ಟೆಂಬರ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ . ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎಸ್**
ಕಂಪನಿ ಕಾರ್ಯದರ್ಶಿ

# ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
# ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಅವಿಭಾಜ್ಯ ಭಾಗವಾಗಿರುವ ಟಿಪ್ಪಣಿಗಳು :

## 1. ಕಂಪನಿ ಅವಲೋಕನ ಮತ್ತು ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿ

### 1.1 ಗ್ರೂಪ್‌ನ ಅವಲೋಕನ

ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ (''ಕಂಪನಿ'') ಯು ಕರ್ನಾಟಕ ಸರ್ಕಾರದ ಒಂದು ಪ್ರಮುಖ ಉದ್ಯಮವಾಗಿರುವುದು. ಇದು ವಿವಿಧ ಉತ್ಪನ್ನಗಳು ಮತ್ತು ಸೇವೆಗಳ ವ್ಯವಹಾರ ನಡೆಸುತ್ತಿರುವುದು. ಇದು ಒಂದು ವ್ಯಾಪಾರ ಸಂಸ್ಥೆಯಾಗಿ 1966ರಲ್ಲಿ ಪ್ರಾರಂಭವಾಗಿದೆ. ಕಂಪನಿಯ ನೋಂದಾಯಿತ ಕಚೇರಿಯು ಬೆಂಗಳೂರು, ಕರ್ನಾಟಕ, ಭಾರತದಲ್ಲಿ ಇದೆ. ಗ್ರೂಪ್‌ನ ಪ್ರಾರಂಭವಾದ ಸಮಯದಿಂದ ರಾಷ್ಟ್ರೀಯ ಅಸ್ತಿತ್ವದೊಡನೆ ಪ್ರಮುಖವಾಗಿ ಮಾರುಕಟ್ಟೆ ಶಕ್ತಿಯಾಗಿ ಬೆಳೆದಿದೆ. ಇದು ಕರ್ನಾಟಕದಾದ್ಯಂತ ಕಚೇರಿಗಳ ವ್ಯಾಪಕ ಜಾಲಬಂಧ ಹೊಂದಿರುವುದರ ಜೊತೆಗೆ, ದೇಶದಲ್ಲಿನ ಕೆಲವು ಪ್ರಮುಖ ಮೆಟ್ರೋಗಳಲ್ಲಿಯೂ ಕಚೇರಿಗಳನ್ನು ಹೊಂದಿದೆ. ಭಾರತದಲ್ಲಿ ತಯಾರಾದ ವಿದೇಶಿ ಮದ್ಯದ ವ್ಯಾಪಾರ ಮತ್ತು ವ್ಯವಹಾರ, ಚಿಟ್ ಫಂಡ್‌ಗಳನ್ನು ನಡೆಸುವುದು, ಕಾಗದದ ಉತ್ಪನ್ನಗಳ ತಯಾರಿಕೆ ಮತ್ತು ಮಾರಾಟ ಮತ್ತು ಆಮದಾದ ಮರಳಿನ ವ್ಯಾಪಾರ, ಫಾರ್ಮಸ್ಯೂಟಿಕಲ್, ಕೈಗಾರಿಕೆ ಮತ್ತು ಗ್ರಾಹಕರ ಉತ್ಪನ್ನಗಳ ಮಾರಾಟ ಮತ್ತು ಸೇವೆಗಳ ವ್ಯವಹಾರವನ್ನು ನಡೆಸುತ್ತಿರುವುದು.

ಕಂಪನಿಯು ಎರಡು ಸಹಾಯಕ ಕಂಪನಿಗಳು ಮತ್ತು ಒಂದು ಸಹವರ್ತಿ ಕಂಪನಿಯನ್ನು ಹೊಂದಿರುವುದು.

### 1.2 ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವಿಕೆಗೆ ಆಧಾರ:

#### (i) ಅನುಸರಣೆ ಹೇಳಿಕೆ :

ಐಎನ್‌ಡಿ ಎಎಸ್ 100 ಹಣಕಾಸಿನ ಸಾಧನಗಳು ಚಿಟ್ ಹಣಕಾಸಿನ ಆಸ್ತಿಗಳ ಮೇಲಿನ ನಿರೀಕ್ಷಿತ ಕ್ರೆಡಿಟ್ ನಷ್ಟದ ಸಂಬಂಧದಲ್ಲಿ ಹೊರತಾಗಿ, ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ ('ಎಂಸಿಎ') ಮಾಡಿರುವ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟ) ನಿಯಮಗಳು, 2015 ಓದಿಕೊಂಡಂತೆ, ಕಂಪನಿಗಳ ಕಾಯ್ದೆ 2013ರ ಪ್ರಕರಣ 133ರ ಅನ್ವಯ ಪ್ರಕಟಿಸಿರುವಂತೆ ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳ (ಐಎನ್‌ಡಿ ಎಎಸ್) ಅನ್ವಯ ಗ್ರೂಪ್‌ನ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದೆ. ಗ್ರೂಪ್ ನಿರೂಪಿಸಿದ ಅವಧಿಗಳಲ್ಲಿ ಲೆಕ್ಕ ನಿರ್ವಹಣೆ ನೀತಿಗಳನ್ನು ಏಕ ರೀತಿಯಲ್ಲಿ ಅಳವಡಿಸಿದೆ.

31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಹಣಕಾಸು ಹೇಳಿಕೆಗಳನ್ನು ನಿರ್ದೇಶಕರ ಮಂಡಳಿಯು 10.09.2024 ರಂದು ಅಧಿಕೃತಗೊಳಿಸಿದೆ ಮತ್ತು ನೀಡಲು ಅನುಮೋದಿಸಿದೆ.

#### (ii) ಹಣಕಾಸು ಹೇಳಿಕೆಗಳ ಸಿದ್ಧಪಡಿಸುವಿಕೆಗೆ ಆಧಾರ:

ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಕೆಲವು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಹೊರತಾಗಿ, ಸ್ವತಂತ್ರ ಹಣಕಾಸಿನ ಹೇಳಿಕೆಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಐತಿಹಾಸಿಕ ವೆಚ್ಚದ ಅನ್ವಯ ಸಿದ್ಧಪಡಿಸಲಾಗಿದೆ:

ಐತಿಹಾಸಿಕ ವೆಚ್ಚ ಸಾಮಾನ್ಯವಾಗಿ ಸರಕುಗಳು ಮತ್ತು ಸೇವೆಗಳ ವಿನಿಮಯಕ್ಕಾಗಿ ನೀಡುವ ಬೆಲೆಯ ನ್ಯಾಯೋಚಿತ ಮೌಲ್ಯದ ಮೇಲೆ ಆಧಾರಿತವಾಗಿರುವುದು.

ನ್ಯಾಯೋಚಿತ ಮೌಲ್ಯವು ಒಂದು ಆಸ್ತಿಯ ಮಾರಾಟದಿಂದ ಬರುವ ಬೆಲೆ ಅಥವಾ ಗಣನೆಯ ದಿನಾಂಕದಂದು ಮಾರುಕಟ್ಟೆ ಪಾಲುದಾರರ ನಡುವೆ ನಡೆಯುವ ಕ್ರಮಬದ್ಧ ವಹಿವಾಟುಗಳಲ್ಲಿ ಋಣಭಾರದ ವರ್ಗಾವಣೆಗಾಗಿ ಸಂದಾಯ ಮಾಡುವ ಮೊತ್ತವಾಗಿರುತ್ತದೆ. ಸದರಿ ಬೆಲೆಯು ನೇರವಾಗಿ ಒಳಪಡಿಸಬಹುದಾಗಿರುವುದು ಅಥವಾ ಇನ್ನೊಂದು ಮೌಲ್ಯಮಾಪನ ತಂತ್ರದ ಮೂಲಕ ಅಂದಾಜು ಮಾಡುವುದೋ ಅಥವಾ ಬಿಡುವುದನ್ನು ಪರಿಗಣಿಸಲಾಗದು. ಒಂದು ಆಸ್ತಿಯ ಅಥವಾ ಹೊಣೆಗಾರಿಕೆಯ ನ್ಯಾಯೋಚಿತ ಬೆಲೆಯ ಅಂದಾಜು ಮಾಡುವಾಗ ಕಂಪನಿ ಆಸ್ತಿ ಅಥವಾ ಹೊಣೆಗಾರಿಕೆ ಅಂದಾಜು ಲೆಕ್ಕಾಚಾರಕ್ಕಾಗಿ ಅನುಸರಿಸುವ ಲಕ್ಷಣಗಳನ್ನೇ ಒಂದು ವೇಳೆ ಮಾರುಕಟ್ಟೆ ಪಾಲುದಾರರು ಅನುಸರಿಸುತ್ತಿದ್ದಲ್ಲಿ ಕಂಪನಿಯು ಅವುಗಳನ್ನು ಮಾಪನ ದಿನದಂದು ಗಣನೆಗೆ ತೆಗೆದುಕೊಳ್ಳುವುದು. ನ್ಯಾಯೋಚಿತ ಮೌಲ್ಯವನ್ನು ಗಣನೆಗಾಗಿ ಮತ್ತು/ಅಥವಾ ಬಹಿರಂಗಪಡಿಸುವ ಉದ್ದೇಶಕ್ಕಾಗಿ ಈ ಹಣಕಾಸು ಹೇಳಿಕೆಗಳಲ್ಲಿ ಷೇರು ಆಧಾರಿತ ಪಾವತಿ ವಹಿವಾಟುಗಳನ್ನು ಹೊರತುಪಡಿಸಿ ಆ ಲಕ್ಷಣಗಳ ಆಧಾರದ ಮೇಲೆ ನಿರ್ಧರಿಸಲಾಗುವುದು. ಏಕೆಂದರೆ ಷೇರು ಆಧಾರಿತ ಪಾವತಿ ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 102 ಷೇರು ಆಧಾರಿತ ಪಾವತಿ ವ್ಯಾಪ್ತಿಯಲ್ಲಿ ಬರುತ್ತವೆ. ಗುತ್ತಿಗೆ (ಲೀಸಿಂಗ್) ವಹಿವಾಟುಗಳು ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 116ರ ಗುತ್ತಿಗೆಗಳು ವ್ಯಾಪ್ತಿಯೊಳಗೆ ಬರುತ್ತವೆ ಮತ್ತು ಅಳತೆ ಮಾಪನಗಳು ನ್ಯಾಯೋಚಿತ ಮೌಲ್ಯದೊಂದಿಗೆ ಕೆಲವು ಸಾಮ್ಯತೆಗಳನ್ನು ಹೊಂದಿರುತ್ತವೆ. ಆದರೆ ಅವುಗಳ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು-2 ತಪಶೀಲುಗಳಲ್ಲಿನ ನಿವ್ವಳ ಲಭಿಸಬಹುದಾದ ಮೌಲ್ಯ ಅಥವಾ ಭಾರತೀಯ ಲೆಕ್ಕ ನಿರ್ವಹಣಾ ಗುಣಮಟ್ಟಗಳು 36ರಲ್ಲಿನ ಆಸ್ತಿಗಳ ದುರ್ಬಲತೆ ಬಳಕೆಯಲ್ಲಿರುವ ಮೌಲ್ಯದಂತೆ ನ್ಯಾಯೋಚಿತ ಮೌಲ್ಯಗಳಾಗಿರುವುದಿಲ್ಲ.

ಇದರೊಂದಿಗೆ ಹಣಕಾಸು ವರದಿಗಾರಿಕೆ ಉದ್ದೇಶಕ್ಕಾಗಿ ನ್ಯಾಯೋಚಿತ ಮೌಲ್ಯಮಾಪನಗಳನ್ನು ಹಂತ (ಮಟ್ಟ) 1,2 ಅಥವಾ 3 ಗಳೆಂದು

ವಸ್ತುಗಳು ಯಾವ ಹಂತದ ನ್ಯಾಯೋಚಿತ ಮೌಲ್ಯಮಾಪನಗಳಿಗೆ ಸೇರ್ಪಡೆಗೊಳ್ಳುವುವು ಎಂಬುದರ ಆಧಾರದ ಮೇಲೆ ವಿಂಗಡಿಸಲಾಗಿದೆ ಮತ್ತು ವಸ್ತುಗಳ ಪ್ರಾಮುಖ್ಯತೆಯು ಒಟ್ಟಾರೆಯಾಗಿ ಯಾವ ನ್ಯಾಯೋಚಿತ ಮೌಲ್ಯಮಾಪಕಗಳಿಗೆ ಅನ್ವಯಿಸುತ್ತವೆ ಎಂಬುದರ ಆಧಾರದಲ್ಲಿ ಮಾಡಲಾಗಿದೆ. ಅವುಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:

ಹಂತ-1 : ಸಕ್ರಿಯ ಮಾರುಕಟ್ಟೆಗಳಲ್ಲಿ ಹಣಕಾಸು ಸಾಧನಗಳಿಗೆ ನಮೂದಿತ ದರಗಳು (ಹೊಂದಾಣಿಕೆ ಮಾಡಿರದ್ದು)

ಹಂತ-2: ಸಕ್ರಿಯ ಮಾರುಕಟ್ಟೆಯಲ್ಲಿ ವ್ಯಾಪಾರಕ್ಕಿಡದಿರುವ ಹಣಕಾಸು ಸಾಧನಗಳ ನ್ಯಾಯೋಚಿತ ಬೆಲೆಯನ್ನು ಸಂಸ್ಥೆಯ ನಿರ್ದಿಷ್ಟ ಅಂದಾಜುಗಳ ಮೇಲೆ ಎಷ್ಟು ಸಾಧ್ಯವೋ ಅಷ್ಟು ಕಡಿಮೆ ಅವಲಂಬಿತವಾಗುವ ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಮಾಹಿತಿಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸುವ ಮೌಲ್ಯಮಾಪನ ತಂತ್ರಗಳನ್ನು ಉಪಯೋಗಿಸುವ ಮೂಲಕ ನಿರ್ಧರಿಸಲಾಗುತ್ತದೆ.

ಹಂತ-3: ಅಂತರ್ಗತಗೊಳ್ಳಬಹುದಾದ ಮಾರುಕಟ್ಟೆ ಅಂಕಿ ಅಂಶಗಳನ್ನು ಆಧಾರಿಸಿರದ ಆಸ್ತಿಗಳು ಅಥವಾ ಹೊಣೆಗಾರಿಕೆ ಮಾಹಿತಿಗಳು (ಅಂತರ್ಗತವಾಗದಿರುವ ಮಾಹಿತಿಗಳು)

### (iii) ಅಂದಾಜುಗಳ ಬಳಕೆ :

ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ಕಾರ್ಯವು ಸಾಮಾನ್ಯವಾಗಿ ಅಂಗೀಕರಿಸಿರುವ ಲೆಕ್ಕ ನಿರ್ವಹಣೆ ನೀತಿಗಳಿಗೆ ಅನುಗುಣವಾಗಿರುವುದು. ಇದು ವರದಿಗಾರಿಕೆಯ ಅವಧಿ ಕೊನೆಯಲ್ಲಿದ್ದಂತೆ, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲ್ಪಟ್ಟಿರುವ ಶಿಲ್ಕುಗಳ ಮೇಲೆ ಮತ್ತು ಅನುಷಂಗಿಕ ಹೊಣೆಗಾರಿಕೆಗಳಿಗೆ ಸಂಬಂಧಿಸಿದ ಪ್ರಕಟಣೆಗಳ ಮೇಲೆ ಹಾಗೂ ಸದರಿ ಅವಧಿಯಲ್ಲಿನ ಆದಾಯ ಮತ್ತು ಖರ್ಚುಗಳ ತಿಳಿಸಲಾದ ಮೊತ್ತಗಳ ಮೇಲೆ ಪರಿಣಾಮ ಉಂಟು ಮಾಡುವ ಅಂದಾಜುಗಳು ಮತ್ತು ಊಹೆಗಳನ್ನು ಕಂಪನಿಯ ಆಡಳಿತ ಮಂಡಳಿಯು ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸುವ ವೇಳೆಯಲ್ಲಿ ಮಾಡಬೇಕಾಗುತ್ತದೆ. ಈ ಅಂದಾಜುಗಳು ಆಡಳಿತ ಮಂಡಳಿಯು ಚಾಲ್ತಿ ಘಟನಾವಳಿಗಳು ಮತ್ತು ಕ್ರಮಗಳ ಬಗ್ಗೆ ಹೊಂದಿರುವ ಪರಿಜ್ಞಾನದ ಮೇಲೆ ಆಧಾರಿತವಾದವುಗಳಾಗಿದ್ದರೂ, ಮುಂದಿನ ಅವಧಿಗಳಲ್ಲಿ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾಗಿ ಬಂದ ಸಂದರ್ಭದಲ್ಲಿ ಸದರಿ ಊಹೆಗಳು ಮತ್ತು ಅಂದಾಜುಗಳ ಬಗ್ಗೆ ಅನಿಶ್ಚಿತತೆ ತಲೆದೋರುವುದು. ಅಂದಾಜುಗಳಲ್ಲಿ ಸೂಕ್ತ ಮಾರ್ಪಾಟುಗಳನ್ನು ಮಾಡಲಾಗಿದೆ. ಏಕೆಂದರೆ ಆಡಳಿತ ಮಂಡಳಿಯು ಅಂದಾಜುಗಳನ್ನು ಮಾಡಿದ ಸನ್ನಿವೇಶಗಳಲ್ಲಿನ ಬದಲಾವಣೆ ಬಗ್ಗೆ ಎಚ್ಚರ ವಹಿಸುತ್ತದೆ. ಸಂಕೀರ್ಣ ಮತ್ತು ವಿಷಯಾತ್ಮಕ ತೀರ್ಪುಗಳನ್ನು ಒಳಗೊಂಡ ಮಹತ್ತರ ಲೆಕ್ಕ ನಿರ್ವಹಣೆ ಅಂದಾಜುಗಳಿಗೆ ಅಗತ್ಯವಿರುವ ಲೆಕ್ಕ ನಿರ್ವಹಣಾ ನೀತಿಗಳ ಅನ್ವಯಿಕೆಯನ್ನು ಮತ್ತು ಈ ಹಣಕಾಸು ಹೇಳಿಕೆಗಳಲ್ಲಿ ಊಹೆಗಳ ಬಳಕೆಯನ್ನು ಟಿಪ್ಪಣಿ 1.3 ರಲ್ಲಿ ಬಹಿರಂಗಪಡಿಸಿದೆ.

### (iv) ಗ್ರೂಪ್ ಇನ್ನೂ ಅಳವಡಿಸಿಕೊಂಡಿರದ ಹೊಸ ಲೆಕ್ಕನಿರ್ವಹಣೆ ಗುಣಮಟ್ಟಗಳು ಮತ್ತು ತಿದ್ದುಪಡಿಗಳು

ಕಾಲಕಾಲಕ್ಕೆ ಹೊರಡಿಸಿದಂತೆ ಕಂಪನಿಗಳ (ಭಾರತೀಯ ಲೆಕ್ಕ ನಿರ್ವಹಣೆ ಗುಣಮಟ್ಟಗಳು) ನಿಯಮಗಳ ಅನ್ವಯ ಕಾರ್ಪೋರೇಟ್ ವ್ಯವಹಾರಗಳ ಸಚಿವಾಲಯ(ಎಂಸಿಎ) ಹೊಸ ಗುಣಮಟ್ಟಗಳನ್ನು ಅಥವಾ ಹಾಲಿಯಿರುವ ಗುಣಮಟ್ಟಗಳಿಗೆ ತಿದ್ದುಪಡಿಗಳನ್ನು ಪ್ರಕಟಿಸುವುದು. ದಿನಾಂಕ 31ನೇ ಮಾರ್ಚ್, 2024ರಂದು ಎಂಸಿಎಯು ಹಾಲಿಯಿರುವ ಗುಣಮಟ್ಟಗಳಿಗೆ ತಿದ್ದುಪಡಿಗಳನ್ನು ಅಥವಾ ಹೊಸ ಗುಣಮಟ್ಟಗಳನ್ನು ಪ್ರಕಟಿಸಿರುವುದಿಲ್ಲ.

### (v) ಮೊತ್ತಗಳನ್ನು ಪೂರ್ಣಾಂಕದಲ್ಲಿ ತಿಳಿಸುವುದು:

ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಭಾರತೀಯ ರೂಪಾಯಿಯಲ್ಲಿ (''ಐಎನ್ಆರ್'') ನಿರೂಪಿಸಿದೆ ಮತ್ತು ನಿರ್ದಿಷ್ಟವಾಗಿ ತಿಳಿಸಿರದ ಹೊರತಾಗಿ ಪರಿಚ್ಛೇದ-III ರ ಅಗತ್ಯತೆಯ ಅನ್ವಯ ಎಲ್ಲಾ ಮೌಲ್ಯಗಳನ್ನು ಸಮೀಪದ ಲಕ್ಷಗಳಿಗೆ ಪೂರ್ಣಾಂಕಗೊಳಿಸಿದೆ.

### (vi) ಸಹಾಯಕ ಕಂಪನಿಗಳ ಕ್ರೋಡೀಕರಣದ ನೀತಿಗಳು

ಗ್ರೂಪ್ ತಾನು ಸ್ವಾಮ್ಯತೆ ಹೊಂದಿರುವ ಅಥವಾ ನಿಯಂತ್ರಿಸುವ ಕಂಪನಿಗಳನ್ನು ಕ್ರೋಡೀಕರಿಸುವುದು. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳು ಗ್ರೂಪ್ ಮತ್ತು ಅದರ ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆಗಳನ್ನು ಒಳಗೊಂಡಿರುವುದು. ಹೂಡಿಕೆ ಪಡೆದಿರುವವರ ಜೊತೆ ತನ್ನ ಒಳಗೊಳ್ಳುವಿಕೆಯಿಂದ ಮಾರ್ಪಾಡು ಮಾಡಬಹುದಾದ ಲಾಭಗಳಿಗೆ ಗ್ರೂಪ್ ಸೇರ್ಪಡೆಯಾದರೆ ಅಥವಾ ಅದಕ್ಕೆ ಹಕ್ಕುಗಳನ್ನು ಹೊಂದಿದ್ದರೆ ಮತ್ತು ಆ ಲಾಭಗಳನ್ನು ತನ್ನ ಅಧಿಕಾರದ ಮೂಲಕ ಹೂಡಿಕೆ ಪಡೆಯುವವರ ಮೇಲೆ ಹೊರಿಸುವ ಸಾಮರ್ಥ್ಯವಿದ್ದಾಗ ನಿಯಂತ್ರಣ ಸಾಧಿಸಬಹುದು. ನಿರ್ದಿಷ್ಟವಾಗಿ ಗ್ರೂಪ್ ಕೆಳಕಂಡ ಅಧಿಕಾರಗಳನ್ನು ಹೊಂದಿದ್ದಾಗ ಮಾತ್ರ ಹೂಡಿಕೆ ಪಡೆದಿರುವವರನ್ನು ನಿಯಂತ್ರಿಸುವುದು.

- ಹೂಡಿಕೆ ಪಡೆದಿರುವವರ ಮೇಲಿನ ಅಧಿಕಾರ (ಅಂದರೆ ಹೂಡಿಕೆ ಸಂಬಂಧಪಟ್ಟ ಚಟುವಟಿಕೆಗಳಿಗೆ ನಿರ್ದೇಶನ ನೀಡುವ ಚಾಲ್ತಿ ಸಾಮರ್ಥ್ಯ ನೀಡುವ ಹಾಲಿಯಿರುವ ಹಕ್ಕುಗಳು)
- ಹೂಡಿಕೆ ಪಡೆದಿರುವವ ಜೊತೆ ಸೇರುವಿಕೆಯಿಂದ ಬರುವ ಲಾಭಗಳನ್ನು ಮಾರ್ಪಡಿಸುವ ಅವಕಾಶ, ಅಥವಾ ಹಕ್ಕುಗಳು ಮತ್ತು
- ತನ್ನ ಲಾಭಗಳನ್ನು ಗುರುತಿಸಲು ಹೂಡಿಕೆ ಪಡೆದಿರುವವರ ಮೇಲೆ ತನ್ನ ಅಧಿಕಾರ ಬಳಸುವ ಸಾಮರ್ಥ್ಯ

ಸಾಮಾನ್ಯವಾಗಿ, ಬಹುಪಾಲು ಮತದಾನದ ಹಕ್ಕುಗಳು ನಿಯಂತ್ರಣಕ್ಕೊಳ ಪಟ್ಟಿರುತ್ತವೆ ಎಂಬ ಒಂದು ಅಭಿಪ್ರಾಯವಿದೆ. ಈ ಅಭಿಪ್ರಾಯಕ್ಕೆ ಬೆಂಬಲ ನೀಡಲು ಮತ್ತು ಬಹುಪಾಲು ಮತದಾನಕ್ಕಿಂತ

MSIL

ಗ್ರೂಪ್ ಕಡಿಮೆ ಮತದಾನ ಹೊಂದಿದ್ದಾಗ ಅಥವಾ ಹೂಡಿಕೆ ಪಡೆದಿರುವವರ ಇದೇ ರೀತಿಯ ಹಕ್ಕುಗಳನ್ನು ಹೊಂದಿದ್ದಾಗ, ಈ ಕೆಳಕಂಡವುಗಳು ಸೇರಿದಂತೆ ಹೂಡಿಕೆ ಪಡೆದಿರುವವರ ಮೇಲೆ ಅದು ಅಧಿಕಾರ ಹೊಂದಿರುವುದೇ ಎಂಬುದನ್ನು ನಿರ್ಧರಣೆ ಮಾಡುವಾಗ ಸಂಬಂಧಪಟ್ಟ ಎಲ್ಲಾ ಅಂಶಗಳು ಮತ್ತು ಪರಿಸ್ಥಿತಿಗಳನ್ನು ಪರಿಗಣಿಸುವುದು:

- ಹೂಡಿಕೆದಾರನ ಇತರೆ ಮತ ಹೊಂದಿರುವವರ ಜೊತೆ ಒಪ್ಪಂದದ ವ್ಯವಸ್ಥೆ
- ಇತರೆ ಒಪ್ಪಂದವಾದ ವ್ಯವಸ್ಥೆಗಳಿಂದ ಉಂಟಾಗುವ ಹಕ್ಕುಗಳು
- ಗ್ರೂಪ್‌ನ ಮತದಾನದ ಹಕ್ಕುಗಳು ಮತ್ತು ಸಾಧ್ಯನೀಯ ಮತದಾನದ ಹಕ್ಕುಗಳು

ನಿಯಂತ್ರಣದ ಮೂರು ಅಂಶಗಳಲ್ಲಿ ಒಂದು ಅಥವಾ ಹೆಚ್ಚು ಅಂಶಗಳಲ್ಲಿ ಬದಲಾವಣೆಗಳಿರುವುದನ್ನು ಸೂಚಿಸುವ ವಾಸ್ತವಾಂಶಗಳು ಮತ್ತು ಸಂದರ್ಭಗಳು ಇದ್ದಲ್ಲಿ ಹೂಡಿಕೆ ಪಡೆದುಕೊಂಡಿರುವವರನ್ನು ತಾನು ನಿಯಂತ್ರಿಸಬಹುದೇ ಅಥವಾ ಇಲ್ಲವೆ ಎಂಬುದರ ಬಗ್ಗೆ ಗ್ರೂಪ್ ಮರು ನಿರ್ಧರಣೆ ಮಾಡುವುದು. ಸಹಾಯಕ ಕಂಪನಿಯ ಕ್ರೋಡೀಕರಣವು, ಗ್ರೂಪ್ ಸಹಾಯಕ ಕಂಪನಿಯ ಮೇಲೆ ನಿಯಂತ್ರಣ ಪಡೆದಾಗ ಪ್ರಾರಂಭವಾಗುತ್ತದೆ ಮತ್ತು ಗ್ರೂಪ್ ಸಹಾಯಕ ಕಂಪನಿಯ ನಿಯಂತ್ರಣ ಕಳೆದುಕೊಂಡಾಗ ಅದು ಸಮಾಪ್ತಿಯಾಗುತ್ತದೆ. ಸಹಾಯಕ ಕಂಪನಿಯು ವರ್ಷದ ಅವಧಿಯಲ್ಲಿ ಪಡೆದಿರುವ ಅಥವಾ ವಿಲೇವಾರಿ ಮಾಡಿರುವ ಆಸ್ತಿಗಳು, ಹೊಣೆಗಾರಿಕೆಗಳು, ಆದಾಯ ಮತ್ತು ಖರ್ಚುಗಳನ್ನು ಗ್ರೂಪ್ ನಿಯಂತ್ರಣ ಪಡೆದ ದಿನಾಂಕದಿಂದ ಮತ್ತು ಗ್ರೂಪ್ ಸಹಾಯಕ ಕಂಪನಿಯ ನಿಯಂತ್ರಣ ಕಳೆದುಕೊಳ್ಳುವ ದಿನಾಂಕದವರೆಗೆ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಸೇರಿಸಿದೆ.

ಲಾಭ ಅಥವಾ ನಷ್ಟ ಮತ್ತು ಇತರೆ ಸಮಗ್ರ ಆದಾಯದ (ಒಸಿಐ) ಪ್ರತಿ ಅಂಶವನ್ನು , ಕೊರತೆ ಶಿಲ್ಕನ್ನು ಹೊಂದಿರುವ ನಿಯಂತ್ರಣ ರಹಿತ ಬಡ್ಡಿಯನ್ನು ಇದು ಉಂಟು ಮಾಡಿದ್ದರೂ ಸಹ ಗ್ರೂಪ್‌ನ ಮಾತೃ ಸಂಸ್ಥೆಯ ಈಕ್ವಿಟಿದಾರರುಗಳಿಗೆ ಮತ್ತು ನಿಯಂತ್ರಣ ರಹಿತ ಬಡ್ಡಿಗಳಿಗೆ ಒಳಪಡಿಸಿದೆ. ಅಗತ್ಯವಾದಾಗ, ಸಹಾಯಕ ಕಂಪನಿಗಳ ಲೆಕ್ಕ ನಿರ್ವಹಣೆ ನೀತಿಗಳನ್ನು ಗ್ರೂಪ್ ಲೆಕ್ಕ ನಿರ್ವಹಣೆ ನೀತಿಗಳ ಸ್ವರೂಪಕ್ಕೆ ತರಲು ಸಹಾಯಕ ಕಂಪನಿಗಳ ಹಣಕಾಸಿನ ಹೇಳಿಕೆಗಳಿಗೆ ಹೊಂದಾಣಿಕೆಗಳನ್ನು ಮಾಡಿದೆ. ಹಣವಾಗಿ ಪರಿವರ್ತನೆಯಾಗದಿರುವ ಲಾಭ/ನಷ್ಟ ಮತ್ತು ಗ್ರೂಪ್‌ನ ಸದಸ್ಯರುಗಳ ನಡುವಿನ ವ್ಯವಹಾರಗಳಿಗೆ ಸಂಬಂಧಿಸಿದ ನಗದು ಹರಿವುಗಳು ಸೇರಿದಂತೆ ಎಲ್ಲಾ ಅಂತರ್ ಗ್ರೂಪ್ ಆಸ್ತಿಗಳು ಮತ್ತು ಹೊಣೆಗಾರಿಕೆಗಳು, ಈಕ್ವಿಟಿ, ಆದಾಯ, ಖರ್ಚುಗಳನ್ನು ಕ್ರೋಡೀಕರಣದಲ್ಲಿ ಪೂರ್ಣವಾಗಿ ತೆಗೆದುಹಾಕಲಾಗಿದೆ.

ನಿಯಂತ್ರಣ ಕಳೆದುಕೊಳ್ಳದೆ, ಸಹಾಯಕ ಕಂಪನಿಯ ಮಾಲೀಕತ್ವದ ಆಸಕ್ತಿಯಲ್ಲಿ ಬದಲಾವಣೆಯಾದರೆ ಅದನ್ನು ಈಕ್ವಿಟಿ ವ್ಯವಹಾರವೆಂದು ಪರಿಗಣಿಸಿದೆ. ಒಂದು ವೇಳೆ ಗ್ರೂಪ್ ಸಹಾಯಕ ಕಂಪನಿಯ ಮೇಲೆ ನಿಯಂತ್ರಣ ಕಳೆದುಕೊಂಡರೆ, ಅದು:

- ಸಹಾಯಕ ಕಂಪನಿಯ ಆಸ್ತಿಗಳು(ಗುಡ್‌ವಿಲ್ ಸೇರಿದಂತೆ) ಮತ್ತು ಹೊಣೆಗಾರಿಕೆಗಳನ್ನು ಅಮಾನ್ಯಗೊಳಿಸುವುದು.
- ಯಾವುದೇ ನಿಯಂತ್ರಣರಹಿತ ಆಸಕ್ತಿಗಳ ವಾಹಕ ಮೊತ್ತವನ್ನು ಅಮಾನ್ಯಗೊಳಿಸುವುದು.
- ಈಕ್ವಿಟಿಯಲ್ಲಿ ದಾಖಲು ಮಾಡಿರುವ ಸಂಚಿತ ವ್ಯವಹಾರದ ವ್ಯತ್ಯಾಸಗಳನ್ನು ಅಮಾನ್ಯಗೊಳಿಸುವುದು.
- ಪಡೆದ ಪರಿಗಣನೆಯ ನ್ಯಾಯೋಚಿತ ಮೌಲ್ಯವನ್ನು ಮಾನ್ಯ ಮಾಡುವುದು.
- ಉಳಿಸಿಕೊಂಡಿರುವ ಯಾವುದೇ ಹೂಡಿಕೆಯ ನ್ಯಾಯೋಚಿತ ಮೌಲ್ಯವನ್ನು ಮಾನ್ಯ ಮಾಡುವುದು.
- ಲಾಭ ಅಥವಾ ನಷ್ಟದಲ್ಲಿನ ಯಾವುದೇ ಹೆಚ್ಚುವರಿ ಅಥವಾ ಕೊರತೆಯನ್ನು ಮಾನ್ಯ ಮಾಡುವುದು.
- ಗ್ರೂಪ್ ಸಂಬಂಧಪಟ್ಟ ಆಸ್ತಿಗಳು ಅಥವಾ ಹೊಣೆಗಾರಿಕೆಗಳನ್ನು ನೇರವಾಗಿ ವಿಲೇವಾರಿ ಮಾರಾಟ ಮಾಡಬೇಕಾಗಿದ್ದರೆ ಆಗ ಸೂಕ್ತವಾಗಿರುವಂತೆ ಒಸಿಐನಲ್ಲಿ ಮೊದಲು ಮಾನ್ಯ ಮಾಡಿದ್ದ ಘಟಕಗಳ ಮಾತೃ ಸಂಸ್ಥೆಯ ಪಾಲನ್ನು ಲಾಭ ಅಥವಾ ನಷ್ಟ ಅಥವಾ ಉಳಿಸಿಕೊಂಡಿರುವ ಗಳಿಕೆಗಳಿಗೆ ಮರು ವರ್ಗೀಕರಣ ಮಾಡುವುದು.

## (vi) ಪ್ರಮುಖ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿ:

ಎ. ಚಾಲ್ತಿಗೆ ಪ್ರತಿಯಾಗಿ ಚಾಲ್ತಿಯೇತರ ವರ್ಗೀಕರಣ:

ಕಂಪನಿ ಆಸ್ತಿ ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ/ಚಾಲ್ತಿಯೇತರ ವರ್ಗೀಕರಣದ ಆಧಾರದಲ್ಲಿ ಪ್ರಸ್ತುತಪಡಿಸಿದೆ:

(i) ಒಂದು ಆಸ್ತಿಯು ಈ ಕೆಳಕಂಡಂತಿದ್ದರೆ ಆಗ ಅದನ್ನು ಚಾಲ್ತಿ ಆಸ್ತಿ ಎಂದು ವರ್ಗೀಕರಣ ಮಾಡಲಾಗಿದೆ;

- ಸಾಮಾನ್ಯ ಕಾರ್ಯಾಚರಣೆ ಆವರ್ತನದಲ್ಲಿ ನಗದೀಕರಣವಾಗಲಿರುವ ನಿರೀಕ್ಷೆಯಲ್ಲಿರುವುದು ಅಥವಾ ಮಾರಾಟ ಮಾಡಲು ಉದ್ದೇಶಿಸಿರುವುದು ಅಥವಾ ಬಳಸಿರುವುದು.
- ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿಯ ಅವಧಿಯ ನಂತರ 12 ತಿಂಗಳೊಳಗಾಗಿ ನಗದಾಗುವುದೆಂದು ನಿರೀಕ್ಷಿಸುವುದು. ಅಥವಾ
- ವರದಿ ಅವಧಿಯ ನಂತರ ಕನಿಷ್ಠ 12 ತಿಂಗಳಲ್ಲಿ ವಿನಿಮಯ ಗೊಳಿಸುವುದಕ್ಕೆ ಅಥವಾ ಹೊಣೆಗಾರಿಕೆ ಇತ್ಯರ್ಥಗೊಳಿಸಲು

ಬಳಸಲು ಯಾವುದೇ ನಿರ್ಬಂಧ ಇರದ ನಗದು ಅಥವಾ ನಗದು ಸಮಾನವಾದುದು.

(ii) ಇನ್ನುಳಿದ ಎಲ್ಲ ಆಸ್ತಿಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(iii) ಒಂದು ಹೊಣೆಗಾರಿಕೆಯನ್ನು ಅದು ಕೆಳಕಂಡಂತಿದ್ದಾಗ ಚಾಲ್ತಿ ಎಂದು ವರ್ಗೀಕರಣ ಮಾಡಲಾಗಿರುತ್ತದೆ;

- ಅದು ಸಾಮಾನ್ಯ ಕಾರ್ಯಾಚರಣೆಯ ವಿಧಾನದಲ್ಲಿ ಇತ್ಯರ್ಥಗೊಳಿಸಲಾಗುವುದೆಂದು ನಿರೀಕ್ಷಿಸಿರುವುದು;
- ಅದನ್ನು ಪ್ರಧಾನವಾಗಿ ವಾಣಿಜ್ಯೋದ್ದೇಶಕ್ಕಾಗಿ ಹೊಂದಿರುವುದು.
- ವರದಿ ಅವಧಿಯ ನಂತರ 12 ತಿಂಗಳೊಳಗಾಗಿ ಇತ್ಯರ್ಥಗೊಳಿಸಬೇಕಾಬೇಕಾಗಿರುವುದು, ಅಥವಾ
- ವರದಿಯ ಅವಧಿಯ ನಂತರ ಕನಿಷ್ಠ 12 ತಿಂಗಳವರೆಗೆ ಹೊಣೆಗಾರಿಕೆಯ ಇತ್ಯರ್ಥವನ್ನು ಮುಂದೂಡಲು ಬೇಷರತ್ ಹಕ್ಕು ಇಲ್ಲದಿರುವುದು.

(iv) ಇನ್ನುಳಿದ ಎಲ್ಲ ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಎಂದು ವರ್ಗೀಕರಣ ಮಾಡಲಾಗಿದೆ.

(v) ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿಯೇತರ ಆಸ್ತಿಗಳು ಮತ್ತು ಹೊಣೆಗಾರಿಕೆಗಳೆಂದು ವರ್ಗೀಕರಿಸಲಾಗಿದೆ.

ಕಂಪನಿ ತನ್ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಚಾಲ್ತಿ ಮತ್ತು ಚಾಲ್ತಿಯೇತರ ಆಸ್ತಿಗಳೆಂದು ವರ್ಗೀಕರಣ ಮಾಡುವ ಉದ್ದೇಶದಿಂದ ಕಾರ್ಯಾಚರಣೆ ಆವರ್ತನವನ್ನು ಒಂದು ವರ್ಷ ಎಂದು ದೃಢೀಕರಿಸಿದೆ. ಇದನ್ನು ಸೇವೆಯ ಸ್ವರೂಪ ಮತ್ತು ಅಭಿವೃದ್ಧಿಯ ಉದ್ದೇಶಕ್ಕಾಗಿ ಆಸ್ತಿಯ ಸ್ವಾಧೀನಪಡಿಸಿಕೊಳ್ಳಲಾದ ಹಾಗೂ ಅವುಗಳಿಂದ ಲಭ್ಯವಾಗ ಬಹುದಾದ ನಗದು ಅಥವಾ ನಗದು ಸಮಾನಗಳ ನಡುವಿನ ಸಮಯಗಳ ಆಧಾರದ ಮೇಲೆ ಮಾಡಲಾಗಿದೆ. ಚಿಟ್ ವ್ಯವಹಾರದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು ಇದರಲ್ಲಿ ಸೇರಿರುವುದಿಲ್ಲ. ಇದರ ಆವರ್ತನ ಅದರ ಅವಧಿ ಮೇಲೆ ಆಧಾರಿತವಾಗಿದೆ. 40 ತಿಂಗಳುಗಳನ್ನು ಅದರ ಆವರ್ತನವೆಂದು ಪರಿಗಣಿಸಿದೆ. ಇದು ಅತ್ಯಂತ ಜನಪ್ರಿಯ ಚಿಟ್ ಅವಧಿಯಾಗಿರುವುದು.

### ಬಿ. ವಿದೇಶಿ ಕರೆನ್ಸಿ ವಹಿವಾಟು: ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿ:

ಗ್ರೂಪ್‌ನ ಕಾರ್ಯಾಚರಣೆ ಮತ್ತು ನಿರೂಪಣೆ ಕರೆನ್ಸಿಯು ಭಾರತೀಯ ರೂಪಾಯಿ ಆಗಿರುವುದು. ವಿದೇಶಿ ಕರೆನ್ಸಿಗಳಲ್ಲಿನ ವ್ಯವಹಾರಗಳನ್ನು ವ್ಯವಹಾರವು ಪರಿಗಣನೆಗೆ ಮೊದಲು ಅರ್ಹವಾಗುವ ದಿನಾಂಕದಂದು ಇರುವ ಗ್ರೂಪ್‌ನ ಕಾರ್ಯಾಚರಣೆ ಕರೆನ್ಸಿ ಸ್ಥಳದ ದರಗಳಲ್ಲಿ ಪ್ರಾರಂಭಿಕವಾಗಿ ದಾಖಲಿಸಲಾಗಿದೆ.

ವಿದೇಶಿ ಕರೆನ್ಸಿಗಳಲ್ಲಿ ತಿಳಿಸಿರುವ ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವರದಿಯ ದಿನಾಂಕದಲ್ಲಿದ್ದ ವಿನಿಮಯದ ಸ್ಥಳದಲ್ಲಿನ ಕಾರ್ಯಾಚರಣೆ ಕರೆನ್ಸಿ ದರಗಳಲ್ಲಿ ಪರಿವರ್ತನೆ ಮಾಡಿದೆ. ವರ್ಷಾಂತ್ಯದ ವಿನಿಮಯ ದರದಲ್ಲಿ ಅಂತಹ ವ್ಯವಹಾರಗಳನ್ನು ಇತ್ಯರ್ಥಪಡಿಸಿದಾಗ ಮತ್ತು ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವಿದೇಶಿ ಕರೆನ್ಸಿಗಳಲ್ಲಿ ಲೆಕ್ಕ ಹಾಕಿರುವುದನ್ನು ಪರಿವರ್ತನೆ ಮಾಡಿದಾಗ, ಉಂಟಾಗುವ ವ್ಯತ್ಯಾಸಗಳನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ. ಅವು ಅರ್ಹತೆ ಹೊಂದಿದ ನಗದು ಹರಿವಿನ ಪರಿಗಣನೆಗೆ ಸಂಬಂಧಿಸಿದ್ದರೆ ಅವುಗಳನ್ನು ಈಕ್ವಿಟಿಯಲ್ಲಿ ಮುಂದೂಡಿದೆ.

ಹಣಕಾಸೇತರ ಐಟಂಗಳನ್ನು ವಿದೇಶಿ ಕರೆನ್ಸಿಯಲ್ಲಿನ ಐತಿಹಾಸಿಕ ಬೆಲೆಯಲ್ಲಿ ಮಾಪನ ಮಾಡಿದ್ದರೆ ಅವುಗಳನ್ನು ಪ್ರಾರಂಭಿಕ ವ್ಯವಹಾರಗಳ ದಿನಾಂಕಗಳಲ್ಲಿ ವಿನಿಮಯ ದರಗಳನ್ನು ಬಳಸಿ ಪರಿವರ್ತನೆ ಮಾಡಲಾಗಿದೆ. ವಿದೇಶಿ ಕರೆನ್ಸಿಯಲ್ಲಿನ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಹಣಕಾಸೇತರ ಐಟಂಗಳನ್ನು ನ್ಯಾಯೋಚಿತ ಮೌಲ್ಯ ನಿರ್ಧರಣೆ ಮಾಡಿದಾಗಿನ ದಿನಾಂಕದಲ್ಲಿನ ವಿನಿಮ ದರಗಳನ್ನು ಬಳಸಿ ಪರಿವರ್ತಿಸಲಾಗಿದೆ. ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದ ಹಣಕಾಸೇತರ ಐಟಂಗಳ ಪರಿವರ್ತನೆಯಲ್ಲಿ ಉಂಟಾಗುವ ಲಾಭ ಅಥವಾ ನಷ್ಟವನ್ನು ಐಟಂನ ನ್ಯಾಯೋಚಿತ ಮೌಲ್ಯದಲ್ಲಿ ಬದಲಾವಣೆ ಮಾಡಿದಾಗ ಉಂಟಾದ ಲಾಭ ಅಥವಾ ನಷ್ಟವನ್ನು ಮಾನ್ಯ ಮಾಡುವ ರೀತಿಯಲ್ಲಿ ಪರಿಗಣಿಸಿದೆ (ಅಂದರೆ ಯಾವುದರ ನ್ಯಾಯೋಚಿತ ಮೌಲ್ಯದಲ್ಲಿನ ಲಾಭ ಅಥವಾ ನಷ್ಟವನ್ನು ಒಸಿಐನಲ್ಲಿ ಅಥವಾ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಲಾಗಿದೆಯೋ ಅವುಗಳ ಪರಿವರ್ತನೆ ವ್ಯತ್ಯಾಸಗಳನ್ನು ಸಹ ಅನುಕ್ರಮವಾಗಿ ಒಸಿಐ ಅಥವಾ ಲಾಭ ಅಥವಾ ನಷ್ಟದಲ್ಲಿ ಕೂಡ ಮಾನ್ಯ ಮಾಡಿದೆ.)

### ಸಿ) ಆದಾಯ ಗುರುತಿಸುವಿಕೆ:

ಗ್ರೂಪ್ ತನ್ನ ಸ್ವತಂತ್ರ ಹಣಕಾಸು ಹೇಳಿಕೆಗಳನ್ನು ರೂಪಿಸುವಾಗ ಕೆಳಕಂಡ ಲೆಕ್ಕ ನಿರ್ವಹಣಾ ನೀತಿಯನ್ನು ಅನುಸರಿಸಿದೆ:

#### ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯ

ಗ್ರೂಪ್ ಐಎನ್‌ಡಿ ಎಎಸ್ 115ರಲ್ಲಿ ಗೊತ್ತುಪಡಿಸಲಾದ ಕೆಳಕಂಡ 5 ಹಂತಗಳ ಮಾದರಿಯನ್ನು ಆಧರಿಸಿ ಗ್ರಾಹಕರೊಂದಿಗಿನ ಗುತ್ತಿಗೆಗಳಿಂದ ಬಂದ ಆದಾಯವನ್ನು ಮಾನ್ಯ ಮಾಡಿದೆ:

ಹಂತ:1 ಗ್ರಾಹಕರೊಂದಿಗಿನ ಗುತ್ತಿಗೆ (ಗಳು) ಯನ್ನು ಗುರುತಿಸುವುದು: ಒಂದು ಗುತ್ತಿಗೆಯನ್ನು ಇಬ್ಬರು ಅಥವಾ ಅದಕ್ಕೂ ಹೆಚ್ಚಿನ ವ್ಯಕ್ತಿಗಳ ನಡುವೆ ಉಂಟಾದ ಒಪ್ಪಂದವೆಂದು ನಿರೂಪಿಸಿದ್ದು, ಅದು ಜಾರಿಗೊಳಿಸಬಹುದಾದ ಹಕ್ಕು ಮತ್ತು ಬಾಧ್ಯತೆಗಳನ್ನು ಸೃಜಿಸುತ್ತದೆ ಮತ್ತು ಪ್ರತಿಯೊಂದು ಗುತ್ತಿಗೆಯು ಪೂರೈಸಬೇಕಾಗಿರುವ ಅರ್ಹತೆ,

ಮಾನದಂಡವನ್ನು ರೂಪಿಸುತ್ತದೆ ಎಂದು ವ್ಯಾಖ್ಯಾನಿಸಲಾಗಿದೆ.

ಹಂತ:2– ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ದಕ್ಷತೆಗಳನ್ನು ಗುರುತಿಸುವುದು: ಒಂದು ಕಾರ್ಯ ನಿರ್ವಹಣಾ ದಕ್ಷತೆ ಬಾಧ್ಯತೆಯು ಗ್ರಾಹಕರೊಂದಿಗಿನ ಒಂದು ಗುತ್ತಿಗೆಯಲ್ಲಿ ಸರಕು ಅಥವಾ ಸೇವೆಯನ್ನು ಗ್ರಾಹಕರಿಗೆ ವರ್ಗಾವಣೆ ಮಾಡುವುದಾಗಿ ಆಶ್ವಾಸನೆ ಇರುವುದು.

ಹಂತ: 3 – ವಹಿವಾಟಿನ ಬೆಲೆ ನಿರ್ಧರಣೆ: ವ್ಯವಹಾರದ ಬೆಲೆಯು ತಾನು ವಚನವಿತ್ತಂತೆ ಗ್ರಾಹಕರಿಗೆ ವರ್ಗಾವಣೆ ಮಾಡುವ ಸರಕುಗಳು ಅಥವಾ ಸೇವೆಗೆ ವಿನಿಮಯವಾಗಿ ಗ್ರೂಪ್ ಪಡೆಯಲರ್ಹವಾದುದೆಂದು ಪರಿಗಣಿಸುವ ಮೊತ್ತವಾಗಿರುತ್ತದೆ. ಇದು ಮೂರನೇ ವ್ಯಕ್ತಿಯ ಪರವಾಗಿ ಪಡೆದ ಮೊತ್ತವನ್ನು ಹೊರತುಪಡಿಸಿರುತ್ತದೆ.

ಹಂತ: 4– ಗುತ್ತಿಗೆಯಲ್ಲಿ ಕಾರ್ಯನಿರ್ವಹಣಾ ಬಾಧ್ಯತೆಗೆ ಹಂಚಿಕೆ ಮಾಡಲಾದ ವಹಿವಾಟು ಬೆಲೆ: ಒಂದು ಗುತ್ತಿಗೆಯಲ್ಲಿ ಒಂದಕ್ಕಿಂತ ಹೆಚ್ಚು ಕಾರ್ಯನಿರ್ವಹಣಾ ಬಾಧ್ಯತೆ ಇದ್ದಲ್ಲಿ, ಗ್ರೂಪ್ ತಾನು ತೃಪ್ತಿಕರವಾಗಿ ನಿರ್ವಹಿಸುವ ಪ್ರತಿ ಕಾರ್ಯ ನಿರ್ವಹಣಾ ಬಾಧ್ಯತೆಗೆ ವಿನಿಮಯವಾಗಿ ಪಡೆಯಲರ್ಹವೆಂದು ಪರಿಗಣಿಸುವ ಮೊತ್ತದಲ್ಲಿ ಪ್ರತಿ ಕಾರ್ಯನಿರ್ವಹಣಾ ಬಾಧ್ಯತೆಗೆ ವಹಿವಾಟು ಬೆಲೆಯನ್ನು ಹಂಚಿಕೆ ಮಾಡುವುದು.

ಹಂತ: 5– ಸಂಸ್ಥೆಯು ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಕರವಾಗಿ ಪೂರೈಸಿದಾಗ ಆದಾಯವನ್ನು ಮಾನ್ಯ ಮಾಡುವುದು:

ಕೆಳಕಂಡ ಯಾವುದಾದರೊಂದು ಮಾನದಂಡವನ್ನು ಪೂರೈಸಿದಲ್ಲಿ ಗ್ರೂಪ್ ಕಾರ್ಯನಿರ್ವಹಣಾ ಬಾಧ್ಯತೆಯನ್ನು ತೃಪ್ತಿಪಡಿಸುವುದು ಮತ್ತು ಕಾಲಾಂತರದಲ್ಲಿ ಆದಾಯವನ್ನು ಮಾನ್ಯ ಮಾಡುತ್ತದೆ:

(1) ಗ್ರೂಪ್ ನಿರ್ವಹಿಸುತ್ತಾ ಪೂರೈಸಿದ ಕಾರ್ಯನಿರ್ವಹಣೆಯಿಂದ ಗ್ರಾಹಕನು ಪ್ರಯೋಜನ ಬಳಸಿಕೊಳ್ಳುವುದು ಮತ್ತು ಉಪಯೋಗವನ್ನು ಏಕಕಾಲಕ್ಕೆ ಬಳಸಿಕೊಳ್ಳುವುದು ಅಥವಾ

(2) ಗ್ರೂಪ್‌ನ ಕಾರ್ಯನಿರ್ವಹಣೆಯು ಗ್ರಾಹಕನಿಗೆ ಆಸ್ತಿ ಸೃಜಿಸುವುದು ಅಥವಾ ಗ್ರಾಹಕನ ನಿಯಂತ್ರಣದಲ್ಲಿರುವ ಆಸ್ತಿಯನ್ನು ಹೆಚ್ಚಿಸುವುದು. ಅದು ಆಸ್ತಿಯ ಸೃಷ್ಟಿ ಅಥವಾ ವೃದ್ಧಿ ಎಂದು ಪರಿಗಣಿತ ಅಥವಾ

(3) ಗ್ರೂಪ್‌ನ ಕಾರ್ಯನಿರ್ವಹಣೆಯು ಗ್ರೂಪ್‌ನ ಪರ್ಯಾಯ ಬಳಕೆಯಾಗಿ ಒಂದು ಆಸ್ತಿಯನ್ನು ಸೃಜಿಸದಿದ್ದರೆ ಮತ್ತು ಸಂಸ್ಥೆಯು ಕಾರ್ಯನಿರ್ವಹಣೆ ಪೂರ್ಣಗೊಂಡ ದಿನಾಂಕಕ್ಕೆ ಹಣ ಪಾವತಿಗೆ ಜಾರಿಗೊಳಿಸಬೇಕಾದ ಹಕ್ಕು ಹೊಂದಿದ್ದರೆ.

ಮೇಲೆ ತಿಳಿಸಿರುವ ಷರತ್ತುಗಳಲ್ಲಿ ಒಂದನ್ನು ಈಡೇರಿಸದಿದ್ದರೆ ಕಾರ್ಯಕ್ಷಮತೆ ಬಾಧ್ಯತೆಗಳಿಗೆ, ಕಾರ್ಯಕ್ಷಮತೆ ಬಾಧ್ಯತೆ ಈಡೇರಿಸಿದ ಸಮಯದಲ್ಲಿ ಆದಾಯ ಗುರುತಿಸಿದೆ.

ಕಂಪನಿಯು ಆಶ್ವಾಸನೆ ನೀಡಿದ ಸರಕುಗಳು ಅಥವಾ ಸೇವೆಗಳನ್ನು ಪೂರೈಸುವ ಮೂಲಕ ಕಾರ್ಯಕ್ಷಮತೆ ಬಾಧ್ಯತೆಯನ್ನು ತೃಪ್ತಿಪಡಿಸಿದಾಗ, ಕಾರ್ಯಕ್ಷಮತೆಯಿಂದ ಗಳಿಸಿದ ಹಣದ ಮೊತ್ತದ ಆಧಾರದ ಮೇಲೆ ಗುತ್ತಿಗೆ ಆಸ್ತಿ ಒಂದನ್ನು ಸೃಜಿಸುವುದು. ಗ್ರಾಹಕರಿಂದ ಪಡೆದಿರುವ ಹಣದ ಮೊತ್ತ ಮಾನ್ಯ ಮಾಡಿದ ಆದಾಯದ ಮೊತ್ತಕ್ಕಿಂತ ಹೆಚ್ಚಿದ್ದರೆ ಅದು ಗುತ್ತಿಗೆ ಹೊಣೆಗಾರಿಕೆ ಉಂಟು ಮಾಡುತ್ತದೆ.

ಪಾವತಿಯ ಒಪ್ಪಂದದ ಪ್ರತಿಪಾದಿತ ನಿಯಮಗಳನ್ನು ಗಮನಕ್ಕೆ ತೆಗೆದುಕೊಂಡು ಮತ್ತು ತೆರಿಗೆಗಳು ಮತ್ತು ಸುಂಕ ಹೊರತುಪಡಿಸಿ, ಪಡೆದಿರುವ ಅಥವಾ ಪಡೆಯಬಹುದಾಗಿರುವ ಹಣದ ನ್ಯಾಯೋಚಿತ ಮೌಲ್ಯದಲ್ಲಿ ಆದಾಯವನ್ನು ಮಾಪನ ಮಾಡಿದೆ.

ಗ್ರಾಹಕರಿಗೆ ಆಶ್ವಾಸನೆ ನೀಡಿದ ಸರಕುಗಳು ಮತ್ತು ಸೇವೆಗಳನ್ನು ವರ್ಗಾಯಿಸಿದ ಮತ್ತು ಗ್ರಾಹಕರು ಮಾಡಿದ ಪಾವತಿ ನಡುವಿನ ಅವಧಿ ಒಂದು ವರ್ಷಕ್ಕಿಂತ ಮೀರಿರುವ ಸಂದರ್ಭದಲ್ಲಿ ಗ್ರೂಪ್ ಯಾವುದೇ ಗುತ್ತಿಗೆಗಳನ್ನು ಹೊಂದಲು ನಿರೀಕ್ಷಿಸುವುದಿಲ್ಲ. ಇದರ ಪರಿಣಾಮವಾಗಿ, ಅದು ಯಾವುದೇ ವ್ಯವಹಾರದ ಬೆಲೆಗಳನ್ನು ಹಣದ ಸಮಯದ ಮೌಲ್ಯಕ್ಕೆ ಹೊಂದಾಣಿಕೆ ಮಾಡುವುದಿಲ್ಲ.

### ಬಾಡಿಗೆ ಆದಾಯ:

ಬೆಲೆ ಏರಿಕೆ ಪರಿಣಾಮ ಬಿಂಬಿಸುವ ಹೆಚ್ಚಳದ ಗುತ್ತಿಗೆ ಪ್ರಕರಣ ಹೊರತಾಗಿ, ಹೂಡಿಕೆ ಸ್ವತ್ತುಗಳ ಮೇಲಿನ ಕಾರ್ಯಾಚರಣೆ ಗುತ್ತಿಗೆಗಳಿಂದ ಉಂಟಾಗುವ ಬಾಡಿಗೆ ಆದಾಯವನ್ನು ಗುತ್ತಿಗೆ ಅವಧಿಗಳಲ್ಲಿ ನೇರ ಮಾರ್ಗದ ಆಧಾರದ ಮೇಲೆ ಲೆಕ್ಕಚಾರ ಮಾಡಿದೆ. ಹೆಚ್ಚಳವಾದ ಗುತ್ತಿಗೆ ಸಂಬಂಧದಲ್ಲಿ ಬಾಡಿಗೆ ಆದಾಯವನ್ನು ಆ ಅವಧಿಯ ವಾಸ್ತವಿಕ ಬಾಡಿಗೆಯಂತೆ ಲೆಕ್ಕ ಮಾಡಿದೆ.

### ವಿಮೆ ಕ್ಲೇಮುಗಳು:

ವಿಮೆ ಕ್ಲೇಮ್‌ಗಳನ್ನು ಅವುಗಳ ಅಂತಿಮ ಸಂಗ್ರಹಣೆಯ ಬಗ್ಗೆ ಗ್ರೂಪ್ ಸೂಕ್ತವಾದ ಖಚಿತತೆ ಹೊಂದಿರುವ ಪ್ರಮಾಣದವರೆಗೆ ಲೆಕ್ಕಾಚಾರ ಮಾಡಿದೆ.

### ಲಾಭಾಂಶದ ಆದಾಯ

ಲಾಭಾಂಶದಿಂದ ಬರುವ ಆದಾಯವನ್ನು ಕಂಪನಿ ಪಾವತಿಯನ್ನು ಸ್ವೀಕರಿಸುವ ಹಕ್ಕನ್ನು ಸ್ಥಾಪಿಸಿದಾಗ ಮಾನ್ಯ ಮಾಡಲಾಗಿದೆ. ಲಾಭಾಂಶದ ಜೊತೆಗೆ ಸಂಯೋಜನೆಗೊಂಡ ಆರ್ಥಿಕ ಸೌಲಭ್ಯಗಳು ಗ್ರೂಪ್‌ನ ಬರುವುದು ಮತ್ತು ಲಾಭಾಂಶದ ಮೊತ್ತವನ್ನು ವಿಶ್ವಾಸಾರ್ಹವಾಗಿ ಲೆಕ್ಕ ಹಾಕಲಾಗುವುದು.

### ಬಡ್ಡಿ ಆದಾಯ:

ಹಣಕಾಸಿನ ಆಸ್ತಿಯಿಂದ ಬಂದ ಬಡ್ಡಿ ಆದಾಯವನ್ನು ಆರ್ಥಿಕ ಅನುಕೂಲಗಳು ಗ್ರೂಪ್‌ಗೆ ಬರುವ ಸಾಧ್ಯತೆ ಇರುವಾಗ ಮಾನ್ಯ ಮಾಡಿದೆ ಮತ್ತು ಆದಾಯದ ಮೊತ್ತವನ್ನು ವಿಶ್ವಾಸಾರ್ಹವಾಗಿ

MSIL

ಮಾಪನ ಮಾಡಲಾಗುವುದು. ಪಾವತಿಯಾಗದೆ ಬಾಕಿಯಿರುವ ಅಸಲಿನ ಸಂಬಂಧ ಅನ್ವಯವಾಗುವ ಬಡ್ಡಿದರವನ್ನು ವಿಧಿಸುವ ಮೂಲಕ ಬಡ್ಡಿಯು ಸಮಯದ ಅನುಪಾತದ ಆಧಾರದ ಮೇಲೆ ಸಂಚಯನವಾಗುವುದು. ಹಣಕಾಸಿನ ಆಸ್ತಿಯ ನಿವ್ವಳ ವಾಹಕ ಮೊತ್ತಕ್ಕೆ ಸೂಕ್ತವಾಗುವಲ್ಲಿ ಹಣಕಾಸಿನ ಸಾಧನದ ನಿರೀಕ್ಷಿತ ಜೀವಿತಾವಧಿಯಲ್ಲಿ ಅಥವಾ ಅಲ್ಪಕಾಲಿಕ ಅವಧಿಯಲ್ಲಿ ಅಂದಾಜು ಮಾಡಿದ ಮುಂದಿನ ನಗದು ಸ್ವೀಕಾರದ ನಿಖರವಾದ ರಿಯಾಯಿತಿಗಳ ದರವು ಇಪಿಆರ್ ಆಗಿರುವುದು. ಅನ್ವಯವಾಗುವ ಬಡ್ಡಿ ದರ ಲೆಕ್ಕಾಚಾರ ಮಾಡುವಾಗ ಹಣಕಾಸಿನ ಸಾಧನಗಳ (ಉದಾಹರಣೆಗೆ ಪೂರ್ವ ಪಾವತಿ, ವಿಸ್ತರಣೆ, ಕಾಲ್ ಮತ್ತು ಇದೇ ರೀತಿಯ ಆಯ್ಕೆಗಳು) ಒಪ್ಪಂದವಾದ ಎಲ್ಲಾ ನಿಯಮಗಳನ್ನು ಪರಿಗಣಿಸುವ ಮೂಲಕ ಗ್ರೂಪ್ ನಿರೀಕ್ಷಿತ ನಗದು ಹರಿವುಗಳನ್ನು ಅಂದಾಜು ಮಾಡುವುದು. ಆದರೆ ನಿರೀಕ್ಷಿತ ಕ್ರೆಡಿಟ್ ನಷ್ಟಗಳನ್ನು ಪರಿಗಣಿಸುವುದಿಲ್ಲ. ಬಡ್ಡಿ ಆದಾಯವು ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿನ ಇತರೆ ಆದಾಯದಲ್ಲಿ ಸೇರ್ಪಡೆಯಾಗಿದೆ.

ಅಂತಿಮ ವಸೂಲಿಯು ಸಂದೇಹಾಸ್ಪದವಾಗಿರುವ ವಿಚಾರಗಳಲ್ಲಿ ಮತ್ತು ಕೆಳಗೆ ಪಟ್ಟಿ ಮಾಡಿರುವ ವಿಷಯಗಳನ್ನು ಹೊರತುಪಡಿಸಿ ವಿಳಂಬವಾಗಿ ಸ್ವೀಕಾರಗಳು, ರದ್ದುಪಡಿಸಿದ/ಮುಟ್ಟುಗೋಲು ಹಾಕಿಕೊಂಡ ಆದಾಯ ಮತ್ತು ಗ್ರಾಹಕರುಗಳಿಂದ ಪಡೆದ ವರ್ಗಾವಣೆ ಶುಲ್ಕಗಳ ಮೇಲಿನ ಬಡ್ಡಿಯನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ:

**ನಗದು ಆಧಾರದ ಮೇಲೆ ಆದಾಯ ಪರಿಗಣನೆ:**

ವಿಶ್ವಾಸಾರ್ಹತೆಯು ಅನಿಶ್ಚಿತವಾಗಿರುವ ಕಾರಣ ನಗದು ಆಧಾರದ ಮೇಲೆ ಲೆಕ್ಕ ಮಾಡಲಾಗಿರುವ ಕೆಳಕಂಡ ಐಟಂಗಳು ಹೊರತಾಗಿ ಆದಾಯವನ್ನು ಸಂಚಯನ ಆಧಾರದ ಮೇಲೆ ಮಾನ್ಯ ಮಾಡಿದೆ.

(i) **ಚಿಟ್ ಕಾರ್ಯಾಚರಣೆಗಳು:** ಚಿಟ್ ಕಾರ್ಯಾಚರಣೆಗಳಿಂದ ಬಂದ ಎಲ್ಲಾ ವಾಹಿನಿಗಳ ಆದಾಯ ನಗದು ಆಧಾರದ ಮೇಲಿರುವುದು.

(ii) ಜಾರಿಯಲ್ಲಿರುವ ವಿದೇಶಿ ವ್ಯಾಪಾರ ನೀತಿಯ ವಿವಿಧ ಪ್ರವರ್ಧನೆ ಯೋಜನೆಗಳ ಅಡಿಯಲ್ಲಿನ ಸುಂಕದ ಕ್ರೆಡಿಟ್/ವಿನಾಯಿತಿ ತೆರಿಗೆ ಕ್ರೆಡಿಟ್, ಮತ್ತು ಆದಾಯ ತೆರಿಗೆಗೆ/ಸೇವಾ ತೆರಿಗೆ/ಮಾರಾಟ ತೆರಿಗೆ/ವ್ಯಾಟ್/ಜಿಎಸ್‌ಟಿ ಮತ್ತು ಇದರ ಮೇಲಿನ ಬಡ್ಡಿ ಇತ್ಯಾದಿಯ ಮರುಪಾವತಿ.

(iii) ವಸೂಲಾಗುವುದು ವಿಳಂಬವಾದುದರ ಮೇಲಿನ ಬಡ್ಡಿ.

(iv) ಸರಬರಾಜುದಾರರು/ಹೊಣೆಗಾರರುಗಳಲ್ಲಿನ ದ್ರವೀಕೃತ ಹಾನಿಗಳು ಆದಾಯದ ಇತರೆ ಐಟಂಗಳನ್ನು ಸ್ವೀಕರಿಸುವ ಹಕ್ಕು ಉಂಟಾದಾಗ ಮಾನ್ಯ ಮಾಡಿದೆ.

**ಡಿ) ಸರಕುಗಳ ತಪಶೀಲು:**

ಸರಕುಗಳ ತಪಶೀಲನ್ನು ಅನುಪಯುಕ್ತ ಮತ್ತು ಉಪ ಉತ್ಪನ್ನಗಳ ಹೊರತಾಗಿ ಉಳಿದವುಗಳಿಗೆ ಕಡಿಮೆ ಬೆಲೆಯಲ್ಲಿ ಮತ್ತು ನಿವ್ವಳ ನಗದಾಗುವ ಮೌಲ್ಯದಲ್ಲಿ ಮೌಲ್ಯ ನಿರ್ಣಯ ಮಾಡಿದೆ. ಅನುಪಯುಕ್ತ ಮತ್ತು ಉಪ ಉತ್ಪನ್ನಗಳ ಬಗ್ಗೆ ನಿವ್ವಳ ನಗದಾಗುವ ಮೌಲ್ಯದಲ್ಲಿ ಮೌಲ್ಯ ನಿರ್ಣಯ ಮಾಡಿದೆ. ನಿವ್ವಳ ನಗದಾಗುವ ಮೌಲ್ಯವು ಪೂರ್ಣಗೊಳ್ಳುವಿಕೆಯ ಅಂದಾಜು ಮಾಡಿದ ವೆಚ್ಚ ಮತ್ತು ಮಾರಾಟ ಮಾಡಲು ಅಗತ್ಯವಾಗಿರುವ ಅಂದಾಜು ವೆಚ್ಚಗಳನ್ನು ಕಳೆದು, ವ್ಯವಹಾರದ ಸಾಮಾನ್ಯ ರೂಪದಲ್ಲಿನ ಮಾರಾಟದ ಅಂದಾಜು ಮಾಡಿದ ಬೆಲೆಯಾಗಿರುವುದು.

ಪ್ರತಿ ಉತ್ಪನ್ನವನ್ನು ಅದು ಪ್ರಸ್ತುತ ಇರುವ ಸ್ಥಳಕ್ಕೆ ಮತ್ತು ಸ್ಥಿತಿಗೆ ತರಲು ಉಂಟಾಗುವ ವೆಚ್ಚಗಳನ್ನು ಈ ಕೆಳಕಂಡಂತೆ ಲೆಕ್ಕ ಮಾಡಲಾಗಿದೆ:

(i) **ಕಚ್ಚಾ ಸಾಮಗ್ರಿಗಳು:** ಇದರ ಬೆಲೆಯಲ್ಲಿ ಖರೀದಿ ಬೆಲೆ ಮತ್ತು ಸರಕುಗಳನ್ನು ಅವುಗಳ ಪ್ರಸಕ್ತ ಸ್ಥಳಕ್ಕೆ ಮತ್ತು ಸ್ಥಿತಿಗೆ ತರಲು ಉಂಟಾದ ಇತರೆ ಖರ್ಚುಗಳೂ ಸೇರಿರುವವು. ಕಾಗದದ ವಿಭಾಗದಲ್ಲಿ ಬೆಲೆಯನ್ನು ತೂಕದ ಸರಾಸರಿ ಆಧಾರದಲ್ಲಿ ನಿರ್ಧರಣೆ ಮಾಡಿದೆ.

(ii) **ಸಿದ್ಧಪಡಿಸಿದ ಪದಾರ್ಥಗಳು ಮತ್ತು ಪ್ರಗತಿಯಲ್ಲಿರುವ ಕಾಮಗಾರಿ:** ಇದರ ಬೆಲೆಯಲ್ಲಿ ಸಾಮಾನ್ಯ ಕಾರ್ಯಾಚರಣೆ ಸಾಮರ್ಥ್ಯದ ಆಧಾರದ ಮೇಲೆ ತಯಾರಿಕೆಯ ಮೇಲ್ವೆಚ್ಚಗಳ ಒಂದು ಭಾಗ ಮತ್ತು ನೇರ ಸಾಮಗ್ರಿಗಳು ಮತ್ತು ಕೆಲಸಗಾರರ ವೆಚ್ಚ ಸೇರಿರುವುದು. ಆದರೆ ಸಾಲದ ವೆಚ್ಚಗಳು ಸೇರಿರುವುದಿಲ್ಲ. ಬೆಲೆಯನ್ನು ತೂಕದ ಸರಾಸರಿ ಆಧಾರದ ಮೇಲೆ ನಿರ್ಧರಿಸಿದೆ. ಕಾಗದ ವಿಭಾಗದ ಸಂಬಂಧದಲ್ಲಿ ಪರಿವರ್ತಕರಿಗೆ ನೀಡಿದ ಕಚ್ಚಾ ಸಾಮಗ್ರಿಗಳು ಮತ್ತು ಬಳಕೆ ವಸ್ತುಗಳನ್ನು ಪರಿವರ್ತಕರುಗಳಿಂದ ನೋಟ್ ಪುಸ್ತಕಗಳನ್ನು ಪಡೆದ ಸಮಯದಲ್ಲಿ ಮಾತ್ರ ಸಿದ್ಧಪಡಿಸಿದ ಸರಕುಗಳೆಂದು ಪರಿಗಣಿಸಿದೆ.

(iii) ಒಳಬರುವ ಸಾಗಾಣಿಕೆ ವಸ್ತುವನ್ನು ಮದ್ಯದ ದಾಸ್ತಾನಿನ ಮೌಲ್ಯಮಾಪನಕ್ಕೆ ಪರಿಗಣಿಸಿರುವುದಿಲ್ಲ ಮತ್ತು ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ವಿಧಿಸಿದೆ.

(iv) ಬಳಕೆಯಿಂದ ಹೊರತಾದ ಸರಕುಗಳು, ನಿಧಾನಗತಿಯ ಮಾರಾಟದ ಮತ್ತು ದೋಷಯುಕ್ತ ಸರಕುಗಳನ್ನು ಗುರುತಿಸಲಾಗಿದ್ದು, ಅವುಗಳನ್ನು ನಿವ್ವಳ ನಗದಾಗುವ ಮೌಲ್ಯದಲ್ಲಿ ಬರೆಯಲಾಗಿದೆ.

**ಇ) ಸ್ವತ್ತು, ಸ್ಥಾವರ ಮತ್ತು ಉಪಕರಣ(ಪಿಪಿಇ):**

**ಗುರುತಿಸುವಿಕೆ ಮತ್ತು ಮಾಪನ**

ಸ್ವತ್ತು, ಸ್ಥಾವರ ಮತ್ತು ಉಪಕರಣವನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದು ಬೆಲೆಯಲ್ಲಿ ಮಾಪನ ಮಾಡಲಾಗಿದೆ. ಈ ಬೆಲೆಯಲ್ಲಿ ಆಸ್ತಿಯ ಸ್ವಾಧೀನಕ್ಕೆ ನೇರವಾಗಿ ಅನ್ವಯಿಸಬಹುದಾದ ಖರ್ಚುಗಳೂ ಸೇರಿರುವವು. ಅರ್ಹತಾ ಆಸ್ತಿಗಳ ನಿರ್ಮಾಣಕ್ಕೆ ನೇರವಾಗಿ ಅನ್ವಯಿಸಬಹುದಾದ ಸಮಾನ್ಯ ಮತ್ತು ನಿರ್ದಿಷ್ಟ ಸಾಲದ ವೆಚ್ಚವನ್ನು ಬೆಲೆಯ ಭಾಗವಾಗಿ ಬಂಡವಾಳೀಕರಿಸಲಾಗಿದೆ.

## ಸವಕಳಿ ಮತ್ತು ಉಪಯುಕ್ತ ಜೀವಿತಾವಧಿ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಸವಕಳಿ/ಅಮಾರ್ಟೈಜೇಷನ್ ಅನ್ನು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಅವಧಿಯ ಅನುಸಾರ ನೇರ ಮಾರ್ಗದ ವಿಧಾನದಲ್ಲಿ ತಿಳಿಸಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಯ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಿದೆ ಮತ್ತು ಸೂಕ್ತವಾಗಿದ್ದಲ್ಲಿ ಅನುಗುಣವಾಗಿ ಹೊಂದಾಣಿಕೆ ಮಾಡಿದೆ.

| ವಿವರಗಳು | ಜೀವಿತಾವಧಿ-ವರ್ಷಗಳಲ್ಲಿ |
|---|---|
| ಕಟ್ಟಡ | 60 |
| ಅಗ್ನಿಶಾಮಕ ಉಪಕರಣ | 10 |
| ವಿದ್ಯುತ್ ಉಪಕರಣ | 10 |
| ಪೀಠೋಪಕರಣ ಮತ್ತು ಅಳವಡಿಕೆಗಳು | 10 |
| ವಾಹನಗಳು | 8 |
| ಪೀಠೋಪಕರಣ ಮತ್ತು ಅಳವಡಿಕೆಗಳು-ಮದ್ಯ | 5 |
| ನಿರ್ವಹಣೆ ಉಪಕರಣ | 5 |
| ತೂಕದ ಯಂತ್ರಗಳು | 5 |
| ಕಚೇರಿ ಉಪಕರಣ | 5 |
| ಕಂಪ್ಯೂಟರ್‌ಗಳು | 3 |
| ಗುತ್ತಿಗೆದಾರಿಕೆ ಆಸ್ತಿಗಳು | 3 |
| ಗುತ್ತಿಗೆದಾರಿಕೆ ಅಭಿವೃದ್ಧಿ | ಪ್ರಾಥಮಿಕ ಗುತ್ತಿಗೆ ಅವಧಿ ಯಲ್ಲಿ-ಜಮೀನಿಗೆ ಹೊರತಾಗಿ |

ವರ್ಷದ ಅವಧಿಯಲ್ಲಿ ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜನೆ ಮಾಡಿದ ಸ್ಥಿರಾಸ್ತಿಗಳ ಸವಕಳಿಯನ್ನು ಸೇರ್ಪಡೆ ಮಾಡಿದ/ವಿಲೇವಾರಿ ಮಾಡಿದ/ವಿಸರ್ಜಿಸಿದ ದಿನಾಂಕವನ್ನು ಗಣನೆಗೆ ತೆಗೆದುಕೊಂಡು ದಮಾಷ ಆಧಾರದ ಮೇಲೆ ತಿಳಿಸಲಾಗಿದೆ.

ಗ್ರೂಪ್ ತಾಂತ್ರಿಕ ಪರಿಣಿತರು ಮಾಡಿರುವ ತಾಂತ್ರಿಕ ನಿರ್ಧರಣೆ ಮತ್ತು ಆಡಳಿತ ಮಂಡಳಿ ಅಂದಾಜಿನ ಆಧಾರದ ಮೇಲೆ ಮದ್ಯದ ಮಾರಾಟ ಮಳಿಗೆಗಳಲ್ಲಿರುವ ಪೀಠೋಪಕರಣ ಮತ್ತು ಅಳವಡಿಕೆಗಳ ಅಂದಾಜು ಮಾಡಿದ ಜೀವಿತಾವಧಿ ಉಪಯುಕ್ತತೆಯಲ್ಲಿ ಸವಕಳಿ ಮಾಡಿದೆ. ಇದು ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ-II ರಲ್ಲಿ ನಿಗದಿಪಡಿಸಿರುವ ಉಪಯುಕ್ತತೆ ಜೀವಿತಾವಧಿಯಿಂದ ಭಿನ್ನವಾಗಿದೆ. ಸದರಿ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿಯು ಅವುಗಳನ್ನು ಬಳಸಲಿರುವ ಅವಧಿಯಲ್ಲಿ ವಾಸ್ತವಿಕವಾಗಿದ್ದು, ನ್ಯಾಯೋಚಿತ ಅಂದಾಜನ್ನು ಆಡಳಿತ ಮಂಡಳಿ ನಂಬುವುದು.

## ಅಮಾನ್ಯತೆ

ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಯಾವುದೇ ಬಾಬ್ತು ಅದರ ಮಹತ್ತರ ಭಾಗವು ಆರಂಭದಲ್ಲಿ ಮಾನ್ಯ ಮಾಡಿದ್ದನ್ನು ಅದರ ವಿಲೇವಾರಿ, ಅಥವಾ ಅದರ ಬಳಕೆಯಿಂದ ಅಥವಾ ವಿಲೇವಾರಿಯಿಂದ ಮುಂದೆ ಯಾವುದೇ ಆರ್ಥಿಕ ಲಾಭ ಇಲ್ಲ ಎಂದು ಪರಿಗಣಿಸಿದಾಗ ಅದನ್ನು ಅಮಾನ್ಯಗೊಂಡ ಬಾಬ್ತು ಎಂದು ಪರಿಗಣಿಸಲಾಗುವುದು. ಸ್ವತ್ತಿನ ಅಮಾನ್ಯೀಕರಣದಿಂದ ಉಂಟಾಗುವ ಯಾವುದೇ ಲಾಭ ಅಥವಾ ನಷ್ಟವನ್ನು (ಇದನ್ನು ನಿವ್ವಳ ವಿಲೇವಾರಿಯಿಂದ ಬರುವ ಮೊತ್ತ ಮತ್ತು ಸ್ವತ್ತು ಹೊಂದಿರುವ ಮೊತ್ತದ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಸ್ವತ್ತು ಅಮಾನ್ಯಗೊಂಡಾಗ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗುತ್ತದೆ.

## ಎಫ್) ಅಗೋಚರಿತ ಆಸ್ತಿಗಳು:

## ಮಾನ್ಯತೆ ಮತ್ತು ಮಾಪನ

ಪ್ರತ್ಯೇಕವಾಗಿ ಸ್ವಾಧೀನ ಮಾಡಿಕೊಂಡಿರುವ ಅಗೋಚರಿತ ಆಸ್ತಿ (ಸಾಫ್ಟ್‌ವೇರ್) ಗಳನ್ನು ಅವುಗಳ ಸ್ವಾಧೀನತೆಯ ವೆಚ್ಚದ ಬೆಲೆಯಲ್ಲಿ ಮಾಪನ ಮಾಡಿದೆ. ಬೆಲೆಯು ಖರೀದಿ ಬೆಲೆ, ಬಂಡವಾಳೀಕರಣ ಮಾನದಂಡವನ್ನು ಪೂರೈಸಿದ್ದಲ್ಲಿ ಸಾಲದ ವೆಚ್ಚ ಮತ್ತು ನೇರವಾಗಿ ಅನ್ವಯಿಸಬಹುದಾದ ಅಥವಾ ಕಾರಣೀಭೂತವಾಗಬಹುದಾದ ವೆಚ್ಚಗಳಾದ ಅಂದರೆ ಸ್ವತ್ತನ್ನು ಉದ್ದೇಶಿತ ಬಳಕೆಗಾಗಿ ಕಾರ್ಯ ನಿರ್ವಹಿಸುವ ಸ್ಥಿತಿಗೆ ತರಲು ತಗಲುವ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ವ್ಯಾಪಾರಿ ಕಡಿತ, ರಿಯಾಯಿತಿಗಳನ್ನು ಕಡಿತಗೊಳಿಸಿ ಖರೀದಿ ಬೆಲೆಯನ್ನು ಪರಿಗಣಿಸಿದೆ.

ಪ್ರಾರಂಭಿಕ ಮಾನ್ಯತೆ ಅನುಸರಿಸಿ ಅಗೋಚರಿತ ಆಸ್ತಿಗಳನ್ನು ಯಾವುದೇ ಸಂಚಯನವಾಗಿರುವ ಅಮಾರ್ಟೈಜೇಷನ್ ಮತ್ತು ಕ್ಷೀಣತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಪರಿಗಣಿಸಿದೆ.

ಬಂಡವಾಳೀಕರಣಗೊಂಡ ತಂತ್ರಾಂಶಗಳ ವೆಚ್ಚವನ್ನು ಅವುಗಳನ್ನು ಸ್ವಾಧೀನಗೊಳಿಸಿಕೊಂಡ ದಿನಾಂಕದಿಂದ ನೇರ ಮಾರ್ಗದ ವಿಧಾನದಿಂದ 6 ವರ್ಷಗಳ ಅವಧಿಯಲ್ಲಿ ಅಮಾರ್ಟೈಜೇಷನ್ ಮಾಡಲಾಗಿದೆ.

ಅಗೋಚರ ಆಸ್ತಿಯ ಅಮಾನ್ಯತೆಯಿಂದ ಉಂಟಾಗುವ ಲಾಭ ಅಥವಾ ನಷ್ಟಗಳನ್ನು ಸದರಿ ಆಸ್ತಿ ಹೊಂದಿರುವ ಮೊತ್ತ ಮತ್ತು ವಿಲೇವಾರಿಯಿಂದ ಲಭ್ಯವಾಗುವ ನಿವ್ವಳ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಮಾಪನ ಮಾಡಲಾಗುವುದು ಮತ್ತು ಆಸ್ತಿಯನ್ನು ಅಮಾನ್ಯಗೊಳಿಸಿದಾಗ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಲಾಗುವುದು.

ಅಗೋಚರಿತ ಆಸ್ತಿಗಳ ಉಳಿಕೆ ಮೌಲ್ಯ, ಉಪಯುಕ್ತ ಜೀವಿತಾವಧಿ ಮತ್ತು ಅಮಾರ್ಟೈಜೇಷನ್ ವಿಧಾನಗಳನ್ನು ಪ್ರತಿ ವರದಿ ಮಾಡುವ ದಿನಾಂಕದ ಕೊನೆಯಲ್ಲಿ ಪರಿಶೀಲಿಸಲಾಗುತ್ತದೆ ಮತ್ತು ಸೂಕ್ತವೆಂದು ಅನ್ನಿಸಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗುತ್ತದೆ.

MSIL

### ಜಿ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

ಪ್ರಗತಿಯಲ್ಲಿರುವ ಬಂಡವಾಳ ಹೂಡಿಕೆ ಕಾಮಗಾರಿಯನ್ನು ನಿರ್ಮಾಣದ ಅವಧಿಯಲ್ಲಿ ಮಾಡಿದ ವೆಚ್ಚ, ಅರ್ಹತಾ ಆಸ್ತಿಗಳ ಸ್ವಾಧೀನಕ್ಕಾಗಿ ತರಲಾದ ಸಾಲದ ಮೇಲಿನ ಬಡ್ಡಿ ಮತ್ತು ಸ್ವತ್ತಿನ ಬಳಕೆಯ ದಿನಾಂಕದ ಹಿಂದಿನ ಅವಧಿಯಲ್ಲಿ ಯೋಜನಾ ಅನುಷ್ಠಾನ ಸಂಬಂಧಿಸಿದ ಕಾರ್ಯಗಳಿಗಾಗಿ ಉಂಟಾದ ವೆಚ್ಚಗಳಲ್ಲಿ ತಿಳಿಸಲಾಗುತ್ತದೆ. ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕಕ್ಕೆ ಬಾಕಿಯಿದ್ದ ಪಿಪಿಇ ಖರೀದಿ/ಸ್ವಾಧೀನದ ಬಗ್ಗೆ ಕೊಟ್ಟಿರುವ ಬಂಡವಾಳ ಮುಂಗಡಗಳನ್ನು ಇತರ ಚಾಲ್ತಿಯೇತರ ಆಸ್ತಿಗಳೆಂದು ಪ್ರತ್ಯೇಕವಾಗಿ ನಮೂದಿಸಲಾಗಿದೆ.

### ಎಚ್. ಹೂಡಿಕೆ ಆಸ್ತಿ

ಹೂಡಿಕೆ ಆಸ್ತಿಗಳು, ಅಂದರೆ ಬಾಡಿಗೆ ಗಳಿಸಲು ಹೊಂದಿರುವ ಆಸ್ತಿಗಳು ಮತ್ತು / ಅಥವಾ ಬಂಡವಾಳ ವೃದ್ಧಿಗಾಗಿ (ಆ ಉದ್ದೇಶಕ್ಕಾಗಿ ನಿರ್ಮಾಣ ಹಂತದಲ್ಲಿರುವ ಆಸ್ತಿಯೂ ಸೇರಿದಂತೆ) ಇರುವ ಆಸ್ತಿಗಳು. ಹೂಡಿಕೆ ಆಸ್ತಿಗಳನ್ನು ಆರಂಭದಲ್ಲಿ ವ್ಯವಹಾರ ವೆಚ್ಚವೂ ಸೇರಿದಂತೆ ಒಟ್ಟು ವೆಚ್ಚದಲ್ಲಿ ಲೆಕ್ಕ ಹಾಕಲಾಗಿದೆ. ಬಾಡಿಗೆ ಗಳಿಸಲು ಕಾರ್ಯಾಚರಣೆಯಲ್ಲಿರುವ ಗುತ್ತಿಗೆಗಳಡಿ ಅಥವಾ ಬಂಡವಾಳ ವೃದ್ಧಿ ಉದ್ದೇಶಕ್ಕಾಗಿ ಹೊಂದಿರುವುವುಗಳನ್ನು ಹೂಡಿಕೆ ಆಸ್ತಿಗಳೆಂದು ಪರಿಗಣಿಸಲಾಗಿದೆ. ಆರಂಭದ ಮಾನ್ಯತೆಯ ನಂತರ ಗ್ರೂಪ್ ಹೂಡಿಕೆ ಆಸ್ತಿಯನ್ನು ತಗುಲಿದ ವೆಚ್ಚದಲ್ಲಿ ಮಾಪನ ಮಾಡುವುದು.

ಹೂಡಿಕೆ ಆಸ್ತಿಗಳನ್ನು ಅವುಗಳ ವಿಲೇವಾರಿ ಮೇರೆಗೆ ಅಥವಾ ಶಾಶ್ವತವಾಗಿ ಹೂಡಿಕೆ ಆಸ್ತಿಗಳನ್ನು ಬಳಕೆಯಿಂದ ಹಿಂಪಡೆದಾಗ ಮತ್ತು ವಿಲೇವಾರಿಯ ನಂತರ ಮುಂದೆ ಅದರಿಂದ ಯಾವುದೇ ಆರ್ಥಿಕ ಲಾಭ ಇಲ್ಲವೆಂದಾಗ ಅಮಾನ್ಯ ಮಾಡಲಾಗುತ್ತದೆ. ಅಮಾನ್ಯಗೊಂಡ ಆಸ್ತಿಯಿಂದ ಯಾವುದೇ ಲಾಭ ಅಥವಾ ನಷ್ಟಗಳನ್ನು (ಆಸ್ತಿ ಹೊಂದಿರುವ ಮೌಲ್ಯ ಮತ್ತು ಅದರ ವಿಲೇವಾರಿಯಿಂದ ಬಂದ ಮೊತ್ತಗಳ ನಡುವಿನ ವ್ಯತ್ಯಾಸದ ಮೂಲಕ ಲೆಕ್ಕ ಹಾಕಲಾಗುವುದು) ಆಸ್ತಿಯ ಅಮಾನ್ಯಗೊಳಿಸಿದ ವರ್ಷದ ಅವಧಿಗೆ ಸಂಬಂಧಿಸಿದ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸೇರಿಸಲಾಗಿದೆ.

ಹೂಡಿಕೆ ಆಸ್ತಿಗಳನ್ನು ಅವುಗಳು ಸೇರಿದ ಆಸ್ತಿಯ ವರ್ಗ ಮತ್ತು ಗ್ರೂಪ್‌ನ ಆ ವರ್ಗದ ಆಸ್ತಿಗಳಿಗೆ ಗೊತ್ತುಪಡಿಸಿದ ಜೀವಿತಾವಧಿ ಯನುಸಾರ ಸವಕಳಿಗೊಳಿಸಲಾಗಿದೆ. ಕಂಪನಿಗಳ ಕಾಯ್ದೆ, 2013ರ ಪರಿಚ್ಛೇದ – II ರಲ್ಲಿ ನಿರ್ದಿಷ್ಟಪಡಿಸಿರುವ ಆಸ್ತಿಯ ಉಪಯುಕ್ತತೆ ಜೀವಿತಾವಧಿ ಆಧಾರದ ಮೇಲೆ ನೇರ ಮಾರ್ಗದ ವಿಧಾನದಲ್ಲಿ ಸವಕಳಿ/ಅಮಾರ್ಟೈಜೇಷನ್ ಮಾಡಿದೆ. ಕಂಪನಿಗಳ ಕಾಯ್ದೆ 2013ರ ಪರಿಚ್ಛೇದ – IIರಲ್ಲಿ ನಿಗದಿಪಡಿಸಿರುವ ಸೂಚನಾತ್ಮಕ ಉಪಯುಕ್ತತೆ ಜೀವಿತಾವಧಿ ಅನ್ವಯ ಆಸ್ತಿಗಳ ಉಪಯುಕ್ತತೆ ಜೀವಿತಾವಧಿಯನ್ನು ಆಡಳಿತ ಮಂಡಳಿ ಅಂದಾಜು ಮಾಡುವುದು. ಉಳಿಕೆ ಮೌಲ್ಯಗಳು, ಉಪಯುಕ್ತತೆ ಜೀವಿತಾವಧಿ ಮತ್ತು ಸವಕಳಿ ಮಾಡುವ ವಿಧಾನವನ್ನು ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಪರಿಶೀಲಿಸಲಾಗುವುದು ಮತ್ತು ಸೂಕ್ತವಾಗಿದ್ದಲ್ಲಿ ಮುಂದಿನ ಅವಧಿಗೆ ಹೊಂದಾಣಿಕೆ ಮಾಡಲಾಗಿದೆ.

ಕಟ್ಟಡಗಳ ಅಂದಾಜು ಮಾಡಲಾದ ಉಪಯುಕ್ತತೆ ಜೀವಿತಾವಧಿ 60 ವರ್ಷಗಳು.

ಹೂಡಿಕೆ ಸ್ವತ್ತಿನ ನ್ಯಾಯೋಚಿತ ಮೌಲ್ಯವನ್ನು ಟಿಪ್ಪಣಿಗಳಲ್ಲಿ ತಿಳಿಸಿದೆ. ಮಾನ್ಯತೆ ಹೊಂದಿದ ಬಾಹ್ಯ ಸ್ವತಂತ್ರ ಮೌಲ್ಯಮಾಪಕರಿಂದ ಮಾಡಿದ ವಾರ್ಷಿಕ ಮೌಲ್ಯಮಾಪನದ ಆಧಾರದ ಮೇಲೆ ನ್ಯಾಯೋಚಿತ ಮೌಲ್ಯಗಳನ್ನು ನಿರ್ಧರಣೆ ಮಾಡಿದೆ.

### ಐ) ಹಣಕಾಸಿನ ವೆಚ್ಚಗಳು:

ಹಣಕಾಸಿನ ವೆಚ್ಚದಲ್ಲಿ ಗುತ್ತಿಗೆ ಮೇಲಿನ ಬಡ್ಡಿ ವೆಚ್ಚ ಮತ್ತು ಇತರೆ ಹಣಕಾಸಿನ ಹೊಣೆಗಾರಿಕೆಗಳು, ಬ್ಯಾಂಕ್ ಶುಲ್ಕಗಳು ಮತ್ತು ಖಾತರಿ ಕಮಿಷನ್ ಒಳಗೊಂಡಿರುವುದು. ಎಲ್ಲಾ ಹಣಕಾಸಿನ ವೆಚ್ಚಗಳನ್ನು ಅವು ಉಂಟಾದ ಅವಧಿಯಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

### ಜೆ) ನಗದು ಮತ್ತು ನಗದು ಸಮಾನಗಳು:

ಸ್ಥಿತಿ ವಿವರಣಾ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು, ಬ್ಯಾಂಕ್‌ಗಳಲ್ಲಿನ ನಗದು, ಕೈಯಲ್ಲಿರುವ ನಗದು ಮತ್ತು ಮೂಲತಃ 3 ತಿಂಗಳು ಅಥವಾ ಕಡಿಮೆ ಪಕ್ವತೆ ಅವಧಿಯ ಅಲ್ಪಾವಧಿ ಠೇವಣಿಗಳು ಒಳಗೊಂಡಿವೆ. ಈ ಠೇವಣಿಗಳು ಅವುಗಳ ಮೌಲ್ಯದಲ್ಲಿ ಯಾವುದೇ ಮಹತ್ತರ ಬದಲಾವಣೆಯಾಗದ ಅಪಾಯವಿಲ್ಲದಿರುವಿಕೆಗೆ ಒಳಪಟ್ಟಿರುತ್ತವೆ.

ನಗದು ಹರಿವಿನ ಹೇಳಿಕೆಯ ಉದ್ದೇಶಕ್ಕಾಗಿ, ನಗದು ಮತ್ತು ನಗದು ಸಮಾನತೆಗಳಲ್ಲಿ ಮೇಲೆ ಪ್ರತಿಪಾದಿಸಿರುವಂತೆ ನಗದು, ಅಲ್ಪಾವಧಿ ಠೇವಣಿಗಳು, ಗ್ರೂಪ್‌ನ ನಗದು ನಿರ್ವಹಣೆಯ ಅವಿಭಾಜ್ಯ ಭಾಗವೆಂದು ಪರಿಗಣಿಸಿರುವ ಬಾಕಿಯಿರುವ ಬ್ಯಾಂಕ್ ಓವರ್ ಡ್ರಾಫ್ಟ್‌ಗಳಿಗೆ ಹೊಂದಾಣಿಕೆ ಮಾಡಿರುವ ಮೌಲ್ಯದಲ್ಲಿ ಬದಲಾವಣೆಯ ಮಹತ್ತರವಲ್ಲದ ಅಪಾಯಕ್ಕೆ ಒಳಪಟ್ಟಿರುವ ಗೊತ್ತಿರುವ ನಗದಿನ ಮೊತ್ತಕ್ಕೆ ಸಿದ್ಧವಾಗಿ ಪರಿವರ್ತಿಸಬಹುದಾದ ಮೂರು ತಿಂಗಳು ಅಥವಾ ಅದಕ್ಕಿಂತ ಕಡಿಮೆ ಮೂಲ ಅವಧಿ ಮುಕ್ತಾಯ ಉಳ್ಳ ಇತರೆ ಅಲ್ಪಾವಧಿ ಯ ಮತ್ತು ಅತಿ ಹೆಚ್ಚಿನ ದ್ರವೀಕರಣದ ಹೂಡಿಕೆಗಳೂ ಸೇರಿರುವವು. ಬ್ಯಾಂಕ್ ಓವರ್ ಡ್ರಾಫ್ಟ್‌ಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಚಾಲ್ತಿ ಹೊಣೆಗಾರಿಕೆಗಳಲ್ಲಿನ ಸಾಲಗಳಲ್ಲಿ ತಿಳಿಸಿದೆ.

### ಕೆ) ಗುತ್ತಿಗೆಗಳು:

ಗ್ರೂಪ್ ಪ್ರತಿ ಗುತ್ತಿಗೆ ಅಥವಾ ವ್ಯವಸ್ಥೆಯನ್ನು ಅದು ಐಎನ್‌ಡಿ ಎಎಸ್ 116 ಅನ್ವಯ ಪ್ರತಿಪಾದಿಸಿರುವಂತೆ ಗುತ್ತಿಗೆ ಎಂಬುದಾಗಿ ಅರ್ಹತೆ ಪಡೆದಿರುವುದೇ ಎಂಬುದನ್ನು ಮೌಲ್ಯಮಾಪನ ಮಾಡುವುದು.

### ಗ್ರೂಪ್ ಗುತ್ತಿಗೆದಾರನಾಗಿ

ಕಂಪನಿಯು ಅಂಗಡಿಗಳು ಮತ್ತು ಕಚೇರಿಗಳನ್ನು ಗುತ್ತಿಗೆಗೆ ಪಡೆಯಲು ವ್ಯವಸ್ಥೆಯೊಂದನ್ನು ಮಾಡಿಕೊಳ್ಳುವುದು. ಅಂತಹ ವ್ಯವಸ್ಥೆಗಳು ಸಾಮಾನ್ಯವಾಗಿ ನಿಗದಿತ ಅವಧಿಯದಾಗಿರುವವು. ಆದರೆ ವಿಸ್ತರಣೆ ಅಥವಾ ರದ್ದತಿ ಆಯ್ಕೆಯನ್ನು ಹೊಂದಿರಬಹುದು. ಕಾಂಟ್ರಾಕ್ಟ್ ಅದರ ಪ್ರಾರಂಭದಲ್ಲಿ ಗುತ್ತಿಗೆಯನ್ನು ಹೊಂದಿರುವುದೇ ಎಂಬುದನ್ನು ಗ್ರೂಪ್ ನಿರ್ಧರಣೆ ಮಾಡುವುದು. ಕಾಂಟ್ರಾಕ್ಟ್ ಕೆಳಕಂಡವುಗಳಿಗೆ ಹಕ್ಕುಗಳನ್ನು ನೀಡುವುದಾಗಿದ್ದರೆ ಆಗ ಕಾಂಟ್ರಾಕ್ಟ್ ಗುತ್ತಿಗೆಯನ್ನು ಒಳಗೊಂಡಿರುತ್ತದೆ. -

ಎ) ಗುರುತಿಸಿದ ಆಸ್ತಿಯ ಬಳಕೆಯ ನಿಯಂತ್ರಣ

ಬಿ) ಗುರುತಿಸಿದ ಆಸ್ತಿಯ ಬಳಕೆಯಿಂದ ಬರುವ ಎಲ್ಲಾ ಆರ್ಥಿಕ ಅನುಕೂಲಗಳನ್ನು ಗಣನೀಯವಾಗಿ ಪಡೆಯುವುದು; ಮತ್ತು

ಸಿ) ಗುರುತಿಸಿದ ಆಸ್ತಿಯ ಬಳಕೆಯ ನಿರ್ದೇಶನ ನೀಡಿಕೆ.

ಗ್ರೂಪ್ ಗುತ್ತಿಗೆ ಅವಧಿಯನ್ನು ಗುತ್ತಿಗೆಯ ರದ್ದುಪಡಿಸಲಾಗದ ಅವಧಿಯಾಗಿ ನಿರ್ಧರಣೆ ಮಾಡುವುದು. ಇದರ ಜೊತೆ ಜೊತೆಗೆ ಕಂಪನಿಯು ತನ್ನ ಆಯ್ಕೆಯನ್ನು ಚಲಾಯಿಸಲು ಸಕಾರಣೀಯ ನಿಶ್ಚಿತತೆಯಿರುವುದರಿಂದ ಗುತ್ತಿಗೆಯನ್ನು ವಿಸ್ತರಣೆ ಮಾಡಲು ಆಯ್ಕೆ ಒಂದರಿಂದ ಅಂತಹ ವಿಸ್ತರಣೆ ಮಾಡಬಹುದಾದ ಅವಧಿಯನ್ನು ಒಳಪಡಿಸಬಹುದಾಗಿರುತ್ತದೆ.

ಕಂಪನಿ ಹನ್ನೆರಡು ತಿಂಗಳುಗಳಿಗೂ ಕಡಿಮೆ ಅವಧಿಯ ಗುತ್ತಿಗೆಗಳು (ಅಲ್ಪಾವಧಿ ಗುತ್ತಿಗೆಗಳು) ಮತ್ತು ಕಡಿಮೆ ಮೌಲ್ಯದ ಆಸ್ತಿಗಳು ಹೊರತಾಗಿ ಗುತ್ತಿಗೆ ಕಾಂಟ್ರಾಕ್ಟ್‌ನ ಪ್ರಾರಂಭದಲ್ಲಿ ಆಸ್ತಿಯನ್ನು ಅದರ ಬೆಲೆಯಲ್ಲಿ ಮತ್ತು ಸಂಬಂಧಪಟ್ಟ ಗುತ್ತಿಗೆ ಹೊಣೆಗಾರಿಕೆಯಂತೆ ಬಳಕೆ ಹಕ್ಕನ್ನು (ಆರ್‌ಒಯು) ಪರಿಗಣಿಸುವುದು. ಸದರಿ ಅಲ್ಪಾವಧಿಯ ಮತ್ತು ಕಡಿಮೆ ಮೌಲ್ಯದ ಗುತ್ತಿಗೆಗಳಿಗೆ, ಗ್ರೂಪ್ ಗುತ್ತಿಗೆ ಪಾವತಿಗಳನ್ನು ಗುತ್ತಿಗೆ ಅವಧಿಯಲ್ಲಿ ನೇರ ಮಾರ್ಗದ ಆಧಾರದ ಮೇಲೆ ಕಾರ್ಯಾಚರಣೆ ಖರ್ಚುಗಳಾಗಿ ಪರಿಗಣಿಸುವುದು.

ಬಳಕೆ ಹಕ್ಕಿನ ಆಸ್ತಿಯ ಬೆಲೆಯು ಗುತ್ತಿಗೆ ಬಾಧ್ಯತೆಯ ಪ್ರಾರಂಭಿಕ ಮಾಪನದ ಮೊತ್ತ , ಗುತ್ತಿಗೆ ಪ್ರಾರಂಭಿಕ ದಿನಾಂಕದಲ್ಲಿ ಅಥವಾ ಅದಕ್ಕೂ ಮುನ್ನ ಮಾಡಿದ ಯಾವುದೇ ಗುತ್ತಿಗೆ ಪಾವತಿಗಳು ಜೊತೆಗೆ ಯಾವುದೇ ಪ್ರಾರಂಭಿಕ ನೇರ ವೆಚ್ಚಗಳನ್ನು ಒಳಗೊಂಡಿರುತ್ತದೆ. ಯಾವುದೇ ಗುತ್ತಿಗೆ ಪ್ರೋತ್ಸಾಹ ಧನಗಳನ್ನು ಪಡೆದಿದ್ದರೆ ಅದನ್ನು ಇದರಲ್ಲಿ ಕಳೆದಿರುತ್ತದೆ. ತದನಂತರ ಬಳಕೆ ಹಕ್ಕಿನ ಆಸ್ತಿಗಳನ್ನು ಯಾವುದೇ ಸಂಚಯನವಾದ ಸವಕಳಿ ಮತ್ತು ಯಾವುದೇ ಸಂಚಯನವಾದ ದುರ್ಬಲತೆ ನಷ್ಟಗಳನ್ನು ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಬಳಕೆ ಹಕ್ಕಿನ ಆಸ್ತಿಗಳನ್ನು ಅತಿ ಕಡಿಮೆಯ ಗುತ್ತಿಗೆ ಅವಧಿಯಲ್ಲಿ ಅಥವಾ ಬಳಕೆ ಹಕ್ಕಿನ ಆಸ್ತಿಯ ಉಪಯುಕ್ತತೆ ಜೀವಿತಾವಧಿ ದಿನಾಂಕದಿಂದ ಪ್ರಾರಂಭಿಸಿ ನೇರ ಮಾರ್ಗದ ವಿಧಾನವನ್ನು ಬಳಸಿ ಸವಕಳಿ ಲೆಕ್ಕ ಹಾಕಲಾಗಿದೆ. ಬಳಕೆ ಹಕ್ಕಿನ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿಯನ್ನು ಸ್ವತ್ತು , ಸ್ಥಾವರ ಮತ್ತು ಉಪಕರಣಗಳ ಸಂಬಂಧ ಮಾಡಿದ ಅದೇ ಆಧಾರದಲ್ಲಿ ನಿರ್ಧರಣೆ ಮಾಡಲಾಗಿದೆ.

ಗ್ರೂಪ್ ಬಳಕೆ ಹಕ್ಕಿನ ಆಸ್ತಿಯು ದುರ್ಬಲಗೊಂಡಿರುವುದೇ ಎಂಬುದನ್ನು ನಿರ್ಧರಣೆ ಮಾಡಲು ಮತ್ತು ಕೆಳಕಂಡ ಹಣಕಾಸೇತರ ಆಸ್ತಿಗಳ ದುರ್ಬಲತೆಯಲ್ಲಿ ವಿವರಿಸಿರುವಂತೆ ಯಾವುದೇ ಗುರುತಿಸಿದ ದುರ್ಬಲತೆ ನಷ್ಟವನ್ನು ಲೆಕ್ಕ ಮಾಡಲು ಐಎನ್‌ಡಿ ಎಎಸ್ 36 ಅನ್ನು ಅನ್ವಯ ಮಾಡುವುದು.

ಗುತ್ತಿಗೆಯ ಪ್ರಾರಂಭದಲ್ಲಿನ ಗುತ್ತಿಗೆ ಬಾಧ್ಯತೆಗಳಿಗಾಗಿ, ಆ ದಿನಾಂಕದಲ್ಲಿ ಪಾವತಿ ಮಾಡಿರದ ಗುತ್ತಿಗೆ ಪಾವತಿಗಳ ಪ್ರಸಕ್ತದ ಮೌಲ್ಯದಲ್ಲಿ ಗುತ್ತಿಗೆ ಬಾಧ್ಯತೆಯನ್ನು ಗ್ರೂಪ್ ಮಾಪನ ಮಾಡುವುದು. ಗುತ್ತಿಗೆಯಲ್ಲಿ ಅಂತರ್ಗತವಾಗಿರುವ ಬಡ್ಡಿದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಬಹುದಾಗಿದ್ದರೆ ಅದನ್ನು ಬಳಸಿ ಗುತ್ತಿಗೆ ಪಾವತಿಯನ್ನು ಕಳೆಯಲಾಗಿದೆ. ಬಡ್ಡಿ ದರವನ್ನು ಸಿದ್ಧವಾಗಿ ನಿರ್ಧರಣೆ ಮಾಡಿರದಿದ್ದರೆ, ಆಸ್ತಿಯ ಸ್ವರೂಪ ಮತ್ತು ಸ್ಥಳ, ಸಮಾನ ಭದ್ರತೆ, ಮಾರುಕಟ್ಟೆ ನಿಯಮಗಳು ಮತ್ತು ನಿಬಂಧನೆಗಳು, ಇದೇ ರೀತಿಯ ಆರ್ಥಿಕ ಪರಿಸ್ಥಿತಿಯಲ್ಲಿ ಅನ್ವಯವಾಗುವಿಕೆಯ ಅಂಶಗಳ ಪರಿಗಣನೆ ಸೇರಿದಂತೆ, ಹಣವನ್ನು ಪಡೆಯಲು ಗ್ರೂಪ್ ಪಾವತಿ ಮಾಡಬೇಕಿರುವ ಹೆಚ್ಚಳ ಮಾಡಿದ ಹಣ ಪಡೆಯುವಿಕೆ ದರ ಬಳಸಿ ಗುತ್ತಿಗೆ ಪಾವತಿಗಳನ್ನು ಕಳೆಯಲಾಗಿದೆ.

ಪ್ರಾರಂಭಿಕ ದಿನಾಂಕದ ನಂತರ ಗುತ್ತಿಗೆ ಹೊಣೆಗಾರಿಕೆಯ ಮೊತ್ತವು ಬಡ್ಡಿಯ ಸಂಚಯನ ಬಿಂಬಿಸಲು ಹೆಚ್ಚಳಗೊಂಡಿದೆ ಮತ್ತು ಮಾಡಿದ ಗುತ್ತಿಗೆ ಪಾವತಿಯಿಂದ ಕಡಿಮೆಯಾಗಿದೆ.

ಗ್ರೂಪ್ ಬಳಕೆ ಹಕ್ಕಿನ ಆಸ್ತಿಗಳಿಗೆ ಹೊಂದಾಣಿಕೆಯಾಗಿ ಗುತ್ತಿಗೆ ಬಾಧ್ಯತೆಯ ಮರು ಮಾಪನದ ಮೊತ್ತವನ್ನು ಪರಿಗಣಿಸಿದೆ. ಬಳಕೆ ಹಕ್ಕಿನ ಆಸ್ತಿಯ ವಾಹಕ ಮೊತ್ತವು ಶೂನ್ಯಕ್ಕೆ ಇಳಿಕೆಯಾಗಿರುವ ಸಂದರ್ಭದಲ್ಲಿ ಮತ್ತು ಗುತ್ತಿಗೆ ಬಾಧ್ಯತೆಯ ಮಾಪನದಲ್ಲಿ ಇನ್ನೂ ಇಳಿಕೆಯಾಗುವುದಿದ್ದರೆ ಆಗ ಗ್ರೂಪ್ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮರು-ಮಾಪನದ ಯಾವುದೇ ಉಳಿಕೆಯಾಗಿರುವ ಮೊತ್ತವನ್ನು ಪರಿಗಣಿಸುವುದು.

ಗುತ್ತಿಗೆ ಬಾಧ್ಯತೆ ಪಾವತಿಗಳನ್ನು ನಗದು ಹರಿವಿನ ಹೇಳಿಕೆಯಲ್ಲಿ ಹಣ ನೀಡಿಕೆ ಚಟುವಟಿಕೆಗಳಲ್ಲಿ ಬಳಸಿದ ನಗದು ಎಂಬುದಾಗಿ ವರ್ಗೀಕರಿಸಲಾಗಿದೆ.

### ಗ್ರೂಪ್ ಗುತ್ತಿಗೆ ನೀಡಿಕೆದಾರರಾಗಿ:

ಗ್ರೂಪ್ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳನ್ನು ಹಣಕಾಸಿನ ಅಥವಾ ಕಾರ್ಯಾಚರಣೆಯಾಗುತ್ತಿರುವ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಎಲ್ಲಾ ಅಪಾಯಗಳು ಮತ್ತು ಅನುಕೂಲಗಳನ್ನು ಗಣನೀಯವಾಗಿ ಗುತ್ತಿಗೆದಾರರಿಗೆ ವರ್ಗಾಯಿಸಿರುವ ಗುತ್ತಿಗೆ

ಕಾಂಟ್ರಾಕ್ಟ್‌ಗಳನ್ನು ಹಣಕಾಸಿನ ಗುತ್ತಿಗೆಗಳು ಎಂಬುದಾಗಿ ವರ್ಗೀಕರಿಸಿದೆ. ಉಳಿದೆಲ್ಲ ಗುತ್ತಿಗೆಗಳನ್ನು ಕಾರ್ಯಾಚರಣೆ ಗುತ್ತಿಗೆಗಳೆಂದು ವರ್ಗೀಕರಿಸಿದೆ.

ಗ್ರೂಪ್ ಮಧ್ಯವರ್ತಿ ಗುತ್ತಿಗೆ ನೀಡಿಕೆದಾರರಾಗಿರುವ ಗುತ್ತಿಗೆಗಳಿಗೆ ಗ್ರೂಪ್ ಪ್ರಧಾನ ಗುತ್ತಿಗೆ ಮತ್ತು ಉಪಗುತ್ತಿಗೆ ಎಂಬುದಾಗಿ ಎರಡು ಪ್ರತ್ಯೇಕ ಕಾಂಟ್ರಾಕ್ಟ್‌ಗಳ ಲೆಕ್ಕಾಚಾರ ಮಾಡಿದೆ. ಉಪ ಗುತ್ತಿಗೆಗಳನ್ನು ಪ್ರಧಾನ ಗುತ್ತಿಗೆಯಿಂದ ಬರುವ ಉಪಯೋಗದ ಹಕ್ಕಿನ ಆಸ್ತಿಯ ಉಲ್ಲೇಖ ಮಾಡುವ ಮೂಲಕ ಹಣಕಾಸಿನ ಗುತ್ತಿಗೆ ಅಥವಾ ಕಾರ್ಯಾಚರಣೆ ಗುತ್ತಿಗೆ ಎಂಬುದಾಗಿಯೂ ಮುಂದುವರಿದ ವರ್ಗೀಕರಣ ಮಾಡಿದೆ.

### ಎಲ್) ನೌಕರರ ಸೌಲಭ್ಯಗಳು:

#### ನಿರೂಪಿತ ವಂತಿಗೆ ಯೋಜನೆ:

ಗ್ರೂಪ್‌ನ ನಿರೂಪಿತ ವಂತಿಗೆ ಯೋಜನೆಗಳು–ನೌಕರರ ಭವಿಷ್ಯನಿಧಿ (ನೌಕರರ ಭವಿಷ್ಯನಿಧಿ ಮತ್ತು ವಿವಿಧ ಉಪಬಂಧಗಳ ಕಾಯ್ದೆ , 1952ರ ವ್ಯವಸ್ಥೆಯ ಅನ್ವಯ) ಮತ್ತು ಇಎಸ್‌ಐ (ಕಾರ್ಮಿಕರ ರಾಜ್ಯ ವಿಮಾ ಕಾಯ್ದೆ, 1948ರ ಉಪಬಂಧಗಳ ಅನ್ವಯ) ಮತ್ತು ನಿವೃತ್ತಿ ಸೌಲಭ್ಯ ಆಗಿರುತ್ತವೆ. ಇವುಗಳಿಗೆ ಗ್ರೂಪ್ ವಂತಿಗೆಗಳನ್ನು ನೀಡುವುದರ ಹೊರತಾಗಿ ಯಾವುದೇ ಹೆಚ್ಚಿನ ಹೊಣೆಗಾರಿಕೆಗಳನ್ನು ಹೊಂದಿರುವುದಿಲ್ಲ. ಭವಿಷ್ಯನಿಧಿ, ಇಎಸ್‌ಐಗೆ ಮತ್ತು ನಿವೃತ್ತಿ ಯೋಜನೆಗೆ ಗ್ರೂಪ್‌ನ ವಂತಿಗೆಯನ್ನು ನಿಗದಿಪಡಿಸಿದ ದರಗಳಲ್ಲಿ ಪಾವತಿ ಮಾಡಿದೆ ಮತ್ತು ಅದನ್ನು ಲಾಭ ಮತ್ತು ನಷ್ಟದ ವಿವರಗಳಲ್ಲಿ ತಿಳಿಸಿದೆ. ನಿವೃತ್ತಿಗೆ ಸಂಬಂಧಿಸಿದ ಆಸ್ತಿಯನ್ನು ಟ್ರಸ್ಟ್ ಒಂದು ನಿರ್ವಹಿಸುತ್ತಿದ್ದು ಅದು ಭಾರತೀಯ ಜೀವ ವಿಮಾ ನಿಗಮದಲ್ಲಿ ಹೂಡಿಕೆ ಮಾಡುತ್ತಿದೆ.

#### ಮರಣ ಪರಿಹಾರ ನಿಧಿ:

ಮರಣ ಪರಿಹಾರ ನಿಧಿಯ ಬಗ್ಗೆ ಗ್ರೂಪ್ ಹೊಂದಿರುವ ಹೊಣೆಗಾರಿಕೆಯನ್ನು ವರದಿಗಾರಿಕೆ ದಿನಾಂಕದಲ್ಲಿದ್ದಂತೆ ವಿಮಾಗಣನ ಮೌಲ್ಯ ಮಾಪನದ ಆಧಾರದ ಮೇಲೆ ಲೆಕ್ಕ ಮಾಡಲಾಗಿದೆ.

#### ನಿರೂಪಿತ ಸೌಲಭ್ಯ ಯೋಜನೆ:

ಗ್ರೂಪ್ ಗ್ರ್ಯಾಚ್ಯುಟಿ ಕಾಯ್ದೆ 1972ರನ್ವಯ ಗ್ರ್ಯಾಚ್ಯುಟಿ ಪಾವತಿಗಾಗಿ ನಿರೂಪಿತ ಸೌಲಭ್ಯ ಯೋಜನೆಯನ್ನು ಹೊಂದಿದೆ. ಗ್ರ್ಯಾಚ್ಯುಟಿ ಯೋಜನೆಯು ನೌಕರರ ನಿವೃತ್ತಿಗೆ ನಿಗದಿಯಾಗಿರುವ ವಯೋಮಾನದ ಸೇವಾ ಅವಧಿಯಲ್ಲಿ 5 ವರ್ಷ ಅಥವಾ ಹೆಚ್ಚು ವರ್ಷ ಸೇವೆ ಸಲ್ಲಿಸಿರುವ ನೌಕರರಿಗೆ ಒಟ್ಟಾಗಿ ಹಣಕಾಸು ಪಾವತಿ ಸೌಲಭ್ಯ ಒದಗಿಸುತ್ತದೆ. ಅಂಗವಿಕಲತೆ ಅಥವಾ ಸೇವೆಯಿಂದ ವಜಾ ಆದಲ್ಲಿ ಅಂತಹ ಸಿಬ್ಬಂದಿಯವರಿಗೆ ಅವರು ಕಂಪನಿಯೊಂದಿಗೆ ಅದುವರೆಗೂ ಸೇವೆ ಸಲ್ಲಿಸಿದ ವರ್ಷಗಳು ಮತ್ತು ಸಂಬಂಧಪಟ್ಟ ಸಿಬ್ಬಂದಿಯವರು ಪಡೆದ ಕೊನೆಯ ತಿಂಗಳ ವೇತನ ಅಂಶಗಳನ್ನು ಪರಿಗಣಿಸಿ ಗ್ರ್ಯಾಚ್ಯುಟಿಯನ್ನು ಪಾವತಿ ಮಾಡಲಾಗುತ್ತದೆ. ಭಾರತೀಯ ಜೀವ ವಿಮಾ ನಿಗಮ ನಿರ್ವಹಿಸುತ್ತಿರುವ ಎಂಎಸ್‌ಐಎಲ್ ನೌಕರರ ನಿವೃತ್ತಿ ನಿಧಿ ಟ್ರಸ್ಟ್‌ಗೆ ಗ್ರೂಪ್ ವಂತಿಗೆ ನೀಡುತ್ತದೆ.

ಗ್ರೂಪ್‌ನ ಹೊಣೆಗಾರಿಕೆಯನ್ನು (ಯೋಜಿತ ಘಟಕ ಸಾಲ ವಿಧಾನವನ್ನು ಬಳಸಿ) ಪ್ರತಿ ವರದಿ ಅವಧಿಯ ಕೊನೆಯಲ್ಲಿ ವಿಮಾಗಣನೆ ಮೌಲ್ಯಮಾಪನದಿಂದ ನಿರ್ಧಾರಣೆ ಮಾಡಲಾಗುತ್ತಿದೆ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವನ್ನು ಭವಿಷ್ಯದ ಅಂದಾಜು ನಗದು ಚಲಾವಣೆಯನ್ನು ಸಂಬಂಧಿತ ಬಾಧ್ಯತೆಯ ಅಂದಾಜು ಅವಧಿಯನ್ನು ಹೊಂದಿರುವ ಸರ್ಕಾರದ ಬಾಂಡುಗಳಿಂದ ವರದಿಯ ವರ್ಷದ ಕೊನೆಯಲ್ಲಿ ಲಭ್ಯವಾಗುವ ಮಾರುಕಟ್ಟೆ ಫಲಿತಾಂಶಗಳಿಗೆ ಸಂಬಂಧಿಸಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ನಿವ್ವಳ ಬಡ್ಡಿ ವೆಚ್ಚವನ್ನು ನಿರೂಪಿತ ಸೌಲಭ್ಯ ಬಾಧ್ಯತೆಯನ್ನು ನಿವ್ವಳ ಬಾಕಿ ಮತ್ತು ಯಾವುದಾದರೂ ಯೋಜನೆ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯಗಳಿಗೆ ಕಡಿತ ದರ (ಸೋಡಿ) ಅನ್ವಯಿಸಿ ಲೆಕ್ಕ ಹಾಕಲಾಗುತ್ತಿದೆ. ಈ ವೆಚ್ಚವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ನೌಕರರ ಸೌಲಭ್ಯ ವೆಚ್ಚದಲ್ಲಿ ಸೇರಿಸಲಾಗುತ್ತದೆ.

ಗ್ರ್ಯಾಚ್ಯುಟಿ ಯೋಜನೆಯ ಸಂಬಂಧಿತ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಗುರುತಿಸಲಾದ ಬಾಧ್ಯತೆ ಅಥವಾ ಆಸ್ತಿಯು ವರದಿ ಅವಧಿಯ ಕೊನೆಯಲ್ಲಿ ಯಾವುದಾದರೂ ಯೋಜನಾ ಆಸ್ತಿಗಳಿದ್ದಲ್ಲಿ ಅವುಗಳ ನ್ಯಾಯೋಚಿತ ಮೌಲ್ಯವನ್ನು ಕಳೆದು ಉಂಟಾಗುವ ಮೌಲ್ಯವೇ ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯವಾಗುತ್ತದೆ.

ವಿಮಾಗಣನಾ ಅಂದಾಜುಗಳಲ್ಲಿ ಹೊಂದಾಣಿಕೆ ಮತ್ತು ಮಾರ್ಪಾಟುಗಳಿಂದ ಉಂಟಾಗುವ ಲಾಭ ಮತ್ತು ನಷ್ಟಗಳ ಮರು ಮಾಪನವನ್ನು ಅವುಗಳು ಉದ್ಭವಿಸುವ ಅವಧಿಯಲ್ಲಿ ಮಾನ್ಯ ಮಾಡಲಾಗುತ್ತದೆ. ಇದನ್ನು ನೇರವಾಗಿ ಇತರ ಸಮಗ್ರ ಆದಾಯದಲ್ಲಿ ಮತ್ತು ಲಾಭ ಅಥವಾ ನಷ್ಟದಲ್ಲಿ ಎಂದಿಗೂ ಮರು ವರ್ಗೀಕರಣ ಮಾಡುವುದಿಲ್ಲ. ನಿರೂಪಿತ ಸೌಲಭ್ಯ ಬಾಧ್ಯತೆಯ ಪ್ರಸಕ್ತ ಮೌಲ್ಯದಲ್ಲಿ ಯೋಜನಾ ತಿದ್ದುಪಡಿ ಅಥವಾ ಸ್ಥಗಿತತೆಯಿಂದ ಉಂಟಾಗುವ ಬದಲಾವಣೆಯನ್ನು ತಕ್ಷಣವೇ ಲಾಭ ಮತ್ತು ನಷ್ಟ ಹೇಳಿಕೆಯಲ್ಲಿ ಹಿಂದಿನ ಸೇವಾ ವೆಚ್ಚವೆಂದು ಮಾನ್ಯ ಮಾಡಲಾಗುತ್ತದೆ.

#### ಗಳಿಕೆ ರಜೆ:

ಗ್ರೂಪ್‌ನ ನೀತಿಯ ಅನುಸಾರ ನೌಕರರು ಉಪಯೋಗಿಸದೇ ಜಮೆಯಾಗುವ ರಜೆಗಳನ್ನು ಮುಂದಿನ ಸೇವಾ ಅವಧಿಗೆ ಮುಂದುವರಿಸಿಕೊಂಡು ಹೋಗಬಹುದು ಮತ್ತು ಬಳಸಿಕೊಳ್ಳಬಹುದು ಅಥವಾ ನಗದು ಪರಿಹಾರ ಪಡೆದುಕೊಳ್ಳಬಹುದಾಗಿದೆ. ಪರಿಹಾರಿತ ಗೈರುಹಾಜರಿಯು ನೌಕರರು ಸೇವೆ ಸಲ್ಲಿಸುವ ಅವಧಿಯ ಕೊನೆಯಾದ ನಂತರ 12 ತಿಂಗಳೊಳಗಾಗಿ ಬಾಕಿ ಇರುತ್ತವೆ. ಆ ಸೌಲಭ್ಯವನ್ನು ಪ್ರಸಕ್ತ

ನೌಕರರ ಸೌಲಭ್ಯ ಎಂದು ವರ್ಗೀಕರಣ ಮಾಡಲಾಗುವುದು. ಕಂಪನಿ ಆ ತೆರನಾದ ಪರಿಹಾರಿತ ಗೈರುಹಾಜರಿಯನ್ನು ನೌಕರರು ಸೇವೆ ಸಲ್ಲಿಸುವ ವರ್ಷದಲ್ಲಿ ತನ್ನ ಬಾಧ್ಯತೆಯೆಂದು ಪರಿಗಣಿಸುತ್ತದೆ. ಅದು ನೌಕರರ ಹಕ್ಕನ್ನು ವೃದ್ಧಿಸುತ್ತದೆ.

ಇದರೊಡಗಿನ ಸದರಿ ಬಾಧ್ಯತೆಯನ್ನು ಸಂಗ್ರಹಿತ ಪರಿಹಾರಿತ ಗೈರುಹಾಜರಿಗಳ ನಿರೀಕ್ಷಿತ ವೆಚ್ಚ ಬಳಕೆಯಾಗದ ರಜಾ ಹಕ್ಕಿನ ಪರಿಣಾಮವಾಗಿ ಹೆಚ್ಚುವರಿ ಮೊತ್ತವಾಗಿ ಪಾವತಿ ಮಾಡಬೇಕಾಗಿದೆ ಎಂದು ವರದಿಯ ಅವಧಿಯಂದಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಗ್ರೂಪ್‌ನ ಋಣಭಾರವನ್ನು ವಿಮಾಗಣನವಾಗಿ (ಯೋಜಿತ ಘಟಕ ಸಾಲ ವಿಧಾನ ಬಳಸಿ) ಪ್ರತಿ ವರದಿ ಮಾಡುವ ಅವಧಿಯ ಕೊನೆಯಲ್ಲಿ ನಿರ್ಧರಣೆ ಮಾಡಲಾಗಿದೆ.

### ಇತರೆ ಅಲ್ಪಾವಧಿ ಸೌಲಭ್ಯಗಳು:

ಸೇವೆ ಸಲ್ಲಿಸಿದ ಹನ್ನೆರಡು ತಿಂಗಳುಗಳ ಒಳಗೆ ಸಮಗ್ರವಾಗಿ ನೀಡಬೇಕಾಗಿ ಬರುವ ಎಲ್ಲಾ ನೌಕರರ ಸೌಲಭ್ಯಗಳನ್ನು ಅಲ್ಪಾವಧಿ ನೌಕರರ ಸೌಲಭ್ಯಗಳು ಎಂಬುದಾಗಿ ವರ್ಗೀಕರಿಸಲಾಗಿದೆ. ಸಂಬಳಗಳು, ವೇತನಗಳು, ಅಂದಾಜು ಮಾಡಲಾದ ಬೋನಸ್, ಎಕ್ಸ್-ಗ್ರೇಷಿಯಾ ಮತ್ತು ಅಲ್ಪಾವಧಿ ಪರಿಹಾರಿತ ಗೈರುಹಾಜರಿ ಗಳಂತಹ ಸೌಲಭ್ಯಗಳನ್ನು, ಸಂಬಂಧಿಸಿದ ನೌಕರನು ಸಲ್ಲಿಸಿದ ಸಂಬಂಧಪಟ್ಟ ಸೇವೆಯ ಅವಧಿಯಲ್ಲಿ ಗುರುತಿಸಿದೆ.

ಅಲ್ಪಾವಧಿ ನೌಕರರ ಸೌಲಭ್ಯಗಳು ಕಾರ್ಯಕ್ಷಮತೆ ಬೋನಸ್ ಸೇರಿದಂತೆ ನೌಕರರ ವೆಚ್ಚಗಳೆಂದು ನೌಕರರು ಸಲ್ಲಿಸುವ ಸೇವಾ ಅವಧಿಗೆ ಪಾವತಿ ಮಾಡಿದ ಅಥವಾ ಮಾಡಬೇಕಾದ ಮೊತ್ತದ ಆಧಾರದಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಯ ಪಟ್ಟಿಯಲ್ಲಿ ಮಾನ್ಯ ಮಾಡಲಾಗುತ್ತದೆ.

### ಎಂ. ತೆರಿಗೆ ವೆಚ್ಚಗಳು:

ಆದಾಯ ತೆರಿಗೆ ವೆಚ್ಚಗಳು ಚಾಲ್ತಿಯಲ್ಲಿನ ತೆರಿಗೆ ಮತ್ತು ಮುಂದೂಡಿದ ತೆರಿಗೆಗಳನ್ನು ಒಳಗೊಂಡಿರುವುದು.

### ಚಾಲ್ತಿ ಆದಾಯ ತೆರಿಗೆ:

ಪ್ರಸ್ತುತ ಪಾವತಿ ಮಾಡಬೇಕಿರುವ ತೆರಿಗೆಯು ವರ್ಷದ ತೆರಿಗೆ ವಿಧಿಸಬಹುದಾದ ಲಾಭದ ಮೇಲೆ ಆಧಾರಿತವಾಗಿರುತ್ತದೆ. ಇತರೆ ವರ್ಷಗಳಲ್ಲಿ ತೆರಿಗೆ ವಿಧಿಸಬಹುದಾಗಿರುವ ಅಥವಾ ತೆರಿಗೆ ಮುರಿದುಕೊಳ್ಳಬೇಕಾದ ಆದಾಯ ಅಥವಾ ಖರ್ಚಿನ ಐಟಂಗಳು ಮತ್ತು ಯಾವತ್ತೂ ತೆರಿಗೆ ವಿಧಿಸದ ಅಥವಾ ತೆರಿಗೆ ಮುರಿದುಕೊಳ್ಳದಿರುವ ಐಟಂಗಳ ಕಾರಣದಿಂದಾಗಿ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ವರದಿಯಾಗಿರುವಂತೆ ತೆರಿಗೆ ವಿಧಿಸಬಹುದಾದ ಲಾಭವು ತೆರಿಗೆಗೆ ಮುನ್ನ ಲಾಭಗಳಿಂದ ಬೇರೆಯದಾಗಿರುತ್ತದೆ. ಕಾಯ್ದೆಗೊಳಿಸಿರುವ ಅಥವಾ ವರದಿಯ ದಿನಾಂಕಂದು ಸಮಗ್ರವಾಗಿ ಕಾಯ್ದೆಗೊಳಿಸಿ ಜಾರಿ ಮಾಡಿರುವ ತೆರಿಗೆ ದರಗಳು ಮತ್ತು ತೆರಿಗೆ ಕಾನೂನುಗಳನ್ನು ಬಳಸಿ ಮೊತ್ತವನ್ನು ಲೆಕ್ಕ ಮಾಡಲಾಗುವುದು. ಅನ್ವಯವಾಗುವ ತೆರಿಗೆ ನಿಬಂಧನೆಗಳ ವ್ಯಾಖ್ಯಾನ ಮಾಡುವುದಕ್ಕೆ ಮತ್ತು ಸೂಕ್ತವಾಗಿರುವೆಡೆಗಳಲ್ಲಿ ನಿಬಂಧನೆಗಳನ್ನು ರೂಪಿಸುವುದಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಆಡಳಿತವು ತೆರಿಗೆ ರಿಟರ್ನ್‌ನಲ್ಲಿ ಇರುವ ಪರಿಸ್ಥಿತಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡುವುದು.

ಚಾಲ್ತಿ ಆದಾಯ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೆರಿಗೆ ವಿಧಿಸುವ ಪ್ರಾಧಿಕಾರಿಗಳಿಗೆ ಪಾವತಿ ಮಾಡಬೇಕಾದ ಅಥವಾ ವಸೂಲಿ ಮಾಡಬಹುದಾದ ನಿರೀಕ್ಷಿತ ಮೊತ್ತದಲ್ಲಿ ಮಾಪನ ಮಾಡಿದೆ. ಅನ್ವಯವಾಗುವ ತೆರಿಗೆ ನಿಬಂಧನೆಗಳನ್ನು ವ್ಯಾಖ್ಯಾನ ಮಾಡುವುದಕ್ಕೆ ಮತ್ತು ಸೂಕ್ತವಾಗಿರುವೆಡೆಗಳಲ್ಲಿ ನಿಬಂಧನೆಗಳನ್ನು ಮಾಡುವುದಕ್ಕೆ ಒಳಪಟ್ಟಿರುವ ಸಂದರ್ಭಗಳಲ್ಲಿ ಆಡಳಿತವು ತೆರಿಗೆ ರಿಟರ್ನ್‌ನಲ್ಲಿ ಇರುವ ಪರಿಸ್ಥಿತಿಗಳನ್ನು ನಿಯತಕಾಲಿಕವಾಗಿ ಮೌಲ್ಯಮಾಪನ ಮಾಡುವುದು.

ಇತರೆ ಸಮಗ್ರ ಆದಾಯದಲ್ಲಿ ಅಥವಾ ಈಕ್ವಿಟಿಯಲ್ಲಿ ನೇರವಾಗಿ ಮಾನ್ಯ ಮಾಡಿರುವ ಐಟಂಗಳಿಗೆ ಸಂಬಂಧಿಸಿದ ಪ್ರಮಾಣದವರೆಗೆ ಹೊರತುಪಡಿಸಿ ಚಾಲ್ತಿ ತೆರಿಗೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ಸಂದರ್ಭದಲ್ಲಿ, ತೆರಿಗೆಯನ್ನು ಅನುಕ್ರಮವಾಗಿ ಇತರೆ ಸಮಗ್ರ ಆದಾಯದಲ್ಲಿ ಹಾಗೂ ನೇರವಾಗಿ ಈಕ್ವಿಟಿಯಲ್ಲಿಯೂ ಮಾನ್ಯ ಮಾಡಿದೆ.

### ಮುಂದೂಡಿದ ತೆರಿಗೆ:

ವರದಿಯ ದಿನಾಂಕದಲ್ಲಿ ಹಣಕಾಸಿನ ವರದಿಗಾರಿಕೆ ಉದ್ದೇಶಗಳಿಗಾಗಿ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತೆರಿಗೆ ಮೂಲಗಳ ತಾತ್ಕಾಲಿಕ ವ್ಯತ್ಯಾಸಗಳ ಹೊಣೆಗಾರಿಕೆ ವಿಧಾನ ಬಳಸಿ ಮುಂದೂಡಿದ ತೆರಿಗೆಯನ್ನು ಒದಗಿಸಿದೆ.

ಈ ಕೆಳಕಂಡವುಗಳನ್ನು ಹೊರತುಪಡಿಸಿ, ಮುಂದೂಡಿದ ತೆರಿಗೆ ಹೊಣೆಗಾರಿಕೆಗಳನ್ನು ಎಲ್ಲಾ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ ಮಾನ್ಯ ಮಾಡಿದೆ:

★ ವ್ಯಾಪಾರದ ಸಂಯೋಜನೆಯಾಗಿರದ ವ್ಯವಹಾರದಲ್ಲಿ ಮತ್ತು, ಲೆಕ್ಕ ನಿರ್ವಹಣೆ ಲಾಭ ಅಥವಾ ತೆರಿಗೆ ವಿಧಿಸಬಹುದಾದ ಲಾಭ ಅಥವಾ ನಷ್ಟಕ್ಕೆ ಪರಿಣಾಮ ಉಂಟು ಮಾಡದ ವ್ಯವಹಾರದ ಸಮಯದಲ್ಲಿ ವ್ಯಾಪಾರದ ಹಕ್ಕು ಅಥವಾ ಆಸ್ತಿಯ ಪ್ರಾರಂಭಿಕ ಮಾನ್ಯತೆಯಿಂದ ಮುಂದೂಡಿದ ತೆರಿಗೆ ಹೊಣೆಗಾರಿಕೆ ಉಂಟಾದಾಗ,

★ ಸಹಾಯಕ ಸಂಸ್ಥೆಗಳಲ್ಲಿನ ಹೂಡಿಕೆಗಳಲ್ಲಿ ಮತ್ತು ಜಂಟಿ ವ್ಯವಸ್ಥೆಗಳಲ್ಲಿನ ಬಡ್ಡಿಗಳಲ್ಲಿ ಸೇರಿರುವ ತೆರಿಗೆ ವಿಧಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳ ಸಂಬಂಧದಲ್ಲಿ, ತಾತ್ಕಾಲಿಕ ವ್ಯತ್ಯಾಸಗಳನ್ನು ವ್ಯತಿರಿಕ್ತ ಮಾಡುವುದನ್ನು, ನಿಯಂತ್ರಿಸಬಹುದಾದ ಸಮಯವನ್ನು

ನಿಯಂತ್ರಿಸಬಹುದಾಗಿರುವಾಗ ಮತ್ತು ತಾತ್ಕಾಲಿಕ ವ್ಯತ್ಯಾಸಗಳನ್ನು ಮುಂದಿನ ದಿನಗಳಲ್ಲಿ ವ್ಯತಿರಿಕ್ತಗೊಳಿಸುವ ಸಾಧ್ಯತೆ ಇಲ್ಲದಿರುವಾಗ.

ಮುಂದೂಡಿದ ತೆರಿಗೆ ಆಸ್ತಿಗಳನ್ನು ಎಲ್ಲಾ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ, ಮುಂದಕ್ಕೆ ತೆಗೆದುಕೊಂಡಿರುವ ಬಳಸದಿರುವ ತೆರಿಗೆ ಕ್ರೆಡಿಟ್‌ಗಳಿಗೆ ಮತ್ತು ಯಾವುದೇ ಬಳಸದಿರುವ ತೆರಿಗೆ ನಷ್ಟಗಳಿಗೆ ಮಾನ್ಯ ಮಾಡಿದೆ. ಕೆಳಕಂಡವುಗಳ ಹೊರತಾಗಿ, ಮುರಿದುಕೊಳ್ಳಬಹುದಾಗಿರುವ ತಾತ್ಕಾಲಿಕ ವ್ಯತ್ಯಾಸಗಳು, ಮತ್ತು ಬಳಸದಿರುವ ತೆರಿಗೆ ಕ್ರೆಡಿಟ್‌ಗಳನ್ನು ಮುಂದಕ್ಕೆ ತೆಗೆದುಕೊಳ್ಳುವ ಮತ್ತು ಬಳಸದಿರುವ ತೆರಿಗೆ ನಷ್ಟಗಳನ್ನು ಬಳಸಬಹುದಾಗಿರುವ ತೆರಿಗೆ ಲಾಭ ಲಭ್ಯವಿರುವ ಸಾಧ್ಯತೆಯ ಪ್ರಮಾಣದವರೆಗೆ ಮುಂದೂಡಿದ ತೆರಿಗೆ ಆಸ್ತಿಗಳನ್ನು ಮಾನ್ಯ ಮಾಡಿದೆ.

★ ವ್ಯವಹಾರ ಸಂಯೋಜನೆಯಾಗಿರದ ವ್ಯವಹಾರದಲ್ಲಿ ಆಸ್ತಿ ಅಥವಾ ಹೊಣೆಗಾರಿಕೆಯ ಪ್ರಾರಂಭಿಕ ಮಾನ್ಯತೆಯಿಂದ ಉದ್ಭವಿಸಿದ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಕ್ಕೆ ಮುಂದೂಡಿದ ತೆರಿಗೆ ಆಸ್ತಿ ಸಂಬಂಧಿಸಿರುವಾಗ, ಮತ್ತು ವ್ಯವಹಾರವು ಲೆಕ್ಕ ನಿರ್ವಹಣೆ ಲಾಭಕ್ಕಾಗಲಿ ಅಥವಾ ತೆರಿಗೆ ವಿಧಿಸಬಹುದಾದ ಲಾಭ ಅಥವಾ ನಷ್ಟಕ್ಕೆ ತೊಂದರೆ ಉಂಟು ಮಾಡದಿರುವ ಸಮಯದಲ್ಲಿ.

★ ಸಹಾಯಕ ಸಂಸ್ಥೆಗಳು, ಸಹವರ್ತಿ ಸಂಸ್ಥೆಗಳಲ್ಲಿನ ಹೂಡಿಕೆಗಳ ಜೊತೆ ಸೇರಿರುವ ಮುರಿದುಕೊಳ್ಳಬಹುದಾದ ತಾತ್ಕಾಲಿಕ ವ್ಯತ್ಯಾಸಗಳ ಮತ್ತು ಜಂಟಿ ವ್ಯವಸ್ಥೆಗಳಲ್ಲಿನ ಬಡ್ಡಿಗಳ ಸಂಬಂಧದಲ್ಲಿ, ಮುಂದೂಡಿದ ತೆರಿಗೆ ಆಸ್ತಿಗಳನ್ನು ಮುಂಗಾಣ್ಕೆಯ ದಿನಗಳಲ್ಲಿ ತಾತ್ಕಾಲಿಕ ವ್ಯತ್ಯಾಸಗಳ ಸಾಧ್ಯತೆಯ ಪ್ರಮಾಣದವರೆಗೆ ಮತ್ತು ತೆರಿಗೆ ವಿಧಿಸಬಹುದಾದ ಲಾಭ ಲಭ್ಯವಿರುವ ಮತ್ತು ಇದರ ಎದುರಾಗಿ ತಾತ್ಕಾಲಿಕ ವ್ಯತ್ಯಾಸಗಳನ್ನು ಬಳಸಬಹುದಾಗಿರುವ ಪ್ರಮಾಣದವರೆಗೆ ಮಾತ್ರ ಮುಂದೂಡಿದ ತೆರಿಗೆ ಆಸ್ತಿಗಳನ್ನು ಮಾನ್ಯ ಮಾಡಿದೆ.

ಮುಂದೂಡಿದ ತೆರಿಗೆ ಆಸ್ತಿಗಳ ವಾಹಕ ಮೊತ್ತವನ್ನು ಪ್ರತಿ ವರದಿ ದಿನಾಂಕದಲ್ಲಿ ಪರಿಶೀಲಿಸಲಾಗಿದೆ ಮತ್ತು ಮುಂದೂಡಿದ ತೆರಿಗೆ ಆಸ್ತಿಯ ಎಲ್ಲಾ ಅಥವಾ ಒಂದು ಭಾಗವನ್ನು ಉಪಯೋಗಿಸಲು ಅವಕಾಶ ನೀಡಲು ಸಾಕಷ್ಟು ತೆರಿಗೆ ವಿಧಿಸಬಹುದಾದ ಲಾಭ ಎಲ್ಲಿಯವರೆಗೆ ಸಾಧ್ಯವಿರುವುದಿಲ್ಲವೋ ಆ ಪ್ರಮಾಣದ ವರೆಗೆ ಕಡಿಮೆ ಮಾಡಿದೆ. ಮಾನ್ಯ ಮಾಡಿರದ ಮುಂದೂಡಿದ ತೆರಿಗೆ ಆಸ್ತಿಗಳನ್ನು ಪ್ರತಿ ವರದಿ ದಿನಾಂಕದಲ್ಲಿ ಮರು ನಿರ್ಧರಣೆ ಮಾಡಿದೆ ಮತ್ತು ಮುಂದೂಡಿದ ತೆರಿಗೆ ಆಸ್ತಿ ವಸೂಲಿ ಮಾಡಲು ಅವಕಾಶ ನೀಡುವ ಮುಂದಿನ ತೆರಿಗೆ ವಿಧಿಸಬಹುದಾದ ಲಾಭಗಳು ದೊರೆಯುವ ಸಾಧ್ಯತೆ ಇರುವ ಪ್ರಮಾಣದಲ್ಲಿ ಅವುಗಳನ್ನು ಮಾನ್ಯ ಮಾಡಿದೆ.

ವರದಿ ದಿನಾಂಕದಲ್ಲಿ ಜಾರಿಗೊಳಿಸಿರುವ ಅಥವಾ ಗಣನೀಯವಾಗಿ ಜಾರಿಗೊಳಿಸಿರುವ ತೆರಿಗೆ ದರಗಳ (ಮತ್ತು ತೆರಿಗೆ ಕಾನೂನುಗಳ) ಆಧಾರದ ಮೇಲೆ ಆಧಾರಿತವಾಗಿ ಆಸ್ತಿಯು ನಗದಾದಾಗ ಅಥವಾ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಿದಾಗ ಆ ವರ್ಷದಲ್ಲಿ ಅನ್ವಯಿಸಲು ನಿರೀಕ್ಷಿಸಿರುವ ತೆರಿಗೆ ದರಗಳಲ್ಲಿ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಮಾಪನ ಮಾಡಿದೆ.

ಮುಂದೂಡಿದ ತೆರಿಗೆಯನ್ನು, ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿರುವ ಐಟಂಗಳಿಗೆ ಅಥವಾ ನೇರವಾಗಿ ಈಕ್ವಿಟಿಗೆ ಸಂಬಂಧಿಸಿದ ಪ್ರಮಾಣದವರೆಗೆ ಹೊರತುಪಡಿಸಿ, ಲಾಭ ಮತ್ತು ನಷ್ಟಗಳ ವಿವರದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ವಿಚಾರದಲ್ಲಿ, ತೆರಿಗೆಯನ್ನು ಅನುಕ್ರಮವಾಗಿ ಇತರೆ ಸಮಗ್ರ ಆದಾಯದಲ್ಲಿ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಸಹ ಮಾನ್ಯ ಮಾಡಿದೆ.

ಅದೇ ತೆರಿಗೆ ವಿಧಿಸಬಹುದಾದ ಸಂಸ್ಥೆಗೆ ಮತ್ತು ಅದೇ ತೆರಿಗೆಯ ಪ್ರಾಧಿಕಾರಿಗೆ ಸಂಬಂಧಿಸಿದ ಚಾಲ್ತಿ ತೆರಿಗೆ ಹೊಣೆಗಾರಿಕೆಗಳು ಮತ್ತು ಮುಂದೂಡಿದ ತೆರಿಗೆಗಳ ಎದುರಾಗಿ ಚಾಲ್ತಿ ತೆರಿಗೆ ಆಸ್ತಿಗಳನ್ನು ಸರಿದೂಗಿಸಲು ಕಾನೂನಾತ್ಮಕವಾಗಿ ಜಾರಿ ಮಾಡಬಹುದಾದ ಹಕ್ಕು ಇರುವುದಾದಲ್ಲಿ ಆಗ ಮುಂದೂಡಿದ ತೆರಿಗೆ ಆಸ್ತಿಗಳು ಮತ್ತು ಮುಂದೂಡಿದ ತೆರಿಗೆ ಹೊಣೆಗಾರಿಕೆಗಳನ್ನು ಸರಿದೂಗಿಸಲಾಗಿದೆ.

ಗ್ರೂಪ್ ನಿಗದಿಪಡಿಸಿರುವ ಅವಧಿಯಲ್ಲಿ ಅಂದರೆ ತೆರಿಗೆ ಕ್ರೆಡಿಟ್ ಅನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಅವಕಾಶ ನೀಡಿರುವ ಅವಧಿಯಲ್ಲಿ ಸಾಧಾರಣವಾದ ಆದಾಯ ತೆರಿಗೆಯನ್ನು ಗ್ರೂಪ್ ಪಾವತಿ ಮಾಡುವುದೆಂಬ ಮನವರಿಕೆ ಮಾಡುವ ಪುರಾವೆ ಇದ್ದಲ್ಲಿ ಆ ಪ್ರಮಾಣದವರೆಗೆ ಆಸ್ತಿ ಮಾತ್ರ ಎಂಬುದಾಗಿ ಮ್ಯಾಟ್ ಕ್ರೆಡಿಟ್‌ನ ರೂಪದಲ್ಲಿ ಕಂಪನಿಯು ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದೆ.

ಗ್ರೂಪ್ ಆಸ್ತಿ ಎಂಬುದಾಗಿ ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದ ವರ್ಷದಲ್ಲಿ, ಸದರಿ ಆಸ್ತಿಯನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ತೆರಿಗೆ ಕ್ರೆಡಿಟ್‌ಗಳನ್ನು ಮಾನ್ಯ ಮಾಡಿದ ವರ್ಷದಲ್ಲಿ, ಸದರಿ ಆಸ್ತಿಯನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ತೆರಿಗೆ ಕ್ರೆಡಿಟ್‌ನ ರೀತಿಯಲ್ಲಿ ಸೃಜಿಸಿದೆ. ಇಂತಹ ತೆರಿಗೆ ಕ್ರೆಡಿಟ್ ಆಸ್ತಿಗಳನ್ನು ಪ್ರತಿ ವರದಿಯ ದಿನಾಂಕದಂದು ಗ್ರೂಪ್ ಪರಿಶೀಲಿಸುವುದು ಮತ್ತು ನಿಗದಿತ ಅವಧಿ ಯಲ್ಲಿ ಸಾಧಾರಣ ತೆರಿಗೆಯನ್ನು ಪಾವತಿ ಮಾಡುವ ಬಗ್ಗೆ ಗ್ರೂಪ್ ಮನವರಿಕೆ ಮಾಡುವ ಪುರಾವೆ ಇಲ್ಲದಿದ್ದರೆ ಆ ಪ್ರಮಾಣದವರೆಗೆ ಆಸ್ತಿಯನ್ನು ನಮೂದಿಸುವುದು ಮುಂದೂಡಿದ ತೆರಿಗೆ ಕ್ರೆಡಿಟ್‌ನಲ್ಲಿ ಸೇರಿರುವುದು. ಮುಂದೂಡಿದ ತೆರಿಗೆಯು ಮ್ಯಾಟ್ ತೆರಿಗೆ ಕ್ರೆಡಿಟ್ ಒಳಗೊಂಡಿರುವುದು.

### ಎನ್) ಷೇರು ಒಂದರ ಗಳಿಕೆಗಳು:

ವರ್ಷದ ಅವಧಿಯಲ್ಲಿ ಬಾಕಿ ಉಳಿದಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಗ್ರೂಪ್ ಸಾಮಾನ್ಯ ಈಕ್ವಿಟಿದಾರರುಗಳಿಗೆ ಅನ್ವಯಿಸಬಹುದಾದ ವರ್ಷದ ನಿವ್ವಳ ಲಾಭ/ನಷ್ಟವನ್ನು ವಿಭಾಗಿಸುವ ಮೂಲಕ ಮೂಲ ಇಪಿಎಸ್ ಅನ್ನು ಲೆಕ್ಕಾಚಾರ ಮಾಡಿದೆ. ಎಲ್ಲಾ ದುರ್ಬಲಗೊಳ್ಳುವ ಸಾಧ್ಯತೆಯಿರುವ ಸಾಮಾನ್ಯ ಷೇರುಗಳನ್ನು ಸಾಮಾನ್ಯ ಷೇರುಗಳಾಗಿ ಪರಿವರ್ತನೆ

ಮಾಡಿದಾಗ ನೀಡಬಹುದಾಗಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಗೆ ಹೊಂದಾಣಿಕೆ ಮಾಡಿದ, ವರ್ಷದ ಅವಧಿಯಲ್ಲಿ ಬಾಕಿಯಿರುವ ಸಾಮಾನ್ಯ ಷೇರುಗಳ ಪರಿಗಣಿತ ಸರಾಸರಿ ಸಂಖ್ಯೆಯಿಂದ ಗ್ರೂಪ್ ಸಾಮಾನ್ಯ ಈಕ್ವಿಟಿ ಷೇರುದಾರರಿಗೆ ಅನ್ವಯಿಸಬಹುದಾದ ನಿವ್ವಳ ಲಾಭ/ನಷ್ಟದಿಂದ ವಿಭಾಗಿಸುವ ಮೂಲಕ ದುರ್ಬಲವಾದ ಇಪಿಎಸ್ ಅನ್ನು ಲೆಕ್ಕಾಚಾರ ಮಾಡಿದೆ.

ಈಕ್ವಿಟಿ ಷೇರುಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ನೀಡಿದ್ದರೆ (ಅಂದರೆ ಬಾಕಿಯಿರುವ ಈಕ್ವಿಟಿ ಷೇರುಗಳ ಸರಾಸರಿ ಮಾರುಕಟ್ಟೆ ಮೌಲ್ಯ) ಪಡೆಯಬಹುದಾಗಿರುವ ಹಣಕ್ಕೆ ದುರ್ಬಲಗೊಳ್ಳುವ ಸಾಧ್ಯತೆಯುಳ್ಳ ಈಕ್ವಿಟಿ ಷೇರುಗಳನ್ನು ಹೊಂದಾಣಿಕೆ ಮಾಡಿದೆ. ದುರ್ಬಲಗೊಳ್ಳುವ ಸಾಧ್ಯತೆಯಲ್ಲಿ ಈಕ್ವಿಟಿ ಷೇರುಗಳನ್ನು ಮುಂದಿನ ದಿನಾಂಕದಲ್ಲಿ ನೀಡದಿದ್ದಲ್ಲಿ, ಅವಧಿಯ ಪ್ರಾರಂಭದಲ್ಲಿದ್ದಂತೆ ಪರಿವರ್ತನೆಯಾಗಿರುವುದು ಎಂಬುದಾಗಿ ಪರಿಭಾವಿಸಲಾಗಿದೆ. ದುರ್ಬಲಗೊಳ್ಳುವ ಸಾಧ್ಯತೆಯ ಈಕ್ವಿಟಿ ಷೇರುಗಳನ್ನು ಅವುಗಳನ್ನು ನಿರೂಪಿಸಿದ ಪ್ರತಿ ಅವಧಿಯಲ್ಲಿ ಸ್ವತಂತ್ರವಾಗಿ ನಿರ್ಧರಣೆ ಮಾಡಿದೆ. ನಿರ್ದೇಶಕರ ಮಂಡಳಿಯಿಂದ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಅನುಮೋದಿಸುವ ಮುನ್ನ ಬದಲಾವಣೆ ಉಂಟು ಮಾಡಿರುವುದು ಸೇರಿದಂತೆ ಯಾವುದೇ ಷೇರಿನ ವಿಭಜನೆಗೆ ಮತ್ತು ಬೋನಸ್ ಷೇರುಗಳ ನೀಡಿಕೆಗಳಿಗೆ ನಿರೂಪಿತ ಎಲ್ಲಾ ಅವಧಿಗಳಿಗೆ ಹಿಂದಿನಿಂದ ಅನ್ವಯವಾಗುವಂತೆ ಈಕ್ವಿಟಿ ಷೇರುಗಳು ಮತ್ತು ಸಾಧ್ಯವಿರುವ ದುರ್ಬಲತೆಯ ಷೇರುಗಳ ಸಂಖ್ಯೆಯನ್ನು ಹೊಂದಾಣಿಕೆ ಮಾಡಿದೆ.

### ಓ) ವ್ಯವಸ್ಥೆಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳು:

ಗ್ರೂಪ್ ಹಿಂದಿನ ಘಟನಾವಳಿಗಳ ಪರಿಣಾಮವಾಗಿ ಪ್ರಸಕ್ತದಲ್ಲಿ ಪೂರೈಸಬೇಕಾಗಿರುವ ಬಾಧ್ಯತೆಯನ್ನು (ಕಾನೂನಾತ್ಮಕ ಅಥವಾ ರಚನಾತ್ಮಕ) ಹೊಂದಿದ್ದಲ್ಲಿ ಆಗ ಅದಕ್ಕಾಗಿ ಅವಕಾಶಗಳನ್ನು ಮಾನ್ಯ ಮಾಡಲಾಗಿದೆ. ಆ ರೀತಿಯ ಬಾಧ್ಯತೆಗಳನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯವಿದ್ದು, ಈ ಬಗ್ಗೆ ವಿಶ್ವಾಸನೀಯ ವಾಗಿ ಅಂದಾಜು ಮಾಡಬಹುದಾಗಿದೆ.

ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದಿನಂತೆ ಪ್ರಸಕ್ತ ಹೊಣೆಗಾರಿಕೆ ಯನ್ನು ಇತ್ಯರ್ಥಪಡಿಸಲು ಅಗತ್ಯವೆಂದು ಪರಿಗಣಿಸಿರುವ ಮೊತ್ತವು ಅತ್ಯುತ್ತಮ ಅಂದಾಜು ಮೊತ್ತ ಎಂದು ಬಾಧ್ಯತೆಯನ್ನು ಆವರಿಸಿಕೊಂಡಿರುವ ಅಪಾಯ ಮತ್ತು ಅನಿಶ್ಚಿತತೆಗಳನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಮಾಡಲಾಗಿದೆ. ಪ್ರಸಕ್ತ ಬಾಧ್ಯತೆಯನ್ನು ಇತ್ಯರ್ಥಪಡಿಸಲು ನಗದು ಚಲಾವಣೆಯನ್ನು ಬಳಸಿ ಅಂದಾಜಿಸಿದ ಮುನ್ನೇರ್ಪಾಡುಗಳನ್ನು ಮಾಪನ ಮಾಡಿದಾಗ ಅದರ ವಾಹಕ ಮೊತ್ತವು ಆ ನಗದು ಚಲಾವಣೆಯ ಪ್ರಸಕ್ತ ಮೌಲ್ಯವಾಗಿರುತ್ತದೆ. (ಯಾವಾಗ ಹಣದ ಸಮಯ ಮೌಲ್ಯದ ಪರಿಣಾಮ ವಾಸ್ತವವಾಗಿರುತ್ತದೆಯೊ ಆಗ). ಒಂದು ವೇಳೆ ಹಣದ ಸಮಯ ಮೌಲ್ಯದ ಪರಿಣಾಮ ವಾಸ್ತವವಾಗಿದ್ದಲ್ಲಿ, ಮುನ್ನೇರ್ಪಾಡುಗಳನ್ನು ಮುಂದಿನ ನಿರೀಕ್ಷಿತ ನಗದು ಚಲಾವಣೆಯನ್ನು ತೆರಿಗೆ ಪೂರ್ವ ದರದಲ್ಲಿ ಕಡಿತಗೊಳಿಸುವ ಮೂಲಕ ನಿರ್ಧರಣೆ ಮಾಡಲಾಗುತ್ತದೆ. ಇದು ಹಣದ ಸಮಯ ಮೌಲ್ಯದ ಮಾರುಕಟ್ಟೆ ಅಂದಾಜುಗಳನ್ನು ಮತ್ತು ಬಾಧ್ಯತೆಗೆ ನಿರ್ದಿಷ್ಟವಾದ ಅಪಾಯಗಳನ್ನು ಬಿಂಬಿಸುತ್ತದೆ. ಕಾಲಾವಧಿಯ ಕಾರಣದಿಂದಾಗಿ ಮುನ್ನೇರ್ಪಾಡುಗಳ ಹೆಚ್ಚಳವನ್ನು ಬಡ್ಡಿ ವೆಚ್ಚವೆಂದು ಮಾನ್ಯ ಮಾಡಲಾಗಿದೆ.

ಗುರುತರ ಜವಾಬ್ದಾರಿಯುಳ್ಳ ಗುತ್ತಿಗೆಗಳಡಿ ಉಂಟಾಗುವ ಪ್ರಸಕ್ತ ಬಾಧ್ಯತೆಗಳನ್ನು ಮುನ್ನೇರ್ಪಾಡುಗಳೆಂದು ಮಾನ್ಯ ಮಾಡಲಾಗಿದೆ ಮತ್ತು ಮಾಪನ ಮಾಡಲಾಗಿದೆ.. ಒಂದು ಗುರುತರ ಗುತ್ತಿಗೆಯನ್ನು ಒಂದು ಗುತ್ತಿಗೆಯಡಿ ಇರುವ ಬಾಧ್ಯತೆಗಳನ್ನು ಪೂರೈಸಲು ತಡೆಯಲಸಾಧ್ಯವಾದ ವೆಚ್ಚದ ಮೊತ್ತವು ಆ ಗುತ್ತಿಗೆಯಿಂದ ಬರಬಹುದೆಂದು ನಿರೀಕ್ಷಿಸಲಾದ ಹಣಕಾಸು ಲಾಭಕ್ಕಿಂತ ಹೆಚ್ಚಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ಗುರುತರ ಜವಾಬ್ದಾರಿಗಳ ಗುತ್ತಿಗೆ ಎಂದು ಪರಿಗಣಿಸಲಾಗುತ್ತದೆ.

ಸ್ಥಗಿತಗೊಳಿಸುವ ವೆಚ್ಚಗಳನ್ನು ಬಾಧ್ಯತೆಯ ಇತ್ಯರ್ಥವಾಗಿ ವೆಚ್ಚದ ಅತ್ಯುತ್ತಮ ಅಂದಾಜು ಎಂದು ಪರಿಗಣಿಸಲಾಗುವುದು ಅಥವಾ ಬಾಧ್ಯತೆಯನ್ನು ಮೂರನೇ ವ್ಯಕ್ತಿಗೆ ವರ್ಗಾಯಿಸುವುದು. ಬಾಧ್ಯತೆಗಳ ಸ್ಥಗಿತಗೊಳಿಸುವ ಮುನ್ನೇರ್ಪಾಡುಗಳನ್ನು ವ್ಯವಸ್ಥೆಯ ಆರಂಭದಲ್ಲೇ ಗುರುತಿಸಬೇಕಾಗುತ್ತದೆ. ವ್ಯವಸ್ಥೆಗಳ ಕೊನೆಯಲ್ಲಿ ಭರಿಸಬೇಕಾದ ಅಂದಾಜು ವೆಚ್ಚಗಳನ್ನು ಮರಳಿ ಪಡೆಯುವ ಮಾರುಕಟ್ಟೆ ದರ ಬಳಸಿ ಅದರ ಪ್ರಸಕ್ತ ಮೌಲ್ಯಕ್ಕೆ ಕಡಿತಗೊಳಿಸಲಾಗಿದೆ.

ಕೆಲವು ಅಥವಾ ಎಲ್ಲ ಹಣಕಾಸು ಲಾಭಗಳ ಸೌಲಭ್ಯಗಳನ್ನು ಇತ್ಯರ್ಥಗೊಳಿಸಬೇಕಾದಲ್ಲಿ ಮೂರನೇ ವ್ಯಕ್ತಿ ಸಂಸ್ಥೆಯಿಂದ ಮರು ವಸೂಲಿ ಮಾಡುವ ಅವಕಾಶವನ್ನು ನಿರೀಕ್ಷಿಸಲಾಗುತ್ತದೆ. ಹಾಗೆ ಪಡೆಯಬಹುದಾದ ಮೊತ್ತವು ಒಂದು ವೇಳೆ ಮರು ಭರಿಸುವಿಕೆಯ ಮೊತ್ತವು ಪಡೆಯಲಾಗುವುದು ಎಂದು ಬಹುತೇಕ ಖಚಿತವಾಗಿದ್ದಲ್ಲಿ ಆಸ್ತಿ ಎಂದು ಮಾನ್ಯ ಮಾಡಲಾಗಿದೆ ಮತ್ತು ಆ ಪಡೆಯಬಹುದಾದ ಮೊತ್ತವನ್ನು ವಿಶ್ವಾಸನೀಯವಾಗಿ ಮಾಪನ ಮಾಡಲಾಗಿದೆ.

**ಸಂಭಾವ್ಯ ಬಾಧ್ಯತೆಗಳನ್ನು ಕೆಳಕಂಡ ಸನ್ನಿವೇಶಗಳಿದ್ದಲ್ಲಿ ಬಹಿರಂಗ ಪಡಿಸಲಾಗಿದೆ:**

- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನಾವಳಿಯಿಂದ ಉಂಟಾಗಿದ್ದಲ್ಲಿ, ಆ ಬಾಧ್ಯತೆಯನ್ನು ಇತ್ಯರ್ಥಪಡಿಸಲು ಸಂಪನ್ಮೂಲಗಳ ರವಾನೆಯ ಅಗತ್ಯತೆ ಕಂಡು ಬರುವ ಸಾಧ್ಯತೆಗಳು ಇಲ್ಲದಿರುವಾಗ
- ಪ್ರಸಕ್ತ ಬಾಧ್ಯತೆಯು ಹಿಂದಿನ ಘಟನೆಯಿಂದ ಉಂಟಾಗಿದ್ದು ಬಾಧ್ಯತೆಯ ವಿಶ್ವಾಸನೀಯ ಅಂದಾಜು ಮಾಡಲು ಸಾಧ್ಯವಾಗದಿದ್ದಾಗ ಮತ್ತು
- ಹಿಂದಿನ ಘಟನಾವಳಿಗಳಿಂದ ಉಂಟಾಗಬಹುದಾದ ಬಾಧ್ಯತೆಗಳಲ್ಲಿ ಸಂಪನ್ಮೂಲಗಳ ರವಾನೆ ಸಾಧ್ಯತೆಗಳು ಕ್ಷೀಣವಾಗಿಲ್ಲದಿದ್ದಲ್ಲಿ;

ಸಂಭಾವ್ಯ ಆಸ್ತಿಗಳನ್ನು ಆರ್ಥಿಕ ಲಾಭಗಳ ಒಳಹರಿವಿಕೆಯ ಸಾಧ್ಯತೆಗಳಿದ್ದಾಗ ಲೆಕ್ಕ ನಿರ್ವಹಣಾ ವಿಭಾಗಕ್ಕೆ ಟಿಪ್ಪಣಿಗಳ ಮೂಲಕ ಹಣಕಾಸು ಹೇಳಿಕೆಗಳಲ್ಲಿ ತೋರಿಸಲಾಗುತ್ತದೆ.

ಪ್ರತಿ ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಂದು ಮುನ್ನೇರ್ಪಾಡುಗಳು, ಸಂಭಾವ್ಯ ಬಾಧ್ಯತೆಗಳು ಮತ್ತು ಸಂಭಾವ್ಯ ಆಸ್ತಿಗಳ ಕುರಿತು ಪರಿಶೀಲಿಸಲಾಗಿದೆ.

### ಪಿ) ಹಣಕಾಸು ಸಾಧನಗಳು-ಪ್ರಾರಂಭಿಕ ಮಾನ್ಯತೆ ಮತ್ತು ನಂತರದ ಮಾಪನ:

ಗ್ರೂಪ್ ಸಾಧನಗಳ ಒಪ್ಪಂದವಾದ ವ್ಯವಸ್ಥೆಗಳಿಗೆ ಪಾರ್ಟಿಯಾದಾಗ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ಮಾನ್ಯ ಮಾಡಿದೆ. ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಮಾನ್ಯತೆ ಮತ್ತು ಮಾಪನಕ್ಕೆ ಕೆಳಗೆ ತಿಳಿಸಿರುವಂತೆ ನೀತಿಯನ್ನು ನೋಡಿ:

#### ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ ಪ್ರಾರಂಭಿಕ ಮಾನ್ಯತೆ:

ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳನ್ನು ಪ್ರಾರಂಭದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಲಾಗುವುದು. ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳ (ಲಾಭ ಅಥವಾ ನಷ್ಟ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು ಮತ್ತು ಹಣಕಾಸಿನ ಹೊಣೆಗಾರಿಕೆಗಳು ಹೊರತಾಗಿ) ಸ್ವಾಧೀನ ಅಥವಾ ನೀಡಿಕೆಗೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ವೆಚ್ಚಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ಸೂಕ್ತವಾದಂತೆ ಹಣಕಾಸಿನ ಆಸ್ತಿಗಳು ಅಥವಾ ಹಣಕಾಸಿನ ಹೊಣೆಗಾರಿಕೆಗಳ ನ್ಯಾಯೋಚಿತ ಮೌಲ್ಯಕ್ಕೆ ಸೇರ್ಪಡೆ ಮಾಡಲಾಗಿದೆ ಅಥವಾ ಅದರಿಂದ ಕಳೆಯಲಾಗಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳ ಸ್ವಾಧೀನಕ್ಕೆ ಅಥವಾ ಹಣಕಾಸಿನ ಹೊಣೆಗಾರಿಕೆಗಳಿಗೆ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ವೆಚ್ಚಗಳನ್ನು ಲಾಭ ಅಥವಾ ನಷ್ಟದಲ್ಲಿ ತಕ್ಷಣ ಮಾನ್ಯ ಮಾಡಿದೆ.

#### ಹಣಕಾಸಿನ ಆಸ್ತಿಗಳ ತದನಂತರದ ಮಾಪನ:

ತದನಂತರದ ಮಾಪನದ ಉದ್ದೇಶಗಳಿಗಾಗಿ ಹಣಕಾಸಿನ ಆಸ್ತಿಗಳನ್ನು ನಾಲ್ಕು ಪ್ರವರ್ಗಗಳಾಗಿ ವರ್ಗೀಕರಿಸಿದೆ:

(ಎ) ಆರ್ಮಾರ್ಟೈಸ್ಡ್ ಬೆಲೆಯಲ್ಲಿನ ಹಣಕಾಸಿನ ಆಸ್ತಿಗಳು

(ಬಿ) ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು (ಎಫ್‌ವಿಟಿಒಸಿಐ)

(ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು (ಎಫ್‌ವಿಟಿಪಿಎಲ್)

(ಡಿ) ಇತರೆ ಸಮಗ್ರ ಆದಾಯ (ಎಫ್‌ವಿಟಿಒಸಿಐ) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವ ಈಕ್ವಿಟಿ ಸಾಧನಗಳು.

### ಎ) ಆಮಾರ್ಟೈಸ್ಡ್ ಬೆಲೆಯಲ್ಲಿನ ಹಣಕಾಸಿನ ಆಸ್ತಿಗಳು:

ಹಣಕಾಸಿನ ಆಸ್ತಿಯನ್ನು ವ್ಯವಹಾರದ ಮಾದರಿ ಒಳಗೆ ಹೊಂದಿದ್ದರೆ, ಇವುಗಳ ಧ್ಯೇಯವು ಒಪ್ಪಂದವಾದ ನಗದು ಹರಿವುಗಳ ಸಂಗ್ರಹಣೆಗಾಗಿ ಹಣಕಾಸಿನ ಆಸ್ತಿಗಳನ್ನು ಹೊಂದುವುದು, ಮತ್ತು ಬಾಕಿಯಿರುವ ಅಸಲು ಮೊತ್ತದ ಮೇಲೆ ಅಸಲು ಮತ್ತು ಬಡ್ಡಿಯ ಏಕ ಮಾತ್ರ ಪಾವತಿಗಳಿಗಾಗಿ (ಎಸ್‌ಪಿಪಿಐ) ನಗದು ಹರಿವುಗಳಿಗೆ ನಿಗದಿಪಡಿಸಿರುವ ದಿನಾಂಕಗಳಂದು ಉಂಟಾಗುವ ಹಣಕಾಸಿನ ಆಸ್ತಿಯ ಒಪ್ಪಂದವಾದ ಅವಧಿಯಲ್ಲಿ ಹೊಂದಿರುವುದಾಗಿರುವುದಾದಲ್ಲಿ ಅಮಾರ್ಟೈಸ್ಡ್ ಬೆಲೆಯಲ್ಲಿ ಹಣಕಾಸಿನ ಆಸ್ತಿಯನ್ನು ಮಾಪನ ಮಾಡಿದೆ.

ಈ ಪ್ರವರ್ಗವು ಕಂಪನಿಗೆ ಅತ್ಯಂತ ಪೂರಕವಾಗಿದೆ. ಪ್ರಾರಂಭಿಕ ಮಾಪನದ ನಂತರ ಅಂತಹ ಹಣಕಾಸಿನ ಆಸ್ತಿಗಳನ್ನು ತದನಂತರ ಅನ್ವಯವಾಗುವ ಬಡ್ಡಿದರದ (ಇಐಆರ್) ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿದೆ. ಸ್ವಾಧೀನದ ಮೇಲಿನ ಯಾವುದೇ ರಿಯಾಯಿತಿ ಅಥವಾ ಪ್ರೀಮಿಯಂ ಮತ್ತು ಇಐಆರ್‌ನ ಅವಿಭಾಜ್ಯ ಭಾಗವಾಗಿರುವ ಶುಲ್ಕಗಳು ಅಥವಾ ವೆಚ್ಚಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳುವ ಮೂಲಕ ಅಮಾರ್ಟೈಸ್ಡ್ ಬೆಲೆಯನ್ನು ಲೆಕ್ಕಾಚಾರ ಮಾಡಿದೆ. ಇಐಆರ್ ಅಮಾರ್ಟೈಜೇಷನ್ ಅನ್ನು ಲಾಭ ಅಥವಾ ನಷ್ಟದಲ್ಲಿ ಹಣಕಾಸಿನ ಆದಾಯದಲ್ಲಿ ಸೇರಿಸಲಾಗಿದೆ.

### (ಬಿ) ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು:

ಒಪ್ಪಂದವಾದ ನಗದು ಹರಿವು ಮತ್ತು ಹಣಕಾಸಿನ ಆಸ್ತಿಗಳ ಮಾರಾಟ ಈ ಎರಡರಿಂದ ಸಂಗ್ರಹಿಸುವ ಮೂಲಕ ಸಾಧಿಸುವ ಧ್ಯೇಯವಾಗಿರುವ ವ್ಯವಹಾರದ ಮಾದರಿ ಒಳಗೆ ಹಣಕಾಸಿನ ಆಸ್ತಿ ಹೊಂದಿದ್ದಲ್ಲಿ ಮತ್ತು ಹಣಕಾಸಿನ ಆಸ್ತಿಯ ಒಪ್ಪಂದವಾದ ನಿಯಮಗಳು ನಿಗದಿತ ದಿನಾಂಕಗಳಲ್ಲಿ ಬಾಕಿಯಿರುವ ಅಸಲು ಮೊತ್ತದ ಮೇಲಿನ ಬಡ್ಡಿ ಮತ್ತು ಅಸಲಿನ (ಎಸ್‌ಪಿಪಿಐ) ಏಕೈಕ ಪಾವತಿಗಳಾಗಿರುವ ನಗದು ಹರಿವುಗಳಿಗೆ ಹೆಚ್ಚಳದ ಅವಕಾಶ ನೀಡುವ ಹಣಕಾಸಿನ ಆಸ್ತಿಗಳಾಗಿದ್ದರೆ ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಯನ್ನು ಮಾಪನ ಮಾಡಿದೆ.

ಎಫ್‌ವಿಟಿಒಸಿಐ ಪ್ರವರ್ಗದ ಒಳಗೆ ಸೇರಿರುವ ಹಣಕಾಸಿನ ಆಸ್ತಿಗಳನ್ನು ಪ್ರತಿ ವರದಿ ದಿನಾಂಕದಲ್ಲಿ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ. ನ್ಯಾಯೋಚಿತ ಮೌಲ್ಯದ ಚಲನೆಯನ್ನು ಇತರೆ ಸಮಗ್ರ ಆದಾಯದಲ್ಲಿ (ಒಸಿಐ) ಮಾನ್ಯ ಮಾಡಿದೆ. ಆದರೂ, ಬಡ್ಡಿ ಆದಾಯ, ದುರ್ಬಲತೆ ನಷ್ಟಗಳು ಮತ್ತು ವ್ಯತಿರಿಕ್ತತೆಗಳು ಮತ್ತು ವಿದೇಶಿ ವಿನಿಮಯ ಲಾಭ ಅಥವಾ ನಷ್ಟವನ್ನು ಗ್ರೂಪ್ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ಮೊದಲು ಒಸಿಐನಲ್ಲಿ ಮಾನ್ಯ ಮಾಡಿದ್ದ ಆಸ್ತಿ , ಸಂಚಿತ ಲಾಭ ಅಥವಾ ನಷ್ಟದ ಅಮಾನ್ಯತೆಯನ್ನು ಪಿ ಮತ್ತು ಎಲ್ ಗೆ ಈಕ್ವಿಟಿಯಿಂದ ಮರು ವರ್ಗೀಕರಣ ಮಾಡಿದೆ. ಎಫ್‌ವಿಟಿಒಸಿಐ ಹಣಕಾಸಿನ ಆಸ್ತಿ ಹೊಂದಿದ್ದಾಗ ಗಳಿಸಿದ ಬಡ್ಡಿಯನ್ನು

ಇಐಆರ್ ವಿಧಾನ ಬಳಸಿ ಬಡ್ಡಿ ಆದಾಯ ಎಂಬುದಾಗಿ ವರದಿ ಮಾಡಿದೆ.

**(ಸಿ) ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಆಸ್ತಿಗಳು:**

ಹಣಕಾಸಿನ ಆಸ್ತಿಗಳನ್ನು ಪ್ರಾರಂಭಿಕ ಮಾನ್ಯತೆಯಲ್ಲಿ ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಅಥವಾ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿರದ ಹೊರತು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳನ್ನು ಮಾಪನ ಮಾಡಿದೆ. ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಹಣಕಾಸಿನ ಆಸ್ತಿಗಳ ನೇರವಾಗಿ ಅನ್ವಯಿಸಬಹುದಾದ ವ್ಯವಹಾರದ ಬೆಲೆಗಳನ್ನು ತಕ್ಷಣ ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ.

ಗ್ರೂಪ್ ಹಣಕಾಸಿನ ಆಸ್ತಿಯನ್ನು ನಿಯುಕ್ತಿಗೆ ಆಯ್ಕೆ ಮಾಡಬಹುದು. ಇಲ್ಲದಿದ್ದರೆ ಅದು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ, ಇತರೆ ಸಮಗ್ರ ಆದಾಯದ ಮಾನದಂಡದ ಮೂಲಕ ಅಮಾರ್ಟೈಸ್ಡ್ ಬೆಲೆ ಅಥವಾ ನ್ಯಾಯೋಚಿತ ಮೌಲ್ಯವನ್ನು ಹೊಂದಬೇಕಾಗುತ್ತದೆ. ಆದರೂ, ಹಾಗೆ ಮಾಡುವಾಗ ಮಾಪನ ಅಥವಾ ಸುಸ್ಥಿರವಾಗಿರದ ಮಾನ್ಯತೆ ಕಡಿಮೆಯಾದರೆ ಅಥವಾ ತೊಡೆದು ಹಾಕಿದರೆ ಮಾತ್ರ ('ಲೆಕ್ಕ ನಿರ್ವಹಣೆ ಅಸಂಗತತೆ' ಎಂದು ತಿಳಿಸಿದೆ) ಅಂತಹ ಆಯ್ಕೆಗೆ ಅವಕಾಶ ನೀಡಲಾಗಿದೆ. ಗ್ರೂಪ್ ಎಫ್‌ವಿಟಿಪಿಎಲ್‌ನಲ್ಲಿ ಇದ್ದಂತೆ ಯಾವುದೇ ಋಣ ಸಾಧನಗಳನ್ನು ನಿಯುಕ್ತಿ ಮಾಡಿರುವುದಿಲ್ಲ.

**(ಡಿ) ಈಕ್ವಿಟಿ ಸಾಧನಗಳು:**

ಸಹಾಯಕ ಕಂಪನಿಗಳು, ಜಂಟಿ ಉದ್ಯಮಗಳು ಮತ್ತು ಸಹವರ್ತಿ ಕಂಪನಿಗಳಲ್ಲಿನ ಹೂಡಿಕೆ ಹೊರತಾಗಿ, ಐಎನ್‌ಡಿ-ಎಎಸ್ 109ರ ವ್ಯಾಪ್ತಿಯಲ್ಲಿನ ಎಲ್ಲಾ ಈಕ್ವಿಟಿ ಹೂಡಿಕೆಗಳನ್ನು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ. ವ್ಯಾಪಾರಕ್ಕಾಗಿ ಹೊಂದಿರುವ ಈಕ್ವಿಟಿ ಸಾಧನಗಳನ್ನು ಎಫ್‌ವಿಟಿಪಿಎಲ್ ನಲ್ಲಿ ಇದ್ದಂತೆ ವರ್ಗೀಕರಿಸಲಾಗಿದೆ. ಇತರೆ ಎಲ್ಲಾ ಈಕ್ವಿಟಿ ಸಾಧನಗಳಿಗೆ, ನ್ಯಾಯೋಚಿತ ಮೌಲ್ಯದಲ್ಲಿನ ತದನಂತರದ ಬದಲಾವಣೆಗಳ ಇತರೆ ಸಮಗ್ರ ಆದಾಯದಲ್ಲಿ ನಿರೂಪಿಸಲು ಗ್ರೂಪ್ ಹಿಂಪಡೆಯಲಾಗದ ಆಯ್ಕೆಯನ್ನು ಮಾಡಬಹುದು. ಗ್ರೂಪ್ ಅಂತಹ ಆಯ್ಕೆಯನ್ನು ಸಾಧನದಿಂದ ಸಾಧನದ ಆಧಾರದ ಮೇಲೆ ಮಾಡುವುದು. ಪ್ರಾರಂಭಿಕ ಮಾನ್ಯತೆಯಲ್ಲಿ ವರ್ಗೀಕರಣ ಮಾಡಿದೆ ಮತ್ತು ಇದು ಹಿಂಪಡೆಯುವುದಾಗಿರುವುದಿಲ್ಲ.

ಸಹಾಯಕ ಕಂಪನಿಗಳು, ಜಂಟಿ ಉದ್ಯಮಗಳು ಮತ್ತು ಸಹವರ್ತಿ ಕಂಪನಿಗಳಲ್ಲಿನ ಈಕ್ವಿಟಿ ಹೂಡಿಕೆಯನ್ನು ಐಎನ್‌ಡಿ-ಎಎಸ್ 27-ಪ್ರತ್ಯೇಕ ಹಣಕಾಸಿನ ಹೇಳಿಕೆಗಳ ಅನ್ವಯ ಬೆಲೆಯಲ್ಲಿ ಮಾಪನ ಮಾಡಿದೆ.

ಕಂಪನಿಯು ಈಕ್ವಿಟಿ ಸಾಧನವನ್ನು ಎಫ್‌ವಿಟಿಒಸಿಐನಲ್ಲಿರುವಂತೆ ವರ್ಗೀಕರಿಸಲು ತೀರ್ಮಾನಿಸಿದ್ದೇ ಆದರೆ, ಆಗ ಲಾಭಾಂಶಗಳನ್ನು ಬಿಟ್ಟು, ಸಾಧನಗಳಲ್ಲಿನ ಎಲ್ಲಾ ನ್ಯಾಯೋಚಿತ ಮೌಲ್ಯ ಬದಲಾವಣೆಗಳನ್ನು ಒಸಿಐನಲ್ಲಿ ಮಾನ್ಯ ಮಾಡಿದೆ. ಹೂಡಿಕೆಯನ್ನು ಮಾರಾಟ ಮಾಡಿದಾಗಲೂ ಸಹ, ಮೊತ್ತಗಳನ್ನು ಒಸಿಐನಿಂದ ಲಾಭ ಮತ್ತು ನಷ್ಟದ ಹೇಳಿಕೆಗೆ ಪುನರಾವರ್ತನೆ ಮಾಡಿರುವುದಿಲ್ಲ. ಆದರೂ, ಗ್ರೂಪ್ ಸಂಚಿತ ಲಾಭ ಅಥವಾ ನಷ್ಟವನ್ನು ಈಕ್ವಿಟಿ ಒಳಗೆ ವರ್ಗಾಯಿಸಬಹುದಾಗಿರುವುದು.

**ಹಣಕಾಸಿನ ಆಸ್ತಿಗಳ ದುರ್ಬಲತೆ:**

ಹಣಕಾಸಿನ ಆಸ್ತಿಯನ್ನು (ಅಥವಾ ಹಣಕಾಸಿನ ಆಸ್ತಿಗಳ ಒಂದು ಗುಂಪು) ಅಂದರೆ ಹೂಡಿಕೆಗಳು, ವ್ಯಾಪಾರದಿಂದ ಬರಬೇಕಾದವುಗಳು, ಮುಂಗಡಗಳು ಮತ್ತು ಭದ್ರತಾ ಠೇವಣಿಗಳನ್ನು ಅಮಾರ್ಟೈಸ್ಡ್ ಬೆಲೆಯಲ್ಲಿ ಹೊಂದಿರುವುದೇ ಎಂಬುದನ್ನು ಗ್ರೂಪ್ ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಣೆ ಮಾಡುವುದು ಮತ್ತು ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ, ಮೌಲ್ಯದಲ್ಲಿ ಯಾವುದೇ ಅನಗತ್ಯ ವೆಚ್ಚ ಅಥವಾ ಶ್ರಮವಿಲ್ಲದೆ ಲಭ್ಯವಿರುವ ಮಾಹಿತಿ ಅಥವಾ ಪುರಾವೆಯ ಆಧಾರದ ಮೇಲೆ ಆಧಾರಿತವಾದ ದುರ್ಬಲತೆಗಾಗಿ ಪರೀಕ್ಷಿಸಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟವನ್ನು (ಇಸಿಎಲ್) ನಿರ್ಧರಣೆ ಮಾಡಿದೆ ಮತ್ತು ಹಣಕಾಸಿನ ಆಸ್ತಿಯ ಕ್ರೆಡಿಟ್ ಗುಣಮಟ್ಟ ಪ್ರಾರಂಭಿಕ ಮಾನ್ಯತೆ ಸಮಯದಿಂದ ಗಣನೀಯವಾಗಿ ಕ್ಷೀಣಿಸಿದ್ದೇ ಆದರೆ ನಷ್ಟದ ಅವಕಾಶಗಳನ್ನು ಮಾನ್ಯ ಮಾಡಿದೆ.

ಮಹತ್ತರವಾದ ಹಣಕಾಸಿನ ಘಟಕವಿಲ್ಲದೆ ವ್ಯಾಪಾರದ ಸಂಬಂಧ ಬರಬೇಕಾಗಿರುವಿಕೆಗಳಿಗೆ ನಷ್ಟದ ಅವಕಾಶವನ್ನು ಜೀವಿತಾವಧಿ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ಇತರೆ ಎಲ್ಲಾ ಹಣಕಾಸಿನ ಆಸ್ತಿಗಳಿಗೆ, ಜೀವಿತಾವಧಿ ಇಸಿಎಲ್‌ನಲ್ಲಿ ಮಾಪನ ಮಾಡಿರುವ ಪ್ರಾರಂಭಿಕ ಮಾನ್ಯತೆಯಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಾಗಿರದಿದ್ದರೆ ಇಸಿಎಲ್ ಅನ್ನು 12 ತಿಂಗಳ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ನಿರೀಕ್ಷಿತ ಕ್ರೆಡಿಟ್ ನಷ್ಟಗಳ (ಅಥವಾ ಹಿಮ್ಮುಖಗೊಳಿಸುವುದು) ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ದುರ್ಬಲತೆಯ ಲಾಭ ಅಥವಾ ನಷ್ಟ ಎಂಬುದಾಗಿ ಮಾನ್ಯ ಮಾಡಬೇಕಾಗಿರುವ ಮೊತ್ತಕ್ಕೆ ವರದಿಯ ದಿನಾಂಕದಲ್ಲಿ ನಷ್ಟದ ಅವಕಾಶಕ್ಕೆ ಹೊಂದಾಣಿಕೆ ಮಾಡಬೇಕಾಗುವುದು.

**ಹಣಕಾಸಿನ ಆಸ್ತಿಗಳ ಅಮಾನ್ಯತೆ:**

ಆಸ್ತಿಗಳಿಂದ ನಗದು ಹರಿವುಗಳನ್ನು ಸ್ವೀಕರಿಸುವ ಹಕ್ಕು ಮುಕ್ತಾಯವಾದಾಗ, ಅಥವಾ ವರ್ಗಾವಣೆಯಾದಾಗ, ಮತ್ತು ಗ್ರೂಪ್ ಮಾಲೀಕತ್ವದ ಎಲ್ಲಾ ಅಪಾಯಗಳು ಮತ್ತು ಪ್ರತಿಫಲಗಳನ್ನು ಗಣನೀಯವಾಗಿ ವರ್ಗಾವಣೆ ಮಾಡಿರುವಾಗ ಹಣಕಾಸಿನ ಆಸ್ತಿಗಳನ್ನು ಅಮಾನ್ಯಗೊಳಿಸಿದೆ.

ಒಟ್ಟಾರೆಯಾಗಿ, ಈ ಕೆಳಕಂಡಂತೆ ಒಂದು ಆಸ್ತಿಯನ್ನು ಮಾಪನ ಮಾಡಿದ್ದರೆ;

(ಎ) ಅಮಾರ್ಟೈಸ್ಡ್ ಬೆಲೆ, ಲಾಭ ಮತ್ತು ನಷ್ಟವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದ್ದರೆ;

(ಬಿ) ಆಸ್ತಿಯು ಈಕ್ವಿಟಿ ಹೂಡಿಕೆಗಳನ್ನು ಪ್ರತಿನಿಧಿಸದಿದ್ದರೆ ಮತ್ತು ಈ ವಿಚಾರದಲ್ಲಿ ಈ ಹಿಂದೆ ಮೀಸಲು ನಿಧಿಗಳಿಗೆ ಸಂಚಿತ ನ್ಯಾಯೋಚಿತ ಮೌಲ್ಯದ ಹೊಂದಾಣಿಕೆಯನ್ನು ತೆಗೆದುಕೊಂಡು ಈಕ್ವಿಟಿ ಒಳಗೆ ಮರು ವರ್ಗೀಕರಣ ಮಾಡಿರದ ಹೊರತು, ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯವನ್ನು, ಈ ಮೊದಲು ಮೀಸಲು ನಿಧಿಗೆ ತೆಗೆದುಕೊಂಡಿರುವ ಸಂಚಿತ ನ್ಯಾಯೋಚಿತ ಮೌಲ್ಯದ ಹೊಂದಾಣಿಕೆಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಗೆ ಮರು ವರ್ಗೀಕರಣ ಮಾಡಿರುವಾಗ ಆ ಆಸ್ತಿಯನ್ನು ಅಮಾನ್ಯಗೊಳಿಸಿದೆ.

ಮರು ವರ್ಗೀಕರಣ

ವ್ಯವಹಾರದ ಮಾದರಿ ಬದಲಾವಣೆಯಾದಾಗ ಮಾತ್ರ, ಈ ಹಿಂದೆ ಮಾನ್ಯ ಮಾಡಿದ್ದ ಲಾಭ, ನಷ್ಟಗಳು ಅಥವಾ ಬಡ್ಡಿಯನ್ನು ಮರಳಿ ತಿಳಿಸದೆ ಅಮಾರ್ಟೈಸ್ಡ್ ಬೆಲೆ, ಇತರೆ ಸಮಗ್ರ ಆದಾಯದ ಮೂಲಕ ನ್ಯಾಯೋಚಿತ ಮೌಲ್ಯ, ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮತ್ತು ಹಣಕಾಸಿನ ಸಾಧನಗಳಿಗೆ ಸಂಬಂಧಿಸಿದ ಐಎನ್‌ಡಿ ಎಎಸ್‌ನಲ್ಲಿ ತಿಳಿಸಿರುವ ಮರು ವರ್ಗೀಕರಣ ನೀತಿಗಳ ಅನುಸಾರ ತದನಂತರ ಮಾಪನ ಮಾಡಿದಂತೆ ಗ್ರೂಪ್ ಮರು ವರ್ಗೀಕರಣದ ದಿನಾಂಕದಿಂದ ಅನ್ವಯವಾಗುವ ಹಣಕಾಸಿನ ಆಸ್ತಿಗಳನ್ನು ಅನುಗುಣವಾಗಿ ಮರು ವರ್ಗೀಕರಣ ಮಾಡತಕ್ಕದ್ದು.

**ಹಣಕಾಸಿನ ಹೊಣೆಗಾರಿಕೆಗಳು ಮತ್ತು ಈಕ್ವಿಟಿ ಸಾಧನಗಳು:**

**ಸಾಲ ಅಥವಾ ಈಕ್ವಿಟಿಯಾಗಿ ವರ್ಗೀಕರಣ:**

ಗ್ರೂಪ್ ನೀಡಿರುವ ಸಾಲ ಮತ್ತು ಈಕ್ವಿಟಿ ಪತ್ರಗಳನ್ನು ಒಪ್ಪಂದದ ವ್ಯವಸ್ಥೆಗಳ ಸಾರಾಂಶದ ಮತ್ತು ಹಣಕಾಸಿನ ಹೊಣೆಗಾರಿಕೆಗಳು ಮತ್ತು ಈಕ್ವಿಟಿ ಪತ್ರದ ವ್ಯಾಖ್ಯಾನಗಳ ಅನುಸಾರ ಹಣಕಾಸಿನ ಹೊಣೆಗಾರಿಕೆಗಳು ಅಥವಾ ಈಕ್ವಿಟಿಯನ್ನಾಗಿ ವರ್ಗೀಕರಿಸಿದೆ.

**ಹಣಕಾಸಿನ ಹೊಣೆಗಾರಿಕೆಗಳು:**

ಎಲ್ಲಾ ಹಣಕಾಸಿನ ಹೊಣೆಗಾರಿಕೆಗಳನ್ನು ತದನಂತರ ಅನ್ವಯವಾಗುವ ಬಡ್ಡಿ ವಿಧಾನ ಬಳಸಿ ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿದೆ.

**ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯಗಳಲ್ಲಿನ ಹಣಕಾಸಿನ ಹೊಣೆಗಾರಿಕೆಗಳು:**

ಲಾಭ ಅಥವಾ ನಷ್ಟದ ಮೂಲಕದ ನ್ಯಾಯೋಚಿತ ಮೌಲ್ಯದಲ್ಲಿನ ಹಣಕಾಸಿನ ಹೊಣೆಗಾರಿಕೆಗಳಲ್ಲಿ ವ್ಯಾಪಾರಕ್ಕಾಗಿ ಹೊಂದಿರುವ ಹಣಕಾಸಿನ ಹೊಣೆಗಾರಿಕೆಗಳು ಮತ್ತು ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ ಪ್ರಾರಂಭಿಕ ಮಾನ್ಯತೆಯಾದಾಗ ಗೊತ್ತುಪಡಿಸಿರುವ ಹಣಕಾಸಿನ ಹೊಣೆಗಾರಿಕೆಗಳು ಸೇರಿರುವವು. ಹಣಕಾಸಿನ ಹೊಣೆಗಾರಿಕೆಗಳನ್ನು ಅವುಗಳನ್ನು ಸಮೀಪದ ಅವಧಿಯಲ್ಲಿ ಮರು ಖರೀದಿಯ ಉದ್ದೇಶಕ್ಕಾಗಿ ಒಳಪಟ್ಟಿದ್ದರೆ ಅವುಗಳನ್ನು ವ್ಯಾಪಾರಕ್ಕಾಗಿ ಹೊಂದಿರುವವುಗಳೆಂದು ವರ್ಗೀಕರಿಸಿದೆ. ಈ ಪ್ರವರ್ಗದಲ್ಲಿಯೂ ಸಹ ಐಎನ್‌ಡಿ-ಎಎಸ್ 109ರಲ್ಲಿ ವ್ಯಾಖ್ಯಾನಿಸಿರುವಂತೆ ರಕ್ಷಣೆ ಸಂಬಂಧದಲ್ಲಿ ರಕ್ಷಣೆ ಸಾಧನಗಳಾಗಿ ಗೊತ್ತುಪಡಿಸಿರದ, ಗ್ರೂಪ್‌ನಿಂದ ಮಾಡಿಕೊಂಡ ಜನ್ಯ ಹಣಕಾಸಿನ ಪತ್ರಗಳೂ ಸೇರಿರುವವು.

ವ್ಯಾಪಾರಕ್ಕಾಗಿ ಹೊಂದಿರುವ ಹೊಣೆಗಾರಿಕೆಗಳ ಮೇಲಿನ ಲಾಭಗಳು ಅಥವಾ ನಷ್ಟಗಳನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ.

ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಪ್ರಾರಂಭಿಕ ಮಾನ್ಯತೆಯಲ್ಲಿ ಗೊತ್ತುಪಡಿಸಿರುವ ಹಣಕಾಸಿನ ಹೊಣೆಗಾರಿಕೆಗಳನ್ನು ಮಾನ್ಯತೆಯ ಪ್ರಾರಂಭಿಕ ದಿನಾಂಕದಲ್ಲಿ ಗೊತ್ತುಪಡಿಸಿದೆ ಮತ್ತು ಅವುಗಳನ್ನು ಎಫ್‌ವಿಟಿಪಿಎಲ್, ಸ್ವಂತ ಕ್ರೆಡಿಟ್ ನಷ್ಟಗಳಲ್ಲಿ ಬದಲಾವಣೆಗಳಿಗೆ ಅನ್ವಯಿಸಬಹುದಾದ ನ್ಯಾಯೋಚಿತ ಮೌಲ್ಯದ ಲಾಭಗಳು/ನಷ್ಟಗಳಾಗಿ ಗೊತ್ತುಪಡಿಸಿರುವ ಹೊಣೆಗಾರಿಕೆಗಳನ್ನು ಒಸಿಐನಲ್ಲಿ ಮಾನ್ಯ ಮಾಡಿದೆ. ಈ ಲಾಭಗಳು/ನಷ್ಟಗಳನ್ನು ತದನಂತರ ಲಾಭ ಅಥವಾ ನಷ್ಟದ ಹೇಳಿಕೆಗೆ ವರ್ಗಾಯಿಸಲಾಗದು. ಆದರೂ, ಗ್ರೂಪ್ ಈಕ್ವಿಟಿ ಒಳಗೆ ಸಂಚಿತ ಲಾಭ ಅಥವಾ ನಷ್ಟವನ್ನು ವರ್ಗಾಯಿಸಬಹುದಾಗಿದೆ. ಅಂತಹ ಹೊಣೆಗಾರಿಕೆಯ ನ್ಯಾಯೋಚಿತ ಮೌಲ್ಯದಲ್ಲಿನ ಇತರೆ ಎಲ್ಲಾ ಬದಲಾವಣೆಗಳನ್ನು ಲಾಭ ಅಥವಾ ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಲಾಭ ಮತ್ತು ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯದಲ್ಲಿದ್ದಂತೆ ಯಾವುದೇ ಹಣಕಾಸಿನ ಹೊಣೆಗಾರಿಕೆಯನ್ನು ಗ್ರೂಪ್ ಗೊತ್ತುಪಡಿಸಿರುವುದಿಲ್ಲ.

**ಈಕ್ವಿಟಿ ಸಾಧನಗಳು:**

ಈಕ್ವಿಟಿ ಸಾಧನವು ಸಂಸ್ಥೆ ಒಂದರ ಆಸ್ತಿಗಳಲ್ಲಿ ಅದರ ಎಲ್ಲಾ ಹೊಣೆಗಾರಿಕೆಗಳನ್ನು ಕಳೆದ ನಂತರ ಉಳಿಯುವ ಬಡ್ಡಿಯ ಪುರಾವೆಯಾಗಿರುವ ಯಾವುದೇ ಗುತ್ತಿಗೆಯಾಗಿರುವುದು. ಗ್ರೂಪ್ ನೀಡಿರುವ ಈಕ್ವಿಟಿ ಸಾಧನಗಳನ್ನು ಪಡೆದ ಹಣದ ಮೊತ್ತದಲ್ಲಿ, ನೇರ ನೀಡಿಕೆ ಬೆಲೆಗಳ ನಿವ್ವಳದಲ್ಲಿ ಮಾನ್ಯ ಮಾಡಿದೆ.

**ಹಣಕಾಸಿನ ಖಾತರಿ ಒಪ್ಪಂದಗಳು:**

ಹಣಕಾಸಿನ ಖಾತರಿ ಒಪ್ಪಂದವು, ಋಣ ಸಾಧನದ ನಿಯಮಗಳ ಅನುಸಾರ ಬಾಕಿಯಾದಾಗ ಹಣ ಪಾವತಿ ಮಾಡಲು ನಿರ್ದಿಷ್ಟಪಡಿಸಿದ ಸಾಲಗಾರ ವಿಫಲವಾಗುವುದರಿಂದ ಉಂಟಾಗುವ ನಷ್ಟವನ್ನು ಈಕ್ವಿಟಿದಾರರಿಗೆ ಮರಳಿ ತುಂಬಿಕೊಡುವುದಕ್ಕೆ ನಿಗದಿಪಡಿಸದ ಪಾವತಿಗಳನ್ನು ನೀಡಿಕೆದಾರ ಮಾಡಬೇಕಾಗಿರುವ ಒಂದು ಒಪ್ಪಂದವಾಗಿರುವುದು.

ಗ್ರೂಪ್ ನೀಡಿರುವ ಹಣಕಾಸಿನ ಖಾತರಿ ಒಪ್ಪಂದಗಳನ್ನು ಪ್ರಾರಂಭಿಕವಾಗಿ ಅವುಗಳ ನ್ಯಾಯೋಚಿತ ಮೌಲ್ಯಗಳಲ್ಲಿ ಮಾಪನ ಮಾಡಿದೆ ಮತ್ತು ಎಫ್‌ವಿಟಿಪಿಎಲ್‌ನಲ್ಲಿ ಗೊತ್ತುಪಡಿಸದಿದ್ದಲ್ಲಿ, ಅವುಗಳನ್ನು ತದನಂತರ ಈ ಕೆಳಕಂಡವುಗಳ ಹೆಚ್ಚಿನ ಪ್ರಮಾಣದಲ್ಲಿ ಮಾಪನ ಮಾಡಿದೆ:

★ ಐಎನ್‌ಡಿ ಎಎಸ್ 109ರ ದುರ್ಬಲತೆ ಅಗತ್ಯತೆಗಳ ಅನುಸಾರ ನಿರ್ಧರಣೆ ಮಾಡಿದ ನಷ್ಟದ ಅವಕಾಶದ ಮೊತ್ತದಲ್ಲಿ, ಮತ್ತು

★ ಸೂಕ್ತವಾಗಿದ್ದಾಗ ಪ್ರಾರಂಭಿಕವಾಗಿ ಮಾನ್ಯ ಮಾಡಿದ ಕಡಿಮೆ ಮೊತ್ತದಲ್ಲಿ, ಐಎನ್‌ಡಿ ಎಎಸ್ 18ರ ನೀತಿಗಳ ಅನುಸಾರ ಮಾನ್ಯ ಮಾಡಿದ ಆದಾಯದ ಸಂಚಿತ ಮೊತ್ತದಲ್ಲಿ.

### ಹಣಕಾಸಿನ ಹೊಣೆಗಾರಿಕೆಗಳ ಅಮಾನ್ಯೀಕರಣ:

ಗ್ರೂಪ್ ಹೊಣೆಗಾರಿಕೆಗಳನ್ನು ಪಾವತಿ ಮಾಡಿ ಪೂರೈಸಿದಾಗ, ರದ್ದುಪಡಿಸಿದಾಗ ಅಥವಾ ಅವಧಿ ಮುಗಿದಾಗ ಮಾತ್ರ ಕಂಪನಿಯು ಹಣಕಾಸಿನ ಹೊಣೆಗಾರಿಕೆಗಳನ್ನು ಅಮಾನ್ಯಗೊಳಿಸಿದೆ. ಗಣನೀಯವಾಗಿ ಬೇರೆ ಅವಧಿಗಳನ್ನು ಒಳಗೊಂಡ ಋಣ ಸಾಧನಗಳ ನೀಡಿಕೆದಾರನೊಡನಿನ ವಿನಿಮಯವನ್ನು ಮೂಲ ಹಣಕಾಸಿನ ಹೊಣೆಗಾರಿಕೆಯ ತೀರುವಳಿಯಾಗಿ ಪರಿಗಣಿಸಿದೆ ಮತ್ತು ಹೊಸ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸಿದೆ. ಇದೇ ರೀತಿ, ಹಾಲಿಯಿರುವ ಹಣಕಾಸಿನ ಹೊಣೆಗಾರಿಕೆಯ (ಸಾಲಗಾರರ ಹಣಕಾಸಿನ ಸಂಕಷ್ಟಕ್ಕೆ ಅನ್ವಯಿಸಿರಲಿ ಅಥವಾ ಅನ್ವಯಿಸಿರದಿರಲಿ) ಅವಧಿಗಳ ಗಣನೀಯ ಮಾರ್ಪಾಡನ್ನು ಮೂಲ ಹಣಕಾಸಿನ ಹೊಣೆಗಾರಿಕೆ ತೀರುವಳಿಯಾಗಿ ಪರಿಗಣಿಸಿದೆ ಮತ್ತು ಹೊಸ ಹಣಕಾಸಿನ ಹೊಣೆಗಾರಿಕೆಯನ್ನು ಗುರುತಿಸಿದೆ. ಅಮಾನ್ಯಗೊಳಿಸಿದ ಹಣಕಾಸಿನ ಹೊಣೆಗಾರಿಕೆಯ ವಾಹಕ ಮೊತ್ತ ಮತ್ತು ಪಾವತಿ ಮಾಡಿದ ಮತ್ತು ಪಾವತಿ ಮಾಡಬೇಕಿರುವ ಮೊತ್ತದ ನಡುವಿನ ವ್ಯತ್ಯಾಸವನ್ನು ಲಾಭ ಅಥವಾ ನಷ್ಟದಲ್ಲಿ ಮಾನ್ಯ ಮಾಡಿದೆ.

### ಹಣಕಾಸಿನ ಸಾಧನಗಳನ್ನು ಸರಿದೂಗಿಸುವುದು:

ಹಣಕಾಸಿನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸರಿದೂಗಿಸಲಾಗಿದೆ ಮತ್ತು ಮಾನ್ಯ ಮಾಡಿದ ಮೊತ್ತಗಳನ್ನು ಸರಿದೂಗಿಸುವ ಬಗ್ಗೆ ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಹಕ್ಕು ಇದ್ದಾಗ ಮತ್ತು ನಿವ್ವಳ ಆಧಾರದ ಮೇಲೆ ಇತ್ಯರ್ಥಪಡಿಸುವ ಅಪೇಕ್ಷೆ ಇದ್ದಾಗ ಅಥವಾ ಆಸ್ತಿಯನ್ನು ನಗದಾಗಿಸಿದಾಗ ಮತ್ತು ಏಕಕಾಲದಲ್ಲಿ ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಿದಾಗ ನಿವ್ವಳ ಮೊತ್ತವನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ತಿಳಿಸಿದೆ. ಕಾನೂನಾತ್ಮಕವಾಗಿ ಜಾರಿಗೊಳಿಸಬಹುದಾದ ಹಕ್ಕು ಮುಂದಿನ ದಿನಗಳಲ್ಲಿನ ಘಟನಾವಳಿಗಳ ಬಗ್ಗೆ ಸಂಭಾವ್ಯವಾಗಿರಬಾರದು ಮತ್ತು ಅದು ವ್ಯವಹಾರದಸಾಮಾನ್ಯ ರೀತಿಯಲ್ಲಿಜಾರೊಗೊಳಿಸಬಹುದಾಗಿರಬೇಕು ಮತ್ತು ಗ್ರೂಪ್ ಅಥವಾ ಎದುರು ಪಾರ್ಟಿಯು ಸುಸ್ತಿ ಅಥವಾ ದಿವಾಳಿ ಅಥವಾ ಸಾಲ ತೀರಿಸಲಾಗದಿದ್ದ ಸಂದರ್ಭದಲ್ಲಿ ಇದನ್ನು ಜಾರಿಗೊಳಿಸಬಹುದಾಗಿರುವುದು.

### ಕ್ಯು. ಹಣಕಾಸಿನ ಆಸ್ತಿಗಳ ದುರ್ಬಲತೆ

ಗ್ರೂಪ್ ಲಾಭ ಅಥವಾ ನಷ್ಟದ ಮೂಲಕ ನ್ಯಾಯೋಚಿತ ಮೌಲ್ಯಮಾಪನ ಮಾಡಿರದ ನಷ್ಟಗಳ ಬಗ್ಗೆ ಹಣಕಾಸಿನ ಆಸ್ತಿಗಳ ನಿರೀಕ್ಷಿತ ಕ್ರೆಡಿಟ್ ನಷ್ಟ (ಇಸಿಎಲ್) ಮಾದರಿ ಬಳಸಿ ನಷ್ಟದ ಅವಕಾಶಗಳನ್ನು ಮಾನ್ಯ ಮಾಡಿದೆ. ಗಣನೀಯವಾದ ಹಣಕಾಸಿನ ಘಟಕ ಹೊಂದಿರದ ವ್ಯಾಪಾರ ಸಂಬಂಧದಲ್ಲಿ ಪಡೆಯಬಹುದಾಗಿರುವ ಸಮನಾದ ಮೊತ್ತದಲ್ಲಿ ವ್ಯಾಪಾರದ ಸಂಬಂಧ ಬರಬೇಕಾದ ನಷ್ಟದ ಅವಕಾಶವನ್ನು ಮಾಪನ ಮಾಡಿದೆ. ಪ್ರಾರಂಭಿಕ ಮಾನ್ಯತೆಯಿಂದ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳ ಆಗದಿರುವ ಹೊರತು, ಇತರೆ ಎಲ್ಲಾ ಹಣಕಾಸಿನ ಆಸ್ತಿಗಳಿಗೆ ನಿರೀಕ್ಷಿತ ಕ್ರೆಡಿಟ್ ನಷ್ಟಗಳನ್ನು ಹನ್ನೆರಡು ತಿಂಗಳ ಇಸಿಎಲ್‌ಗೆ ಸಮನಾದ ಮೊತ್ತದಲ್ಲಿ ಮಾಪನ ಮಾಡಿದೆ. ಪ್ರಾರಂಭಿಕ ಮಾನ್ಯತೆಯಿಂದ ಕೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಾಗಿದಲ್ಲಿ ಆ ವಿಚಾರದಲ್ಲಿ ಜೀವಿತಾವಧಿ ಇಸಿಎಲ್‌ನಲ್ಲಿ ಮಾಪನ ಮಾಡಿದೆ. ಮಾನ್ಯತೆ ಮಾಡಬೇಕಾಗಿರುವ ಮೊತ್ತಕ್ಕೆ ವರದಿಯ ದಿನಾಂಕದಲ್ಲಿ ನಷ್ಟದ ಅವಕಾಶ ಹೊಂದಾಣಿಕೆಗೆ ಬೇಕಾಗಿರುವ ನಿರೀಕ್ಷಿತ ಕ್ರೆಡಿಟ್ ನಷ್ಟ (ಅಥವಾ ಪ್ರತಿಲೋಮ)ದ ಮೊತ್ತವನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ದುರ್ಬಲತೆಯ ಲಾಭ ಅಥವಾ ನಷ್ಟ ಎಂಬುದಾಗಿ ಮಾನ್ಯ ಮಾಡಿದೆ.

### ಆರ್. ಹಣಕಾಸೇತರ ಆಸ್ತಿಗಳ ದುರ್ಬಲತೆ:

ಆಸ್ತಿ ಒಂದು ದುರ್ಬಲಗೊಳ್ಳುವ ಲಕ್ಷಣ ಹೊಂದಿರುವುದೇ ಅಥವಾ ಇಲ್ಲವೇ ಎಂಬುದನ್ನು ಗ್ರೂಪ್ ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಿಸುವುದು. ದುರ್ಬಲತೆಯ ಯಾವುದೇ ಲಕ್ಷಣ ಇದ್ದಲ್ಲಿ, ಅಥವಾ ಆಸ್ತಿ ಒಂದರ ವಾರ್ಷಿಕ ದುರ್ಬಲತೆ ಪರೀಕ್ಷೆ ಮಾಡಬೇಕಿರುವಾಗ, ಗ್ರೂಪ್ ಆಸ್ತಿಯ ವಸೂಲು ಮಾಡಬಹುದಾದ ಮೊತ್ತವನ್ನು ಅಂದಾಜು ಮಾಡುವುದು. ಆಸ್ತಿ ಒಂದರ ಪಡೆಯಬಹುದಾದ ಮೊತ್ತವು ಮಾರಾಟ ಮಾಡಲು ಮತ್ತು ಅದರ ಬಳಕೆಯಲ್ಲಿನ ಮೌಲ್ಯ ಕಳೆದು ಆಸ್ತಿಯ ಅತಿ ಹೆಚ್ಚಿನ ಅಥವಾ ನಗದು ಸೃಜನತೆ ಘಟಕದ (ಸಿಜಿಯು) ನ್ಯಾಯೋಚಿತ ಮೌಲ್ಯವಾಗಿರುವುದು. ಗ್ರೂಪ್‌ನ ಇತರೆ ಆಸ್ತಿಗಳಿಂದ ಕಾನೂನಾತ್ಮಕವಾಗಿ ಬೇರೆಯಾಗಿರುವ ಆಸ್ತಿಯು ನಗದು ಹರಿವನ್ನು ಮಾಡದಿರುವ ಹೊರತು, ಇದನ್ನು ಪ್ರತಿ ಆಸ್ತಿಯಲ್ಲಿ ನಿರ್ಧರಣೆ ಮಾಡಲಾಗುವುದು. ಆಸ್ತಿ ಅಥವಾ ಸಿಜಿಯು ಒಂದರ ವಾಹಕ ಮೊತ್ತವು ಅದರ ಪಡೆಯಬಹುದಾದ ಮೊತ್ತಕ್ಕಿಂತ ಮಿಗಿಲಾಗಿದ್ದಾಗ, ಆಸ್ತಿಯನ್ನು ದುರ್ಬಲವಾಗಿರುವುದಾಗಿ ಪರಿಗಣಿಸಲಾಗುವುದು ಮತ್ತು ಅದರ ಪಡೆಯಬಹುದಾದ ಮೊತ್ತಕ್ಕೆ ಬರೆಯಲಾಗುವುದು.

ಬಳಕೆಯಲ್ಲಿರುವ ಮೌಲ್ಯ ನಿರ್ಧರಣೆ ಮಾಡುವಾಗ, ಅಂದಾಜು ಮಾಡಿದ ಮುಂದಿನ ನಗದು ಹರಿಯುವಿಕೆಗಳನ್ನು ಹಣದ ಸಮಯದ ಮೌಲ್ಯದ ಪ್ರಸ್ತುತ ಮಾರುಕಟ್ಟೆ ನಿರ್ಧರಣೆಗಳನ್ನು ಮತ್ತು ಆಸ್ತಿಗೆ ನಿರ್ದಿಷ್ಟಪಡಿಸಿದ ಅಪಾಯಗಳನ್ನು ಬಿಂಬಿಸುವ ತೆರಿಗೆ ಪೂರ್ವ ರಿಯಾಯಿತಿ ದರ ಬಳಸಿ ಅವುಗಳ ಪ್ರಸಕ್ತದ ಮೌಲ್ಯಕ್ಕೆ ಕಳೆಯಲಾಗಿದೆ. ಮಾರಾಟ ಮಾಡಲು ನ್ಯಾಯೋಚಿತ ಮೌಲ್ಯ ಕಳೆದ ಬೆಲೆ ನಿರ್ಧರಣೆ ಮಾಡುವಾಗ, ಲಭ್ಯವಿದ್ದಲ್ಲಿ, ಇತ್ತೀಚಿನ ಮಾರುಕಟ್ಟೆ ವ್ಯವಹಾರಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಅಂತಹ ವ್ಯವಹಾರಗಳನ್ನು ಗುರುತಿಸಲಾಗದಿದ್ದಲ್ಲಿ, ಸೂಕ್ತ ಮೌಲ್ಯ ನಿರ್ಣಯ ವಿಧಾನವನ್ನು ಬಳಸಲಾಗುವುದು. ಮೌಲ್ಯ ನಿರ್ಧರಣೆ ವಿವಿಧತೆ, ಸಾರ್ವಜನಿಕ ವ್ಯಾಪಾರ ಮಾಡಿದ ಸಹಾಯಕ ಕಂಪನಿಗಳ ನಮೂದಿತ ಷೇರು ದರಗಳಿಂದ ಅಥವಾ ಇತರೆ ಲಭ್ಯವಿರುವ ನ್ಯಾಯೋಚಿತ ಮೌಲ್ಯ ಸೂಚಕರುಗಳಿಂದ ಈ ಲೆಕ್ಕಾಚಾರಗಳನ್ನು ದೃಢೀಕರಿಸಿದೆ.

ಗ್ರೂಪ್ ತನ್ನ ದುರ್ಬಲತೆಯ ಲೆಕ್ಕಾಚಾರ ಮಾಡಲು ವಿವರವಾದ ಬಜೆಟ್‌ಗಳು ಮತ್ತು ಮುಂಗಾಣ್ಕೆಗಳನ್ನು ಆಧಾರವಾಗಿ ತೆಗೆದುಕೊಳ್ಳುವುದು. ಈ ವಿವರವಾದ ಬಜೆಟ್‌ಗಳನ್ನು ಮತ್ತು ಮುಂಗಾಣ್ಕೆಗಳನ್ನು, ಪ್ರತಿ ಆಸ್ತಿಯನ್ನು ಹಂಚಿಕೆ ಮಾಡಿರುವ ಗ್ರೂಪ್‌ನ ಪ್ರತಿ ಸಿಜಿಯುಗೆ ಪ್ರತ್ಯೇಕವಾಗಿ ಸಿದ್ಧಪಡಿಸಿದೆ. ಈ ಬಜೆಟ್‌ಗಳು ಮತ್ತು ಮುಂಗಾಣ್ಕೆಗಳು ಸಾಮಾನ್ಯವಾಗಿ ಐದು ವರ್ಷಗಳ ಅವಧಿಯನ್ನು ಒಳಪಟ್ಟಿರುತ್ತವೆ. ದೀರ್ಘಾವಧಿಗೆ, ದೀರ್ಘಾವಧಿ ಬೆಳವಣಿಗೆ ದರವನ್ನು ಲೆಕ್ಕಾಚಾರ ಮಾಡಲಾಗುವುದು ಮತ್ತು ಐದನೇ ವರ್ಷದ ನಂತರ ಯೋಜನೆಯ ಮುಂದಿನ ನಗದು ಹರಿಯುವಿಕೆಗೆ ಅನ್ವಯಿಸಲಾಗುವುದು.

ಸರಕುಗಳ ತಪಶೀಲುಗಳ ಮೇಲಿನ ದುರ್ಬಲತೆ ಸೇರಿದಂತೆ, ದುರ್ಬಲತೆ ನಷ್ಟಗಳನ್ನು ಈ ಹಿಂದೆ ಮರು ಮೌಲ್ಯಮಾಪನ ಮಾಡಿರುವ ಮತ್ತು ಇತರೆ ಸಮಗ್ರ ಆದಾಯಕ್ಕೆ ಮರು ಮೌಲ್ಯಮಾಪನ ಅನ್ವಯವಾಗಿರುವ ಸ್ವತ್ತಿಗೆ ಹೊರತಾಗಿ, ದುರ್ಬಲತೆಯ ಆಸ್ತಿಯ ಕಾರ್ಯಕ್ಕೆ ಅನ್ವಯವಾಗುವ ಖರ್ಚಿನ ಪ್ರವರ್ಗಗಳಲ್ಲಿನ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ. ಈ ವಿಚಾರದಲ್ಲಿ, ದುರ್ಬಲತೆಯನ್ನು ಸಹ ಹಿಂದಿನ ಯಾವುದೇ ಮರು ಮೌಲ್ಯಮಾಪನದ ಮೊತ್ತದವರೆಗೆ ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಿದೆ.

ವ್ಯಾಪಾರದ ಹಕ್ಕು ಒಳಗೊಂಡಿರದ ಆಸ್ತಿಗಳಿಗೆ, ಈ ಹಿಂದೆ ಮಾನ್ಯ ಮಾಡಿದ್ದ ನಷ್ಟಗಳು ಇನ್ನೂ ಉಳಿದಿಲ್ಲರುವಿಕೆಯ ಅಥವಾ ನಷ್ಟಗಳು ಕಡಿಮೆಯಾಗಿರಬಹುದಾದ ಯಾವುದೇ ಲಕ್ಷಣಗಳು ಇರುವವು ಎಂಬುದನ್ನು ಪ್ರತಿ ವರದಿಯ ದಿನಾಂಕದಲ್ಲಿ ನಿರ್ಧರಣೆ ಮಾಡಲಾಗುವುದು. ಒಂದು ವೇಳೆ ಈ ಲಕ್ಷಣಗಳು ಇದ್ದಲ್ಲಿ ಗ್ರೂಪ್ ಆಸ್ತಿಯ ಅಥವಾ ಸಿಜಿಯುನ ಪಡೆಯಬಹುದಾಗಿರುವ ಮೊತ್ತವನ್ನು ಅಂದಾಜು ಮಾಡುವುದು. ಹಿಂದಿನ ದುರ್ಬಲತೆ ನಷ್ಟವನ್ನು ಮಾನ್ಯ ಮಾಡಿರುವುದರಿಂದ, ಆಸ್ತಿಯ ಪಡೆಯಬಹುದಾಗಿರುವ ಮೊತ್ತದ ನಿರ್ಧರಣೆಗೆ ಬಳಸಿರುವ ಊಹೆಗಳಲ್ಲಿ ಯಾವುದೇ ಬದಲಾವಣೆಗಳಿದ್ದಲ್ಲಿ ಮಾತ್ರ ಈ ಹಿಂದೆ ಮಾನ್ಯ ಮಾಡಿದ್ದ ದುರ್ಬಲತೆ ನಷ್ಟವನ್ನು ಹಿಮ್ಮುಖಗೊಳಿಸಿದೆ. ಆಸ್ತಿಯ ವಾಹಕ ಮೊತ್ತವು ಅದರ ಪಡೆಯಬಹುದಾದ ಮೊತ್ತಕ್ಕಿಂತ ಮೀರದಿರುವುದಕ್ಕೆ ಅಥವಾ ನಿರ್ಧರಣೆ ಮಾಡಬಹುದಾಗಿರುವ ವಾಹಕ ಮೊತ್ತಕ್ಕಿಂತ ಮೀರದಿರುವುದಕ್ಕೆ ಸವಕಳಿಯ ನಿವ್ವಳ ಪ್ರಮಾಣಕ್ಕಿಂತ ಮೀರಿರದಿದ್ದರೆ, ಹಿಂದಿನ ವರ್ಷಗಳಲ್ಲಿ ಆಸ್ತಿಗಳಿಗೆ ದುರ್ಬಲ ನಷ್ಟ ಮಾನ್ಯ ಮಾಡದಿರುವುದಕ್ಕೆ ಹಿಮ್ಮುಖಗೊಳಿಸುವಿಕೆಯು ಸೀಮಿತವಾಗಿರುವುದು. ಹಿಮ್ಮುಖಗೊಳಿಸಿರುವಿಕೆಯನ್ನು ಮರು ಮೌಲ್ಯ ಮಾಪನ ಹೆಚ್ಚಳವೆಂದು ಭಾವಿಸಿರುವ ವಿಚಾರಗಳಲ್ಲಿ ಆಸ್ತಿಯನ್ನು ಮರು ಮೌಲ್ಯಮಾಪನದ ಮೊತ್ತದಲ್ಲಿ ಲೆಕ್ಕ ಮಾಡಿರದ ಹೊರತು, ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

## ಎಸ್. ನಗದು ಹರಿಯುವಿಕೆ ಹೇಳಿಕೆ

ನಗದು ಹರಿವನ್ನು ಪರೋಕ್ಷ ವಿಧಾನ ಬಳಸಿ ವರದಿ ಮಾಡಿದೆ. ಆ ಮೂಲಕ ಆ ಅವಧಿಯ ಲಾಭವನ್ನು ಹಣಕಾಸೇತರ ಸ್ವರೂಪದ ವ್ಯವಹಾರಗಳಿಗೆ, ಹಿಂದಿನ ಕಾರ್ಯಾಚರಣೆ ನಗದು ಸ್ವೀಕಾರಗಳು ಅಥವಾ ಪಾವತಿಗಳ ಯಾವುದೇ ಮುಂದೂಡಿಕೆ ಅಥವಾ ಸಂಚಯನಗಳಿಗೆ ಮತ್ತು ಹೂಡಿಕೆ ಅಥವಾ ಹಣಕಾಸು ನೀಡಿಕೆ ನಗದು ಹರಿಯುವಿಕೆ ಜೊತೆ ಸೇರಿರುವ ಆದಾಯ ಅಥವಾ ಖರ್ಚುಗಳಿಗೆ ಹೊಂದಾಣಿಕೆ ಮಾಡಿದೆ. ಗ್ರೂಪ್‌ನ ಕಾರ್ಯಾಚರಣೆ, ಹೂಡಿಕೆ ಮತ್ತು ಹಣಕಾಸು ನೀಡಿಕೆ ಚಟುವಟಿಕೆಗಳಿಂದ ಬಂದ ನಗದನ್ನು ಪ್ರತ್ಯೇಕಿಸಿದೆ.

## ಟಿ. ಲಾಭಾಂಶ

ಗ್ರೂಪ್‌ಗೆ ವಿತರಣೆಯ ಜವಾಬ್ದಾರಿ ನೀಡಿದಾಗ ಮತ್ತು ಗ್ರೂಪ್‌ನ ತೀರ್ಮಾನದಂತೆ ವಿತರಣೆ ಇಲ್ಲವೆನ್ನದಿರುವಾಗ ಕಂಪನಿಯ ಈಕ್ವಿಟಿ ಷೇರುದಾರರುಗಳಿಗೆ ನಗದು ಅಥವಾ ನಗದೇತರ ವಿತರಣೆ ಮಾಡಲು ಹೊಣೆಗಾರಿಕೆಯನ್ನು (ಇದರ ಮೇಲಿನ ತೆರಿಗೆ ಸೇರಿದಂತೆ) ಗ್ರೂಪ್ ಮಾನ್ಯ ಮಾಡುವುದು.

ನಗದೇತರ ವಿತರಣೆಯನ್ನು, ಈಕ್ವಿಟಿಯಲ್ಲಿ ನೇರವಾಗಿ ಮಾನ್ಯ ಮಾಡಿದ ನ್ಯಾಯೋಚಿತ ಮೌಲ್ಯದ ಮರು ಮಾಪನದೊಡನೆ ವಿತರಿಸಬೇಕಾಗಿರುವ ಆಸ್ತಿಗಳ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ.

ನಗದೇತರ ಆಸ್ತಿಗಳ ವಿತರಣೆ ಮಾಡಿದ ಮೇಲೆ, ಹೊಣೆಗಾರಿಕೆಯ ವಾಹಕ ಮೊತ್ತ ಮತ್ತು ವಿತರಣೆ ಮಾಡಿದ ಆಸ್ತಿಗಳ ವಾಹಕ ಮೊತ್ತದ ನಡುವೆ ಯಾವುದೇ ವ್ಯತ್ಯಾಸವಿದ್ದರೆ ಅದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಿದೆ.

ವರದಿಯ ಅವಧಿ ನಂತರ ಕಂಪನಿ ಘೋಷಿಸಿದ ಲಾಭಾಂಶಗಳನ್ನು ವರದಿಯ ಅವಧಿ ಕೊನೆಯಲ್ಲಿ ಹೊಣೆಗಾರಿಕೆ ಎಂಬುದಾಗಿ ಮಾನ್ಯ ಮಾಡುವುದಿಲ್ಲ. ವರದಿಯ ಅವಧಿ ನಂತರ ಆದರೆ ಹಣಕಾಸಿನ ಹೇಳಿಕೆ

ನೀಡುವ ಮುನ್ನ ಘೋಷಿಸಿದ ಲಾಭಾಂಶಗಳನ್ನು, ಸ್ಥಿತಿ ವಿವರಣಾ ಪಟ್ಟಿ ದಿನಾಂಕದಲ್ಲಿ ಯಾವುದೇ ಬಾಧ್ಯತೆ ಇಲ್ಲದಿರುವುದರಿಂದ ಅವುಗಳನ್ನು ಹೊಣೆಗಾರಿಕೆ ಎಂದು ಮಾನ್ಯ ಮಾಡುವುದಿಲ್ಲ. ಅಂತಹ ಲಾಭಾಂಶಗಳನ್ನು ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ತಿಳಿಸಲಾಗುವುದು.

### ಯು. ವರದಿಯ ದಿನಾಂಕದ ನಂತರದ ಘಟನೆಗಳು:

ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ವರದಿಯ ಅವಧಿ ನಂತರ ಉಂಟಾಗುವ ಘಟನಾವಳಿಗೆ ಹೊಂದಾಣಿಕೆ ಮಾಡಿದೆ. ವರದಿಯ ಅವಧಿ ಕೊನೆಯಲ್ಲಿ ಇರುವ ಪರಿಸ್ಥಿತಿಗೆ ಸಂಬಂಧಿಸಿದಂತೆ ಮೊತ್ತಗಳ ಅಂದಾಜು ಮಾಡುವಿಕೆಗೆ ನೆರವಾಗುವ ಹೆಚ್ಚುವರಿ ಪುರಾವೆಯನ್ನು ಇದು ನೀಡುವುದು.

### ವಿ. ಮಾರಾಟಕ್ಕೆ ಹೊಂದಿರುವ ಚಾಲ್ತಿಯೇತರ ಆಸ್ತಿಗಳು ಮತ್ತು ಸ್ಥಗಿತಗೊಂಡಿರುವ ಕಾರ್ಯಾಚರಣೆ:

ಗ್ರೂಪ್ ಚಾಲ್ತಿಯೇತರ ಆಸ್ತಿಗಳನ್ನು (ಅಥವಾ ವಿಲೇವಾರಿ ಗ್ರೂಪ್) ಅವುಗಳ ವಾಹಕ ಮೊತ್ತಗಳನ್ನು ಮುಂದುವರಿದ ಬಳಕೆ ಮೂಲಕಕ್ಕಿಂತ ಮಾರಾಟದ ಮೂಲಕ ಪ್ರಮುಖವಾಗಿ ಪಡೆಯಬಹುದಾಗಿದ್ದಲ್ಲಿ ಅವುಗಳನ್ನು ಮಾರಾಟಕ್ಕೆ ಹೊಂದಿರುವುದೆಂದು ವರ್ಗೀಕರಣ ಮಾಡುವುದು. ಮಾರಾಟವನ್ನು ಪೂರ್ಣಗೊಳಿಸಲು, ಮಾರಾಟಕ್ಕೆ ಗಣನೀಯವಾದ ಬದಲಾವಣೆಗಳನ್ನು ಮಾಡುವುದಿಲ್ಲ ಅಥವಾ ಮಾರಾಟ ಮಾಡುವ ತೀರ್ಮಾನವನ್ನು ಹಿಂತೆಗೆದುಕೊಳ್ಳುವುದಿಲ್ಲವೆಂಬ ಸೂಚನೆಯ ಕ್ರಮ ಅಗತ್ಯವಾಗಿರುತ್ತದೆ. ಆಡಳಿತವು ವರ್ಗೀಕರಣ ಮಾಡಿದ ದಿನಾಂಕದಿಂದ ಒಂದು ವರ್ಷದ ಒಳಗೆ ನಿರೀಕ್ಷಿತ ಮಾರಾಟಕ್ಕೆ ಬದ್ಧವಾಗಿರಬೇಕು.

ಆಸ್ತಿಯು ಅದರ ಪ್ರಸಕ್ತ ಸ್ಥಿತಿಯಲ್ಲಿ ತಕ್ಷಣಕ್ಕೆ ಮಾರಾಟಕ್ಕೆ ಲಭ್ಯವಿದ್ದಾಗ, ಅಂತಹ ಆಸ್ತಿಗಳ ಮಾರಾಟಕ್ಕೆ ಸಾಮಾನ್ಯ ಮತ್ತು ಸಂಪ್ರದಾಯಿಕವಾದ ನಿಯಮಗಳಿಗೆ ಮಾತ್ರ ಒಳಪಟ್ಟು, ಅದರ ಮಾರಾಟವು ಅತ್ಯಂತ ಸಾಧ್ಯನೀಯತೆ; ಮತ್ತು ಅದನ್ನು ಪ್ರಾಮಾಣಿಕವಾಗಿ ಮಾರಾಟ ಮಾಡಿದಾಗ, ಮಾರಾಟವನ್ನು ರದ್ದು ಮಾಡದಿರುವಾಗ ಮಾರಾಟಕ್ಕೆ ಹೊಂದಿರುವ ವರ್ಗೀಕರಣದ ಮಾನದಂಡ ಈಡೇರಿಕೆ ಆಗುತ್ತದೆ. ಕೆಳಕಂಡ ವ್ಯವಸ್ಥೆಯಿದ್ದಾಗ ಗ್ರೂಪ್ ಆಸ್ತಿಯ ಮಾರಾಟವು ಅತ್ಯಂತ ಸಾಧ್ಯತೆಯಿರುವುದಾಗಿ ಭಾವಿಸುವುದು:

- ★ ಸೂಕ್ತ ಮಟ್ಟದ ಆಡಳಿತವು ಆಸ್ತಿಯ ಮಾರಾಟದ ಯೋಜನೆಗೆ ಬದ್ಧವಾಗಿದ್ದಾಗ;
- ★ ಖರೀದಿದಾರರನ್ನು ಗುರುತಿಸಲು ಮತ್ತು ಯೋಜನೆಯನ್ನು ಪೂರ್ಣಗೊಳಿಸಲು ಸಕ್ರಿಯ ಕಾರ್ಯಕ್ರಮ ಕೈಗೊಂಡಾಗ (ಅನ್ವಯವಾಗಿದ್ದಲ್ಲಿ)
- ★ ಆಸ್ತಿಯನ್ನು ಅದರ ಪ್ರಸಕ್ತದ ನ್ಯಾಯೋಚಿತ ಮೌಲ್ಯದ ಸಂಬಂಧದಲ್ಲಿ ಸೂಕ್ತವೆನಿಸಿರುವ ಬೆಲೆಯಲ್ಲಿ ಮಾರಾಟ ಮಾಡಲು ಸಕ್ರಿಯವಾಗಿ ಪ್ರಚಾರ ಮಾಡಿದಾಗ
- ★ ವರ್ಗೀಕರಣದ ದಿನಾಂಕದಿಂದ ಒಂದು ವರ್ಷದ ಒಳಗೆ ಪೂರ್ಣಗೊಂಡ ಮಾರಾಟ ಎಂಬುದಾಗಿ ಮಾನ್ಯ ಮಾಡಲು ಅರ್ಹವಾಗುವ ನಿರೀಕ್ಷೆ ಇದ್ದಾಗ; ಮತ್ತು
- ★ ಮಾರಾಟದ ಯೋಜನೆಗೆ ಗಣನೀಯವಾದ ಬದಲಾವಣೆ ಮಾಡುವ ಅಥವಾ ಮಾರಾಟದ ಯೋಜನೆಯನ್ನು ಹಿಂಪಡೆಯುವ ಸಾಧ್ಯತೆಗಳಿರುವುದಿಲ್ಲ ಎಂಬ ಸೂಚನೆ ಮೇರೆಗೆ ಯೋಜನೆ ಪೂರ್ಣಗೊಳಿಸಲು ಅಗತ್ಯ ಕ್ರಮಗಳಿದ್ದಾಗ;

ಮಾರಾಟಕ್ಕೆ ಹೊಂದಿರುವ ಚಾಲ್ತಿಯೇತರ ಆಸ್ತಿಗಳನ್ನು ಅವುಗಳ ವಾಹಕ ಮೊತ್ತದ ಕಡಿಮೆ ಮಟ್ಟದಲ್ಲಿ ಮತ್ತು ಮಾರಾಟ ಮಾಡುವ ನ್ಯಾಯೋಚಿತ ಮೌಲ್ಯ ಕಳೆದ ಬೆಲೆಯಲ್ಲಿ ಮಾಪನ ಮಾಡಿದೆ. ಮಾರಾಟಕ್ಕೆ ಹೊಂದಿರುವವುಗಳೆಂದು ವರ್ಗೀಕರಣ ಮಾಡಿರುವ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಸ್ಥಿತಿ ವಿವರಣಾ ಪಟ್ಟಿಯಲ್ಲಿ ಪ್ರತ್ಯೇಕವಾಗಿ ನಿರೂಪಿಸಿದೆ.

ದುರ್ಬಲತೆ ನಷ್ಟವನ್ನು ಆಸ್ತಿಗಳ ನ್ಯಾಯೋಚಿತ ಮೌಲ್ಯ ರಹಿತ ಬೆಲೆಯಲ್ಲಿ ಮಾರಾಟದ ಯಾವುದೇ ಪ್ರಾರಂಭಿಕ ಅಥವಾ ತದನಂತರದ ಪರಿಗಣನೆಗೆ ಮಾನ್ಯ ಮಾಡಿದೆ. ಆಸ್ತಿಯೊಂದರ ಮಾರಾಟದ ನ್ಯಾಯೋಚಿತ ಮೌಲ್ಯ ರಹಿತ ಬೆಲೆಯಲ್ಲಿ ಯಾವುದೇ ತದನಂತರದ ಹೆಚ್ಚಳಕ್ಕಾಗಿ ಲಾಭವನ್ನು ಮಾನ್ಯ ಮಾಡಿದೆ. ಅದರೆ ಹಿಂದೆ ಮಾನ್ಯ ಮಾಡಿದ ಸಂಚಿತ ದುರ್ಬಲತೆ ನಷ್ಟಕ್ಕೂ ಮೀರಿದ ಆಸ್ತಿಗಳಿಗೆ ಇದು ಅನ್ವಯವಾಗದು. ಚಾಲ್ತಿಯೇತರ ಆಸ್ತಿಗಳ ಮಾರಾಟದ ದಿನಾಂಕದಲ್ಲಿ ಹಿಂದೆ ಮಾನ್ಯ ಮಾಡಿರದ ಲಾಭ ಅಥವಾ ನಷ್ಟವನ್ನು ಅಮಾನ್ಯಗೊಳಿಸಿದ ದಿನಾಂಕದಂದು ಮಾನ್ಯ ಮಾಡಿದೆ.

ಮಾರಾಟ/ಮಾಲೀಕರಿಗೆ ವಿತರಣೆಗಾಗಿ ಹೊಂದಿರುವುದು ಎಂಬುದಾಗಿ ಒಮ್ಮೆ ವರ್ಗೀಕರಣ ಮಾಡಿರುವ ಸ್ವತ್ತು, ಸ್ಥಾವರ, ಮತ್ತು ಉಪಕರಣ ಮತ್ತು ಅಗೋಚರಿತ ಆಸ್ತಿಗಳನ್ನು ಸವಕಳಿ ಮಾಡಿರುವುದಿಲ್ಲ ಅಥವಾ ಅಮಾರ್ಟೈಸ್ ಮಾಡಿರುವುದಿಲ್ಲ.

ಸ್ಥಗಿತ ಕಾರ್ಯಾಚರಣೆಯು ಒಂದು ಸಂಸ್ಥೆಯ ಅಂಗ ಭಾಗವಾಗಿದ್ದರೆ, ಅದನ್ನು ಮಾರಾಟ ಮಾಡಿದ್ದರೆ ಅಥವಾ ಮಾರಾಟಕ್ಕೆ ಹೊಂದಿರುವುದಾಗಿ ವರ್ಗೀಕರಿಸದ್ದರೆ ಸ್ಥಗಿತಗೊಂಡಿರುವ ಕಾರ್ಯಾಚರಣೆಯಾಗಿ ಅರ್ಹವಾಗುವುದು ಮತ್ತು ;

- ★ ವ್ಯವಹಾರದ ಪ್ರತ್ಯೇಕ ಪ್ರಮುಖ ರೂಪವನ್ನು ಅಥವಾ ಕಾರ್ಯಾಚರಣೆಗಳ ಭೌಗೋಳಿಕ ಪ್ರದೇಶ ಪ್ರತಿನಿಧಿಸುವ,
- ★ ವ್ಯವಹಾರದ ಪ್ರತ್ಯೇಕ ಪ್ರಮುಖ ರೀತಿಯ ವಿಲೇವಾರಿಗೆ ಏಕ ಸಮನ್ವಯತೆ ಯೋಜನೆಯ ಅಥವಾ ಕಾರ್ಯಾಚರಣೆಗಳ ಭೌಗೋಳಿಕ ಪ್ರದೇಶದ ಭಾಗವಾಗಿದ್ದರೆ, ಅಥವಾ

- ★ ಮರು ಮಾರಾಟದ ದೃಷ್ಟಿಯಲ್ಲಿ ವಿಶೇಷವಾಗಿ, ಸಹಾಯಕ ಕಂಪನಿ ಸ್ವಾಧೀನ ಮಾಡಿಕೊಂಡಿದ್ದರೆ.

  ಸ್ಥಗಿತಗೊಂಡಿರುವ ಕಾರ್ಯಾಚರಣೆಗಳನ್ನು ಮುಂದುವರಿಯುತ್ತಿರುವ ಕಾರ್ಯಾಚರಣೆಗಳ ಫಲಿತಾಂಶಗಳಿಂದ ತೆಗೆದು ಹಾಕಲಾಗಿದೆ ಮತ್ತು ಅವುಗಳನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಸ್ಥಗಿತಗೊಂಡಿರುವ ಕಾರ್ಯಾಚರಣೆಗಳಿಂದ ಬಂದ ತೆರಿಗೆ ನಂತರದ ಲಾಭ ಅಥವಾ ನಷ್ಟವಾಗಿ ಏಕ ಮೊತ್ತವಾಗಿ ನಿರೂಪಿಸಿದೆ.

### ಡಬ್ಲ್ಯೂ. ವಿಭಾಗದ ವರದಿ

ಮುಖ್ಯ ಕಾರ್ಯಾಚರಣೆ ತೀರ್ಮಾನ ಮಾಡುವವರಿಗೆ ಒದಗಿಸಿರುವ ಆಂತರಿಕ ವರದಿಗೆ ಅನುರೂಪವಾಗಿರುವ ರೀತಿಯಲ್ಲಿ ಕಾರ್ಯಾಚರಣೆ ವಿಭಾಗಗಳ ಬಗ್ಗೆ ವರದಿ ಮಾಡಿದೆ.

### ಎಕ್ಸ್. ಸರ್ಕಾರದ ಅನುದಾನಗಳು

ಅನುದಾನವನ್ನು ಸ್ವೀಕರಿಸಲಾಗುವುದು, ಮತ್ತು ಅನ್ವಯವಾಗುವ ಎಲ್ಲಾ ನಿಬಂಧನೆಗಳನ್ನು ಅನುಸರಿಸಲಾಗಿದೆ ಎಂಬುದರ ಬಗ್ಗೆ ಸೂಕ್ತವಾದ ಭರವಸೆ ಇದ್ದಾಗ ಸರ್ಕಾರದ ಅನುದಾನವನ್ನು ಮಾನ್ಯ ಮಾಡಿದೆ.

ಖರ್ಚಿನ ಬಾಬ್ತುಗಳಿಗೆ ಸಂಬಂಧಿಸಿದ ಅನುದಾನವನ್ನು ಯಾವುದಕ್ಕೆ ಅದನ್ನು ಸರಿಹೊಂದಿಸಲು ಉದ್ದೇಶಿಸಲಾಗಿರುವುದೊ, ಆ ಸಂಬಂಧಿತ ವೆಚ್ಚಗಳನ್ನು ಖರ್ಚು ಮಾಡಲಾಗಿರುವುದೊ, ಆ ಅವಧಿಗಳಲ್ಲಿ ವ್ಯವಸ್ಥಿತ ಆಧಾರದ ಮೇಲೆ ಆದಾಯ ಎಂದು ಮಾನ್ಯ ಮಾಡಿದೆ.

ಅನುದಾನವು ಆಸ್ತಿ ಒಂದಕ್ಕೆ ಸಂಬಂಧಿಸಿರುವಾಗ, ಆಸ್ತಿಯ ವಾಹಕ ಮೊತ್ತದಿಂದ ಅನುದಾನವನ್ನು ಕಳೆಯುವ ಮೂಲಕ ನಿರೂಪಿಸಲಾಗಿದೆ. ಗ್ರೂಪ್ ಹಣಕಾಸೇತರ ಆಸ್ತಿಗಳ ಅನುದಾನವನ್ನು ಪಡೆದಾಗ, ಅದನ್ನು ಸಾಧಾರಣ ಮೌಲ್ಯವೆಂದು ಪರಿಗಣಿಸಿದೆ.

ಸರ್ಕಾರಗಳು ಅಥವಾ ಸಂಬಂಧಿತ ಸಂಸ್ಥೆಗಳು ಪ್ರಸ್ತುತದಲ್ಲಿ ಅನ್ವಯವಾಗುವ ಮಾರುಕಟ್ಟೆ ದರಕ್ಕಿಂತ ಕಡಿಮೆ ಬಡ್ಡಿದರದಲ್ಲಿ ಸಾಲಗಳು ಅಥವಾ ಅದೇ ರೀತಿಯ ಹಣಕಾಸಿನ ನೆರವು ನೀಡಿದಾಗ, ಈ ಅನುಕೂಲಕರವಾದ ಬಡ್ಡಿಯ ಪರಿಣಾಮವನ್ನು ಸರ್ಕಾರದ ಅನುದಾನ ಎಂಬುದಾಗಿ ಪರಿಗಣಿಸಿದೆ. ಸಾಲ ಅಥವಾ ಹಣಕಾಸಿನ ನೆರವನ್ನು ಪ್ರಾರಂಭಿಕವಾಗಿ ಮಾನ್ಯ ಮಾಡಿದೆ ಮತ್ತು ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿದೆ ಮತ್ತು ಸರ್ಕಾರದ ಅನುದಾನವನ್ನು ಸಾಲ ಪ್ರಾರಂಭಿಕ ವಾಹಕ ಮೌಲ್ಯ ಮತ್ತು ಪಡೆದ ಹಣದ ನಡುವಿನ ವ್ಯತ್ಯಾಸವಾಗಿ ಮಾಪನ ಮಾಡಿದೆ. ಸಾಲವನ್ನು ತದನಂತರ ಹಣಕಾಸಿನ ಹೊಣೆಗಾರಿಕೆಗಳಿಗೆ ಅನ್ವಯವಾಗುವ ಲೆಕ್ಕ ನಿರ್ವಹಣೆ ನೀತಿ ಅನುಸಾರ ಮಾಪನ ಮಾಡಿದೆ.

## 1.3 ನಿರ್ಣಾಯಕ ಲೆಕ್ಕ ನಿರ್ವಹಣೆ ಅಂದಾಜುಗಳು ಮತ್ತು ಊಹೆಗಳು:

ಗ್ರೂಪ್‌ನ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಆದಾಯಗಳು, ಖರ್ಚುಗಳು, ಆಸ್ತಿಗಳು ಮತ್ತು ಹೊಣೆಗಾರಿಕೆಗಳ ತಿಳಿಸಲಾದ ಮೊತ್ತಗಳಿಗೆ ಮತ್ತು ಇದರೊಡನಿನ ಪ್ರಕಟಣೆಗಳು ಮತ್ತು ಸಂಭಾವ್ಯ ಹೊಣೆಗಾರಿಕೆಗಳ ಪ್ರಕಟಣೆಗೆ ಅನ್ವಯವಾಗುವ ತೀರ್ಪುಗಳು ಅಂದಾಜುಗಳು ಮತ್ತು ಊಹೆಗಳನ್ನು ಆಡಳಿತ ಮಂಡಳಿ ಮಾಡಬೇಕಾಗುತ್ತದೆ. ಈ ಊಹೆಗಳು ಮತ್ತು ಅಂದಾಜುಗಳ ಬಗ್ಗೆಗಿನ ಅನಿಶ್ಚಿತತೆಯು ಮುಂದಿನ ಅವಧಿಗಳಲ್ಲಿ ಅನ್ವಯವಾಗುವ ಆಸ್ತಿಗಳು ಅಥವಾ ಹೊಣೆಗಾರಿಕೆಗಳ ವಾಹಕ ಮೊತ್ತಕ್ಕೆ ವಾಸ್ತವಿಕ ಹೊಂದಾಣಿಕೆ ಮಾಡಬೇಕಾದ ಅವಶ್ಯಕತೆಯನ್ನು ಉಂಟು ಮಾಡುವುದು.

### ಅಂದಾಜುಗಳು ಮತ್ತು ಊಹೆ

ಮುಂದಿನ ಅವಧಿಗೆ ಸಂಬಂಧಿಸಿದ ಪ್ರಮುಖ ಊಹೆಗಳು ಮತ್ತು ಅಂದಾಜಿನ ಇತರೆ ಪ್ರಮುಖ ಸಂಪನ್ಮೂಲಗಳು ವರದಿಗಾರಿಕೆ ದಿನಾಂಕದಲ್ಲಿ ಅನಿಶ್ಚಿತವಾಗಿದ್ದರೆ, ಮುಂದಿನ ಹಣಕಾಸಿನ ವರ್ಷದ ಒಳಗೆ ಆಸ್ತಿಗಳು ಮತ್ತು ಹೊಣೆಗಾರಿಕೆಗಳ ವಾಹಕ ಮೊತ್ತಗಳಿಗೆ ವಾಸ್ತವಿಕ ಹೊಂದಾಣಿಕೆ ಮಾಡುವ ಗುರುತರವಾದ ಅಪಾಯ ಹೊಂದಿರುವವುಗಳನ್ನು ಈ ಕೆಳಗೆ ವಿವರಿಸಿದೆ. ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಿದಾಗ ಲಭ್ಯವಿರುವ ಮಾನದಂಡಗಳ ಆಧಾರದ ಮೇಲೆ ಗ್ರೂಪ್ ತನ್ನ ಊಹೆಗಳನ್ನು ಮತ್ತು ಅಂದಾಜುಗಳನ್ನು ಮಾಡುವುದು. ಹಾಲಿಯಿರುವ ಪರಿಸ್ಥಿತಿಗಳು ಮತ್ತು ಮುಂದಿನ ಬೆಳವಣಿಗೆಗಳ ಬಗ್ಗೆಗಿನ ಊಹೆಗಳು, ಮಾರುಕಟ್ಟೆ ಬದಲಾವಣೆಗಳ ಪ್ರಯುಕ್ತ ಅಥವಾ ಗ್ರೂಪ್‌ನ ನಿಯಂತ್ರಣಕ್ಕೂ ಮೀರಿ ಉಂಟಾಗುವ ಪರಿಸ್ಥಿತಿಗಳ ಕಾರಣದಿಂದ ಬದಲಾಗಬಹುದಾಗಿರುತ್ತದೆ. ಅಂತಹ ಬದಲಾವಣೆಗಳು ಅವು ಉಂಟಾದಾಗ ಊಹೆಗಳಲ್ಲಿ ಪ್ರತಿಬಿಂಬಿತವಾಗುವುವು.

### (ಎ) ಸ್ವತ್ತು, ಸ್ಥಾವರ ಮತ್ತು ಉಪಕರಣ ಹಾಗೂ ಅಗೋಚರಿತ ಆಸ್ತಿಗಳ ಉಪಯುಕ್ತತೆ ಜೀವಿತಾವಧಿ:

ವಾಸ್ತವಿಕ ಲೆಕ್ಕ ನಿರ್ವಹಣೆ ನೀತಿಗಳ ಮಾಹಿತಿಯ ಟಿಪ್ಪಣಿ ಇ ಮತ್ತು ಎಫ್ ನಲ್ಲಿ ವಿವರಿಸಿರುವಂತೆ, ಸ್ವತ್ತು , ಸ್ಥಾವರ ಮತ್ತು ಉಪಕರಣ ಮತ್ತು ಅಗೋಚರಿತ ಆಸ್ತಿಗಳ ಅಂದಾಜು ಮಾಡಿದ ಉಪಯುಕ್ತತೆ ಜೀವಿತಾವಧಿಗಳನ್ನು ಗ್ರೂಪ್ ಪ್ರತಿ ವರದಿಗಾರಿಕೆ ಅವಧಿಯ ಕೊನೆಯಲ್ಲಿ ಪರಿಶೀಲಿಸುವುದು.

### (ಬಿ) ಹಣಕಾಸೇತರ ಆಸ್ತಿಗಳ ದುರ್ಬಲತೆ:

ಆಸ್ತಿ ಒಂದರ ಅಥವಾ ನಗದು ಸೃಜನತೆ ಘಟಕದ ವಾಹಕ ಮೌಲ್ಯವು ಅದರಿಂದ ಪಡೆಯಬಹುದಾದ ಮೊತ್ತಕ್ಕಿಂತ ಅಧಿಕವಾದಾಗ, ಅಂದರೆ ಅದರ ವಿಲೇವಾರಿಯ ನ್ಯಾಯೋಚಿತ ಮೌಲ್ಯ ಕಳೆದ ಬೆಲೆಯ ಮತ್ತು ಬಳಕೆಯಲ್ಲಿರುವ ಅದರ ಮೌಲ್ಯಕ್ಕಿಂತ ಹೆಚ್ಚಿನದಾಗಿದ್ದಾಗ ದುರ್ಬಲತೆ ಉಂಟಾಗಿರುವುದು. ಇದೇ ರೀತಿಯ ಆಸ್ತಿಗಳಿಗೆ ಯಾವುದೇ ಅನ್ಯ

ಪ್ರಭಾವವಿಲ್ಲದೆ ಸ್ವಯಂ ಧೋರಣೆಯಿಂದ ನಡೆಸಿದ ಬದ್ಧವಾದ ಮಾರಾಟಗಳ ವ್ಯವಹಾರಗಳಿಂದ ಲಭ್ಯವಿರುವ ಅಂಕಿ ಅಂಶಗಳ ಅಥವಾ ಆಸ್ತಿಯ ವಿಲೇವಾರಿಗೆ ಅನ್ವಯಿಸಬಹುದಾದ ಮಾರುಕಟ್ಟೆ ಬೆಲೆಗಿಂತ ಕಡಿಮೆ ಹೆಚ್ಚಳ ಬೆಲೆಗಳ ಆಧಾರದ ಮೇಲೆ ವಿಲೇವಾರಿಯ ನ್ಯಾಯೋಚಿತ ಮೌಲ್ಯಕ್ಕಿಂತ ಕಡಿಮೆ ಬೆಲೆಯಲ್ಲಿ ಲೆಕ್ಕಾಚಾರ ಮಾಡಿದೆ. ಬಳಕೆಯಲ್ಲಿನ ಮೌಲ್ಯದ ಲೆಕ್ಕಾಚಾರವು ಡಿಸಿಎಫ್ ಮಾದರಿಯ ಮೇಲೆ ಆಧಾರಿತವಾಗಿರುವುದು. ನಗದು ಹರಿಯುವಿಕೆಗಳು ಮುಂದಿನ ಐದು ವರ್ಷಗಳಿಗೆ ಮಾಡಿದ ಬಜೆಟ್‌ನಿಂದ ಬರುವುದು. ಇದರಲ್ಲಿ ಸಿಜಿಯು ಅನ್ನು ಪರೀಕ್ಷಿಸಿರುವ ಆಸ್ತಿಯ ಕಾರ್ಯದಕ್ಷತೆಯನ್ನು ಹೆಚ್ಚಿಸುವ ಗ್ರೂಪ್‌ನ ಇನ್ನೂ ನಿರ್ಧರಿಸದಿರುವ ಪುನರ್ ರೂಪಿತ ಚಟುವಟಿಕೆಗಳು ಅಥವಾ ಮಹತ್ತರವಾದ ಮುಂದಿನ ಹೂಡಿಕೆಗಳು ಸೇರಿರುವುದಿಲ್ಲ. ಪಡೆಯಬಹುದಾಗಿರುವ ಮೊತ್ತವು ಡಿಸಿಎಫ್ ಮಾದರಿಗೆ ಬಳಸಿರುವ ರಿಯಾಯಿತಿ ದರಕ್ಕೆ ಹಾಗೂ ನಿರೀಕ್ಷಿತ ಮುಂದಿನ ನಗದು ಹರಿವುಗಳಿಗೆ ಮತ್ತು ಊಹೆ ಮಾಡಿದ ಉದ್ದೇಶಗಳಿಗೆ ಬಳಸಿರುವ ವೃದ್ಧಿ ದರಕ್ಕೆ ಒಳಪಡುವುದು.

**(ಸಿ) ವ್ಯವಸ್ಥೆಗಳು ಮತ್ತು ಸಂಭಾವ್ಯತೆಗಳು:**

ವ್ಯವಸ್ಥೆಗಳು ಮತ್ತು ಸಂಭಾವ್ಯತೆಗಳನ್ನು ಮಾನ್ಯ ಮಾಡಲು ಕೈಗೊಂಡಿರುವ ನಿರ್ಧಾರಣೆಗಳನ್ನು ಅನ್ವಯವಾಗುವ ಐಎನ್‌ಡಿ ಎಎಸ್‌ನ ಅನುಸಾರ ಮಾಡಲಾಗಿದೆ. ಹಿಂದಿನ ಘಟನೆಯ ಪರಿಣಾಮವಾಗಿ, ಗ್ರೂಪ್ ಪ್ರಸಕ್ತದಲ್ಲಿನ ಕಾನೂನು ಅಥವಾ ರಚನಾತ್ಮಕ ಹೊಣೆಗಾರಿಕೆ ಹೊಂದಿದ್ದರೆ, ಅದನ್ನು ವಿಶ್ವಾಸನೀಯವಾಗಿ ಅಂದಾಜು ಮಾಡಿರುವುದಾಗಿದ್ದು, ಮತ್ತು ಆರ್ಥಿಕ ಅನುಕೂಲಗಳ ಹೊರಹರಿವನ್ನು ಹೊಣೆಗಾರಿಕೆಯನ್ನು ಇತ್ಯರ್ಥಪಡಿಸಲು ಬೇಕಾಗಿದ್ದ ಸಂಭವವಿದ್ದಾಗ ವ್ಯವಸ್ಥೆಯನ್ನು ಮಾನ್ಯ ಮಾಡಿದೆ. ಹಣದ ಸಮಯದ ಮೌಲ್ಯ ಪರಿಣಾಮವು ಉಂಟಾದಾಗ ನಿರೀಕ್ಷಿತ ಮುಂದಿನ ನಗದು ಹರಿವುಗಳನ್ನು ಕಳೆಯುವ ಮೂಲಕ ವ್ಯವಸ್ಥೆಗಳನ್ನು ನಿರ್ಧಾರಣೆ ಮಾಡಿದೆ.

ಗ್ರೂಪ್ ಸ್ಥಿತಿ ವಿವರಣಾ ಪಟ್ಟಿಯಲ್ಲಿ ಮಾನ್ಯ ಮಾಡಿರದ ವಿವಿಧ ಬಂಡವಾಳ ಯೋಜನೆಗಳಿಗೆ ಸಂಬಂಧಪಟ್ಟಂತೆ ಮಹತ್ತರವಾದ ಬಂಡವಾಳ ಬದ್ಧತೆಗಳನ್ನು ಹೊಂದಿರುವುದು. ಸಾಧಾರಣ ಸ್ವರೂಪದ ವ್ಯವಹಾರದಲ್ಲಿ, ವ್ಯಾಜ್ಯದಿಂದ ಮತ್ತು ಗ್ರೂಪ್‌ನ ಮೇಲಿನ ಇತರೆ ಕ್ಲೇಮುಗಳಿಂದ ಸಂಭಾವ್ಯ ಹೊಣೆಗಾರಿಕೆಗಳು ಉಂಟಾಗುವವು. ಸಾಧಾರಣ ಸ್ವರೂಪದ ವ್ಯವಹಾರದಲ್ಲಿ ಖಾತರಿಗಳನ್ನು ಸಹ ಒದಗಿಸಲಾಗುವುದು. ಕೆಲವು ಹೊಣೆಗಾರಿಕೆಗಳನ್ನು ಲಭ್ಯವಿರುವ ಅಂಶಗಳು ಮತ್ತು ಸಂದರ್ಭಗಳ ಆಧಾರದ ಮೇಲೆ ಆಡಳಿತ ಮಂಡಳಿ ಇತ್ಯರ್ಥಪಡಿಸಿದೆ. ಈ ಹೊಣೆಗಾರಿಕೆಗಳು ಪಾವತಿಯ ಅವಶ್ಯಕತೆ ಹೊಂದಿರುವುದಿಲ್ಲ ಅಥವಾ ವಿಶ್ವಾಸನೀಯವಾಗಿ ಅದನ್ನು ಪ್ರಮಾಣೀಕರಿಸುವುದು ತುಂಬಾ ಕಷ್ಟದಾಯಕ. ಇಂತಹ ಹೊಣೆಗಾರಿಕೆಗಳನ್ನು ಸಂಭವನೀಯ ಹೊಣೆಗಾರಿಕೆಗಳೆಂದು ಪರಿಗಣಿಸಿದೆ ಮತ್ತು ಟಿಪ್ಪಣಿಗಳಲ್ಲಿ ತಿಳಿಸಿದೆ. ಆದರೆ ಅವು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿ ಹೊಣೆಗಾರಿಕೆಗಳು ಎಂಬುದಾಗಿ ಬಿಂಬಿತವಾಗಿರುವುದಿಲ್ಲ.

ಹಾಗಿದ್ದರೂ, ಗ್ರೂಪ್ ಒಳಪಟ್ಟಿರುವ ಕಾನೂನು ಕ್ರಮಾವಳಿಗಳ ಅಂತಿಮ ಫಲಿತಾಂಶಗಳ ಬಗ್ಗೆ ಯಾವುದೇ ಭರವಸೆಯಿರುವುದಿಲ್ಲ. ಅಂತಹ ಸಂಭಾವ್ಯತೆಗಳು ಗ್ರೂಪ್ ಹಣಕಾಸಿನ ಸ್ಥಾನಮಾನದ ಮೇಲೆ ಅಥವಾ ಲಾಭದಾಯಕತೆ ಮೇಲೆ ವಾಸ್ತವಿಕ ಪರಿಣಾಮ ಉಂಟುಮಾಡುವುದೆಂದು ನಿರೀಕ್ಷಿಸಿರುವುದಿಲ್ಲ.

**(ಡಿ) ಪ್ರತಿಪಾದಿತ ಸೌಲಭ್ಯ ಯೋಜನೆಗಳು:**

ನೌಕರರ ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆ ಬಗ್ಗೆ ಗ್ರೂಪ್ ಬಾಧ್ಯತೆಯ ನಿರ್ಧಾರಣೆಯನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮತ್ತು ಇತರೆ ಸಮಗ್ರ ಆದಾಯದಲ್ಲಿ ಮಾನ್ಯ ಮಾಡಬೇಕಾಗಿರುವ ಮೊತ್ತಗಳ ನಿರ್ಧಾರಣೆಯೂ ಸೇರಿದಂತೆ ಸ್ವತಂತ್ರ ವಿಮಾಗಣನ ಮೌಲ್ಯಮಾಪನ ಮೂಲಕ ಮಾಡಿದೆ.

ಹಣದುಬ್ಬರ, ಜ್ಯೇಷ್ಠತೆ, ಬಡ್ತಿ ಮತ್ತು ಇತರೆ ಸಂಬಂಧಪಟ್ಟ ಅಂಶಗಳಾದ ಉದ್ಯೋಗ ಮಾರುಕಟ್ಟೆಯಲ್ಲಿನ ಪೂರೈಕೆ ಮತ್ತು ಬೇಡಿಕೆಗಳ ಅಂಶಗಳನ್ನು ಗಣನೆಗೆ ತೆಗೆದುಕೊಂಡ ನಂತರ ಅಂತಹ ಮೌಲ್ಯಮಾಪನವನ್ನು ಊಹೆಗಳ ಮೇಲೆ ಅವಲಂಬಿತವಾಗಿ ನಿರ್ಧಾರಣೆ ಮಾಡಿದೆ.

ಮುಂದುವರೆದು ಅಂತಹ ಮೌಲ್ಯಮಾಪನದ ಬಗ್ಗೆ ಮಾಹಿತಿಯನ್ನು ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಟಿಪ್ಪಣಿಗಳಲ್ಲಿ ಒದಗಿಸಿದೆ.

ಪ್ರತಿಪಾದಿತ ಸೌಲಭ್ಯ ಹೊಣೆಗಾರಿಕೆಗಳ ಬಗ್ಗೆ ಹೆಚ್ಚಿನ ವಿವರಗಳನ್ನು ಟಿಪ್ಪಣಿ 30ರಲ್ಲಿ ಒದಗಿಸಿದೆ.

**(ಇ) ಹಣಕಾಸಿನ ಆಸ್ತಿಗಳ ಮೇಲೆ ನಿರೀಕ್ಷಿತ ಕ್ರೆಡಿಟ್ ನಷ್ಟ (ಚಿಟ್‌ಫಂಡ್ ವ್ಯವಹಾರ)**

ಹಣಕಾಸಿನ ಆಸ್ತಿಗಳ ದುರ್ಬಲತೆ ಅವಕಾಶವು ವಸೂಲಿಯ ಸಾಧ್ಯನೀಯ ಸುಸ್ತಿ ಮತ್ತು ನಿರೀಕ್ಷಿತ ಸಮಯದ ಅಪಾಯದ ಊಹೆಯ ಮೇಲೆ ಆಧಾರಿತವಾಗಿರುವುದು. ವಸೂಲಿಗಳ ಬಗ್ಗೆ ಗ್ರೂಪ್‌ನ ಇತಿಹಾಸ, ಗ್ರಾಹಕರು ಸಾಲ ಪಡೆಯುವಿಕೆ ಅರ್ಹತೆ, ಹಾಲಿಯಿರುವ ಮಾರುಕಟ್ಟೆ ಪರಿಸ್ಥಿತಿಗಳ ಹಾಗೂ ಪ್ರತಿ ವರದಿಗಾರಿಕೆ ಅವಧಿ ಕೊನೆಯಲ್ಲಿ ಮುಂಗಾಣ್ಕೆ ಅಂದಾಜುಗಳ ಆಧಾರದ ಮೇಲೆ ಕಂಪನಿಯು ಈ ಊಹೆಗಳನ್ನು ಮಾಡುವಲ್ಲಿ ಮತ್ತು ನಿರೀಕ್ಷಿತ ಕ್ರೆಡಿಟ್ ನಷ್ಟದ ಲೆಕ್ಕಾಚಾರಕ್ಕೆ ಮಾಹಿತಿ ಆಯ್ಕೆ ಮಾಡಲು ತೀರ್ಪುಗಳನ್ನು ಬಳಸುವುದು.

ಎಫ್) ಗುತ್ತಿಗೆಗಳು:

ಐಎನ್‌ಡಿ ಎಎಸ್ 116 ಗುತ್ತಿಗೆ ಅವಧಿಯನ್ನು ರದ್ದುಪಡಿಸಲಾಗದ ಅವಧಿ ಎಂದು ಪ್ರತಿಪಾದಿಸಿರುವುದು. ಇದರಂತೆ ಗುತ್ತಿಗೆದಾರನು, ಸಂಸ್ಥೆಯು ಗುತ್ತಿಗೆ ಅವಧಿ ವಿಸ್ತರಿಸಲು (ಅಥವಾ ರದ್ದುಪಡಿಸದಿರಲು) ಆಯ್ಕೆಯನ್ನು ಚಲಾಯಿಸಲು ಸೂಕ್ತವಾಗಿ ಖಚಿತವಾಗಿದ್ದಾಗ ಐಚ್ಛಿಕ ಅವಧಿಯೂ ಸೇರಿದಂತೆ ನಿಗದಿತ ಆಸ್ತಿಯ ಬಳಕೆ ಹಕ್ಕನ್ನು ಹೊಂದಿರುವರು. ಗುತ್ತಿಗೆ ಅವಧಿ ನಿರ್ಧರಣೆ ಮಾಡಿದಾಗ ಆಯ್ಕೆಯನ್ನು ಚಲಾಯಿಸಲು ಗುತ್ತಿಗೆದಾರನಿಗೆ ಆರ್ಥಿಕ ಪ್ರೋತ್ಸಾಹಕ ಧನ ಸೃಷ್ಟಿಸುವ ಎಲ್ಲಾ ಸಂಬಂಧಪಟ್ಟ ಅಂಶಗಳು ಮತ್ತು ಪರಿಸ್ಥಿತಿಗಳನ್ನು ಗ್ರೂಪ್ ಪರಿಗಣಿಸುವುದು. ಗುತ್ತಿಗೆದಾರನು ಆಯ್ಕೆಯನ್ನು ಚಲಾಯಿಸಬಹುದು ಎಂಬ ಬಗ್ಗೆ ಸೂಕ್ತವಾದ ಖಚಿತತೆಯಿದ್ದಲ್ಲಿ ಗುತ್ತಿಗೆ ಅವಧಿಯಲ್ಲಿ ಗುತ್ತಿಗೆ ಅವಧಿಯ ವಿಸ್ತರಣೆ ಆಯ್ಕೆಯನ್ನು ಸೇರ್ಪಡೆ ಮಾಡಿದೆ. ಗುತ್ತಿಗೆದಾರನ ನಿಯಂತ್ರಣದ ಒಳಗೆ ಇರುವ ಮಹತ್ತರವಾದ ಘಟನಾವಳಿಗಳು ಅಥವಾ ಪರಿಸ್ಥಿತಿಗಳಲ್ಲಿನ ಬದಲಾವಣೆಗಳು ಉಂಟಾದಾಗ ಆಯ್ಕೆಯನ್ನು ಗ್ರೂಪ್ ಮರು ನಿರ್ಧರಣೆ ಮಾಡುವುದು.

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
### (ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)
### 2 ಸ್ವತ್ತು, ಸ್ಥಾವರ ಮತ್ತು ಉಪಕರಣ

| ವಿವರಗಳು | ಮುಕ್ತ ಹಿಡುವಳಿ ಜಮೀನು | ಗುತ್ತಿಗೆ ಹಿಡುವಳಿ ಜಮೀನು | ಕಟ್ಟಡ - ಮುಕ್ತ ಹಿಡುವಳಿ | ನಿರ್ವಹಣೆ ಉಪಕರಣಗಳು | ವಿದ್ಯುತ್ ಉಪಕರಣ | ಕಂಪ್ಯೂಟರ್‌ಗಳು | ಪೀಠೋಪಕರಣ ಮತ್ತು ಅಳವಡಿಕೆಗಳು | ವಾಹನಗಳು | ಕಚೇರಿ ಉಪಕರಣ | ಗುತ್ತಿಗೆ ನೀಡಿರುವ ಆಸ್ತಿಗಳು | ಒಟ್ಟು |
|---|---|---|---|---|---|---|---|---|---|---|---|
| ಒಟ್ಟು ವಾಹಕ ಮೊತ್ತ | **167.69** | **342.38** | **440.65** | **0.32** | **2,062.00** | **419.46** | **3,542.55** | **351.50** | **1,310.87** | **7.05** | **8,644.47** |
| **01ನೇ ಏಪ್ರಿಲ್ 2022ರಂದು ಇದ್ದಂತೆ** | - | - | - | - | 726.91 | 21.71 | 932.18 | 82.76 | 306.58 | - | 2,070.14 |
| ಸೇರ್ಪಡೆಗಳು | - | - | - | - | (3.36) | (0.58) | (19.09) | (0.80) | (3.51) | - | (27.34) |
| ಕಳೆದಿರುವುದು | - | (142.24) | - | - | - | - | - | - | - | - | (142.24) |
| ಖರ್ಚು ಎಂಬುದಾಗಿ ಮರು ವರ್ಗೀಕರಣ ಮಾಡಿರುವ ಆಸ್ತಿಗೆ ಹೊಂದಾಣಿಕೆ★ | **167.69** | **200.14** | **440.65** | **0.32** | **2,785.55** | **440.59** | **4,455.64** | **433.46** | **1,613.94** | **7.05** | **10,545.03** |
| **31ನೇ ಮಾರ್ಚ್ 2023 ರಂದು ಇದ್ದಂತೆ** | - | - | 71.98 | 1.32 | 304.97 | 47.75 | 94.90 | - | 268.36 | - | 789.28 |
| ಸೇರ್ಪಡೆಗಳು | - | - | - | - | (6.64) | - | (37.18) | - | (3.06) | - | (46.88) |
| ಕಳೆದಿರುವುದು | - | - | - | - | - | - | (0.45) | - | - | - | (0.45) |
| ಖರ್ಚು ಎಂಬುದಾಗಿ ಮರು ವರ್ಗೀಕರಣ ಮಾಡಿರುವ ಆಸ್ತಿಗೆ ಹೊಂದಾಣಿಕೆ★ | - | - | 11.38 | - | (3.39) | - | (20.23) | - | 15.45 | - | 3.21 |
| **ಹಿಂದಿನ ವರ್ಷದಲ್ಲಿನ ತಪ್ಪಿಗೆ ಹೊಂದಾಣಿಕೆ★** | **167.69** | **200.14** | **524.01** | **1.64** | **3,080.49** | **488.34** | **4,492.68** | **433.46** | **1,894.69** | **7.05** | **11,290.19** |
| **31ನೇ ಮಾರ್ಚ್ 2024 ರಂದು ಇದ್ದಂತೆ** | - | - | - | - | - | - | - | - | - | - | - |
| **ಸಂಚಯನವಾದ ಸವಕಳಿ** | - | - | 102.95 | 0.27 | 719.65 | 256.45 | 1,923.98 | 164.84 | 717.57 | 3.09 | 3,888.80 |
| **1ನೇ ಏಪ್ರಿಲ್ 2022 ರಂದು ಇದ್ದಂತೆ** | - | - | 9.21 | - | 231.77 | 65.30 | 636.66 | 43.63 | 190.55 | 2.23 | 1,179.35 |
| ವರ್ಷದಲ್ಲಿ ಸವಕಳಿ | - | - | - | - | (2.64) | (0.54) | (12.59) | - | (1.28) | - | (17.05) |
| ಕಳೆದಿರುವುದು | - | - | **112.16** | **0.27** | **948.78** | **321.21** | **2,548.05** | **208.47** | **906.84** | **5.32** | **5,051.10** |
| **ಹಿಂದಿನ ವರ್ಷದಲ್ಲಿನ ತಪ್ಪಿಗೆ ಹೊಂದಾಣಿಕೆ★** | - | - | 10.37 | 0.21 | 275.10 | 65.71 | 550.18 | 46.96 | 211.26 | - | 1,159.79 |
| **31ನೇ ಮಾರ್ಚ್ 2023ರಂದು ಇದ್ದಂತೆ** | - | - | - | - | (1.87) | - | (37.15) | - | (1.23) | - | (40.25) |
| **ವರ್ಷದ ಸವಕಳಿ** | - | - | 0.10 | - | (0.28) | - | (0.88) | - | 1.70 | - | 0.64 |
| ಕಳೆದಿರುವುದು | - | - | **122.63** | **0.48** | **1,221.73** | **386.92** | **3,060.20** | **255.43** | **1,118.57** | **5.32** | **6,171.28** |
| **31ನೇ ಮಾರ್ಚ್ 2024ರಂದು ಇದ್ದಂತೆ** | - | - | - | - | - | - | - | - | - | - | - |
| **ನಿವ್ವಳ ವಾಹಕ ಮೊತ್ತ** | | | | | | | | | | | |
| **31ನೇ ಮಾರ್ಚ್ 2024 ರಂದು ಇದ್ದಂತೆ** | **167.69** | **200.14** | **401.38** | **1.16** | **1,858.76** | **101.42** | **1,432.48** | **178.03** | **776.12** | **1.73** | **5,118.91** |
| **31ನೇ ಮಾರ್ಚ್ 2023 ರಂದು ಇದ್ದಂತೆ** | **167.69** | **200.14** | **328.49** | **0.05** | **1,836.77** | **119.38** | **1,907.59** | **224.99** | **707.10** | **1.73** | **5,493.93** |

ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

★ ಹಣಕಾಸಿನ ವರ್ಷ 2022–23ರ ಅವಧಿಯಲ್ಲಿ, ರೂ.0.45 ಲಕ್ಷಗಳ ಮೊತ್ತದ ಆದಾಯ ಖರ್ಚುಗಳನ್ನು ಬಂಡವಾಳ ಖರ್ಚು ಎಂಬುದಾಗಿ ತಪ್ಪಾಗಿ ವರ್ಗೀಕರಿಸಲಾಗಿದೆ ಮತ್ತು ಅದನ್ನು ಚಾಲ್ತಿ ವರ್ಷಗಳಲ್ಲಿ ಸರಿಪಡಿಸಲಾಗಿದೆ. ಎಂಬುದಾಗಿ ಸಿ ಅಂಡ್ ಎಜಿ ಗಮನಿಸಿದೆ.

★★ ಹಣಕಾಸಿನ ವರ್ಷ 2022–23ರ ಅವಧಿಯಲ್ಲಿ, ಕೆಲವು ಆಸ್ತಿಗಳನ್ನು ತಪ್ಪಾಗಿ ವರ್ಗೀಕರಿಸಿದೆ ಮತ್ತು ಅದನ್ನು ಒಟ್ಟು ಬ್ಲಾಕ್ ಮತ್ತು ಸಂಚಯನವಾದ ಸವಕಳಿಗೆ ಹೊಂದಾಣಿಕೆ ಮಾಡುವ ಮೂಲಕ ಚಾಲ್ತಿ ವರ್ಷದಲ್ಲಿ ಸರಿಪಡಿಸಿದೆ ಎಂಬುದಾಗಿ ಸಿ ಅಂಡ್ ಎಜಿ ಗಮನಿಸಿದೆ.

★★★ ಪೀಠೋಪಕರಣ ಮತ್ತು ಅಳವಡಿಕೆಗಳಲ್ಲಿ ರೂ.0.43 ಲಕ್ಷಗಳ ಮೊತ್ತದ ಸಂಚಯನವಾದ ಸವಕಳಿಯ ಶಿಲ್ಕುಗಳ ವರ್ಗೀಕರಣಕ್ಕೆ ಸಂಬಂಧಿಸಿದಂತೆ ಹಿಂದಿನ ವರ್ಷಗಳ ತಪ್ಪುಗಳನ್ನು ಸ್ಥಿರಾಸ್ತಿ ರಿಜಿಸ್ಟರ್ ಅನ್ವಯ ಸರಿಯಾದ ಮೊತ್ತಗಳನ್ನು ಬಿಂಬಿಸಲು ವಿದ್ಯುತ್ ಉಪಕರಣಕ್ಕೆ ಸ್ಥಳಾಂತರಿಸಿದೆ.

1. 31ನೇ ಮಾರ್ಚ್ 2024ರಂದು ಇದ್ದಂತೆ ಭದ್ರತೆಗಳಾಗಿ ಈಡು ಮಾಡಿರುವ ಸ್ವತ್ತುಗಳು: ಇಲ್ಲ (31ನೇ ಮಾರ್ಚ್, 2023: ಇಲ್ಲ)
2. ಸ್ವತ್ತು, ಸ್ಥಾವರ ಮತ್ತು ಉಪಕರಣಗಳ ಸಂಬಂಧದಲ್ಲಿ ಒಪ್ಪಂದದ ಬದ್ಧತೆಗಳ ಬಗ್ಗೆ ಟಿಪ್ಪಣಿ 40 (ಎ) ನೋಡಿ.

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

### 3. ಪ್ರಗತಿಯಲ್ಲಿರುವ ಬಂಡವಾಳ ಕಾರ್ಯಗಳು (ಸಿಡಬ್ಲ್ಯುಐಪಿ)

| ವಿವರಗಳು | ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ | ಒಟ್ಟು |
|---|---|---|
| **01ನೇ ಏಪ್ರಿಲ್ 2022ರಂದು ಇದ್ದಂತೆ** | **397.04** | **397.04** |
| ಸೇರ್ಪಡೆಗಳು | 195.79 | 195.79 |
| ಕಳೆದಿರುವುದು | - | - |
| **31ನೇ ಮಾರ್ಚ್ 2023ರಂದು ಇದ್ದಂತೆ** | **592.83** | **592.83** |
| ಸೇರ್ಪಡೆಗಳು | 13.58 | 13.58 |
| ಕಳೆದಿರುವುದು | (72.45) | (72.45) |
| **31ನೇ ಮಾರ್ಚ್ 2024ರಂದು ಇದ್ದಂತೆ** | **533.96** | **533.96** |

**ಎ.ಪ್ರಗತಿಯಲ್ಲಿರುವ ಬಂಡವಾಳ ಕಾರ್ಯದ ಕಾಲಾವಧಿ:**

| 31ನೇ ಮಾರ್ಚ್ 2024ರಂದು ಇದ್ದಂತೆ | ಕೊನೆಗೊಂಡ ಕೆಳಕಂಡ ಅವಧಿಯಲ್ಲಿನ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯದ ಮೊತ್ತ | | | | |
|---|---|---|---|---|---|
| ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ | 1 ವರ್ಷಕ್ಕಿಂತ ಕಡಿಮೆ | 1-2 ವರ್ಷಗಳು | 2-3 ವರ್ಷಗಳು | 3 ವರ್ಷಗಳಿಗಿಂತ ಹೆಚ್ಚು | ಒಟ್ಟು |
| ಪ್ರಗತಿಯಲ್ಲಿರುವ ಯೋಜನೆಗಳು | 13.58 | 195.79 | 94.00 | 230.59 | 533.96 |
| ತಾತ್ಕಾಲಿಕವಾಗಿ ಸ್ಥಗಿತವಾಗಿರುವ ಯೋಜನೆಗಳು | | | | | |
| **ಒಟ್ಟು** | **13.58** | **195.79** | **94.00** | **230.59** | **533.96** |

| 31ನೇ ಮಾರ್ಚ್ 2023ರಂದು ಇದ್ದಂತೆ | ಕೊನೆಗೊಂಡ ಕೆಳಕಂಡ ಅವಧಿಯಲ್ಲಿನ ಪ್ರಗತಿಯಲ್ಲಿರುವ ಬಂಡವಾಳ ಕಾರ್ಯದ ಮೊತ್ತ | | | | |
|---|---|---|---|---|---|
| ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ | 1 ವರ್ಷಕ್ಕಿಂತ ಕಡಿಮೆ | 1-2 ವರ್ಷಗಳು | 2-3 ವರ್ಷಗಳು | 3 ವರ್ಷಗಳಿಗಿಂತ ಹೆಚ್ಚು | ಒಟ್ಟು |
| ಪ್ರಗತಿಯಲ್ಲಿರುವ ಯೋಜನೆಗಳು | 195.79 | 94.00 | 141.88 | 161.16 | 592.83 |
| ತಾತ್ಕಾಲಿಕವಾಗಿ ಸ್ಥಗಿತವಾಗಿರುವ ಯೋಜನೆಗಳು | | | | | |
| **ಒಟ್ಟು** | **195.79** | **94.00** | **141.88** | **161.16** | **592.83** |

**ಬಿ. ಪೂರ್ಣಗೊಳಿಸುವಿಕೆ ಬಾಕಿಯಿರುವ ಅಥವಾ ಅದರ ಮೂಲ ಯೋಜನೆಗೆ ಹೋಲಿಸಿದರೆ ಅಂದಾಜು ಮಾಡಿದ್ದ ಕಾಲಮಾನಕ್ಕಿಂತ ವೆಚ್ಚ ಹೆಚ್ಚಾಗಿರುವ ಪ್ರಗತಿಯಲ್ಲಿರುವ ಯೋಜನೆಗಳ ವಿವರ:**

| 31ನೇ ಮಾರ್ಚ್ 2024ರಂದು ಇದ್ದಂತೆ | | | |
|---|---|---|---|
| ಪ್ರಗತಿಯಲ್ಲಿರುವ ಯೋಜನೆ | ನಿಗದಿಪಡಿಸಿದ್ದ ಯೋಜನೆ ವೆಚ್ಚ | 31ನೇ ಮಾರ್ಚ್ 2024 ರಂದು ಇದ್ದಂತೆ ವಾಸ್ತವಿಕ ವೆಚ್ಚ | ವಿಳಂಬಕ್ಕೆ ಕಾರಣ |
| ಉಗ್ರಾಣ, ಕಪನೂರ್ ಕೈಗಾರಿಕಾ ಪ್ರದೇಶ, ಕಲಬುರಗಿ | 752.91 | 533.96 | ಹೆಚ್ಚುವರಿ ಕೆಲಸ ಸೇರಿಸಿರುವುದರಿಂದ |
| | | | |

| 31ನೇ ಮಾರ್ಚ್ 2023ರಂದು ಇದ್ದಂತೆ | | | |
|---|---|---|---|
| ಪ್ರಗತಿಯಲ್ಲಿರುವ ಯೋಜನೆ | ನಿಗದಿಪಡಿಸಿದ್ದ ಯೋಜನೆ ವೆಚ್ಚ | 31ನೇ ಮಾರ್ಚ್ 2023 ರಂದು ಇದ್ದಂತೆ ವಾಸ್ತವಿಕ ವೆಚ್ಚ | ವಿಳಂಬಕ್ಕೆ ಕಾರಣ |
| ಉಗ್ರಾಣ, ಕಪನೂರ್ ಕೈಗಾರಿಕಾ ಪ್ರದೇಶ, ಕಲಬುರಗಿ | 752.91 | 592.83 | ಹೆಚ್ಚುವರಿ ಕೆಲಸ ಸೇರಿಸಿರುವುದರಿಂದ |
| | | | |

ಸಿ. 31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಬಂಡವಾಳೀಕರಿಸಿದ ಯಾವುದೇ ಸಾಲಗಳ ವೆಚ್ಚವಿರುವುದಿಲ್ಲ.

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**ಸ್ವತಂತ್ರ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**

**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**4. ಹೂಡಿಕೆ ಸ್ವತ್ತು**

| ವಿವರಗಳು | ಮುಕ್ತ ಹಿಡುವಳಿ ಜಮೀನು | ಗುತ್ತಿಗೆ ಹಿಡುವಳಿ ಜಮೀನು | ಕಟ್ಟಡ- ಮುಕ್ತ ಹಿಡುವಳಿ | ಕಟ್ಟಡ -ಗುತ್ತಿಗೆ ಹಿಡುವಳಿ | ಒಟ್ಟು |
|---|---|---|---|---|---|
| 01ನೇ ಏಪ್ರಿಲ್ 2022ರಂದು ಇದ್ದಂತೆ | 53.06 | 100.95 | 1,604.08 | 2,686.59 | 4,444.68 |
| ಸೇರ್ಪಡೆಗಳು | – | – | – | – | – |
| ಕಳೆದಿರುವುದು | – | – | – | – | – |
| **31ನೇ ಮಾರ್ಚ್ 2023 ರಂದು ಇದ್ದಂತೆ** | 53.06 | 100.95 | 1,604.08 | 2,686.59 | 4,444.68 |
| ಸೇರ್ಪಡೆಗಳು | – | – | – | – | – |
| ಕಳೆದಿರುವುದು | – | – | – | – | – |
| **31ನೇ ಮಾರ್ಚ್ 2024ರಂದು ಇದ್ದಂತೆ** | 53.06 | 100.95 | 1,604.08 | 2,686.59 | 4,444.68 |
| ಸವಕಳಿ ಮತ್ತು ಕ್ಷೀಣತೆ | – | – | – | – | – |
| **1ನೇ ಏಪ್ರಿಲ್ 2022ರಂದು ಇದ್ದಂತೆ** | – | – | 119.81 | 359.23 | 479.04 |
| ವರ್ಷದ ಸವಕಳಿ | – | – | 28.40 | 89.84 | 118.24 |
| **31ನೇ ಮಾರ್ಚ್ 2023 ರಂದು ಇದ್ದಂತೆ** | – | – | 148.21 | 449.07 | 597.28 |
| ವರ್ಷದ ಸವಕಳಿ | – | – | 28.43 | 89.84 | 118.27 |
| **31ನೇ ಮಾರ್ಚ್ 2024 ರಂದು ಇದ್ದಂತೆ** | – | – | – | – | – |
| | – | – | 176.64 | 538.91 | 715.55 |
| | | | | | |
| **31ನೇ ಮಾರ್ಚ್ 2024ರಂದು ಇದ್ದಂತೆ ನಿವ್ವಳ ಬ್ಲಾಕ್** | 53.06 | 100.95 | 1,427.44 | 2,147.68 | 3,729.13 |
| 31ನೇ ಮಾರ್ಚ್ 2023ರಂದು ಇದ್ದಂತೆ ನಿವ್ವಳ ಬ್ಲಾಕ್ | 53.06 | 100.95 | 1,455.87 | 2,237.52 | 3,847.40 |

**ಹೂಡಿಕೆ ಸ್ವತ್ತಿನ ಆದಾಯ ಮತ್ತು ಖರ್ಚಿನ ಬಗ್ಗೆ ವಿವರಗಳು**

| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
|---|---|---|
| ಹೂಡಿಕೆ ಸ್ವತ್ತುಗಳಿಂದ ಬಂದ ಬಾಡಿಗೆ (ಟಿಪ್ಪಣಿ-20 ನೋಡಿ) | 595.66 | 851.04 |
| ಹೂಡಿಕೆ ಆಸ್ತಿಗೆ ಸೇರಿದ ನೇರ ಕಾರ್ಯಾಚರಣೆ ಖರ್ಚುಗಳು (ದುರಸ್ತಿ ಮತ್ತು ನಿರ್ವಹಣೆ ಸೇರಿದಂತೆ) | (186.49) | (107.07) |
| **ಸವಕಳಿ ಮತ್ತು ಪರೋಕ್ಷ ಖರ್ಚುಗಳಿಗೆ ಮುನ್ನ ಹೂಡಿಕೆ ಆಸ್ತಿಗಳಿಂದ ಬಂದ ಲಾಭ** | **409.17** | **743.97** |
| ವರ್ಷದಲ್ಲಿನ ಸವಕಳಿ | (118.27) | (118.24) |
| **ಪರೋಕ್ಷ ಖರ್ಚುಗಳಿಗೆ ಮುನ್ನ ಹೂಡಿಕೆ ಆಸ್ತಿಗಳಿಂದ ಬಂದ ಲಾಭ** | **290.90** | **625.73** |

**ಸೂಚನೆ:**

1. ಹೂಡಿಕೆ ಸ್ವತ್ತುಗಳ ಹಕ್ಕು ಪತ್ರಗಳು ಕಂಪನಿಯ ಹೆಸರಿನಲ್ಲಿರುವವು
2. ಕಂಪನಿಯು ತನ್ನ ಹೂಡಿಕೆ ಆಸ್ತಿಯ ಮೌಲ್ಯಮಾಪನ ಮಾಡಿರುವ ಪ್ರಕ್ರಿಯೆಯಲ್ಲಿರುವುದು.
3. ಕಂಪನಿಯು ತನ್ನ ಹೂಡಿಕೆ ಸ್ವತ್ತುಗಳ ನಗದೀಕರಿಣದ ಬಗ್ಗೆ ಯಾವುದೇ ನಿರ್ಬಂಧಗಳನ್ನು ಹೊಂದಿರುವುದಿಲ್ಲ ಮತ್ತು ಹೂಡಿಕೆ ಸ್ವತ್ತುಗಳ ಖರೀದಿ ಅಥವಾ ಅಭಿವೃದ್ಧಿ ಮಾಡುವ ಒಪ್ಪಂದವಾದ ಜವಾಬ್ದಾರಿಗಳಿರುವುದಿಲ್ಲ.
4. 31ನೇ ಮಾರ್ಚ್‌ನಲ್ಲಿ 2024ರಂದು ಇದ್ದಂತೆ ಭದ್ರತೆಗಾಗಿ ಈಡು ಮಾಡಿರುವ ಹೂಡಿಕೆ ಸ್ವತ್ತುಗಳು: ಇಲ್ಲ; (31ನೇ ಮಾರ್ಚ್ 2023: ಇಲ್ಲ)

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

### 5. ಇತರೆ ಅಗೋಚರಿತ ಆಸ್ತಿಗಳು

| ವಿವರಗಳು | ಕಂಪ್ಯೂಟರ್ ತಂತ್ರಾಂಶ |
|---|---|
| **ಒಟ್ಟು ವಾಹಕ ಮೊತ್ತ** | |
| **01ನೇ ಏಪ್ರಿಲ್ 2022ರಂದು ಇದ್ದಂತೆ** | **105.29** |
| ಸೇರ್ಪಡೆಗಳು | 5.30 |
| ಕಳೆದಿರುವುದು | |
| **31ನೇ ಮಾರ್ಚ್ 2023ರಂದು ಇದ್ದಂತೆ** | **110.59** |
| ಸೇರ್ಪಡೆಗಳು | 5.50 |
| ಹಿಂದಿನ ವರ್ಷದಲ್ಲಿನ ತಪ್ಪಿನಿಂದ ಹೊಂದಾಣಿಕೆ★ | (3.20) |
| **31ನೇ ಮಾರ್ಚ್ 2024 ರಂದು ಇದ್ದಂತೆ** | **112.89** |
| | |
| **ಸಂಚಯನವಾದ ಅಮಾರ್ಟೈ ಜೇಶನ್** | |
| **01ನೇ ಏಪ್ರಿಲ್ 2022ರಂದು ಇದ್ದಂತೆ** | **78.44** |
| ವರ್ಷದ ಅವಧಿಯ ಅಮಾರ್ಟೈಜೇಶನ್ | 11.46 |
| ಹಿಂದಿನ ವರ್ಷದಲ್ಲಿನ ತಪ್ಪಿನಿಂದ ಹೊಂದಾಣಿಕೆ★ | |
| **31ನೇ ಮಾರ್ಚ್ 2023ರಂದು ಇದ್ದಂತೆ** | **89.90** |
| ವರ್ಷದ ಅವಧಿಯ ಅಮಾರ್ಟೈಜೇಶನ್ | 10.29 |
| ಕಳೆದಿರುವುದು | (0.65) |
| **31ನೇ ಮಾರ್ಚ್ 2024ರಂದು ಇದ್ದಂತೆ** | **99.54** |
| | |
| **31ನೇ ಮಾರ್ಚ್ 2024ರಂದು ಇದ್ದಂತೆ** | **13.35** |
| **31ನೇ ಮಾರ್ಚ್ 2023ರಂದು ಇದ್ದಂತೆ** | **20.69** |

**ಸೂಚನೆ:**

1. 31ನೇ ಮಾರ್ಚ್‌ನಲ್ಲಿ 2024ರಂದು ಇದ್ದಂತೆ ಭದ್ರತೆಗಾಗಿ ಈಡು ಮಾಡಿರುವ ಅಗೋಚರಿತ ಸ್ವತ್ತುಗಳು: ಇಲ್ಲ; (31ನೇ ಮಾರ್ಚ್ 2023: ಇಲ್ಲ) ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ-ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್

   ★ ಹಣಕಾಸಿನ ವರ್ಷ 2022-23ರ ಅವಧಿಯಲ್ಲಿ, ಕೆಲವು ಆಸ್ತಿಗಳನ್ನು ತಪ್ಪಾಗಿ ವರ್ಗೀಕರಿಸಿರುವುದನ್ನು ಮತ್ತು ಇದನ್ನು ಒಟ್ಟಾರೆ ಬ್ಲಾಕ್ ಮತ್ತು ಸಂಚಯನವಾಗಿರುವ ಅಮಾರ್ಟೈಜೇಶನ್ ಅನ್ನು ಹೊಂದಾಣಿಕೆ ಮಾಡುವ ಮೂಲಕ ಚಾಲ್ತಿ ವರ್ಷದಲ್ಲಿ ಸರಿಪಡಿಸಿರುವುದನ್ನು ಸಿ ಅಂಡ್ ಎಜಿ ಗಮನಿಸಿದೆ.

MSIL

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| 5ಎ. ಬಳಕೆ ಹಕ್ಕಿನ ಆಸ್ತಿಗಳು | |
|---|---|
| ★ ಕಂಪನಿಯು ಕಚೇರಿಗಳು ಮತ್ತು ಕಟ್ಟಡಗಳನ್ನು 3 ರಿಂದ 5 ವರ್ಷಗಳ ಗುತ್ತಿಗೆ ಅವಧಿಗೆ, ನವೀಕರಿಸಬಹುದಾದ ಆಯ್ಕೆಯೊಡನೆ ಪಡೆದಿದೆ | |
| **ಐಎನ್‌ಡಿ ಎಎಸ್ 116 ಅನ್ವಯ ಪ್ರಕಟಣೆಗಳು-ಗುತ್ತಿಗೆಗಳು ಕೆಳಕಂಡಂತಿರುವವು:** | |
| ವಿವರಗಳು | ಬಳಕೆ ಹಕ್ಕು |
| **1ನೇ ಏಪ್ರಿಲ್ 2022 ರಲ್ಲಿದ್ದಂತೆ** | **3,139.34** |
| ಸೇರ್ಪಡೆಗಳು | 354.88 |
| ವಿಲೇವಾರಿಗಳು | |
| ಹಿಂದಿನ ವರ್ಷದಲ್ಲಿನ ತಪ್ಪಿನ ಕಾರಣ ಹೊಂದಾಣಿಕೆ | 72.83 |
| **31ನೇ ಮಾರ್ಚ್ 2023 ರಂದು ಇದ್ದಂತೆ** | **3,567.05** |
| ಸೇರ್ಪಡೆಗಳು | 1,161.82 |
| ವಿಲೇವಾರಿಗಳು | |
| **31ನೇ ಮಾರ್ಚ್ 2024ರಂದು ಇದ್ದಂತೆ** | **4,728.87** |
| | |
| ಸಂಚಯನವಾಗಿರುವ ಸವಕಳಿ | - |
| 1ನೇ ಏಪ್ರಿಲ್ 2022ರಂದು ಇದ್ದಂತೆ | **2,111.08** |
| ವರ್ಷದ ಶುಲ್ಕ | 595.70 |
| ವಿಲೇವಾರಿಗೆ ಹೊಂದಾಣಿಕೆಗಳು | |
| **31ನೇ ಮಾರ್ಚ್ 2023 ರಂದು ಇದ್ದಂತೆ** | **2,706.78** |
| ವರ್ಷದ ಶುಲ್ಕ | 729.27 |
| ವಿಲೇವಾರಿಗೆ ಹೊಂದಾಣಿಕೆಗಳು | |
| **31ನೇ ಮಾರ್ಚ್ 2024ರಂದು ಇದ್ದಂತೆ** | **3,436.05** |
| | |
| **31ನೇ ಮಾರ್ಚ್ 2024ರಂದು ಇದ್ದಂತೆ ನಿವ್ವಳ ವಾಹಕ ಮೌಲ್ಯ** | **1,292.82** |
| **31ನೇ ಮಾರ್ಚ್ 2023ರಂದು ಇದ್ದಂತೆ ನಿವ್ವಳ ವಾಹಕ ಮೌಲ್ಯ** | **860.27** |

| ಕೆಳಕಂಡವುಗಳು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗುರುತಿಸಿರುವ ಖರ್ಚುಗಳಾಗಿರುವುವು: | | |
|---|---|---|
| ವಿವರಗಳು | 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದಲ್ಲಿ | 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ |
| ಬಳಕೆ ಹಕ್ಕಿನ ಆಸ್ತಿಗಳ ಸವಕಳಿ ಖರ್ಚು | 729.27 | 595.70 |
| ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ ಖರ್ಚುಗಳು | 131.78 | 103.84 |
| ಅಲ್ಪಾವಧಿ ಆಸ್ತಿಗಳ ಗುತ್ತಿಗೆಗೆ ಸಂಬಂಧಿಸಿದ ಖರ್ಚು | 995.78 | 1,117.99 |
| **ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಗಣನೆ ಮಾಡಿರುವ ಒಟ್ಟು ಮೊತ್ತ** | **1,856.83** | **1,817.53** |

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

### 6. ಹೂಡಿಕೆಗಳು

| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023 ರಂದು ಇದ್ದಂತೆ |
|---|---|---|---|
| | **ಚಾಲ್ತಿಯೇತರ ಹೂಡಿಕೆಗಳು**<br>**ಈಕ್ವಿಟಿ ಷೇರುಗಳಲ್ಲಿನ ಹೂಡಿಕೆಗಳು (ಪೂರ್ಣ ಪಾವತಿ ಮಾಡಿದ್ದು)** | | |
| ಎ. | **ಇತರೆ-ಇತರೆ ಸಮಗ್ರ ಆದಾಯದ (ನಮೂದಿತ) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವುದು.** | | |
| | **ಜೆ.ಕೆ. ಟೈರ್ ಇಂಡಸ್ಟ್ರೀಸ್ ಲಿಮಿಟೆಡ್** | 1,421.70 | 508.89 |
| | ತಲಾ ರೂ.2 ರ 329,060 (31ನೇ ಮಾರ್ಚ್ 2023: 329,060) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು | | |
| | **ಮೆ|| ಬೆಂಗಾಲ್ ಅಂಡ್ ಅಸ್ಸಾಂ ಕಂ ಲಿಮಿಟೆಡ್** | 327.43 | 140.04 |
| | ತಲಾ ರೂ.10ರ 3,831 (31ನೇ ಮಾರ್ಚ್ 2023, 3,831) ಪೂರ್ಣ ಪಾವತಿ ಮಾಡಿದ ಈಕ್ವಿಟಿ ಷೇರುಗಳು | | |
| | **ಒಟ್ಟು (ಎ)** | **1,749.13** | **648.93** |
| ಬಿ. | **ಇತರೆ-ಇತರೆ ಸಮಗ್ರ ಆದಾಯದ (ಕೋಟ್ ಮಾಡದಿರುವುದು) ಮೂಲಕ ನ್ಯಾಯೋಚಿತ ಮೌಲ್ಯದಲ್ಲಿ ಮಾಪನ ಮಾಡಿರುವುದು** | | |
| | **ಕೆ.ಟಿ. ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್★** | 0.04 | 0.04 |
| | ತಲಾ ರೂ. 100/-ರ 35 (31ನೇ ಮಾರ್ಚ್ 2023: 35) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು | | |
| | | | |
| | **ಕೆ.ಟಿ. ಮ್ಯಾನ್‌ಷನ್ಸ್ ಅಪಾರ್ಟ್‌ಮೆಂಟ್ಸ್ ಓನರ್ಸ್ ಅಸೋಸಿಯೇಷನ್ ★** | 0.03 | 0.03 |
| | ತಲಾ ರೂ. 100/-ರ 25 (31ನೇ ಮಾರ್ಚ್ 2023: 25) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು | | |
| | | | |
| | **ಹಾಸನ ಮಂಗಳೂರು ರೈಲ್ ಡೆವಲಪ್‌ಮೆಂಟ್ ಕಂಪನಿ ಲಿಮಿಟೆಡ್** | 1,819.06 | 1,729.78 |
| | ತಲಾ ರೂ. 10/-ರ 7,000,000 (31ನೇ ಮಾರ್ಚ್ 2023: 7,000,000) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು | | |
| | | | |
| | **ದಿ ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಅಪೆಕ್ಸ್ ಬ್ಯಾಂಕ್ ಲಿಮಿಟೆಡ್ -ಒಂದು-ಸಿ-ದರ್ಜೆ ಸಾಮಾನ್ಯ ಷೇರು:** | 26.41 | 26.15 |
| | ತಲಾ ರೂ.1,000,000/-ರ 1 (31ನೇ ಮಾರ್ಚ್ 2023:1) ಪೂರ್ಣ ಪಾವತಿಸಿದ ಈಕ್ವಿಟಿ ಷೇರುಗಳು | | |
| | **ಒಟ್ಟು (ಬಿ)** | **1,845.54** | **1,756.00** |
| | **ಒಟ್ಟು (ಎ+ಬಿ)** | **3,594.67** | **2,404.93** |
| | ನಮೂದಿಸಿದ ಹೂಡಿಕೆಗಳ ಒಟ್ಟಾರೆ ಮೊತ್ತ ಮತ್ತು ಅವುಗಳ ಮಾರುಕಟ್ಟೆ ಮೌಲ್ಯ | 1,749.13 | 648.93 |
| | ನಮೂದು ಮಾಡಿರದ ಹೂಡಿಕೆಗಳ ಒಟ್ಟು ಮೊತ್ತ | 1,845.54 | 1,756.00 |
| | ಹೂಡಿಕೆಗಳ ಮೌಲ್ಯದಲ್ಲಿ ಕ್ಷೀಣತೆಯ ಒಟ್ಟು ಮೊತ್ತ | - | - |
| | **ಒಟ್ಟು ಹೂಡಿಕೆಗಳು** | **3,594.67** | **2,404.93** |

(★) ಹೂಡಿಕೆಗಳ ವಾಹಕ ಮೌಲ್ಯವನ್ನು ಅವುಗಳ ನ್ಯಾಯೋಚಿತ ಮೌಲ್ಯದ ಅಂದಾಜಿನಲ್ಲಿ ಆಡಳಿತ ಮಂಡಳಿ ನಿರ್ಧರಣೆ ಮಾಡಿದೆ.

## ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
## ಸ್ವತಂತ್ರ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

### 7. ಇತರೆ ಹಣಕಾಸಿನ ಆಸ್ತಿಗಳು

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
|---|---|---|---|---|
| | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| **ಭದ್ರತೆ ಇಲ್ಲದ್ದು, ತಿಳಿಸಿರದ ಹೊರತು ಉತ್ತಮವೆಂದು ಪರಿಗಣಿಸಿರುವುದು** | | | | |
| **ಎ. ಚಿಟ್ ವಿಭಾಗ** | | | | |
| ಸಾಲಗಳು ಮತ್ತು ಮುಂಗಡಗಳು-ಭದ್ರತೆಯುಳ್ಳವು | | | | |
| -ಸಂಬಂಧಪಟ್ಟ ಪಾರ್ಟಿಗಳಿಗೆ ಟಿಪ್ಪಣಿ 39 ನೋಡಿ | - | 1.55 | - | 5.75 |
| - ಇತರರಿಗೆ | 15,191.36 | 15,438.75 | 16,840.23 | 8,806.33 |
| ಸಂದೇಹಾಸ್ಪದವೆಂದು ಪರಿಗಣಿಸಿರುವುದು | - | 986.41 | - | 934.11 |
| ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ | - | (986.41) | - | (934.11) |
| ವಸ್ತು ರೂಪದಲ್ಲಿ ಅಥವಾ ಸ್ವೀಕರಿಸಲಿರುವ ಮೌಲ್ಯಕ್ಕೆ ವಸೂಲಿ ಮಾಡಬಹುದಾದ ಮುಂಗಡಗಳು | - | 963.94 | - | 755.03 |
| | | | | |
| **ಬಿ. ಇತರೆ ವಿಭಾಗಗಳು** | | | | |
| ಭದ್ರತಾ ಠೇವಣಿ | 1,018.32 | 15.40 | 1,014.28 | 148.43 |
| ಸಂದೇಹಾಸ್ಪದವೆಂದು ಪರಿಗಣಿಸಿರುವುದು | | 16.38 | | 16.38 |
| ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ | | (16.38) | | (16.38) |
| | | | | |
| ಪಡೆಯಬಹುದಾಗಿರುವ ಬಾಡಿಗೆ | | 448.95 | | 433.68 |
| ಕಳೆದು: ಪಡೆಯಬಹುದಾಗಿರುವ ಬಾಡಿಗೆಗೆ ಅವಕಾಶ | - | - | - | - |
| **ಸಂದೇಹಾಸ್ಪದವೆಂದು ಪರಿಗಣಿಸಿರುವುದು** | | 839.02 | | 773.71 |
| ಕಳೆದು: ಪಡೆಯಬಹುದಾಗಿರುವ ಸಂದೇಹಾಸ್ಪದ ಬಾಡಿಗೆಗೆ ವ್ಯವಸ್ಥೆ | | (839.02) | | (773.71) |
| | | | | |
| ಇತರೆ ಪಡೆಯಬಹುದಾಗಿರುವುದು | | | | |
| ಉತ್ತಮ ಎಂದು ಪರಿಗಣಿಸಿರುವುದು | 0.01 | - | 0.24 | - |
| ಸಂದೇಹಾಸ್ಪದ ಎಂದು ಪರಿಗಣಿಸಿರುವುದು | - | 153.06 | - | 153.06 |
| ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ | - | (153.06) | - | (153.06) |
| | | | | |
| ವಸ್ತು ರೂಪದಲ್ಲಿ ಅಥವಾ ಸ್ವೀಕರಿಸಲಿರುವ ಮೌಲ್ಯಕ್ಕೆ ವಸೂಲಿ ಮಾಡಬಹುದಾದ ಮುಂಗಡಗಳು | - | 655.37 | - | 1,777.96 |
| **ಒಟ್ಟು** | **16,209.69** | **17,523.96** | **17,854.75** | **11,927.18** |

31ನೇ ಮಾರ್ಚ್ 2024ರಂದು ಇದ್ದಂತೆ ಪಡೆದ ಸಾಲಗಳಿಗೆ ಭದ್ರತೆಯಾಗಿ ನೀಡಿರುವ ಇತರೆ ಚಾಲ್ತಿ ಹಣಕಾಸಿನ ಆಸ್ತಿಗಳು: ಇಲ್ಲ (31ನೇ ಮಾರ್ಚ್ 2023:ಇಲ್ಲ

## 8. ಇತರೆ ಆಸ್ತಿಗಳು

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
|---|---|---|---|---|
| | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| ಭದ್ರತೆಯಿಲ್ಲದ್ದು, ತಿಳಿಸಿರದ ಹೊರತು ಉತ್ತಮವೆಂದು ಪರಿಗಣಿಸಿರುವುದು. | | | | |
| ಪೂರ್ವ ಪಾವತಿ ಖರ್ಚುಗಳು | – | 1,233.42 | – | 1,213.26 |
| ಮುಂಗಡ ಪರವಾನಗಿ ಶುಲ್ಕ | – | 1,020.08 | – | 969.18 |
| ಸರ್ಕಾರದ ಪ್ರಾಧಿಕಾರಿಗಳಲ್ಲಿರುವ ಶಿಲ್ಕು (ಕೆಳಗಿನ ಸೂಚನೆ (ii)) ನೋಡಿ | 10.30 | 268.75 | 15.52 | 1,237.68 |
| ಇತರೆ ಪಡೆಯಬಹುದಾಗಿರುವವು | | 2.95 | | 6.03 |
| ನೌಕರರಿಗೆ ಮುಂಗಡ | | 14.32 | | 2.08 |
| ಗ್ರ್ಯಾಚ್ಯುಟಿ ನಿಧಿ ಖಾತೆ (ಟಿಪ್ಪಣಿ 34 ನೋಡಿ) | 54.38 | | 67.99 | |
| ಬಿಲ್ ಮಾಡಿರದ ಆದಾಯ | | 2,249.05 | | 3,843.24 |
| ಬಂಡವಾಳ ಮುಂಗಡಗಳು | 136.17 | | 164.76 | |
| ಸರಬರಾಜುದಾರರಿಗೆ ಮುಂಗಡಗಳು | | 506.93 | | 2,329.54 |
| ಸಂದೇಹಾಸ್ಪದವೆಂದು ಪರಿಗಣಿಸಿರುವುದು | | 1,204.95 | | 1,029.79 |
| ಕಳೆದು: ಸಂದೇಹಾಸ್ಪದ ಮುಂಗಡಗಳಿಗೆ ಅವಕಾಶ | | (1,204.95) | | (1,029.79) |
| **ಒಟ್ಟು** | **200.85** | **5,295.50** | **248.27** | **9,601.01** |

**ಸೂಚನೆ:**

(i) ನಿರ್ದೇಶಕರಿಗೆ ಅಥವಾ ನಿರ್ದೇಶಕರು ಆಸಕ್ತಿ ಹೊಂದಿರುವ ಸಂಸ್ಥೆ/ಖಾಸಗಿ ಕಂಪನಿಗೆ ಮುಂಗಡಗಳನ್ನು ನೀಡಿರುವುದಿಲ್ಲ. (31ನೇ ಮಾರ್ಚ್ 2023: ಇಲ್ಲ)

(ii) ಸರ್ಕಾರದ ಪ್ರಾಧಿಕಾರಿಗಳಲ್ಲಿರುವ ಶಿಲ್ಕು ಪ್ರಮುಖವಾಗಿ ಪಡೆಯಲಾದ ಇನ್‌ಫುಟ್ ಕ್ರೆಡಿಟ್ ಅನ್ನು ಒಳಗೊಂಡಿರುವುದು.

(iii) 31ನೇ ಮಾರ್ಚ್ 2024ರಂದು ಇದ್ದಂತೆ ಭದ್ರತೆಯಾಗಿ ನೀಡಿರುವ ಇತರೆ ಚಾಲ್ತಿ ಹಣಕಾಸಿನ ಆಸ್ತಿಗಳು: ಇಲ್ಲ (31ನೇ ಮಾರ್ಚ್ 2023: ಇಲ್ಲ)

**ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿರುವ ಸಹಾಯಕ ಕಂಪನಿ-ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್**

ಎ ಕಂಪನಿಯ ಹಿಂದಿನ ನೌಕರರಾದ ಶ್ರೀ ಎಸ್.ಎಂ. ಪಾಷ ಮತ್ತು ಶ್ರೀ ಎಎನ್‌ಎಂ ರಾವ್‌ರವರ ವಿರುದ್ಧ, 11995-96ರ ಹಣಕಾಸಿನ ವರ್ಷದಲ್ಲಿ ರೂ.28.11 ಲಕ್ಷಗಳ ಮೊತ್ತದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ವಸೂಲಿ ಮಾಡಲು ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ದಾವೆ ಹೂಡಿತ್ತು. (ಓ.ಎಸ್.ನಂ.8758/1996) ವಸೂಲಿ ಪ್ರಕರಣ 09ನೇ ಜುಲೈ 2013ರಲ್ಲಿ ವಿಲೇವಾರಿಯಾಗಿದೆ. ನ್ಯಾಯಾಲಯವು ಶ್ರೀ ಎಸ್.ಎಂ.ಪಾಷ ಅವರ ವಿರುದ್ಧ ದಾವೆಯ ತೀರ್ಪು ನೀಡಿ. ಶ್ರೀ ಎಎನ್‌ಎಂ ರಾವ್ ವಿರುದ್ಧದ ದಾವೆಯನ್ನು ವಜಾ ಮಾಡಿತ್ತು. ಈ ವಿಚಾರವಾಗಿ ಕಂಪನಿ ವಕೀಲರ ಅಭಿಪ್ರಾಯ ಕೇಳಿತ್ತು. ತೀರ್ಪನ್ನು ವಿರೋಧಿಸಲು ಸದರಿ ಪ್ರಕರಣದಲ್ಲಿ ಕೆಲವು ಆಧಾರಗಳಿರುವುದಾಗಿ ಅಭಿಪ್ರಾಯ ತಿಳಿಸಿದ್ದರು. ಇದರಂತೆ ಕಂಪನಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಂ.236/2014ಅನ್ನು ಸಲ್ಲಿಸಿದೆ ಮತ್ತು ಅದು ನ್ಯಾಯಾಲಯದಲ್ಲಿ ವಿಚಾರಣೆಗೆ ಬಾಕಿ ಉಳಿದೆ. 1995-96ರ ವರ್ಷದ ಅವಧಿಯಲ್ಲಿ ಈ ವಿಚಾತ ಮೊತ್ತವನ್ನು ಬರಬೇಕಾಗಿರುವುದು ಮತ್ತು ಕಂಪನಿಯ ಲೆಕ್ಕದಲ್ಲಿ ದುರುಪಯೋಗಿಸಿಕೊಂಡಿರುವುದನ್ನು ಪಾವತಿ ಮಾಡಬೇಕಾಗಿರುವುದು ಎಂದು ತೋರಿಸಿದೆ ಮತ್ತು 1996-97ರಲ್ಲಿ ಅಬಕಾರಿ ಇಲಾಖೆಗೆ ರೂ.25.00 ಲಕ್ಷವನ್ನು ಪಾವತಿ ಮಾಡಿದೆ ಮತ್ತು ಬರಬೇಕಾಗಿರುವುದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ವಸೂಲಾಗದ ಸಾಲ ಎಂಬುದಾಗಿ ತಿಳಿಸಿದೆ. 2008-096ರ ವರ್ಷದ ಅವಧಿಯಲ್ಲಿ ದುರುಪಯೋಗ ಮಾಡಿಕೊಂಡಿರುವ ಮೊತ್ತ ರೂ.27.12 ಲಕ್ಷವನ್ನು ಬರಬೇಕಾಗಿರುವುದು ಮತ್ತು ಕಂಪನಿಯ ಲೆಕ್ಕದಲ್ಲಿ ದುರುಪಯೋಗ ಮಾಡಿಕೊಂಡಿರುವುದನ್ನು ಪಾವತಿ ಮಾಡಬೇಕಾಗಿರುವುದು ಎಂಬುದಾಗಿ ತಿಳಿಸಿದೆ. ಬರಬೇಕಾಗಿರುವುದು ಮತ್ತು ಪಾವತಿ ಮಾಡಬೇಕಾಗಿರುವುದು ಸಂಭಾವ್ಯತೆಯಾಗಿರುವುದರಿಂದ ಅದನ್ನು ಹೊಂದಾಣಿಕೆ ಮಾಡಲಾಗಿದೆ ಮತ್ತು ಸಂಭಾವ್ಯ ಆಸ್ತಿ ರೂ.28.11ಲಕ್ಷವನ್ನು ವಸೂಲಿ ಆಧಾರದ ಮೇಲೆ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಪರಿಗಣಿಸಲಾಗಿದೆ.

ಬಿ. ಸ್ವೀಕರಿಸಬಹುದಾಗಿರುವ ಜಿಎಸ್‌ಟಿ ರೂ.122.61ಲಕ್ಷವನ್ನು (31ನೇ ಮಾರ್ಚ್ 2023; ರೂ.408.04ಲಕ್ಷ) 'ಸರ್ಕಾರದ ಪ್ರಾಧಿಕಾರಿವರಲ್ಲಿರುವ ಶಿಲ್ಕು' ಎಂಬುದಾಗಿ ತೋರಿಸಿದೆ. ಇದಕ್ಕೆ ಸಮಂಜಸತೆ ಮಾಡುವಿಕೆಯು ಉಳಿದುಕೊಂಡಿದೆ.

ಸಿ. ಸರ್ಕಾರದ ಪ್ರಾಧಿಕಾರಿಗಳಲ್ಲಿನ ಶಿಲ್ಕು ನೋಂದಣಿ ರದ್ದಾದ ವ್ಯಾಪಾರಿ/ವೆಂಡರ್‌ಗೆ ಪಾವತಿ ಮಾಡಿರುವ ವ್ಯಾಟ್‌ನ ಸಂಬಂಧದಲ್ಲಿ, ರೂ.10.30ಲಕ್ಷಗಳ ವ್ಯಾಟ್ ಮರುಪಾವತಿ ಸೇರಿರುವುದು. ಇದನ್ನು ಮರಳಿ ಪಡೆಯಲು 05.03.20215ರಂದು ವ್ಯಾಟ್ ಇಲಾಖೆಗೆ ಅರ್ಜಿ ಸಲ್ಲಿಸಿದೆ. ಸ್ಥಿತಿ ವಿವರಣಾ ಪಟ್ಟಿಯ ದಿನಾಂಕದಲ್ಲಿದ್ದಂತೆ, ಇದಕ್ಕೆ ವ್ಯಾಟ್ ಪ್ರಾಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಮುಂದಿನ ಹಣಕಾಸಿನ ವರ್ಷ 2024-25ರಲ್ಲಿ ಸದರಿ ವಿಚಾರದ ಬಗ್ಗೆ ಅನುಸರಣೆ ಮಾಡಲು ಕಂಪನಿ ಉದ್ದೇಶಿಸಿದೆ.

## 8ಎ. ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ)

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| ಮುಂಗಡ ತೆರಿಗೆ ಮತ್ತು ಮೂಲದಲ್ಲೇ ತೆರಿಗೆ ಕಡಿತ | 4,406.03 | 4,139.85 |
| **ಒಟ್ಟು** | **4,406.03** | **4,139.85** |

## 8ಬಿ. ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ)

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| ಚಾಲ್ತಿ ತೆರಿಗೆ ಹೊಣೆಗಾರಿಕೆ (ಮುಂಗಡ ತೆರಿಗೆಯ ನಿವ್ವಳ) | 7.76 | – |
| **ಒಟ್ಟು** | **7.76** | **-** |

## 9. ತಪಶೀಲುಗಳು (ಕಡಿಮೆ ಬೆಲೆಯಲ್ಲಿ ಅಥವಾ ನಿವ್ವಳ ನಗದಾಗಬಹುದಾದ ಮೌಲ್ಯದಲ್ಲಿ)

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| **ಕಚ್ಚಾ ಸಾಮಗ್ರಿಗಳು** | | |
| ಕಾಗದ ಮತ್ತು ಸ್ಟ್ರಾ ಬೋರ್ಡ್ | 54.39 | 83.64 |
| ಪರಿವರ್ತನೆಕಾರರಲ್ಲಿನ ಕಚ್ಚಾ ಸಾಮಗ್ರಿ | 9.31 | 95.85 |
| **ಸಿದ್ಧಪಡಿಸಿದ ಸರಕುಗಳು** | 1,180.07 | 671.35 |
| ವ್ಯಾಪಾರದಲ್ಲಿನ ದಾಸ್ತಾನು | 16,699.16 | 17,045.24 |
| **ಕಳೆದು: ಅವಧಿ ಮುಗಿದ/ಹಾನಿಯಾದ ದಾಸ್ತಾನಿಗೆ ವ್ಯವಸ್ಥೆ** | (84.17) | (57.34) |
| **ಕಳೆದು: ಮಾರಾಟವಾಗದ ದಾಸ್ತಾನಿಗೆ ವ್ಯವಸ್ಥೆ** | (1,933.06) | (1,994.50) |
| **ಒಟ್ಟು ತಪಶೀಲು** | **15,925.70** | **15,844.24** |
| ಬಾಡಿಗೆದಾರರಲ್ಲಿರುವ ದಾಸ್ತಾನು | 291.83 | 296.76 |
| **ಕಳೆದು: ಬಾಡಿಗೆದಾರರಲ್ಲಿನ ದಾಸ್ತಾನಿಗೆ ವ್ಯವಸ್ಥೆ** | (291.83) | (296.76) |
| **ಒಟ್ಟು** | **15,925.70** | **15,844.24** |

**ಧಾರಕ ಕಂಪನಿ- ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

(i) ತಪಶೀಲಿನ ಸ್ವರೂಪ, ವಯಸ್ಸು ಮತ್ತು ನಿವ್ವಳ ನಗದಾಗಬಹುದಾದ ಮೌಲ್ಯ ಪರಿಗಣಿಸಿ ರೂ.(34.61ಲಕ್ಷ) ದ ತಪಶೀಲು ದಾಖಲಿಸಿರುವುದನ್ನು (ಇಮ್ಮಖಿಗೊಳಿಸಿರುವುದು) ಲೆಕ್ಕ ಮಾಡಿದೆ. (31ನೇ ಮಾರ್ಚ್ 2023: ರೂ.16.77ಲಕ್ಷ)
ನಮೂದುಗಳಲ್ಲಿನ ಬದಲಾವಣೆಗಳನ್ನು ವರ್ಷದ ಅವಧಿಯಲ್ಲಿ ಖರ್ಚು ಎಂಬುದಾಗಿ ಮಾನ್ಯ ಮಾಡಿದೆ ಮತ್ತು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ತಪಶೀಲುಗಳ ಮೌಲ್ಯದಲ್ಲಿ ಬದಲಾವಣೆಗಳಲ್ಲಿ ಸೇರಿಸಿದೆ.

(ii) 31ನೇ ಮಾರ್ಚ್ 2024ರಂದು ಇದ್ದಂತೆ ಭದ್ರತೆಗಾಗಿ ಈಡು ಮಾಡಿರುವ ತಪಶೀಲುಗಳು: ಇಲ್ಲ (31ನೇ ಮಾರ್ಚ್ 2023: ಇಲ್ಲ)

**ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ: ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಲಿಮಿಟೆಡ್**

ಪತ್ರದ ಸಂಖ್ಯೆ :ಐಸಿಡಿ/04/ಲೇಬಲ್/2019 ದಿನಾಂಕ:18ನೇ ನವೆಂಬರ್ 2020ರ ಅನ್ವಯ, ಷೀಟ್ ಫಾರಂ ಲೇಬಲ್‌ಗಳ ಮಾರಾಟ ಮಾಡುವುದನ್ನು ನಿಲ್ಲಿಸುವಂತೆ ಮತ್ತು ರೋಲ್ ಫಾರಂಗೆ ಬದಲಾಯಿಸುವಂತೆ ಅಬಕಾರಿ ಇಲಾಖೆ ಕಂಪನಿಗೆ ನಿರ್ದೇಶನ ನೀಡಿದೆ. ಇದರನುಸಾರ ಕಂಪನಿ ರೋಲ್ ಫಾರಂ ಗೆ ಬದಲಾಗಿದೆ. ಕಟ್ ಆಫ್ ದಿನಾಂಕ: 15ನೇ ನವೆಂಬರ್ 2020ರಂದು ಇದ್ದಂತೆ ಕಂಪನಿಯು 17,51,600 ಲೇಬಲ್‌ಗಳ ಪ್ರಮಾಣದ ಸರಕನ್ನು ತನ್ನ ಕೈಯಲ್ಲಿ ಹೊಂದಿತ್ತು . ಇದನ್ನು ಡಿಸೆಂಬರ್ 23, 2020ರಂದು ವಿವರಣೆ ಮಾಡಲು ಕಂಪನಿ ಮನವಿ ಮಾಡಿತ್ತು . ಇದಕ್ಕೆ ಅನುಮೋದನೆ ದೊರೆತಿಲ್ಲ. ಕಂಪನಿ ಷೀಟ್ ಫಾರಂ ಲೇಬಲ್‌ಗಳ ಬಗ್ಗೆ ರೂ.3.33 ಲಕ್ಷಗಳ ಮೊತ್ತವನ್ನು ಕಂಪನಿ ಸರಬರಾಜುದಾರರಿಂದ ವಸೂಲಿ ಮಾಡಿದೆ.

## 10. ವ್ಯಾಪಾರದಿಂದ ಬರಬೇಕಾದುದು- ಚಾಲ್ತಿ

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| ಭದ್ರತೆಯಿಲ್ಲದ್ದು , ತಿಳಿಸಿರದ ಹೊರತು ಉತ್ತಮವೆಂದು ಪರಿಗಣಿಸಿರುವುದು | | |
| ಭದ್ರತೆಯುಳ್ಳದ್ದು | 6.27 | 2.00 |
| ಭದ್ರತೆಯಿಲ್ಲದ್ದು, ಉತ್ತಮವೆಂದು ಪರಿಗಣಿಸುವುದು | 25,224.51 | 19,310.72 |
| ಕ್ರೆಡಿಟ್ ಕ್ಷೀಣತೆ | 4,703.43 | 4,542.00 |
| | 29,934.21 | 23,854.72 |
| ಕಳೆದು: ಸಂದೇಹಾಸ್ಪದ ಸಾಲಗಳಿಗೆ ಅವಕಾಶ | (4,703.43) | (4,542.00) |
| **ಒಟ್ಟು** | **25,230.78** | **19,312.72** |

**ಧಾರಕ ಕಂಪನಿ- ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

1. ಕಂಪನಿಯ ನಿರ್ದೇಶಕರು ಅಥವಾ ಇತರೆ ಅಧಿಕಾರಿಗಳಿಂದ ಬೇರೆ ಬೇರೆಯಾಗಿ ಅಥವಾ ಯಾವುದೇ ವ್ಯಕ್ತಿಯ ಜೊತೆ ಜಂಟಿಯಾಗಿ ಬರಬೇಕಾಗಿರುವ ವ್ಯಾಪಾರದ ಬಾಕಿಗಳು ಇರುವುದಿಲ್ಲ. ಅಥವಾ ಯಾವುದೇ ನಿರ್ದೇಶಕರು ಆಸಕ್ತಿ ಹೊಂದಿರುವ ಅನುಕ್ರಮವಾಗಿ ಸಂಸ್ಥೆಗಳು ಅಥವಾ ಖಾಸಗಿ ಕಂಪನಿಗಳಿಂದ ಯಾವುದೇ ವ್ಯಾಪಾರದಿಂದ ಬರಬೇಕಾಗಿರುವುದು ಬಾಕಿಯಿರುವುದಿಲ್ಲ.
2. ವ್ಯಾಪಾರದಿಂದ ಬರಬೇಕಾದವುಗಳು ಬಡ್ಡಿ ಹೊಂದಿರುವುದಿಲ್ಲ ಮತ್ತು ಸಾಮಾನ್ಯವಾಗಿ 0 ರಿಂದ 30 ದಿನಗಳ ಅವಧಿಯಾದಾಗಿರುವವು
3. 31ನೇ ಮಾರ್ಚ್ 2024ರಂದು ಇದ್ದಂತೆ ಭದ್ರತೆಯಾಗಿ ನೀಡಿರುವ ವ್ಯಾಪಾರದಿಂದ ಬರಬೇಕಾದವುಗಳು: ಇಲ್ಲ (31ನೇ ಮಾರ್ಚ್ 2023: ಇಲ್ಲ)
4. ಸಂದೇಹಾಸ್ಪದ ಸಾಲಗಳಿಗೆ ಅವಕಾಶದ ಚಲನೆ

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| ಹಿಂದಿನ ಹಣಕಾಸಿನ ಹೇಳಿಕೆಗಳ ಅನ್ವಯ ಶಿಲ್ಕು | 4,542.00 | 4,338.48 |
| ಸೇರಿಸಿ: ವರ್ಷದಲ್ಲಿ ಅವಕಾಶ (ನಿವ್ವಳ) | 161.43 | 203.52 |
| ಕಳೆದು: ವ್ಯವಸ್ಥೆಯ ಹಿಮ್ಮುಖ (ಟಿಪ್ಪಣಿ 20 ನೋಡಿ) | **4,703.43** | **4,542.00** |

**5. ವ್ಯಾಪಾರದಿಂದ ಬರಬೇಕಾದವುಗಳ ವಯಸ್ಸಿನ ಪಟ್ಟಿ**

**31ನೇ ಮಾರ್ಚ್ 2024ರಂದು ಇದ್ದಂತೆ**

| ವಿವರಗಳು | ಪಾವತಿ ಮಾಡಬೇಕಾದ ದಿನಾಂಕದಿಂದ ಕೆಳಕಂಡ ಅವಧಿಗಳಲ್ಲಿ ಬಾಕಿಯಿರುವುದು | | | | | ಒಟ್ಟು |
|---|---|---|---|---|---|---|
| | 6 ತಿಂಗಳಿಗಿಂತ ಕಡಿಮೆ | 6 ತಿಂಗಳಿಂದ 1 ವರ್ಷ | 1-2 ವರ್ಷಗಳು | 2-3 ವರ್ಷಗಳು | 3 ವರ್ಷ ಗಳಿಗಿಂತ ಹೆಚ್ಚು | |
| ವಿವಾದ ರಹಿತ ವ್ಯಾಪಾರದಿಂದ ಬರಬೇಕಾದುದು-ಉತ್ತಮವೆಂದು ಪರಿಗಣಿಸಿರುವುದು | 14,054.53 | 5,055.13 | 5,251.86 | 869.26 | - | 25,230.78 |
| ವಿವಾದ ರಹಿತ ವ್ಯಾಪಾರದಿಂದ ಬರಬೇಕಾದುದು-ಕ್ರೆಡಿಟ್ ಕ್ಷೀಣತೆ | - | - | 62.67 | 196.98 | 4,443.78 | 4,703.43 |
| ಒಟ್ಟು | **14,054.53** | **5,055.13** | **5,314.53** | **1,066.24** | **4,443.78** | **29,934.21** |

**31ನೇ ಮಾರ್ಚ್ 2023ರಂದು ಇದ್ದಂತೆ**

| ವಿವರಗಳು | ಪಾವತಿ ಮಾಡಬೇಕಾದ ದಿನಾಂಕದಿಂದ ಕೆಳಕಂಡ ಅವಧಿಗಳಲ್ಲಿ ಬಾಕಿಯಿರುವುದು | | | | | ಒಟ್ಟು |
|---|---|---|---|---|---|---|
| | 6 ತಿಂಗಳಿಗಿಂತ ಕಡಿಮೆ | 6 ತಿಂಗಳಿಂದ 1 ವರ್ಷ | 1-2 ವರ್ಷಗಳು | 2-3 ವರ್ಷಗಳು | 3 ವರ್ಷ ಗಳಿಗಿಂತ ಹೆಚ್ಚು | |
| ''ವಿವಾದ ರಹಿತ ವ್ಯಾಪಾರದಿಂದ ಬರಬೇಕಾದುದು-ಉತ್ತಮವೆಂದು ಪರಿಗಣಿಸಿರುವುದು'' | 15,376.75 | 2,016.90 | 1,825.37 | 93.70 | - | 19,312.72 |
| ''ವಿವಾದ ರಹಿತ ವ್ಯಾಪಾರದಿಂದ ಬರಬೇಕಾದುದು-ಕ್ರೆಡಿಟ್ ಕ್ಷೀಣತೆ'' | - | - | 112.31 | 186.43 | 4,243.26 | 4,542.00 |
| ಒಟ್ಟು | **15,376.75** | **2,016.90** | **1,937.68** | **280.13** | **4,243.26** | **23,854.72** |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**ಸಂಪೂರ್ಣ ಸ್ವಾಮ್ಯತೆಯ ಸಹಾಯಕ ಕಂಪನಿ - ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್**

1. ವ್ಯಾಪಾರದಿಂದ ಬರಬೇಕಾದವುಗಳಲ್ಲಿ ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ-ಪ್ರವರ್ಧನೆ ಕಂಪನಿ-ಇವರಿಂದ ಬರಬೇಕಾದ ರೂ.9.29ಲಕ್ಷ ಸೇರಿದೆ (31ನೇ ಮಾರ್ಚ್ 2023: ರೂ.4.19ಲಕ್ಷ)

2. ವ್ಯಾಪಾರದಿಂದ ಬರಬೇಕಾದವುಗಳಲ್ಲಿ ಮೆ|| ಸೈಬರ್ ಎಕ್ಸ್‌ಪೋ ದಿಂದ ಬರಬೇಕಾದ ರೂ.24.48ಲಕ್ಷ (31ನೇ ಮಾರ್ಚ್ 2023: ರೂ.24.48 ಲಕ್ಷ) ಮತ್ತು ಬೆಂಗಳೂರು ಐ.ಟಿ. ಕಾಂ ಇವರಿಂದ ಬರಬೇಕಾಗಿರುವ ರೂ.32.22 ಲಕ್ಷ (31ನೇ ಮಾರ್ಚ್ 2023: ರೂ.32.22ಲಕ್ಷ) ಸೇರಿರುವುದು. ಇವರ ವಿರುದ್ಧ ವಸೂಲಿ ಮೊಕದ್ದಮೆ ಹೂಡಲಾಗಿತ್ತು, ಇದು 29ನೇ ನವೆಂಬರ್ 2024ರಂದು ವಜಾ ಆಗಿ ವಿಲೇಯಾಗಿದೆ. ಹೊರಡಿಸಿರುವ ತೀರ್ಪು ಮತ್ತು ಡಿಕ್ರಿ (ಓಎಸ್ ನಂ.134/2007) ವಿರುದ್ಧ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸುವ ಸಂಬಂಧ ಮೂವರು ವಕೀಲರುಗಳ ಅಭಿಪ್ರಾಯವನ್ನು ಕಂಪನಿ ಕೇಳಿದೆ. ಮೇಲ್ಮನವಿ ಸಲ್ಲಿಸಲು ಒಳ್ಳೆಯ ಕಾರಣಗಳಿರುವುದಿಲ್ಲ ಎಂದು ವಕೀಲರು ಅಭಿಪ್ರಾಯ ತಿಳಿಸಿದ್ದಾರೆ. ದಿನಾಂಕ: 26ನೇ ಜೂನ್ 2015ರಂದು ನಡೆದ 240ನೇ ಮಂಡಳಿ ಸಭೆಯಲ್ಲಿ ಈ ವಿಚಾರದ ಬಗ್ಗೆ ಚರ್ಚಿಸಿದ್ದು, ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ (ಎಸಿಎಸ್) ಅಧ್ಯಕ್ಷತೆಯಲ್ಲಿ ರಚನೆ ಮಾಡಿದ ಉನ್ನತಾಧಿಕಾರ ಸಮಿತಿಗೆ ಈ ವಿಚಾರವನ್ನು ವಹಿಸುವಂತೆ ಮಂಡಳಿ ವ್ಯವಸ್ಥಾಪಕ ನಿರ್ದೇಶಕರಿಗೆ ಸಲಹೆ ಮಾಡಿತ್ತು . ಅದರನುಸಾರ, ಈ ವಿಚಾರವನ್ನು ಉನ್ನತರಾಧಿಕಾರ ಸಮಿತಿಗೆ ವಹಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದ ನಿರ್ದೇಶನ ಕೇಳಲಾಗಿತ್ತು ಮತ್ತು ಇಲಾಖೆಯಿಂದ ನಿರ್ದೇಶನ ಬರುವಿಕೆಯನ್ನು ನಿರೀಕ್ಷಿಸಲಾಗಿದೆ.

ದಿನಾಂಕ:22.05.2019ರಂದು, ಕಂಪನಿಯ ವ್ಯವಸ್ಥಾಪಕ ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪಕರು-ಮಾಹಿತಿ ತಂತಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ (ಐಟಿ-ಬಿಟಿ) ಇವರ ಸಮ್ಮುಖದಲ್ಲಿ ಈ ವಿಚಾರದ ಬಗ್ಗೆ ಚರ್ಚೆ ಮಾಡಲು ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಭೆ ಒಂದನ್ನು ನಡೆಸಲಾಗಿತ್ತು . ಸಭೆಯಲ್ಲಿ ಈ ವಿಚಾರದ ಬಗ್ಗೆ ಸಂಕ್ಷಿಪ್ತ ಚರ್ಚೆ ನಡೆಸಿದ ನಂತರ, ಉನ್ನತಾಧಿಕಾರ ಸಮಿತಿ ಅಸ್ತಿತ್ವದಲ್ಲಿಲ್ಲ, ಹಾಗಾಗಿ ಈ ವಿಚಾರವನ್ನು ಸದರಿ ಸಮಿತಿಗೆ ವಹಿಸಲಾಗದು ಎಂಬುದಾಗಿ ಉಪಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರು ಅಧ್ಯಕ್ಷರಿಗೆ ತಿಳಿಸಿದರು. ತಾವು ನಿರ್ದೇಶಕರು, ಐಟಿ-ಬಿಟಿ ಇವರ ಜೊತೆ ದೂರವಾಣಿ ಮೂಲಕ ಮಾತನಾಡಿದ್ದು, ಸದರಿ ವಿಚಾರದ ಬಗ್ಗೆ ಸಾರ್ವಜನಿಕ ವಲಯದ ಉದ್ದಿಮೆಗಳ ಮೇಲಿನ ಸಮಿತಿಯು ಈಗಾಗಲೇ ಚರ್ಚೆ ಮಾಡಿರುವುದರಿಂದ, ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಒದಗಿಸದ್ದೇ ಆದರೆ ಬಾಕಿಯಿರುವ ಮೊತ್ತವನ್ನು ಪಾವತಿ ಮಾಡುವುದಾಗಿ ನಿರ್ದೇಶಕರು, ಐಟಿ-ಬಿಟಿ ಇವರು ತಿಳಿಸಿರುವುದಾಗಿ ಕೆಎಸ್ಎಂಸಿಎ ವ್ಯವಸ್ಥಾಪಕ ನಿರ್ದೇಶಕರು ಆಧ್ಯಕ್ಷರಿಗೆ ತಿಳಿಸಿರುವರು. ಅದರಂತೆ, ಮುಂದಿನ ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ವ್ಯವಸ್ಥಾಪಕ ನಿರ್ದೇಶಕರಿಗೆ ಸೂಚಿಸಿದರು. ದಿನಾಂಕ:13.08.2019ರಂದು ಮುಂದಿನ ಕ್ರಮ ಕೈಗೊಳ್ಳುವಂತೆ ಕೋರಿ ನಿರ್ದೇಶಕರು, ಐಟಿ-ಬಿಟಿ ಇವರಿಗೆ ಪತ್ರ ಬರೆಯಲಾಗಿದೆ. ಇದಕ್ಕೆ ಅವರಿಂದ ಉತ್ತರಕ್ಕಾಗಿ ನಿರೀಕ್ಷಿಸಲಾಗುತ್ತಿದೆ.

ಐಟಿ-ಬಿಟಿ ಇಲಾಖೆಯಡಿಯಲ್ಲಿ ಬರುವ ಕರ್ನಾಟಕ ಇನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ, (ಕೆಐಟಿಎಸ್)ನ ವ್ಯವಸ್ಥಾಪಕರಿಂದ ಬಂದಿರುವ ಪತ್ರ ಲಗತ್ತಿಸಿ ಪ್ರಧಾನ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರಿಂದ ಕಂಪನಿಗೆ ದಿನಾಂಕ:17.10.2023ರ ಪತ್ರ ಬಂದಿದೆ. ಬೆಂಗಳೂರು ಐಟಿ ಕಾಂ 2002 ಮತ್ತು 2003ಕ್ಕೆ ಸಂಬಂಧಿಸಿದ ರೂ.56.70 ಲಕ್ಷಗಳ ಬಿಲ್‌ಗಳು ಕೆಐಟಿಎಸ್‌ನ ಕಚೇರಿಯಲ್ಲಿ ಲಭ್ಯವಿರುವುದಿಲ್ಲ ಎಂಬುದಾಗಿ ಸದರ ಪತ್ರದ ಮೂಲಕ ತಿಳಿಸಿರುವರು. ಆದರೂ, ಕಂಪನಿಯು ಬೆಂಗಳೂರು ಐ.ಟಿ.ಕಾಂ 2002 ಮತ್ತು 2003ಕ್ಕೆ ಸಂಬಂಧಿಸಿದ ರೂ.56.70 ಲಕ್ಷಗಳ ಬಿಲ್ ಪ್ರತಿಗಳನ್ನು ಈಗಾಗಲೇ ಕಂಪನಿ ದಿನಾಂಕ:13.08.2019ರ ಪತ್ರದ ಅನ್ವಯ ಕಳುಹಿಸಿದೆ. ಹಾಗಾಗಿ, ಕಂಪನಿಯು ದಿನಾಂಕ:13.12.2023ರ ಪತ್ರವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಕಳುಹಿಸಿದೆ. ಸದರಿ ಬಿಲ್‌ಗಳನ್ನು ಈಗಾಗಲೇ ಸಲ್ಲಿಸಲಾಗಿದೆ ಎಂಬುದಾಗಿ ಕಂಪನಿ ತಿಳಿಸಿದೆ. ಆದ್ದರಿಂದಾಗಿ ಬಿಲ್‌ಗಳನ್ನು ಪರಿಶೀಲಿಸಿ ಪಾವತಿ ಮಾಡುವಂತೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಇನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ (ಕೆಪಿಟಿಎಸ್) ಇವರಿಗೆ ನಿರ್ದೇಶನ ನೀಡುವಂತೆ ಈ ಮೂಲಕ ಕೋರಿತ್ತು . ಈ ಬಗ್ಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯಿಂದಾಗಲಿ ಅಥವಾ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಇನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ (ಕೆಪಿಟಿಎಸ್) ಇವರಿಂದಾಗಲಿ ಯಾವುದೇ ಉತ್ತರವಾಗಲಿ ಕಂಪನಿಗೆ ಬಂದಿರುವುದಿಲ್ಲ. ಹಾಗಾಗಿ ಈ ವಿಚಾರದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಇನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ ಇವರಿಗೆ ನಿರ್ದೇಶಕ ನೀಡಲು ಕೋರಿ ದಿನಾಂಕ: 26.04.2024ರ ಮತ್ತೊಂದು ಪತ್ರವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ ಕಳುಹಿಸಿದೆ.

3. ವ್ಯಾಪಾರದಿಂದ ಬರಬೇಕಾದವುಗಳಲ್ಲಿ ರೂ.810.04ಲಕ್ಷ (ಮಾರ್ಚ್ 31, 2023: ರೂ.631.71ಲಕ್ಷ) ಸೇರಿದೆ. ಇದನ್ನು ಕಂಪನಿಯ ಬ್ಯಾಂಕ್ ಖಾತೆಗೆ ನೇರವಾಗಿ ಪಾವತಿ ಮಾಡಲಾಗುವುದು. ಇದಕ್ಕೆ ಸ್ಥಿತಿ ವಿವರಣಾ ಪಟ್ಟಿದ ದಿನಾಂಕದಂದು ಯಾವುದೇ ಮಾಹಿತಿ ಲಭ್ಯವಿರುವುದಿಲ್ಲ. ಆದ್ದರಿಂದ ವ್ಯಾಪಾರದಿಂದ ಬರಬೇಕಾದವುಗಳ ಕಾಲಮಾನವನ್ನು ಸರಿಯಾಗಿ ವಿಶ್ಲೇಷಿಸುವ ಸ್ಥಿತಿಯಲ್ಲಿ ಕಂಪನಿ ಇರುವುದಿಲ್ಲ.

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**

**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

**11. ನಗದು ಮತ್ತು ನಗದು ಸಮಾನತೆಗಳು**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|
| ಬ್ಯಾಂಕುಗಳಲ್ಲಿನ ಶಿಲ್ಕು | | |
| ಚಾಲ್ತಿ ಖಾತೆಯಲ್ಲಿರುವುದು | 13,526.29 | 8,617.13 |
| ಮೂರು ತಿಂಗಳುಗಳಿಗಿಂತ ಕಡಿಮೆ ಅವಧಿಯ ಮೂಲ ಪಕ್ವತೆ ಅವಧಿ ಬಂದಿರುವ ಠೇವಣಿಗಳು | | 537.00 |
| ರವಾನೆಯಲ್ಲಿರುವ ಸಂದಾಯಗಳು | 4.24 | 7.80 |
| ಕೈಯಲ್ಲಿರುವ ನಗದು ಮತ್ತು ಸ್ಟ್ಯಾಂಪ್ (★) | 2,078.42 | 1,012.85 |
| **ಒಟ್ಟು** | **15,608.95** | **10,174.78** |

(★) ಕ್ರೆಡಿಟ್ ಕಾರ್ಡ್ ಸಂಗ್ರಹಣೆಗಳೂ ಸೇರುವವು.

1. ನಗದು ಮತ್ತು ನಗದು ಸಮಾನತೆಗಳಿಗೆ ಸಂಬಂಧಿಸಿದಂತೆ ಯಾವುದೇ ವಾಪಸಾತಿಗೆ ನಿರ್ಬಂಧಗಳಿರುವುದಿಲ್ಲ. 31ನೇ ಮಾರ್ಚ್ 2024 ರಂದು ಇದ್ದಂತೆ: ಇಲ್ಲ (31ನೇ ಮಾರ್ಚ್ 2023: ಇಲ್ಲ)

**12. ನಗದು ಮತ್ತು ನಗದು ಸಮಾನತೆಗಳ ಹೊರತಾದ ಬ್ಯಾಂಕ್ ಶಿಲ್ಕುಗಳು**

| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
|---|---|---|---|---|
| | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| ಬ್ಯಾಂಕುಗಳಲ್ಲಿನ ನಿಶ್ಚಿತ ಠೇವಣಿಗಳು (3 ರಿಂದ 12 ತಿಂಗಳ ಮೂಲಕ ಪಕ್ವತೆ ಅವಧಿಯವು) # | - | 42,583.45 | - | 30,163.15 |
| ಬ್ಯಾಂಕುಗಳಲ್ಲಿನ ನಿಶ್ಚಿತ ಠೇವಣಿಗಳು (12 ತಿಂಗಳುಗಳಿಗಿಂತ ಹೆಚ್ಚಿನ ಮೂಲ ಪಕ್ವತೆ ಅವಧಿಯವು) | 4,432.13 | - | 4,247.52 | - |
| - ನೀಡಿದ ಬ್ಯಾಂಕ್ ಗ್ಯಾರಂಟಿಯ ಮಾರ್ಜಿನ್ ಮನಿ ಖಾತೆಗಳಲ್ಲಿ | - | 1,893.83 | - | 1,417.74 |
| **ಒಟ್ಟು ಬ್ಯಾಂಕ್‌ನಲ್ಲಿರುವ ಶಿಲ್ಕುಗಳು** | **4,432.13** | **44,477.28** | **4,247.52** | **31,580.89** |

**ಧಾರಕ ಕಂಪನಿ-ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

# ಚಿಟ್ ಕಾರ್ಯಾಚರಣೆಗಳಿಗೆ ಶಾಸನಬದ್ಧ ಠೇವಣಿಗಳು 31ನೇ ಮಾರ್ಚ್ 2024ರಂದು ಇದ್ದಂತೆ ರೂ.5,958.03 ಲಕ್ಷಗಳು (31ನೇ ಮಾರ್ಚ್ 2023: ರೂ.4,629.68 ಲಕ್ಷಗಳು )

★ 31ನೇ ಮಾರ್ಚ್ 2024ರಂದು ಇದ್ದಂತೆ ವಿಶೇಷಾಧಿಕಾರದ ಮೇಲೆ ನೀಡಿರುವ ಬ್ಯಾಂಕ್ ಠೇವಣಿಗಳು ರೂ.4,050.00 ಲಕ್ಷಗಳು (31ನೇ ಮಾರ್ಚ್ 2023: ರೂ.50.00 ಲಕ್ಷಗಳು)

**ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ-ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್**

★ ರೂ.175.68ಲಕ್ಷಗಳ (31ನೇ ಮಾರ್ಚ್, 2023:ರೂ.76.80ಲಕ್ಷ) ಗ್ಯಾರಂಟಿಗಳ ಮೇಲಿನ ಮಾರ್ಜಿನ್ ಮನಿ ಠೇವಣಿಗಳೂ ಸೇರಿರುವುದು.

★ ಲಾಕರ್ ಹೊಂದಿರುವ ಬಗ್ಗೆಗಿನ ಮಾರ್ಜಿನ್ ಮನಿ ಠೇವಣಿಗಳು ರೂ.0.04

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| 15ಎ | ಪಡೆದಿರುವ ಸಾಲಗಳು | | | | |
|---|---|---|---|---|---|
| | ವಿವರಗಳು | 31ನೇ ಮಾರ್ಚ್ 2024 ರಂದು ಇದ್ದಂತೆ | | 31ನೇ ಮಾರ್ಚ್ 2023 ರಂದು ಇದ್ದಂತೆ | |
| | | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| | **ಭದ್ರತೆಯಿರುವುದು** | | | | |
| | (i) ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲ | 3.02 | – | 3.02 | – |
| | (ii) ಮೇಲಿನ ಭದ್ರತೆಯುಳ್ಳ ಸಾಲಗಳ ಮೇಲೆ ಸಂಚಯನವಾಗಿರುವ ಮತ್ತು ಬಾಕಿಯಿರುವ ಬಡ್ಡಿ | 9.62 | – | 9.62 | – |
| | **ಭದ್ರತೆ ರಹಿತ** | | | | |
| | (i) ಸಂಬಂಧಿತ ಪಾರ್ಟಿಯಿಂದ ಪಡೆದ ಸಾಲ ★(ಟಿಪ್ಪಣಿ 38 ನೋಡಿ) | 28.56 | – | 28.56 | – |
| | (ii) ಕರ್ನಾಟಕ ಸರ್ಕಾರದಿಂದ ಪಡೆದ ಸಾಲ★ | 9.00 | – | 9.00 | – |
| | (iii) ಮೇಲಿನ ಭದ್ರತೆರಹಿತ ಸಾಲಗಳ ಮೇಲೆ ಸಂಚಯನವಾಗಿರುವ ಮತ್ತು ಬಾಕಿಯಿರುವ ಬಡ್ಡಿ | 99.08 | – | 124.35 | – |
| | **ಒಟ್ಟು ಪಡೆದಿರುವ ಸಾಲಗಳು** | **149.28** | **–** | **174.55** | **–** |
| | ★ ಕೆಎಸ್‌ಐಐಡಿಸಿ ಮತ್ತು ಕರ್ನಾಟಕ ಸರ್ಕಾರದಿಂದ ಪಡೆದಿರುವ ಸಾಲಗಳ ಮೇಲೆ ಸಂಚಯನವಾಗಿರುವ ಬಡ್ಡಿಯನ್ನು ಏಪ್ರಿಲ್ 1999 ರಿಂದ ಪಾವತಿಸಿರುವುದಿಲ್ಲ. ಗ್ರೂಪ್ ಬಡ್ಡಿ ಮನ್ನಾ ಮಾಡಲು ಕೋರಿದೆ. | | | | |

| 15ಬಿ | ಗುತ್ತಿಗೆ ಹೊಣೆಗಾರಿಕೆ | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2024ರಂದು ಇದ್ದಂತೆ |
| | ಹಿಂದಿನ ಹಣಕಾಸಿನ ಹೇಳಿಕೆಗಳ ಅನ್ವಯ ಶಿಲ್ಕು | 725.52 | 1,081.88 |
| | ವರ್ಷದ ಅವಧಿಯಲ್ಲಿ ಸೇರ್ಪಡೆಗಳು | 1,133.23 | 288.53 |
| | ವರ್ಷದ ಅವಧಿಯಲ್ಲಿ ತೆಗೆದುಹಾಕಿರುವುದು | | (117.65) |
| | ವರ್ಷದ ಅವಧಿಯಲ್ಲಿ ಸಂಚಯನವಾದ ಗುತ್ತಿಗೆ ಹೊಣೆಗಾರಿಕೆಗಳ ಮೇಲಿನ ಬಡ್ಡಿ | 131.78 | 103.84 |
| | ಗುತ್ತಿಗೆ ಹೊಣೆಗಾರಿಕೆಗಳ ಪಾವತಿ | (827.33) | (631.08) |
| | **ವರ್ಷದ ಕೊನೆಯಲ್ಲಿನ ಶಿಲ್ಕು** | **1,163.20** | **725.52** |

| | | |
|---|---|---|
| ಚಾಲ್ತಿ | 725.06 | 382.77 |
| ಚಾಲ್ತಿಯೇತರ | 438.14 | 342.75 |

| ರಿಯಾಯಿತಿ ಮಾಡಿರದ ಆಧಾರದ ಮೇಲೆ ಗುತ್ತಿಗೆ ಹೊಣೆಗಾರಿಕೆಗಳ ಒಪ್ಪಂದವಾಗಿರುವ ಅವಧಿ ಮುಗಿಯುವಿಕೆಗಳು | | |
|---|---|---|
| ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| ಒಂದು ವರ್ಷಕ್ಕಿಂತ ಕಡಿಮೆ | 682.91 | 406.72 |
| ಒಂದರಿಂದ ಐದು ವರ್ಷಗಳು | 734.13 | 479.17 |
| ಐದು ವರ್ಷಗಳಿಗಿಂತ ಹೆಚ್ಚು | – | – |
| **ಒಟ್ಟು** | **1,417.04** | **885.89** |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| 15ಸಿ | ಇತರೆ ಹಣಕಾಸಿನ ಹೊಣೆಗಾರಿಕೆಗಳು | | | | |
|---|---|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
| | | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| | ಗ್ರಾಹಕರು ಮತ್ತು ಇತರರಿಂದ ಬಂದ ಠೇವಣಿಗಳು | - | 1,712.83 | 32.50 | 1,613.29 |
| | ಸಂಚಯನವಾಗಿರುವ ಬಡ್ಡಿ | - | - | - | 53.88 |
| | ಬಹುಮಾನರಹಿತ ಚಿಟ್ ಚಂದಾದಾರಿಕೆ | 17,324.71 | 11,337.64 | 14,803.97 | 9,365.51 |
| | ಬಂಡವಾಳ ವೆಂಡರ್‌ಗಳಿಗೆ ಪಾವತಿಸಬೇಕಾಗಿರುವುದು | - | 3.22 | - | 118.03 |
| | ನೌಕರರಿಗೆ ಪಾವತಿಸಬೇಕಾದುದು | 185.83 | 517.84 | 179.35 | 465.31 |
| | ಉಪಯೋಗಿಸದ ಅನುದಾನಗಳು | - | 247.05 | - | 247.05 |
| | ಚಿಟ್ ಪಾವತಿಸಬೇಕಾದುದು | - | - | - | - |
| | -ಸಂಬಂಧಿತ ಪಾರ್ಟಿಯಿಂದ (ಟಿಪ್ಪಣಿ 38 ನೋಡಿ) | - | 7.50 | - | - |
| | -ಇತರರಿಂದ | - | 3,572.08 | - | 2,935.03 |
| | ಮಧ್ಯ ವಿಭಾಗದ ಸಂಬಂಧಿತ ಪಾವತಿಸಬೇಕಾದುದು★ | - | 3,531.53 | - | - |
| | ಇತರೆ ಪಾವತಿಸಬೇಕಾದವು★★ | 29.20 | 500.46 | - | 239.75 |
| | **ಒಟ್ಟು** | **17,539.74** | **21,430.15** | **15,015.82** | **15,037.85** |

**ಧಾರಕ ಕಂಪನಿ - ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

★ಇದರ ವಿರುದ್ಧ ರೂ.3,525.00 ಲಕ್ಷಗಳ ಭದ್ರತಾ ಖಾತರಿ ನೀಡಿದೆ. ಟಿಪ್ಪಣಿ ನಂ.39(iii) ನೋಡಿ

★★ ಇತರೆ ಪಾವತಿ ಮಾಡುವಿಕೆಗಳಲ್ಲಿ (ಎ) ಆಮದಾದ ಸಿಮೆಂಟ್ ಸರಬರಾಜಿನ ಕಾಂಟ್ರಾಕ್ಟ್ ಸಂಬಂಧ ಸರ್ಕಾರದ ವಿವಿಧ ಇಲಾಖೆಗಳಿಂದ ಪಡೆದಿರುವ ಮುಂಗಡಗಳು ರೂ.210.46ಲಕ್ಷ (ಹಿಂದಿನ ವರ್ಷ: ರೂ.210.46ಲಕ್ಷ) ಮತ್ತು (ಬಿ) ವಿಶೇಷ ಘಟಕ ಯೋಜನೆ ಅನ್ವಯ 1985-86ರ ವರ್ಷದ ಅವಧಿಯಲ್ಲಿ ಕರ್ನಾಟಕ ಸರ್ಕಾರದಿಂದ ಪಡೆದಿರುವ ರೂ.10 ಲಕ್ಷ (ಹಿಂದಿನ ವರ್ಷ: ರೂ.10 ಲಕ್ಷ) ಸೇರಿದೆ. ಸರ್ಕಾರದಿಂದ ಯಾವುದೇ ಮರು ಪಾವತಿ ಅವಧಿಯನ್ನು ನಿಗದಿಪಡಿಸಿರುವುದಿಲ್ಲ. ಇವುಗಳ ಬಗ್ಗೆ ಯಾವುದೇ ಬಡ್ಡಿ ವ್ಯವಸ್ಥೆ ಮಾಡಿರುವುದಿಲ್ಲ.

| 16 | ವ್ಯವಸ್ಥೆಗಳು | | | | |
|---|---|---|---|---|---|
| | ವಿವರಗಳು | 31ನೇ ಮಾರ್ಚ್ 2024 ರಂದು ಇದ್ದಂತೆ | | 31ನೇ ಮಾರ್ಚ್ 2023 ರಂದು ಇದ್ದಂತೆ | |
| | | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| | ನೌಕರರ ಸೌಲಭ್ಯಗಳಿಗೆ ವ್ಯವಸ್ಥೆ (ಟಿಪ್ಪಣಿ 34 ನೋಡಿ) | | | | |
| | ಪರಿಹಾರಿತ ಗೈರು ಹಾಜರಾತಿಗಳು | 412.58 | 169.40 | 473.87 | 137.40 |
| | ನೌಕರರ ಮರಣ ಪರಿಹಾರ ನಿಧಿ | 15.38 | 78.80 | 15.20 | 77.93 |
| | ವಿಮಾ ಕ್ಲೇಮ್‌ಗೆ ವ್ಯವಸ್ಥೆ (ಟಿಪ್ಪಣಿ 39 (i) ನೋಡಿ | 402.42 | - | 389.59 | - |
| | **ಒಟ್ಟು** | **830.38** | **248.20** | **878.66** | **215.33** |

| ಎ | ವಿಮಾ ಕ್ಲೇಮ್‌ಗೆ ವ್ಯವಸ್ಥೆಯ ಚಲನೆ | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | ಹಿಂದಿನ ಹಣಕಾಸಿನ ಹೇಳಿಕೆಗಳ ಅನ್ವಯ ಶಿಲ್ಕು | 389.59 | 363.93 |
| | ವರ್ಷದಲ್ಲಿ ಸೇರ್ಪಡೆ | 12.83 | 25.66 |
| | ವರ್ಷದ ಕೊನೆಯಲ್ಲಿರುವ ಶಿಲ್ಕು | **402.42** | **389.59** |

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಕ್ರೋಢೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| 17 | ಇತರೆ ಹೊಣೆಗಾರಿಕೆಗಳು | | | | |
|---|---|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | | 31ನೇ ಮಾರ್ಚ್ 2023ರಂದು ಇದ್ದಂತೆ | |
| | | ಚಾಲ್ತಿಯೇತರ | ಚಾಲ್ತಿ | ಚಾಲ್ತಿಯೇತರ | ಚಾಲ್ತಿ |
| | ಶಾಸನಬದ್ಧ ಬಾಕಿಗಳು (ಮೂಲದಲ್ಲೇ ಮುರಿದುಕೊಂಡಿರುವ ಭವಿಷ್ಯ ನಿಧಿ ಮತ್ತು ತೆರಿಗೆ (ಇತ್ಯಾದಿ)★ | 36.72 | 587.92 | 36.72 | 624.55 |
| | ಗ್ರಾಹಕರುಗಳಿಂದ ಬಂದ ಮುಂಗಡ | - | 2,595.78 | - | 3,140.13 |
| | ಮುಂಗಡದಲ್ಲಿ ಪಡೆದ ಮೊತ್ತ | - | 1,067.07 | - | 1,067.07 |
| | ಇತರೆ ಹೊಣೆಗಾರಿಕೆಗಳು★★ | - | 517.23 | - | 282.03 |
| | **ಒಟ್ಟು** | **36.72** | **4,768.00** | **36.72** | **5,113.78** |

**ಸಂಪೂರ್ಣ ಸ್ವಾಮ್ಯದ ಸಹಾಯಕ ಕಂಪನಿ- ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್**

★ಶಾಸನಬದ್ಧ ಬಾಕಿಗಳಲ್ಲಿ 01ನೇ ಏಪ್ರಿಲ್ 2011ಕ್ಕೆ ಮುಂಚೆ ಮಾಡಿದ ಬಿಲ್‌ಗಳಿಗೆ ಸಂಬಂಧಿಸಿದ ಆದರೆ ತೆರಿಗೆ ನಿಯಮಗಳ ಅಂಶಗಳ ಅನ್ವಯವಾಗುವಿಕೆ ಬಾಕಿಯ ದಿನಾಂಕದವರೆಗೆ ಸೇವಾ ತೆರಿಗೆ ಹೊಣೆಗಾರಿಕೆ ಪಾವತಿಗೆ ನಗದು ಆಧಾರವನ್ನು ಕಂಪನಿ ಅನುಸರಿಸಿರುವುದರಿಂದ ಪಡೆದಿಲ್ಲದ ಈ ಬಿಲ್‌ಗಳಿಗೆ ಸೇರಿದ ರೂ.36.72ಲಕ್ಷ ಸೇವಾ ತೆರಿಗೆ ಬಾಕಿಗಳು ಸೇರಿರುವವು. ಸೇವಾ ತೆರಿಗೆ ಪಾವತಿಸದಿರುವಿಕೆಗೆ ಉಂಟಾದ ಬಡ್ಡಿ ಮೊತ್ತವನ್ನು ಆಡಳಿತ ಮಂಡಳಿಯು ಮಾಡಿರುವ ಅಂದಾಜು : ಇಲ್ಲ ಮತ್ತು ಆ ಪ್ರಮಾಣಕ್ಕೆ ಬಡ್ಡಿಗೆ ಮತ್ತೆ ವ್ಯವಸ್ಥೆ ಮಾಡಿರುವುದಿಲ್ಲ.

★★ರೂ.345.74ಲಕ್ಷಗಳ ಮೊತ್ತದ ಈಕ್ವಿಟಿ ಷೇರುಗಳನ್ನು ಕರ್ನಾಟಕ ಸರ್ಕಾರಕ್ಕೆ ನೀಡಲು ಸರ್ಕಾದ ಆದೇಶ ಸಂ.ಸಿ18 ಸಿಎಂಐ 2003(ಪಿಯುಸಿ), ಬೆಂಗಳೂರು ದಿನಾಂಕ: 31ನೇ ಮಾರ್ಚ್ 2003 ಮತ್ತು 29ನೇ ಏಪ್ರಿಲ್, 2004 ನಿರ್ದೇಶನ ನೀಡಿದೆ. ಕಂಪನಿ ಈ ಸಂಬಂಧ ಷೇರುಗಳಿಗೆ ಬದಲಾಗಿ ಸರ್ಕಾರಕ್ಕೆ 10% ನಿವ್ವಳ ಲಾಭ ಪಾವತಿ ಬಗ್ಗೆ ಮತ್ತು 2002-03 ಮತ್ತು 2003-04 ರಿಂದ ವಹಿವಾಟಿನ 8% ನಂತೆ ವ್ಯವಹಾರ ಅಭಿವೃದ್ಧಿ ವೆಚ್ಚ (ಬಿಡಿಸಿ) ಪಾವತಿಯ ಪ್ರಸ್ತಾವನೆಯನ್ನು ರದ್ದುಪಡಿಸುವಂತೆ ಕರ್ನಾಟಕ ಸರ್ಕಾರಕ್ಕೆ ಮನವಿ ಸಲ್ಲಿಸಿದೆ. ಈ ವಿಷಯ ಕರ್ನಾಟಕ ಸರ್ಕಾರದಲ್ಲಿ ಇತ್ಯರ್ಥವಾಗದೆ ಉಳಿದಿದೆ ಮತ್ತು ಈ ವಿಚಾರದ ಬಗ್ಗೆ ಆದೇಶಗಳನ್ನು ನಿರೀಕ್ಷಿಸಲಾಗುತ್ತಿದೆ. ಈ ಮೊದಲಿನ ಆದೇಶಗಳನ್ನು ಮರು ಪರಿಶೀಲನೆ ಮಾಡುವಂತೆ ಮತ್ತು ಬಿಡಿಸಿ ಮೇಲಿನ ಆದೇಶಗಳನ್ನು ಹಿಂಪಡೆಯುವಂತೆ ಕೋರಿ ಕಂಪನಿಯು ಕರ್ನಾಟಕ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಕರ್ನಾಟಕ ಸರ್ಕಾರದಿಂದ ಈ ಬಗ್ಗೆ ಪ್ರತಿಕ್ರಿಯೆಗಾಗಿ ಕಂಪನಿ ಎದುರು ನೋಡುತ್ತಿದೆ.

**ಸಹಾಯಕ ಕಂಪನಿ-ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ ಬಗ್ಗೆ**

★★ಕಂಪನಿಗೆ ಸೇರಿದ ಜಮೀನನ್ನು ಕೆಎಸ್‌ಆರ್‌ಟಿಸಿಗೆ ಮಾರಾಟ ಮಾಡಲು ರಾಜ್ಯ ಸರ್ಕಾರ ತಾತ್ವಿಕ ಅನುಮತಿ ನೀಡಿದೆ. ಮೊದಲ ಕ್ರಮವಾಗಿ, ಕಂಪನಿಯು 2 ಎಕರೆ 20 ಗುಂಟೆಗಳ ಜಮೀನನ್ನು ರೂ.277.78 ಲಕ್ಷಗಳ ಮೊತ್ತಕ್ಕೆ ಮಾರಾಟ ಮಾಡಲು ಒಪ್ಪಂದ ಮಾಡಿಕೊಂಡಿದೆ ಮತ್ತು 5 ಎಕರೆ 20 ಗುಂಟೆ ಜಮೀನನ್ನು ರೂ.722.22ಲಕ್ಷ ಮೊತ್ತಕ್ಕೆ ಮಾರಾಟ ಮಾಡಲು ಮತ್ತೊಂದು ಒಪ್ಪಂದ ಮಾಡಿಕೊಂಡಿದೆ. ಕೆಎಸ್‌ಆರ್‌ಟಿಸಿ ಪಾವತಿಸಿರುವ ಮೊತ್ತ ಖರ್ಚುಗಳ ನಿವ್ವಳ, ಮುಂಗಡ ಮೊತ್ತವಾಗಿ ಪಡೆದಿರುವ ರೂ.721.33 ಲಕ್ಷವಾಗಿದೆ. ಇದನ್ನು ಮುಂಗಡವಾಗಿ ಪಡೆದಿರುವ ಮೊತ್ತದ ಅಡಿ ಪರಿಗಣಿಸಿದೆ. 2979 ಚದರ ಮೀಟರುಗಳ ಜಮೀನಿಗೆ ಪರಿಹಾರ ನೀಡುವುದಾಗಿ ದಿನಾಂಕ:27.08.2011ರ ಪತ್ರದ ಅನ್ವಯ ಆಶ್ವಾಸನೆ ನೀಡಿರುವಂತೆ, ಉಳಿದ ಜಮೀನನ್ನು ಕೊಳಚೆ ನಿವಾಸಿಗಳು ಮತ್ತು ಕೆಎಸ್‌ಸಿಬಿ ಆಕ್ರಮಿಸಿಕೊಂಡಿದೆ.

| 18 | ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಿರುವುದು | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | ಸೂಕ್ಷ್ಮ ಉದ್ಯಮಗಳು ಮತ್ತು ಸಣ್ಣ ಉದ್ಯಮಗಳ ಒಟ್ಟು ಬಾಕಿಯಿರುವ ಬಾಕಿಗಳು | 3,195.19 | 2,694.04 |
| | ಸೂಕ್ಷ್ಮ ಉದ್ಯಮಗಳು ಮತ್ತು ಸಣ್ಣ ಉದ್ಯಮಗಳ ಹೊರತಾದ ಕ್ರೆಡಿಟಾರ್‌ಗಳ ಒಟ್ಟು ಬಾಕಿಯಿರುವ ಬಾಕಿಗಳು | 31,940.97 | 26,523.86 |
| | **ಒಟ್ಟು** | **35,136.16** | **29,217.90** |

(i) ದಿನಾಂಕ 2ನೇ ಅಕ್ಟೋಬರ್ 2006 ರಿಂದ ಜಾರಿಗೆ ಬಂದಿರುವ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006 (ಎಂಎಸ್‌ಎಂಇಡಿ) ಅನ್ವಯ, ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಕಟಣೆಗಳನ್ನು ಮಾಡಬೇಕಾಗುತ್ತದೆ. ಕಂಪನಿಯು ಹಣಕಾಸಿನ ವರ್ಷ 2023-24ರ ಅವಧಿಯಲ್ಲಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006ರ ಪ್ರಕರಣ 22ರ ಅನ್ವಯ ಕಂಪನಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳನ್ನು ಗುರುತಿಸಿದೆ.

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**

**ಕ್ರೋಡೀಕೃತ ಹಣಕಾಸಿನ ಹೇಳಿಕೆಗಳ ಭಾಗವಾಗಿರುವ ಟಿಪ್ಪಣಿಗಳು**

**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| | ವಿವರಗಳು | 31ನೇ ಮಾರ್ಚ್ 2004ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
|---|---|---|---|
| ಎ | ಪ್ರತಿ ಲೆಕ್ಕ ನಿರ್ವಹಣೆ ವರ್ಷದ ಕೊನೆಯಲ್ಲಿ ಯಾವುದೇ ಸರಬರಾಜುದಾರರಿಗೆ ಪಾವತಿ ಮಾಡದೆ ಉಳಿದಿರುವ ಅಸಲು ಮೊತ್ತ ಮತ್ತು ಇದರ ಮೇಲಿನ ಬಡ್ಡಿ ಬಾಕಿ (ಪ್ರತ್ಯೇಕವಾಗಿ ತಿಳಿಸಿರಬೇಕು) | | |
| | ಸಣ್ಣ ಮತ್ತು ಮಧ್ಯಮ ಉದ್ದಿಮೆಗೆ ಪಾವತಿ ಬಾಕಿಯಿರುವ ಅಸಲು ಮೊತ್ತ | 3,195.19 | 2,694.04 |
| | ಮೇಲಿನ ದರ ಬಾಕಿ ಬಡ್ಡಿ | – | – |
| ಬಿ | ಲೆಕ್ಕ ನಿರ್ವಹಣೆ ವರ್ಷದ ಅವಧಿಯಲ್ಲಿ ನಿಗದಿತ ದಿನಾಂಕದ ನಂತರ ಸರಬರಾಜುದಾರರಿಗೆ ಮಾಡಿದ ಪಾವತಿ ಮೊತ್ತಗಳ ಜೊತೆಗೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ ಅಭಿವೃದ್ಧಿ ಕಾಯ್ದೆ 2006ರ ಪ್ರಕರಣ 16ರ ಅನ್ವಯ ಕಂಪನಿ ಪಾವತಿ ಮಾಡಿರುವ ಬಡ್ಡಿಯ ಮೊತ್ತ | – | – |
| ಸಿ | ಪಾವತಿ ಮಾಡುವುದರಲ್ಲಿ ವಿಳಂಬವಾಗಿರುವ ಅವಧಿಗೆ ಬಾಕಿಯಿರುವ ಬಡ್ಡಿಯ ಮೊತ್ತ ಮತ್ತು ಪಾವತಿ ಮಾಡಬೇಕಿರುವುದು. (ವರ್ಷದ ಅವಧಿಯಲ್ಲಿ ನಿಗದಿತ ದಿನದ ನಂತರ ಪಾವತಿ ಮಾಡಿರುವುದು) ಆದರೆ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006 ರ ಅಡಿಯಲ್ಲಿ ನಿರ್ದಿಷ್ಟಪಡಿಸಿರುವ ಬಡ್ಡಿ ಸೇರಿಸದೆ | – | – |
| ಡಿ | ಲೆಕ್ಕ ನಿರ್ವಹಣೆ ವರ್ಷದ ಕೊನೆಯಲ್ಲಿ ಸಂಚಯನವಾಗಿರುವ ಮತ್ತು ಪಾವತಿ ಮಾಡದೆ ಉಳಿದಿರುವ ಬಡ್ಡಿ ಮೊತ್ತ | – | – |
| ಇ | ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ದಿಮೆಗಳ ಅಭಿವೃದ್ಧಿ ಕಾಯ್ದೆ, 2006ರ ಪ್ರಕರಣ 23ರ ಅನ್ವಯ ಮುರಿದುಕೊಳ್ಳಬಹುದಾದ ಖರ್ಚು ಆಗಿ ಅನುಮತಿ ನೀಡದ ಉದ್ದೇಶಕ್ಕಾಗಿ ಸಣ್ಣ ಉದ್ದಿಮೆಗೆ ಮೇಲೆ ತಿಳಿಸಿರುವಂತೆ ಬಡ್ಡಿಯ ಬಾಕಿಯನ್ನು ವಾಸ್ತವಿಕವಾಗಿ ಪಾವತಿ ಮಾಡಿರುವ ಆ ದಿನಾಂಕದವರೆಗೆ, ಮುಂದಿನ ವರ್ಷಗಳಲ್ಲಿ ಕೂಡ ಬಾಕಿಯಾಗಿ ಉಳಿದಿರುವ ಮತ್ತು ಪಾವತಿ ಮಾಡಬೇಕಿರುವ ಮುಂದಿನ ಬಡ್ಡಿಯ ಮೊತ್ತ ★ | – | – |
| | ★ಕಂಪನಿಯು ಎಂಎಸ್‌ಎಂಇ ಎಂಬುದಾಗಿ ಪಾರ್ಟಿಗಳನ್ನು ಗುರುತಿಸಿರುವ ಪ್ರಮಾಣದವರೆಗೆ ಮೇಲಿನ ಮಾಹಿತಿಯನ್ನು ಸಲ್ಲಿಸಲಾಗಿದೆ. ಲೆಕ್ಕ ಪರಿಶೋಧಕರು ಇದರ ಮೇಲೆಯೇ ಅವಲಂಬಿತವಾಗಿರುವರು. | – | – |

| (ii) | **ವ್ಯಾಪಾರದ ಸಂಬಂಧ ಪಾವತಿಸಬೇಕಾಗಿರುವ ಕಾಲಮಾನದ ಪಟ್ಟಿ** | | | | | |
|---|---|---|---|---|---|---|
| | **31ನೇ ಮಾರ್ಚ್ 2024 ರಂದು ಇದ್ದಂತೆ** | **ಪಾವತಿಯ ನಿಗದಿತ ದಿನಾಂಕದಿಂದ ಕೆಳಕಂಡ ಅವಧಿಗಳವರೆಗೆ ಬಾಕಿಯಿರುವುದು** | | | | |
| | **ವಿವರಗಳು** | **1ವರ್ಷಕ್ಕಿಂತ ಕಡಿಮೆ** | **1-2 ವರ್ಷಗಳು** | **2-3 ವರ್ಷಗಳು** | **3 ವರ್ಷಗಳಿಗೆ ಮೇಲ್ಪಟ್ಟು** | **ಒಟ್ಟು** |
ಕಂಪನಿ ಖರೀದಿದಾರರಿಗೆ ಇನ್‌ವಾಯ್ಸ್ ನೀಡಿತು ಮತ್ತು ಎಲ್‌ಸಿ ಮೂಲಕ ದಾಖಲೆಗಳ ಸಮಾಲೋಚನೆ ಮಾಡಿತು. ಆದರೆ ಅದು ಆಗಲೇ ಅವಧಿ ಮೀರಿದ್ದರಿಂದ ಸಂಧಾನ ಫಲಿಸಲಿಲ್ಲ. ಕಾರ್ಗೋ ಹಾಂಗ್‌ಕಾಂಗ್ ಬಂದರನ್ನು ತಲುಪಿದಾಗ ಎಫ್‌ಇ ಅಂಶ 45.9% ಇರುವುದಾಗಿ ಚೀನಾದ ಪರಿಶೀಲನೆ ಗುಣಮಟ್ಟದ ವರದಿಯು ತಿಳಿಸಿತು. ಹಾಗಾಗಿ ಖರೀದಿದಾರರು ಅದುರು ಕಳಪೆ ಗುಣಮಟ್ಟದ್ದು ಎಂಬುದಾಗಿ ತಿರಸ್ಕರಿಸಿದರು. ತದನಂತರ ಸಾಗರೋತ್ತರ ಖರೀದಿದಾರರಿಗೆ ಅದುರನ್ನು ಮಾರಾಟ ಮಾಡಲು ಮತ್ತು ಹಣವನ್ನು ಪಡೆದುಕೊಳ್ಳುವಂತೆ ಅಧಿಕಾರ ನೀಡಲಾಯಿತು. ಅದರಂತೆ ಅದುರನ್ನು ಸಿಎಫ್‌ಆರ್ ಆಧಾರದ ಮೇಲೆ ಎಂ.ಟಿ. ಒಂದಕ್ಕೆ ಯುಎಸ್ ಡಾಲರ್ 35 ರಂತೆ ಮಾರಾಟ ಮಾಡಿದ್ದು, 31ನೇ ಮಾರ್ಚ್ 2010ರ ದಿನಾಂಕದ ಇನ್‌ವಾಯ್ಸ್ ಅನ್ವಯ ಯುಎಸ್ ಡಾಲರ್ 16,39,626.80 ಬಂದಿದೆ. ಮಾರಾಟದ ಹಣವನ್ನು ಸಂದಾಯ ಮಾಡುವಂತೆ ಎಂಎಸ್‌ಐಎಲ್ ಸಾಗರೋತ್ತರ ಖರೀದಿದಾರರನ್ನು ಕೋರಿತ್ತು. ಆದರೆ ಸಾಗರೋತ್ತರ ಖರೀದಿದಾರರು ಕಂಪನಿ ವಿರುದ್ಧ ಯುಎಸ್ ಡಾಲರ್ 24,25,051.88ಕ್ಕೆ ತನ್ನ ಕ್ಲೇಮ್ ಮಾಡಿದರು. ಇದಕ್ಕೆ ಕಂಪನಿ ಒಪ್ಪಲಿಲ್ಲ.

iii. ಸಣ್ಣ ಉಳಿತಾಯಗಳ ನಿರ್ದೇಶನಾಲಯ: ಪಿಂಚಣಿ, ಸಣ್ಣ ಉಳಿತಾಯಗಳ ಆಸ್ತಿ ಉಸ್ತುವಾರಿ ನಿರ್ದೇಶನಾಲಯದಿಂದ 18ನೇ ನವೆಂಬರ್, 2020 ರ ಪತ್ರ ಒಂದು ಬಂದಿದ್ದು, ಅದರಲ್ಲಿ ತಮ್ಮ ಈ ಮೊದಲಿನ ಪತ್ರಗಳ ಉಲ್ಲೇಖದ ಬಗ್ಗೆ ಗಮನ ಸೆಳೆದು, ಲಾಟರಿ ಮಾರಾಟದ ಹಣ ಕಡಿಮೆ ಸಂದಾಯದ ಬಗ್ಗೆ

ಮತ್ತು ವಿಳಂಬವಾದ ಸಂದಾಯದ ಮೇಲಿನ ಬಡ್ಡಿ ರೂ.4,609.86 ಲಕ್ಷ ಎಂಬುದಾಗಿ ತಿಳಿಸಿದೆ. ಆದರೆ ಕಂಪನಿಯು 10ನೇ ಡಿಸೆಂಬರ್ 2020ರ ತನ್ನ ಪತ್ರದ ಅನ್ವಯ ಎಲ್ಲಾ ಬಾಕಿಗಳ ಪೂರ್ಣ ಮತ್ತು ಅಂತಿಮ ಇತ್ಯರ್ಥದ ಬಗ್ಗೆ 17ನೇ ಅಕ್ಟೋಬರ್ 2016ರಂದು ರೂ.352.61ಲಕ್ಷ ಮೊತ್ತವನ್ನು ಮೊದಲೇ ಪಾವತಿ ಮಾಡಿದೆ ಮತ್ತು ಈ ವಿಚಾರದಲ್ಲಿ ಕಂಪನಿಯಿಂದ ಪಾವತಿ ಮಾಡಬೇಕಾದ ಯಾವುದೇ ಬಾಕಿ ಇರುವುದಿಲ್ಲ ಎಂಬುದಾಗಿ ತಿಳಿಸಿದೆ. ಕಂಪನಿಯ ಈ ಪತ್ರವನ್ನು ಸಣ್ಣ ಉಳಿತಾಯಗಳ ನಿರ್ದೇಶನಾಲಯ ಸ್ವೀಕರಿಸಿದೆ. ಅಗತ್ಯ ದಾಖಲೆ ಪತ್ರಗಳನ್ನು ಸಲ್ಲಿಸಿದ ನಂತರ, ಕರ್ನಾಟಕ ಸರ್ಕಾರವು ಮೇಲೆ ತಿಳಿಸಿದ್ದ ಡಿಮ್ಯಾಂಡ್‌ನ್ನು ಬಡ್ಡಿ ಸೇರಿದಂತೆ ರೂ.1787.00 ಲಕ್ಷಗಳಿಗೆ ಕಡಿಮೆ ಮಾಡಿತು. ಕಂಪನಿ ಈ ಕ್ಲೇಮ್ ಸಂಬಂಧ ರೂ.233.40ಲಕ್ಷ ಒದಗಿಸಿದೆ. ಉಳಿಕೆ ಮೊತ್ತ ರೂ.1553.60 ಲಕ್ಷವನ್ನು ಸಂಭಾವ್ಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ. ಬಡ್ಡಿ ಮನ್ನಾ ಮಾಡಲು ಕೋರಿ ಮನವಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ಕಂಪನಿ ತೊಡಗಿದೆ.

iv. ಗುತ್ತಿಗೆದಾರರಾದ ಮೆ।। ವೆಸ್‌ಕೇರ್ (ಇಂಡಿಯಾ) ಲಿಮಿಟೆಡ್ ಕಂಪನಿ ಕ್ಲೈಮ್ ಒಂದನ್ನು ಮಾಡಿದ್ದು, ಕಂಪನಿಯು ಅದನ್ನು ವಿರೋಧಿಸಿದೆ. ಈ ವಿಚಾರವನ್ನು ಮಧ್ಯಸ್ಥಿಕೆ ಸಮಿತಿಗೆ ವಹಿಸಿದ್ದು, ಅದು ಕಂಪನಿ ವಿರುದ್ಧ ರೂ.119.23 ಲಕ್ಷಗಳನ್ನು (ಹಿಂದಿನ ವರ್ಷ:ರೂ.119.23ಲಕ್ಷ) ಪಾವತಿ ಮಾಡುವಂತೆ, ಆದೇಶ ಹೊರಡಿಸಿದೆ. ಮಧ್ಯಸ್ಥಿಕೆ ಸಮಿತಿಯ ಈ ತೀರ್ಪನ್ನು ಕಂಪನಿ ವಿರೋಧಿಸಿ 2015-16ರ ಸಾಲಿನಲ್ಲಿ ದಾವೆಯನ್ನು ಹೂಡಿದೆ. ಈ ದಾವೆಯು ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿದೆ. ಈ ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆ ಅಡಿಯಲ್ಲಿ ತಿಳಿಸಿದೆ.

v. ಕಂಪನಿಯು ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರದಿಂದ (ಎಎಐ) ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್ (ಬಿಎಸಿಸಿ), ಬೆಂಗಳೂರು ಇಲ್ಲಿ, 2,565.4 ಚದರ ಮೀಟರ್ ಜಾಗವನ್ನು ಗುತ್ತಿಗೆಗೆ ಪಡೆದಿತ್ತು. ಗುತ್ತಿಗೆಯನ್ನು 01ನೇ ಜನವರಿ 2001 ರಿಂದ 2010ರ ವರೆಗಿನ ಅವಧಿಗೆ 10 ವರ್ಷಗಳವರೆಗೆ ನವೀಕರಿಸಲಾಗಿತ್ತು. ಜಂಟಿ ಸರ್ವೆಯ ನಂತರ, ಸ್ವತ್ತನ್ನು 02ನೇ ಮಾರ್ಚ್ 2022ರಂದು ವಹಿಸಿಕೊಡಲಾಗಿತ್ತು. ಎಎಐ ಪರವಾನಗಿ ಶುಲ್ಕಗಳ ಬಗ್ಗೆ ರೂ.226.89 ಲಕ್ಷ, ರೂ.167.24 ಲಕ್ಷಗಳ ಹಾನಿ ಮತ್ತು ರೂ.229.90 ಲಕ್ಷಗಳ ಬಡ್ಡಿ ಪಾವತಿಗೆ ಡಿಮ್ಯಾಂಡ್ ಮಾಡಿತ್ತು. ಈ ಸಂಬಂಧ ಕಂಪನಿಯು ಇತ್ಯರ್ಥದ ಮಾತುಕತೆ ಪ್ರಕ್ರಿಯೆಯಲ್ಲಿದೆ ಮತ್ತು ಪರವಾನಗಿ ಶುಲ್ಕ ಬಗ್ಗೆ ರೂ.226.89 ಲಕ್ಷ (ಹಿಂದಿನ ವರ್ಷ: ರೂ.226.89 ಲಕ್ಷ) ಒದಗಿಸಿದೆ. ಎಎಐನಲ್ಲಿ ಇತ್ಯರ್ಥದ ವಿಚಾರವು ಹಾಗೆಯೇ ಉಳಿದಿದ್ದು, ಬಾಡಿಗೆ ತಗಾದೆಯನ್ನು ಪೂರ್ಣವಾಗಿ ಒದಗಿಸಿದೆ. ಕಂಪನಿಯು ರೂ.397.14 ಲಕ್ಷ (ಹಿಂದಿನ ವರ್ಷ: ರೂ.397.14 ಲಕ್ಷ) ಮೊತ್ತವನ್ನು ಸಂಭಾವ್ಯ ಹೊಣೆಗಾರಿಕೆಯಾಗಿ ವರದಿ ಮಾಡಿದೆ.

vi. **ವಿವಾದಿತ ಡಿಮ್ಯಾಂಡ್‌ಗಳು**

ಎ) ಸಂಬಂಧಪಟ್ಟ ಕ್ರಮಾವಳಿಗಳ ಯಾವುದೇ ಉಳಿದಿರುವ ನಿರ್ಣಯದ ಸಂಬಂಧದಲ್ಲಿ ನಗದು ಹರಿಯುವಿಕೆಗಳ ಸಮಯವನ್ನು ಅಂದಾಜು ಮಾಡುವುದು ಕಂಪನಿಯ ಪದ್ಧತಿಯಾಗಿರುವುದಿಲ್ಲ.

ಬಿ) ಮೇಲಿನ ಸಂಭಾವ್ಯ ಹೊಣೆಗಾರಿಕೆಗಳ ಸಂಬಂಧದಲ್ಲಿ ಕಂಪನಿ ಯಾವುದೇ ಮರುಪಾವತಿಗಳನ್ನು ನಿರೀಕ್ಷಿಸಿರುವುದಿಲ್ಲ.

ಸಿ) ಈ ಕ್ರಮಾವಳಿಗಳ ಅಂತಿಮ ಫಲಿತಾಂಶಗಳು ಕಂಪನಿಯ ಹಣಕಾಸಿನ ಸ್ಥಿತಿ ಮತ್ತು ಕಾರ್ಯಾಚರಣೆಗಳ ಫಲಿತಾಂಶಗಳ ಮೇಲೆ ವಾಸ್ತವಿಕ ವ್ಯತಿರಿಕ್ತ ಪರಿಣಾಮ ಉಂಟು ಮಾಡುವುದಿಲ್ಲ ಎಂಬುದಾಗಿ ಕಂಪನಿ ನಂಬಿರುವುದು.

vii. ಎ) ಸಾಗಾಣಿಕೆ ಶುಲ್ಕಗಳ ಬಗ್ಗೆ ರೂ.45.98ಲಕ್ಷಗಳ ಜಿಎಸ್‌ಟಿ ಆರ್‌ಸಿಎಂ ಮರುಪಾವತಿ ಕ್ಲೇಮ್ ಪಾವತಿಸಿದೆ. ಇದನ್ನು ಟಿಪ್ಪಣಿ ಸಂ.8ರಲ್ಲಿ ಇತರೆ ಆಸ್ತಿಗಳು ಅಡಿಯಲ್ಲಿ ತಿಳಿಸಿದೆ. ಡಿಸೆಂಬರ್ 2020ರವರೆಗೆ ವಾಸ್ತವಿಕ ಕ್ಲೇಮ್ ರೂ.121.42 ಲಕ್ಷಗಳು. ರೂ.75.44 ಲಕ್ಷಗಳ ವ್ಯತ್ಯಾಸವನ್ನು ಹಿಂದಿನ ವರ್ಷಗಳಲ್ಲಿ ಲಾಭ ಮತ್ತು ನಷ್ಟದ ಹೇಳಿಕೆಗಳಿಗೆ ಸೇರಿಸಿದೆ. ಕಂಪನಿಯ ಕ್ಲೇಮ್ ಅನ್ನು ಕೇಂದ್ರ ತೆರಿಗೆಯ ಸಹಾಯಕ ಆಯುಕ್ತರು, ಉತ್ತರ ವಿಭಾಗ-3, ಬೆಂಗಳೂರು ಇವರು ತಿರಸ್ಕರಿಸಿದ್ದಾರೆ. ತದನಂತರ ಕಂಪನಿಯು ಸಲ್ಲಿಸಿದ್ದ ಮೇಲ್ಮನವಿಯು ಸಹ ಜಿಎಸ್‌ಟಿಯ ಹೆಚ್ಚುವರಿ ಆಯುಕ್ತರು, ಮೇಲ್ಮನವಿಗಳು-II, ಬೆಂಗಳೂರು ಇವರಿಂದ ತಿರಸ್ಕೃತವಾಗಿದೆ. ಮುಂದುವರಿದು, ಜನವರಿ 2021ರಿಂದ ಮಾರ್ಚ್ 2024ರ ವರೆಗಿನ ಅವಧಿಯ ಸಾಗಾಣಿಕೆ ಶುಲ್ಕಗಳ ಮೇಲಿನ ಜಿಎಸ್‌ಟಿ ಆರ್ ಸಿಎಂ ಮೇಲಿನ ಹೊಣೆಗಾರಿಕೆ ರೂ.319.51 ಲಕ್ಷವನ್ನು ಕಂಪನಿ ಪಾವತಿಸಿರುವುದಿಲ್ಲ. ಕಂಪನಿ ಪರವಾಗಿ ತೀರ್ಪು ಬರುವ ಅವಕಾಶ ಹೆಚ್ಚಾಗಿರುವುದಾಗಿ ಕಾನೂನು ಸಲಹೆ ನೀಡಿರುವುದರಿಂದ ಬರಬೇಕಾಗಿರುವ ಮರು ಪಾವತಿ ಮತ್ತು ಹೆಚ್ಚುವರಿ ಹೊಣೆಗಾರಿಕೆಗೆ ವ್ಯವಸ್ಥೆ ಮಾಡಿರುವುದಿಲ್ಲ. ಕಂಪನಿ ಆ ಮೊತ್ತವನ್ನು ''ಸಂಭಾವ್ಯ ಹೊಣೆಗಾರಿಕೆ'' ಎಂಬುದಾಗಿ ತಿಳಿಸಿದೆ.

viii. ಮೈಸೂರ್ ಬ್ರೂಯರೀಸ್‌ನಿಂದ (ಎಂಬಿಎಲ್) (ಮೈಸೂರ್ ಬ್ರೂಯರೀಸ್ ಅನ್ನು ಮೊದಲು ಮೆ।। ಎಸ್‌ಕೆಓಎಲ್ ಬ್ರೂಯರೀಸ್ ಎಂಬ ಹೆಸರಿನಿಂದ ಕರೆಯಲಾಗುತ್ತಿದ್ದು, ಈಗ ಅದನ್ನು ಮೆ।। ಎಬಿ ಇನ್‌ಬೆವ್ ಇಂಡಿಯಾ ಲಿಮಿಟೆಡ್ ಹೆಸರಿನಿಂದ ಕರೆಯಲಾಗುತ್ತಿದೆ) ಎಂಎಸ್‌ಐಎಲ್‌ಗೆ ಬರಬೇಕಾಗಿ ಬಾಕಿಯಿರುವ ಕಮಿಷನ್ ಅನ್ನು ನಿರ್ಧರಿಸಲು ಅಧಿಕಾರ ಹೊಂದಿದ ಅಧಿಕಾರಿ ಒಬ್ಬರನ್ನು ನೇಮಕ ಮಾಡುವಂತೆ ಘನ ಸರ್ವೋಚ್ಚ ನ್ಯಾಯಾಲಯ ದಿನಾಂಕ 13ನೇ ಫೆಬ್ರವರಿ 2003ರ ಆದೇಶದ ಅನ್ವಯ ನಿರ್ದೇಶನ ನೀಡಿತ್ತು. ರೂ.2,518 ಲಕ್ಷಗಳ ಮೊತ್ತವನ್ನು ಪಾವತಿ ಮಾಡುವಂತೆ ಅಧಿಕಾರ ಹೊಂದಿದ ಅಧಿಕಾರಿಯು ಮಾಡಿದ ನಿರ್ಧಾರವನ್ನು ಮೈಸೂರ್ ಬ್ರೂಯರೀಸ್ ಲಿ. ವಿರೋಧಿಸಿದ್ದು, ಈ ವಿಚಾರವು ವಿಚಾರಣೆಯಲ್ಲಿದೆ.

ಕಂಪನಿಯು ಕಮಿಷನ್ ವಸೂಲಿಗಾಗಿ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಒಂದನ್ನು ಸಲ್ಲಿಸಿದೆ. ಆದೇಶದ ದಿನಾಂಕದಿಂದ ಎಂಟು ವಾರಗಳ ಕಡೆಯ ಅವಧಿ ಒಳಗೆ ತೀರ್ಪಿನ ಮೊತ್ತದ 60% ಠೇವಣಿ ಇಡುವಂತೆ ಎಂಬಿಎಲ್‌ಗೆ ಆದೇಶಿಸಿದೆ. ಮತ್ತು ಬಾಕಿ ಮೊತ್ತಕ್ಕೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ

ಉಚ್ಚ ನ್ಯಾಯಾಲಯ ಇವರ ಹೆಸರಿನಲ್ಲಿ ಬ್ಯಾಂಕ್ ಗ್ಯಾರಂಟಿ ಸಲ್ಲಿಸುವಂತೆ ಆದೇಶಿಸಿದೆ. ಕಂಪನಿಯು ಆಸ್ತಿಗಳ ಜಪ್ತಿಗಾಗಿ ಉಚ್ಚ ನ್ಯಾಯಾಲಯದ ಮೊರೆ ಹೋಗಿದೆ. ಈ ವರ್ಷದ ಅವಧಿಯಲ್ಲಿ ಕಂಪನಿಯು ಕರ್ನಾಟಕ ಉಚ್ಚ ನ್ಯಾಯಾಲಯದ ಪರವಾಗಿ ರೂ.3525.00 ಲಕ್ಷಗಳ ಬ್ಯಾಂಕ್ ಗ್ಯಾರಂಟಿಗೆ ಎದುರಾಗಿ ರೂ.3531.53 ಲಕ್ಷದ ಮೊತ್ತವನ್ನು ಪಡೆದಿದೆ. ಒಂದು ವೇಳೆ ಮೇಲ್ಮನವಿಯ ಆದೇಶವು ಕಂಪನಿಯ ವಿರುದ್ಧ ಬಂದರೆ, ಆಗ ಕಂಪನಿಯು ಬ್ಯಾಂಕ್ ದರದಲ್ಲಿ ಬಡ್ಡಿ ಸೇರಿದಂತೆ ಸಂಪೂರ್ಣ ಮೊತ್ತವನ್ನು ಆ ನಿಶ್ಚಿತ ಠೇವಣಿಗಳ ರೂ.308.77 ಲಕ್ಷಗಳ ಬಡ್ಡಿಯನ್ನು ''ಸಂಭಾವ್ಯ ಹೊಣೆಗಾರಿಕೆ'' ಎಂಬುದಾಗಿ ತಿಳಿಸಿದೆ.

**ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಟಿಪ್ಪಣಿಗಳು:**

ix. ಹಿಂದಿನ ನೌಕರ ದಿವಂಗತ ಶ್ರೀ ಎಚ್.ಎಸ್. ಹನುಮಂತಯ್ಯನವರನ್ನು 23ನೇ ಜುಲೈ 1984 ರಿಂದ 25% ಹಿಂದಿನ ಸಂಬಳದ ಜೊತೆಗೆ ಮರು ನೇಮಕ ಮಾಡುವಂತೆ ನಿರ್ದೇಶಿಸಿದ್ದ ಕಾರ್ಮಿಕ ನ್ಯಾಯಾಲಯದ ತೀರ್ಮಾನವನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ಎತ್ತಿ ಹಿಡಿದ ಆದೇಶದ ವಿರುದ್ಧ ಕಂಪನಿ ಘನ ಸರ್ವೋಚ್ಚ ನ್ಯಾಯಾಲಯಕ್ಕೆ ವಿಶೇಷ ರಜೆ ಅರ್ಜಿ ಸಲ್ಲಿಸಿತ್ತು .

ಸಿವಿಲ್ ಮೇಲ್ಮನವಿ ಸಂ.(ಎಸ್).9320/2010). ಈ ವರ್ಷದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯ ದಿನಾಂಕ 12ನೇ ಅಕ್ಟೋಬರ್ 2017ರ ಆದೇಶದ ಅನ್ವಯ ಈ ವಿಚಾರದಲ್ಲಿ ಯಾವುದೇ ಅರ್ಹತೆಯಿಲ್ಲವೆಂದು ಅಭಿಪ್ರಾಯಪಟ್ಟಿತು. ಇದರ ಜೊತೆಗೆ ಪ್ರತಿವಾದಿಯೇ ವಿರುದ್ಧದ ಮೇಲ್ಮನವಿಯನ್ನು ವಜಾಗೊಳಿಸಿತು. ಪರಿಣಾಮವಾಗಿ, ಮೇಲ್ಮನವಿ ವಜಾ ಎಂದು ರದ್ದಾಯಿತು. ಭಾರತದ ಘನ ಸರ್ವೋಚ್ಚ ನ್ಯಾಯಾಲಯದ ಆದೇಶದ ಅನ್ವಯ ಕಂಪನಿ ಕೈಗೊಳ್ಳಬೇಕಾಗಿರುವ ಮುಂದಿನ ಕ್ರಮದ ವಿಚಾರವಾಗಿ ವಕೀಲರಿಂದ ಅಭಿಪ್ರಾಯ ಕೇಳಿತು. ಮೇಲ್ಮನವಿ ಇತ್ಯರ್ಥವಾಗದೆ ಉಳಿದಿರುವ ಸಮಯದಲ್ಲಿ ಪ್ರತಿವಾದಿ ಮರಣ ಹೊಂದಿರುವ ವಿಚಾರ ದಾಖಲಿಸಿಕೊಂಡು ವಿಶೇಷ ರಜೆ ಅರ್ಜಿಯನ್ನು ವಿಲೇ ಮಾಡಿರುವುದಾಗಿ ವಕೀಲರು ಅಭಿಪ್ರಾಯಿಸಿದರು ಮತ್ತು ಮರಣ ಹೊಂದಿರುವ ಪ್ರತಿವಾದಿಯ ಕಾನೂನು ಪ್ರತಿನಿಧಿಗಳು ಅಥವಾ ಅವರ ಕುಟುಂಬದವರು, ಆ ಮರಣ ಹೊಂದಿರುವ ನೌಕರನ ಪರವಾಗಿ ಯಾವುದೇ ಹಕ್ಕನ್ನು ಸಲ್ಲಿಸಿದ್ದೇ ಆದಲ್ಲಿ ಈ ವಿಚಾರದಲ್ಲಿ ಯಾವ ಕ್ರಮ ಕೈಗೊಳ್ಳುವುದು ಎಂಬ ಬಗ್ಗೆ ಮುಂದಿನ ಅಭಿಪ್ರಾಯ ಪಡೆಯಬಹುದು ಎಂದೂ ಸಹ ಅಭಿಪ್ರಾಯ ತಿಳಿಸಿದ್ದರು. ಇದುವರೆಗೆ ಸದರಿ ನೌಕರನ ಕಾನೂನು ಪ್ರತಿನಿಧಿಗಳಿಂದ ಅಥವಾ ಕುಟುಂಬದವರಿಂದ ಯಾವುದೇ ಹಕ್ಕು ಕೇಳಿಕೆ ಕಂಪನಿಗೆ ಬಂದಿರುವುದಿಲ್ಲ.

x. ಕಂಪನಿಯು ನಿರ್ದಿಷ್ಟ ಸರ್ಕಾರದ ಆದೇಶಗಳ (ಸರ್ಕಾರದ ಆದೇಶ ಸಂ.ಸಿ129 ಸಿಎಂಡಿ 2000(ಪಿಯುಸಿ) ಸಂಬಂಧ ಕಂಪನಿ ಹಣಕಾಸಿನ ವರ್ಷ 1997-98ರಿಂದ ತನ್ನ ವಹಿವಾಟಿನ 8% ನಂತೆ ವ್ಯವಹಾರ ಅಭಿವೃದ್ಧಿ ವೆಚ್ಚವನ್ನು ಖರ್ಚು ಹಾಕಿದೆ. ಆದರೂ, ಹಣಕಾಸಿನ ವರ್ಷ 2004-05 ರಿಂದ 2020-21ರವರೆಗೆ ಸರ್ಕಾರದಿಂದ ಯಾವುದೇ ನಿರ್ದಿಷ್ಟ ಆದೇಶಗಳು ಕಂಪನಿಗೆ ಬಂದಿರುವುದಿಲ್ಲ. ಹಾಗಾಗಿ ಬಿಡಿಸಿ ಅನ್ನು ಒದಗಿಸಿರುವುದಿಲ್ಲ. ಹಣಕಾಸಿನ ವರ್ಷ 2016-17ರಲ್ಲಿ, ಕಂಪನಿಯು ಹಣಕಾಸಿನ ವರ್ಷ 2002-2003ರಿಂದ 2015-16ವರೆಗೆ ನಿವ್ವಳ ಲಾಭದ 10% ನಂತೆ ವ್ಯವಹಾರ ಅಭಿವೃದ್ಧಿ ವೆಚ್ಚ ಪರಿಗಣಿಸಬೇಕೆಂದು ಕರ್ನಾಟಕ ಸರ್ಕಾರವನ್ನು (ಜಿಒಕೆ) ಕೋರಿದೆ. ಈ ಬಗ್ಗೆ ಕರ್ನಾಟಕ ಸರ್ಕಾರದ ಆದೇಶಕ್ಕಾಗಿ ಕಾಯಲಾಗುತ್ತಿದೆ.

xi. ದಿ.28.05.2019 ರಂದು ರೂ.57.18ಲಕ್ಷ ಪಾವತಿಗಾಗಿ ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸಿಂಗ್ ಪ್ರೈ.ಲಿ., ಕಕ್ಷಿದಾರರು ಇವರ ಪರವಾಗಿ ವಕೀಲರಾದ ಬಿ.ಜಿ. ಶಿವಕುಮಾರ್‌ರವರಿಂದ ಕಂಪನಿಗೆ ಕಾನೂನು ನೋಟೀಸ್ ಬಂದಿದೆ. ಸದರಿ ಕಾನೂನು ನೋಟಿಸ್‌ನಲ್ಲಿ, ರಿಟ್ ಅರ್ಜಿ ಸಂ.478887/2018ರಲ್ಲಿ ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹೊರಡಿಸಿರುವ ದಿನಾಂಕ:24.04.2019ರ ಆದೇಶದ ಪ್ರತಿ ಲಗತ್ತಿಸಿದೆ. ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಪ್ರೈ.ಲಿ.ನ ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ರಾಜ್ಯ, ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ ಮತ್ತು ವ್ಯವಸ್ಥಾಪಕರು, ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ವಿರುದ್ಧ ರೂ.57.10 ಲಕ್ಷ ವಸೂಲಿಗಾಗಿ ಸದರಿ ರಿಟ್ ಅರ್ಜಿ ಸಲ್ಲಿಸಿದ್ದರು. ಸದರಿ ಆದೇಶದಲ್ಲಿ, ಆದೇಶ ದೃಢೀಕೃತ ಪ್ರತಿ ತಲುಪಿದ ದಿನಾಂಕದಿಂದ ಎರಡು ತಿಂಗಳುಗಳ ಅವಧಿ ಒಳಗೆ ವಾಕ್ ಆದೇಶದ ಮೂಲಕ ರೂ.57.18ಲಕ್ಷ ಮೊತ್ತದ ಸಂಬಂಧ ಅರ್ಜಿದಾರರ ಹಕ್ಕು ಕೇಳಿಕೆಯನ್ನು ಪರಿಗಣಿಸುವಂತೆ ಮತ್ತು ತೀರ್ಮಾನಿಸುವಂತೆ ಸದರಿ ಆದೇಶದಲ್ಲಿ ನ್ಯಾಯಾಲಯದಲ್ಲಿ ನಿರ್ದೇಶಿಸಿತ್ತು. ಆದರೆ ನ್ಯಾಯಾಲಯದಿಂದಲಾಗಲಿ ಅಥವಾ ಸರ್ಕಾರದ ವಕೀಲರಿಂದಾಗಲಿ ಕಂಪನಿ ಆದೇಶ ಪಡೆಯಲಿಲ್ಲ. ಮುಂದುವರಿದು, ನಿಮ್ಮ ಗಮನಕ್ಕೆ ತರುವುದೇನೆಂದರೆ, ನ್ಯಾಯಾಲಯಕ್ಕೆ ಹಾಜರಾಗುವಂತೆ ಅಥವಾ ಆಕ್ಷೇಪಣೆಗಳನ್ನು ಸಲ್ಲಿಸುವಂತೆ ಕಂಪನಿಗೆ ನ್ಯಾಯಾಲಯದ ಸೂಚನೆ ಬಂದಿರುವುದಿಲ್ಲ.

ಕರ್ನಾಟಕ ಉದ್ಯೋಗ ಮಿತ್ರ ಮತ್ತು ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ಗೆ ಪ್ರತಿಕ್ರಿಯಿಸಲು ನೋಟೀಸ್ ನೀಡುವ ಅಗತ್ಯವಿಲ್ಲ ಎಂಬುದಾಗಿ ನ್ಯಾಯಾಲಯ ಭಾವಿಸಿರುವುದಾಗಿ ನ್ಯಾಯಾಲಯದ ಆದೇಶದಲ್ಲಿ ಗೋಚರವಾಗಿದೆ. ಸದರಿ ಕಾರ್ಯ ಮಾಡಲು ಕಾರ್ಯಾದೇಶವನ್ನು ಕಂಪನಿ ನೀಡಿರುವುದಿಲ್ಲದಿರುವುದರಿಂದ ಕರ್ನಾಟಕ ಉದ್ಯೋಗ ಮಿತ್ರದಿಂದ ಪಾವತಿ ಪಡೆಯುವವರೆಗೆ ಹೊಣೆಗಾರಿಕೆ ನಿರಾಕರಿಸಿ ಕಾನೂನು ನೋಟೀಸ್‌ಗೆ ಕಂಪನಿ ಉತ್ತರ ಕಳುಹಿಸಿದೆ. ಮುಂದುವರಿದು ಇದೇ ಅಂಶದ ಮೇಲೆ ಹೊಸದಾಗಿ ದಾವೆ ಹೂಡಲಾಗಿದೆ. ಆದರೆ ಹಕ್ಕು ಕೇಳಿಕೆ ಮೊತ್ತ ರೂ.57.18 ಲಕ್ಷಗಳಿಂದ ರೂ.60.04ಲಕ್ಷಗಳಿಗೆ ಬದಲಾಗಿದೆ ಹಾಗೂ ಈ ಮೊಕದ್ದಮೆ ಘನ ಸರ್ಕಾರದ ಉಚ್ಚ ನ್ಯಾಯಾಲಯದಲ್ಲಿ ಉಳಿದಿದೆ.

xii. ಹಣಕಾಸಿನ ವರ್ಷ 2019-2020ರ ಅವಧಿಯಲ್ಲಿ ಕಂದಾಯ ಇಲಾಖೆ ಸೇವಾ ತೆರಿಗೆ ಲೆಕ್ಕ ಪರಿಶೋಧನೆ ನಡೆಸಿದೆ. ಲೆಕ್ಕ ಪರಿಶೋಧನೆಯನ್ನು ಅಕ್ಟೋಬರ್ 2016 ರಿಂದ ಜೂನ್ 2017ರ ವರೆಗೆ ನಡೆಸಲಾಗಿದೆ. ಲೆಕ್ಕಪರಿಶೋಧನೆ ತಂಡವು ಲೆಕ್ಕಪರಿಶೋಧನೆ ನಡೆಸಿದ ಅವಧಿಯಲ್ಲಿ ವಿವಿಧ ಪ್ರಕಾಶನ ಸಂಸ್ಥೆಗಳಿಂದ ಪಡೆದಿರುವ ಹೆಚ್ಚುವರಿ ವ್ಯಾಪಾರ ರಿಯಾಯಿತಿಗಳು/ಪ್ರೋತ್ಸಾಹ ಧನಗಳ ಮೇಲೆ ಕಂಪನಿ ಸೇವಾ ತೆರಿಗೆ ಪಾವತಿಸಿರುವುದಿಲ್ಲ ಎಂಬ ವಿಚಾರವನ್ನು ನಿರ್ಧರಣೆ ಮಾಡಿದೆ. ಈ ವಿಷಯದ ಬಗ್ಗೆ ಇಲಾಖೆ ಒಟ್ಟು ರೂ.79.12ಲಕ್ಷಗಳ ಡಿಮ್ಯಾಂಡ್ ಮಾಡಿದೆ. ಕಂಪನಿ ಈ ವಿಚಾರದ ಬಗ್ಗೆ ಮೇಲ್ಮನವಿ ಮಾಡಿದೆ ಮತ್ತು ಒಟ್ಟು ಡಿಮ್ಯಾಂಡ್ ಮೊತ್ತದ 10% ಅನ್ನು ಅಂದರೆ ರೂ.7.91ಲಕ್ಷವನ್ನು ಹಣಕಾಸಿನ ವರ್ಷ 2020-21ರ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರಕ್ಕೆ ಠೇವಣಿಯಾಗಿ ಪಾವತಿ ಮಾಡಿದೆ. ಸದರಿ ಮೊತ್ತವನ್ನು ಇತರೆ ಚಾಲ್ತಿ ಆಸ್ತಿಗಳ ಅಡಿಯಲ್ಲಿ ತಿಳಿಸಿದೆ.

| 40 | ಬಂಡಾವಳ ಬದ್ಧತೆ ಮತ್ತು ಇತರೆ ಬದ್ಧತೆಗಳು | | |
|---|---|---|---|
| | ವಿವರಗಳು | 31ನೇ ಮಾರ್ಚ್ 2024ರಂದು ಇದ್ದಂತೆ | 31ನೇ ಮಾರ್ಚ್ 2023ರಂದು ಇದ್ದಂತೆ |
| | **(ಎ) ಬಂಡವಾಳ ಬದ್ಧತೆಗಳು** | | |
| | ಸ್ವತ್ತು , ಸ್ಥಾವರ ಮತ್ತು ಉಪಕರಣ | 187.79 | 160.08 |
| | **(ಬಿ) ಇತರೆ ಬದ್ಧತೆಗಳು** | | |
| | ಪರ್ಯಾಯವಾದ ಚಿಟ್‌ಗೆ ಚಂದಾದಾರಿಕೆಯ ಸಂಬಂಧ ಬದ್ಧತೆ | 104.11 | 22.53 |

**41. ಇತರೆ ಟಿಪ್ಪಣಿಗಳು:**

**ಧಾರಕ ಕಂಪನಿಯ ಸಂಬಂಧದಲ್ಲಿ**

i. ವಾಹನಗಳು ಮತ್ತು ಗ್ರಾಹಕರುಗಳ ದೀರ್ಘಬಾಳಿಕೆ ವಸ್ತುಗಳ ಸರಬರಾಜಿಗಾಗಿ ಕಂಪನಿಯು ಸರ್ಕಾರಿ ನೌಕರರುಗಳ ಜೊತೆ (ಬಾಡಿಗೆದಾರರು) ಹೈರ್ ಪರ್ಚೇಸ್ ಒಪ್ಪಂದ ಮಾಡಿಕೊಂಡಿತ್ತು. ಬಾಡಿಗೆದಾರರಿಂದ ಬರಬೇಕಾದ ಬಡ್ಡಿ ಸೇರಿದಂತೆ ಬಾಕಿಯಿರುವ ಕಂತುಗಳನ್ನು ''ಬಾಡಿಗೆದಾರರಲ್ಲಿರುವ ದಾಸ್ತಾನು'' ಎಂಬ ಶೀರ್ಷಿಕೆಯಡಿ ತೋರಿಸಿದೆ. ಹೈರ್‌ಪರ್ಚೇಸ್ ವ್ಯವಹಾರವನ್ನು ಜುಲೈ 2008 ರಿಂದ ಸ್ಥಗಿತಗೊಳಿಸಲಾಗಿದೆ.

ii. ಜಂಟಿ ಕಾರ್ಯಾಚರಣೆ ವ್ಯವಸ್ಥೆಗಳು ಮತ್ತು ಮುಂಗಡಗಳು/ಠೇವಣಿಗಳೂ ಸೇರಿದಂತೆ ಸಂಡ್ರಿ ಕ್ರೆಡಿಟರ್ಸ್, ಸಂಡ್ರಿ ಡೆಟರ್ಸ್, ವ್ಯಾಪಾರಿ ಸಹವರ್ತಿಗಳ ಲೆಕ್ಕದ ಖಾತೆಗಳಲ್ಲಿರುವ ಶಿಲ್ಕುಗಳು ದೃಢೀಕರಣ ಮತ್ತು ಸಮನ್ವಯಗೊಳಿಸುವುದಕ್ಕೆ ಒಳಪಟ್ಟಿರುವವು. ನಿವ್ವಳ ಲಾಭದ ಮೇಲೆ ಅಂತಹ ಸಮನ್ವಯತೆ ಮತ್ತು ದೃಢೀಕರಣದ ಯಾವುದೇ ಪರಿಣಾಮ ಉಂಟಾಗುವಿಕೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲೆ ಉಂಟಾಗಬಹುದಾದ ಪರಿಣಾಮಗಳನ್ನು ತಿಳಿಯಲಾಗದು.

iii. **ಸರ್ಕಾರದ ಅನುದಾನ / ಪ್ರೋತ್ಸಾಹ ಧನ**

ಕಂಪನಿಯು ಸರ್ಕಾರದ ಏಜೆನ್ಸಿ-ಬಿಪಿಪಿಐ ನಿಂದ ಅನುದಾನ ಪ್ರೋತ್ಸಾಹ ಧನ ಕೇಳಿದೆ. ಹಣಕಾಸಿನ ವರ್ಷ 2021-22ರ ಅವಧಿಯಲ್ಲಿ ಬಿಪಿಪಿಐ ಹೊಸ ಮಳಿಗೆ ಪ್ರಾರಂಭಿಸುವ ಸಮಯದಲ್ಲಿದ್ದ ಸ್ಥಿರಾಸ್ತಿಗಳ ಬಗ್ಗೆ ಖರ್ಚುಗಳಿಗೆ ಸಂಪರ್ಕಿಸಿದ್ದ ಈ ಮೊದಲಿದ್ದ ಯೋಜನೆಯಿಂದ ಪ್ರತಿ ಜನ್ ಔಷಧಿ ಮಳಿಗೆಗಳಲ್ಲಿ ಮಾಡಿದ ಖರೀದಿಗಳಿಗೆ ಮರು ಪಾವತಿ ಸಂಪರ್ಕಿತ ಯೋಜನೆಯನ್ನು ಬದಲಾಯಿಸಿದೆ. ಕಂಪನಿಯು 66 ಮಳಿಗೆಗಳಿಗೆ ಹಕ್ಕು ಸಲ್ಲಿಸಿತ್ತು. ಇದರ ಪೈಕಿ 17 ಮಳಿಗೆಗಳಿಗೆ ಹಕ್ಕನ್ನು ನಿರಾಕರಿಸಲಾಗಿತ್ತು. 13 ಮಳಿಗೆಗಳಿಗೆ ಹಕ್ಕನ್ನು ಸಲ್ಲಿಸಿರುವುದಿಲ್ಲ. ವರ್ಷದ ಕೊನೆಯಲ್ಲಿದ್ದಂತೆ ಸದರಿ ಹಕ್ಕಿನ ಅಡಿಯಲ್ಲಿ ರೂ.66.06 ಲಕ್ಷ ಮೊತ್ತ ಬಾಕಿಯಿದ್ದಿತು. ಇದಕ್ಕಾಗಿ ಸಮಾನ ಮೊತ್ತದ ವ್ಯವಸ್ಥೆ ಮಾಡಿದೆ. ಆದರೂ, ಜನೌಷಧಿ ಇಲಾಖೆಯಿಂದ ಬಂದಿರುವ ಪತ್ರದ ಅನುಸಾರ, ಕಂಪನಿಯು ಸಾಧಾರಣ ಪ್ರೋತ್ಸಾಹಧನದ ಸಂಪೂರ್ಣ ಮೊತ್ತವನ್ನು ಪಡೆಯುವುದು ಮತ್ತು ಅಂತಹ ಪ್ರೋತ್ಸಾಹ ಧನದ ಲೆಕ್ಕದಲ್ಲಿ ಬರಬೇಕಾಗಿರುವ ಯಾವುದೇ ಬಾಕಿಯಿರುವುದಿಲ್ಲ.

iv. ಚಿಟ್‌ಫಂಡ್ ವಿಭಾಗದ ಸಂಬಂಧಲ್ಲಿ, ''ಬಹುಮಾನಿತ ಚಂದಾದಾರರುಗಳಿಂದ ವಸೂಲು ಮಾಡಬೇಕಾಗಿರುವ ಮೊತ್ತ'' ರೂ.31618.08 ಲಕ್ಷವನ್ನು'' ಹಣಕಾಸಿನ ಆಸ್ತಿಗಳ ಅಡಿಯಲ್ಲಿನ ಸಾಲಗಳು'' ಎಂಬುದಾಗಿ ವರ್ಗೀಕರಿಸಿದೆ. ಅಮಾರ್ಟೈಸ್ಡ್ ಬೆಲೆಯಲ್ಲಿ ಮಾಪನ ಮಾಡಿದೆ. ರೂ.1196.65ಲಕ್ಷಗಳ ನಿವ್ವಳ ವಾಹಕ ಮೊತ್ತವು ಸಮನ್ವಯತೆ ಮಾಡಿರದ ಶಿಲ್ಕು ಆಗಿರುವುದು. ಅಂತಹ ಸಮನ್ವಯತೆ ಮತ್ತು ದೃಢೀಕರಣದ ಪರಿಣಾಮ ಯಾವುದಾದರೂ ಇದ್ದರೆ, ಅದರಿಂದ ಲಾಭದ ಮೇಲೆ ಮತ್ತು ಆಸ್ತಿಗಳು/ಹೊಣೆಗಾರಿಕೆಗಳ ಮೇಲಿನ ಪರಿಣಾಮವನ್ನು ತಿಳಿಯಲಾಗದು.

v. ಕಂಪನಿಯು ಬೆಂಗಳೂರು ಏರ್ ಕಾರ್ಗೋ ಕಾಂಪ್ಲೆಕ್ಸ್, ಬೆಂಗಳೂರು ಇದರ ಸಮೀಪದಲ್ಲಿನ ಸ್ವತ್ತಿನ ಸಂಬಂಧ ಶ್ರೀಮತಿ ನಾಗರತ್ನ ಇವರೊಡನೆ ಗುತ್ತಿಗೆ ಒಪ್ಪಂದ ಒಂದನ್ನು ಮಾಡಿಕೊಂಡಿದೆ. ಗುತ್ತಿಗೆಯನ್ನು 2003 ರಿಂದ 2008ರವರೆಗೆ 5 ವರ್ಷಗಳ ಅವಧಿಗೆ ನವೀಕರಿಸಿದೆ. ಸ್ವತ್ತನ್ನು ಖಾಲಿ ಮಾಡುವುದರಲ್ಲಿ ವಿಳಂಬವಾಗಿರುವುದರಿಂದ ಗುತ್ತಿಗೆ ಪಡೆದವರು ಪಾವತಿ ಮಾಡಿರದ ಬಾಡಿಗೆ ರೂ.43ಲಕ್ಷಗಳನ್ನು 18%ನಂತೆ ಬಡ್ಡಿಯ ಮೊತ್ತ ರೂ.16ಲಕ್ಷಗಳ ವಸೂಲಿಗೆ ನ್ಯಾಯಾಲಯದ ಮೊರೆ ಹೋಗಿದ್ದಾರೆ (ಒಎಸ್ ನಂ.75/2014). 15ನೇ ನವೆಂಬರ್ 2011 ರಿಂದ 20ನೇ ಡಿಸೆಂಬರ್ 2013ರ ಅವಧಿಗೆ ರೂ.59 ಲಕ್ಷಗಳ ಪಾವತಿ ಮಾಡಿರದ ಬಾಡಿಗೆ ಬಗ್ಗೆ 18% ಬಡ್ಡಿ ಜೊತೆಗೆ ವಸೂಲಿ ಮಾಡುವಂತೆ ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು, ಬೆಂಗಳೂರು ಇವರು ಕಂಪನಿಯ ವಿರುದ್ಧ ದಿನಾಂಕ 24ನೇ ಜೂನ್ 2019ರ ಆದೇಶ ಒಂದನ್ನು ಹೊರಡಿಸಿದೆ. ಈ ಸಂಬಂಧ ಕಂಪನಿ ಮಾನ್ಯ ಕರ್ನಾಟಕದ ಉಚ್ಚನ್ಯಾಯಾಲಯಕ್ಕೆ ಹೋಗಿದ್ದು, 21ನೇ ಅಕ್ಟೋಬರ್ 2019 ರಂದು ಮಧ್ಯಂತರ ತಡೆಯಾಜ್ಞೆ ಪಡೆದಿದೆ. ನ್ಯಾಯಾಲಯದ ಆದೇಶಗಳ ಅನ್ವಯ ಕಂಪನಿಯು ಉಚ್ಚನ್ಯಾಯಾಲಯದಲ್ಲಿ ರೂ.50 ಲಕ್ಷ ಠೇವಣಿ ಮಾಡಿದೆ (ಆರ್‌ಎಫ್‌ಎ 1704/2019). ಈ ವಿಚಾರವು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದೆ.

vi. ಕಂಪನಿಯು ಆಮದಾದ ನದಿ ಮರಳಿಗಾಗಿ 2017ರಲ್ಲಿ ಮೆ॥ ಪೊಸಿಡಾನ್ ಎಫ್‌ಜಡ್‌ಇ, ದುಬೈ (ಸರಬರಾಜುದಾರರು) ಇವರ ಜೊತೆ ಒಪ್ಪಂದ ಒಂದನ್ನು ಮಾಡಿಕೊಂಡಿತ್ತು. ಈ ದಿನಾಂಕದವರೆಗೆ 2 ಶಿಪ್‌ಮೆಂಟ್‌ಗಳಲ್ಲಿ (ಅಕ್ಟೋಬರ್ 2017 ಮತ್ತು ಜನವರಿ 2018) 1,03,872.77 ಎಂಟಿ ಮರಳನ್ನು ಆಮದು ಮಾಡಿ ಮತ್ತು ಈ ಮರಳನ್ನು ಆಂಧ್ರಪ್ರದೇಶದಲ್ಲಿನ ಕೃಷ್ಣಪಟ್ಟಂ ಬಂದರಿನಲ್ಲಿ ದಾಸ್ತಾನು ಮಾಡಿದೆ. ಕಂಪನಿಯು ಇದುವರೆವಿಗೆ 14,759 ಎಂಟಿ ಮರಳನ್ನು ಮಾರಾಟ ಮಾಡಿದೆ.

ಸೀಮಾ ಸುಂಕದ ಆಯುಕ್ತರು, ವಿಜಯವಾಡ ಇವರು ನಂ.ವಿಜೆಡಿ-ಕಸ್ಟಂ-ಪಿಆರ್‌ವಿ-ಸಿಒಎಂ-003-20-21 ದಿನಾಂಕ: 03ನೇ ಡಿಸೆಂಬರ್ 2020ರ ಅನ್ವಯ ವ್ಯತ್ಯಾಸದ ಸುಂಕ, ಕಡಿಮೆ ಮಾಡಿದ ದಂಡ ಮತ್ತು ದಂಡದ ಬಗ್ಗೆ ರೂ.599 ಲಕ್ಷಗಳ ಪಾವತಿಗೆ ಡಿಮ್ಯಾಂಡ್ ಮಾಡಿ ಆದೇಶ ಒಂದನ್ನು ಹೊರಡಿಸಿದ್ದರು.

ಸೀಮಾ ಸುಂಕದ ಆಯುಕ್ತರ ಈ ಆದೇಶವನ್ನು ರದ್ದುಪಡಿಸಲು ಕಂಪನಿ ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಮೇಲ್ಮನವಿ ಸಲ್ಲಿಸಿತ್ತು ಮತ್ತು ಸದರಿ ವಿಷಯವು ಸಿಇಎಸ್‌ಟಿಎಟಿ, ಹೈದರಾಬಾದ್ ಇವರಲ್ಲಿ ಇತ್ಯರ್ಥವಾಗದೆ ಉಳಿದಿದೆ. ಈ ಸಂಬಂಧವಾಗಿ ಕಂಪನಿಯು ರೂ.11.80 ಲಕ್ಷಗಳ ಬ್ಯಾಂಕ್ ಗ್ಯಾರಂಟಿ ನೀಡಿದೆ. ಕಂಪನಿಯು ಖರೀದಿದಾರರಾದ ಓಷನ್ ಏಜೆನ್ಸೀಸ್ ಇವರಿಗೆ ಸೇರಿದ 6,826 ಟನ್‌ಗಳ ತೂಕದ ಮರಳನ್ನು ಹೊಂದಿದೆ. 10000 ಎಂಟಿ ಮಾರಾಟ ಮಾಡಿದ ನಂತರ ಮೇಲ್ಕಂಡ ತೂಕದ ಮರಳು ಉಳಿದಿದೆ.

vii. ಮೆ|| ಪರ್ಲ್ ಫೋರ್ಟ್ಸ್ ಅಂಡ್ ವೇರ್ ಹೌಸಿಂಗ್ ಪ್ರೈ.ಲಿ. ಇವರು 89,888 ಚದರ ಅಡಿ ಜಾಗವನ್ನು, ಪ್ರತಿ ವರ್ಷ 25% ಹೆಚ್ಚಳದೊಡನೆ, 15 ವರ್ಷಗಳ ಅವಧಿವರೆಗೆ ಗುತ್ತಿಗೆಗೆ ನೀಡಲು ದಿನಾಂಕ:28ನೇ ಮಾರ್ಚ್ 2018ರಂದು ಎಂಎಸ್‌ಐಎಲ್ ಜೊತೆ ಗುತ್ತಿಗೆ ಒಪ್ಪಂದ ಮಾಡಿಕೊಂಡಿತ್ತು. ಸದರಿ ಒಪ್ಪಂದ ಪತ್ರಕ್ಕೆ ಸೇರ್ಪಡೆ ಒಂದನ್ನು ಮಾಡುವ ಮುಖೇನ ದಿನಾಂಕ:18ನೇ ಜೂನ್ 2018ರಂದು ಮಾರ್ಪಾಡು ಮಾಡಲಾಗಿದೆ. ಬಾಡಿಗೆದಾರರು ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಕಿಗಳನ್ನು ಪಾವತಿ ಮಾಡದಿರುವುದಕ್ಕಾಗಿ ಕಂಪನಿಯು 3ನೇ ಮೇ 2021 ರಂದು ಗುತ್ತಿಗೆ ರದ್ದತಿ ನೋಟೀಸ್ ನೀಡಿತ್ತು. ಬಾಡಿಗೆದಾರರು ಕಂಪನಿಯಿಂದ ಅನುಮತಿ ಪಡೆಯದೆ ಸಿವಿಲ್ ಕಾಮಗಾರಿಗಳನ್ನು ಕೈಗೊಂಡಿದ್ದರಿಂದ ಅವರ ವಿರುದ್ಧ ಪೊಲೀಸ್ ದೂರು ಸಲ್ಲಿಸಲಾಗಿತ್ತು. ಏಕೈಕ ನ್ಯಾಯ ತೀರ್ಮಾನದ ಮಧ್ಯಸ್ಥಿಕೆದಾರರನ್ನು ನೇಮಕ ಮಾಡುವಂತೆ ಕೋರಿ ಕಂಪನಿಯು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿತ್ತು ಮತ್ತು 21ನೇ ಮಾರ್ಚ್ 2022ರಂದು ನಿವೃತ್ತ ನ್ಯಾಯಾಧೀಶರನ್ನು ಏಕೈಕ ನ್ಯಾಯ ತೀರ್ಮಾನ ಮಧ್ಯಸ್ಥಿಕೆದಾರರನ್ನಾಗಿ ನೇಮಕ ಮಾಡಿತ್ತು. ವರ್ಷದ ಕೊನೆಯಲ್ಲಿ ಇದ್ದಂತೆ, ಬಾಡಿಗೆದಾರರಿಂದ ರೂ.337.32 ಲಕ್ಷ (ಹಿಂದಿನ ವರ್ಷ 279.53 ಲಕ್ಷ) ಬಾಕಿ ಬರಬೇಕಾಗಿದೆ. ಕಂಪನಿಯು ಇದರ ಸಂಬಂಧ ರೂ.137.24 ಲಕ್ಷ (ಹಿಂದಿನ ವರ್ಷ: ರೂ.137.24ಲಕ್ಷ) ವಾಹಕ ವ್ಯವಸ್ಥೆ ಮಾಡಿದೆ.

viii. ಕಂಪನಿಯು ನವಿ ಮುಂಬಯಿಯಲ್ಲಿ ಇರುವ ಅದರ ಗುತ್ತಿಗೆ ಸ್ವತ್ತನ್ನು (ಕರ್ನಾಟಕ ಭವನ) ಮೆ|| ಅತಿಥೇಯ ಕ್ಷೇಮ ಹೋಟೆಲ್ಸ್ ಪ್ರೈ.ಲಿ. ಜೊತೆ 15 ವರ್ಷಗಳ ಅವಧಿಗೆ ಗುತ್ತಿಗೆಗೆ ನೀಡಲು ದಿನಾಂಕ 27ನೇ ಸೆಪ್ಟೆಂಬರ್ 2018ರಂದು ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದು. ಗುತ್ತಿಗೆ ಒಪ್ಪಂದ ಪತ್ರದ ಅನ್ವಯ ಬಾಡಿಗೆದಾರರು ಬಾಕಿಗಳನ್ನು ಪಾವತಿಸಿರುವುದಿಲ್ಲ ಮತ್ತು ವರ್ಷದ ಕೊನೆಯಲ್ಲಿ ಇದ್ದಂತೆ ಬಾಡಿಗೆದಾರರಿಂದ ರೂ.1,006.03 ಲಕ್ಷ (ಹಿಂದಿನ ವರ್ಷ: ರೂ.759.18ಲಕ್ಷ) ಬಾಡಿಗೆ ಬಾಕಿ ಬರಬೇಕಿದೆ ಮತ್ತು ಕಂಪನಿಯು ಸಮಾನ ಮೊತ್ತದ ವ್ಯವಸ್ಥೆ ಹೊಂದಿರುವುದು.

ix. ಕಂಪನಿಯು ಟೂರ್ಸ್ ಅಂಡ್ ಟ್ರಾವಲ್ಸ್ ಸೇವೆಗಳಿಗೆ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ (ಆರ್‌ಜಿಯುಎಚ್‌ಎಸ್) ಕರ್ನಾಟಕ ಇದರಿಂದ ಕೆಲವು ಮುಂಗಡಗಳನ್ನು ಪಡೆದಿದೆ. ಕಂಪನಿಯು ಕಾಗದ ವಿಭಾಗದಿಂದಲೂ ಕೂಡ ಆರ್‌ಜಿಯುಎಚ್‌ಎಸ್‌ಗೆ ಸರಬರಾಜುಗಳನ್ನು ಮಾಡಿದೆ. ಕಂಪನಿ ಮತ್ತು ಆರ್‌ಜಿಯುಎಚ್‌ಎಸ್ ಹಾಗೂ ಸಂಬಂಧಪಟ್ಟ ಸೇವೆ ಪೂರೈಕೆದಾರರ ನಡುವೆ ವಿವಾದ ಉಂಟಾಗಿರುವುದರಿಂದ, ಆರ್‌ಜಿಯುಎಚ್‌ಎಸ್ ಮತ್ತು ಸೇವೆ ಪೂರೈಕೆದಾರರುಗಳ ಸ್ವೀಕರಿಸಬಹುದಾಗಿರುವ ಮತ್ತು ಪಾವತಿ ಮಾಡಬೇಕಾಗಿರುವ ಲೆಕ್ಕಗಳನ್ನು ಸಮನ್ವಯತೆ ಮಾಡಬೇಕಾಗಿದೆ. ಕಂಪನಿಯು ಈ ವಿಚಾರದ ಸಂಬಂಧ ರೂ.200 ಲಕ್ಷಗಳ ಪ್ರಮಾಣದ ವಸೂಲಾಗದ ಮತ್ತು ಸಂದೇಹಾಸ್ಪದ ಮುಂಗಡಗಳ ವ್ಯವಸ್ಥೆ ಮಾಡಿದೆ. ಸಮನ್ವಯತೆ ವಿವರಣೆಗಳು ಇಲ್ಲದಿರುವುದರಿಂದ, ಇದರಿಂದ ಹಣಕಾಸಿನ ಹೇಳಿಕೆಗಳ ಮೇಲೆ ಉಂಟಾಗುವ ಸಾಧ್ಯನೀಯ ಪರಿಣಾಮವನ್ನು ತಿಳಿಯಲಾಗದು.

**ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಸಂಬಂಧದಲ್ಲಿ:**

x. ಶ್ರೀ ಎಂ.ಎಸ್. ಪಾಟೀಲ್, ಶಾಖಾ ವ್ಯವಸ್ಥಾಪಕರು, ಇವರು ಹಣವನ್ನು ದುರುಪಯೋಗ ಮಾಡಿಕೊಂಡಿರುವ ಮತ್ತು ಶ್ರೀ ಎಂ.ಎಸ್. ಪಾಟೀಲ್ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ (ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಮತ್ತು ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ವ್ಯವಸ್ಥಾಪಕ ನಿರ್ದೇಶಕರ ಮೊಕದ್ದಮೆಗಳ ವಿಚಾರವಾಗಿ (ಮೊಕದ್ದಮೆ ನಂ.ಡಬ್ಲ್ಯೂಪಿ 202699/2022 ಮತ್ತು ಡಬ್ಲ್ಯೂಪಿ ನಂ.200418/2023)

ಎ) ಕಂಪನಿಯ ವಿವಿಧ ಗ್ರಾಹಕರುಗಳಿಂದ ಅಂದರೆ ಲೋಕೋಪಯೋಗಿ ಇಲಾಖೆ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಜಯಪುರ ಇವರಿಂದ ಬರಬೇಕಿದ್ದ ರೂ.39.29ಲಕ್ಷ ಮೊತ್ತವನ್ನು ಆಗ ವಿಜಯಪುರದ ಶಾಖೆಯ ಶಾಖಾ ವ್ಯವಸ್ಥಾಪಕರಾಗಿದ್ದ ಶ್ರೀ ಎಂ.ಎಸ್.ಪಾಟೀಲ್ ಅವರು ಅನಧಿಕೃತ ಬ್ಯಾಂಕ್ ಖಾತೆಗೆ ಜಮಾ ಮಾಡಿಕೊಂಡಿರುವ ವಿಚಾರವನ್ನು 18ನೇ ಜೂನ್ 2019ರಂದು ನಡೆದ ಮಂಡಳಿ ಸಭೆಯಲ್ಲಿ ಗಮನಿಸಲಾಗಿದೆ. ಅದರನುಸಾರ, ದಿನಾಂಕ: 30ನೇ ಮೇ 2019ರಂದು ಜಲನಗರ ಪೊಲೀಸ್ ಠಾಣೆ, ವಿಜಯಪುರ ಇಲ್ಲಿ ಎಫ್‌ಐಆರ್ ದಾಖಲಿಸಿದೆ. ಹಣಕಾಸಿನ ವರ್ಷ 20-21ರ ಅವಧಿಯಲ್ಲಿ ಶ್ರೀ ಎಂ.ಎಸ್.ಪಾಟೀಲ್‌ರವರಿಂದ ರೂ.39.29ಲಕ್ಷ ವಸೂಲಿ ಮಾಡಿದ ಪ್ರಯುಕ್ತ ಸದರಿ ಎಫ್‌ಐಆರ್ ಅನ್ನು ಹಿಂಪಡೆಯಲಾಗಿದೆ. ಆದರೆ, ದಿನಾಂಕ:07.12.2022ರಂದು ನಡೆದ 270ನೇ ಮಂಡಳಿ ಸಭೆಯಲ್ಲಿ ಮಂಡಳಿ ಕೈಗೊಂಡಿರುವ ತೀರ್ಮಾನದ ಅನುಸಾರ, ಶ್ರೀ ಎಂ.ಎಸ್ .ಪಾಟೀಲ್, ಶಾಖಾ ವ್ಯವಸ್ಥಾಪಕರು, ವಿಜಯಪುರ ಇವರನ್ನು ರೂ.134.21 ಲಕ್ಷಗಳ ಮೊತ್ತದ ಕಂಪನಿ ಹಣವನ್ನು ದುರುಪಯೋಗ ಮಾಡಿಕೊಂಡಿರುವ ಆರೋಪಗಳು, ವಿವಿಧ ಅಧಿಕೃತ ದಾಖಲೆಗಳನ್ನು ತಿದ್ದಿರುವುದು ಮುಂತಾದ ಆರೋಪಗಳ ಮೇಲೆ ದಿನಾಂಕ:11.01.2023ರ ಆದೇಶ ಸಂ. ಎಸಿಸಿಎ/ಅಡ್ಮಿನ್/ಎಂಡಿ/24/2022-23ರ ಅನ್ವಯ ಅಮಾನತ್ತಿನಲ್ಲಿ ಇಡಲಾಗಿದೆ. ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಗೆ ಸಂಬಂಧಿಸಿದ ರೂ.39.29ಲಕ್ಷಗಳು ಸೇರಿದಂತೆ ದುರುಪಯೋಗ ಮಾಡಿಕೊಂಡಿರುವ ಮೊತ್ತ ರೂ.134.21ಲಕ್ಷವನ್ನು ಹಿಂದಿನ ವರ್ಷಗಳಲ್ಲಿ ತಿಳಿಸಿದೆ. ಸದರಿ ರೂ.39.29 ಲಕ್ಷದ ಮೊತ್ತವನ್ನು ಶ್ರೀ ಎಂ.ಎಸ್. ಪಾಟೀಲ್ ಕಂಪನಿಗೆ ಮರು ಸಂದಾಯ ಮಾಡಿದ್ದಾರೆ. ಮೇಲೆ ತಿಳಿಸಿರುವ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆ. ಸದರಿ ಇಲಾಖಾ ವಿಚಾರಣೆ 30.12.2023ರಂದು ಮುಕ್ತಾಯವಾಗಿದೆ. ಸದರಿ ಇಲಾಖಾ ವಿಚಾರಣೆಯು ರೂ.134.21 ಲಕ್ಷ ದುರುಪಯೋಗ ಮಾಡಿಕೊಂಡಿರುವುದನ್ನು ದೃಢಪಡಿಸಿದೆ. ಇತ್ತೀಚಿನ ಇಲಾಖಾ ವಿಚಾರಣೆ ಆಧಾರದ ಮೇಲೆ ಕಂಪನಿಯು ಮುಂದಿನ ಕ್ರಮ ಕೈಗೊಳ್ಳಬೇಕಾಗಿದೆ.

(ಬಿ) ಅನಧಿಕೃತ ಬ್ಯಾಂಕ್ ಖಾತೆ ತೆರೆದಿರುವಿಕೆ, ಹಣದ ದುರುಪಯೋಗ ಮತ್ತು ಇತರೆ ಆರೋಪಗಳಿಗೆ ಸಂಬಂಧಿಸಿದಂತೆ ಕಂಪನಿ ಮರು ವಿಚಾರಣೆಗಾಗಿ ಕಂಪನಿ ನೀಡಿರುವ ಆದೇಶ ಪ್ರಶ್ನಿಸಿ ಶ್ರೀ ಎಂ.ಎಸ್.ಪಾಟೀಲ್ ಕಂಪನಿ ವಿರುದ್ಧ ಡಬ್ಲ್ಯೂಪಿ ನಂ.202699/2022 ರ ರಿಟ್ ಅರ್ಜಿ ಸಲ್ಲಿಸಿದ್ದರು. ಆರೋಪಗಳ

MSIL

ಮರು ವಿಚಾರಣೆಗಾಗಿ ನೀಡಿದ್ದ ಆದೇಶವನ್ನು ರದ್ದುಗೊಳಿಸಿ, ಶ್ರೀ ಎಂ.ಎಸ್.ಪಾಟೀಲ್ ಪರವಾಗಿ ತೀರ್ಪು ನೀಡುವ ಮೂಲಕ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ದಿನಾಂಕ:25.09.2023ರ ಆದೇಶದ ಮೂಲಕ ರಿಟ್ ಅನ್ನು ವಿಲೇ ಮಾಡಿದೆ. ಕಂಪನಿ ಸದರಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಿರುವುದಿಲ್ಲ. ಇದಕ್ಕೆ ಬದಲಾಗಿ, ಹೊಸದಾಗಿ ವಿಚಾರಣೆ ಕೈಗೊಂಡಿದೆ. ದಿನಾಂಕ:31.12.2023ರ ವರದಿ ನೀಡಿಕೆ ಮೂಲಕ ವಿಚಾರಣೆ ಮುಕ್ತಾಯಗೊಳಿಸಿದೆ. ಈ ವಿಚಾರಣೆಯಿಂದ ಇತರೆ ಆರೋಪಗಳಾದ ನಕಲು ಮಾಡುವಿಕೆ ಮುಂತಾದವು ಸೇರಿದಂತೆ ರೂ.94.92 ಲಕ್ಷಗಳ ಮೊತ್ತದ ಹಣವನ್ನು ಮತ್ತೆ ದುರುಪಯೋಗ ಮಾಡಿರುವುದು ರುಜುವಾತಾಗಿದೆ.

(ಸಿ) ಇದಲ್ಲದೆ, ಶ್ರೀ ಎಂ.ಎಸ್.ಪಾಟೀಲ್‌ರವರು ಅವರನ್ನು ಕಂಪನಿಯ ಸೇವೆಯಿಂದ ಅಮಾನತುಗೊಳಿಸಿರುವುದನ್ನು ಪ್ರಶ್ನಿಸಿ ಕಂಪನಿ ವಿರುದ್ಧ ಡಬ್ಲ್ಯೂ.ಪಿ.ನಂ.200418/2023ರ ರಿಟ್ ಅರ್ಜಿ ಸಲ್ಲಿಸಿದ್ದಾರೆ. ಸದರಿ ರಿಟ್ ಅರ್ಜಿಯನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ ತನ್ನ ದಿನಾಂಕ:04.06.2024ರ ಅನ್ವಯ ವಿಲೇವಾರಿ ಮಾಡಿದ್ದು, ಕಂಪನಿಯ ಪರವಾಗಿ ತೀರ್ಪು ನೀಡಿ, ಶ್ರೀ ಎಂ.ಎಸ್.ಪಾಟೀಲ್‌ರವರ ಅರ್ಜಿಯನ್ನು ವಜಾಗೊಳಿಸಿದೆ.

(ix) ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಲಿಮಿಟೆಡ್ ವಿರುದ್ಧ ಕರ್ನಾಟಕ ರಾಜ್ಯ ಸರ್ಕಾರ (ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ), ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ ಮತ್ತು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್‌ನ ಪ್ರಕರಣದಲ್ಲಿನ ಡಬ್ಲ್ಯೂಪಿ 10332/2022ಕ್ಕೆ ಸಂಬಂಧಿಸಿದಂತೆ ಗ್ರಾಹಕರಾದ ಕರ್ನಾಟಕ ಉದ್ಯೋಗ ಮಿತ್ರದ ವತಿಯಿಂದ ಕರ್ನಾಟಕ ಸರ್ಕಾರದ ಪ್ಯಾಲೆ ಮತ್ತು ಏರೋ ಇಂಡಿಯಾದ ವಸ್ತು ಪ್ರದರ್ಶನ ಮಳಿಗೆ ರಚನೆಯ ರೂ.26.29ಲಕ್ಷಗಳ ಕಾರ್ಯಾದೇಶದ ಅನ್ವಯ ಕಂಪನಿಯು ತನ್ನ ವ್ಯವಹಾರ ಸಹವರ್ತಿಗಳಾದ ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಲಿಮಿಟೆಡ್ ಮೂಲಕ ಕಾರ್ಯಗತಗೊಳಿಸಿತ್ತು. ಕೆಲಸ ಪೂರ್ಣಗೊಂಡ ನಂತರ ಮೆ|| ಮಾನ್ಯುಮೆಂಟ್ಸ್ ಅಡ್ವರ್ಟೈಸರ್ಸ್ ಲಿಮಿಟೆಡ್ ಇನ್‌ವಾಯ್ಸ್‌ಗಳನ್ನು ಸಲ್ಲಿಸಿತ್ತು. ಆದರೆ ಗ್ರಾಹಕರಾದ ಮೆ|| ಕರ್ನಾಟಕ ಉದ್ಯೋಗ ಮಿತ್ರ ಕೆಲಸ ಮಾಡಿರುವ ಬಗ್ಗೆ ಕೆಲವು ಆಕ್ಷೇಪಣೆಗಳನ್ನು ಎತ್ತಿದ್ದರು ಮತ್ತು ಆ ಬಗ್ಗೆ ಸ್ಪಷ್ಟನೆ ಕೇಳಿದ್ದರು. ಸದರಿ ಸ್ಪಷ್ಟನೆ ಒದಗಿಸಲಾಗಿತ್ತು. ಆದರೂ ಗ್ರಾಹಕರು ಇನ್ನೂ ಪಾವತಿ ಬಿಡುಗಡೆ ಮಾಡಿರುವುದಿಲ್ಲ. ವ್ಯವಹಾರ ಸಹವರ್ತಿಯು ಡಬ್ಲ್ಯೂಪಿ ನಂ.10332/2022ರ ಅನ್ವಯ ರಿಟ್ ಅರ್ಜಿ ಒಂದನ್ನು ಸಲ್ಲಿಸಿದ್ದರು. ವ್ಯವಹಾರ ಸಹವರ್ತಿ ಒಪ್ಪಂದವನ್ನು ಕಂಪನಿಯ ಜೊತೆ ಮಾಡಿಕೊಂಡಿರುವುದರಿಂದ ಮತ್ತು ಗ್ರಾಹಕರಿಂದ ಪಾವತಿ ಪಡೆದ ನಂತರ ಮಾತ್ರ ಪಾವತಿಯನ್ನು ಬಿಡುಗಡೆ ಮಾಡುವುದಾಗಿ ವ್ಯವಹಾರ ಸಹವರ್ತಿಯು ತಿಳಿಸಿರುವುದಾಗಿ ಕಂಪನಿಯ ನಿಲುವಾಗಿದೆ. ಸದರಿ ರಿಟ್ ಅರ್ಜಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಉಳಿದಿದೆ.

(xii) 1) ಇನ್‌ವೆಸ್ಟ್ ಕರ್ನಾಟಕ ಫೋರಂ 2) ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ವಿರುದ್ಧ 1)ಬ ಬಿಬಿಪಿ ಸ್ಟುಡಿಯೋ ವರ್ಚುವಲ್ ಭಾರತ್ ಪ್ರೈ.ಲಿ. 2) ಕರ್ನಾಟಕ ರಾಜ್ಯ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಇವರಿಂದ ಪ್ರತಿನಿಧಿಸಲ್ಪಡುವುದು, ಇವರ ಪ್ರಕರಣದಲ್ಲಿನ ಡಬ್ಲ್ಯೂ.ಪಿ.ನಂ.21308/2022ರ ಸಂಬಂಧದಲ್ಲಿ.

ಎ) ಜಾಗತಿಕ ಹೂಡಿಕೆದಾರರ ಸಮಾವೇಶ-2022ರ ಅವಧಿಯಲ್ಲಿ ಕರ್ನಾಟಕವನ್ನು ಬಿಂಬಿಸುವ 3ಡಿ ಅನಿಮೇಶನ್ ಫಿಲ್ಮ್ ತಯಾರಿಸುವ ಕಾರ್ಯಕ್ಕೆ ರೂ.389.40ಲಕ್ಷಗಳಿಗೆ ಕಂಪನಿಯು ಮೆ|| ಬಿಬಿಪಿ ಸ್ಟುಡಿಯೊ ವರ್ಚುಯಲ್ ಭಾರತ್ ಪ್ರೈ.ಲಿ.ಗೆ ಕಾರ್ಯಾದೇಶ ನೀಡಿತ್ತು. ಗ್ರಾಹಕರು ಮುಂಗಡ ಪಾವತಿ ಮಾಡಿದ್ದರಿಂದ ಕಂಪನಿಯು ಇವರಿಗೆ ರೂ.142.85ಲಕ್ಷದ ಮೊತ್ತವನ್ನು ಬಿಡುಗಡೆ ಮಾಡಿತ್ತು. ತದನಂತರ 25.10.2022ರಂದು ಕಂಪನಿಯು ಗ್ರಾಹರಾದ ಇನ್‌ವೆಸ್ಟ್ ಕರ್ನಾಟಕ ಫೋರಂನ ಆದೇಶದ ಅನ್ವಯ ಕಂಪನಿಯು ಸದರಿ ಕಾರ್ಯಾದೇಶವನ್ನು ಹಿಂಪಡೆಯಿತು. ನಂತರ, ಮೆ|| ಬಿಬಿಪಿ ಸ್ಟುಡಿಯೋ ವರ್ಚುವಲ್ ಭಾರತ್ ಪ್ರೈ ಲಿ. ರೂ.246.54 ಲಕ್ಷಗಳ ಬಾಕಿ ಪಾವತಿ ಮಾಡುವಂತೆ ಡಬ್ಲ್ಯೂಪಿ ನಂ.21308/2022ರ ಅನ್ವಯ ದಾವೆ ಹೂಡಿದೆ.

ಬಿ) ನ್ಯಾಯಾಲಯವು ಈ ಸಂಬಂಧ 25.01.2023ರಂದು ಪ್ರಕರಣವನ್ನು ವಿಲೇವಾರಿ ಮಾಡಿ ಕೆಳಕಂಡಂತೆ ಆದೇಶ ಮಾಡಿದೆ:

1) ರಿಟ್ ಅರ್ಜಿಯನ್ನು ಅಂಗೀಕರಿಸಿದೆ.

2) 3ನೇ ಪ್ರತಿವಾದಿ ನೀಡಿದ್ದ ದಿನಾಂಕ:25.10.2022ರ ಪ್ರತಿಭಟನಾ ಹೇಳಿಕೆ ವಜಾಗೊಂಡಿದೆ.

3) ಅರ್ಜಿದಾರರಿಗೆ ಪಾವತಿ ಬಾಕಿಯಿರುವುದನ್ನು ದಿನಾಂಕ:27.10.2022ರ ಅದರ ಇನ್‌ವಾಯ್ಸ್‌ನ ಅನ್ವಯ ಬಿಡುಗಡೆ ಮಾಡುವಂತೆ 1ನೇ ಪ್ರತಿವಾದಿ/ರಾಜ್ಯಕ್ಕೆ ಆಜ್ಞಾ ಪತ್ರ ಹೊರಡಿಸಲಾಗಿದೆ.

4) ಕೈಯಲ್ಲಿರುವ ಪ್ರಕರಣದಲ್ಲಿ ಪರಿಗಣಿಸಿರುವುದಲ್ಲದೇ, ಪರಿಹಾರವಾಗದೆ ಉಳಿದಿರುವ ಯಾವುದೇ ಇತರೆ ವಿವಾದಗಳ ಬಗ್ಗೆ ಮಧ್ಯಸ್ಥಿಕೆ ತೀರ್ಪು ಪಡೆಯುವ ಸ್ವತಂತ್ರ ಅರ್ಜಿದಾರರಿಗಿದೆ.

ಸಿ) ತದನಂತರ, 03.03.2023ರಂದು ಸರ್ಕಾರ ಮತ್ತು ಕಂಪನಿಯು ಮೇಲಿನ ರಿಟ್ ಅರ್ಜಿ ಸಂಬಂಧ ಹೊರಡಿಸಿರುವ ಆದೇಶದ ವಿರುದ್ಧ ಮರು ಪರಿಶೀಲನೆ ಅರ್ಜಿ ನಂ.104/2023 ಅನ್ನು ಸಲ್ಲಿಸಿದ್ದರು. ಸದರಿ ಮರು ಪರಿಶೀಲನೆ ಅರ್ಜಿಯನ್ನು ಮಾನ್ಯ ಉಚ್ಚ ನ್ಯಾಯಾಲಯ ತಿರಸ್ಕರಿಸಿದೆ. ಡಬ್ಲ್ಯೂಪಿ ನಂ.21308/2022ರಲ್ಲಿ ಹೊರಡಿಸಿದ್ದ ಆದೇಶ ಅನುಷ್ಠಾನ ಮಾಡದಿರುವುದಕ್ಕೆ ಮೆ|| ಬಿಬಿಪಿ ಸ್ಟುಡಿಯೋ ವರ್ಚುವಲ್ ಭಾರತ್ ಪ್ರೈ.ಲಿ. ಇವರು ಕರ್ನಾಟಕ ಸರ್ಕಾರ ಮತ್ತು ಗ್ರಾಹಕರಾದ ಇನ್‌ವೆಸ್ಟ್ ಕರ್ನಾಟಕ ಫೋರಂ ಮತ್ತು ಕಂಪನಿ ವಿರುದ್ಧ ಸಿವಿಲ್ ಉಲ್ಲಂಘನೆ ಅರ್ಜಿ ನಂ.495/2023ಅನ್ನು ಸಲ್ಲಿಸಿದ್ದರು. ಕಂಪನಿ ಮಾಡಿರುವ ನಿವೇದನೆ ಬಗ್ಗೆ ವಿಚಾರಣೆ ನಡೆಸಿದ ನಂತರ ಹಣ ಪಾವತಿ ಮಾಡಲು ಕಂಪನಿಗೆ ಯಾವುದೇ ನಿರ್ದಿಷ್ಟ ಆದೇಶ ಇಲ್ಲದ ಪ್ರಯುಕ್ತ ಮಾನ್ಯ ನ್ಯಾಯಾಲಯವು ದಿನಾಂಕ:07.03.2023ರ ಅನ್ವಯ ಕಂಪನಿ ವಿರುದ್ಧದ ಉಲ್ಲಂಘನೆ ನಡಾವಳಿಗಳನ್ನು ಕೈಬಿಟ್ಟಿದೆ.

ಡಿ) ತದನಂತರ ಗ್ರಾಹಕರಾದ ಇನ್‌ವೆಸ್ಟ್ ಕರ್ನಾಟಕ ಫೋರಂ ಮತ್ತು ಕೆಎಸ್‌ಎಂಸಿ ಅಂಡ್ ಎ ಕಂಪನಿಯು ಡಬ್ಲ್ಯೂಪಿ ನಂ.21308/2022 ರಲ್ಲಿ ಹೊರಡಿಸಿದ್ದ ಆದೇಶದ ವಿರುದ್ಧ ವ್ಯವಹಾರ ಸಹವರ್ತಿ ಮೆ|| ಬಿಬಿಪಿ ಸ್ಟುಡಿಯೋ ಮತ್ತು ಕರ್ನಾಟಕ ಸರ್ಕಾರದ ವಿರುದ್ಧ ರಿಟ್ ಮೇಲ್ಮನವಿಯನ್ನು ಸಲ್ಲಿಸಿರುವರು.

ಇ) ಮುಂದುವರಿದು, ಕರ್ನಾಟಕ ಸರ್ಕಾರವು ಡಬ್ಲ್ಯೂಪಿ ನಂ.21308/2022ರಲ್ಲಿ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಮೆ॥ ಬಿಬಿಪಿ ಸ್ಟುಡಿಯೋ, ಇನ್‌ವೆಸ್ಟ್ ಕರ್ನಾಟಕ ಫೋರಂ ಮತ್ತು ಕೆಎಸ್‌ಎಂಸಿ ಅಂಡ್ ಎ ಕಂಪನಿ ವಿರುದ್ಧ ಮೇಲ್ಮನವಿ ಒಂದನ್ನು ಸಲ್ಲಿಸಿವೆ (ಡಬ್ಲ್ಯೂಎ 1266/2023).

ಎಫ್) ಮರು ಪರಿಶೀಲನೆ ಅರ್ಜಿ ಸಂ.104/2023ಅನ್ನು ತಿರಸ್ಕರಿಸಿ ದಿನಾಂಕ:25.01.2023 ರ ಮಾನ್ಯ ಏಕ ನ್ಯಾಯಮೂರ್ತಿಯವರ ತೀರ್ಪು ಮತ್ತು ಆದೇಶ ಹಾಗೂ ಡಬ್ಲ್ಯೂಪಿ ನಂ.21308/2022ರಲ್ಲಿನ ಮರು ಪರಿಶೀಲನೆ ತಿರಸ್ಕರಿಸಿ ಮರು ಪರಿಶೀಲನೆ ಅರ್ಜಿ ಸಂ.104/2023ರಲ್ಲಿ ಹೊರಡಿಸಿದ ತೀರ್ಪನ್ನು ರದ್ದುಗೊಳಿಸಿದೆ. ಮೇಲಿನ ಪ್ಯಾರಾ (ಇ)ರಲ್ಲಿ ತಿಳಿಸಿರುವ ಎರಡೂ ಮೇಲ್ಮನವಿಗಳನ್ನು ಅಂಗೀಕರಿಸಲಾಗಿದೆ. ಪ್ರತಿಭಟನಾ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಉಲ್ಲಂಘನಾ ಅರ್ಜಿಯನ್ನು ವಜಾಗೊಳಿಸಿದೆ. ಈ ವಿಷಯವನ್ನು ಮಧ್ಯಸ್ಥಿಕೆ ನ್ಯಾಯಮಂಡಳಿಗೆ ವಹಿಸಲಾಗಿದೆ.

xiii) ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಉಳಿದುಕೊಂಡಿರುವ ಕೆಎಸ್‌ಎಂಸಿ ಅಂಡ್ ಎ ವಿರುದ್ಧ ಶ್ರೀ ಎಸ್.ಎಂ.ಪಾಷ ಪ್ರಕರಣದಲ್ಲಿನ ಮೇಲ್ಮನವಿ ಸಂ.236/2014ರ ಸಂಬಂಧ.

ಕಂಪನಿಯು ಹಣಕಾಸಿನ ವರ್ಷ 1995-96ರಲ್ಲಿ ರೂ.28.11ಲಕ್ಷಗಳ ಮೊತ್ತದ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ವಸೂಲಿ ಮಾಡಲು ಹಿಂದಿನ ನೌಕರರುಗಳಾದ ಶ್ರೀ ಎಸ್.ಎಂ.ಪಾಷ ಮತ್ತು ಶ್ರೀ ಎಎನ್‌ಎಂ ರಾವ್ ಇವರ ವಿರುದ್ಧ ಮೊಕದ್ದಮೆ ಒಂದನ್ನು (ಒ.ಎಸ್.ನಂ.8758/1996) ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಹೂಡಿತ್ತು. ಸದರಿ ವಸೂಲಿ ಪ್ರಕರಣ 09ನೇ ಜುಲೈ 2013ರಲ್ಲಿ ವಿಲೇವಾರಿಯಾಗಿದೆ. ನ್ಯಾಯಾಲಯ ಶ್ರೀ ಎಸ್.ಎಂ.ಪಾಷ ವಿರುದ್ಧ ವಸೂಲಿಗೆ ತೀರ್ಪು ನೀಡಿತ್ತು ಮತ್ತು ಶ್ರೀ ಎಎನ್‌ಎಂ ರಾವ್ ವಿರುದ್ಧದ ಕೇಸನ್ನು ವಜಾಗೊಳಿಸಿದೆ. ಇದಾದ ನಂತರ, ಕಂಪನಿ ವಕೀಲರ ಅಭಿಪ್ರಾಯ ಕೇಳಿತು. ತೀರ್ಪನ್ನು ಪ್ರಶ್ನಿಸಲು ಈ ಪ್ರಕರಣದಲ್ಲಿ ಕೆಲವು ಆಧಾರಗಳು ಇರುವುದಾಗಿ ವಕೀಲರು ಅಭಿಪ್ರಾಯಿಸಿದ್ದರು. ಅದರಂತೆ, ಮೇಲ್ಮನವಿ ನಂ.236/2014 ಅನ್ನು ಸಲ್ಲಿಸಲಾಗಿತ್ತು ಮತ್ತು ಇದು ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ವಿಲೇವಾರಿಗೆ ಉಳಿದುಕೊಂಡಿದೆ. 1995-96ರ ವರ್ಷದಲ್ಲಿ, ವಿವಾದಿತ ಮೊತ್ತವನ್ನು ಕಂಪನಿಯ ಲೆಕ್ಕದಲ್ಲಿ ದುರುಪಯೋಗ ಸಂಬಂಧ ಬರಬೇಕಿರುವುದು ಮತ್ತು ಪಾವತಿಸಬೇಕಾದುದು ಎಂಬುದಾಗಿ ತಿಳಿಸಿದೆ ಮತ್ತು 1996-97ರ ವರ್ಷದಲ್ಲಿ ರೂ.25.00 ಲಕ್ಷದ ಮೊತ್ತವನ್ನು ಅಬಕಾರಿ ಇಲಾಖೆಗೆ ಪಾವತಿ ಮಾಡಲಾಗಿದೆ ಮತ್ತು ಬರಬೇಕಾಗಿರುವುದನ್ನು ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ವಸೂಲಾಗದ ಸಾಲ ಎಂಬುದಾಗಿ ತಿಳಿಸಿದೆ. 2008-09ರ ವರ್ಷದಲ್ಲಿ ದುರುಪಯೋಗ ಮಾಡಿಕೊಂಡಿದ್ದ ಮೊತ್ತ ರೂ.27.12 ಲಕ್ಷವನ್ನು ಕಂಪನಿಯ ಲೆಕ್ಕದಲ್ಲಿ ದುರುಪಯೋಗವಾಗಿರುವುದು ಬರಬೇಕಾಗಿರುವುದು ಮತ್ತು ಪಾವತಿಸಬೇಕಾದುದು ಎಂದು ತಿಳಿಸಿದೆ. ಸಂಭಾವ್ಯತೆಯ ಕಾರಣ ಬರಬೇಕಾದುದು ಮತ್ತು ಪಾವತಿ ಮಾಡಬೇಕಾದುದನ್ನು ಹೊಂದಾಣಿಕೆ ಮಾಡಿದೆ ಮತ್ತು ರೂ.28.11ಲಕ್ಷದ ಸಂಭಾವ್ಯ ಆಸ್ತಿಯನ್ನು ಪಾವತಿಯಾಗುವ ಆಧಾರದ ಮೇಲೆ ಲಾಭ ಮತ್ತು ನಷ್ಟದ ಹೇಳಿಕೆಯಲ್ಲಿ ಮಾನ್ಯ ಮಾಡಲಾಗುವುದು. ಮೇಲ್ಮನವಿ ನಂ.236/2014 ಇನ್ನೂ ಘನ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥವಾಗದೆ ಉಳಿದಿದೆ.

## 42. ವಿಭಾಗದ ವರದಿ

### i. ವಿಭಾಗಗಳ ಗುರುತಿಸುವಿಕೆ:

ಮುಖ್ಯ ಕಾರ್ಯಾಚರಣೆ ತೀರ್ಮಾನ ಮಾಡುವವರು ಸಂಪನ್ಮೂಲ ಹಂಚಿಕೆ ಮತ್ತು ಕಾರ್ಯಕ್ಷಮತೆ ನಿರ್ಧರಣೆ ಬಗ್ಗೆ ತೀರ್ಮಾನ ಮಾಡುವ ಉದ್ದೇಶಕ್ಕಾಗಿ ತನ್ನ ವ್ಯವಹಾರ ವಿಭಾಗದ ಕಾರ್ಯಾಚರಣೆ ಫಲಿತಾಂಶಗಳನ್ನು ಪ್ರತ್ಯೇಕವಾಗಿ ಉಸ್ತುವಾರಿ ಮಾಡುವರು. ವಿಭಾಗದ ಕಾರ್ಯಕ್ಷಮತೆಯನ್ನು ಲಾಭ ಅಥವಾ ನಷ್ಟದ ಆಧಾರದ ಮೇಲೆ ಮೌಲ್ಯಮಾಪನ ಮಾಡಿದೆ ಮತ್ತು ಹಣಕಾಸಿನ ಹೇಳಿಕೆಗಳಲ್ಲಿ ಲಾಭ ಅಥವಾ ನಷ್ಟದ ಜೊತೆಗೆ ಸುಸಂಗತವಾಗಿ ಮಾಪನ ಮಾಡಿದೆ. ಕಾರ್ಯಾಚರಣೆ ವಿಭಾಗವನ್ನು ಉತ್ಪನ್ನಗಳ ಸ್ವರೂಪ ಮತ್ತು ಐಎನ್‌ಡಿ ಎಎಸ್ 108 ರಲ್ಲಿ ವಿವರಿಸಿರುವಂತೆ ಇತರೆ ಗುಣಾತ್ಮಕ ಮಾನದಂಡದ ಆಧಾರದ ಮೇಲೆ ಗುರುತಿಸಲಾಗಿದೆ. ಕಾರ್ಯಾಚರಣೆ ವಿಭಾಗಗಳನ್ನು ಗ್ರೂಪ್‌ನ ಮುಖ್ಯ ಕಾರ್ಯಾಚರಣೆ ತೀರ್ಮಾನ ಮಾಡುವವರಿಗೆ (''ಸಿಒಡಿಎಂ'') ಒದಗಿಸಿರುವ ಆಂತರಿಕ ವರದಿಗೆ ಅನುಗುಣವಾದ ರೀತಿಯಲ್ಲಿ ವರದಿ ಮಾಡಿದೆ.

### ii. ಕಾರ್ಯಾಚರಣೆ ವಿಭಾಗಗಳು:

ಎ) ನೋಟ್ ಪುಸ್ತಕಗಳು ಮತ್ತು ಲೇಖನ ಸಾಮಗ್ರಿ ವ್ಯವಹಾರ ನಡೆಸುವ ಕಾಗದದ ವಿಭಾಗ

ಬಿ) ಮದ್ಯ ಮಾರಾಟವನ್ನು ಪಾನೀಯ ವಿಭಾಗದಲ್ಲಿ ತಿಳಿಸಿದೆ.

ಸಿ) ಮಾರಾಟ ಮತ್ತು ಜಾಹೀರಾತುಗಳು

ಡಿ) ಚಿಟ್ ಕಾರ್ಯಾಚರಣೆ, ಗ್ರಾಹಕ ಮತ್ತು ಫಾರ್ಮಸ್ಯೂಟಿಕಲ್ ಉತ್ಪನ್ನಗಳು ರಫ್ತು ಮತ್ತು ಆಮದು ಕಾರ್ಯಾಚರಣೆಗಳು, ಟೂರ್ಸ್ ಅಂಡ್ ಟ್ರಾವಲ್ಸ್ ಮತ್ತು ಕೈಗಾರಿಕಾ ಉತ್ಪನ್ನ ವಿಭಾಗ ಇತರೆಯವುಗಳಲ್ಲಿ ಸೇರಿರುವವು.

### iii. ವಿಭಾಗದ ಆದಾಯ ಮತ್ತು ಫಲಿತಾಂಶಗಳು:

ವಿಭಾಗಗಳಿಗೆ ನೇರವಾಗಿ ಅನ್ವಯಿಸಬಹುದಾಗಿರುವ ಆದಾಯ ಮತ್ತು ಖರ್ಚುಗಳನ್ನು ಪ್ರತಿ ವರದಿ ಮಾಡಬಹುದಾದ ವಿಭಾಗದ ಅಡಿ ವರದಿ ಮಾಡಿದೆ. ಯಾವುದೇ ವ್ಯವಹಾರ ವಿಭಾಗಕ್ಕೆ ವ್ಯವಹಾರ ವಿಭಾಗಕ್ಕೆ ನೇರವಾಗಿ ಅನ್ವಯಿಸಲಾಗದ ಖರ್ಚುಗಳು ಮತ್ತು ಆದಾಯವನ್ನು ಹಂಚಿಕೆ ಮಾಡಲಾಗದ ಖರ್ಚು (ಹಂಚಿಕೆ ಮಾಡಲಾಗದ ಆದಾಯದ ನಿವ್ವಳ) ಎಂಬುದಾಗಿ ತಿಳಿಸಿದೆ. ಹಂಚಿಕೆ ಮಾಡಿರದ ಖರ್ಚುಗಳಲ್ಲಿ ಎಲ್ಲಾ ವಿಭಾಗಗಳಿಗೆ ಮಾಡಿದ ಸಾಮಾನ್ಯ ಖರ್ಚು ಮತ್ತು ಕಾರ್ಪೊರೇಟ್ ಮಟ್ಟದಲ್ಲಿ ಮಾಡಿದ ಖರ್ಚುಗಳನ್ನು ಒಳಗೊಂಡಿರುವುದು.

### iv. ವಿಭಾಗದ ಆಸ್ತಿಗಳು ಮತ್ತು ಹೊಣೆಗಾರಿಕೆಗಳು:

''ವಿಭಾಗಗಳಿಗೆ ನೇರವಾಗಿ ಅನ್ವಯಿಸಬಹುದಾದ ಅಥವಾ ಹಂಚಬಹುದಾದ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಪ್ರತಿ ವರದಿ ಮಾಡುವ ವಿಭಾಗದಡಿ

ತಿಳಿಸಿದೆ. ವಿಭಾಗದ ಆಸ್ತಿಗಳಲ್ಲಿ ಕಾರ್ಯಾಚರಣೆ ವಿಭಾಗ ಬಳಸಿದ ಎಲ್ಲಾ ಕಾರ್ಯಾಚರಣೆ ಆಸ್ತಿಗಳು ಸೇರಿರುವವು ಮತ್ತು ಪ್ರಮುಖವಾಗಿ ಸ್ವತ್ತು, ಸ್ಥಾವರ ಮತ್ತು ಉಪಕರಣಗಳು, ವ್ಯಾಪಾರದ ಸಂಬಂಧ ಬರಬೇಕಾದವುಗಳು, ತಪಶೀಲುಗಳು ಮತ್ತು ಇತರೆ ಕಾರ್ಯಾಚರಣೆ ಆಸ್ತಿಗಳು ಸೇರಿರುವವು. ವಿಭಾಗದ ಹೊಣೆಗಾರಿಕೆಗಳಲ್ಲಿ ಪ್ರಮುಖವಾಗಿ ವ್ಯಾಪಾರದ ಸಂಬಂಧ ಪಾವತಿ ಮಾಡಬೇಕಾದುದು ಮತ್ತು ಇತರೆ ಹೊಣೆಗಾರಿಕೆಗಳು ಸೇರಿರುವವು. ಸಾಲಗಳು ಹೊರತುಪಡಿಸಿ ಯಾವುದೇ ವ್ಯವಹಾರ ವಿಭಾಗಕ್ಕೆ ಹಂಚಿಕೆ ಮಾಡಲಾಗದ ಸಾಮಾನ್ಯ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ಹಂಚಿಕೆ ಮಾಡಲಾಗದ ಆಸ್ತಿಗಳು/ಹೊಣೆಗಾರಿಕೆಗಳು ಎಂಬುದಾಗಿ ತಿಳಿಸಿದೆ.''

v. **ಅಂತರ್ ವಿಭಾಗ ವರ್ಗಾವಣೆ:**

''ಅಂತರ್ ವಿಭಾಗ ಆದಾಯಗಳನ್ನು ಮಾರಾಟಗಳ ಬೆಲೆಯಲ್ಲಿ ಮಾನ್ಯ ಮಾಡಿದೆ. ಇದು ಮಾರುಕಟ್ಟೆ ಬೆಲೆ ಮತ್ತು ವ್ಯವಹಾರದ ಅಪಾಯಗಳ ಮೇಲೆ ಆಧಾರಿತವಾಗಿದೆ. ಅಂತರ್ ವಿಭಾಗದ ವರ್ಗಾವಣೆ ಮೇಲಿನ ಲಾಭ ಅಥವಾ ನಷ್ಟವನ್ನು ಗ್ರೂಪ್ ಮಟ್ಟದಲ್ಲಿ ತೆಗೆದುಹಾಕಲಾಗಿದೆ. ವರದಿ ಮಾಡಬಹುದಾದ ವಿಭಾಗಗಳ ಲೆಕ್ಕ ನಿರ್ವಹಣೆ ನೀತಿಗಳು ಟಿಪ್ಪಣಿ 3ರಲ್ಲಿ ವಿವರಿಸಿರುವ ಗ್ರೂಪ್‌ನ ಲೆಕ್ಕ ನಿರ್ವಹಣೆ ನೀತಿಗಳ ಅನುಸಾರವೇ ಇರುವವು. ಗ್ರೂಪ್‌ನ ಹಣಕಾಸು (ಹಣಕಾಸಿನ ವೆಚ್ಚಗಳು ಮತ್ತು ಹಣಸಿನ ಆದಾಯ ಸೇರಿದಂತೆ) ಮತ್ತು ಆದಾಯ ತೆರಿಗೆಗಳನ್ನು ಒಟ್ಟಾರೆ ಆಧಾರದ ಮೇಲೆ ಪರಿಶೀಲಿಸಲಾಗಿದೆ ಮತ್ತು ಅವುಗಳನ್ನು ಕಾರ್ಯಾಚರಣೆ ವಿಭಾಗಗಳಿಗೆ ಹಂಚಿಕೆ ಮಾಡಿರುವುದಿಲ್ಲ.

vi. **ಭೌಗೋಳಿಕ ವಿಭಾಗ:**

ಭಾರತದ ಒಳಗೆ ಮತ್ತು ಉಳಿದ ವಿಶ್ವದಲ್ಲಿನ ಮಾರಾಟದ ಆಧಾರದ ಮೇಲೆ ಭೌಗೋಳಿಕ ವಿಭಾಗವನ್ನು ಪರಿಗಣಿಸಿದೆ.

vii **ಸಂಕ್ಷಿಪ್ತ ವಿಭಾಗದ ಮಾಹಿತಿ:**

**31ನೇ ಮಾರ್ಚ್, 2024ಕ್ಕೆ ಕೊನೆಗೊಂಡ ವರ್ಷದಲ್ಲಿ**

| ವಿವರಗಳು | ಕಾಗದ | ಪಾನೀಯಗಳು | ಮಾರಾಟ ಮತ್ತು ಜಾಹೀರಾತು | ಇತರೆ | ಒಟ್ಟು |
|---|---|---|---|---|---|
| **ವಿಭಾಗದ ಆದಾಯ** | | | | | |
| ಹೊರಗಿನ ಗ್ರಾಹಕರು | 14,339.28 | 318,708.98 | 38,710.92 | 4,664.96 | 376,424.14 |
| ಅಂತರ್-ವಿಭಾಗ | | | | | |
| **ಒಟ್ಟು ಉದ್ದಿಮೆ ಆದಾಯ** | **14,339.28** | **318,708.98** | **38,710.92** | **4,664.96** | **376,424.14** |
| **ವಿಭಾಗದ ಫಲಿತಾಂಶಗಳು** | | | | | |
| ತೆರಿಗೆ ಮತ್ತು ಹಣಕಾಸಿನ ವೆಚ್ಚದ ಮುನ್ನ ವಿಭಾಗದ ಲಾಭ | 1,002.13 | 12,295.10 | 2,550.85 | 356.14 | 15,491.94 |
| ಕಳೆದು: ಹಣಕಾಸಿನ ವೆಚ್ಚ | | | | | (239.43) |
| ಕಳೆದು: ತೆರಿಗೆ ವೆಚ್ಚಗಳು | | | | | (3,721.69) |
| **ತೆರಿಗೆ ನಂತರ ನಿವ್ವಳ ಲಾಭ/(ನಷ್ಟ)** | **1,002.13** | **12,295.10** | **2,550.85** | **356.14** | **11,530.82** |
| ವಿಭಾಗದ ಆಸ್ತಿಗಳು | 10,349.42 | 21,214.92 | 46,412.67 | 88,880.43 | 166,857.44 |
| ಹಂಚಿಕೆ ಮಾಡಿರದ ಆಸ್ತಿಗಳು | | | | | |
| **ಒಟ್ಟು ಆಸ್ತಿಗಳು** | **10,349.42** | **21,214.92** | **46,412.67** | **88,880.43** | **166,857.44** |
| ವಿಭಾಗದ ಹೊಣೆಗಾರಿಕೆಗಳು | 9,740.21 | 9,289.92 | 25,578.24 | 36,701.22 | 81,309.59 |
| ಹಂಚಿಕೆ ಮಾಡಿರದ ಹೊಣೆಗಾರಿಕೆಗಳು | | | | | |
| **ಒಟ್ಟು ಹೊಣೆಗಾರಿಕೆಗಳು** | **9,740.21** | **9,289.92** | **25,578.24** | **36,701.22** | **81,309.59** |
| ಸವಕಳಿ ಮತ್ತು ಅಮಾರ್ಟೈಜೇಶನ್ ಖರ್ಚು | 5.90 | 826.73 | 70.68 | 1,114.31 | 2,017.62 |
| ಹಂಚಿಕೆ ಮಾಡಿರದ ಸವಕಳಿ ಮತ್ತು ಆಮಾರ್ಟೈಜೇಶನ್ | | | | | |
| **ಬಂಡವಾಳ ಖರ್ಚು** | **5.90** | **826.73** | **70.68** | **1,114.31** | **2,017.62** |
| ಹಂಚಿಕೆ ಮಾಡಿರದ ಬಂಡವಾಳ ಖರ್ಚು | 1.31 | 628.26 | 92.31 | 86.48 | 808.36 |
| **ಒಟ್ಟು ಬಂಡವಾಳ ಖರ್ಚು** | **1.31** | **628.26** | **92.31** | **86.48** | **808.36** |

| 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದಲ್ಲಿ | | | | | |
|---|---|---|---|---|---|
| ವಿವರಗಳು | ಕಾಗದ | ಪಾನೀಯಗಳು | ಮಾರಾಟ ಮತ್ತು ಜಾಹೀರಾತು | ಇತರೆ | ಒಟ್ಟು |
| **ವಿಭಾಗದ ಆದಾಯ** | | | | | |
| ಹೊರಗಿನ ಗ್ರಾಹಕರು | 9,984.71 | 266,072.84 | 57,914.37 | 6,449.70 | 340,421.62 |
| ಅಂತರ್-ವಿಭಾಗ | | | | | |
| **ಒಟ್ಟು ಉದ್ದಿಮೆ ಆದಾಯ** | **9,984.71** | **266,072.84** | **57,914.37** | **6,449.70** | **340,421.62** |
| ವಿಭಾಗದ ಫಲಿತಾಂಶಗಳು | | | | | |
| ತೆರಿಗೆ ಮತ್ತು ಹಣಕಾಸಿನ ವೆಚ್ಚಕ್ಕೆ ಮುನ್ನ ವಿಭಾಗದ ಲಾಭ | 448.29 | 8,414.21 | 2,617.66 | 109.25 | 11,370.91 |
| ಕಳೆದು: ಹಣಕಾಸಿನ ವೆಚ್ಚ | | | | | (180.00) |
| ಕಳೆದು: ತೆರಿಗೆ ವೆಚ್ಚ | | | | | (2,763.66) |
| **ತೆರಿಗೆ ನಂತರ ನಿವ್ವಳ ಲಾಭ/(ನಷ್ಟ)** | **448.29** | **8,414.21** | **2,617.66** | **109.25** | **8,427.25** |
| ವಿಭಾಗದ ಆಸ್ತಿಗಳು | 5,190.92 | 18,335.85 | 42,727.60 | 75,112.51 | 141,366.88 |
| ಹಂಚಿಕೆಯಾಗಿರದ ಆಸ್ತಿಗಳು | | | | | |
| **ಒಟ್ಟು ಆಸ್ತಿಗಳು** | **5,190.92** | **18,335.85** | **42,727.60** | **75,112.51** | **141,366.88** |
| ವಿಭಾಗದ ಹೊಣೆಗಾರಿಕೆಗಳು | 3,532.83 | 944.67 | 23,791.35 | 38,147.28 | 66,416.13 |
| ಹಂಚಿಕೆಯಾಗಿರದ ಹೊಣೆಗಾರಿಕೆಗಳು | | | | | |
| **ಒಟ್ಟು ಹೊಣೆಗಾರಿಕೆಗಳು** | **3,532.83** | **944.67** | **23,791.35** | **38,147.28** | **66,416.13** |
| ಸವಕಳಿ ಮತ್ತು ಅಮಾರ್ಟೈಜೇಶನ್ ಖರ್ಚು | 2.11 | 1,153.56 | 70.31 | 678.77 | 1,904.75 |
| ಹಂಚಿಕೆಯಾಗಿರದ ಸವಕಳಿ ಮತ್ತು ಆಮಾರ್ಟೈಜೇಶನ್ | | | | | |
| **ಒಟ್ಟು ಸವಕಳಿ ಮತ್ತು ಅಮಾರ್ಟೈಜೇಶನ್** | **2.11** | **1,153.56** | **70.31** | **678.77** | **1,904.75** |
| ಬಂಡವಾಳ ಖರ್ಚು | 3.33 | 1,824.72 | 5.30 | 437.88 | 2,271.23 |
| ಹಂಚಿಕೆಯಾಗಿರದ ಬಂಡವಾಳ ಖರ್ಚು | | | | | |
| **ಒಟ್ಟು ಬಂಡವಾಳ ಖರ್ಚು** | **3.33** | **1,824.72** | **5.30** | **437.88** | **2,271.23** |

ಬಂಡವಾಳ ಖರ್ಚಿನಲ್ಲಿ ಸ್ವತ್ತು , ಸ್ಥಾವರ ಮತ್ತು ಉಪಕರಣ, ಅಗೋಚರಿತ ಆಸ್ತಿಗಳು, ಹೂಡಿಕೆ ಸ್ವತ್ತುಗಳು, ಪ್ರಗತಿಯಲ್ಲಿರುವ ಬಂಡವಾಳ ಕಾರ್ಯ ಮತ್ತು ಬಳಕೆ ಹಕ್ಕಿನ ಆಸ್ತಿಗಳು ಒಳಗೊಂಡಿರುವವು.

**ಪ್ರಮುಖ ಗ್ರಾಹಕರುಗಳ ಬಗ್ಗೆ ಮಾಹಿತಿ:**

ವಿವಿಧ ಭೌಗೋಳಿಕ ಸೇರಿದಂತೆ ಗ್ರೂಪ್ ಕಾರ್ಯಾಚರಣೆ ಮಾಡುವ ವ್ಯವಹಾರ, ವಿವಿಧ ಗ್ರಾಹಕರ ಜೊತೆ ಗ್ರೂಪ್‌ನ ವ್ಯವಹಾರದ ಸ್ವರೂಪವನ್ನು ಪರಿಗಣಿಸಿದಂತೆ, 31ನೇ ಮಾರ್ಚ್ 2024 ಮತ್ತು 2023ಕ್ಕೆ ಕೊನೆಗೊಂಡ ವರ್ಷಗಳಲ್ಲಿ ಗ್ರೂಪ್‌ನ ಒಟ್ಟು ಆದಾಯದ 10%ಗಿಂತ ಹೆಚ್ಚಿನ ಆದಾಯಕ್ಕೆ ಯಾವುದೇ ಒಂದು ಗ್ರಾಹಕರು ಗಣನೆಯಾಗಿಲ್ಲ.

**43. ಪಡೆದ ಹಣಗಳ ಬಳಕೆ ಅನುಸೂಚಿ-III ರ ಅನ್ವಯ ಅಗತ್ಯವಾದ ಇತರೆ ನಿಯಂತ್ರಣ ಮಾಹಿತಿ**

31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2003ಕ್ಕೆ ಕೊನೆಗೊಂಡ ವರ್ಷದಲ್ಲಿ ವಿದೇಶಿ ಕಂಪನಿಗಳು (ಮಧ್ಯವರ್ತಿಗಳು) ಸೇರಿದಂತೆ ಯಾವುದೇ ಇತರೆ ವ್ಯಕ್ತಿಗೆ (ಗಳಿಗೆ) ಅಥವಾ ಕಂಪನಿಗೆ (ಗಳಿಗೆ) ಗ್ರೂಪ್ ಮಧ್ಯವರ್ತಿಯು ಈ ಕೆಳಕಂಡಂತೆ ಅರ್ಥವಂತಿಕೆಯೊಡನೆ (ಲಿಖಿತ ರೂಪದಲ್ಲಿ ದಾಖಲಿಸಿಕೊಂಡು ಅಥವಾ ಇಲ್ಲದೆ) ಮುಂಗಡ ನೀಡಿರುವುದಿಲ್ಲ ಅಥವಾ ಸಾಲ ನೀಡಿರುವುದಿಲ್ಲ ಅಥವಾ ಹಣ ಹೂಡಿಕೆ ಮಾಡಿರುವುದಿಲ್ಲ. (ಪಡೆದುಕೊಂಡ ಹಣದಿಂದ ಅಥವಾ ಷೇರ್ ಪ್ರೀಮಿಯಂನಿಂದ ಅಥವಾ ಹಣಗಳ ರೂಪದಲ್ಲಿ)

i) ಗ್ರೂಪ್‌ನಿಂದ ಅಥವಾ ಗ್ರೂಪ್‌ನ ಪರವಾಗಿ (ಅಂತಿಮ ಫಲಾನುಭವಿಗಳು) ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ನೀಡಿಕೆ ಅಥವಾ ಹೂಡಿಕೆಗೆ ಅಥವಾ

ii) ಅಂತಿಮ ಫಲಾನುಭವಿಗಳಿಗೆ ಅಥವಾ ಇವರ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಅಂತಹ ಯಾವುದಾದರೂ ಒದಗಿಸುವಿಕೆ. ಮುಂದುವರಿದು, 31ನೇ ಮಾರ್ಚ್ 2024 ಮತ್ತು 31ನೇ ಮಾರ್ಚ್ 2023ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ, ಗ್ರೂಪ್ ಕೆಳಕಂಡಂತೆ

ವ್ಯವಹಾರ ನಡೆಸಲು (ಲಿಖಿತವಾಗಿ ದಾಖಲಾದ ಅಥವಾ ದಾಖಲಿಸದೆ ಇರುವ) ಅರ್ಥವಂತಿಕೆಯೊಡನೆ ವಿದೇಶಿ ಸಂಸ್ಥೆಗಳು (ಹಣ ನೀಡಿಕೆ ಪಾರ್ಟಿ) ಸೇರಿದಂತೆ ಯಾವುದೇ ವ್ಯಕ್ತಿಯಿಂದ (ಗಳಿಂದ) ಅಥವಾ ಕಂಪನಿಯಿಂದ (ಗಳಿಂದ) ಯಾವುದೇ ಹಣ ಪಡೆದಿರುವುದಿಲ್ಲ.

i) ಹಣ ನೀಡಿಕೆ ಪಾರ್ಟಿಯಿಂದ (ಅಂತಿಮ ಫಲಾನುಭವಿಗಳು) ಅಥವಾ ಇವರ ಪರವಾಗಿ ಯಾವುದೇ ರೀತಿಯಲ್ಲಿ ಗುರುತಿಸಿದ ಇತರೆ ವ್ಯಕ್ತಿಗಳು ಅಥವಾ ಕಂಪನಿಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಹಣ ನೀಡಿಕೆ ಅಥವಾ ಹಣ ಹೂಡಿಕೆ ಅಥವಾ

ii) ಅಂತಿಮ ಫಲಾನುಭವಿಗಳ ಪರವಾಗಿ ಯಾವುದೇ ಗ್ಯಾರಂಟಿ, ಭದ್ರತೆ ಅಥವಾ ಇತರೆ ಒದಗಿಸುವಿಕೆ

### ಬಿ. ಕ್ರಿಪ್ಟೋ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿ ವಿವರಗಳು

ಗ್ರೂಪ್ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಕ್ರಿಪ್ಟೋ ಕರೆನ್ಸಿ ಅಥವಾ ವರ್ಚುವಲ್ ಕರೆನ್ಸಿಯಲ್ಲಿ ಹೂಡಿಕೆ ಮಾಡಿರುವುದಿಲ್ಲ ಅಥವಾ ವ್ಯಾಪಾರ ಮಾಡಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

### ಸಿ. ಹೊಂದಿರುವ ಬೇನಾಮಿ ಸ್ವತ್ತಿನ ವಿವರಗಳು

ಬೇನಾಮಿ ಸ್ವತ್ತನ್ನು ಹೊಂದಿರುವ ಬಗ್ಗೆ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಬೇನಾಮಿ ಸ್ವತ್ತಿನ ವ್ಯವಹಾರಗಳ ನಿಷೇಧ ಕಾಯ್ದೆ 1988 (2016ರಲ್ಲಿ ತಿದ್ದುಪಡಿಯಾದಂತೆ) (ಮೊದಲು ಬೇನಾಮಿ ವ್ಯವಹಾರಗಳ (ನಿಷೇಧ) ಕಾಯ್ದೆ, 1988 (45/1988) ಮತ್ತು ಇದರಡಿಯಲ್ಲಿ ಮಾಡಿದ ನಿಯಮಗಳ ಅನ್ವಯ ಗ್ರೂಪ್‌ನ ವಿರುದ್ಧ ಯಾವುದೇ ಕ್ರಮಾವಳಿಗಳನ್ನು ಕೈಗೊಂಡಿರುವುದಿಲ್ಲ ಅಥವಾ ಇತ್ಯರ್ಥವಾಗದೆ ಉಳಿದಿರುವುದಿಲ್ಲ (ಹಿಂದಿನ ವರ್ಷ: ಇಲ್ಲ)

### ಡಿ. ಉದ್ದೇಶಪೂರ್ವಕ ಸುಸ್ತಿದಾರ

ಗ್ರೂಪ್‌ಅನ್ನು 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಯಾವುದೇ ಬ್ಯಾಂಕ್ ಅಥವಾ ಹಣಕಾಸಿನ ಸಂಸ್ಥೆ ಅಥವಾ ಸರ್ಕಾರ ಅಥವಾ ಯಾವುದೇ ಸರ್ಕಾರಿ ಅಧಿಕಾರಿಯು ಉದ್ದೇಶಪೂರ್ವಕ ಸುಸ್ತಿದಾರ ಎಂದು ಘೋಷಿಸಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

### ಇ. ಘೋಷಣೆ ಮಾಡಿರದ ಆದಾಯ

ಗ್ರೂಪ್ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಆದಾಯ ತೆರಿಗೆ ಕಾಯ್ದೆ, 1961ರ ಅನ್ವಯ ತೆರಿಗೆ ನಿರ್ಧರಣೆ ಸಮಯದಲ್ಲಿ (ಅಂದರೆ ಆದಾಯ ತೆರಿಗೆ ಕಾಯ್ದೆ, 1961ರ ತಪಾಸಣೆ ಅಥವಾ ಸರ್ವೆ ಅಥವಾ ಯಾವುದೇ ಇತರೆ ನಿಬಂಧನೆಗಳು) ಲೆಕ್ಕದ ಪುಸ್ತಕಗಳಲ್ಲಿ ದಾಖಲಿಸದಿರುವ ಯಾವುದೇ ವ್ಯವಹಾರಗಳನ್ನು ಆದಾಯ ಎಂಬುದಾಗಿ ಒಪ್ಪಿಸಿರುವುದಿಲ್ಲ ಅಥವಾ ಘೋಷಿಸಿರುವುದಿಲ್ಲ.

### ಎಫ್. ತೆಗೆದುಹಾಕಿರುವ ಕಂಪನಿಗಳ ಜೊತೆಗಿನ ಸಂಬಂಧ

ಗ್ರೂಪ್ 31ನೇ ಮಾರ್ಚ್ 2024ಕ್ಕೆ ಕೊನೆಗೊಂಡ ವರ್ಷದ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಪ್ರಕರಣ 248ರ ಅನ್ವಯ ಅಥವಾ ಕಂಪನಿಗಳ ಕಾಯ್ದೆ, 1956ರ ಪ್ರಕರಣ 560ರ ಅನ್ವಯ, ಕೆಳಕಂಡ ಕಂಪನಿ ಹೊರತಾಗಿ ಯಾವುದೇ ತೆಗೆದುಹಾಕಿರುವ ಕಂಪನಿಗಳ ಜೊತೆ ಯಾವುದೇ ವ್ಯವಹಾರಗಳನ್ನು ನಡೆಸಿರುವುದಿಲ್ಲ. (ಹಿಂದಿನ ವರ್ಷ: ಇಲ್ಲ)

ತೆಗೆದುಹಾಕಿರುವ ಕಂಪನಿ ಹೆಸರು: ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಪ್ರೈವೇಟ್ ಲಿಮಿಟೆಡ್

ವ್ಯವಹಾರದ ಸ್ವರೂಪ: ಗ್ರಾಹಕರು

ಬಾಕಿಯಿರುವ ಶಿಲ್ಕು: ರೂ.0.64ಲಕ್ಷಗಳು

### ಜಿ. ಕಂಪನಿಗಳ ಪದರಗಳ ಸಂಖ್ಯೆಯ ಪರಿಪಾಲನೆ

ಕಂಪನಿಗಳ (ಪದರಗಳ ಸಂಖ್ಯೆಯ ಮೇಲೆ ನಿರ್ಬಂಧ) ನಿಯಮಗಳು, 2017 ಓದಿಕೊಂಡಂತೆ ಕಾಯ್ದೆಯ ಪ್ರಕರಣ 2ರ ಕಲಂ (87)ರ ಅನ್ವಯ ನಿಗದಿಪಡಿಸಿರುವಂತೆ ಪದರಗಳ ಸಂಖ್ಯೆಯನ್ನು ಗ್ರೂಪ್ ಅನುಪಾಲನೆ ಮಾಡಿದೆ.

### ಎಚ್. ವ್ಯವಸ್ಥೆಗಳ ಅನುಮೋದಿತ ಯೋಜನೆಯ(ಗಳ) ಅನುಪಾಲನೆ

ಗ್ರೂಪ್ ಟಿಪ್ಪಣಿ 43ರಲ್ಲಿ ತಿಳಿಸಿರುವಂತೆ ವ್ಯವಸ್ಥೆಯ ಯೋಜನೆ ಒಂದನ್ನು ಮಾಡಿಕೊಂಡಿದೆ. ಅಂತಹ ಯೋಜನೆಯ ಲೆಕ್ಕ ನಿರ್ವಹಣೆ ಪರಿಣಾಮವನ್ನು ''ಯೋಜನೆ'' ಮತ್ತು ಐಎನ್‌ಡಿ ಎಎಸ್ ಅನುಸಾರ ಕಂಪನಿಯ ಲೆಕ್ಕದ ಪುಸ್ತಕಗಳಲ್ಲಿ ಲೆಕ್ಕ ಮಾಡಿದೆ.

### ಐ. ಸ್ವತ್ತು, ಸ್ಥಾವರ ಮತ್ತು ಉಪಕರಣದ, ಬಳಕೆ ಹಕ್ಕಿನ ಆಸ್ತಿಗಳು ಮತ್ತು ಅಗೋಚರಿತ ಆಸ್ತಿಯ ಮೌಲ್ಯಮಾಪನ:

ಗ್ರೂಪ್ ತನ್ನ ಸ್ವತ್ತು, ಸ್ಥಾವರ ಮತ್ತು ಉಪಕರಣ, ಬಳಕೆ ಹಕ್ಕಿನ ಆಸ್ತಿಗಳು ಮತ್ತು ಅಗೋಚರಿತ ಆಸ್ತಿಯ ಬಗ್ಗೆ ಚಾಲ್ತಿ ವರ್ಷ ಅಥವಾ ಹಿಂದಿನ ವರ್ಷದ ಅವಧಿಯಲ್ಲಿ ಮರು ಮೌಲ್ಯಮಾಪನ ಮಾಡಿರುವುದಿಲ್ಲ.

### 44ಎ ಕ್ರೋಡೀಕೃತ ಹಣಕಾಸಿನ ಹೇಳಿಕೆಗಳಲ್ಲಿನ ಐಟಂಗಳ ಮರು ವರ್ಗೀಕರಣ

ಅಗತ್ಯವಿರುವೆಡೆಗಳಲ್ಲಿ ಚಾಲ್ತಿ ವರ್ಷದ ವರ್ಗೀಕರಣಗಳಿಗೆ ಅನುಗುಣವಾಗಿ ಹಿಂದಿನ ವರ್ಷದ ಅಂಕಿಗಳನ್ನು ಮರು ವರ್ಗೀಕರಣ ಮಾಡಿದೆ:

**ಎ. ಸ್ಥಿತಿ ವಿವರಣಾ ಪಟ್ಟಿ ಐಟಂ ಗಳಿಗೆ:**

ಕೆಳಕಂಡ ಕಾರಣಗಳಿಗಾಗಿ ಮರು ವರ್ಗೀಕರಣ ಮಾಡಲಾಗಿದೆ.

1. ಐಟಂಗಳನ್ನು ಚಾಲ್ತಿಯಿಂದ ಚಾಲ್ತಿಯೇತರಕ್ಕೆ ಮತ್ತು ಚಾಲ್ತಿಯೇತರದಿಂದ ಚಾಲ್ತಿಗೆ ಮರು ವರ್ಗೀಕರಣ
2. ಐಟಂಗಳನ್ನು ಹಣಕಾಸಿದಿಂದ ಹಣಕಾಸೇತರ ಪ್ರವರ್ಗಕ್ಕೆ ಮತ್ತು ಹಣಕಾಸೇತರದಿಂದ ಹಣಕಾಸಿನ ಪ್ರವರ್ಗಕ್ಕೆ ಮರು ವರ್ಗೀಕರಣ.

| ಕ್ರ. ಸಂ. | ಮರು ವರ್ಗೀಕರಣ ಮಾಡಿರುವ ಐಟಂನ ವರ್ಗ | ಟಿಪ್ಪಣಿ | ಹಿಂದಿನ ಲೆಕ್ಕಪರಿಶೋಧಿತ ಹಣಕಾಸಿನ ಹೇಳಿಕೆಗಳು | ಹೊಂದಾಣಿಕೆಗಳು | ಮರು ವರ್ಗೀಕರಣ ಮಾಡಿರುವ ಹಣಕಾಸಿನ ಹೇಳಿಕೆಗಳ ಅನುಸಾರ |
|---|---|---|---|---|---|
| I | **ಆಸ್ತಿಗಳು** | | | | |
| | ಚಾಲ್ತಿಯೇತರ ಆಸ್ತಿಗಳು | | | | |
| | ಎ) ಹಣಕಾಸಿನ ಆಸ್ತಿಗಳು | | | | |
| | | | | | |
| | (i) ಇತರೆ ಹಣಕಾಸಿನ ಆಸ್ತಿಗಳು | 7 | 16,594.17 | 1,260.58 | 17,854.75 |
| | (ii) ಚಾಲ್ತಿಯೇತರ ಬ್ಯಾಂಕ್ ಶಿಲ್ಕುಗಳು | 12 | 76.80 | 4,170.72 | 4,247.52 |
| | (ಬಿ) ಇತರೆ ಹಣಕಾಸೇತರ ಆಸ್ತಿಗಳು | 8 | 86.51 | 161.76 | 248.27 |
| | (ಸಿ) ಚಾಲ್ತಿಯೇತರ ತೆರಿಗೆ ಆಸ್ತಿ (ನಿವ್ವಳ) | 8ಎ | | 4,139.85 | 4,139.85 |
| | **ಚಾಲ್ತಿ ಆಸ್ತಿಗಳು** | | | | |
| | (ಎ) ಹಣಕಾಸಿನ ಆಸ್ತಿಗಳು | | | | |
| | (i) ಬ್ಯಾಂಕ್ ಶಿಲ್ಕುಗಳು | 12 | 35,751.60 | (4,170.71) | 31,580.89 |
| | (ii) ಇತರೆ ಹಣಕಾಸಿನ ಆಸ್ತಿಗಳು | 7 | 14,292.61 | (2,365.43) | 11,927.18 |
| | (ಬಿ) ಇತರೆ ಚಾಲ್ತಿ ಆಸ್ತಿಗಳು | 8 | 12,327.28 | (2,726.27) | 9,601.01 |
| | (ಸಿ) ಚಾಲ್ತಿ ತೆರಿಗೆ ಆಸ್ತಿ (ನಿವ್ವಳ) | | 468.55 | (468.55) | |
| II. | **ಈಕ್ವಿಟಿ ಮತ್ತು ಹೊಣೆಗಾರಿಕೆಗಳು** | | | | |
| | **ಈಕ್ವಿಟಿ** | | | | |
| | (ಎ) ಇತರೆ ಈಕ್ವಿಟಿ | 14 | 71,060.40 | (346.51) | 70,713.89 |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | (37.38) | 0.76 | (36.62) |
| | **(ಬಿ) ಅನಿಯಂತ್ರಿತ ಬಡ್ಡಿ** | | | | |
| | **ಚಾಲ್ತಿಯೇತರ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ಸಾಲಗಳು | 15ಎ | 175.00 | (0.45) | 174.55 |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15ಸಿ | 18,469.86 | (3,454.04) | 15,015.82 |
| | (ಬಿ) ವ್ಯವಸ್ಥೆಗಳು | 16 | 1,643.02 | (764.36) | 878.66 |
| | **ಚಾಲ್ತಿ ಹೊಣೆಗಾರಿಕೆಗಳು** | | | | |
| | (ಎ) ಹಣಕಾಸಿನ ಹೊಣೆಗಾರಿಕೆಗಳು | | | | |
| | (i) ವ್ಯಾಪಾರದ ಬಗ್ಗೆ ಪಾವತಿಸಬೇಕಾಗಿರುವುದು | 18 | | | |
| | (ಎ) ಸೂಕ್ಷ್ಮ ಮತ್ತು ಸಣ್ಣ ಉದ್ಯಮ ಹೊರತಾಗಿ ಒಟ್ಟು ಬಾಕಿರುವ ಬಾಕಿಗಳು | | 27,976.15 | (1,452.29) | 26,523.86 |
| | (ii) ಇತರೆ ಹಣಕಾಸಿನ ಹೊಣೆಗಾರಿಕೆಗಳು | 15ಇ | 9,924.10 | 5,113.75 | 15,037.85 |
| | (ಬಿ) ಇತರೆ ಚಾಲ್ತಿ ಹೊಣೆಗಾರಿಕೆಗಳು | 17 | 4,163.81 | 949.97 | 5,113.78 |
| | (ಸಿ) ವ್ಯವಸ್ಥೆಗಳು | 16 | 260.23 | (44.90) | 215.33 |

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| ಬಿ. | ಲಾಭ ಮತ್ತು ನಷ್ಟದ ಐಟಂಗಳ ಹೇಳಿಕೆಗೆ: | | | | |
|---|---|---|---|---|---|
| | ಕೆಳಕಂಡ ಕಾರಣದಿಂದಾಗಿ ಮರು ವರ್ಗೀಕರಣ ಮಾಡಿದೆ:<br>1. ಇತರೆ ಆದಾಯದಿಂದ ಕಾರ್ಯಾಚರಣೆಗಳಿಂದ ಬಂದ ಗಳಿಕೆಗೆ ಐಟಂಗಳ ಮರು ವರ್ಗೀಕರಣ | | | | |
| ಕ್ರ. ಸಂ | ಮರು ವರ್ಗೀಕರಣ ಮಾಡಿರುವ ಐಟಂನ ವರ್ಗ | ಟಿಪ್ಪಣಿ | ಹಿಂದಿನ ಲೆಕ್ಕಪರಿಶೋಧಿತ ಹಣಕಾಸಿನ ಹೇಳಿಕೆಗಳ ಅನ್ವಯ | ಹೊಂದಾಣಿಕೆಗಳು | ಮರು ವರ್ಗೀಕರಣ ಮಾಡಿದ ಹಣಕಾಸಿನ ಹೇಳಿಕೆಗಳ ಅನುಸಾರ |
| 1. | ಮುಂದುವರಿಯುತ್ತಿರುವ ಕಾರ್ಯಾಚರಣೆಗಳು | | | | |
| | ಕಾರ್ಯಾಚರಣೆಗಳಿಂದ ಬಂದ ಆದಾಯ | 19 | 340,389.17 | 32.45 | 340,421.62 |
| | ಇತರೆ ಆದಾಯ | 20 | 3,466.51 | (32.52) | 3,433.99 |
| | ನೌಕರರ ಸೌಲಭ್ಯಗಳ ಖರ್ಚುಗಳು | 25 | 2,408.35 | 10.96 | 2,419.31 |
| | ಇತರೆ ಖರ್ಚುಗಳು | 28 | 21,325.73 | (11.00) | 21,314.73 |

| 44ಬಿ | ಇತರೆ ಕಂಪನಿಗಳ ಮೇಲಿನ ಆಸಕ್ತಿ | | | | | |
|---|---|---|---|---|---|---|
| | ಕ್ರ. ಸಂ. | ಕಂಪನಿಗಳ ಹೆಸರು | ಸ್ಥಾಪನೆ ಯಾಗಿರುವ ದೇಶ | ಚಟುವಟಿಕೆಗಳು | ಆಸಕ್ತಿಯ ಮಾಲೀಕತ್ವ ಅನುಪಾತ | |
| | | | | | 31.03.2024 ರಂದು ಇದ್ದಂತೆ | 31.03.2023 ರಂದು ಇದ್ದಂತೆ |
| | 1 | ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | ಭಾರತ | ಮಾರ್ಕೆಟಿಂಗ್ ಮತ್ತು ಜಾಹೀರಾತು | 100.00% | 100.00% |
| | 2 | ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | ಭಾರತ | ಸೇವಾ ಕೈಗಾರಿಕೆ | 95.18% | 95.18% |
| | | **ಸಹವರ್ತಿ ಕಂಪನಿ** | | | | |
| | 3 | **ಸಹವರ್ತಿ ಕಂಪನಿ** | **ಭಾರತ** | **ಸ್ಪೆಷಲ್ ಪರ್ಪಸ್ ವೆಹಿಕಲ್** | **50.00%** | **50.00%** |

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)

45 **ಕ್ರೋಡೀಕೃತ ಹಣಕಾಸಿನ ಹೇಳಿಕೆಗಳನ್ನು ಸಿದ್ಧಪಡಿಸಲು ಸಾಮಾನ್ಯ ಸೂಚನೆಗಳ ಪ್ಯಾರಾ 2ರ ಅನುಸಾರ ಹೆಚ್ಚುವರಿ ಮಾಹಿತಿ**

| ಕಂಪನಿ ಹೆಸರು | ನಿವ್ವಳ ಆಸ್ತಿಗಳು | | ಲಾಭ ಮತ್ತು ನಷ್ಟದ ಪಾಲು | | ಇತರೆ ಸಮಗ್ರ ಆದಾಯದಲ್ಲಿನ ಪಾಲು | | ಒಟ್ಟು ಸಮಗ್ರ ಆದಾಯದಲ್ಲಿನ ಪಾಲು | |
|---|---|---|---|---|---|---|---|---|
| ಹ.ವ.2023-24 | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ |
| **ಮಾತೃ ಕಂಪನಿ** | | | | | | | | |
| ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | 77.11% | 65,993.73 | 90.04% | 10,386.37 | 99.68% | 889.82 | 90.74% | 11,276.19 |
| **ಸಹಾಯಕ ಕಂಪನಿಗಳು** | | | | | | | | |
| ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 23.94% | 20,488.68 | 15.28% | 1,762.69 | 0.32% | 2.89 | 14.21% | 1,765.58 |
| ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 0.87% | (741.20) | 0.15% | 17.57 | | | 0.14% | 17.57 |
| **ಸಹವರ್ತಿ ಕಂಪನಿಗಳು** | | | | | | | | |
| ಸಹವರ್ತಿ ಕಂಪನಿಗಳಲ್ಲಿ ಹೂಡಿಕೆ (ಈಕ್ವಿಟಿ ವಿಧಾನ) | | | | | | | | |
| ಫುಡ್ ಕರ್ನಾಟಕ ಲಿಮಿಟೆಡ್ | 0.48% | 409.07 | 0.05% | (5.66) | | | 0.05% | (5.66) |
| **ಕ್ರೋಡೀಕರಣದಿಂದ ಉಂಟಾದ ಹೊಂದಾಣಿಕೆ** | | | | | | | | |
| ಅನಿಯಂತ್ರಿತ ಆಸಕ್ತಿ | 0.04% | (35.73) | 0.01% | 0.89 | | | 0.01% | 0.89 |
| ಕ್ರೋಡೀಕರಣದಿಂದ ಹೊಂದಾಣಿಕೆಗಳು (ತೆಗೆದುಹಾಕಿರುವಿಕೆ) | 0.62% | (530.97) | 5.43% | (627.06) | | | 5.05% | (627.06) |
| **ಒಟ್ಟು** | **100.00%** | **85,583.58** | **100.00%** | **11,534.80** | **100.00%** | **892.71** | **100.00%** | **12,427.51** |

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಮಹತ್ತರ ಲೆಕ್ಕ ನಿರ್ವಹಣೆ ನೀತಿಗಳ ಸಾರಾಂಶ ಮತ್ತು ಇತರೆ ವಿವರಣಾತ್ಮಕ ಮಾಹಿತಿ**
**(ನಿರ್ದಿಷ್ಟ ಪಡಿಸಿರದ ಹೊರತು ಎಲ್ಲಾ ಮೊತ್ತಗಳು ರೂ.ಲಕ್ಷಗಳಲ್ಲಿರುವವು)**

| ಕಂಪನಿ ಹೆಸರು | ನಿವ್ವಳ ಆಸ್ತಿಗಳು | | ಲಾಭ ಮತ್ತು ನಷ್ಟದ ಪಾಲು | | ಇತರೆ ಸಮಗ್ರ ಆದಾಯದಲ್ಲಿನ ಪಾಲು | | ಒಟ್ಟು ಸಮಗ್ರ ಆದಾಯದಲ್ಲಿನ ಪಾಲು | |
|---|---|---|---|---|---|---|---|---|
| ಹ.ವ.2023-24 | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ | ಕ್ರೋಡೀಕೃತ ನಿವ್ವಳ ಆಸ್ತಿಗಳ % ಆಗಿ | ಮೊತ್ತ |
| **ಮಾತೃ ಕಂಪನಿ** | | | | | | | | |
| ಮೈಸೂರ್ ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ | 75.41% | 56,545.42 | 72.15% | 6,078.33 | 46.72% | 5.69 | 72.32% | 6,084.02 |
| **ಸಹಾಯಕ ಕಂಪನಿಗಳು** | | | | | | | | |
| ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ | 26.27% | 19,695.92 | 31.25% | 2,632.54 | 146.72% | (17.87) | 31.08% | 2,614.67 |
| ದಿ ಮೈಸೂರ್ ಕ್ರೋಮ್ ಟ್ಯಾನಿಂಗ್ ಕಂಪನಿ ಲಿಮಿಟೆಡ್ | 1.01% | (759.65) | 0.04% | 2.99 | - | - | 0.04% | 2.99 |
| **ಸಹವರ್ತಿ ಕಂಪನಿಗಳು** | | | | | | | | |
| ಸಹವರ್ತಿ ಕಂಪನಿಗಳಲ್ಲಿ ಹೂಡಿಕೆ (ಈಕ್ವಿಟಿ ವಿಧಾನ) | | | | | | | | |
| ಫುಡ್ ಕರ್ನಾಟಕ ಲಿಮಿಟೆಡ್ | 0.55% | 414.73 | 0.17% | (14.28) | - | - | 0.17% | (14.28) |
| **ಕ್ರೋಡೀಕರಣದಿಂದ ಉಂಟಾದ ಹೊಂದಾಣಿಕೆ** | | | | | | | | |
| ಅನಿಯಂತ್ರಿಕ ಆಸ್ತಿ | 0.05% | (36.62) | 0.00% | 0.14 | - | - | 0.00% | 0.14 |
| ಕ್ರೋಡೀಕರಣದಿಂದ ಹೊಂದಾಣಿಕೆಗಳು (ತೆಗೆದುಹಾಕಿರುವಿಕೆ) | 1.17% | (872.43) | 3.27% | (274.58) | - | - | 3.27% | 274.58 |
| **ಒಟ್ಟು** | **100.00%** | **74,987.37** | **100.00%** | **8,425.14** | **100.00%** | **(12.18)** | **100.00%** | **8,412.96** |

**46** ಹಣಕಾಸಿನ ಹೇಳಿಕೆಗಳಲ್ಲಿನ ತದನಂತರದ ಘಟನಾವಳಿಗಳ ಮತ್ತು ವ್ಯವಹಾರಗಳ ಗುರುತಿಸುವಿಕೆಗಾಗಿ / ಮತ್ತು / ಅಥವಾ ವರದಿ ಮಾಡಲು ಅಗತ್ಯತೆಯನ್ನು ನಿರ್ಧರಿಸಲು ಸ್ಥಿತಿ ವಿವರಣಾ ಪಟ್ಟಿ ದಿನಾಂಕದ ನಂತರ. ಆದರೆ ಹಣಕಾಸಿನ ಹೇಳಿಕೆಗಳ ಅನುಮೋದನೆಗೆ ಮುನ್ನ ಉಂಟಾದ ಘಟನಾವಳಿಗಳು ಮತ್ತು ವ್ಯವಹಾರಗಳನ್ನು ಕಂಪನಿ ಮೌಲ್ಯಮಾಪನ ಮಾಡುವುದು. 10ನೇ ಸೆಪ್ಟೆಂಬರ್, 2024ರಂದು ಇದ್ದಂತೆ ಈಗಾಗಲೇ ತಿಳಿಸದಿರುವ ತದನಂತರದ ಘಟನಾವಳಿಗಳು ಮತ್ತು ವ್ಯವಹಾರಗಳನ್ನು ಗುರುತಿಸಲು ಅಥವಾ ವರದಿ ಮಾಡಲು ಯಾವುದೂ ಇರುವುದಿಲ್ಲ.

ಲಗತ್ತಿಸಿರುವ ನಮ್ಮ ವರದಿಯನುಸಾರ
ಸೊರಬ್ ಎಸ್. ಇಂಜಿನೀಯರ್ ಅಂಡ್ ಕಂ.
**ಚಾರ್ಟರ್ಡ್ ಅಕೌಂಟೆಂಟ್ಸ್ ಇವರ ಪರವಾಗಿ**
**ಸಂಸ್ಥೆ ನೋಂದಣಿ ಸಂಖ್ಯೆ 110417W**
ಸಹಿ/-
**(ಸಿ.ಎ. ಚೋಕ್ಸಿ ಶ್ರೇಯಸ್.ಬಿ)**
ಪಾಲುದಾರರು
ಸದಸ್ಯತ್ವ ಸಂಖ್ಯೆ: 100892
ಸ್ಥಳ : ಬೆಂಗಳೂರು
ದಿನಾಂಕ:10ನೇ ಸೆಪ್ಟೆಂಬರ್ 2024

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ**
ನಿರ್ದೇಶಕರ ಮಂಡಳಿ ಪರವಾಗಿ ಮತ್ತು ಹೆಸರಿನಲ್ಲಿ

ಸಹಿ/-
**ಪುಟ್ಟರಂಗ ಶೆಟ್ಟಿ. ಸಿ**
ಅಧ್ಯಕ್ಷರು
ಡಿನ್ ಸಂಖ್ಯೆ : 07745825

ಸಹಿ/-
**ಮನೋಜ್‌ಕುಮಾರ್**
ವ್ಯವಸ್ಥಾಪಕ ನಿರ್ದೇಶಕರು
ಡಿನ್ ಸಂಖ್ಯೆ :09379177

ಸಹಿ/-
**ಅವಿನಾಶ್ ಕೆ.ಆರ್.**
ಮುಖ್ಯ ಹಣಕಾಸು ಅಧಿಕಾರಿ

ಸಹಿ/-
**ಶ್ರೀದೇವಿ ಬಿ.ಎನ್**
ಕಂಪನಿ ಕಾರ್ಯದರ್ಶಿ

MSIL

## ಫಾರಂ ಸಂಖ್ಯೆ ಎಂ ಜಿ ಟಿ- 11

## ಪ್ರಾಕ್ಸಿ ಫಾರಂ

(ಕಂಪನಿಗಳ ಕಾಯ್ದೆ, 2013ರ ಪ್ರಕರಣ 105 (6) ಮತ್ತು ಕಂಪನಿಗಳ (ಆಡಳಿತ ಮಂಡಳಿ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 19(3)ರ ಅನುಸಾರ)

ಸಿಐಎನ್: U85110KA1966SGC001612

ಕಂಪನಿಯ ಹೆಸರು : ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್

ನೋಂದಾಯಿತ ಕಚೇರಿ: 'ಎಂಎಸ್‌ಐಎಲ್ ಹೌಸ್' ನಂ.36, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು-560 052

ಸದಸ್ಯನ (ರ) ಹೆಸರು :

ನೋಂದಾಯಿತ ವಿಳಾಸ:

ಇ-ಮೇಲ್ ಐಡಿ :

ಫೋಲಿಯೋ ಸಂ/ಕ್ಲೈಂಟ್ ಐಡಿ:

ಡಿಪಿ ಐಡಿ :

ನಾನು/ನಾವು.................................ನ ಸದಸ್ಯರಾಗಿದ್ದು...........................ಷೇರುಗಳನ್ನು ಹೊಂದಿದ್ದು, ಈ ಕೆಳಕಂಡವರನ್ನು

1. ಹೆಸರು: ........................................................

ವಿಳಾಸ: ........................................................

ಇ-ಮೇಲ್ ಐಡಿ: ........................................................

ಸಹಿ : ........................................................

ಅಥವಾ ಇವರಿಲ್ಲದಿದ್ದರೆ

2. ಹೆಸರು: ........................................................

ವಿಳಾಸ: ........................................................

ಇ-ಮೇಲ್ ಐಡಿ: ........................................................

ಸಹಿ : ........................................................ ಇವರನ್ನು

ದಿನಾಂಕ 30ನೇ ಸೆಪ್ಟೆಂಬರ್, 2024ರ ಸೋಮವಾರ ಸಂಜೆ 4.30 ಗಂಟೆಗೆ, ನಂ.36, ಎಂಎಸ್‌ಐಎಲ್ ಹೌಸ್, ಕನ್ನಿಂಗ್ ಹ್ಯಾಂ ರಸ್ತೆ, ಬೆಂಗಳೂರು-560 052 ಇಲ್ಲಿ ನಡೆಯಲಿರುವ ಮತ್ತು ಕೆಳಗೆ ತಿಳಿಸಿರುವಂತೆ ಅಂತಹ ನಿರ್ಣಯಗಳ ಸಂಬಂಧ ಯಾವುದೇ ಮುಂದೂಡಿದ ದಿನಾಂಕದಂದು ನಡೆಯುವ ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್‌ನ 58ನೇ ವಾರ್ಷಿಕ ಮಹಾಸಭೆಗೆ ನನ್ನ / ನಮ್ಮ ಪರವಾಗಿ ಹಾಜರಾಗಲು ಮತ್ತು ನನಗೆ/ನಮಗೆ ಮತ ಹಾಕಲು (ಚುನಾವಣೆಯಲ್ಲಿ) ನನ್ನ / ನಮ್ಮ ಪ್ರಾಕ್ಸಿಯನ್ನಾಗಿ ನೇಮಕ ಮಾಡಿದ್ದೇನೆ/ಮಾಡಿದ್ದೇವೆ.

ನಿರ್ಣಯ ಸಂಖ್ಯೆ : 1 ರಿಂದ 3

..................20 ರಂದು ಸಹಿ ಮಾಡಿದೆ

ಷೇರುದಾರರ ಸಹಿ

ರೆವಿನ್ಯೂ ಸ್ಟಾಂಪ್ ಲಗತ್ತಿಸಿ

ಪ್ರಾಕ್ಸಿದಾರನ (ರ) ಸಹಿ

ಸೂಚನೆ: ಸದರಿ ಪ್ರಾಕ್ಸಿ ಫಾರಂ ಅನ್ನು ಅದು ಜಾರಿಗೆ ಬರುವಂತೆ ನೋಡಿಕೊಳ್ಳಲು ಕ್ರಮವಾಗಿ ಭರ್ತಿ ಮಾಡಿ ಎಜಿಎಂ ಪ್ರಾರಂಭವಾಗುವುದಕ್ಕೆ 48 ಗಂಟೆಗಳಿಗೆ ಮುಂಚೆ ಕಂಪನಿಯ ನೋಂದಾಯಿತ ಕಚೇರಿಗೆ ಸಲ್ಲಿಸಬೇಕು.

MSIL

**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
**ಎಂಎಸ್‌ಐಎಲ್ ಹೌಸ್, 36, ಕನ್ನಿಂಗ್‌ಹ್ಯಾಮ್ ರಸ್ತೆ,**
**ಬೆಂಗಳೂರು – 560 052.**

# ಹಾಜರಾತಿ ಚೀಟಿ

**(ದಿನಾಂಕ 30ನೇ ಸೆಪ್ಟೆಂಬರ್ 2024ರ ಸೋಮವಾರ ಸಂಜೆ 4.30 ಗಂಟೆಗೆ ನಡೆಯಲಿರುವ ಕಂಪನಿಯ 58ನೇ ವಾರ್ಷಿಕ ಮಹಾಸಭೆ)**

ಷೇರುದಾರರ ಹೆಸರು: ........................................................

ನೋಂದಣಿ ಫೋಲಿಯೋ ಸಂಖ್ಯೆ : ........................................................

ಹೊಂದಿರುವ ಷೇರುಗಳ ಸಂಖ್ಯೆ : ........................................................

ಸೂಚನೆ : ಷೇರುದಾರರು/ ಪ್ರಾಕ್ಸಿಯು ಕ್ರಮವಾಗಿ ಸಹಿ ಮಾಡಿದ ಹಾಜರಾತಿ ಪಟ್ಟಿಯನ್ನು ಸ್ಥಳದಲ್ಲಿ ನೀಡಬೇಕು.

ಷೇರುದಾರ / ಪ್ರಾಕ್ಸಿದಾರನ ಸಹಿ

ನಂ.36, ಎಂಎಸ್‌ಐಎಲ್ ಹೌಸ್, ಕನ್ನಿಂಗ್ ಹ್ಯಾಂ ರಸ್ತೆ , ಬೆಂಗಳೂರು–560 052 ಇಲ್ಲಿ ದಿನಾಂಕ 30ನೇ ಸೆಪ್ಟೆಂಬರ್ 2024ರಂದು ಸಂಜೆ 4.30 ಗಂಟೆಗೆ ನಡೆಯಲಿರುವ ಕಂಪನಿಯ 58ನೇ ವಾರ್ಷಿಕ ಮಹಾಸಭೆಯ ಸ್ಥಳದ ಮಾರ್ಗ ನಕ್ಷೆ

ಮಾರ್ಗ ನಕ್ಷೆ




**ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿ.ನ**
**ಮಂಡಳಿಯ ಆದೇಶದ ಮೇರೆಗೆ**
**ಸಹಿ/-**
**ಶ್ರೀದೇವಿ ಬಿ.ಎನ್**
**ಕಂಪನಿ ಕಾರ್ಯದರ್ಶಿ**

## ಸಿಎಸ್ಆರ್ ಮತ್ತು ಇತರೆ ಚಟುವಟಿಕೆಗಳು



# ಸಿಎಸ್‌ಆರ್ ಮತ್ತು ಇತರೆ ಚಟುವಟಿಕೆಗಳು



MSIL
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಒಂದು ಅಧೀನ ಸಂಸ್ಥೆ)
ಎಂಎಸ್‌ಐಎಲ್ ಹೌಸ್, # 36 ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು - 560 052
ದೂರವಾಣಿ : 080-2226 4021 / 25 ಫ್ಯಾಕ್ಸ್ : 080-2225 3311
ಇ-ಮೇಲ್ : msilho@msilonline.com ವೆಬ್‌ಸೈಟ್ : www.msilonline.com